ಆಧುನಿಕ ಕನ್ನಡ
ಪುರಾಣ ಕಾವ್ಯಗಳು : ಒಂದು ಅಧ್ಯಯನ

ಪಿಎಚ್. ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದ
ಭಾಷಾ ನಿಕಾಯ ವಿಭಾಗಕ್ಕೆ ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ

ಸಂಶೋಧಕರು
ಶ್ರೀಮತಿ ಎ. ವ್ಹಿ. ದೇವಾಂಗಮಠ

ಮಾರ್ಗದರ್ಶಕರು
ಡಾ. ಬಿ. ಎಸ್. ಗೊರವರ
ಎಂ.ಎ., ಪಿಎಚ್. ಡಿ.
ಉಪನ್ಯಾಸಕರು,
ಕನ್ನಡ ಸ್ನಾತಕೋತ್ತರ ಕೇಂದ್ರ, ಬಸವೇಶ್ವರ ಮಹಾವಿದ್ಯಾಲಯ, ಬಾಗಲಕೋಟ.

ಅಧ್ಯಯನಾಂಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ - ೫೮೩ ೨೭೬

ಸಂಶೋಧನ ಕೇಂದ್ರ
ಲಿಂಗಾಯತ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ
ಗದಗ - ೫೮೨ ೧೦೧

೨೦೧೧

ಆಧುನಿಕ ಕನ್ನಡ
ಪುರಾಣ ಕಾವ್ಯಗಳು : ಒಂದು ಅಧ್ಯಯನ

ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದ
ಭಾಷಾ ನಿಕಾಯ ವಿಭಾಗಕ್ಕೆ ಸಾದರ ಪಡಿಸಿದ ಸಂಶೋಧನ ಮಹಾಪ್ರಬಂಧ

ಸಂಶೋಧಕರು
ಶ್ರೀಮತಿ ಎ. ವ್ಹಿ. ದೇವಾಂಗಮಠ

ಮಾರ್ಗದರ್ಶಕರು
ಡಾ. ಬಿ. ಎಸ್. ಗೊರವರ ಎಂ.ಎ., ಪಿಎಚ್.ಡಿ.
ಉಪನ್ಯಾಸಕರು,
ಕನ್ನಡ ಸ್ನಾತಕೋತ್ತರ ಕೇಂದ್ರ ಬಸವೇಶ್ವರ ಮಹಾವಿದ್ಯಾಲಯ,
ಬಾಗಲಕೋಟ

ಅಧ್ಯಯನಾಂಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ – ೫೮೩೨೭೬

ಸಂಶೋಧನ ಕೇಂದ್ರ
ಲಿಂಗಾಯತ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ
ಗದಗ – ೫೮೨ ೧೦೧

೨೦೧೧

ಅಧ್ಯಯನಾಂಗ

ಕನ್ನಡ ವಿಶ್ವವಿದ್ಯಾಲಯ ಹಂಪಿ

ಸಂಶೋಧಕರು
ಶ್ರೀಮತಿ ಎ. ವ್ಹಿ. ದೇವಾಂಗಮಠ
ಮೊ. ೯೮೮೦೦೪೨೩೬೫

ಕನ್ನಡ ಸಹ ಉಪನ್ಯಾಸಕರು ಮತ್ತು
ಮುಖ್ಯಸ್ಥರು, ಕನ್ನಡ ವಿಭಾಗ, ಕೆ.ಎಲ್.ಇ. ಸಂಸ್ಥೆಯ
ಮಹಿಳಾ ಕಲಾ ಹಾಗೂ ವಾಣಿಜ್ಯ
ಮಹಾವಿದ್ಯಾಲಯ, ಗದಗ - ೫೮೨ ೧೦೧

ಅಭ್ಯರ್ಥಿಯ ಪ್ರಮಾಣ ಪತ್ರ

'ಆಧುನಿಕ ಕನ್ನಡ ಪುರಾಣ ಕಾವ್ಯಗಳು : ಒಂದು ಅಧ್ಯಯನ' ಎಂಬ ತಲೆಬರಹದ ಈ ಸಂಶೋಧನ ಮಹಾ ಪ್ರಬಂಧವನ್ನು **ಡಾ. ಬಿ. ಎಸ್. ಗೊರವರ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಪ್ರಸ್ತುತ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಈ ಸಂಶೋಧನ ಮಹಾಪ್ರಬಂಧದ ಯಾವುದೇ ವಿಷಯವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶಕ್ಕಾಗಲಿ ಅಥವಾ ಪ್ರಕಟಣೆಗಾಗಲಿ ಬಳಸಿಕೊಂಡಿರುವದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಗದಗ
ದಿನಾಂಕ : ೦೬.೦೫.೨೦೧೧

(ಎ. ವ್ಹಿ. ದೇವಾಂಗಮಠ)

[illegible]

[illegible]

[illegible]

[illegible]

[illegible]

[illegible]

ಅಧ್ಯಯನಾಂಗ

ಕನ್ನಡ ವಿಶ್ವವಿದ್ಯಾಲಯ ಹಂಪಿ

ಮಾರ್ಗದರ್ಶಕರು
ಡಾ. ಬಿ. ಎಸ್. ಗೊರವರ
'ಸಮರಸ'
ಕರಿಯಮ್ಮನ ಕಲ್ಲು, ಬಡಾವಣೆ, ಮಸಾರಿ,
ಗದಗ. ಮೊ. ೯೪೪೮೬೨೯೮೭೩

ಸಂಶೋಧನಾ ಕೇಂದ್ರ
ಲಿಂಗಾಯತ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ,
ಗದಗ

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀಮತಿ ಎ.ವ್ಹಿ. ದೇವಾಂಗಮಠ ಅವರು **'ಆಧುನಿಕ ಕನ್ನಡ ಪುರಾಣ ಕಾವ್ಯಗಳು : ಒಂದು ಅಧ್ಯಯನ'** ಎಂಬ ತಲೆಬರಹದ ಈ ಸಂಶೋಧನ ಮಹಾ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದಾರೆ. ಈ ಮಹಾಪ್ರಬಂಧವು ಸಂಶೋಧಕರ ಸ್ವಂತ ಸಂಶೋಧನೆಯ ಮೇಲೆ ಸಿದ್ಧಗೊಂಡಿದೆ. ಈ ಮಹಾಪ್ರಬಂಧದ ಯಾವುದೇ ವಿಷಯವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶಕ್ಕಾಗಲಿ ಅಥವಾ ಪದವಿಗಾಗಲಿ ಬಳಸಿಕೊಂಡಿರುವದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ಗದಗ
ದಿನಾಂಕ : ೯. ೫. ೨೦೧೧

(ಡಾ. ಬಿ. ಎಸ್. ಗೊರವರ)

ಅರಿಕೆ

ಬಹುದಿನಗಳಿಂದಲೂ ಎಂ.ಎ., ಪಿಎಚ್.ಡಿ. ಪದವಿ ಹೊಂದಬೇಕೆಂಬ ಹೆಬ್ಬಯಕೆ ಮನದಾಳದಲ್ಲಿ ಸುಪ್ತವಾಗಿತ್ತು. ಕನ್ನಡ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದ ಬಳಿಕ ಗದುಗಿನ ಕೆ.ಎಲ್.ಇ. ಸಂಸ್ಥೆಯ ಜಗದ್ಗುರು ತೋಂಟದಾರ್ಯ ಮಹಾವಿದ್ಯಾಲಯದಲ್ಲಿ ವಿದ್ಯೆ ಕಲಿಸಿದ ಗುರುಗಳ ಜೊತೆಗೆ ಸೇವೆ ಸಲ್ಲಿಸುವ ಸುವರ್ಣಾವಕಾಶವು ನನಗೆ ದೊರೆಯಿತು. ಸದಾಕಾಲ ನನಗೆ ಸ್ಫೂರ್ತಿಯ ಸೆಲೆಯಾಗಿ, ದಿವ್ಯ ಚೇತನ ಸ್ವರೂಪರಾಗಿರುವ ತಂದೆ-ತಾಯಿಯವರ, ಹಿರಿಯರ ಶ್ರಮ, ಪ್ರಯತ್ನ, ಕಾಳಜಿಗಳೇ ನನ್ನ ಭವಿಷ್ಯ ರೂಪಿಸಿಕೊಳ್ಳುವಲ್ಲಿ ಕಾರಣವಾಗಿವೆ. ಹೀಗೆ ನನ್ನೆಲ್ಲ ಶ್ರೇಯಸ್ಸಿಗೆ ಕಾರಣರಾದ ದಿವಂಗತ ಪೂಜ್ಯ ತಂದೆಯವರಾದ ಶ್ರೀ ವೇ॥ಮೂ॥ ವೀರಭದ್ರಯ್ಯ ಮಾ. ದೇವಾಂಗಮಠ ಹಾಗೂ ತಾಯಿಯವರಾದ ದಿವಂಗತ ಶ್ರೀಮತಿ ರುಕ್ಮಿಣಿಬಾಯಿ ವೀರಭದ್ರಯ್ಯಾ ದೇವಾಂಗಮಠ ಇವರಿಗೆ ಹೃದಯ ತುಂಬಿದ ಭಕ್ತಿ ಪೂರ್ವಕ ನಮಸ್ಕಾರಗಳನ್ನು ಸಲ್ಲಿಸುತ್ತೇನೆ.

ಸಂಶೋಧನಾ ವ್ಯಾಸಂಗವನ್ನು ಕೈಗೊಳ್ಳಬೇಕೆಂದು ವಿಚಾರಿಸುವ ಹಂತದಲ್ಲಿ 'ಅವಕಾಶವೇ ಮನೆಯ ಬಾಗಿಲಿಗೆ ಬಂದಿ'ತೆಂಬಂತೆ ಗದುಗಿನ ತೋಂಟದಾರ್ಯ ಮಠದ ಲಿಂಗಾಯತ ಅಧ್ಯಯನ ಸಂಸ್ಥೆಗೆ ಹಂಪಿ ವಿಶ್ವವಿದ್ಯಾಲಯದಿಂದ ಸಂಶೋಧನ ಕೇಂದ್ರ ತೆರೆಯಲು ಅನುಮತಿ ದೊರೆತು ಅದರಡಿಯಲ್ಲಿ ಸಂಶೋಧನೆಕೈಗೊಳ್ಳಲು ಅವಕಾಶವಾಗುವ ವಿಷಯವು ನನ್ನ ಗುರುಗಳಾದ ಡಾ. ಬಸವರಾಜ ಗೊರವರ ಅವರಿಂದ ತಿಳಿದುದು ನನ್ನ ಸುದೈವವೇ ಸರಿ. ಅವರು ನನಗೆ ಸಂಶೋಧನೆ ಕೈಗೊಳ್ಳುವ ನಿಟ್ಟಿನಲ್ಲಿ ವಿವರವಾದ ಮಾಹಿತಿ ನೀಡಿ ನನ್ನ ಸಂಶೋಧನ ವ್ಯಾಸಂಗಕ್ಕೆ ಮಾರ್ಗದರ್ಶಕರಾಗಲು ಒಪ್ಪಿದುದು ಸಂತಸದ ಸಂಗತಿ. ಸಂಶೋಧನಾ ವಿಷಯದ ಆಯ್ಕೆಯಿಂದ ಹಿಡಿದು ವಿಷಯ ಸಂಗ್ರಹ ಮಾಡುವ ವಿಧಾನ, ವಿಂಗಡಣೆ, ಬರವಣಿಗೆ ಹೀಗೆ ಪ್ರತಿಯೊಂದು ಹಂತದಲ್ಲಿಯೂ ನನ್ನಲ್ಲಿ ಆತ್ಮವಿಶ್ವಾಸವನ್ನು ತುಂಬಿ, ತಾಳ್ಮೆಯಿಂದ ಮಾರ್ಗದರ್ಶನ ಮಾಡಿ, ಬರಹವನ್ನು ತಿದ್ದಿ, ಸೂಕ್ತ ಸಲಹೆಗಳನ್ನು ನೀಡಿ ಮಹಾಪ್ರಬಂಧವನ್ನು ಸಿದ್ಧಪಡಿಸುವ ಹಂತದವರೆಗೂ ಮಾರ್ಗದರ್ಶನ ಮಾಡಿದ ಡಾ. ಬಸವರಾಜ ಗೊರವರ ಹಾಗೂ ಪ್ರೀತಿ ವಿಶ್ವಾಸದಿಂದ ಕಂಡಂತಹ ಅವರ ಧರ್ಮಪತ್ನಿ ಶ್ರೀಮತಿ ಶಾರದಾ ಗೊರವರ ಅವರನ್ನು ಕೃತಜ್ಞತಾ ಪೂರ್ವಕವಾಗಿ ಸ್ಮರಿಸುತ್ತೇನೆ.

ತ್ರಿವಿಧ ದಾಸೋಹಿಗಳು ಸಾಹಿತ್ಯಾಸಕ್ತರಾದ ಗದುಗಿನ ತೋಂಟದಾರ್ಯ ಮಠದ ಡಾ. ಸಿದ್ಧಲಿಂಗ ಮಹಾಸ್ವಾಮಿಗಳು ತಮ್ಮ ಆಶೀರ್ವಾದದ ಶ್ರೀನುಡಿಗಳಿಂದ ವಿದ್ಯಾರ್ಥಿಗಳಲ್ಲಿ

ಸುಪ್ತವಾಗಿದ್ದ ಸಂಶೋಧನಾ ಜಿಜ್ಞಾಸೆಯನ್ನು ಹೊರಹೊಮ್ಮುವಂತೆ ಮಾಡಿ "ಪ್ರಥಮ ಬೆಳೆ ಹುಲುಸಾಗಿ ಬರಲಿ" ಎಂದು ಶುಭ ಹಾರೈಸಿದ ಶ್ರೀಗಳ ಅಡಿದಾವರೆಗಳಿಗೆ ಭಕ್ತಿ ಪೂರ್ವಕ ಪ್ರಣಾಮಗಳನ್ನು ಅರ್ಪಿಸುತ್ತೇನೆ.

ಖ್ಯಾತ ಸಂಶೋಧಕರು ಹಾಗೂ ಲಿಂಗಾಯತ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ. ಎಂ.ಎಂ. ಕಲಬುರ್ಗಿಯವರು ಸಂಸ್ಥೆಯ ಸಂಶೋಧನಾ ಚಟುವಟಿಕೆಗಳನ್ನು ಗಮನಿಸುತ್ತ ಸಕಾಲಯುಕ್ತವಾದ ಮಾರ್ಗದರ್ಶನ ಮಾಡಿ ವಿದ್ಯಾರ್ಥಿಗಳು ಸಂಶೋಧನೆಯನ್ನು ಪೂರ್ಣಗೊಳಿಸುವಂತೆ ಪ್ರೋತ್ಸಾಹಿಸಿರುವರು. ಅವರ ಮಾರ್ಗದರ್ಶನದಂತೆ ಸಂಶೋಧನಾ ಕಮ್ಮಟಗಳನ್ನು ಯಶಸ್ವಿಯಾಗಿ ಜರುಗಿಸಿ ಸೂಕ್ತ ಮಾರ್ಗದರ್ಶನ, ಸಲಹೆ–ಸಹಕಾರ ನೀಡಿದ. ಡಾ. ವೀರಣ್ಣ ರಾಜೂರ ಗುರುಗಳಿಗೆ ಅನಂತ ಕೃತಜ್ಞತೆಗಳು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಧ್ಯಯನಾಂಗದ ನಿರ್ದೇಶಕರಾದ ಡಾ. ವೀರೇಶ ಬಡಿಗೇರ ಹಾಗೂ ಸಂಶೋಧನಾ ಕೇಂದ್ರದ ಸಂಯೋಜನಾಧಿಕಾರಿಗಳಾದ ಡಾ. ಅರ್ಜುನ ಗೊಳಸಂಗಿ, ಸಂಶೋಧನೆ ಕುರಿತು ಮಾರ್ಗದರ್ಶನ ಮಾಡಿದ ಡಾ. ಬಿ. ವ್ಹಿ. ಶಿರೂರ, ಡಾ. ಪಿ. ಕೆ. ರಾಠೋಡ, ಡಾ. ವೀಣಾ ಹೂಗಾರ ಇವರೆಲ್ಲರಿಗೆ ಗೌರವಪೂರ್ವಕ ವಂದನೆಗಳು.

ಸಂಶೋಧನೆಯ ವಿಷಯಕ್ಕೆ ಸಂಬಂಧಿಸಿದಂತೆ ಆಕರ ಸಾಮಗ್ರಿಯಾದ ಪುರಾಣ ಗ್ರಂಥಗಳನ್ನು ಒದಗಿಸಿಕೊಡುವಲ್ಲಿ ಸಹಕರಿಸಿ, ಪ್ರೋತ್ಸಾಹಿಸಿ ಆಶೀರ್ವದಿಸಿದ ಗದುಗಿನ ಶ್ರೀ ಶಿವಾನಂದಮಠ, 'ಶ್ರೀ ವೀರೇಶ್ವರ ಪುಣ್ಯಾಶ್ರಮ', 'ಶ್ರೀ ತೋಂಟದಾರ್ಯಮಠ', 'ಶ್ರೀ ಶಿವಾನಂದ ಮಠ, ರೋಣ', 'ಅನ್ನದಾನೇಶ್ವರ ಮಠ, ಮುಂಡರಗಿ', 'ಶ್ರೀ ಚಿಕೇನಕೊಪ್ಪ ಶರಣರ ಮಠ, ಬಳಗಾನೂರ', 'ಮೂರು ಸಾವಿರ ಮಠ, ಹುಬ್ಬಳ್ಳಿ', 'ಉಜ್ಜಯಿನಿಮಠ, ಉಜ್ಜಯಿನಿ', 'ಬೆಳಗಾವಿಯ ನಾಗನೂರು ರುದ್ರಾಕ್ಷಿಯ ಮಠ, ಬೆಳಗಾವ', ಚರಂತಿಮಠ ಬಾಗಲಕೋಟ, 'ಶ್ರೀ ನೀಲಕಂಠೇಶ್ವರ ಮಠ, ಬೆಟಗೇರಿ', 'ಶ್ರೀ ನೀಲಮ್ಮ ತಾಯಿ ಮಠದ ಶಿವಶರಣೆಯರಾದ ಶ್ರೀ ನೀಲಮ್ಮ ತಾಯಿಯವರಿಗೂ' ಮೇಲ್ಕಂಡ ಎಲ್ಲ ಮಠಮಾನ್ಯಗಳ ಪೂಜ್ಯ ಸ್ವಾಮಿಗಳವರ ಅಡಿದಾವರೆಗಳಿಗೆ ಅನಂತ ಭಕ್ತಿಪೂರ್ವಕ ಪ್ರಣಾಮಗಳನ್ನು ಅರ್ಪಿಸುತ್ತೇನೆ.

ತಮ್ಮಲ್ಲಿರುವ ಪುರಾಣ ಕೃತಿಗಳನ್ನು ಒದಗಿಸಿ ಹಾಗೂ ತಾವು ಬರೆದ ಪುರಾಣ ಕೃತಿಗಳು ದೊರೆಯುವ ಸ್ಥಳ, ವಿಳಾಸದ ಮಾಹಿತಿ ನೀಡಿ ಅಧ್ಯಯನಕ್ಕೆ ಪ್ರೋತ್ಸಾಹಿಸಿದ ಕವಿ ಹಾಗೂ ರಾಜ್ಯ ಪ್ರಶಸ್ತಿ ಪುರಸ್ಕೃತ ಪಂ. ಶ್ರೀ ರಾಜಗುರು ಗುರುಸ್ವಾಮಿ, ಕಲಕೇರಿ, ಶ್ರೀ ರಾಮಣ್ಣ ಬ್ಯಾಟಿ, ಪಂ. ಶ್ರೀ ಸೋಮಶೇಖರ ಶಾಸ್ತ್ರಿಗಳು ಪುರಾಣಿಕಮಠ, ಪಂ. ಬಾಲಚಂದ್ರಶಾಸ್ತ್ರಿಗಳು ಹಿರೇಮಠ, ರೋಣ, ಶ್ರೀ ಪ್ರಭಣ್ಣ ಬೊಮ್ಮನಹಳ್ಳಿ, ಲಕ್ಷ್ಮೇಶ್ವರ, ಶ್ರೀ ವಾಸುದೇವ ಹೂಲಿ ಇವರೆಲ್ಲರ ಸಹಕಾರವನ್ನು ಕೃತಜ್ಞತಾ ಪೂರ್ವಕವಾಗಿ ಸ್ಮರಿಸಿಕೊಳ್ಳುತ್ತೇನೆ.

ಪ್ರೊ. ನಿಡವಣಿ ದಂಪತಿಗಳು, ಡಾ. ವಾಯ್. ಎಂ. ಯಾಕೊಳ್ಳಿ, ಡಾ. ಅಶೋಕ ನರೋಡೆ, ಡಾ. ಈಶ್ವರಯ್ಯ ಮಠ, ಶ್ರೀ ಓಂಕಾರ ಮುದ್ದುಸಂಗಸ್ವಾಮಿ ದೇವಾಂಗಮಠ, ಡಾ. ರಾಜೇಂದ್ರ ಗಡಾದ, ಶ್ರೀ ಲಿಂಗರಾಜ ಚವರಡ್ಡಿ , ಪ್ರೊ. ಶಕುಂತಲಾ ಸಿಂಧೂರ, ಪ್ರೊ. ಎ. ವ್ಹಿ. ಹಿರೇಮಠ, ಪ್ರೊ. ಕೆ.ಎಚ್.ಎನ್. ವಿಜಯಕುಮಾರ, ಶ್ರೀ ಬಿ. ವೀರೇಶ, ಪ್ರೊ. ವಿಶ್ವನಾಥ, ಶ್ರೀಮತಿ ರಶ್ಮಿ ಅಂಗಡಿ ಇವರೆಲ್ಲರಿಗೂ ಆತ್ಮೀಯ ವಂದನೆಗಳನ್ನು ಸಲ್ಲಿಸುವೆನು.

ನನ್ನ ಸಂಶೋಧನೆಗೆ ಸಹಕರಿಸಿ ಅನುವು ಮಾಡಿಕೊಟ್ಟ ಮಾತೃ ಸಂಸ್ಥೆ ಕೆ.ಎಲ್.ಇ. ಸಂಸ್ಥೆಯ ಕಾರ್ಯಾಧ್ಯಕ್ಷರಾದ ಸನ್ಮಾನ್ಯ ಶ್ರೀ ಡಾ. ಪ್ರಭಾಕರ ಕೋರೆ ಇವರನ್ನೂ ಹಾಗೂ ಆಡಳಿತ ಮಂಡಳಿಯ ಸರ್ವ ಸದಸ್ಯರನ್ನು ಮಹಾವಿದ್ಯಾಲಯದ ಸ್ಥಾನಿಕ ಆಡಳಿತ ಮಂಡಳಿಯ ಚೇರಮನ್ ಹಾಗೂ ಇತರ ಸದಸ್ಯರಿಗೂ ಹೃತ್ಪೂರ್ವಕವಾಗಿ ನೆನೆಯುವೆನು.

ಸಂಶೋಧನ ಅಧ್ಯಯನಕ್ಕೆ ಕ್ರಿಯಾಶೀಲತೆ ತುಂಬಿ ನನಗೆ ಎಲ್ಲ ರೀತಿಯ ಸಲಹೆ – ಸಹಕಾರ ನೀಡಿದ ನನ್ನ ಪ್ರಾಧ್ಯಾಪಕರು ಹಾಗೂ ಮಹಾವಿದ್ಯಾಲಯದ ಪ್ರಾಚಾರ್ಯರಾದ ಪ್ರೊ. ಬಿ. ಎಚ್. ಹಾದಿಮನಿಯವರಿಗೂ, ಪೂರ್ವ ಪ್ರಾಚಾರ್ಯರಾದ ಶ್ರೀ ಬಿ.ಎಸ್. ಕಿಣಗಿಯವರಿಗೂ ಹಾಗೂ ಆತ್ಮೀಯ ಸಹೋದ್ಯೋಗಿ ಪ್ರಾಧ್ಯಾಪಕ ಸಹೋದರಿಯರಿಗೂ, ಸಿಬ್ಬಂದಿ ವರ್ಗಕ್ಕೂ ನನ್ನ ವಂದನೆಗಳು ಹಾಗೂ ತಂದೆ ಸಮಾನರಾಗಿದ್ದ ದಿವಂಗತ ಪ್ರೊ. ಎಸ್. ಆರ್. ಗೌಡರ, ಶ್ರೀ ಯು.ಕೆ. ಅಂಗಡಿ, ಶ್ರೀ ಪಿ.ಎಂ. ನೀಲಕಂಠಮಠ ಪ್ರಾಧ್ಯಾಪಕರನ್ನು ಮತ್ತು ದಿ. ಶ್ರೀ ರಾಚಯ್ಯಸ್ವಾಮಿ ನಾಲವತ್ವಾಡಮಠ ದಂಪತಿಗಳು, ಶ್ರೀ ಶಿವಯ್ಯಸ್ವಾಮಿ ನಾಲತ್ವಾಡಮಠ ಇವರೆಲ್ಲರಿಗೂ ನನ್ನ ಆದರ ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಹಂಪಿಯ ಕನ್ನಡ ವಿಶ್ವವಿದ್ಯಾಲಯ ಮತ್ತು ಸಂಶೋಧನ ವಿದ್ಯಾರ್ಥಿಗಳ ನಡುವೆ ಸ್ನೇಹ ಸೇತುವೆಯಾಗಿ ನಮ್ಮ ಸಂದೇಹಗಳಿಗೆ ಉತ್ತರಿಸುತ್ತ ವಿಶ್ವವಿದ್ಯಾಲಯದ ನಿಯಮಾವಳಿಗಳಿಗೆ ಅನುಸಾರವಾಗಿ ನನ್ನ ಸಂಶೋಧನಾ ವ್ಯಾಸಂಗಕ್ಕೆ ಪ್ರೋತ್ಸಾಹಿಸಿದ ಹಾಗೂ ನಮ್ಮ ಅವಶ್ಯಕತೆಗಳಿಗೆ ಸ್ಪಂಧಿಸಿದಂತಹ ಲಿಂಗಾಯತ ಅಧ್ಯಯನ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಶಿವನಗೌಡರ ಅವರಿಗೆ ನನ್ನ ವಂದನೆಗಳು. ಶ್ರೀ ಮಠದ ಗ್ರಂಥಾಲಯದ ಮೇಲ್ವಿಚಾರಕರಾದ ಶ್ರೀ ಪಿಂಗಳೆಯವರನ್ನು ಸಹ ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ.

ಸಂಶೋಧನಾ ಪ್ರಬಂಧವನ್ನು ಪೂರ್ಣಗೊಳಿಸುವಲ್ಲಿ ಪ್ರೋತ್ಸಾಹಿಸಿ ಸಹಕರಿಸಿದ ಮಾತೃ ಸ್ವರೂಪರಾದ ಶ್ರೀಮತಿ ರಾಮಮ್ಮ ಮುಕುಂದಪ್ಪ ಗೌಡರ, ಈ ಪ್ರಬಂಧವನ್ನು ಸಿದ್ಧಪಡಿಸುವ ಪ್ರತಿ ಹಂತದಲ್ಲೂ ನನ್ನೊಂದಿಗೆ ಸಹಕರಿಸಿ ಆತ್ಮವಿಶ್ವಾಸ ತುಂಬಿದ ನನ್ನ ಪತಿದೇವರಾದ ಶ್ರೀ ವಿನಾಯಕ ಮುಕುಂದಪ್ಪ ಗೌಡರ, ಸಹೋದರರಾದ ಶ್ರೀ ವೇ॥ಮೂ॥ ಮಹಾರುದ್ರಸ್ವಾಮಿ ವ್ಹಿ. ದೇವಾಂಗಮಠ, ಸದಾ ಸ್ನೇಹಿತೆಯಂತೆ ನನಗೆ ಉತ್ತೇಜನ ನೀಡಿದ ಅತ್ತಿಗೆ

ಶ್ರೀಮತಿ ಪ್ರೇಮಾ ಮ. ದೇವಾಂಗಮಠ, ಮುದ್ದು ಮಕ್ಕಳಾದ ಕುಮಾರಿ ಶ್ರುತಿ, ಕುಮಾರ ರುದ್ರಮುನಿ, ನನ್ನ ಮಕ್ಕಳಾದ ಚಿ॥ ಕಾವ್ಯ, ಚಿ॥ ಕಾರ್ತಿಕ್ ಹಾಗೂ ಕವಿಗಳ ಸಂದರ್ಶನ ಕಾಲದಲ್ಲಿ ನನಗೆ ಬೆಂಬಲಿಸಿದ ಶ್ರೀ ಪ್ರವೀಣಕುಮಾರ ಗೌಡರ, ಶ್ರೀ ಶ್ರೀಕಾಂತ ಗೌಡರ. ಈ ಹಂತ ತಲುಪುವುದಕ್ಕೆ ಮೂಲ ಪ್ರೇರಣೆಯಾಗಿರುವ ಶ್ರೀ ವೇ॥ಮೂ॥ ವಿವೇಕಾನಂದ ಸ್ವಾಮಿಗಳು ದೇವಾಂಗಮಠ, ಇಲಕಲ್, ಸಹೋದರಿಯಾದ ಶ್ರೀಮತಿ ಚಂದ್ರಾಬಾಯಿ ಕಡ್ಡಿ, ಮಕ್ಕಳಾದ ಕುಮಾರಿ ನಾಗವೇಣಿ ಹಾಗೂ ಕುಮಾರ ಆನಂದ ಇವರೆಲ್ಲರನ್ನು ಸ್ಮರಿಸಿಕೊಳ್ಳುತ್ತೇನೆ.

ಈ ಪ್ರಬಂಧದ ಡಿ.ಟಿ.ಪಿ. ಕಾರ್ಯವನ್ನು ಸಕಾಲದಲ್ಲಿ ಸಿದ್ಧಗೊಳಿಸಿ ಅಚ್ಚುಕಟ್ಟಾಗಿ ಮುದ್ರಿಸಿ ಕೊಟ್ಟ ಶ್ರೀಮತಿ ಗೀತಾ ಬೇವಿನಕಟ್ಟಿ, ಶ್ರೀ ರಾಘವೇಂದ್ರ ಪೊಪ್ತಿ ಹಾಗೂ ಶ್ರೀ ನಾರಾಯಣ ಬಾಕಳೆ ಹಾಗೂ ಇರ್ಫಾನ್ ಮುನ್ನಿ ಛಾಪಖಾನೆ ಇವರೆಲ್ಲರಿಗೂ ಧನ್ಯವಾದಗಳು.

ಈ ಸಂಶೋಧನ ವ್ಯಾಸಂಗಕ್ಕೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದ ಎಲ್ಲ ಆತ್ಮೀಯ ಸ್ನೇಹಿತೆಯರಿಗೂ ಹಿತೈಷಿಗಳಿಗೂ ನನ್ನ ಪ್ರೀತಿ ಪೂರ್ವಕ ಧನ್ಯವಾದಗಳು.

(ಶ್ರೀಮತಿ. ಎ. ವ್ಹಿ. ದೇವಾಂಗಮಠ)

ಪರಿವಿಡಿ

◆◆◆

ಅಧ್ಯಾಯ – ೧

ಅಧ್ಯಯನದ ಉದ್ದೇಶ, ವಿಷಯ ವ್ಯಾಪ್ತಿ

೧

ಅಧ್ಯಯನದ ಉದ್ದೇಶ, ವಿಷಯ ವ್ಯಾಪ್ತಿ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಷಟ್ಪದಿಕಾವ್ಯ ಪರಂಪರೆಯು ೧೩ನೆಯ ಶತಮಾನದಿಂದ ಪ್ರಾರಂಭಗೊಂಡು ಇನ್ನುವರೆಗೆ ಮುಂದುವರೆದು ಬರುತ್ತಿರುವದು. ಷಟ್ಪದಿಯು ದೇಶಿರೂಪವಾಗಿದ್ದು, ಅಚ್ಚಗನ್ನಡದಲ್ಲಿ ಮಾತ್ರ ಬೆಳೆದಿದೆ. ಷಟ್ಪದಿಯು ನಡುಗನ್ನಡದ ಮಾರ್ಗವಾಗಿ ಬೆಳೆದು ಬಂದಿತು. ಹಳಗನ್ನಡದಲ್ಲಿ 'ಚಂಪೂ'ವನ್ನು 'ಮಾರ್ಗ'ವೆಂದು ಪರಿಗಣಿಸಲಾಗುತ್ತಿತ್ತು. ನಡುಗನ್ನಡದಲ್ಲಿ ಷಟ್ಪದಿ ಒಂದಾಗಿದ್ದುದು ಬೆಳೆದು ಆರು ರೂಪವಾಯಿತು. ಆ ಆರರಲ್ಲಿ ಭಾಮಿನಿ ಷಟ್ಪದಿಯು ಅಚ್ಚದೇಶಿ ರೂಪವಾಯಿತಲ್ಲದೆ, ಗಮಕ ಗಾಯನದ ಮೂಲಕ ಜನಮನವನ್ನು ಮುಟ್ಟಿತು. ಷಟ್ಪದಿಯಲ್ಲಿಯೇ ವಾರ್ಧಕವು ಹಳಗನ್ನಡ ಭೂಯಿಷ್ಠ ಭಾಷಾರೂಪ ಶೈಲಿಗಳನ್ನು ಹೊಂದಿ ಬೆಳೆಯಿತು. ಷಟ್ಪದಿಯ ಕಾವ್ಯರೂಪದಲ್ಲಿ ಭಾಮಿನಿ ಮತ್ತು ವಾರ್ಧಕಗಳೆರಡು ಇಂದು ಪುರಾಣ ಕಾವ್ಯಗಳ ರೂಪದಲ್ಲಿ ಉಳಿದಿವೆ. ಗದಗ ಜಿಲ್ಲೆಯಲ್ಲಿಯೇ ೧೩ ಜನ ಷಟ್ಪದಿ ಕವಿಗಳು ಇದ್ದು ೫೮ ಕೃತಿಗಳು ವೈವಿಧ್ಯಮಯವಾದ ವಸ್ತುವನ್ನು ಹೊಂದಿ ರಚನೆಗೊಂಡಿವೆ.

ಜಗತ್ತಿನ ಸುಸಂಸ್ಕೃತ ಭಾಷೆಗಳಲ್ಲಿ ಪುರಾಣಗಳ ರಚನೆ ನಡೆದಿದೆ. ಗ್ರೀಕ್ ಹಾಗೂ ಸಂಸ್ಕೃತ ಭಾಷೆಗಳಲ್ಲಿ ಶ್ರೇಷ್ಠ ಪುರಾಣಗಳ ರಚನೆಯಾಗಿರುವದು. ಸಂಸ್ಕೃತದಲ್ಲಿ ವೈದಿಕ ಸಾಹಿತ್ಯಾನಂತರ ದೇಶಿ ಅಂಶಗಳೊಂದಿಗೆ ಪುರಾಣಗಳ ಪರಂಪರೆ ಪ್ರಾರಂಭಗೊಂಡಿತು. ಶೈವ, ವೈಷ್ಣವ, ಶಾಕ್ತ ಪುರಾಣಗಳು ಪ್ರಸಿದ್ಧವಾಗಿರುವವು. ಹಿಂದೂ ಪ್ರಭಾವದಿಂದ ಜೈನ ಪುರಾಣಗಳು ಸಂಸ್ಕೃತ, ಪ್ರಾಕೃತಗಳಲ್ಲಿ ಮೂಡಿದವು. ಅವು ಹಲ ಮಟ್ಟಿಗೆ ಹೊಸ ಮಾರ್ಗವನ್ನು ಸೃಷ್ಟಿಮಾಡಿದವು. ಜೈನ ಧರ್ಮವು ಕನ್ನಡದಲ್ಲಿ ಜೈನ ಪುರಾಣ ಕಾವ್ಯವನ್ನು ಹುಟ್ಟು ಹಾಕಿತು.

ಕನ್ನಡದ ಭಾಷಾ ಸಂದರ್ಭದಲ್ಲಿ ಜೈನ ಪುರಾಣಗಳ ರಚನೆಗೆ ಪ್ರಾಕೃತ ಸಂಸ್ಕೃತಗಳಲ್ಲಿಯ ಜೈನ ಧರ್ಮವು ಕಾರಣವೆನಿಸಿತು. ಆರಂಭದಲ್ಲಿ ಕವಿಗಳು ಯುಗಧರ್ಮವಾದ 'ವೀರ' ಮತ್ತು 'ಮತಧರ್ಮ'ವಾದ 'ಜೈನ'ಕ್ಕೂ ತಲೆಬಾಗಿ ಎರಡು ಬಗೆಯ ಕಾವ್ಯಗಳನ್ನು ಬರೆದರು. ಬರುಬರುತ್ತ ಜೈನ ಆಗಮಿಕ ತತ್ತ್ವವೇ ಮುಖ್ಯವಾಗಿ ಅದನ್ನೇ ಕಾವ್ಯದ ಸ್ಥಾಯಿನೆಲೆಯಾಗಿಸಿ-ಕೊಂಡರು. ಮುಂದೆ ಪುರಾಣ ಮಾರ್ಗವನ್ನುಳಿದು ಜನಪ್ರಿಯವಾದ ಬೇರೆ ಮಾರ್ಗಗಳಲ್ಲಿ ಕಥಾರೂಪ ಮೊದಲಾಗಿ ಜೈನ ಮತಾಧಿಕ್ಯವನ್ನು ಸಾರುವ ಸಾಹಿತ್ಯವನ್ನು ಸೃಷ್ಟಿಸಿದರು.

ಕ್ರಾಂತಿ ಘಟ್ಟವೆಂದು ವಿಶ್ವಮಾನವೀಯ ಪ್ರಜ್ಞಾಸಾಹಿತ್ಯವೆಂದು ಪ್ರಶಂಸೆಗೊಂಡ 'ವಚನ ಸಾಹಿತ್ಯ'ವು ಹೊಸ ಬಾಗಿಲುಗಳನ್ನು ತೆರೆದು ಕನ್ನಡ ಸಾಹಿತ್ಯಕ್ಕೆ ತನ್ನತನವನ್ನು ನೀಡಿತು. ನಂತರದ ಶರಣ ಕವಿಗಳು ಶರಣರ ಜೀವನ, ತತ್ತ್ವಗಳನ್ನು ಕಾವ್ಯ ಮುಖೇನ ಹೇಳುವ ಹೊಸತನವನ್ನು ತೋರಿದರು. ಆಗ ಎರಡು ಮಾರ್ಗಗಳು ತೋರಿದವು. ಒಂದು ಹರಿಹರನ 'ಉದಿತಮಾರ್ಗ'; ಇನ್ನೊಂದು ತೆಲುಗಿನಲ್ಲಿ 'ಪಾಲ್ಕುರಿಕೆ ಸೋಮನಾಥ'ನ 'ಪುರಾಣಮಾರ್ಗ'. ಪುರಾಣ ಮಾರ್ಗವು ತೆಲುಗಿನಲ್ಲಿ ಮೊದಲಿನಿಂದಲೂ ಇತ್ತು. ಸೋಮನಾಥನು ಆ ಮಾರ್ಗದಲ್ಲಿ ಶರಣರ ಚರಿತ್ರೆಗಳನ್ನು ಪವಾಡಗಳ ಹಿನ್ನೆಲೆಯಲ್ಲಿ ಹೇಳಿದನು. ಹರಿಹರನು ಶರಣರ ಚರಿತ್ರೆಗಳನ್ನು, ಶಿವನ ಮೇಲಣ ಭಕ್ತಿಯನ್ನು, ಶರಣರ ವಿಶ್ವಮಾನವೀಯ ಗುಣಾದರ್ಶಗಳನ್ನು, ತಮಿಳುನಾಡಿನ ಶೈವ ಭಕ್ತರ ಚರಿತೆಗಳನ್ನು, ಶುದ್ಧ ಕಾವ್ಯ ರೂಪವನ್ನು ವಿವರಿಸಿದನು. ಅಲ್ಪಮಟ್ಟಿನ ಪವಾಡ ಲೀಲೆಗಳನ್ನು ಬಸವಣ್ಣ ಮೊದಲಾದ ಶರಣರ ಚರಿತ್ರೆಯಲ್ಲಿ ಹೇಳಿದರೆ, ಬಹುಪಾಲು ಶರಣ ತತ್ತ್ವಗಳನ್ನು ವಿವರಿಸಿ ಭಕ್ತಿ ತತ್ತ್ವದ ಹಿನ್ನೆಲೆಯಲ್ಲಿ ಹರಿಹರನು 'ಉದಿತಮಾರ್ಗವನ್ನು' ತೋರಿದನು. ಮುಂದಣ ಕವಿಗಣವು ಹೆಚ್ಚಾಗಿ ಸೋಮನಾಥನ ಪುರಾಣ ಮಾರ್ಗವನ್ನು ಅನುಸರಿಸಿದರು. ಮುಂದೆ ಭಕ್ತಿಮಾರ್ಗ ಮತ್ತು ಪವಾಡಮಾರ್ಗಗಳಲ್ಲಿ ವೀರಶೈವ ಕಾವ್ಯಮಾರ್ಗ ಮುನ್ನಡೆಯಿತು.

೧೫ನೆಯ ಶತಮಾನದವರೆಗಿನ ಕನ್ನಡ ಸಾಹಿತ್ಯದ, ವೀರಶೈವ ಕಾವ್ಯಮಾರ್ಗದಲ್ಲಿ ಪವಾಡ/ಲೀಲೆಗಳನ್ನು ನಿರೂಪಿಸುವ, ಸ್ವಾಮಿಗಳ ಚರಿತ್ರೆಯನ್ನು ಹೇಳುವ ಒಂದು ಹೊಸ ಪರಂಪರೆ ಪ್ರಾರಂಭವಾಯಿತು. "ದ್ವಿತೀಯ ಅಲ್ಲಮ"ನೆಂದು ಖ್ಯಾತಿಗೊಂಡ 'ತೋಂಟದ ಸಿದ್ಧಲಿಂಗಯತಿ'ಗಳ ಜೀವನ ತತ್ವಾನುಷ್ಠಾನದ ಸಾಗರವಾಗಿತ್ತು. ಅವರ ಭವ್ಯ ಜೀವನವನ್ನು ಅವರ ಶಿಷ್ಯ-ಪ್ರಶಿಷ್ಯರು. ಕ್ರಿ.ಶ. ೧೫೬೦ರಲ್ಲಿ ಸಿದ್ದೇಶ್ವರ ಪುರಾಣ, ಮತ್ತೊಬ್ಬ ಶಿಷ್ಯ ಶಾಂತೇಶನು ಕ್ರಿ..ಶ. ೧೫೬೧ರಲ್ಲಿ ತೋಂಟದ ಸಿದ್ಧೇಶ್ವರಪುರಾಣವನ್ನು ಬರೆದರು. ಇಲ್ಲಿಂದ ಮುಂದೆ ಮಠದ ಸ್ವಾಮಿಗಳನ್ನು ಕುರಿತು ನಿಗದಿತ ಸಿದ್ಧ ಮಾದರಿಯಲ್ಲಿ ಪುರಾಣ ಕಾವ್ಯಗಳನ್ನು ಬರೆಯುವ ಒಂದು ಪರಂಪರೆ ಆರಂಭಗೊಂಡಿತು. ಮುಂದೆ ದ್ಯಾಂಪೂರ ಚನ್ನ ಕವಿಗಳು (ಕ್ರಿ..ಶ. ೧೮೭೪-೧೯೪೬) ಮಠದ ಸ್ವಾಮಿಗಳ ಚರಿತ್ರೆಗಳಾಗಿ ಪುರಾಣ ಕಾವ್ಯಗಳನ್ನು ಬರೆದರು. ಅದೇ ಮಾದರಿಯಲ್ಲಿ ಆಧುನಿಕ ಪುರಾಣ ಕಾವ್ಯಗಳು ಬೆಳೆದಿವೆ. ಮುಂದೆ 'ಕಲ್ಲಿನಾಥಶಾಸ್ತ್ರಿ'ಗಳು, 'ಪಂ.ವೈ.ನಾಗೇಶಶಾಸ್ತ್ರಿಗಳು', 'ಪಂ. ಸದಾಶಿವ ಹುಕ್ಕೇರಿ', 'ಪಂ. ಪುಟ್ಟರಾಜ ಕವಿಗವಾಯಿ' ಈ ಮೊದಲಾದವರು 'ದ್ಯಾಂಪೂರ ಚನ್ನಕವಿ'ಗಳ ಮಾರ್ಗವನ್ನು ಅನುಸರಿಸಿ ಕಾವ್ಯರಚನೆ ಗೈದಿರುವರು.

'ಪುರಾಣ' ಶಬ್ದಾರ್ಥಗಳನ್ನು ಸಂಸ್ಕೃತದ ಮಾದರಿಯಂತೆ ನಮ್ಮ ಕನ್ನಡ ಕವಿಗಳು ಸ್ವೀಕರಿಸಿಲ್ಲ. ಜೈನ ಕವಿಗಳು 'ಚರಿತ ಪುರಾಣದೊಳೊಂದೆನೆ ಬರೆದರೆ' (ಚಾವುಂಡರಾಯ ಪುರಾಣ: ಅ-೧, ಪುಟ-೮) ಎಂದು ಚರಿತ್ರೆ ಮತ್ತು ಮತತತ್ವಗಳನ್ನು ಬೆರೆಸಿ ಬರೆದರು. ಇದನ್ನು ಹರಿಹರ ಕವಿಯು ಶರಣರ ಚರಿತ್ರೆಗಳನ್ನು ಅವರ ತತ್ವ-ಭಕ್ತಿಯ ಆಧಾರವಾಗಿ ನಿರೂಪಿಸುವನು. ವೀರಶೈವ ಕವಿಗಳು ಜೈನ ಕವಿಗಳಿಗಿಂತ ಹೆಚ್ಚು ವಾಸ್ತವಿಕ ನೆಲೆಗಟ್ಟಿನಲ್ಲಿ

ಕಾವ್ಯ ರಚನೆಗೈದರು. ಮುಂದೆ ಶರಣ ತತ್ವಾನುಯಾಯಿ ಸ್ವಾಮಿಗಳಾದ 'ತೋಂಟದ ಸಿದ್ಧಲಿಂಗಯತಿ'ಗಳನ್ನು ಕುರಿತು ಜೀವನವನ್ನು ಲೀಲಾರೂಪದಲ್ಲಿ ಚಿತ್ರಿಸುವುದರಿಂದ ಒಂದು ಹೊಸ ಆಯಾಮ ಒದಗಿತು. ಪವಾಡಗಳನ್ನು ಹೊಂದಿಸಿ ಸ್ವಾಮಿಗಳ ಚರಿತ್ರೆಗಳನ್ನು ನಿರೂಪಿಸುವದು ಮುಂದಿನ ಎಲ್ಲ ಕವಿಗಳ ಕಾರ್ಯವಾಯಿತು.

ಪುರಾಣ ಕಾವ್ಯಗಳ ಒಟ್ಟು ಅವಲೋಕನದಿಂದ ತಿಳಿದು ಬರುವ ಅನೇಕ ಅಂಶಗಳನ್ನು ಹೀಗೆ ಕ್ರೋಢೀಕರಿಸಬಹುದು. ಪುರಾಣ ಕಾವ್ಯಗಳು :

- ಧಾರ್ಮಿಕ ಮತ ತತ್ತ್ವಗಳನ್ನು ವ್ಯಕ್ತಿಗಳ ತತ್ತ್ವಾದರ್ಶಗಳನ್ನು ನಿರೂಪಿಸುವವು.
- ಪವಾಡ/ಲೀಲೆಯ ಅನೇಕ ಅಂಶಗಳನ್ನು ಸೇರಿಸಿ ಕಾವ್ಯ ರಚನೆ ಮಾಡುವವು.
- ಶರಣರ/ಸಂತ-ಮಹಾಂತರ/ಸ್ವಾಮಿಗಳ ಬದುಕಿನ ಮಹೋನ್ನತಿಯನ್ನು ವಿವರಿಸುವವು.
- ಮತತತ್ತ್ವಗಳನ್ನು ಸಾಮತಿಗಳೊಂದಿಗೆ ನಿರೂಪಿಸುವವು.
- ಮತತತ್ತ್ವಗಳ ಒಳಪ್ರಬೇಧಗಳನ್ನು ನಿರೂಪಿಸುವವು.
- ಪ್ರವಚನಗೊಳ್ಳುವಂತೆ ಪುರಾಣ ಕಾವ್ಯಗಳನ್ನು ರಚಿಸಲಾಗುವದು.
- ಜನ ಸಮುದಾಯದ ಮನವನ್ನು ತತ್ವಸಿದ್ಧಾಂತದ ಅರಿವಿಗೆ ಹೊಂದಿಸುವದು.
- ಮತಸಿದ್ಧಾಂತಗಳ ಮೂಲ ಪರಂಪರೆಗಳನ್ನು ವಿವರಿಸುವದು. ಸಾಧ್ಯವಿರುವ ಮಟ್ಟಿಗೆ ಮತಸಿದ್ಧಾಂತದ ವಸ್ತು ಕೋಶವನ್ನಾಗಿ ಮಾಡುವವು.
- ಆದರ್ಶಗಳಿಂದ ಜನತೆಯಲ್ಲಿ ಮೌಲ್ಯ ತತ್ತ್ವಗಳನ್ನು ನಿರೂಪಿಸುವವು.

ಪುರಾಣಗಳು ಇವೆಲ್ಲವುಗಳನ್ನು ಹೊಂದಿದ್ದವು. ಪುರಾಣವೆಂದರೆ ಪುಣ್ಯಪುರುಷರ ಜೀವನ ಲೀಲೆಗಳನ್ನು ವಿವರಿಸುವದು ಎಂಬ ರೀತಿಯಲ್ಲಿ ಪುರಾಣ ಕಾವ್ಯಗಳು ರೂಪುಗೊಳ್ಳುವವು. ಪ್ರವಚನ ರೂಪದಲ್ಲಿ ಅವು ವಾಚನಗೊಳ್ಳುವಂತೆ; ಗಮಕಗೊಳ್ಳುವಂತೆ ನಿರೂಪಿಸುವದು ಇಲ್ಲಿ ಪ್ರಮುಖ ಕಾರ್ಯವಾಗಿದೆ.

ಪುರಾಣ ಕಾವ್ಯಗಳು ಅನೇಕ ಮತತತ್ತ್ವ ಸಿದ್ಧಾಂತಗಳನ್ನು ಒಳಗೊಳ್ಳುವವು. ಗದಗ ಜಿಲ್ಲಾ ವ್ಯಾಪ್ತಿಯ ಪುರಾಣ ಕಾವ್ಯಗಳು ವೀರಶೈವ ಮತತತ್ತ್ವಗಳನ್ನು, ಗುರು-ವಿರಕ್ತ ಪರಂಪರೆಯ ಸ್ವಾಮಿಗಳ ಚರಿತ್ರೆಗಳನ್ನು ಹೆಚ್ಚಾಗಿ ಹೇಳುವವು. ಅದೇ ರೀತಿ ಅದ್ವೈತ-ಶಿವಾದ್ವೈತ, ಶಿವಾನಂದ, ಸಿದ್ಧಾರೂಢರ ಆರೂಢ, ಅನುಭಾವ, ಅವಧೂತ ಪರಂಪರೆಗಳು ಇಲ್ಲಿ ಮೂಡಿಬಂದಿವೆ. ಶರಣ ಪರಂಪರೆ ತನ್ನ ಮೌಲ್ಯಗಳಿಂದ ಕೂಡಿದ ಚಿತ್ರಣ ಇಲ್ಲಿದೆ. ಆಧುನಿಕ ವಿಭೂತಿಗಳ ಚಿತ್ರಣವು ಇಲ್ಲಿದೆ. ಮುಖ್ಯವಾಗಿ ಶರಣ ಪರಂಪರೆಯ ಕಾವ್ಯಗಳು ಸ್ವಾಮಿಗಳ ಚರಿತ್ರೆಯ

ರೂಪದಲ್ಲಿ ಇಲ್ಲಿ ವ್ಯಾಪಕವಾಗಿವೆ. ಕ್ವಚಿತ್ತಾಗಿ ಪುರಾಣ ಪುರುಷರ ಧಾರ್ಮಿಕ ಅವತಾರಿಗಳ ಚಿತ್ರಣವು ಇಲ್ಲಿದೆ.

ಕರ್ನಾಟಕದ ವಿಷಯದಲ್ಲಿ ಎದ್ದು ಕಾಣುವ ಮಹತ್ವದ ವಿಶೇಷತೆ ಎಂದರೆ ಅದು ಸರ್ವರಿಗೆ ಆದರ್ಶವಾಗಿರುವದು; ಸರ್ವವನ್ನು ತನ್ನವರೆಂದು ಕಾಣುವದು, ಸರ್ವವು ಸಮತ್ವದಿಂದ ಒಂದೆನ್ನುವದು. ಪಂಪನ 'ಮಾನವ ಜಾತಿ ತಾನೊಂದೆ ವಲಂ' ಬಸವಣ್ಣನ 'ಇವ ನಮ್ಮವ', ಕುವೆಂಪು ಅವರ 'ಸರ್ವೋದಯವಾಗಲಿ' ಎಂಬ ರೀತಿಯಲ್ಲಿ ಇವು ದಾರಿಯನ್ನು ನಿರ್ಮಿಸಿಕೊಟ್ಟಂತೆಯೇ ನಮ್ಮ ಬಹುಪಾಲು ಪುರಾಣ ಕಾವ್ಯಗಳು ಮೌಲ್ಯಕ್ಕೆ ಮಹತ್ವ ನೀಡಿವೆ. 'ವೈವಿಧ್ಯತೆಯಲ್ಲಿ ಏಕತೆ' ಎಂಬ ರೀತಿ 'ಅನುಭಾವ-ಭಕ್ತಿ-ಅರಿವು' ಇವು ಏಕರೂಪವಾಗಿ ಇಲ್ಲಿ ಉಳಿದಿವೆ.

ಆಧುನಿಕ ಕಾಲದಲ್ಲಿ ಇಂತಹ ಪುರಾಣ ಕಾವ್ಯಗಳು ಗತಾನುಗತಿಕವಾದ ರೀತಿಯಲ್ಲಿ ಏಕತಾನತೆ ಪಡಿಯಚ್ಚುಗಳಂತಾಗಿರುವದು ಒಂದು ಶುಷ್ಕ ಪರಂಪರೆಯನ್ನು ಬಿಂಬಿಸುವದು. ಹೊಸಗನ್ನಡದ ಹರವು ಇರವಿನಲ್ಲಿ ಇಂದು ಇವುಗಳ ಅವಶ್ಯಕತೆ ಏನು ? ಎಂಬ ಪ್ರಶ್ನೆಗಳು ಕಂಡುಬರುವವು. ವಾಸ್ತವವಾಗಿ ಈ ಪುರಾಣ ಕಾವ್ಯಗಳಿಗೆ ಶಬ್ದಾರ್ಥ, ಛಂದೋರೂಪವು ಒಂದು ಆಯಾಮವಾದಂತೆ, ಅವು ಪ್ರವಚನಕ್ಕಾಗಿ ಮೂಡಿಬಂದ ಇನ್ನೊಂದು ಆಯಾಮ ಅವುಗಳಿಗಿದೆ. ಭಾಮಿನಿಷಟ್ಪದಿಯಂತಹ ಲಲಿತ ಗಮಕರೂಪದ ಛಂದಸ್ಸು, ವಾರ್ಧಕದಂತಹ ಪ್ರೌಢ ಶೈಲಿಯ ಛಂದೋರೂಪದ ಬಳಕೆ ಕಂಡುಬಂದಿದೆ. ಇದು 'ಪಂಡಿತರು ವಿವಿಧ ಕಲಾ ಮಂಡಿತರು ಕೇಳತಕ್ಕ ಕೃತಿಯನ್ನು ಪಾಮರರು ಕೇಳತಕ್ಕ ಕೃತಿಯಾಗಿ ನಿರೂಪಿಸುವಂತೆ ಎರಡನ್ನು ಒಂದು ಗೂಡಿಸಿದ್ದು ಮುಖ್ಯ ಅಂಶ'ವಾಗಿದೆ.

ವ್ಯಾಪ್ತಿ :

ಗದಗ ಜಿಲ್ಲೆಯ ಪ್ರಾದೇಶಿಕ ವ್ಯಾಪ್ತಿಯು ಪ್ರಾಚೀನ ಆಡಳಿತ ಭಾಗಗಳಾದ ಬೆಳ್ವೊಲ (೩೦೦)ರ ಬಹುಭಾಗವನ್ನು ಪುಲಿಗೆರೆ (೩೦೦)ರ ಅರ್ಧಭಾಗವನ್ನು, ಕಿಸುಗಾಡು ೭೦ ಮತ್ತು ಮಾಸವಾಡಿ ೧೪೦ರ ಭೂ ಪ್ರದೇಶಗಳನ್ನು ಒಳಗೊಂಡಿದೆ. ಈ ನೆಲವೆ ಹಿಂದೆ 'ಎರಡಱುನೂರು' (ಎರಡು ಕೂಡಿ ಆರುನೂರು ಪುಲಿಗೆರೆ ೩೦೦+ಬೆಳ್ವೊಲ ೩೦೦) ಎಂದು ಪ್ರಖ್ಯಾತವಾಗಿತ್ತು. ಈ ಪ್ರದೇಶದ ಕನ್ನಡವು ತಿರುಳ್ಗನ್ನಡ ನೆಲವೆಂದು ಪ್ರಸಿದ್ಧಿ ಪಡೆದಿತ್ತು. ಅಂತಹ ತಿರುಳ್ಗನ್ನಡವು ಪರಿಪಕ್ವ ಕನ್ನಡವಾಗಿರುವ ಭಾಷಾ ಶೈಲಿಯನ್ನು ಶ್ರೀ ವಿಜಯನು 'ಕವಿರಾಜಮಾರ್ಗ'ದಲ್ಲಿ ಉಲ್ಲೇಖಿಸಿದ್ದಾನೆ. ಈ ಭಾಷಾರೂಪವನ್ನು ಬಳಸಿ 'ದುರ್ಗಸಿಂಹ'ನು ಕ್ರಿ.ಶ. ೧೦೨೦ರಲ್ಲಿ 'ಕರ್ನಾಟಕ ಪಂಚತಂತ್ರ'ವನ್ನು, 'ನಯಸೇನ'ನು. ಕ್ರಿ.ಶ. ೧೨೦೦ರಲ್ಲಿ 'ಧರ್ಮಾಮೃತಂ'ವನ್ನು; 'ಕುಮಾರವ್ಯಾಸ'ನು 'ಕರ್ನಾಟ ಭಾರತ ಕಥಾಮಂಜರಿ'ಯನ್ನು, 'ಚಾಮರಸ'ನು. ಕ್ರಿ.ಶ. ೧೪೦೦ರಲ್ಲಿ

'ಪ್ರಭುಲಿಂಗಲೀಲೆ' ಎಂಬ ಮಹಾಕಾವ್ಯಗಳನ್ನು ಬರೆದರು. ಆಧುನಿಕ ಪೂರ್ವಕಾಲದಲ್ಲಿ ಮುಳಗುಂದದ 'ಬಾಲಲೀಲಾ ಮಹಾಂತಶಿವಯೋಗಿ'ಗಳು ಅನುಭಾವಗೀತೆಗಳನ್ನು ಬರೆದರು. 'ಜಾತಕತಿಲಕ'ದಂತಹ ಶಾಸ್ತ್ರಕೃತಿಯು ಇಲ್ಲಿಯೇ (ನರಗುಂದದಲ್ಲಿ) ಹುಟ್ಟಿತು. ಇಂತಹ ಪಾರಂಪರಿಕ ಹಿನ್ನೆಲೆಯಲ್ಲಿ ಈ ಭಾಷಾ ಶೈಲಿಯನ್ನು ಬಳಸಿ ಪುರಾಣ ಕಾವ್ಯಗಳ ಸೃಷ್ಟಿ ನಡೆದಿದೆ. ಕುಮಾರವ್ಯಾಸ ಚಾಮರಸರು ಬಳಸಿದ ಭಾಮಿನಿ ಷಟ್ಪದಿಯ ಲಯವು ಗಮಕ ವಾಚನಕ್ಕೆ ಹೇಳಿ ಮಾಡಿಸಿದ ರೀತಿಯಲ್ಲಿ, ಮೂರು–ನಾಲ್ಕು ಮಾತ್ರೆಗಳ ಗಣಗಳಿಂದ ಕೂಡಿ ನಾಡಿನ ತುಂಬ ಗಮಕಗೊಂಡಿತು. ಇಂದಿಗೂ 'ಕುಮಾರವ್ಯಾಸ ಭಾರತ'ವು ಗಮಕಗೊಳ್ಳುತ್ತಿರುವದು ಒಂದು ರಾಜಮಾರ್ಗವೆನಿಸಿದೆ. ಪುರಾಣ ಕಾವ್ಯಗಳೆಲ್ಲವು ಪ್ರವಚನ ಮತ್ತು ಗಮಕಗೊಳ್ಳುವದಕ್ಕಾಗಿ ಸೃಷ್ಟಿಯಾಗಿವೆ. ಈ ಮೂಲಕ ಕಾವ್ಯಾನುಸಂಧಾನದಲ್ಲಿ ಜೀವಂತಿಕೆಯನ್ನು ತಂದಿವೆ.

ಪುರಾಣ ಕಾವ್ಯಗಳನ್ನು ಬರೆದ ಬಹುಪಾಲು ಜನ ಸಾಹಿತ್ಯ ಮತ್ತು ಸಂಗೀತಗಳನ್ನು ಬಲ್ಲ ಉಭಯ ಕಲಾಬಲ್ಲಿದರಾಗಿರುವದರಿಂದ ಈ ಗಮಕಕ್ಕೆ ಹೆಚ್ಚಿನ ಬಲಬಂದಿತು. ಜನಮನಕ್ಕೆ ಧರ್ಮತತ್ವ, ತಾತ್ವಿಕತೆ, ಸಾತ್ವಿಕರ ಭವ್ಯ ಜೀವನವನ್ನು ಮುಟ್ಟಿಸುವದಕ್ಕಾಗಿ ಪ್ರವಚನಗೊಳ್ಳುವವು. ಇದರಿಂದ ಕಾವ್ಯವನ್ನು ಜನರಿರುವಲ್ಲಿಗೆ ಒಯ್ದು ಮುಟ್ಟಿಸಿ ಅದು ವೇದ್ಯ–ಹೃದ್ಯವಾಗುವಂತೆ ಮಾಡಿರುವದು ಕಾವ್ಯಾರಾಧನೆಯ ಒಂದು ಮಹತ್ವದ ಸಂಗತಿ ಎನಿಸಿದೆ. ಬೇರೆ ಯಾವ ಶಿಷ್ಟ ಸಾಹಿತ್ಯದ ರೂಪಗಳು ಹೀಗೆ ಸಮಷ್ಟಿ ಕಾವ್ಯಾನುಸಂಧಾನವಾಗಿಲ್ಲವೆಂಬುದು ಈ ವಿಷಯದ ಮಹತ್ವವನ್ನು ಎತ್ತಿ ತೋರುವದು.

ಅಧ್ಯಾಯ ಎರಡರಲ್ಲಿ ಪುರಾಣಕಾವ್ಯಗಳ ಅಧ್ಯಯನಕ್ಕೆ ಪೂರಕವಾಗಿರುವ ಅಂಶಗಳನ್ನು ಚರ್ಚಿಸಲಾಗಿದೆ. ಪುರಾಣಗಳ ಲಕ್ಷಣ ಸ್ವರೂಪ ಪರಂಪರೆಗಳನ್ನು ಮೊದಲ ಹಂತ ದ್ವಿತೀಯ ಹಂತದಲ್ಲಿ ವಿವರಿಸಲಾಗಿದೆ. ಕನ್ನಡ ಸಾಹಿತ್ಯದಲ್ಲಿ ಪುರಾಣ ಕಾವ್ಯಗಳ ಬೆಳವಣಿಗೆ ಮತ್ತು ಗದಗ ಜಿಲ್ಲೆಯ ಪುರಾಣ ಕಾವ್ಯಗಳನ್ನು ಕುರಿತು ಒಂದು ಪಕ್ಷಿನೋಟವನ್ನು ಮೂರನೆಯ ಮತ್ತು ನಾಲ್ಕನೆಯ ಘಟಕದಲ್ಲಿ ವಿವರಿಸಲಾಗಿದೆ.

ಅಧ್ಯಾಯ ಎರಡರ ಮೊದಲ ಹಂತದಲ್ಲಿ ಪುರಾಣಗಳ ಸ್ವರೂಪವನ್ನು ವಿವರಿಸಲಾಗಿದೆ. ವಿಶ್ವದಲ್ಲಿ ಗ್ರೀಕ್‌ದೇಶ ಮತ್ತು ಭಾರತದಲ್ಲಿ 'ಪುರಾಣ ಸಾಹಿತ್ಯ' ಬೆಳೆದುಬಂದಿದೆ. ಭಾರತದಲ್ಲಿ ವೇದಗಳ ನಂತರ ಪುರಾಣಗಳ ಬೆಳವಣಿಗೆಯಾಯಿತು. ವಿಷ್ಣು–ಶಿವ–ಬ್ರಹ್ಮ ಮತ್ತು ಶಕ್ತಿ ದೇವತೆಗಳನ್ನು ಕುರಿತು ಪುರಾಣಗಳು ಸಂಸ್ಕೃತದಲ್ಲಿ ಬೆಳೆದಿವೆ. ಇದರ ಸ್ಥೂಲ ಅವಲೋಕನವನ್ನು ಮೊದಲ ಹಂತದಲ್ಲಿ ಮಾಡಲಾಗಿದೆ.

ಪುರಾಣ ಕಾವ್ಯಕ್ಕೆ ತನ್ನದೆ ಆದ ಸ್ವರೂಪ ಲಕ್ಷಣಗಳಿವೆ. ಪ್ರಾಚೀನ ಶಾಸ್ತ್ರಗಳಲ್ಲಿ ಪುರಾಣಗಳ ಲಕ್ಷಣಗಳನ್ನು ವಿವರಿಸಿದ್ದಾರೆ. ಸಂಸ್ಕೃತ ಮತ್ತು ಪ್ರಾಕೃತಗಳಲ್ಲಿ ಜೈನ ಪುರಾಣಗಳು ಹೊಸನೆಲೆಯಿಂದ ಮೂಡಿಬಂದವು. ಪುರಾಣಗಳು ಧರ್ಮ ವಿವೇಚನೆಗೆ ಮೀಸಲಾಗಿವೆ.

ದೇವರ ಲೀಲೆ, ಮಹಾತ್ಮರ ಚರಿತ್ರೆ ಕತೆಗಳು, ಉಪಕತೆಗಳನ್ನು ಹೇಳುವುವು. ಪುರಾಣಗಳ ಮುಖ್ಯ ಉದ್ದೇಶವೆಂದರೆ ಭಕ್ತಿಯನ್ನು ಹೇಳುತ್ತ ಜನಮನದಲ್ಲಿ ಅದನ್ನು ಬಿಂಬಿಸುವದು. ಅದನ್ನು ಪ್ರವಚನ ಮೂಲಕ ಜನಮನಕ್ಕೆ ಮುಟ್ಟಿಸುವದು ಪುರಾಣಗಳ ಸಾಮಾಜಿಕ ಸಂವಹನ ಕ್ರಿಯೆಯಾಗಿದೆ. ಪುರಾಣಗಳಿಗೂ ಹದಿನೆಂಟು ಅಂಗಗಳಿರಬೇಕೆಂಬ ಸಾಂಪ್ರದಾಯಿಕ ಹೇಳಿಕೆಗಳಿವೆ. (ಪುರಾಣಗಳು ಜನಮುಖಿ ಅಂಶಗಳನ್ನು ಸಾಮಾಜಿಕ ಸಂವಹನವನ್ನು ಪಡೆದುದನ್ನು ಇಲ್ಲಿ ವಿವರಿಸಲಾಗಿದೆ.)

ಎರಡನೆ ಅಧ್ಯಾಯದ ಮೂರನೆಯ ಹಂತದಲ್ಲಿ(ಕನ್ನಡ ಸಾಹಿತ್ಯದಲ್ಲಿ ಪುರಾಣ ಕಾವ್ಯಗಳ ಬೆಳವಣಿಗೆಯನ್ನು ಅವಲೋಕನ ಮಾಡಲಾಗಿದೆ, ಕನ್ನಡದಲ್ಲಿ ಹಳಗನ್ನಡ ಭಾಷಾ ಸ್ವರೂಪದಲ್ಲಿ; ಚಂಪೂ ಸಾಹಿತ್ಯ ರೂಪದಲ್ಲಿ ಜೈನ ಪುರಾಣಗಳು ಮೊದಲು ಹುಟ್ಟಿಬಂದವು,] ಪಂಪ ಮಹಾಕವಿ ಕಾವ್ಯಕಲೆಯನ್ನು, ಧರ್ಮದ ಅರಿವನ್ನು ಸಮವಾಗಿ ಬಳಸಿದ್ದು ಒಂದು ಮಾದರಿಯಾಯಿತು. ಮುಂದೆ ಬರಿ ಧರ್ಮ ವಿವೇಚನೆಯತ್ತ ಜೈನ ಕವಿಗಳ ಕಾವ್ಯರಚನೆ ಹೊರಳಿತು.

ಕನ್ನಡದಲ್ಲಿ ಪುರಾಣ ಕಾವ್ಯಗಳ ಇನ್ನೊಂದು ಯುಗವು ಶರಣ ಕವಿಗಳಿಂದ ಆರಂಭಗೊಂಡಿತು. ತೆಲುಗಿನ ಪಾಲ್ಕುರಿಕೆ ಸೋಮನಾಥನ 'ಬಸವ ಪುರಾಣಮು' ವೀರಶೈವ ಪುರಾಣ ಕಾವ್ಯಗಳಿಗೆ ನಾಂದಿಹಾಡಿತು. ಭೀಮಕವಿ ಈ 'ಬಸವಪುರಾಣ'ವನ್ನು ಕನ್ನಡಕ್ಕೆ ತಂದ ಹರಿಹರನು ಭಕ್ತಿಕಾವ್ಯದ ಒಂದು ಉದಿತಮಾರ್ಗವನ್ನು ತಂದನು. ಆದರೆ ಪಾಲ್ಕುರಿಕೆ ಸೋಮನಾಥನ ಪುರಾಣ ಮಾದರಿಯು ಮುಂದುವರೆಯಿತು. ೧೫ನೆಯ ಶತಮಾನದ ಶಿವಯೋಗಿ ತೋಂಟದ ಸಿದ್ಧಲಿಂಗೇಶ್ವರರ ಶಿಷ್ಯ ಪ್ರಶಿಷ್ಯ ಪರಂಪರೆ ಅವರನ್ನೆ ಕುರಿತು ಬರೆದ ಪುರಾಣ ಕಾವ್ಯಗಳು, ಆಧುನಿಕ ಸ್ವಾಮಿಗಳನ್ನು ಕುರಿತು ರಚನೆಗೊಂಡ ಪುರಾಣ ಕಾವ್ಯಗಳಿಗೆ ಆದಿ ಎನಿಸಿವೆ. ಅವು ಒಂದು ಹೊಸ ಪರಂಪರೆಯನ್ನು ನಿರ್ಮಾಣಮಾಡಿದವು. ಅಲ್ಲಿಂದ ಮುಂದೆ ದ್ಯಾಂಪೂರ ಚೆನ್ನಕವಿಗಳು, ಪಂ. ವೈ. ನಾಗೇಶ ಶಾಸ್ತ್ರಿಗಳೆ ಮೊದಲಾದವರು ಪುರಾಣ ಕಾವ್ಯಗಳಿಗೆ ಒಂದು ನಿರ್ದಿಷ್ಟ ಮಾರ್ಗವನ್ನು, ಮಾರ್ಗದರ್ಶಿ ಸೂತ್ರಗಳನ್ನು ಒದಗಿಸಿದರೆಂಬ ವಿಷಯದ ಸ್ಥೂಲ ಅವಲೋಕನವು ಇಲ್ಲಿದೆ.

ಎರಡನೆ ಅಧ್ಯಾಯದ ಕೊನೆಯ ಹಂತದಲ್ಲಿ ಗದಗ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಕವಿಗಳು - ಪುರಾಣ ಕಾವ್ಯಗಳ ಸ್ಥೂಲ ಅವಲೋಕನವನ್ನು ಮಾಡಲಾಗಿದೆ. ಗದಗ ಜಿಲ್ಲಾ ವ್ಯಾಪ್ತಿಯು ಗದಗ, ರೋಣ, ಶಿರಹಟ್ಟಿ, ಮುಂಡರಗಿ ನರಗುಂದ ತಾಲೂಕುಗಳನ್ನು ಒಳಗೊಂಡಿದೆ. ಕ್ರಿ.ಶ. ೧೯೫೦ ರಿಂದೀಚೆ ಕ್ರಿ.ಶ. ೨೦೧೦ರವರೆಗೆ ಒಟ್ಟು ೧೩ (ಹದಿಮೂರು) ಜನ ಕವಿಗಳು ಪುರಾಣ ಕಾವ್ಯಗಳನ್ನು ಬರೆದಿರುವರು. ಅವರಲ್ಲಿ ಬಹುಪಾಲು ಜನ ಇನ್ನೂ ಕಾವ್ಯ ರಚನೆಗೈಯುತ್ತಿದ್ದಾರೆ. ಪಂ. ಪುಟ್ಟರಾಜ ಕವಿಗವಾಯಿಗಳು ೨೨ (ಪ್ರಕಟಿತ) ಕೃತಿಗಳನ್ನು ರಚಿಸಿ

ಮುಂಚೂಣಿ ಬರಹಗಾರರಾಗಿರುವರು. ಶ್ರೀ ಪಂ. ರಾಜಗುರು ಗುರುಸ್ವಾಮಿ ಕಲಕೇರಿಯವರು ೮ (ಎಂಟು) ಕೃತಿಗಳನ್ನು ರಚಿಸಿದ್ದಾರೆ. ಇವರು ಇನ್ನು ರಚಿಸುತ್ತಿದ್ದಾರೆ. ಅಂತೆ ಶ್ರೀ ರಾಮಣ್ಣ ಬ್ಯಾಟಿ, ಶ್ರೀ ವಾಸುದೇವ ಹೂಲಿ, ಶ್ರೀ ಪ್ರಭಣ್ಣ ಬೊಮ್ಮನಹಳ್ಳಿ, ಶ್ರೀ ಪಂ. ಸೋಮಶೇಖರ ಶಾಸ್ತ್ರಿಗಳು ಪುರಾಣಿಕಮಠ, ಪಂ. ಸದಾಶಿವ ಶಾಸ್ತ್ರಿಗಳು, ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀ ಕರವೀರಪ್ಪ ಅಂಗಡಿ, ಪಂ. ಶಿವದೇವ ಶಾಸ್ತ್ರಿಗಳು, ಶ್ರೀ ನೀಲಕಂಠ ಜಾಡಗೌಡರ, ಶ್ರೀ ಬಸವಂತಾಚಾರ್ಯ ಮನ್ವಾಚಾರ್ಯ, ಪಂ. ಬಾಲಚಂದ್ರಶಾಸ್ತ್ರಿಗಳು ಹಿರೇಮಠ ಇವರೆಲ್ಲರು ಕಾವ್ಯರಚನೆ ಮಾಡಿದ್ದಾರೆ. ಇವರೆಲ್ಲರೂ ಪ್ರವಚನ ಪಟುಗಳಾಗಿದ್ದು ತಮ್ಮ ಕಾವ್ಯಗಳನ್ನು ಪ್ರವಚನ ಮಾಡುತ್ತಿದ್ದರು; ಎಂಬ ವಿವರಗಳ ಸ್ಥೂಲ ಅವಲೋಕನ ಇಲ್ಲಿದೆ.

●●

ಅಧ್ಯಾಯ ಮೂರರಲ್ಲಿ ಗದಗ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಪುರಾಣ ಕವಿ - ಕಾವ್ಯಗಳನ್ನು ಅಧ್ಯಯನ ಮಾಡಲಾಗಿದೆ. ಪಂ. ಪುಟ್ಟರಾಜ ಕವಿಗಳು ಇಪ್ಪತ್ತು (ಪ್ರಕಟಿತ) ಪುರಾಣ ಕಾವ್ಯಗಳನ್ನು ರಚಿಸಿದ್ದಾರೆ. ಅವರು ಅಕ್ಕಮಹಾದೇವಿ ಪುರಾಣವನ್ನು ೧೯೫೬ರಲ್ಲಿ ಮೊದಲು ರಚಿಸಿದರು. ಅದೇ ಕಾವ್ಯ ಈ ಜಿಲ್ಲೆಯಲ್ಲಿ ರಚನೆಗೊಂಡ ಮೊದಲ ಕಾವ್ಯವಾಗಿದೆ. ಪಂ. ಪುಟ್ಟರಾಜರ ಅಪ್ರಕಟಿತ ಕಾವ್ಯಗಳು ಇವೆ. ಅವರ ಕಾವ್ಯಗಳು ಸತ್ವದಲ್ಲಿಯೂ, ಸಂಖ್ಯೆಯಲ್ಲಿಯೂ ಹಿರಿದಾಗಿವೆ. ಅವರು ಪುರಾಣ ಸ್ವರೂಪದ ಕಾವ್ಯದಲ್ಲಿ ಕಾವ್ಯ ಧರ್ಮವನ್ನು ತುಂಬಿದ್ದಾರೆ. ಅವರು ಶಿವಶರಣರ, ಶಿವಭಕ್ತರ, ಸ್ವಾಮಿಗಳ, ಆಧುನಿಕ ಶರಣೆಯರ ಚರಿತ್ರೆಗಳನ್ನು ಬರೆದಿರುವರು. ವಾರ್ಧಕ ಮತ್ತು ಭಾಮಿನಿ ಷಟ್ಪದಿಗಳಲ್ಲಿ ಪಂ. ಪುಟ್ಟರಾಜರಿಗೆ ಪ್ರಭುತ್ವವಿದೆ. ಸುದೀರ್ಘವಾಗಿ ಇವರ ಕಾವ್ಯಗಳ ಅವಲೋಕನಕ್ಕಿಂತ ಸಾರವತ್ತಾದ ಅವಲೋಕನ ಇಲ್ಲಿದೆ.

ಪಂ. ರಾಜಗುರು ಗುರುಸ್ವಾಮಿ ಕಲಕೇರಿಯವರು ಪಂ. ಪುಟ್ಟರಾಜರಂತೆ ಪಂಡಿತ ಮಾರ್ಗದ ವಾರ್ಧಕದಲ್ಲಿ, ಜನಪ್ರಿಯ ಗಮಕ ಮಾರ್ಗದ ಭಾಮಿನಿ ಷಟ್ಪದಿಯಲ್ಲಿ ಕಾವ್ಯಗಳನ್ನು ಬರೆದರು. ಪಂ. ಪುಟ್ಟರಾಜರಂತೆ ಸಂಗೀತ ಕಲೆಯಲ್ಲಿ ಪ್ರಾವೀಣ್ಯತೆ ಪಡೆದ ಇವರು ಮುಖ್ಯವಾಗಿ ವೀರಶೈವ ಗುರುಪರಂಪರೆಯ ಸ್ವಾಮಿಗಳನ್ನು ಮತ್ತು ವಿರಕ್ತ ಪರಂಪರೆಯ ಸ್ವಾಮಿಗಳನ್ನು ಕುರಿತು ಬರೆದಿದ್ದಾರೆ. ಆಧುನಿಕ ಕಾಲ ಘಟ್ಟದ ಸ್ವಾಮಿಗಳ ಚರಿತ್ರೆಯ ನಿರೂಪಣೆ ಇವರಲ್ಲಿ ಮುಖ್ಯವಾಗಿದೆ.

ಶ್ರೀ ರಾಮಣ್ಣ ಬ್ಯಾಟಿಯವರು 'ಸಹಜ ಪ್ರತಿಭಾಶಾಲಿಗಳು' ಅವರು ಈ ವರೆಗೆ ೭ (ಏಳು) ಕೃತಿಗಳನ್ನು ರಚಿಸಿದ್ದಾರೆ. ಭಾಮಿನಿ ಷಟ್ಪದಿಯ ನಾಲ್ಕು ಖಂಡ ಕಾವ್ಯಗಳನ್ನು ಶತಕ ರೂಪದಲ್ಲಿ ಮತ್ತು ಅನೇಕ ಗದ್ಯ ಕೃತಿಗಳನ್ನು ರಚಿಸಿದ್ದಾರೆ. ಇವರು 'ಕುಜಿರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಎಂಬ ಕೀರ್ತಿಗೆ ಭಾಜನರೆಂಬಂತೆ ಭಕ್ತಿ ಪರಿಸರದಿಂದ ಕಾವ್ಯ ನಿರ್ಮಿತಿಗೆ ಪ್ರೇರಣೆ ಪಡೆದರು. ಇವರು ದೇವದೇವತೆಗಳ-ಶಿವ-ಶಕ್ತಿಯರ ಲೀಲೆಗಳನ್ನು,

ಆಧುನಿಕ ಶರಣೆಯರನ್ನು, ಮಠದ ಸ್ವಾಮಿಗಳನ್ನು ಪುರಾಣ ಕಾವ್ಯಕ್ಕೆ ವಸ್ತುವಾಗಿಸಿದರು. ಮಹತ್ವದ ಸಂಗತಿಯಾಗಿ ಅವರು ಅಂಬೇಡ್ಕರ ಅವರನ್ನು ಕುರಿತು ಪುರಾಣ ಕಾವ್ಯವನ್ನು ಪವಾಡಗಳನ್ನು ಹೇಳದೆ ರಚಿಸಿದರು. ಅವರ ಕಾವ್ಯ ಕಲೆಗೆ ಉತ್ತಮ ಉದಾಹರಣೆಯಾಗಿ ಈ ಕಾವ್ಯವಿದೆ.

ಪಂ. ಸದಾಶಿವ ಶಾಸ್ತ್ರಿಗಳು ಭಾಮಿನಿ ಷಟ್ಪದಿಯಲ್ಲಿ ಮೂರು ಪುರಾಣ ಕಾವ್ಯಗಳನ್ನು ಬರೆದಿರುವರು. ಗುಡಿಸಾಗರದ ಸಿದ್ಧ ಸಾಧುಗಳು, ಶ್ರೀ ಸದಾಶಿವಾನಂದ ಸ್ವಾಮಿಗಳು, (ಗದಗ) ಶ್ರೀ ಸದ್ಗುರು ಸಿದ್ದೇಶ್ವರ ಸ್ವಾಮಿಗಳು ಇವರ ಬಗೆಗೆ ಅಲ್ಲದೆ ಶರೀಫರ ಬಗೆಗೆ ಅವರು ಪುರಾಣ ಕಾವ್ಯವನ್ನು ಬರೆದಿರುವರು. ಶಿವಾನಂದ ಸ್ವಾಮಿಗಳ ಸಂಪ್ರದಾಯದ ಅವಧೂತ ಸ್ವಾಮಿಗಳನ್ನು ಕುರಿತು ಕಾವ್ಯವನ್ನು ಬರೆದ ಮೊದಲಿಗರು. ಇವರು ಸಾಮಾಜಿಕವಾದ ತುಡಿತವುಳ್ಳ ಸ್ವಾಮಿಗಳ ಸಾತ್ವಿಕ ಜೀವನವನ್ನು ಬರೆದರು. ಇದೇ ರೀತಿ ಶ್ರೀ ಶಿವಾನಂದ ಪುರಾಣವನ್ನು ಪಂ. ಮಲ್ಲಿಕಾರ್ಜುನ ಸ್ವಾಮಿಗಳು ಬರೆದಿರುವರು. ಶ್ರೀ ಶಿವಾನಂದ ಸ್ವಾಮಿಗಳು ಸಂಸಾರವನ್ನು ಗೆದ್ದು ಪಾರಮಾರ್ಥವನ್ನು ಅರಿವಿನಿಂದ ಸಾಧಿಸಿದ ಮಹಾಂತ ಜೀವನವನ್ನು ಅಲ್ಲಿ ನಿರೂಪಿಸಲಾಗಿದೆ.

ಶ್ರೀ ಕರವೀರಪ್ಪ ಅಂಗಡಿಯವರು ಹಿರಿಯ ಪುರಾಣ ಕರ್ತೃವೆನಿಸಿದ್ದಾರೆ. ಅವರು ಮುರಗೋಡ ಮಹಾಂತ ಶಿವಯೋಗಿಗಳ ಬಗೆಗೆ, ಮುಂಡರಗಿ ಅನ್ನದಾನೀಶ್ವರ ಸ್ವಾಮಿಗಳ, ಶ್ರೀ ರುದ್ರಮುನಿ ಶಿವಯೋಗೀಶ ಮತ್ತು ಶ್ರೀಗುರು ಕರಿಬಸವಯೋಗಿಗಳ ಬಗೆಗೆ ಕಾವ್ಯಗಳನ್ನು ಬರೆದಿರುವರು. ಎಲ್ಲವು ಸ್ವಾಮಿ-ಮಹಾಂತರ ಬದುಕಿನ ಭವ್ಯ ಚಿತ್ರಗಳನ್ನು ನೀಡುವವು.

ಶ್ರೀ ವಾಸುದೇವ ಹೂಲಿಯವರು (ಗದಗ) ಐದು ಪುರಾಣ ಕಾವ್ಯಗಳನ್ನು ವಿಭಿನ್ನ-ವೈವಿಧ್ಯಮಯ ವಸ್ತುವನ್ನು ಆಯ್ದು ರಚಿಸಿದ್ದಾರೆ. ಮೈಲಾರಲಿಂಗ, ಮಂಗಳಾದೇವಿ, ಬ್ರಹ್ಮಾನಂದರು, ಶ್ರೀಸಚ್ಚಿದಾನಂದರು, ರುದ್ರೇಶ ಮೊದಲಾದ ದೈವಿ-ದೇವ ದೇವತೆಗಳೊಂದಿಗೆ ಸ್ವಾಮಿಗಳ ಚರಿತ್ರೆಯನ್ನು ಇವರು ಬರೆದಿರುವರು. ಭಾಮಿನಿ ಷಟ್ಪದಿಯಲ್ಲಿ ಇವರು ಕಾವ್ಯಗಳನ್ನು ರಚಿಸಿದ್ದಾರೆ.

ಪಂ. ಸೋಮಶೇಖರ ಶಾಸ್ತ್ರಿಗಳು ಪುರಾಣಿಕಮಠ (ಗದಗ) ಅವರು ಎರಡು ಕಾವ್ಯಗಳನ್ನು ಭಾಮಿನಿ ಷಟ್ಪದಿಯಲ್ಲಿ ಬರೆದಿರುವರು. 'ಭಾಗ್ಯವಂತಿ' ಎಂಬ ಶರಣೆಯ ಕಾವ್ಯವನ್ನು ಇವರು ರಚಿಸಿದ್ದಾರೆ.

ಶ್ರೀ ಪ್ರಭಣ್ಣ ಬೊಮ್ಮನಹಳ್ಳಿಯವರು ಸಿದ್ಧಾರೂಢರ ಬಗೆಗೆ ಶರೀಫರ ಬಗೆಗೆ ಎರಡು ಭಾಮಿನಿ ಷಟ್ಪದಿಯ ಕಾವ್ಯಗಳನ್ನು ರಚಿಸಿದ್ದು, ಸಿದ್ಧಾರೂಢರು ಕರ್ನಾಟಕದ ಆಧ್ಯಾತ್ಮಿಕ ಕ್ಷೇತ್ರದ ಗೌರಿಶಂಕರ ಪರ್ವತದಂತಹ ವ್ಯಕ್ತಿತ್ವವುಳ್ಳವರು. ಅವರ ಬಗೆಗೆ ಈ ಕಾವ್ಯವು ಆಧ್ಯಾತ್ಮಿಕತೆಯ ನಿಲುವನ್ನು ಎತ್ತಿ ಹೇಳುವದು.

ಶ್ರೀ ನೀಲಕಂಠ ಜಾಡಗೌಡರ ಅವರು ನೀಲಕಂಠ ಮಠದ ಸ್ವಾಮಿಗಳ ಚರಿತ್ರೆಯನ್ನು ಪುರಾಣ ರೂಪದಲ್ಲಿ ಹೇಳಿದ್ದಾರೆ. ಸ್ವಮತ ವಿವರಗಳು ಅದರಲ್ಲಿವೆ. ಪಂ. ಶಿವದೇವ ಶಾಸ್ತ್ರಿಗಳು ಅಣ್ಣಯ್ಯ-ತಮ್ಮಯ್ಯನ ಕಾವ್ಯವನ್ನು ಬರೆದಿರುವರು. ಇವರು ಶರಣ ಜೀವಿಗಳಾಗಿ ಬದುಕಿದ ಬಗೆ ಅಲ್ಲಿದೆ. ಶ್ರೀ ಬಸವಂತಾಚಾರ್ಯ ಮನ್ವಾಚಾರ್ಯರು ಮಲ್ಲಜ್ಜನ ಪುರಾಣವನ್ನು; ಶ್ರೀ ಬಾಲಚಂದ್ರಶಾಸ್ತ್ರಿಗಳು ರುದ್ರಮುನಿ ಶಿವಾಚಾರ್ಯರರು ಬೆಳವಣಕಿ ಗುರುಲಿಂಗಮ್ಮ ಹಾಗೂ ಜಗದ್ಗುರು ವೀರಗಂಗಾಧರರ ಬಗೆಗೆ ಕಾವ್ಯಗಳನ್ನು ಬರೆದಿರುವರು. ಇಲ್ಲಿ ಒಟ್ಟು ಉಪಲಬ್ಧವಿದ್ದ ೫ಲ ಕೃತಿಗಳನ್ನು ಮೂರನೆ ಅಧ್ಯಾಯದಲ್ಲಿ ಅವಲೋಕಿಸಲಾಗಿದೆ.

●●●

ನಾಲ್ಕನೆಯ ಅಧ್ಯಾಯದಲ್ಲಿ ಪುರಾಣ ಕಾವ್ಯಗಳ ಮೌಲ್ಯ ವಿವೇಚನೆ ಮಾಡಲಾಗಿದೆ. ಐದು ಹಂತಗಳಲ್ಲಿ – ವಸ್ತು ವಿನ್ಯಾಸ, ಧಾರ್ಮಿಕ ವಿನ್ಯಾಸ, ಕಾವ್ಯಕಲೆ, ಪಾತ್ರ ವಿವೇಚನೆ ಮತ್ತು ಸಾಮಾಜಿಕ ಸಂವಹನಗಳನ್ನು ಇಲ್ಲಿ ವಿವೇಚಿಸಲಾಗಿದೆ.

ಮೊದಲ ಹಂತದಲ್ಲಿ ಪುರಾಣ ಕಾವ್ಯಗಳ ವಸ್ತು ವಿನ್ಯಾಸವನ್ನು ಹೇಳಲಾಗಿದೆ. ಪುರಾಣ ಕಾವ್ಯಗಳ ವಸ್ತು ಆಧ್ಯಾತ್ಮ ವಿಷಯವಾಗಿದೆ. ಜೈನರು ಮತ ಸಿದ್ಧಾಂತಗಳನ್ನು ತೀರ್ಥಂಕರರ ಚರಿತ್ರೆಯ ಮೂಲಕ, ಕಲೆಗಳ ಮೂಲಕ ಹೇಳಿದಂತೆ ವೀರಶೈವ ಕಾವ್ಯಗಳು ಮತ ತತ್ವಗಳನ್ನು, ಶರಣರ ಜೀವನ ನಿರೂಪಣೆಯಂತಹ ಮೊದಲಹಂತದ ಪುರಾಣ ಕಾವ್ಯಗಳ ವಸ್ತುವನ್ನು ಹೊಂದಿತ್ತು. ಆ ಕಾಲಘಟ್ಟದಲ್ಲಿ ಬರುವ ಜೈನ ಕವಿಗಳು ರಾಜರ, ಧಾರ್ಮಿಕ ವಲಯದ ಅರಸರನ್ನು, ಅವರ ವೈಭವವನ್ನು ವರ್ಣಿಸುವದನ್ನು ಭರತೇಶ ವೈಭವದಲ್ಲಿ ಕಾಣಬಹುದು. ಮುಂದೆ ಬಂದ ಆಧುನಿಕ ಕಾಲಘಟ್ಟದ ಪುರಾಣ ಕವಿಗಳು, ಸ್ವಾಮಿಗಳ, ಆಧ್ಯಾತ್ಮಿಕ ವ್ಯಕ್ತಿಗಳ ಜೀವನದ ಉದಾತ್ತತೆಯನ್ನು ಎತ್ತಿ ಹೇಳಿದ್ದಾರೆ. ಮುಖ್ಯವಾಗಿ ಮಠ ಮತ್ತು ಮಠದ ಪರಿಸರಗಳು ಸಮಾಜದ ಧಾರ್ಮಿಕ ಕೇಂದ್ರಗಳಾಗಿದ್ದ ಸ್ವಾಮಿಗಳು ಸಮಾಜೋಧಾರ್ಮಿಕ ಶಕ್ತಿಗಳಾಗಿರುವರು. ಇವರ ಜೀವನಾನುಭವಗಳನ್ನು ಹೇಳಲಾಗಿದೆ. ಅವರನ್ನು ಪವಾಡ ಪುರುಷರು ಎಂಬಂತೆ ಚಿತ್ರಿಸುವದು, ಲೀಲೆಗಳನ್ನು ಅಲೌಕಿಕ ಎನ್ನುವ ರೀತಿ ವರ್ಣಿಸಿರುವದು ಈ ಕಾವ್ಯಗಳ ವಸ್ತುವಿನ ವಿವೇಚನೆಯಲ್ಲಿ ಮಹತ್ವದ ಅಂಶವಾಗಿದೆ.

ಕೇವಲ ಕೆಲವೇ ಪುರಾಣ ಕಾವ್ಯಗಳು, ದೇವ-ದೇವತೆಗಳ ಲೀಲಾ ವಿಲಾಸವನ್ನು ಹೇಳಿವೆ. ಶೈವ ಪುರಾಣ ಆಗಮಗಳು, ವೈಷ್ಣವ ಶಾಕ್ತ ಪುರಾಣ ಕಾವ್ಯಗಳನ್ನು ಅನುಸರಿಸಿದ ಲೀಲೆಗಳನ್ನು ವರ್ಣಿಸಲಾಗಿದೆ. ಬಹುಪಾಲು ಕಾವ್ಯಗಳು ವೀರಶೈವ – ಲಿಂಗಾಯತ ಮಠದ ಸ್ವಾಮಿಗಳ ಚರಿತ್ರೆಯ ವಸ್ತುವನ್ನು ಹೊಂದಿವೆ, ಅದರಲ್ಲಿ ಆಧ್ಯಾತ್ಮಿಕ ಪರಿಸರವನ್ನುಂಟು ಮಾಡಿದ ಸ್ವಾಮಿಗಳು ಸಮಾಜದ ಸ್ವಾಸ್ಥ್ಯವನ್ನು ಗುರಿಯಾಗಿಸಿಕೊಂಡರು. ಲಿಂಗಾಯತ ಸ್ವಾಮಿಗಳಲ್ಲಿ ವಿರಕ್ತ ಮತ್ತು ಗುರು ಪರಂಪರೆಗಳಲ್ಲದೆ ಶಿವಾನಂದ, ಸಿದ್ಧಾರೂಢ, ಅವಧೂತ

ಪರಂಪರೆಗಳ ಸ್ವಾಮಿಗಳ ಮತ್ತು ಅವರ ಸೇವೆಯ ವರ್ಣನೆಯು ಇಲ್ಲಿ ಪ್ರಧಾನ ವಿಷಯವಾಗಿದೆ. ತಮಿಳುನಾಡಿನ ಶಿವಭಕ್ತರ, ತೆಲುಗಿನ ಹೇಮರಡ್ಡಿ ಮಲ್ಲಮ್ಮ ಇವರ ಚರಿತ್ರೆಗಳಲ್ಲಿ ಭಕ್ತಿಯ ನಿರೂಪಣೆಯೂ ಕಾಣಿಸಿದೆ. ಶರಣರ, ಶರಣ ಪರಂಪರೆಯ ತಾತ್ವಿಕರ ಜೀವನ ಚಿತ್ರಣವು ವಸ್ತು ವಿವೇಚನೆ ಎನಿಸಿದೆ, ಲೋಕದ ಬಗೆಗಿನ ಜ್ಞಾನ ಸಾಧನೆಗಳು ವಸ್ತುವಾಗಿವೆ.

ನಾಲ್ಕನೆಯ ಅಧ್ಯಾಯದ ದ್ವಿತೀಯ ಹಂತದಲ್ಲಿ ಪುರಾಣ ಕಾವ್ಯಗಳ ಧಾರ್ಮಿಕ ವಿವೇಚನೆಯನ್ನು ವಿವರಿಸಲಾಗಿದೆ. ಧರ್ಮವೆನ್ನುವದನ್ನು ಮತೀಯ ಹಿನ್ನೆಲೆಗಿಂತ 'ಮಾನವತೆಯ ಉದ್ಧಾರದ ತತ್ತ್ವ' ಎಂಬ ಹಿನ್ನೆಲೆಯಲ್ಲಿ ವಿವೇಚಿಸಿರುವದು ಮಹತ್ವದ ಅಂಶವಾಗಿದೆ. ಮುಖ್ಯವಾಗಿ ಶರಣ ಪರಂಪರೆಯ ಸ್ವಾಮಿಗಳ ಚರಿತ್ರೆಯಲ್ಲಿ ಸತ್ಯ, ನ್ಯಾಯ, ದಯೆ, ನಿಸ್ವಾರ್ಥ, ನಿರಹಂಕಾರ, ಶಾಂತಿ ಮೊದಲಾದ ವಿಶ್ವಮಾನವೀಯ ತತ್ವಗಳನ್ನು ಒಳಗೊಂಡ ವಚನ ಶಾಸ್ತ್ರವನ್ನು ಇಲ್ಲಿ ವಿವೇಚಿಸಲಾಗಿದೆ. ಅಂತೆ ಕಾಯಕ-ದಾಸೋಹಗಳನ್ನು ಸಮಾಜೋಧಾರ್ಮಿಕ ಮಹತ್ವದ ಭಾಗವೆಂಬಂತೆ ಶರಣರು ದರ್ಶನವನ್ನು ಅನುಷ್ಠಾನಗೊಳಿಸಿ ಬದುಕಿದ್ದರು. ಶರಣ ಪರಂಪರೆಯ ಸ್ವಾಮಿಗಳು ಅದೇ ರೀತಿ ಕಾಯಕ-ದಾಸೋಹ ತತ್ತ್ವಗಳನ್ನು 'ಧರ್ಮ'ವೆಂಬ ರೀತಿ ಬದುಕಿರುವದನ್ನು ಅನುಸರಿಸಿರುವದನ್ನು ಕಾಣಬಹುದು.

ವೀರಶೈವ-ಲಿಂಗಾಯತ ತತ್ತ್ವಜ್ಞಾನ ದರ್ಶನದ ಇನ್ನೊಂದು ಮಹತ್ವದ ವಿವೇಚನೆಯನ್ನು ಧರ್ಮದ ತಳಹದಿಯೆಂದು ಆ ನಿಟ್ಟಿನ ಎಲ್ಲ ಕಾವ್ಯಗಳಲ್ಲಿ ವಿವರಿಸಲಾಗಿದೆ. ಅವು ವ್ಯಕ್ತಿ ಸಮಾಜಗಳ ಉನ್ನತಿಯನ್ನು ಸೂಚಿಸುವವು. ಅವು ಲಿಂಗಾಯತ ಪ್ರಸ್ಥಾನತ್ರಯಿಗಳೆಂದು ಪ್ರಖ್ಯಾತಗೊಂಡ ಷಟ್‌ಸ್ಥಲ, ಅಷ್ಟಾವರಣ ಮತ್ತು ಪಂಚಾಚಾರಗಳು. ಇವು ಶರಣರಿಂದ ತಾತ್ವಿಕ ನೆಲೆಯನ್ನು ಪಡೆದು ಮುಂದೆ ಮತ್ತೆ ಬೆಳೆಯುತ್ತ ಅರ್ಥ ವ್ಯಾಪ್ತಿಯನ್ನು ಹೆಚ್ಚಿಸುತ್ತ ನಡೆದವು. ಎಲ್ಲ ವೀರಶೈವ-ಲಿಂಗಾಯತ ವ್ಯಾಪ್ತಿಯ ಕಾವ್ಯಗಳಲ್ಲಿ ಅವಶ್ಯವಾಗಿ ಈ ತತ್ವಗಳನ್ನು ತರಲಾಗಿದೆ.

ಸ್ವಾಮಿಗಳ ಚರಿತ್ರೆ ಆದುದರಿಂದ ಶರಣ ದರ್ಶನದ ಇನ್ನೊಂದು ಮೂಲೆಯ ವಿವೇಚನೆ ಇಲ್ಲಿದೆ. ಅದೇ 'ಅರಿವು-ಆಚಾರ-ಅನುಭಾವ'ಗಳ ವಿವೇಚನೆ. ಎಲ್ಲಕ್ಕಿಂತ ಮಹತ್ವದ್ದೆಂದರೆ ದೇಶಿ ನೆಲೆಯಲ್ಲಿ ಧಾರ್ಮಿಕ ತತ್ವಗಳನ್ನು ಬಿತ್ತುವ ಕಾರ್ಯವಾದಂತಹ ಪ್ರವಚನಗಳಿಂದ ಕಾವ್ಯಗಳನ್ನು ಜನತೆಗೆ ಮುಟ್ಟಿಸುವದು. ಇದರಿಂದ ಸಾಮೂಹಿಕ ಧರ್ಮ ಚಿಂತನೆಯ ಮಹತ್ವದ ಕ್ರಿಯೆ ನಡೆಯಿತು. ಪಂಚಾಚಾರ್ಯ ಸ್ವಾಮಿಗಳ, ಬ್ರಹ್ಮಾನಂದ ಸ್ವಾಮಿಗಳ, ಅವರ ತತ್ವ ವಿವೇಚನೆಗೆ ಇಂಬು ದೊರಕಿದೆ. 'ಧರ್ಮ' ಎನ್ನುವದು ಸಾಮಾಜಿಕ ಉದ್ಧಾರದ ಸಾಧನವೆಂಬ ರೀತಿ ಇಲ್ಲಿ ವಿವೇಚನೆ ಇದೆ.

ನಾಲ್ಕನೆಯ ಅಧ್ಯಾಯದ ತೃತೀಯ ಹಂತದಲ್ಲಿ ಪುರಾಣ ಕಾವ್ಯಗಳ ಸಾಹಿತ್ಯ ಸ್ವರೂಪ ಮತ್ತು ಕಾವ್ಯಕಲೆಗಳ ಅನುಬಂಧವನ್ನು ಚರ್ಚಿಸಲಾಗಿದೆ. ಪುರಾಣ ಕಾವ್ಯಗಳು ಶುದ್ಧ ಕಾವ್ಯಕಲೆಗಾಗಿ

ಹುಟ್ಟಿದವುಗಳಲ್ಲ ಅವುಗಳ ಉದ್ದೇಶ 'ಧರ್ಮ' ಪ್ರಸಾರ, ಧಾರ್ಮಿಕ ವ್ಯಕ್ತಿಗಳ ಜೀವನದ ಭವ್ಯತೆಗಳನ್ನು ಎತ್ತಿ ಹೇಳುವದು. ಅವು ಒಂದು ಛಂದೋ ಸ್ವರೂಪದಲ್ಲಿದ್ದು ಅಲ್ಪ ಪ್ರಮಾಣದಲ್ಲಿ ವರ್ಣನೆ ಅಲಂಕಾರದಂತಹ ವಿಷಯಗಳನ್ನು ನಿರೂಪಿಸುವವು. ಅಲ್ಲಿ ಮುಖ್ಯವಾಗಿ ಲೀಲೆ ಪವಾಡಗಳನ್ನು ನಿರೂಪಿಸಿ ಕಥಾನಾಯಕನ ವ್ಯಕ್ತಿತ್ವದ ಭವ್ಯತೆಯನ್ನು ಸಾರುವದು ಕಾವ್ಯಕಲೆ ಎನಿಸುವದು.

ಪುರಾಣ ಕಾವ್ಯಗಳು ಪ್ರವಚನ ಮತ್ತು ಗಮಕಕ್ಕೆ ಹಾದಿ ಹಾಕಿಕೊಟ್ಟ ಷಟ್ಪದಿ ಛಂದೋ ರೂಪವನ್ನು ಹೊಂದಿವೆ. ಭಾಮಿನಿ ಷಟ್ಪದಿಯು ಅವುಗಳಲ್ಲಿ ಪ್ರಮುಖವಾದುದು. ಅದನ್ನು ವ್ಯಾಪಕವಾಗಿ ಬಳಸಲಾಗಿದೆ. ಪಂಡಿತ ಮಾರ್ಗ ಸೂಚಿಯಾಗಿ ವಾರ್ಧಕವನ್ನು ಬಳಸಲಾಗಿದೆ. ಪಂಡಿತ ಕವಿಗಳಾದ ಪಂ. ಪುಟ್ಟರಾಜರು ವಿವಿಧ ಶಾಸ್ತ್ರಗಳನ್ನು ಅಧ್ಯಯನ ಮಾಡಿದವರು. ಅವರು ಕನ್ನಡ ಭಾಷೆ, ಛಂದಸ್ಸು ಕಾವ್ಯ ಶಾಸ್ತ್ರಗಳನ್ನು ಅಧ್ಯಯನ ಮಾಡಿದ ಫಲವಾಗಿ ಅವರ ಕಾವ್ಯಗಳು ಕಲಾ ಪೂರ್ಣವೆನಿಸಿವೆ. ಅವರ ಎಷ್ಟೋ ಕೃತಿಗಳು ಉತ್ತಮ ಕಾವ್ಯಗಳಾಗಿವೆ. ಅವರ ವರ್ಣನೆಗಳು ಅಲಂಕಾರಗಳು ಹೃದ್ಯವಾಗಿವೆ. ಹಾಗೆಯೇ ಪಂ. ರಾಜಗುರು ಗುರುಸ್ವಾಮಿಯವರು ಹೃದ್ಯವಾಗಿ ಬರೆಯಬಲ್ಲರು. ಪಂ. ಪುಟ್ಟರಾಜರು ಹಿಂದಿನ ಕಾವ್ಯಗಳಿಂದ ಮುಖ್ಯವಾಗಿ ವಚನಗಳಿಂದ ಪ್ರಭಾವಿತರಾಗಿರುವರು. ಎಷ್ಟೋ ಬಾರಿ ವಚನಗಳನ್ನು ಷಟ್ಪದಿಯಲ್ಲಿ ತಿರುಗಿಸಿದ್ದಾರೆ. ಹೆಚ್ಚು ಸಾಹಿತ್ಯಿಕ ಅಧ್ಯಯನದ ಹಿನ್ನೆಲೆ ಇರದಿದ್ದರೂ, ಶ್ರೀ ರಾಮಣ್ಣ ಬ್ಯಾಟಿಯವರು ಉತ್ತಮ ನಿರೂಪಣೆ, ವರ್ಣನೆಗಳಲ್ಲಿ ಉತ್ತಮವಾದ ಶೈಲಿಯನ್ನು ಹೊಂದಿದ್ದಾರೆ.

ಬಹುಪಾಲು ಪುರಾಣ ಕವಿಗಳು ಸಂಗೀತ ಕಲೆಯನ್ನು ಬಲ್ಲವರು. ಉಳಿದವರು ಭಾಮಿನಿ ಷಟ್ಪದಿಯ ಲಯವನ್ನು ಕರಗತಮಾಡಿಕೊಂಡ ಕಾರಣ ಗಣ ನಿರೂಪಣೆ ಮತ್ತು ಲಯಗಳ ನಿರೂಪಣೆಯಲ್ಲಿ ಅದ್ವಿತೀಯವಾದುದನ್ನು ಸಾಧಿಸಿದ್ದಾರೆ. ಕಾವ್ಯ ಕಲೆಗಿಂತ ಪವಾಡ/ ಲೀಲೆಗಳ ಬೆನ್ನುಹತ್ತಿ ಕಾವ್ಯ ಸೌಂದರ್ಯಕ್ಕೆ ಚ್ಯುತಿ ತಂದುಕೊಂಡಿರುವದು ಇಲ್ಲಿಯ ಗಮನಿಸಬೇಕಾದ ಅಂಶವಾಗಿದೆ. ಕಾವ್ಯದ ಮುಖ್ಯ ಅಂಶಗಳಾದ ರಸ, ಧ್ವನಿ, ಮಹೋನ್ನತಿ, ಪ್ರತಿಮೆ ಮುಂತಾದವುಗಳಿಲ್ಲದೆ ಕಾವ್ಯಗಳು ಇಲ್ಲಿ ಸೊರಗಿವೆ.

ನಾಲ್ಕನೆಯ ಅಧ್ಯಾಯದ ನಾಲ್ಕನೆಯ ಘಟ್ಟದಲ್ಲಿ ಪುರಾಣ ಕಾವ್ಯಗಳಲ್ಲಿ ಚಿತ್ರಿತಗೊಂಡ ಪಾತ್ರಗಳ ವಿವೇಚನೆಯನ್ನು ಮಾಡಲಾಗಿದೆ. ಪುರಾಣ ಕಾವ್ಯಗಳು ಮುಖ್ಯವಾಗಿ ಸ್ವಾಮಿಗಳ ಚರಿತ್ರೆಯನ್ನು ಒಳಗೊಂಡಿವೆ. ಅವರ ಪಾತ್ರವೇ ಇಲ್ಲಿ ಮುಖ್ಯವಾದುದು. ಡಾ. ಬಾಬಾ ಸಾಹೇಬ ಅಂಬೇಡ್ಕರ ಅಂತಹ ಮಹಾತ್ಮರಿಂದ ಹಿಡಿದು ಅನೇಕ ಭವ್ಯಮಾನವರ ಚಿತ್ರಣ ಇಲ್ಲಿದೆ. ಶಿವ, ವಿಷ್ಣು, ಮೈಲಾರ, ಬನಶಂಕರಿ ಮೊದಲಾದ ಹಿಂದೂ ಪುರಾಣ ದೇವ-ದೇವತೆಗಳಿಗೆ ಇಲ್ಲಿ ಇಂಬು ದೊರೆತಿದೆ. ಆ ಬಳಿಕ ಶರಣರು, ಶಿವಭಕ್ತರು, ಪ್ರಾಚೀನರೂ, ನೂತನರು, ಮಧ್ಯಕಾಲೀನರು, ಆಧುನಿಕರು ಎಲ್ಲ ಭಕ್ತ ಮಹಾಂತರು ಇಲ್ಲಿ ಚಿತ್ರಿತಗೊಂಡಿದ್ದಾರೆ. ಶರಣರು ಮತ್ತು ಸ್ವಾಮಿಗಳು ಬದುಕಿಗೆ ಮೌಲ್ಯಗಳನ್ನು ಸಲ್ಲಿಸಿದವರು. ಬಲ್ಲಿದರಾಗಿ ಬಾಳಿ

ಬಲವನ್ನು ಬದುಕಿಗೆ ತಂದವರು. ಅವರನ್ನು ಕುರಿತು ಸತ್ಯ ಚರಿತ್ರೆಗಳನ್ನೆ ನಿರೂಪಿಸಲಾಗಿದೆ. ಆದರೆ ಪವಾಡ ಲೀಲೆಗಳನ್ನು ಹೇಳುವದನ್ನೆ ಮುಖ್ಯವಾಗಿಟ್ಟುಕೊಂಡು ಶರಣರ ಮಹಾತ್ಮರ ಬದುಕಿನ ಸರಳ ಭವ್ಯತೆ, ಸಂಘರ್ಷದಿಂದ ಅಪ್ಪಟತೆಗಳನ್ನು ಗುರುತಿಸದೇ ಹೋಗಲಾಗಿದೆ.

ಪುರಾಣ ಕಾವ್ಯಗಳಲ್ಲಿ ಪ್ರಮುಖ ಮತ್ತು ಏಕೈಕವಾದ ಪಾತ್ರಗಳಾಗಿ ಸ್ವಾಮಿಗಳ ವ್ಯಕ್ತಿತ್ವವು ಚಿತ್ರಣಗೊಂಡಿದೆ. ಅವರ ಚಾರಿತ್ರಿಕ ವಿಷಯಗಳು ನಿರೂಪಣೆಗೊಂಡಿವೆ. ಸ್ವಾಮಿಗಳ ಪರಂಪರೆಯನ್ನು ಹೇಳುವ ಮೂಲಕವಾಗಿ ಮಠದ ಇತಿಹಾಸವನ್ನು ನಿರೂಪಿಸಲಾಗಿದೆ. ಈ ಸ್ವಾಮಿಗಳು ಪರಮ ಸಾತ್ವಿಕರು ತಾತ್ವಿಕರು ಆಗಿರುವರು. ಅವರಲ್ಲಿ ಬಹುಪಾಲು ಜನ ಲೋಕಸಂಚಾರಿಗಳಾಗಿ ಲೋಕಾನುಭವವನ್ನು ಹೊಂದಿದವರು. ಅವರ ಬದುಕು ದೈವಿ ಲೀಲೆಯೆಂಬಂತೆ ಚಿತ್ರಣವಿರುವದು. ಅವರೆಲ್ಲರೂ ವರ ಶಾಪ ನೀಡುವ ಗುಣವುಳ್ಳವರಂತೆ ಚಿತ್ರಿತರಾಗಿದ್ದಾರೆ.

ಮಠದ ಸ್ವಾಮಿಗಳ ಮರಣಾನಂತರ ಅವರ ಭಕ್ತರು ಅವರ ಜೀವನವನ್ನು ಲೀಲಾಮಯವಾಗಿಸಿ ಪವಾಡಗಳನ್ನು ಹೇಳಿ ಬರೆಯಿಸಿದ ಕಾರಣ ಕವಿ ಸ್ವಾತಂತ್ರ್ಯವು ಇಲ್ಲದಾಗಿದೆ. ಎಲ್ಲೋ ಒಂದೆರಡು ಸ್ವ-ಇಚ್ಛೆಯಿಂದ ಬರೆದವುಗಳಲ್ಲಿ ಪಾತ್ರಗಳು ಭವ್ಯವಾಗಿ ಚಿತ್ರಿತವಾಗಿವೆ. ಅಕ್ಕಮಹಾದೇವಿ, ತಿಪಷ್ಠಿ ಪುರಾತನ ಶಿವಭಕ್ತರು ಮೊದಲಾದವರನ್ನು ಉತ್ತಮ ರೀತಿಯಲ್ಲಿ ಚಿತ್ರಿಸಿದ್ದು ಇಲ್ಲಿ ವ್ಯಕ್ತಿಗಿಂತ ಶಕ್ತಿ ಮುಖ್ಯ ಎನಿಸಿದೆ.

ನಾಲ್ಕನೆಯ ಅಧ್ಯಾಯದ ಕೊನೆಯ ಹಂತದಲ್ಲಿ ಪುರಾಣಕಾವ್ಯಗಳ ಸಾಮಾಜಿಕ ಸಂವಹನವನ್ನು ವಿವೇಚಿಸಲಾಗಿದೆ. ಪುರಾಣ ಕಾವ್ಯಗಳಲ್ಲಿ ಚಿತ್ರಣಗೊಂಡ ವಸ್ತು ಸಾಮಾಜಿಕತೆಗಾಗಿ ಹುಟ್ಟಿದ್ದು; ಸಾಮಾಜಿಕ ವ್ಯಕ್ತಿಗಳಾಗಿ ನಾಯಕರು ಬೆಳೆದದ್ದು, ಸಾಮಾಜಿಕತೆಯ ಅರಿವನ್ನು ಸಮಾಜಕ್ಕೆ ಮೂಡಿಸಿದ್ದು ಅವುಗಳ ಮುಖ್ಯ ಕಾರ್ಯವಾಗಿದೆ. ಇದರಿಂದ ಸಾಮಾಜಿಕತೆಯ ಅರಿವು-ಸಂವೇದನೆಗಳು ಶಿಷ್ಟ ಮತ್ತು ಬೇರಾವ ಸಾಹಿತ್ಯ ರೂಪಗಳಿಗಿಂತ ಹೆಚ್ಚಾಗಿ ಪುರಾಣ ಕಾವ್ಯಗಳಿಂದ ಉಂಟಾಯಿತು ಎಂಬುದು ಈ ಅಧ್ಯಯನದ ಮುಖ್ಯ ವಿಷಯವಾಗಿದೆ.

ಪುರಾಣ ಕಾವ್ಯಗಳು ಗ್ರಾಂಥಿಕ ಮತ್ತು ಮೌಖಿಕವಾದ ಎರಡು ನೆಲೆಯ ಪ್ರಯೋಗಶೀಲತೆಯನ್ನು ಹೊಂದಿವೆ. ಗ್ರಾಂಥಿಕವಾಗಿ ಅದು ರಚನೆಗೊಳ್ಳುವುದೇ ಸಮಾಜ ಸೇವೆಯನ್ನೆ ಗುರಿಯಾಗಿಸಿಕೊಂಡ ಸ್ವಾಮಿಗಳ ಚರಿತ್ರೆಯ ರೂಪವಾಗಿ. ಸಮಾಜವು ಸ್ವಾಮಿಗಳನ್ನು ಕಾಡಿದರೂ ಸಮಾಜದ ಒಪ್ಪ ಓರಣವೇ ಅವರ ಗುರಿಯಾಯಿತು. ಇದು 'ಸಹನೆ ಸ್ಥೈರಣೆ'ಯ ಮೂಲ ರೂಪವಾಗಿದೆ. ಇವು ಎಲ್ಲ ಧರ್ಮದ ಮುಖ್ಯ ತತ್ವಗಳೇ ಆಗಿವೆ. ವ್ಯಕ್ತಿಯಾಗಿ ಇವು ಮನುಷ್ಯನನ್ನು ನಿರೂಪಿಸುವ ಸಾಧನಗಳೆಂದು ಶರಣರು ತಿಳಿಸಿದ್ದಾರೆ. ಶರಣರ ಜೀವನವೇ ತಾತ್ವಿಕತೆಯ ಪ್ರಯೋಗ ಶಾಲೆಯಾಗಿತ್ತು. ಪುರಾಣ ಕಾವ್ಯಗಳಲ್ಲಿ ಚಿತ್ರಿತಗೊಂಡ ಸ್ವಾಮಿಗಳ ಶರಣರ ಬದುಕು ನಾಲ್ಕುಗೋಡೆಗೆ ಸೀಮಿತವಾದುದಲ್ಲ. ಅಲ್ಲಿ 'ವಿಶ್ವ ಕುಟುಂಬಿಕ' ತತ್ವ ಇದೆ. ಸಮಾಜವು

ವ್ಯಕ್ತಿಯ ಸತ್ಯ ಮತ್ತು ಸಾಧನೆಗಳನ್ನು ಒಮ್ಮೆಲೆ ಒಪ್ಪಿಕೊಂಡು ಅನುಸರಿಸುತ್ತದೆ ಎಂಬ ಮಾತು ಇರುವದಿಲ್ಲ. ಸಾಮಾಜಿಕವಾಗಿ ಸ್ವಾಮಿಗಳು ತಮ್ಮ ಬದುಕನ್ನು ತೆಯ್ದು ದೀಪದಂತೆ ಬೆಳಕಾಗಿರುವದೇ ಹೆಚ್ಚು.

ಯಾವ ಸಾಹಿತ್ಯ ಪ್ರಕಾರಕ್ಕೂ ಇರದ ಸಾಮಾಜಿಕ ಸಂವಹನವು ಪುರಾಣ ಕಾವ್ಯಗಳ ಪ್ರವಚನದ ಮೂಲಕ ಸಾಧ್ಯವಾಗಿದೆ. ಪ್ರವಚನವು ಸಾವಿರಾರು ಜನಕ್ಕೆ ಏಕಕಾಲದಲ್ಲಿ ಸಾಹಿತ್ಯವನ್ನು ಒದಗಿಸುವದು. ಸಂಗೀತ, ಕತೆ, ಸಾಮತಿವಿವರಣೆ, ಹಾಸ್ಯೋಕ್ತಿಗಳನ್ನು ಹೊಂದಿಸಿ ಮನದಾಳಕ್ಕೆ ಇಳಿಯುವಂತೆ ಮಾಡುವದು ಪ್ರವಚನದ ಕಾರ್ಯವಾಗಿದೆ. ಶಿಷ್ಠ ಸಾಹಿತ್ಯ ಮತ್ತು ಜನಪದವೆರಡನ್ನು ಹೊಂದಿಸಿಕೊಂಡ ಸುವರ್ಣ ಮಾಧ್ಯಮವಿದು. ಜನರ ಮನವನ್ನು ತಿದ್ದುವ, ಸಾತ್ವಿಕ ಮಾರ್ಗಕ್ಕೆ ತರುವ ಕಾರ್ಯವು ಪ್ರವಚನದ ಮೂಲಕ ಸಾಧ್ಯವಾಗಿ ಜಾತ್ಯಾತೀತ, ವರ್ಗಾತೀತ, ಸಮತೆ-ಸಮಾನತೆಗಳನ್ನು ಹೇಳುವ ಮೂಲಕ ಸಾಮಾಜಿಕತೆಯು ಸಂವಹನಗೊಳ್ಳುವದನ್ನು ಈ ಭಾಗವು ವಿವರಿಸುವದು.

••••

ಐದನೆಯ ಅಧ್ಯಾಯವು ಸಮಾರೋಪ ರೂಪದ ಸಮೀಕ್ಷೆಯನ್ನು ವಿವರಿಸುವದು. ಗದಗ ಜಿಲ್ಲಾ ವ್ಯಾಪ್ತಿಯಲ್ಲಿ ಬೇರೆಡೆ ಎಲ್ಲಿಯೂ ನಡೆಯದಷ್ಟು ಪುರಾಣ ಕಾವ್ಯಗಳ ರಚನೆ ನಡೆದಿದೆ. ಬಹುಪಾಲು ಕವಿಗಳು ಸಂಗೀತವನ್ನು ಕಲಿತಿರುವದರಿಂದ ಇವರು ರಚಿಸಿದ ಕಾವ್ಯಗಳು ಲಯ ಬದ್ಧವಾಗಿವೆ. ಷಟ್ಪದಿ ಸಾಹಿತ್ಯ ರೂಪವು ಹಳಗನ್ನಡ ಕಾಲದಲ್ಲಿಯೆ 'ಕರ್ನಾಟಕ ವಿಷಯ ಜಾತಿ'ಯಾಗಿ ಜನಪದದಲ್ಲಿದ್ದು; ಶಿಷ್ಠವಾದ ಸಾಹಿತ್ಯ ಪ್ರಕಾರವಾಗಿ, ಮುಂದೆ ನಡುಗನ್ನಡದಲ್ಲಿ ಸಾಹಿತ್ಯ ಮಾರ್ಗವಾಗಿ, ಶಿಷ್ಠ ರೂಪಗಳಿಗೆ ಮಾದರಿಯಾಯಿತು. ಪುರಾಣ ಕಾವ್ಯಗಳು ಆ ಪ್ರಾಚೀನ ರೂಪವನ್ನು ಮುಂದುವರೆಸುತ್ತ ಬಂದಿರುವದು ಕನ್ನಡ ಭಾಷೆ ಅಭಿಜಾತ ರೂಪವೆಂಬುದನ್ನು ಎತ್ತಿ ಹೇಳುತ್ತದೆ.

ಧರ್ಮವನ್ನು ಶುದ್ಧ ಸಾಹಿತ್ಯದ ಸಹಾಯದಿಂದ ಬಳಸಿ ಜನ-ಸಂವಹನದ ವಿಷಯವನ್ನಾಗಿ ಮಾಡಿರುವದನ್ನು ಪುರಾಣ ಕಾವ್ಯಗಳ ವಿಶೇಷತೆ ಎಂದು ವಿವರಿಸಲಾಗಿದೆ. ಮತ ತತ್ವಗಳ ವಿವೇಚನೆಯ ಮೂಲಕವಾಗಿಯೂ, ಶುದ್ಧ ಮೌಲ್ಯ ವಿವೇಚನೆಯ ರೂಪವಾಗಿಯೂ ಸ್ವಾಮಿಗಳ ಚರಿತ್ರೆಯಲ್ಲಿ ಧರ್ಮವು ಒಡಮೂಡಿದೆ. ಮಾನವೀಯತೆ ಮತ್ತು ಸಾಮಾಜಿಕತೆಗಳು ಇಲ್ಲಿ ಹಾಸುಹೊಕ್ಕಾಗಿವೆ.

ಚರಿತ್ರೆಯ ನಾಯಕರೆನಿಸಿದ ಸ್ವಾಮಿಗಳನ್ನು ಕುರಿತು ಹೇಳುವಲ್ಲಿ ಶಿವಭಕ್ತರ ವ್ಯಕ್ತಿತ್ವದ ಮಹತಿಯನ್ನು ಹಲವು ಪವಾಡ/ಲೀಲೆಗಳನ್ನು ಉದ್ದಕ್ಕೂ ಹೆಣೆದಿರುವದು ವಾಸ್ತವ ಮತ್ತು ವೈಜ್ಞಾನಿಕ ಸತ್ಯವಲ್ಲದ ಸಂಗತಿ ಎನಿಸುವದು. ಜನ ಸಾಮಾನ್ಯ ಭಾರತೀಯ ಮನಸ್ಸು ಇಂತವುಗಳನ್ನು ಇಂದಿಗೂ ಬಲವಾಗಿ ನಂಬುವರಿರುವದೆ, ಪುರಾಣ ಕಾವ್ಯ ಕರ್ತೃಗಳು ಈ ಅಂಶಕ್ಕೆ

ಹೆಚ್ಚು ಒತ್ತುಕೊಡಲು ಕಾರಣ ಎನಿಸುವದು. ಜನಜನಿತ ವದಂತಿ ಮತ್ತು ದಂತಕತೆಗಳನ್ನಿಟ್ಟು ಇಂತವುಗಳನ್ನು ಹೇಳಿ ಬರೆಯಿಸಿದ್ದು ಇಲ್ಲಿ ಗಮನಿಸಬೇಕಾದ ಅಂಶವಾಗಿದೆ.

ಮಾನವೀಯತೆ ಮತ್ತು ಮತ ಸಿದ್ಧಾಂತ ಎರಡರ ವಿಷಯದಲ್ಲಿ 'ಧರ್ಮ' ವಿವೇಚನೆ ಮಾಡಿದ ಶರಣ ಸಿದ್ಧಾಂತವು ಇಲ್ಲಿ ಮುಖ್ಯವಾಗಿ ನಿರೂಪಣೆಗೊಂಡಿದೆ. ಲಿಂಗಾಯತ ಗುರು–ವಿರಕ್ತ ಪರಂಪರೆಗಳು, ಶಿವಾನಂದ, ಸಿದ್ಧಾರೂಢ, ಅವಧೂತ ಪರಂಪರೆಗಳು ಇಲ್ಲಿ ಮೂಡಿ ಬಂದಿವೆ. ಅಂಬೇಡ್ಕರ ಮೊದಲಾದ ವಿಶ್ವವಿಭೂತಿಗಳ ಚರಿತ್ರೆ ಇಲ್ಲಿ ಮೂಡಿ ಬಂದು ವಿಶ್ವ ಮಾನವೀಯತೆಯನ್ನು ಎತ್ತಿ ಹೇಳಿದೆ. ಸ್ವಾಮಿಗಳೆಲ್ಲ ನೋವನುಂಡು ನಲಿವನ್ನು ಸಮಾಜಕ್ಕೆ ನೀಡಿದ ವಿಷಯ ಅನೇಕ ಮೌಲ್ಯಗಳ ಸಂಗಮವೆನಿಸಿದೆ.

ಸಾಹಿತ್ಯ ಮತ್ತು ಧರ್ಮ ತತ್ವಗಳು ಆ ಮೂಲಕವಾಗಿ 'ಮಹಾಜೀವನ'ವನ್ನು ನಿರೂಪಿಸುವದು ಪುರಾಣ ಕಾವ್ಯಗಳ ಮುಖ್ಯ ಉದ್ದೇಶವಾಗಿದ್ದು, ಇದನ್ನು ಪ್ರವಚನಗೊಳ್ಳುವ ಸ್ವರೂಪದಿಂದ ಅರಿಯಬಹುದು. ಬಹುಪಾಲು ಕಾವ್ಯಗಳು ಓದುವ ಗ್ರಂಥ ಮಾತ್ರವಾಗಿರದೆ ಅವು ಸಮಷ್ಠಿಯಲ್ಲಿ ಶ್ರವ್ಯರೂಪದಲ್ಲಿ ಸಂವಹನಗೊಳ್ಳುವವು. ಇದರಿಂದ ಸಾಹಿತ್ಯದ ಅನುಸಂಧಾನವು ಏಕವ್ಯಕ್ತಿ ಮನನವೆನಿಸದೆ ಸಾವಿರಾರು ವ್ಯಕ್ತಿಗಳ ಮಾನಸ ಚೇತನ ವಿಷಯವಾಗಿರುವದನ್ನು ಗಮನಿಸಲಾಗಿದೆ. ಪ್ರವಚನಕ್ಕೆ ಹೃದ್ಯ ಸ್ವರೂಪ ಬರುವದು ಸಂಗೀತ, ಕತೆ. ವಿವರಣೆಗಳ ಮೂಲಕ. ಇದರಿಂದ ವಿಷಯ ಜ್ಞಾನವನ್ನು ವಿವೇಚಿಸುವದು ಗುರಿ ಎನಿಸಿದೆ. ಸಾಹಿತ್ಯ ಮತ್ತು ಧರ್ಮ ತತ್ವಗಳನ್ನು ಈ ಮೂಲಕ ಜೀವಂತವಿಡಲಾಗಿದೆ ಎಂಬ ಅಂಶವನ್ನು ಗಮನಿಸಬಹುದು.

ಅನುಬಂಧದಲ್ಲಿ ಕವಿ ಸಂದರ್ಶನಗಳನ್ನು ಕೊಡಲಾಗಿದೆ. ಪಂ. ಪುಟ್ಟರಾಜಕವಿ ಗವಾಯಿಗಳು, ಪಂ. ರಾಜಗುರು ಗುರುಸ್ವಾಮಿ ಕಲಕೇರಿ, ಶ್ರೀ ರಾಮಣ್ಣ ಬ್ಯಾಟಿ, ಪಂ. ಸೋಮಶೇಖರ ಶಾಸ್ತ್ರಿಗಳು ಪುರಾಣಿಕಮಠ, ಪಂ. ಬಾಲಚಂದ್ರ ಶಾಸ್ತ್ರಿಗಳು ಹಿರೇಮಠ, ಶ್ರೀ ವಾಸುದೇವ ಹೂಲಿ, ಶ್ರೀ ಪ್ರಭಣ್ಣ ಬೊಮ್ಮನಳ್ಳಿ, ಈ ಮೊದಲಾದವರ ಕಾವ್ಯ ರಚನೆಯ ಹಿನ್ನೆಲೆ, ಪ್ರಭಾವ, ಸ್ವರೂಪ, ಅಭಿವ್ಯಕ್ತಿ ಅನುಭವ, ಅನುಭಾವಗಳನ್ನು ಕುರಿತು ಇಲ್ಲಿ ಚರ್ಚಿಸಿದ್ದಾರೆ. ಇದೊಂದು ಅಧ್ಯಯನದ ಸಂಲಗ್ನ ಭಾಗವಾಗಿದೆ.

◆◆◆

ಅಧ್ಯಾಯ-೨

ಪುರಾಣ ಕಾವ್ಯಗಳ ಲಕ್ಷಣ ಸ್ವರೂಪ ಪರಂಪರೆ

೨:೧. – ಭಾರತದಲ್ಲಿ ಪುರಾಣ ಸಾಹಿತ್ಯ.

೨:೨. – ಪುರಾಣ ಸಾಹಿತ್ಯ ಲಕ್ಷಣ ಸ್ವರೂಪ.

೨:೩. – ಕನ್ನಡದಲ್ಲಿ ಪುರಾಣ ಕಾವ್ಯಗಳ ಬೆಳವಣಿಗೆ.

೨:೪. – ಗದಗ ಜಿಲ್ಲೆಯ ಪುರಾಣ ಕಾವ್ಯಗಳು.

೨

ಪುರಾಣ ಕಾವ್ಯಗಳ ಲಕ್ಷಣ ಸ್ವರೂಪ ಪರಂಪರೆ

೨:೧. ಭಾರತದಲ್ಲಿ ಪುರಾಣ ಸಾಹಿತ್ಯ

ಭಾರತೀಯರ ಜೀವನದಲ್ಲಿ ಧರ್ಮ ಮತ್ತು ಆಧ್ಯಾತ್ಮಿಕತೆಗಳು ಬೀರಿದಷ್ಟು ಪ್ರಭಾವ ಮತ್ತು ಅರಿವುಗಳನ್ನು ಬೇರಾವುದೂ ಮಾಡಿರುವುದಿಲ್ಲ. ಅವರ ಬದುಕಿನ ಏರಿಳಿತಗಳಿಗೂ ಅದುವೇ ಕಾರಣ 'ಧರ್ಮೋ ರಕ್ಷತಿ ರಕ್ಷತಃ' ಎಂಬುದು ಅವರ ತಿಳುವಳಿಕೆಯ ಮೂಲ ತಳಹದಿಯಾಗಿದೆ. ಜೀವನದ ಸಮಸ್ತ ಕ್ರಿಯಾಕಲಾಪಗಳು ಧರ್ಮದ ಮೇಲೆಯೆ ನಿರ್ಧಾರವಾಗುವದು ಎಂಬುದು ಬಹುಪಾಲು ಜನರ ತಿಳುವಳಿಕೆಯಾಗಿದೆ. ಸಾವಿರ ಸಾವಿರ ವರ್ಷಗಳಲ್ಲಿ ಈ ತೆರನಾದ ಧಾರ್ಮಿಕ ಸಮರ್ಪಣೆಯು, ಇಂದಿನ ವೈಜ್ಞಾನಿಕ ಯುಗದಲ್ಲಿಯೂ ಮುಂದುವರೆದಿದೆ. ಜ್ಞಾನ ಮತ್ತು ಆನಂದ ಕ್ಷೇತ್ರಗಳನ್ನು ಧರ್ಮ ಆಧ್ಯಾತ್ಮಗಳು ಬಿಟ್ಟಿಲ್ಲ. ಲಲಿತ ಕಲಾ ಕ್ಷೇತ್ರಗಳಲ್ಲಿ ಅವಿನಾಭಾವ ಸಂಬಂಧವನ್ನೆ ಹೊಂದಿವೆ. ಸಾಹಿತ್ಯದ ಕ್ಷೇತ್ರವಂತೂ ಸಾಹಿತ್ಯ ಕಲೆಯನ್ನೇ ಮರೆಮಾಚುವಂತೆ ಧರ್ಮದ ಆವರಣ ಇದೆ.

ಭಾರತೀಯ ಸಂದರ್ಭದಲ್ಲಿ 'ಧಾರ್ಮಿಕ ಸಾಹಿತ್ಯವೇ ಸಾಹಿತ್ಯ'ವೆನಿಸಿ ಬೆಳೆದು ಬಂದಿತು. ಅವುಗಳಲ್ಲಿ ಪುರಾಣ ಸಾಹಿತ್ಯವು ಒಂದು. 'ಎರಡು ಸಾವಿರ ವರ್ಷಗಳಿಗಿಂತಲೂ ಹೆಚ್ಚಾಗಿ ಭಾರತೀಯ ಜೀವನದಲ್ಲಿ ಪುರಾಣಗಳು ಮಹತ್ವದ ಪಾತ್ರಗಳನ್ನಾಡಿವೆ. ಅತಿ ಉನ್ನತ ಮಟ್ಟದ ಋಷಿಗಳ ಪ್ರಜ್ಞೆಯನ್ನು ಸಾಮಾನ್ಯ ಮನುಷ್ಯನಿಗೆ ಮನವರಿಕೆಯಾಗುವಂತೆ ಪುರಾಣಗಳು ಮಾಡಿವೆ. (ಯುಗಯಾತ್ರಿ ಭಾರತೀಯ ಸಂಸ್ಕೃತಿ ಸಂಪುಟ : ೨ – ಪುರಾಣಗಳು – ರಾಜೇಂದ್ರ ಚಂದ್ರ ಹಾಜರಾ. ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು ಪುಟ : ೧೯೫. ಪ್ರಕಟಣೆ : ೧೯೭೧.) 'ವಿಶ್ವ ಸೃಷ್ಟಿಯ ದೇವಾನುದೇವತೆಗಳ ಮತ್ತು ವೀರ ಪುರುಷರ ಬಗೆಗಿರುವ ಹೇರಳವಾದ ಐತಿಹ್ಯಗಳ ಮುಖಾಂತರ ಭಾರತೀಯರು ತಮ್ಮ ನಂಬಿಕೆ ಆದರ್ಶ ಮತ್ತು ಸಂಪ್ರದಾಯಗಳನ್ನು ತುಂಬಿದ ಬಗೆಯಲ್ಲಿ ಅಭಿವ್ಯಕ್ತಿ ಮಾಡಿದ್ದಾರೆ'. (ಪೂರ್ವೋಕ್ತ : ಆರ್. ಎನ್. ದಾಂಡೇಕರ – ಭಾರತೀಯ ಪುರಾಣ ಸಾಹಿತ್ಯ. ಪುಟ : ೧೬೫.) ಭಾರತದಲ್ಲಿ ಮೊದಲು ಸಾಹಿತ್ಯ ಪ್ರಕಟಗೊಂಡದ್ದೆ ವೈದಿಕ ಯುಗದಲ್ಲಿ. ಅನತಿ ಕಾಲದಲ್ಲಿಯೆ ಪುರಾಣ ಸಾಹಿತ್ಯ ಉಗಮಗೊಂಡಿತು.

ವಿಶ್ವದ ಎಲ್ಲ ಸುಸಂಸ್ಕೃತ ಮತ್ತು ದೇಶಿ ಸಾಹಿತ್ಯದಲ್ಲಿ ಪುರಾಣಗಳಿವೆ. ಶಿಷ್ಟ ಸಾಹಿತ್ಯದ ರೂಪವಾಗಿ ಸಂಸ್ಕೃತ ಭಾಷೆಯಲ್ಲಿ ಪುರಾಣಗಳು ಬೆಳೆದವು. ಗ್ರೀಕ್‌ರಲ್ಲಿಯೂ ಪುರಾಣ ಸಾಹಿತ್ಯ ವಿಪುಲವಾಗಿದೆ. ಮರೆಯಾದ ನಾಗರೀಕತೆಗಳಲ್ಲಿ ಈಜಿಪ್ತ ಮಾಯಾ (ದಕ್ಷಿಣ ಅಮೇರಿಕಾ) ಜನಾಂಗಗಳಲ್ಲಿ, ಚೀನಾ ದೇಶದಲ್ಲಿ ಪುರಾಣ ಪರಂಪರೆಗಳಿದ್ದವು. ಭಾರತದಲ್ಲಿಯ ಪುರಾಣ ಪರಂಪರೆ ಎರಡು ರೀತಿಯ ಆರಂಭ ಕಂಡಿದೆ. ಒಂದು ವೈದಿಕ ಜ್ಞಾನದ ಸಾಹಿತ್ಯ. ಎರಡನೆಯದು ಭಾಕ್ತಿಕ ಪುರಾಣ ಸಾಹಿತ್ಯ. ತ್ರಿಮೂರ್ತಿ ಆರಾಧನೆಯ ಭಕ್ತಿ ಸ್ವರೂಪದಲ್ಲಿ ಪ್ರಕಟಗೊಂಡ ಪುರಾಣ ಸಾಹಿತ್ಯವು; ದೇಶ ಭಾಷಾ ಸಾಹಿತ್ಯಗಳಲ್ಲಿ ಪುರಾಣ ಸಾಹಿತ್ಯ ಬೆಳೆಯಲು ಮೂಲಚಾಲನೆ ನೀಡಿತು.

'ಪುರಾಣ' – ಅರ್ಥವ್ಯಾಪ್ತಿ :

'ಪುರಾಣ' ಶಬ್ದವು ಸಂಸ್ಕೃತ ಮೂಲದ್ದಾಗಿದ್ದು, 'ಹಳೆಯ' ಎಂಬ ಅರ್ಥವನ್ನು ನೀಡುತ್ತದೆ. ಹಳೆಯ ಕಾಲದ, ಉದ್ದವಾದ, ಜೀರ್ಣ, ನಡೆದುಹೋದ, ಪ್ರಾಚೀನ ಸಾಹಿತ್ಯ, ದೀರ್ಘಕತೆ, ಹರಟೆ ಮೊದಲಾದ ಅರ್ಥಗಳನ್ನು ಪುರಾಣ ಶಬ್ದವು ಹೊಂದಿದೆ. (ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಆರನೆಯ ಸಂಪುಟ – ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೧೯೯೦.) ಸಂಸ್ಕೃತದಲ್ಲಿ ಹಳೆಯ ವಿಷಯಗಳನ್ನು ಐತಿಹ್ಯಗಳನ್ನು ವಿವರಿಸುವ ಗ್ರಂಥಗಳನ್ನು ಪುರಾಣವೆಂದು ಕರೆಯಲಾಗುತ್ತಿತ್ತು. 'ಪುರಾಣ' ಹೆಸರಿನೊಂದಿಗೆ ೧೮ ಮುಖ್ಯ ಮತ್ತು ೧೮ ಉಪ ಪುರಾಣಗಳಿವೆ. ಪಾಶ್ಚಿಮಾತ್ಯರಲ್ಲಿ 'Myth' ಎಂದು ನಿರ್ದೇಶಿಸುವದನ್ನೆ ಪುರಾಣ ಎಂದು ಅರ್ಥೈಸುವದುಂಟು. ಆದರೆ 'Myth' ಎಂಬುದನ್ನು ಬೇರೆ ಬೇರೆಯಾದ ಸಂದರ್ಭದಲ್ಲಿ ಬಳಸುವದನ್ನು ಕಾಣಬಹುದು. ಪುರಾಣವೆನ್ನುವದು ಸಂಸ್ಕೃತ ಭಾಷಾ ಪರಿಸರದಲ್ಲಿ ಬಹು ಹಿಂದಿನಿಂದಲೇ ಬಳಕೆಗೊಂಡಿದೆ. ಅಥರ್ವಣವೇದ ಶತಪಥಬ್ರಾಹ್ಮಣ, ಗೋಪಥಬ್ರಾಹ್ಮಣ, ಬೃಹದಾರಣ್ಯಕೋಪನಿಷತ್ತು ಇವುಗಳಲ್ಲಿ ಮತ್ತು ವೈದಿಕ ವಾಙ್ಮಯಕ್ಕೆ ಸೇರಿದ ಇತರ ಶಬ್ದಗ್ರಂಥಗಳಲ್ಲಿ ಪುರಾಣ ಶಬ್ದದ ಉಲ್ಲೇಖವಿರುವದು. ಕೆಲವು ವೈದಿಕ ಮತ್ತು ಪ್ರಾಚೀನ ಬೌದ್ಧ ವಾಙ್ಮಯ ಗ್ರಂಥಗಳಲ್ಲಿ ಪುರಾಣವು ಐದನೆಯ ವೇದವೆಂದು ಹೇಳಲಾಗಿದೆ.

ವೈದಿಕ ಸಾಹಿತ್ಯದಲ್ಲಿ ಇಂದ್ರನ ಪ್ರಾಬಲ್ಯವನ್ನು ಸೂಚಿಸುವ ಪುರಾಣ ಸಾಹಿತ್ಯವಿದೆ. ಅಸುರ, ವರುಣ, ಅದಿತಿ, ಆದಿತ್ಯ ಮತ್ತು ಅಶ್ವಿನಿ ದೇವತೆಗಳ ಬಗೆಗೆ ಪುರಾಣ ಸಾಹಿತ್ಯ ಇರುವದನ್ನು ಗುರುತಿಸಿದ್ದಾರೆ. 'ಪ್ರತಿಯೊಂದು ಪವಾಡ ಸದೃಶ್ಯ ಸಹಾಯವನ್ನು ಪುರಾಣದ ಅಶ್ವಿನಿ ದೇವತೆಗಳಿಗೆ ವಹಿಸಿಕೊಡಲಾಗಿದೆ ಮತ್ತು ಈ ದೇವತೆಗಳ ಸುತ್ತ ಪುರಾಣ ಕಥೆಗಳು ಹುಲುಸಾಗಿ ಬೆಳೆಯ ತೊಡಗಿದವು. (ಯುಗಯಾತ್ರಿ ಭಾರತೀಯ ಸಂಸ್ಕೃತಿ ಸಂಪುಟ – ೨ ಮೈಸೂರು ವಿಶ್ವವಿದ್ಯಾಲಯ ಮೈಸೂರು. ಪ್ರವರ್ಷ : ೧೯೭೧ ಪುಟ : ೧೬೭) ವೈದಿಕ ದೇವತೆಗಳ ಸಂದರ್ಭದಲ್ಲಿಯೇ

ಪವಾಡಗಳು ತಲೆದೋರಿದವು. ಅಗ್ನಿ ಸೌರದೇವತೆಯಾದ ಸೂರ್ಯನನ್ನು ಕುರಿತು ಪುರಾಣ ಸಾಹಿತ್ಯ ಮೂಡಿಬಂದಿತು.

ವೈದಿಕ ಕಾಲದಲ್ಲಿದ್ದ ವಿಷ್ಣು, ಯಮ, ರುದ್ರ ಮತ್ತು ಗಂಧರ್ವ ಮತ್ತು ಅಪ್ಸರರನ್ನು ಕುರಿತು ಪುರಾಣ ಸಾಹಿತ್ಯ ತಕ್ಕ ಮಟ್ಟಿಗೆ ಸೃಷ್ಟಿಗೊಂಡಿವೆ. ಅದೇ ರೀತಿ ಉಪನಿಷತ್‌ಕಾರರ ಬಗೆಗೆ ಸಾಹಿತ್ಯ ಸೃಷ್ಟಿಯಾಗಿದೆ. ಆದರೆ ಉಪನಿಷತ್ತುಗಳು ವೈಚಾರಿಕ ನೆಲೆಯಿಂದ ಬೆಳೆದವು. ವೈದಿಕ ಸಾಹಿತ್ಯದಲ್ಲಿಯಷ್ಟು ಉಪನಿಷತ್ತುಗಳಲ್ಲಿ ಪುರಾಣಗಳ ಬೇರು ಕಾಂಡ ಕಾಣದೆ ಇರುವುದರ ಲಾಭವನ್ನು ಬೌದ್ಧ ಮತ್ತು ಜೈನ ಧರ್ಮಗಳು ಪಡೆದು ತಮ್ಮಲ್ಲಿಯೂ ಪವಾಡಗಳ ಪರಂಪರೆಯನ್ನು ಪ್ರಾರಂಭಗೊಳಿಸಿಕೊಂಡವು.

ಭಾರತದಲ್ಲಿ ಪೂರ್ಣ ಪ್ರಮಾಣದ ಪುರಾಣ ಸಾಹಿತ್ಯದ ಉಗಮ ವಿಕಾಸವನ್ನು ತ್ರಿಮೂರ್ತಿ ಆರಾಧನೆಯಲ್ಲಿ ವಾಸ್ತವವಾಗಿ ಗುರುತಿಸಬಹುದು. ವೈದಿಕ ಕಾಲದಲ್ಲಿ 'ಪುರಾಣ' ಶಬ್ದವಿದ್ದು, ಪೌರಾಣಿಕ ವಿಷಯ ಪ್ರಸ್ತಾಪವಾಗಿರಬಹುದು. ಆದರೆ ಪೂರ್ಣ ಪ್ರಮಾಣದ ಪುರಾಣಗಳ ಸಾಹಿತ್ಯವು ತನ್ನ ಲಕ್ಷಣ ಸ್ವರೂಪದೊಂದಿಗೆ ಪ್ರಕಟಗೊಂಡುದು ವೇದೋತ್ತರ ಕಾಲದಲ್ಲಿ. ಅದು ಭಕ್ತಿಯನ್ನು ಪ್ರಧಾನವಾಗಿಟ್ಟುಕೊಂಡು ಆರಾಧನೆಯನ್ನು ಎತ್ತಿಹಿಡಿಯಿತು. ವೈದಿಕಕಾಲದ ಸೂರ್ಯ, ಅಗ್ನಿ, ಇಂದ್ರರನ್ನು ಆರಾಧಿಸುವದು ಹಿಂದೆ ಬಿದ್ದು 'ಬ್ರಹ್ಮ', 'ವಿಷ್ಣು', 'ಶಿವ'ರನ್ನು ಸೃಷ್ಟಿ–ಸ್ಥಿತಿ–ಲಯ ಕಾರಣ ಕರ್ತೃಗಳಾಗಿ ಆರಾಧಿಸುವ ಹೊಸ ಪರಂಪರೆ ಬೆಳೆದು ಬಂದಿತು. ಇದು 'ಹಿಂದೂ ಪುರಾಣ ಸಾಹಿತ್ಯ'ವೆಂದು ಪ್ರಸಿದ್ಧವಾಯಿತು. ಇದು ಭಕ್ತಿ ಮತ್ತು ಉಪದೇಶಗಳನ್ನು ಹೊಂದಿತು. ಈ ಪುರಾಣ ಸಾಹಿತ್ಯವು ಬ್ರಾಹ್ಮಣತ್ವದ ವಿರುದ್ಧ ದಂಗೆಯನ್ನು ಪ್ರತಿನಿಧಿಸುವದೆಂದು; ಇದು ಬ್ರಾಹ್ಮಣೇತರ ಕ್ರಿಯಾ ಕಲಾಪವೆಂದು ಗುರುತಿಸಲಾಗಿದೆ. (ಪೂರ್ವೋಕ್ತ ಪುಟ : ೧೭೨)

ತ್ರಿಮೂರ್ತಿ ಕಲ್ಪನೆ ಆರಾಧನೆಗಳು ಪ್ರಬಲವಾಗುತ್ತಿರುವಂತೆ 'ವೃಷ್ಣಿ ಜನವರ್ಗದ ನಾಯಕನಾಗಿದ್ದ ಕೃಷ್ಣನು ಆ ಕೂಡಲೆ ಆ ವರ್ಗದ ವೀರನಾದನು, ಆಮೇಲೆ 'ದೇವ'ನಾದನು. ಅವನ ವ್ಯಕ್ತಿತ್ವದ ಸುತ್ತ ಅನೇಕ ಪೌರಾಣಿಕ ಕಥೆಗಳು ಹೆಣೆಯಲ್ಪಟ್ಟವು. ಆತ ತ್ರಿಮೂರ್ತಿಗಳಲ್ಲಿ ಒಬ್ಬನಾದ ವಿಷ್ಣುವಿನ ಅವತಾರವೆಂದು ತಿಳಿಯುವ, ಆ ರೀತಿಯ ಅವತಾರಗಳನ್ನು ಪುರಾಣ ಸಾಹಿತ್ಯದಲ್ಲಿ ಹೇಳಲಾಯಿತು. ಪುರಾಣಗಳು ಬಹುಪಾಲು ವಿಷ್ಣುವಿನ ದಶಾವತಾರಗಳನ್ನು ವರ್ಣಿಸುತ್ತವೆ. ವಿಷ್ಣು ಮಾಡಿದನೆನ್ನಲಾದ ಅನೇಕ ಅದ್ಭುತ ಕ್ರಿಯೆಗಳು ಪುರಾಣದಲ್ಲಿ ಅನುಪಮವಾಗಿ, ಜನ ಮನಸ್ಪಂಧಿಯಾಗಿ ನಿರ್ಮಾಣಗೊಂಡವು. ಅನಂತರ ಶಿವನನ್ನು ಕುರಿತು ಸಾಹಿತ್ಯ ನಿರ್ಮಾಣಗೊಂಡಿತು. ಅಲ್ಪ ಪ್ರಮಾಣದಲ್ಲಿ ಬ್ರಹ್ಮನನ್ನು ಕುರಿತು ಸಾಹಿತ್ಯ ನಿರ್ಮಾಣವಾಗಿದೆ. ಮೊದಲಿನ ಮಹಾ ಪುರಾಣಗಳು ವೈಷ್ಣವ, ಶೈವ, ಬ್ರಾಹ್ಮಣದ ಮೂರು ಪಂಥಗಳನ್ನು ಹೊಂದಿವೆ. ವೈಷ್ಣವ ಶೈವಗಳು ಆರ್ಯೇತರ ದ್ರಾವಿಡ ತತ್ತ್ವ ತಾತ್ವಿಕತೆಗೆ

ಅನುಗುಣವಾಗಿ ನಿರೂಪಣೆಗೊಂಡಿವೆ. ಅದೇ ರೀತಿ 'ದ್ರಾವಿಡ ಜನಪದ ಧರ್ಮದ ಪರಿಣಾಮವಾಗಿ ಹೆಣ್ಣು ದೇವತೆಗಳು ಉದಯವಾದುದು ಹಿಂದೂ ದೇವತಾ ಚರಿತ್ರೆಯ ಒಂದು ಮಹತ್ವದ ಅಂಶವಾಗಿದೆ. ದ್ರಾವಿಡ ಹೆಣ್ಣು ದೇವತೆಗಳನ್ನು ಮೂಲತಃ ದ್ರಾವಿಡ ದೇವತೆಗಳಾದ ವಿಷ್ಣು ಶಿವರ ಪತ್ನಿಯರನ್ನಾಗಿ ಮತ್ತು ಒಟ್ಟು ಶಕ್ತಿ ರೂಪದ ದೇವತೆಗಳಾಗಿ ಕಲ್ಪಿಸಿ ಮರುಹೊಂದಿಸಿ ಸ್ತ್ರೀ ದೇವತೆಗಳ ಬಗೆಗೆ ಪುರಾಣ ಸಾಹಿತ್ಯ ಹುಟ್ಟಿಕೊಂಡಿತು.

'ಪುರಾಣ ಸಂಹಿತೆಗಳ ಸ್ವರೂಪಗಳು ವೇದಗಳಿಗಿರುವಂತೆ ಸ್ಥಿರವಾದವುಗಳಲ್ಲ. ಏಕೆಂದರೆ ಕಾಲ ಪ್ರಗತಿಯೊಂದಿಗೆ ವಿಷಯ ಮತ್ತು ನಂಬಿಕೆಗಳಲ್ಲಿ; ಆಲೋಚನೆ ಮತ್ತು ಜೀವನ ಕ್ರಮಗಳಲ್ಲಿ ವಿವಿಧ ಗುಂಪಿನ ಪ್ರಸರಣದಲ್ಲಿ ಬದಲಾವಣೆಗಳಾಗುತ್ತಿದ್ದವು. ಹೊಸ ಅವಶ್ಯಕತೆಗೆ ಅನುಗುಣವಾಗಿ ಪುರಾಣ ಸಂಹಿತೆಗಳಿಗೆ ಹೊಸ ಸ್ವರೂಪವನ್ನುಕೊಟ್ಟು ಅಳವಡಿಸಲ್ಪಟ್ಟವು' (ಅದೇ ಪುಟ : ೧೮೦) ಪುರಾಣಗಳು ಬೆಳೆಯುತ್ತ ಬಂದವೆಂಬುದು ವೇದ್ಯವಾಗುವದು. ಯಾವಾಗಿನಿಂದ ಪುರಾಣ ಸಾಹಿತ್ಯವು ಹುಟ್ಟಿ ಬೆಳೆಯಿತು ಎಂಬುದಕ್ಕೆ ನಿಖರ ದಾಖಲೆಗಳಿಲ್ಲ. ಕ್ರಿ.ಶ. ಪೂರ್ವದಲ್ಲಿ ಎರಡು ಪುರಾಣಗಳು ಅಸ್ತಿತ್ವದಲ್ಲಿದ್ದವೆಂದು ತಿಳಿದು ಬರುವದು. ಈ ಮೊದಲೆ ತಿಳಿದಿರುವಂತೆ 'ಪುರಾಣ' ಶಬ್ದವು ವೈದಿಕ ಕಾಲದಲ್ಲೆ ಪ್ರಚಲಿತವಿತ್ತೆಂದು ಪುರಾಣ ಲಕ್ಷಣಗಳುಳ್ಳ ಸಂಗತಿಗಳ ವರ್ಣನೆಯು ವೇದ ದೇವತೆಗಳನ್ನು ಕುರಿತಾಗಿತ್ತೆಂದು ತಿಳಿದು ಬರುವದು. ಕ್ರಿಸ್ತಶಕ ಪೂರ್ವ ಮೂರನೆಯ ಶತಮಾನದಿಂದ ಕ್ರಿಸ್ತಶಕದ ಆರನೆಯ ಶತಮಾನದವರೆಗೆ ಹದಿನೆಂಟು ಪುರಾಣಗಳು ರಚನೆಗೊಂಡವು ಆ ಕಾಲಾನಂತರ ಕ್ರಿ.ಶ. ೧೦/೧೨ನೆಯ ಶತಮಾನದವರೆಗೆ ಉಪಪುರಾಣಗಳು ರಚನೆಗೊಂಡವು.

ಮಹಾಪುರಾಣಗಳೆಂದು ಪ್ರಸಿದ್ಧಿ ಪಡೆದ ಪುರಾಣಗಳು ಇಂತಿವೆ. ಇವು ವ್ಯಾಸಕೃತವೆಂಬ ಒಂದು ತಿಳುವಳಿಕೆ ಇದೆ. ಈ ಪರಂಪರೆಯ ಮೂಲ ವ್ಯಾಸನಲ್ಲಿರುವದನ್ನು ಈ ಹೇಳಿಕೆ ಎತ್ತಿ ತೋರುವದು ಮತ್ಯ ಪುರಾಣದಲ್ಲಿ (ಕನ್ನಡ ಸಾಹಿತ್ಯದಲ್ಲಿ ಪುರಾಣ ಪ್ರಜ್ಞೆ – ಡಾ. ಕೆ.ಎಲ್. ಗೋಪಾಲಕೃಷ್ಣಯ್ಯ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೧೮.)

'ಅಷ್ಟಾದಶ ಪುರಾಣಾನಿ ಕರ್ತ್ವಾಸತ್ಯವತೀ ಸುತಃ
ಭಾರತಾಖ್ಯಾನಮೂಲಂ ಚಕ್ರೇತದುಪಬ್ರಹ್ಮಣ ॥

(–ಮತ್ಸ್ಯಪುರಾಣ ; ಅಧ್ಯಾಯ–೫೩, ಶ್ಲೋಕ–೭೦.)

ಮುಂದಿನ ಕಾಲದಲ್ಲಿ ಬೆಳೆದು ಬಂದ ಪುರಾಣಗಳನ್ನು ಮೂರು ಭಾಗದಲ್ಲಿ ವಿಂಗಡಿಸಿ ಕೊಳ್ಳಲಾಯಿತು.

I. ವಿಷ್ಣು ಪುರಾಣಗಳು : i. ವಿಷ್ಣು ii. ಭಾಗವತ iii. ನಾರದೀಯ iv. ಗರುಡ v. ಪದ್ಮ vi. ವರಾಹ.

II. **ಶಿವಪುರಾಣಗಳು** : i. ವಾಯು ii. ಲಿಂಗ iii. ಸ್ಕಾಂದ iv. ಅಗ್ನಿ v. ಮತ್ಸ್ಯ vi. ಕೂರ್ಮ.

III. **ಬ್ರಹ್ಮ ಪುರಾಣಗಳು** : i. ಬ್ರಹ್ಮ ii. ಬ್ರಹ್ಮಾಂಡ iii. ಬ್ರಹ್ಮವೈವರ್ತ iv. ಮಾರ್ಕಾಂಡೇಯ v. ಭವಿಷ್ಯ vi. ವಾಮನ.

ಇವುಗಳಲ್ಲದೆ. ಉಪಪುರಾಣಗಳು ಇಂತಿವೆ : ಸನತ್ಕುಮಾರ, ನಾರಸಿಂಹ, ನಾರದೀಯ, ಶಿವ, ದೂರ್ವಾಸ, ಕಾಪಿಲ, ಮಾನವ, ಉಷಾನಸ್, ವರುಣ, ಕಾಲಿಕ, ಸಾಂಬ, ಸೂರ್ಯ, ಆದಿತ್ಯ, ಮಾಹೇಶ್ವರ, ದೇವೀ ಭಾಗವತ, ವಾಸಿಷ್ಠ, ನೀಲಮತ, ವಿಷ್ಣುಧರ್ಮೋತ್ತರ.

ಮಹಾಪುರಾಣ ಉಪಪುರಾಣಗಳು ಬೆಳೆಯುತ್ತ ಬಂದದು ಒಂದು ಅರ್ಥದಲ್ಲಿ ವೈದಿಕ ಆಚರಣೆ ಹಿಂದೆ ಬಿದ್ದು ಜನಮುಖಿ ಧರ್ಮ ತಲೆದೋರಿದ್ದನ್ನು ಸೂಚಿಸುವದು. ಸಂಸ್ಕೃತದಲ್ಲಿ ದೇಶಿಯ ಪ್ರಾಚುರ್ಯ ಪಡೆದ ದೇವ ಭಕ್ತಿ ಸ್ವರೂಪ, ದೇವಲೀಲಾ ಕಥನಗಳು ಪುರಾಣ ರೂಪವಾಗಿ ಬೆಳೆದವು. ತ್ರಿಮೂರ್ತಿಗಳಲ್ಲಿ ಮುಂದೆ ಶಿವ, ವಿಷ್ಣುಗಳ ಭಕ್ತಿ ಆಕರ್ಷಣೆಗಳು ಪ್ರಬಲವಾಗಿ ಬ್ರಹ್ಮನ ಬಗೆಗೆ ಭಕ್ತಿ ಕಡಿಮೆ ಆಗಿ ಆ ಪಂಥವೇ ಇಲ್ಲದಂತಾಯಿತು. ಹದಿನೆಂಟು ಪುರಾಣಗಳಲ್ಲಿ ಬ್ರಹ್ಮನ ಬಗೆಗೆ ಆರು ಪುರಾಣಗಳಿದ್ದರೂ, ಅವನ ಕುರಿತು ಮುಂದೆ ಭಕ್ತಿ ಪಂಥಗಳಿಲ್ಲದ್ದನ್ನು ಧರ್ಮ ಚರಿತ್ರೆಯುದ್ಧಕ್ಕೂ ಗುರುತಿಸಬಹುದು. ಹೆಣ್ಣು ದೇವತೆಗಳ ಪುರಾಣ ಪ್ರವೇಶವು ದ್ರಾವಿಡ ಪರಿಸರ ಮೂಲವೆಂದು ತಿಳಿಸುವದು. ಒಟ್ಟಾಗಿ ದ್ರಾವಿಡ ಧಾರ್ಮಿಕ ಭಕ್ತಿ ಪರಿಭಾವನೆಗಳು ಆರ್ಯಕ್ಷೇತ್ರ ಪ್ರವೇಶಿಸಿ ಬೆಳೆದು ನಿಂತುದನ್ನು ಪುರಾಣಗಳ ಉಗಮ ಬೆಳವಣಿಗೆಗಳು ಸೂಚಿಸುವವು. ಈ ಪುರಾಣ ಸಾಹಿತ್ಯವು ಭಕ್ತಿಯನ್ನೆ ಗುರಿಯಾಗಿಸಿಕೊಂಡುದರ ಪರಿಣಾಮ ಮುಂದೆ ದೇಶ ಭಾಷೆಗಳಲ್ಲಿ ಸಮೃದ್ಧವಾದ ಪುರಾಣ ಸಾಹಿತ್ಯ ಹುಟ್ಟಿ ಬೆಳೆಯಲು ಮೂಲ ಮಾತೃಕೆಯಾಯಿತು.

ಜೈನರಲ್ಲಿ ಪುರಾಣ ಕಾವ್ಯ ರಚನೆ ನಡೆದುದು ಕ್ರಿ.ಶ.ದ ಇತ್ತೀಚಿನ ಕಾಲಘಟ್ಟದಲ್ಲಿ. ಜೈನರ ದಿಗಂಬರ ಸಂಪ್ರದಾಯವು ಮೂಲ ಸಂಘವೆಂದು ಹೆಸರಾಯಿತು. ಈ ಮೂಲ ಸಂಘದಲ್ಲಿ ಸು. ೧೭೦೦ ವರ್ಷಗಳ ಹಿಂದೆ. ಅರ್ಹದ್ಬಲಾಚಾರ್ಯರ ಕಾಲದಲ್ಲಿ ಸೇನಸಂಘ, ಸಿಂಹಸಂಘ, ನಂದಿಸಂಘ, ದೇವಸಂಘಗಳೆಂದು ನಾಲ್ಕು ಮುನಿಗಳ ಸಂಘಗಳುಂಟಾದವು. (ಮಹಾಪುರಾಣ ಮೊದಲ ಸಂಪುಟ, ಜಿನಸೇನಾಚಾರ್ಯ ಗುಣಭದ್ರಾಚಾರ್ಯ ಅನು : ಎ. ಶಾಂತಿರಾಜಶಾಸ್ತ್ರಿ ಕನ್ನಡ ಸಾಹಿತ್ಯ ಪರಿಷತ್ತು , ಬೆಂಗಳೂರು. ಪ್ರ.ವರ್ಷ : ೧೯೮೧ ಪು : ೮) ಜಿನಸೇನಾಚಾರ್ಯರು ಸೇನ ಸಂಘಕ್ಕೆ ಸೇರಿದವರು. ಅವರಿಗೆ ವೀರಸೇನ ಮುನಿಗಳು ದೀಕ್ಷಾಗುರುಗಳು. ಜಿನಸೇನರು 'ಮಹಾಪುರಾಣ'ವೆಂದು ಬರೆಯಲು ಆರಂಭಿಸಿದ್ದನ್ನು ಪೂರ್ತಿಗೊಳಿಸಿದವರು ಗುಣಭದ್ರಾಚಾರ್ಯರು. ಜಿನಸೇನರಿಗೆ ಪೂರ್ವದಲ್ಲಿ ವೃಷಭ ಸೇನರೆಂಬ ಮುನಿಗಳು ಇದ್ದು, ಪೂಜ್ಯರೆನಿಸಿದ್ದರು.

ಜಿನಸೇನರು ೬೩ ಶಲಾಖಾಪುರುಷರನ್ನು ಕುರಿತು ಮಹಾ ಪುರಾಣವನ್ನು ಬರೆಯಲು ಪ್ರಾರಂಭಿಸಿದರು. ಆರಂಭದಲ್ಲಿ

ಮಹಾಪುರುಷ ಸಂಬಂಧಿ ಮಹಾ ಅಭ್ಯುದಯ ಶಾಸನಂ

ಮಹಾಪುರಾಣ ಮಾಯ್ನತಮತ ಏತನ್ಮಹರ್ಷಿ ಭಿಃ ॥

(ಮಹಾಪುರಾಣ ಮೊದಲ ಸಂಪುಟ, ಜಿನಸೇನಾಚಾರ್ಯ ಗುಣಭದ್ರಾಚಾರ್ಯ ಅನು : ಎ. ಶಾಂತಿರಾಜಶಾಸ್ತ್ರಿ ಕನ್ನಡ ಸಾಹಿತ್ಯ ಪರಿಷತ್ತು , ಬೆಂಗಳೂರು. ಪ್ರ.ವರ್ಷ : ೧೯೮೧ ಪುಟ : ೭ ಶ್ಲೋಕ : ೨೩.)

ಎಂದು ಹೇಳುತ್ತ ಮಹಾಪುರುಷರ ಅಭ್ಯುದಯವನ್ನು ವಿವರಿಸುವದು ಪುರಾಣಗಳ ಗುರಿ ಎಂದಿರುವರು. ಈ ಪುರಾಣವು ಸೂಕ್ತ, ಧರ್ಮಶಾಸ್ತ್ರ, ಇತಿಹಾಸ, ಐತಿಹ್ಯ, ಆಮ್ನಾಯ ಆಗಿದೆ ಎಂದು ಇದನ್ನು ಗಣಧರರು ಹೇಳಿದರೆಂದು ಅಲ್ಲಿ ಜಿನ ಸೇನಾಚಾರ್ಯರು ಉಲ್ಲೇಖಿಸಿರುವರು. (ಮಹಾಪುರಾಣ ಮೊದಲ ಸಂಪುಟ, ಜಿನಸೇನಾಚಾರ್ಯ ಗುಣಭದ್ರಾಚಾರ್ಯ ಅನು : ಎ. ಶಾಂತಿರಾಜಶಾಸ್ತ್ರಿ ಕನ್ನಡ ಸಾಹಿತ್ಯ ಪರಿಷತ್ತು , ಬೆಂಗಳೂರು. ಪ್ರ.ವರ್ಷ : ೧೯೮೧ ಪುಟ : ೮ ಶ್ಲೋಕ : ೨೯.) ಜಿನಸೇನಾಚಾರ್ಯರ ಕಾಲವು ಕ್ರಿ.ಶ. ೮೩೦. ರಾಷ್ಟ್ರಕೂಟ ನೃಪತುಂಗನ ಗುರುಗಳಿವರು. ಇನ್ನು ಗಣಧರರ ಕಾಲ ಇದಕ್ಕಿಂತ ಹಿಂದೆ ಇರಲು ಸಾಧ್ಯ. ಒಟ್ಟು ಕ್ರಿ.ಶ. ೭ನೆಯ ಶತಮಾನದಿಂದಲೇ ಜೈನ ಪುರಾಣಕಾವ್ಯ ರಚನೆ ಸಂಸ್ಕೃತದಲ್ಲಿ ನಡೆದಿರುವಂತಿದೆ. ಆ ಕಾಲಕ್ಕಾಗಲೇ ಜೈನ ಕೇಂದ್ರಗಳೆಂದು ಪವಿತ್ರ ಕೊಪಣಾಚಲ (ಕೊಪ್ಪಳ) ಮತ್ತು ಕಟ್ವಪ್ಪುಬೆಟ್ಟ (ಶ್ರವಣಬೆಳಗೊಳ) ಇವೆರಡು ಪ್ರಸಿದ್ಧಿಯನ್ನು ಹೊಂದಿದ್ದವು. ಇಲ್ಲಿಯೆ ಈ ಪುರಾಣಕಾವ್ಯ ರಚನೆಗೆ ನಾಂದಿಯಾಗಿರ-ಬಹುದು.

ಜೈನ ಪುರಾಣಗಳಿಗೆ ಹಿಂದೂ ಪುರಾಣಗಳು ಪ್ರೇರಣೆ ನೀಡಿರಬಹುದು. ತಮ್ಮ ಧರ್ಮದ ಮಹಾಪುರುಷರನ್ನು ಚಿತ್ರಿಸುವದು. ಅಭ್ಯುದಯ (ಲೀಲೆ)ಗಳನ್ನು ಚಿತ್ರಿಸುತ್ತ ಹೊಸ ಪರಂಪರೆಗೆ ನಾಂದಿ ಹಾಕಲಾಯಿತು. ಬೌದ್ಧ ಧರ್ಮದಲ್ಲಿ ಬುದ್ಧನ ಚರಿತ್ರೆಯೂ ಹೀಗೆ ಆಧ್ಯಾತ್ಮಿಕವಾದ ಈ ಬೆಳವಣಿಗೆ ಕನ್ನಡದಂತಹ ದೇಶಭಾಷೆಗಳಲ್ಲಿ ಪುರಾಣ ಬೆಳವಣಿಗೆಗೆ ಕಾರಣವಾಯಿತು. ಪುರಾಣವೇನೋ 'ಮಹಾ ಪುರುಷರ್ಕಳ' ಮಹತ್ವವನ್ನು ಸಾರಿದರೂ; 'ಕಾವ್ಯದ ಚೌಕಟ್ಟೋ' ಎಂಬಂತೆ ಚಾರಿತ್ರಿಕ ಮಹಾಪುರುಷರ ಸಾಧನೆ ಕ್ರಿಯಾಕಲಾಪಗಳನ್ನು ಹೇಳುವದು ಕನ್ನಡ ಕಾವ್ಯಗಳಲ್ಲಿ ನಡೆದು ಬಂದಿತು. ಕಾವ್ಯಗಳಲ್ಲಿ ಚಾವುಂಡರಾಯ, ಅತ್ತಿಮಬ್ಬೆ ಇವರನ್ನು ಕೀರ್ತಿಸಿದ್ದನ್ನು ನೋಡಬಹುದು.

೨:೨. ಪುರಾಣ ಸಾಹಿತ್ಯ – ಲಕ್ಷಣ, ಸ್ವರೂಪ

ಪುರಾಣ ಸಾಹಿತ್ಯವು ಮೊದಲು ದೈವಿ ಲೀಲೆಗಳನ್ನು ಹೇಳುತ್ತ ಭಕ್ತಿಯನ್ನುಂಟು ಮಾಡಲು ನಿರ್ಮಾಣಗೊಂಡಿತು ಎಂದು ತಿಳಿದು ಬರುವದು. ಅನಂತರ ಅವುಗಳು ಅನೇಕ

ಜನ ಜ್ಞಾನ ವಿಷಯಗಳನ್ನು ಒಳಗೊಳ್ಳುತ್ತ ಸಾಗಿದವು. ಅವು ವಿಶ್ವಕೋಶದಂತೆ ಬೆಳೆದವು. ಅವುಗಳಲ್ಲಿ ದೇವತಾ ಸ್ತೋತ್ರದಂತೆ ಧರ್ಮ ವಿಚಾರಗಳು, ಸಾಮಾಜಿಕ ವಿಷಯಗಳು ಪ್ರಸ್ತಾಪನೆಗೊಂಡವು. ಕಾಲದಿಂದ ಕಾಲಕ್ಕೆ ಪುರಾಣಗಳನ್ನು ಪರಿಷ್ಕರಿಸುವದನ್ನು ಕಾಣಬಹುದು.

ಭಾಗವತ ಪುರಾಣದಲ್ಲಿ ಪುರಾಣಗಳು ಒಳಗೊಳ್ಳುವ ಹತ್ತು ವಿಷಯಗಳನ್ನು ಹೀಗೆ ತಿಳಿಸಲಾಗಿದೆ. (ಯುಗಯಾತ್ರಿ ಭಾರತೀಯ ಸಂಸ್ಕೃತಿ ಸಂಪುಟ-೨. ಪುಟ : ೧೮೪)

ಸ್ವರ್ಗ (ಪ್ರಧಾನವಾದ ಸೃಷ್ಟಿ), ವಿಸರ್ಗ (ಗೌಣ ಸೃಷ್ಟಿ), ವೃತ್ತಿ (ದುಡಿಯುವಿಕೆ), ರಕ್ಷಾ (ರಕ್ಷಣೆ), ಅಂತರ (ವಿಶ್ವಕಾಲ ಚಕ್ರ), ವಂಶ (ರಾಜ ಮನೆತನ), ವಂಶಾನುಚರಿತ (ವಂಶಗಳ ಚರಿತ್ರೆ), ಸಂಸ್ಥಾ (ಜಗತ್ತಿನ ನಾಶ), ಹೇತು (ಕಾರಣ), ಅಪಾಶ್ರಯ (ಅಂತಿಮ ವಿರೋಧ) ಇವುಗಳ ವಿವರಗಳನ್ನು ಬೇರೆ ಹೇಳುವ ರೀತಿಯನ್ನು ಬ್ರಹ್ಮ ವೈವರ್ತ ಪುರಾಣವು ವಿವರಿಸುವದು ಅಲ್ಲಿ – 'ಸೃಷ್ಟಿ, ವಿಸೃಷ್ಟಿ, ಸ್ಥಿತಿ, ಪಾಲನ, ಕರ್ಮ, ವಾಸನ, ಮನುವಾರ್ತಾ, ಪ್ರಳಯ, ಮೋಕ್ಷ, ಹರೀಕೀರ್ತನ, ದೇವಕೀರ್ತನ. ಈ ನಿರೂಪಣೆಯು ಅನೇಕ ಬದಲಾಯಿತ ವಿಷಯಗಳನ್ನು ಎತ್ತಿ ತೋರುವದು. ಅಮರ ಕೋಶದಲ್ಲಿ ಪುರಾಣ ಲಕ್ಷಣಗಳನ್ನು ಕುರಿತು ಹೀಗೆ ಹೇಳಲಾಗಿದೆ –

'ಸ್ವರ್ಗಶ್ಚ ಪ್ರತಿಸ್ವರ್ಗಶ್ಚ ವಂಶೋ ಮನ್ವಂತರಾಣಿ ಚ
ವಂಶಾನುಚರಿತಂ ಚಾಪಿ ಪುರಾಣಂ ಪಂಚಲಕ್ಷಣಂ ।

(ಕನ್ನಡ ಸಾಹಿತ್ಯದಲ್ಲಿ ಪುರಾಣ ಪ್ರಜ್ಞೆ, ಪುಟ : ೫)

ಆ ಕಾಲ ಘಟ್ಟದಲ್ಲಿಯ ಸಾಮಾನ್ಯ ಜನತೆ ಹೊಂದಿರಬೇಕಾದ ಲೌಕಿಕ ಮತ್ತು ಪಾರಮಾರ್ಥಿಕ ವಿಷಯಗಳನ್ನು ತಿಳಿಸುವದು / ಹೊಂದುವದನ್ನು ಪುರಾಣಗಳಲ್ಲಿ ಕಾಣಬಹುದು. ಹೆಚ್ಚು ಹೆಚ್ಚಾಗಿ ದ್ರಾವಿಡ ಪರವಾದ ಅಲ್ಲಿ ಇರುವ, ಹುಟ್ಟಿ ಬೆಳೆದ ಭಕ್ತಿಯನ್ನು ಪುರಾಣ ಕಾವ್ಯಗಳು ಮುಖ್ಯ ತತ್ತ್ವವನ್ನಾಗಿಸಿಕೊಂಡು ಬೆಳೆದು ಬಂದವು. ದೈವಿ ಅನುಭೂತಿಯೊಂದಿಗೆ ಜೀವನದ ಬಗೆಗಿನ ಸಂಗತಿ ವಿಶ್ವದ ಬಗೆಗಿನ ವಿಚಾರಗಳು ಇವೆಲ್ಲ ಸಮಾಜೋಧಾರ್ಮಿಕ ವಿಷಯಗಳು ಅಲ್ಲಿವೆ. ಮಹತ್ತರ ಶಕ್ತಿಯ ಲೀಲಾ ಕೀರ್ತನವು ಇವುಗಳ ಮುಖ್ಯ ಗುರಿಯಾಯಿತು. ಮುಂದೆ ಬೆಳೆದು ಬಂದ ದೇಶಿ ಸಾಹಿತ್ಯದಲ್ಲಿ ಭಕ್ತಿ ಪಂಥದ ಚಳುವಳಿಗಳು ಪ್ರಬಲವಾಗುವದರ ಮೂಲ ನೆಲೆಯೆ ಪುರಾಣಗಳು.

ಭಕ್ತಿಯ ಮೂಲಕವಾಗಿ ವೈವಿಧ್ಯತೆಯಲ್ಲಿ ಏಕತೆಯನ್ನು ತರುವದನ್ನು ಪುರಾಣ ಸಾಹಿತ್ಯವು ನೆರವೇರಿಸಿದೆ. 'ಭಾರತದ ವಿವಿಧ ಜನರನ್ನು ಬುಡಕಟ್ಟಿನ ಮತ್ತು ಮತ ಧರ್ಮದ ದೃಷ್ಟಿಯಿಂದ ಒಂದುಗೂಡಿಸಲು ಪುರಾಣಗಳು ಅತಿದೊಡ್ಡ ಸೇವೆ ಮಾಡಿವೆ.' (ಯುಗಯಾತ್ರಿ ಭಾರತೀಯ ಸಂಸ್ಕೃತಿ. ಸಂಪುಟ-೨. ಪುಟ : ೧೯೫) ವೈವಿಧ್ಯಮಯವಾದ ಧರ್ಮ ಮತ್ತು ಆಚರಣೆಗಳ ಮಧ್ಯ ಸಾಮರಸ್ಯವನ್ನು ತಂದಿವೆ. ವೈದಿಕ ಧರ್ಮ ಆಚರಣೆಗಳು ಹಿಂದೆ ಬೀಳಲು ಕಾರಣ ಅವು

ಕಟ್ಟಿಕೊಂಡ ಆವರಣಗಳು. ಪುರಾಣಗಳಿಗೆ ಯಾವ ಆವರಣ ಇರಲಿಲ್ಲ ಅವು ಮುಕ್ತವಾಗಿ ಸರ್ವ ಜನಮನ ಮುಟ್ಟುವ ಕಾರ್ಯ ಮಾಡಿದವು. ಮೊದಲು ಆಡಳಿತ ಧಾರ್ಮಿಕ ಭಾಷೆಯಾದ ಸಂಸ್ಕೃತದಲ್ಲಿ ಬಳಿಕ ದೇಶ ಭಾಷೆಗಳಲ್ಲಿ ಪುರಾಣ ಸಾಹಿತ್ಯ ಬೆಳೆಯುತ್ತ ಬಂದಿತು. ಇದಕ್ಕೆ ಕಾರಣ ಆಯಾ ದೇಶದ ಜನತೆಗೆ ದೈವಿ ಅನುಭೂತಿಯನ್ನು ಮುಟ್ಟಿಸುವದೆ ಆಗಿದೆ. ವೇದಗಳನ್ನಷ್ಟೇ ತಿಳಿದರೆ ಸಾಲದು ಪುರಾಣಗಳನ್ನು ತಿಳಿಯಬೇಕೆಂಬ ಒಂದು ವಿಚಾರ ಹೀಗಿದೆ.

ಯೋ ವಿದ್ಯಾಚ್ಚತುರೋ ವೇದಾಂಸ್ಸಾಂಗೋಪನಿಷೋದ್ವಿಜಃ
ನ ಚೇತ್ಪುರಾಣಂ ಸಂವಿದ್ಯಾ ನ್ನೈವಸ ಸ್ಯಾದ್ವಿಚಕ್ಷಣಃ ।

(ಯುಗಯಾತ್ರಿ ಭಾರತೀಯ ಸಂಸ್ಕೃತಿ. ಸಂಪುಟ-೨. ಪುಟ : ೧೯೫)

(ಯಾವ ಬ್ರಾಹ್ಮಣನು ವೇದಗಳನ್ನು ವೇದಾಂಗ ಮತ್ತು ಉಪನಿಷತ್ತುಗಳೊಡನೆ ತಿಳಿದವನಾಗುತ್ತಾನೋ ಪುರಾಣಗಳನ್ನು ಚೆನ್ನಾಗಿ ತಿಳಿದವನಾಗದಿದ್ದರೆ ಅಂತವನು ಜ್ಞಾನಿಯಾಗಲಾರ) ಈ ಅಭಿಪ್ರಾಯದ ಹಿನ್ನೆಲೆಯೆಂದರೆ ದೇಶಿ ನೆಲೆಯಿಂದ ಬಂದ ಭಕ್ತಿ ತತ್ತ್ವಗಳಿವು. ಪೌರಾಣಿಕ ಹಿನ್ನೆಲೆಯನ್ನು ಹೊಂದಿದ್ದು ವೈದಿಕ ಸಾಹಿತ್ಯದೊಂದಿಗೆ ಸಮ ಸಮನಾಗಿ ನಿಂತಿತು. 'ಜ್ಞಾನ ಕರ್ಮ ಮತ್ತು ಭಕ್ತಿ ತತ್ತ್ವಗಳಲ್ಲಿ ಜೀವನ ಮತ್ತು ನಡತೆಗಳ ಮೇಲಿನ ವೈದಿಕ ಅವೈದಿಕ ಅಭಿಪ್ರಾಯಗಳಲ್ಲಿಯೂ ಪುರಾಣಗಳು ಸಾಧಿಸಿದ ಸಮನ್ವಯವು ಹಿಂದೂ ಸಮಾಜದ ಎಲ್ಲ ಹಂತಗಳಲ್ಲಿ ತನ್ನ ಪರಿಣಾಮವನ್ನು ಬೀರಿತು. ಇದರ ಪರಿಣಾಮವಾಗಿ ಇಂದು ಸಾಮಾನ್ಯ ಹಿಂದೂವಿನ ಜೀವನವು ವಿವಿಧ ಕಾಲಗಳ ಮತ್ತು ಭಾಗಗಳ ವಿಚಾರ ಮತ್ತು ಆಚಾರಗಳು ಅನುಪಮ ಸಮರೂಪತೆಯಿಂದ ಅನ್ಯೋನ್ಯವಾಗಿ ಬೆರೆತಿರುವದನ್ನು ತೋರಿಸುತ್ತದೆ." (ಯುಗಯಾತ್ರಿ ಭಾರತೀಯ ಸಂಸ್ಕೃತಿ. ಭಾಗ-೨. ಪುಟ : ೧೯೫) ಈ ಎಲ್ಲ ಹಿನ್ನೆಲೆಯಲ್ಲಿ ವೇದೋತ್ತರ ಕಾಲದಲ್ಲಿ ಪುರಾಣಗಳ ಪರಿಣಾಮ ಅಧಿಕವಾಗಿ ಹೆಚ್ಚುತ್ತ ಹೋಯಿತು. ಶೈವ – ವೈಷ್ಣವ ಎರಡು ಪ್ರಬಲವಾದ ಭಕ್ತಿ ಪಂಥಗಳು; ಜನ ಜೀವನದಲ್ಲಿ ಭಾರತದ ಬಹು ಭಾಗದ ಎಲ್ಲ ಕಲಾ ಪ್ರಕಾರಗಳನ್ನು ಶಿಷ್ಟ ಮತ್ತು ದೇಶಿ ಎರಡು ನೆಲೆಯಲ್ಲಿ ಹೊಂದುತ್ತ ಸಾಗಿ ಬಂದಿವೆ.

ಸಂಸ್ಕೃತದಲ್ಲಿ ಬೆಳೆದು ಬಂದ ಪುರಾಣಗಳನ್ನು ಭಕ್ತಿ ಪ್ರೇರಿತವಾಗಿ ರಚಿಸಲಾಯಿತು. ಆದರೆ ಅವುಗಳು ಬರಿ ವೇದಗಳಂತೆ 'ಸ್ತುತಿ' ಮಾತ್ರವಾಗಿರದೆ ಮಾನವ ಬದುಕಿನ ಮಾರ್ಗದರ್ಶನ ಸೂತ್ರಗಳನ್ನು; ಮಾನವ ಜೀವಿಗಳಿಗೆ ಅಗತ್ಯವಾದ ಪರ ಮತ್ತು ಲೌಕಿಕ ವಿಷಯಗಳನ್ನು ನಿರೂಪಿಸಿದವು. ಆ ಮೂಲಕವಾಗಿ ಅವು ವಿಷಯ ವಸ್ತುಕೋಶದಂತಾದವು. ಅವು ಒಳಗೊಳ್ಳುವ ವಿಷಯ ಸ್ವರೂಪವನ್ನು ಕೆಳಗಿನಂತೆ ಕಾಣಬಹುದು.

- ಪುರಾಣಗಳು ವಿಷ್ಣು, ಶಿವ, ದೇವತೆಗಳ ಸ್ತುತಿಯನ್ನೊಳಗೊಂಡಿದ್ದು ಅವರು ಮಾನವರ ಬದುಕನ್ನು ರಕ್ಷಿಸಲು 'ಅಭಯಹಸ್ತ' ತಾಳಿ ಅವತರಿಸುತ್ತಾರೆ.
- ಪುರಾಣಗಳ ದೇವತೆಗಳನ್ನು ಕುರಿತು ಭಕ್ತಿ ಭಾವವನ್ನು ಎತ್ತಿ ಹೇಳುವವು.
- ಮಾನವರನ್ನು ರಕ್ಷಿಸಲು, ಅವರ ಬದುಕನ್ನು ನೆಲೆಗೊಳಿಸಲು, ಅವರನ್ನು ತನ್ನಲ್ಲಿ ಲೀನಗೊಳಿಸಲು ದೇವತೆಗಳು ಲೀಲೆಗಳನ್ನು ತೋರುವರು.
- ಅಗ್ನಿ ಸೂರ್ಯ, ಇಂದ್ರ ಮೊದಲಾದ ಆರ್ಯ ದೇವತೆಗಳ ಪ್ರಾಬಲ್ಯ ಕುಗ್ಗಿ ಬ್ರಹ್ಮ, ವಿಷ್ಣು, ರುದ್ರರನ್ನು ಕುರಿತು ಸಾಹಿತ್ಯ ಬಲಗೊಳ್ಳುವಂತೆ ಮಾಡಿದ್ದು.
- ಮೂರು ಸ್ಥಿತಿಗಳಾದ ಸೃಷ್ಟಿ-ಸ್ಥಿತಿ-ಲಯಗಳನ್ನು ಮೂರು ದೇವತೆಗಳಿಗೆ ಹೊಂದಿಸಿಕೊಳ್ಳಲಾಯಿತು.
- ಪುರಾಣಗಳು ಯುದ್ಧ, ತಪಸ್ಸು ಪೂಜೆ ಇತ್ಯಾದಿಗಳನ್ನು ವಿವರಿಸುವುವು.
- ವೀರರ ಚಿತ್ರಣ ಬದುಕಿನ ವಿವಿಧ ಸ್ಥಿತಿ-ಗತಿಗಳನ್ನು ಒಳಗೊಳ್ಳುತ್ತವೆ.
- 'ಧರ್ಮ' ಜಗತ್ತನ್ನು ಕುರಿತು ಅನೇಕ ವಿಷಯಗಳನ್ನು ಹೇಳುವುವು.
- ಮುಖ್ಯವಾಗಿ ಕರ್ಮಟವಾದ ಜಾತಿ ವ್ಯವಸ್ಥೆಯನ್ನು ಸಡಿಲಿಸಿ ಎಲ್ಲರೂ ಭಗವಂತನಿಗೆ ಪ್ರಿಯರೆಂಬಂತೆ ವಿವರಿಸುವದು.
- ಆರು ದರ್ಶನಗಳು (ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವ ಮೀಮಾಂಸೆ, ಉತ್ತರ ಮೀಮಾಂಸೆ) ಭಕ್ತಿ-ಜ್ಞಾನ-ವೈರಾಗ್ಯ ಮಾರ್ಗಗಳನ್ನು ವಿವರಿಸುವವು.
- ವೈದಿಕ ಮಂತ್ರಗಳನ್ನು ಉದ್ಧರಿಸುತ್ತ ಆ ಪರಂಪರೆಯೊಂದಿಗೆ ಬೆಸೆದುಕೊಂಡುದು.

ಭಾರತದಲ್ಲಿ ಪುರಾಣಗಳು, ಸಂಸ್ಕೃತಿ ಮತ್ತು ಜನಾಂಗೀಯ ಬಾಂಧವ್ಯವನ್ನು ಉಂಟುಮಾಡಿದವು. ದ್ರಾವಿಡ ಆರ್ಯ ಧಾರ್ಮಿಕ ತತ್ತ್ವಗಳ ಮಹಾಸಂಗಮವೇ ಪುರಾಣಗಳು. ಇಲ್ಲಿಂದ ಮುಂದೆ ಭಕ್ತಿಗೆ ಮತ್ತು ಶೈವ-ವೈಷ್ಣವ ಆರಾಧನೆಗೆ ಚಾಲನೆ ದೊರೆಯಿತು. ಭಾರತದ ಉದ್ದಗಲದ ವೈವಿಧ್ಯತೆಯಲ್ಲಿ ಏಕತೆಯನ್ನು ತರುವದು ಇವುಗಳ ಮಹತ್ವದ ಕಾರ್ಯವಾಯಿತು.

೨:೩. ಕನ್ನಡದಲ್ಲಿ ಪುರಾಣ ಕಾವ್ಯಗಳ ಬೆಳವಣಿಗೆ

೧೫೦೦ ವರ್ಷಗಳ ವಿಶಾಲತೆಯುಳ್ಳ ಕನ್ನಡ ಸಾಹಿತ್ಯದಲ್ಲಿ ಭಾಷಾ ಶೈಲಿಯ ದೃಷ್ಟಿಯಿಂದ ಮೂರು ಮುಖ್ಯ ಅವಸ್ಥೆಗಳು ಕಂಡು ಬಂದಿವೆ. ಪುರಾಣಕಾವ್ಯ ಸಾಹಿತ್ಯವು ಈ ಪ್ರಮುಖ ಮೂರು ಅವಸ್ಥೆಯಲ್ಲಿ ಒಡಮೂಡಿದೆ. ಹಳಗನ್ನಡದಲ್ಲಿ ಜೈನಪುರಾಣ ಕಾವ್ಯಪರಂಪರೆ,

ನಡುಗನ್ನಡದಲ್ಲಿ ವೀರಶೈವಪುರಾಣ ಕಾವ್ಯಪರಂಪರೆ, ಹೊಸಗನ್ನಡದಲ್ಲಿ ಪ್ರವಚನಪುರಾಣ ಕಾವ್ಯಪರಂಪರೆಗಳು ಬೆಳೆದುಬಂದಿವೆ. ಜೈನಧರ್ಮ ತತ್ತ್ವಗಳನ್ನು ಹೊಂದಿಸಿ ಆಗಮಿಕ ಕಾವ್ಯಗಳೆಂದು ಜೈನರು ಪುರಾಣ ಕಾವ್ಯಗಳನ್ನು ಬರೆದರು. ಆ ಕಾವ್ಯಗಳ ವಸ್ತು ವಿಷಯ ತಾತ್ವಿಕ ವಿವೇಚನೆಗಳೆಲ್ಲವು ಸಂಸ್ಕೃತ ಪ್ರಾಕೃತ ಕರ್ನಾಟಕೇತರ ಮೂಲವಾದದ್ದು. ಮುಂದಿನ ನಡುಗನ್ನಡ ಮತ್ತು ಹೊಸಗನ್ನಡ ಪುರಾಣ ಕಾವ್ಯಗಳು ಕನ್ನಡ ನಾಡಿನಲ್ಲಿ ಹುಟ್ಟಿ ಬೆಳೆದ ವೀರಶೈವ-ಲಿಂಗಾಯತ-ಮತ್ತಿತರ ಆಧ್ಯಾತ್ಮ ತಾತ್ತ್ವಿಕ ಧಾರೆಗಳನ್ನು ಒಳಗೊಂಡು ಮೂಡಿ ಬಂದಿವೆ. ಒಂದು ಅರ್ಥದಲ್ಲಿ ಜನಮುಖಿ ಮತ್ತು ಕನ್ನಡದೇಶಿ ತತ್ತ್ವಗಳು ಇಲ್ಲಿ ಪ್ರಮುಖವಾಗಿ ಪ್ರಕಟಗೊಂಡಿವೆ ಎನಿಸುವುದು. ಹೊಸಗನ್ನಡದ ಆಧುನಿಕ ಸಾಹಿತ್ಯದಲ್ಲಿ ಅನೇಕ ತಾತ್ತ್ವಿಕ ಸಾಹಿತ್ಯಿಕ ಹೊಸತನದ ನಡುವೆ ಈ ಪುರಾಣ ಕಾವ್ಯಗಳು ಪರಂಪರೆಯಾಗಿ ಮೂಡಿಬಂದುದು ವಿಶೇಷವೆನಿಸಿದೆ.

ಪೂರ್ವದ ಹಳಗನ್ನಡದಲ್ಲಿ ಆದ ಸಾಹಿತ್ಯ ರಚನೆ ಯಾವುವು ಇಂದು ಉಳಿದಿಲ್ಲ. ಉಲ್ಲೇಖಗಳ ಆಧಾರದಿಂದ ಶಾಸನ ಸಾಹಿತ್ಯದ ಬಲದಿಂದ ನಾವು ಪ್ರಬಲವಾದ ಸಾಹಿತ್ಯ ರೂಪದ ಗುರುತಿಸುವಿಕೆಯನ್ನು ಮಾಡಲಸಾಧ್ಯ. ಜೈನ ಸಾಹಿತ್ಯವು ಆ ಕಾಲ ಘಟ್ಟದಲ್ಲಿ ಹುಟ್ಟಿ ಬೆಳೆದಿರಬಹುದು. ಆದರೆ ಇಂದು ಅಂತಹ ಕಾವ್ಯಗಳು ಉಪಲಬ್ಧವಿಲ್ಲ. ದೊರಕುವ ಮೊದಲ ಗ್ರಂಥವು ಕವಿರಾಜಮಾರ್ಗ. ಅದು ಶಾಸ್ತ್ರ ಕೃತಿ. ಅದರಲ್ಲಿ ಸೂಕ್ಷ್ಮವಾಗಿಯಾದರೂ ಧರ್ಮ ತತ್ತ್ವಗಳ ವಿವೇಚನೆ ಇಲ್ಲದಾಗಿದೆ. ಮುಂದೆ ಸಿಗುವ ವಡ್ಡಾರಾಧನೆ (ಕ್ರಿ.ಶ. ೯೦೦)ಯು ಕನ್ನಡದ ಉಪಲಬ್ಧ ಸಾಹಿತ್ಯ ಕೃತಿಗಳಲ್ಲಿ ಮೊದಲಿನದು. ಅದು ಸಾಹಿತ್ಯ ಕಲಾ ತತ್ತ್ವಗಳ ಹೊರ ಆವರಣದಲ್ಲಿ ಜೈನ ತತ್ತ್ವಗಳನ್ನು ಗರ್ಭಿಕರಿಸಿಕೊಂಡಿರುವದು. ನಿರ್ದಿಷ್ಟವಾಗಿ ಪುರಾಣ ಮತ್ತು ಲೌಕಿಕ ಕಾವ್ಯ ಮಾರ್ಗದ ಕೃತಿಗಳನ್ನು ರಚಿಸಿದವನು ಮಹಾಕವಿ ಪಂಪ. ಆತ ಕಾವ್ಯವನ್ನು ಎರಡು ರೀತಿಯ ತಾತ್ತ್ವಿಕ ವಿಧಾನದಲ್ಲಿ; ಲೌಕಿಕವೆಂದು ವೀರಯುಗಧರ್ಮವನ್ನು, ಆಗಮಿಕವೆಂದು ಜೈನ ಮತಧರ್ಮವನ್ನು ಕುರಿತು ಕಾವ್ಯಗಳನ್ನು ಬರೆದನು. ಇದು ನೂರು ವರ್ಷಗಳಲ್ಲಿ ಪೊನ್ನ ರನ್ನರ ಕಾವ್ಯ ವಿಧಾನವು ಆಯಿತು.

ಉತ್ತರ ಭಾರತದ ಜೈನ ಧರ್ಮವು ಕ್ರಿ.ಶ. ಪೂರ್ವ ೨ನೆಯ ಶತಮಾನದಷ್ಟು ಹೊತ್ತಿಗೆ ಕರ್ನಾಟಕಕ್ಕೆ ಕಾಲಿಟ್ಟು ಬೆಳೆಯತೊಡಗಿತು. ಒಂದೆಡೆ ತಿರುಳ್ಗಡದ ಕೊಪ್ಪಳ ಇನ್ನೊಂದೆಡೆ ಕಳ್ವಪ್ಪು (ಶ್ರವಣಬೆಳಗೋಳ) ಇವು ಜೈನ ಕೇಂದ್ರಗಳಾಗಿದ್ದವು. ಒಂದು ಕಾಲಕ್ಕೆ ಜೈನ ಧರ್ಮವು ರಾಜಧರ್ಮವಾಗಿತ್ತು. ಸಾಹಿತ್ಯದ ಬಹುಮುಖ್ಯವಾದ ಶಕ್ತಿಯಾಗಿಯೂ ಜೈನಧರ್ಮ ಬೆಳೆದು ಬಂದಿತು. ಪಂಪನು ತನ್ನ ಭಾವಶಕ್ತಿಯಾದ ವೀರವನ್ನು ಒಂದು ಕಾವ್ಯಕ್ಕೆ ಹೊಂದಿಸಿಕೊಂಡು, ಆತ್ಮ ಶಕ್ತಿಯಾದ ಜೈನ ತತ್ತ್ವ ವಿವೇಚನೆಯನ್ನು ಪ್ರಮುಖವಾಗಿಸಿದ ಎರಡರಲ್ಲಿಯೂ ಕಾವ್ಯಕಲೆಯನ್ನು ಕೈ ಬಿಡಲಿಲ್ಲ. ಅದನ್ನು 'ನೆಗಾಳ್ದಿದಿಪುರಾಣದೊಳರಿವುದು ಧರ್ಮಮುಂ ಕಾವ್ಯ ಧರ್ಮಮುಮಂ' - ಎಂದು ಹೇಳಿರುವನು. ಇದನ್ನು ಪೊನ್ನ ರನ್ನರು ಪಾಲಿಸಿದರು. ಪಂಪನ ಇನ್ನೊಂದು

ಕಾವ್ಯ ರಚನಾ ವಿಧಾನವಾದ ಲೌಕಿಕ ಮತ್ತು ಆಗಮಿಕ ಕಾವ್ಯ ಪದ್ಧತಿಯನ್ನು ಪೊನ್ನ ರನ್ನರು ಮುಂದುರೆಸಿದರು. ಆದರೆ ನಾಗಚಂದ್ರನಲ್ಲಿಗೆ ಬರುವಾಗ (ಕ್ರಿ.ಶ. ೧೧೦೦) ಲೌಕಿಕವಾದ ವೀರ ಉತ್ಸಾಹ ಚಾರಿತ್ರಿಕ ನಿರೂಪಣೆಗಳು ಮಾಯವಾಗಿ ಬರೀ ಆಗಮಿಕ ತಾತ್ವಿಕ ವಿವೇಚನೆಯು ಎರಡೂ ಕಾವ್ಯಗಳಲ್ಲಿ ಒಡಮೂಡಿತು. ಇದು ಧರ್ಮದ ವಿಶೇಷ ಒತ್ತಡವೆ ಆಯಿತು. ಈ ಯುಗದ ಎರಡು ಗದ್ಯ ಕೃತಿಗಳಲ್ಲಿ ಆರಂಭದ ವಡ್ಡಾರಾಧನೆಯು ಕಾವ್ಯಧರ್ಮದ ಆವರಣದೊಳಗೆ ಜೈನ ತತ್ವಗಳು ಅರಳುವಂತೆ ಕಲಾತ್ಮಕ ಕಥಾ ವಿಧಾನವನ್ನು ಒಳಗೊಂಡಿದೆ. ಚಾವುಂಡರಾಯ ಪುರಾಣ (ಕ್ರಿ.ಶ. ೧೦೦೦)ವು ಬರಿ ಜೈನ ಧರ್ಮವನ್ನು ತಿಳಿಸುವ ಕೃತಿಯಾಗಿ ತಾತ್ವಿಕ ಪ್ರಾಬಲ್ಯತೆಯನ್ನು ಹೊಂದಿತು. ಜೈನ ಧರ್ಮದ ತ್ರಿಷಷ್ಠಿ ಶಲಾಖಾ ಪುರುಷರನ್ನು ಕುರಿತು ಪೌರಾಣಿಕ ವಿಷಯಗಳನ್ನು 'ಚಾವುಂಡರಾಯ ಪುರಾಣ'ವು ಹೊಂದಿ ೧೧ನೆಯ ಶತಮಾನಾನಂತರ ಜೈನ ಕವಿಗಳು ಆಗಮಿಕ ಮತ್ತು ಲೌಕಿಕಗಳೆರಡನ್ನು ಕೂಡಿಸಿ ಧಾರ್ಮಿಕ ಮಾರ್ಗ ಒಂದನ್ನೆ ಆಯ್ದುಕೊಂಡರು. ಇದರ ಆರಂಭ ನಾಗಚಂದ್ರನೆ. ಆತ ರಾಮಾಯಣದ ಕಾವ್ಯ ಬರೆದ, ಆದರೆ ಅದು ಜೈನ ರಾಮಾಯಣವಾಗಿದೆ. ಈ ಪದ್ಧತಿಯನ್ನು ನೇಮಿನಾಥ ಜನ್ನ ಮೊದಲಾದವರು ಅನುಸರಿಸಿದರು. ಉದ್ದಕ್ಕೂ ಈ ಎಲ್ಲರೂ ಜೈನ ಧರ್ಮದ ವಿವೇಚನೆಯಾಗಿ ಪುರಾಣ ಕಾವ್ಯಗಳನ್ನು ಬರೆದಿರುವದನ್ನು ಕಾಣಬಹುದು. ಆದಿಪುರಾಣ, ಶಾಂತಿಪುರಾಣ, ಅಜಿತಪುರಾಣ, ಮಲ್ಲಿನಾಥಪುರಾಣ, ನೇಮಿನಾಥಪುರಾಣ, ಅನಂತನಾಥಪುರಾಣ, ಪಾರ್ಶನಾಥ ಪುರಾಣ ಇವೆಲ್ಲ ಪ್ರಮುಖ ಪುರಾಣಗಳನ್ನು ಈ ಮಾಲಿಕೆಯಲ್ಲಿ ನೋಡಬಹುದು. ಪುರಾಣ ವಿಷಯವನ್ನು ಕೈ ಬಿಟ್ಟವನು ರತ್ನಾಕರವರ್ಣಿ. ಆತ ಪುರಾಣೋಕ್ತ ಭರತನ ಕತೆಯನ್ನೆ ವಸ್ತುವಾಗಿಸಿ ಕಾವ್ಯವನ್ನು ಬರೆದು ಅಲ್ಲಲ್ಲಿ ತತ್ವಗಳನ್ನು ಹೇಳಿದರೂ, ಅದೊಂದು ಬದ್ಧ ಧಾರ್ಮಿಕ ಕೃತಿಯಲ್ಲ.

ಜೈನಪುರಾಣ ಕಾವ್ಯಗಳ ವಸ್ತು ಉತ್ತರ ಭಾರತದ ಜೈನ ಧರ್ಮವಾದರೂ, ಕರ್ನಾಟಕದ ಋಷಿ ಸ್ವಾಮಿಗಳನ್ನು, ಸಾಂಸ್ಕೃತಿಕ ಧಾರ್ಮಿಕ ವ್ಯಕ್ತಿಗಳನ್ನು ಹೊಗಳಿ ಹೇಳಿದ ಮಾತುಗಳು ಜೈನ ಧರ್ಮದ ಮಹತ್ವದ ದಾಖಲೆ ಎನಿಸಿವೆ. ಅವುಗಳಲ್ಲಿ ಹಿಂದೂ ಪುರಾಣ ಕಾವ್ಯಗಳಿಂದ ಬೇರೆಯಾದ ಪುರಾಣ ವಿಷಯ ಪ್ರಸ್ತಾಪಗೊಂಡು ಮಹತ್ವದ ಆಯಾಮ ಎನಿಸಿದೆ. ರಾಮಚಂದ್ರಚರಿತ ಪುರಾಣದ ಪೀಠಿಕೆಯ ಒಂದು ಪದ್ಯವನ್ನಿಲ್ಲಿ ನೋಡಬಹುದು –

ಹರಿಹರ ಹಿರಣ್ಯಗರ್ಭರ
ಸುರವಣೆಯಿಂ ಗೆಲ್ದ ಕಾಮನಂ ದೀಪ್ತ ತಪೋ
ಭರದಿಂದುರಿಪಿದರೆನೆ ಬಿ
ತ್ತರಿಸದರಾರ್ ವೀರನಂದಿ ಸೈದ್ಧಾಂತಿಕರಂ ॥

(ಪೀಠಿಕಾ ಪ್ರಕರಣ ಪದ್ಯ : ೨೭ ನಾಗಚಂದ್ರ ಸಂಪುಟ–೭ ಕನ್ನಡ ವಿಶ್ವವಿದ್ಯಾಲಯ, ಹಂಪಿ)

ಹಿಂದೂ ಪುರಾಣ ಸಾಹಿತ್ಯವೆಲ್ಲಾ ಹರಿಹರ ಹಿರಣ್ಯಗರ್ಭರ ಸ್ತುತಿಯಲ್ಲೇ ಹುಟ್ಟಿ ಬೆಳದಿದೆ. ಅವರು ಕಾಮನಿಗೆ ಸೋತುದು, ಜೈನ ಮುನಿಯೊಬ್ಬ ಕಾಮನನ್ನು ಗೆದೆಯುವದು, ಸೂಕ್ಷ್ಮವಾಗಿ ಸ್ವಮತ ಪ್ರಶಂಸೆ ಎನಿಸಿದೆ. ಇದು ಎಲ್ಲ ಕವಿಗಳ ಮತವು ಆಗಿದೆ. ಕರ್ನಾಟಕದಲ್ಲಿ ಜೈನಧರ್ಮ ಇಳಿಮುಖವಾದಂತೆ ಜೈನ ಪುರಾಣಕಾವ್ಯಗಳು ಇಳಿಮುಖಗೊಂಡವು ಮುಂದೆ ನಡುಗನ್ನಡದಲ್ಲಿ ಜೈನ ಕವಿಗಳು ಮತವನ್ನು ಎತ್ತಿ ಹೇಳಿದರೂ ವಿಧಾನ-ತಾತ್ವಿಕತೆಯಲ್ಲಿ ಬೇರೆ ಮಾರ್ಗ ಅಭಿವ್ಯಕ್ತಿಯನ್ನು ಕಂಡುಕೊಂಡರು.

ಕರ್ನಾಟಕದಲ್ಲಿ ಪ್ರಚುರಗೊಂಡ ಜೈನ ಪುರಾಣ ಕಾವ್ಯಗಳೇ ಕನ್ನಡ ಸಾಹಿತ್ಯದಲ್ಲಿ ಪ್ರಥಮ ಪುರಾಣ ಘಟ್ಟವಾಗಿದೆ. ಈ ಪುರಾಣ ಕಾವ್ಯಗಳು ಜೈನ-ಮತ-ತತ್ವ ವ್ಯಕ್ತಿ ಕೇಂದ್ರಿತವಾಗಿದ್ದವು. ಅರವತ್ತುಮೂರು ಶಲಾಖಾ ಪುರುಷರನ್ನು ಅವರ ಜೀವನವನ್ನು ನಿರೂಪಿಸುವವು. ಮುಖ್ಯವಾಗಿ ತೀರ್ಥಂಕರ ಚರಿತ್ರೆಗಳನ್ನು ಹೇಳುವವು. ಸಂಸ್ಕೃತದ ಮಹಾಪುರಾಣ ಪ್ರಾಕೃತದ 'ಪಮುಅ ಚರಿಯ' ಕೃತಿಗಳೇ ಮುಖ್ಯ ಆಕಾರಗಳಾಗಿವೆ.

ನಡುಗನ್ನಡದಲ್ಲಿ ವೀರಶೈವ ಪುರಾಣ ಕಾವ್ಯಗಳು ವ್ಯಾಪಕವಾಗಿ ಮೂಡಿಬಂದವು. ನಡುಗನ್ನಡ ಸಾಹಿತ್ಯದ ತಲಕಾವೇರಿಯಾದ ವಚನ ಸಾಹಿತ್ಯದಲ್ಲಿ ಹಿಂದೂ ಪುರಾಣಗಳ ವಿರೋಧವಿದೆ. ಈ ರೀತಿ ವಿರೋಧವು ಸೈದ್ಧಾಂತಿಕ ಹಿನ್ನೆಲೆಹೊಂದಿದೆ. ಶರಣರು ಹೊಸದೊಂದು ಧರ್ಮವನ್ನು ಆಚರಣೆಗೆ ತಂದರು. 'ಅವರ ದೃಷ್ಟಿಯಲ್ಲಿ ಶೈವ ಪುರಾಣ ವೈಷ್ಣವ ಪುರಾಣಗಳೆಲ್ಲ ಸ್ಥಾವರವು, ಜಡ ರೂಪ. ಅವರು ಆಕಾರ – ಸಾಕಾರ ಆರಾಧನೆಯನ್ನು ಒಪ್ಪದ್ದರಿಂದ ಹೀಗೆ ವಿರೋಧವನ್ನು ಹೇಳಿದರು.' (ವಚನ ಸಾಹಿತ್ಯ ಸಂಗ್ರಹ ಸಂಪಾದಕರು : ಸಂ.ಶಿ. ಭೂಸನೂರಮಠ ಪ್ರಕಾಶನ : ಮೈಸೂರು ಸರಕಾರ ವಿದ್ಯಾಭ್ಯಾಸ ಇಲಾಖೆ, ಬೆಂಗಳೂರು ಪ್ರ.ವರ್ಷ : ೧೯೬೫) –

- 'ಪುರಾಣವೆಂಬುದು ಪುಂಡರ ಗೋಷ್ಠಿ'– ಅಲ್ಲಮಪ್ರಭು
- 'ಪುರಾಣಗಳನ್ನು ಆತ್ಮ ಮಾಡಿದನಲ್ಲದೆ; ಆತ್ಮನನು ಅವು ಮಾಡಿಲ್ಲ !
– ಉರಿಲಿಂಗದೇವ
- 'ಪುರಾಣ ಪೂರೈಸಲರಿಯದೆ ಕೆಟ್ಟವು' – ಅಲ್ಲಮಪ್ರಭು
- 'ವೇದ ಶಾಸ್ತ್ರಗಮ ಪುರಾತನರ ಮುಂದಿಟ್ಟುಕೊಂಡ ಜಡವಾದಿಗಳ ಮೆಚ್ಚ
– ಚೆನ್ನಬಸವಣ್ಣ
- 'ಅಜಾತನೊಲಿಸದೊಡೆ ಅದೇತರಾಗಮ' – ಅಂಬಿಗರ ಚೌಡಯ್ಯ
- 'ಪುರಾಣಗಳ ಹಿಂದೆ ಬಳಸದಿರು' – ಆದಯ್ಯ
- 'ವೇದಾಗಮ ಪುರಾಣ ಶಾಸ್ತ್ರಗಳೆಂಬ ಕೊಟ್ಟಣವಕುಟ್ಟುತ'
– ಅಕ್ಕಮಹಾದೇವಿ.

ಈ ರೀತಿಯಾಗಿ ಶರಣರು ವೇದಾಗಮ ಪುರಾಣ ಮಾರ್ಗವನ್ನು ವಿರೋಧಿಸಿದರು. ಅವರು ಸ್ಥಾವರ ಆರಾಧನೆಯನ್ನು ವಿರೋಧಿಸಿ 'ಪರಾತ್ಪರ'ದ ಆತ್ಮದ ಅರಿವನ್ನು ಎತ್ತಿ ಹೇಳಿದರು. ವೈದಿಕವು ಶಬ್ದ ಜಾಲವಾಗಿ ಪುರೋಹಿತ ಶಾಹಿಗಳ ಶೋಷಣೆಯ ಬಣ್ಣವನ್ನು ಪಡೆದಿತ್ತು. ವೈದಿಕ ವಿರೋಧದ ಹಿನ್ನೆಲೆಯೆಂದರೆ ಅದು ಮಾನವ ಜೀವನತತ್ತ್ವ-ಭಾವತತ್ತ್ವಗಳ ವಿರೋಧಿಯಾಗಿದೆ. ಹಿಂಸಾಮೂಲ ಶೋಷಣಾ ರೂಪ ತಾಳಿದೆ ಎಂಬುದು ಮನುಷ್ಯ ಕೇಂದ್ರಿತ ಸತ್ಯ-ಶುದ್ಧತೆಗಳಿಂದ ಆತ್ಮದ ಅರಿವು, ಅದರಿಂದ ಆನಂದ ಎಂಬುದು ಶರಣರಿಗೆ ಮುಖ್ಯವಾಯಿತು. ಅವರು ಹೊರಗಿನ ದೇವ ದೇವಾಲಯ ಆಚರಣೆ ಭಕ್ತಿಗಳನ್ನು ಒಪ್ಪಲಿಲ್ಲ. ಅವರು ತಮ್ಮ ಅರಿವಿನ ಆಂದೋಲನದಿಂದ ಹೊಸ ತತ್ತ್ವಗಳನ್ನು ನಿರೂಪಿಸಿ ಅನುಸರಿಸಿ ಮಾರ್ಗ ತೋರಿದರು. ಅದಕ್ಕಾಗಿ ಹಿಂದಣ ಈ ಮಾರ್ಗ ತನ್ನ ಸತ್ವವನ್ನು ಕಳೆದುಕೊಂಡಿತೆನಿಸಿತು. ಹಿಂದಣ ಎಲ್ಲ ಪುರಾಣ ಮಾರ್ಗಗಳನ್ನು ಬಸವಣ್ಣನವರು ಹೀಗೆ ವಿರೋಧಿಸಿದ್ದಾರೆ.

ಆದಿಪುರಾಣ ಅಸುರರಿಗೆ ಮಾರಿ ! ವೇದ ಪುರಾಣ ಹೋತಿಂಗೆ ಮಾರಿ ।
ರಾಮ ಪುರಾಣ ರಕ್ಕಸರಿಗೆ ಮಾರಿ । ಭಾರತ ಪುರಾಣ ಗೋತ್ರಕ್ಕೆ ಮಾರಿ ॥
ಎಲ್ಲ ಪುರಾಣ ಕರ್ಮಕ್ಕೆ ಮೊದಲು ।
ನಿಮ್ಮ ಪುರಾಣಕ್ಕೆ ಪ್ರತಿಯಿಲ್ಲ ಕೂಡಲಸಂಗಮದೇವಾ ॥

(ಬಸವೇಶ್ವರ ವಚನ ಸಂಪುಟ ಸಂ. : ಡಾ. ಎಂ.ಎಂ. ಕಲಬುರ್ಗಿ
ಪ್ರಕಾಶನ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. ಪ್ರವರ್ಷ : ೧೯೯೩.)

ಬಸವಣ್ಣನವರ ನಿಲುವು ಎಲ್ಲ ಶರಣರ ಸಿದ್ಧಾಂತದ ನಿಲುವು ಆಗಿತ್ತು. ಪುರಾಣಗಳಲ್ಲಿ ಅಸುರರನ್ನು ಕೊಲ್ಲುವ ಹಿಂಸೆ ಇದೆ. ಹಾಗೆ ವೇದಗಳು ಪ್ರಾಣಿ ಹಿಂಸೆಯನ್ನು ಹೇಳಿದರೆ ರಾಮಾಯಣ ರಾಕ್ಷಸರನ್ನು, ಮಹಾಭಾರತ ತನ್ನಗೋತ್ರದವರನ್ನೇ ಸಂಹರಿಸಿದ ಕತೆಯು ಹಿಂಸೆಯ ಕತೆಯನ್ನು ಹೇಳುವದನ್ನೇ ಕಾಣಬಹುದು. ಇಲ್ಲಿ ಜೀವದಯೆ ಇಲ್ಲ. ನಾಶದ ಆವರಣ ಇರುವದರಿಂದ ಇದನ್ನು ಶರಣರು ಒಪ್ಪಲಿಲ್ಲ. ಅವರದು 'ದಯವೇ ಧರ್ಮದ ಮೂಲ', ಅದನ್ನು ಬಳಿವಿಡಿದು ಭಕ್ತಿ-ಅರಿವು-ಜ್ಞಾನಗಳನ್ನು ಹೊಂದಬೇಕೆಂದರು. ಶರಣರದ್ದು ಕರ್ಮಪರವಾದ ಆಚರಣೆಯ ಭಕ್ತಿಯಲ್ಲ, ಅದು ಅಂತಃಕರಣದ ಅರಿವಿನ ಭಕ್ತಿ. ಈ ಎಲ್ಲ ಹಿನ್ನೆಲೆಯಲ್ಲಿ ಶರಣರು ತಾತ್ತ್ವಿಕ ತಳಹದಿಯ ಮೇಲೆ ಪುರಾಣಗಳನ್ನು ಒಪ್ಪಲಿಲ್ಲ, ವಿರೋಧಿಸಿದರು. ಅಸಂಗತಿ ಮತ್ತು ಅಚ್ಚರಿ ಎಂದರೆ ಶರಣರ ಜೀವನವನ್ನೆ ಮುಂದೆ ಪುರಾಣಕ್ಕೆ ಹೊಂದಿಸಿ ವೀರಶೈವ ಪುರಾಣ ಕಾವ್ಯ ಪರಂಪರೆ ಹುಟ್ಟಿ ಬೆಳೆಯಿತು. ಅದು ತೆಲುಗು ಪುರಾಣ ಕಾವ್ಯ ಪದ್ಧತಿಯಂತೆ ಬೆಳೆಯಿತು.

ಶರಣರ ಸಮೀಪದ ಕಾಲದಲ್ಲಿ ಬದುಕಿದವರು ಹರಿಹರ ಮತ್ತು ತೆಲುಗಿನ ಪಾಲ್ಕುರಿಕೆ ಸೋಮನಾಥರು. ಅರ್ಧ ಶತಮಾನ ಕಳೆಯುವದರಲ್ಲಿ ಶರಣರ ಜೀವನ-ಸಾಧನೆಗಳನ್ನು

ಲೀಲೆ ಎಂದು ಪರಿಕಲ್ಪಿಸಿ ಹೇಳಿದರು. ಶರಣರು ಪುರಾಣ ಪದ್ಧತಿಯನ್ನು ವಿರೋಧಿಸಿದ್ದರು. ಮೂರ್ತಿ ಪೂಜೆ, ವ್ಯಕ್ತಿ ಪೂಜೆಗಳನ್ನು ಪ್ರತಿರೋಧಿಸಿದ್ದರು. ಮುಂದೆ ಅವರ ಜೀವನವನ್ನು ಕಾವ್ಯಕ್ಕೆ ವಸ್ತುವನ್ನಾಗಿಸಿಕೊಂಡ ಪರಿಭಾವಿಸಿದ ವೈಪರಿತ್ಯಗಳು ಕಂಡವು. ಈ ಹಿನ್ನೆಲೆಯಲ್ಲಿ ವೀರಶೈವ ಪುರಾಣಗಳು ಹುಟ್ಟಿಬಂದವು.

ವೀರಶೈವ ಕಾವ್ಯ ಮಾರ್ಗವು ಹರಿಹರನಲ್ಲಿ 'ಉದಿತಮಾರ್ಗ'ವೆಂದು ಭಕ್ತಿ ಕೇಂದ್ರಿತವಾಗಿ ಮೂಡಿ ಬಂದಿತು. ಪಾಲ್ಕುರಿಕೆ ಸೋಮನಾಥನಲ್ಲಿ ಲೀಲಾ ಮಾರ್ಗವಾಗಿ ರೂಪುಗೊಂಡಿತು. ಹರಿಹರನು ಬಸವಣ್ಣನೆ ಮೊದಲಾದ ಶರಣರ ಚರಿತ್ರೆಗಳನ್ನು 'ಕಾವ್ಯದ' ತಾತ್ತ್ವಿಕ ಹಿನ್ನೆಲೆಯಲ್ಲಿ ನಿರೂಪಿಸಿದನು. ಶರಣರ 'ಸಾಮರ್ಥ್ಯಂಗಳ' ತೋರುವ 'ಪ್ರತ್ಯಕ್ಷಂಗಳ'ನ್ನು ನಿರೂಪಿಸುವದು ಆತನ ಗುರಿಯಾಯಿತು.

ಹರಿಹರನು ಶಿವನನ್ನು ಶಿವಲೀಲೆಗಳನ್ನು ಅಲ್ಪ ಪ್ರಮಾಣದಲ್ಲಿ; ಶರಣರ ಚರಿತ್ರೆಗಳನ್ನು ಹಿರಿಯ ಪ್ರಮಾಣದಲ್ಲಿ ರಚಿಸಿದನು. ಗಿರಿಜಾ ಕಲ್ಯಾಣವು ಶಿವಲೀಲೆಯ ಕತೆಯನ್ನ ಹೊಂದಿದರೂ, ಅದು ಭಕ್ತಿಯ ವಿವೇಚನೆಯನ್ನು ಮುಖವಾಗಿಸಿದ ಕಾವ್ಯ ಹರಿಹರನ ಎಲ್ಲ ರಗಳೆಗಳು 'ಕರುಣರಸ ತರಂಗ ವಿರೂಪಾಕ್ಷಲಿಂಗ' ಎಂಬುದಕ್ಕಿಂತ 'ಶರಣರ ಪುರುಷದ ಕಣಿಯಾಗಿ ಭಕ್ತರಂ ಗೆಲಿಸಿ ಪ್ರತ್ಯಕ್ಷಂಗಳಂ ತೋರಿ'ದ ಶಿವನನ್ನು ಚಿತ್ರಿಸುವವು. 'ಶಿವನಿಂ ಶರಣ ಮಿಗಿಲು' ಎಂಬ ಅಂಶವು ಪ್ರಧಾನವಾಗಿದೆ. ಹರಿಹರನು ಶೈವ–ವೀರಶೈವ–ಲಿಂಗವಂತ ಮೂರನ್ನು ಪೌರಾಣಿಕ–ತಾತ್ತ್ವಿಕ–ಭಕ್ತಿಯ ತಳಹದಿಯೊಂದಿಗೆ ಒಪ್ಪಿದರೂ ಆತನ ಉದಿತ ಮಾರ್ಗದ ಪ್ರಧಾನ ಅಂಶವೆಂದರೆ ಭಕ್ತಿ. 'ಶರಣ ಹೃತ್ಕಮಲವಾಸ'ವಾದ ಶಿವತತ್ತ್ವವಾಗಿದೆ. ಹರಿಹರನದು ಪುರಾಣ ಮಾರ್ಗವಲ್ಲ. ಮಾದಾರ ಚನ್ನಯ್ಯನ ರಗಳೆಯಲ್ಲಿ ಪುರಾಣ–ವೈದಿಕ ಪರಂಪರೆಗಳನ್ನು ಹೀಗಳೆದು ಭಕ್ತಿಯನ್ನು ಎತ್ತಿ ಹೇಳಿದ್ದಾನೆ.

ವಾಸ್ತವವಾಗಿ ವೀರಶೈವ ಪುರಾಣ ಕಾವ್ಯದ ಗಂಗೋತ್ರಿಯಾಗಿ ತೆಲಗಿನ ಪಾಲ್ಕುರಿಕೆ ಸೋಮನಾಥನ 'ಬಸವ ಪುರಾಣಮು' ಕಾವ್ಯವಿದೆ. ಅಲ್ಲಿ 'ಬಸವ ಚರಿತ್ರೆ'ಯನ್ನು ಮಾತ್ರ ಹೇಳದೆ ಸಕಲ ಶರಣಗಣದ ಚರಿತೆಗಳನ್ನು ಪುರಾಣ ಮಾರ್ಗದಲ್ಲಿ ಹೇಳಿರುವದನ್ನು ಕಾಣಬಹುದು. ಸೋಮನಾಥನು–

'............ಬಸವನ ನೆನವು ನೆನಹನು ಬಲುಹಾಗಿ ಮಾಡಿ
ಸಕಲ ವೇದ ಪುರಾಣ ಸಮ್ಮತವಾದ ಆತನ
ಸಕಲ ಪುರಾತನ ಭಕ್ತಿ ಗೀತಾರ್ಥ ಸಮಿತಿಯೇ
ಮಾತೃಕೆಯೆಂಬ ಪೂರಿತಗೊಪ್ಪುವ...... ಪುರಾತನ

ಭಕ್ತಿ ವಿತತಿ ಚರಿತೆಗಳಲ್ಲಿ ಸೇರಿಸುತ

ಬಸವನ ಚರಿತ್ರೆ ವರ್ಣಿಪೆ'

(ಬಸವ ಪುರಾಣ – ಪಾಲ್ಕುರಿಕೆ ಸೋಮನಾಥ – ಪೀಠಿಕೆ ೧೭೫ ರಿಂದ ೧೮೫ ಸಾಲುಗಳು
ಪಾಲ್ಕುರಿಕೆ ಸೋಮನಾಥನ ಬಸವ ಪುರಾಣ – ಅನು. ಡಾ. ಪಿ.ವ್ಹಿ. ನಾರಾಯಣ
ಪ್ರಕಾಶನ : ತರಳಬಾಳು ಪ್ರಕಾಶನ, ಸಿರಿಗೆರೆ. ಪ್ರ.ವರ್ಷ : ೧೯೮೨.)

ಸೋಮನಾಥನು ತನ್ನ ಪುರಾಣದ ಹಿನ್ನೆಲೆಯನ್ನು ಈ ರೀತಿಯಾಗಿ ಪುರಾಣ ಮಾರ್ಗವೆಂದು ಸ್ಪಷ್ಟಪಡಿಸಿರುವನು. ಈ ಕಾವ್ಯವನ್ನು ಭೀಮಕವಿಯು ಕನ್ನಡಕ್ಕೆ ಅನುವಾದಿಸಿದನು. ಆತನು ಕ್ರಿ.ಶ. ೧೩೬೯ರಲ್ಲಿದ್ದನು. ಅಲ್ಲಿಂದ ಮುಂದೆ ಇದೆ ಕೃತಿಯೊಂದು ಪರಂಪರೆಗೆ ಆದಿ ಎನಿಸಿತು. ಮುಂದೆ ಹಲವಾರು ಕವಿಗಳು ನೂರಾರು ಕಾವ್ಯಗಳನ್ನು ಬರೆದಿರುವದನ್ನು ಕಾಣಬಹುದು. ಈ ಕಾವ್ಯಗಳು ಮುಖ್ಯವಾಗಿ ಭಾಮಿನಿ ಷಟ್ಪದಿಯಲ್ಲಿ ಕೆಲವು ವಾರ್ಧಕ ಷಟ್ಪದಿಯಲ್ಲಿ ರಚನೆಗೊಂಡಿವೆ. ಭೀಮಕವಿಯು ಭಾಮಿನಿ ಷಟ್ಪದಿಯಲ್ಲಿ ಬರೆದು ಪರಂಪರೆಗೆ ನಾಂದಿ ಹಾಡಿದನು.

ಭೀಮಕವಿಯಿಂದ ಮೊದಲ್ಗೊಂಡ ವೀರಶೈವ ಪುರಾಣ ಕಾವ್ಯ ಪರಂಪರೆಯಲ್ಲಿ ಪದ್ಮಣಾಂಕ (ಕ್ರಿ.ಶ. ೧೪೦೦), ಗುಬ್ಬಿಯ ಮಲ್ಲಣಾರ್ಯ (ಕ್ರಿ.ಶ. ೧೫೩೦), ಚನ್ನಬಸವಾಂಕ (ಕ್ರಿ.ಶ. ೧೫೫೦), ವಿರಕ್ತ ತೋಂಟದಾರ್ಯ (ಕ್ರಿ.ಶ. ೧೫೬೦), ಶಾಂತೇಶ (ಕ್ರಿ.ಶ. ೧೫೬೧), ಅದೃಶ್ಯ ಕವಿ (ಕ್ರಿ.ಶ. ೧೫೮೦), ವಿರೂಪಾಕ್ಷ ಪಂಡಿತ (ಕ್ರಿ.ಶ. ೧೫೮೪), ಸಿದ್ಧಲಿಂಗ ಶಿವಯೋಗಿ (ಕ್ರಿ.ಶ. ೧೬೦೦), ಬಸವಲಿಂಗ (೧೬೧೧), ಬಸವಲಿಂಗ (ಕ್ರಿ.ಶ. ೧೬೭೯), ಪರ್ವತೇಶ್ವರ (೧೬೯೮), ಚನ್ನಬಸವ (೧೮೨೬), ಬಸವ (೧೮೬೦), ಚನ್ನಬಸವ (೧೮೬೦), ದ್ಯಾಂಪೂರ ಚನ್ನಕವಿ (೧೯೪೦) ಮೊದಲಾದವರು ಕಾವ್ಯಗಳನ್ನು ರಚಿಸಿದರು. ಇವರು ಶರಣರನ್ನು ಶಿವಲೀಲೆಗಳನ್ನು ವೀರಶೈವ ತತ್ತ್ವಗಳನ್ನು ಪುರಾಣ ರೂಪದಲ್ಲಿ ಹೇಳಿದರು.

ವೀರಶೈವ ಪುರಾಣ ಕಾವ್ಯಗಳು ಇತರ ಪುರಾಣಗಳಿಂಗಿಂತ ಕೆಲವೊಂದು ವಿಭಿನ್ನ ಲಕ್ಷಣಗಳನ್ನು ಪಡೆದಿರುತ್ತವೆ. ಆ ಲಕ್ಷಣಗಳನ್ನು ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿಗಳು ಹೀಗೆ ಕ್ರೋಢಿಕರಿಸಿದ್ದಾರೆ. (ಪಾಲ್ಕುರಿಕೆ ಸೋಮನಾಥನ ಬಸವ ಪುರಾಣ – ಅನು. ಡಾ. ಪಿ.ವ್ಹಿ. ನಾರಾಯಣ ಪ್ರಕಾಶನ : ತರಳಬಾಳು ಪ್ರಕಾಶನ, ಸಿರಿಗೆರೆ. ಪ್ರ.ವರ್ಷ : ೧೯೮೨.) ೧) ಕೈಲಾಸದ ವರ್ಣನೆ, ಈಶ್ವರನ ಸ್ಥಾನ ೨) ಕಾರಣ ಪುರುಷರ ಪ್ರಸ್ತಾಪ ೩) ಪವಾಡಗಳು ೪) ಶಿವಾಧಿಕ್ಯತೆ ೫) ಸೃಷ್ಟಿಯ ನಿರೂಪಣೆ ೬) ವೀರಶೈವ ಮತಾಧಿಕ್ಯತೆ ೭) ಅಷ್ಟಾವರಣಗಳ ಮಹಾತ್ಮೆ ೮) ಭಕ್ತರ ಹಿರಿಮೆ ೯) ಕಥಾನಾಯಕನ ಮುಕ್ತಿ ಇದೇ ಲಕ್ಷಣಗಳನ್ನು ವೀರಶೈವ ಪುರಾಣಗಳು ಒಳಗೊಳ್ಳುತ್ತವೆಯೆಂದು ತಿಳಿಸುವರು. ಶಿವತತ್ತ್ವ ಚಿಂತಾಮಣಿಯಲ್ಲಿ ವೀರಶೈವ ಪುರಾಣಗಳಿಗೆ ೧೮ ಲಕ್ಷಣಗಳಿವೆ ಎಂದು ತಿಳಿಸುತ್ತ – ಪರವಸ್ತು, ಗುರು–ಲಿಂಗ–ಜಂಗಮ,

[illegible]

ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ, ಸೃಷ್ಟಿ, ಗಣಚರಿತೆ, ಪುರಾತನರ ಚರಿತೆ, ನೂತನರ ಚರಿತೆ, ಗಣಸಹಸ್ರನಾಮ, ವೀರಶೈವಾಧಿಕ್ಯ, ವೀರಶೈವ ತತ್ತ್ವ ನಿರೂಪಣೆ ಷಟ್‌ಸ್ಥಲ, ಕಾಲಾಜ್ಞಾನ, ಪಂಚಾಚಾರ ಹೀಗೆ ಹದಿನೆಂಟರ ವಿವರಣೆ ಅಲ್ಲಿದೆ.

ಈ ಕಾಲಘಟ್ಟದಲ್ಲಿ ಕ್ರಿ.ಶ. ೧೫೦೦ ರಿಂದ ಪುರಾಣ ಕಾವ್ಯಕ್ಕೆ ಇನ್ನೊಂದು ಆಯಾಮ ಒದಗಿ ಬಂದಿತು. ಮಠದ ಸ್ವಾಮಿಗಳ ಚರಿತ್ರೆಯನ್ನು ನಿರೂಪಿಸುವ ಕ್ರಮವು ಪ್ರಾರಂಭವಾಯಿತು. 'ದ್ವಿತೀಯಅಲ್ಲಮ'ನೆಂದು ಪ್ರಖ್ಯಾತನಾದ ಶ್ರೀ ತೋಂಟದ ಸಿದ್ಧಲಿಂಗಯತಿಗಳು ೭೦೧ ಶಿಷ್ಯರೊಂದಿಗೆ ಮೈಸೂರು ಪ್ರಾಂಥದಲ್ಲಿ ವೀರಶೈವ – ಲಿಂಗವಂತ ಧರ್ಮ ಪ್ರಚಾರ ಮಾಡಿದರು. ಅವರೆ ಸ್ವಯಂ ಷಟ್‌ಸ್ಥಲಗಳ ವಿವೇಚನೆ ಮಾಡಿ 'ಷಟ್‌ಸ್ಥಲ ಜ್ಞಾನ ಸಾರಾಮೃತ'ವೆಂಬ ವಚನಗಳನ್ನು ಬರೆದರು. ಅವರ ಬದುಕಿನ ಭವ್ಯತೆಯನ್ನು ಕುರಿತು ಅವರ ಶಿಷ್ಯರಾದ ವಿರಕ್ತ ತೋಂಟದಾರ್ಯನು ೧೫೬೦ರಲ್ಲಿ ಸಿದ್ಧೇಶ್ವರ ಪುರಾಣವನ್ನು, ಶಾಂತೇಶನು ೧೫೬೧ರಲ್ಲಿ ತೋಂಟದ ಸಿದ್ಧೇಶ್ವರ ಪುರಾಣಗಳನ್ನು ಬರೆದರು. ಇದರಿಂದ ಮಠ ಪರಂಪರೆಯನ್ನು ಸ್ವಾಮಿಗಳ ಉದಾತ್ತ ಚರಿತ್ರೆಗಳನ್ನು ಬರೆಯುವದಕ್ಕೆ ಇದು ಆರಂಭವೆನಿಸಿತು. ಇದರಿಂದ ಮುಂದುವರೆದ ಭಾಗವೇ. ಅಲ್ಲಲ್ಲಿ ಕಾಣಿಸಿಕೊಂಡಿತು. ೨೦ನೆಯ ಶತಮಾನದಲ್ಲಿ ದ್ಯಾಂಪೂರ ಚನ್ನಕವಿಗಳಲ್ಲಿ ಪುರಾಣ ಕಾವ್ಯಗಳ ಹೆಚ್ಚಳ ಕಂಡಿತು. ಚನ್ನಕವಿ, ಪಂ. ವೈ. ನಾಗೇಶಶಾಸ್ತ್ರಿಗಳು, ಕಲ್ಲಿನಾಥ ಶಾಸ್ತ್ರಿಗಳು, ಪಂ. ಸದಾಶಿವಶಾಸ್ತ್ರಿಗಳು, ಪಂ. ಪುಟ್ಟರಾಜ ಕವಿಗಳು, ಶ್ರೀ ಮಲ್ಲಿಕಾರ್ಜುನ ಮೊದಲಾದವರು ಮೊದಲ ಹಂತದ ಕವಿಗಳಾಗಿ ಕಾಣಿಸಿದರು. ಮುಂದೆ ಗದಗ ಜಿಲ್ಲೆಯೊಂದರಲ್ಲಿಯೇ ೧೩ ಜನ ಪುರಾಣ ಕವಿಗಳು ೫೮ರಷ್ಟು ಪುರಾಣ ಕಾವ್ಯಗಳನ್ನು ಬರೆದರು.

೨:೪. ಗದಗ ಜಿಲ್ಲೆಯ ಪುರಾಣ ಕಾವ್ಯಗಳು

ಕನ್ನಡ ಸಾಹಿತ್ಯದಲ್ಲಿ ಧಾರ್ಮಿಕವಸ್ತು ವಿವೇಚನೆಯ 'ಪುರಾಣಕಾವ್ಯ'ಗಳು ಪ್ರಾಚೀನ ಸಾಹಿತ್ಯದ ಆರಂಭಿಕ ಹಂತದಿಂದಲೆ ಕಂಡುಬರುವವು. ಆರಂಭದಲ್ಲಿ ಜೈನರು ಜೈನತಾತ್ವಿಕರ ಜೀವನ ಚರಿತ್ರೆಗಳನ್ನು ಪ್ರಾಕೃತ ಮಾದರಿಯಲ್ಲಿ ಬರೆದರು. ಬರಿಧರ್ಮ ತತ್ವವಿವೇಚನೆಯೆ ಮಾತ್ರವಾಗಿರದ ಈ ಜೈನ ಪುರಾಣಗಳಲ್ಲಿ ಕಾವ್ಯಧರ್ಮವು ಹಾಸುಹೊಕ್ಕಾಗಿರುವಂತೆ ನೋಡಿಕೊಂಡರು. ನಡುಗನ್ನಡ ಸಾಹಿತ್ಯದಲ್ಲಿ ಕನ್ನಡದಲ್ಲಿ ಪುರಾಣ ಮಾದರಿಯನ್ನು ಹರಿಹರ–ರಾಘವಾಂಕರು ಆರಂಭಿಸಿದರು. ತೆಲಗಿನಲ್ಲಿ ಪಾಲ್ಕುರಿಕೆ ಸೋಮನಾಥನು ಪ್ರಾರಂಭಿಸಿದ ಪುರಾಣರಚನಾ ಮಾದರಿಯನ್ನು ಕನ್ನಡದಲ್ಲಿ ಭೀಮಕವಿ ಪ್ರಚಾರಗೊಳಿಸಿದನು. ಅದು ಒಂದು ಪರಂಪರೆಯಾಗಿ ಮುಂದುವರೆಯಿತು. ಮುಂದೆ ಆಧುನಿಕಪೂರ್ವ ಎಂದರೆ ಕ್ರಿ.ಶ. ೧೫೫೦ರಿಂದೀಚೆ ಪುರಾಣ ಕಾವ್ಯಗಳ ಬರವಣಿಗೆಯು ಮಠದ ಸ್ವಾಮಿಗಳ ಚರಿತ್ರೆಯನ್ನು ಬರೆಯುವತ್ತ ಹೊರಟು ಅದು ಒಂದು ಪರಂಪರೆಯಾಯಿತು.

ಕ್ರಿ.ಶ. ೧೨೫೦ರಲ್ಲಿ ಆರಂಭಗೊಂಡ ಷಟ್ಪದಿ ಸಾಹಿತ್ಯವು ಇಂದಿಗೂ ಮುಂದುವರೆದುಕೊಂಡು ಬಂದಿರುವದನ್ನು ಆಧುನಿಕ ಪುರಾಣ ಕಾವ್ಯಗಳ ಹಿನ್ನೆಲೆಯ ಅಧ್ಯಯನದಿಂದ ಅರಿಯಬಹುದು.

ಗದಗ ಜಿಲ್ಲೆಯ ವ್ಯಾಪ್ತಿಯಲ್ಲಿ ಆಧುನಿಕ ಪುರಾಣಕಾವ್ಯಗಳು ಹೆಚ್ಚಾಗಿ ಮೂಡಿಬಂದಿವೆ. ಕ್ರಿ.ಶ. ೧೯೫೦ರಿಂದ ಕ್ರಿ.ಶ. ೨೦೧೦ರ ಅರ್ಧ ಶತಮಾನದಲ್ಲಿ ೧೩ ಜನರು ಷಟ್ಪದಿ ರೂಪದಲ್ಲಿ ಪುರಾಣ ಕಾವ್ಯಗಳನ್ನು ರಚಿಸಿದ್ದಾರೆ. ದಾಖಲೆಯ ೬೭ಕ್ಕೂ ಮಿಕ್ಕಿ ಪುರಾಣ ಕಾವ್ಯಗಳ ರಚನೆಯಲ್ಲಿ ೨೨ ಕೃತಿಗಳನ್ನು ಪಂಡಿತ ಪುಟ್ಟರಾಜ ಕವಿಗಳು ರಚಿಸಿರುವದೊಂದು ವಿಶೇಷ ಅಂಶವಾಗಿದೆ. ಆಧುನಿಕ ಪುರಾಣ ಕವಿಗಳ ಸ್ಥೂಲವಾದ ಜೀವನ ಚಿತ್ರದೊಂದಿಗೆ ಅವರ ಕಾವ್ಯಸೃಷ್ಟಿಯನ್ನು ಅವಲೋಕಿಸಲಾಗುವದು. ಪುರಾಣ ಕವಿಗಳು ಇನ್ನೂ ಪುರಾಣ ಕೃತಿಗಳನ್ನು ರಚಿಸುತ್ತಿರುವದು ವಿಶೇಷ ಅಂಶವೆನಿಸಿದೆ.

ಪುರಾಣ ಕಾವ್ಯಗಳು ಹೇಳುವ ಕಾವ್ಯಗಳಾಗಿ ರಚನೆಗೊಂಡವು. ಅವು 'ಪ್ರವಚನ'ಕ್ಕಾಗಿಯೆ ರೂಪುಗೊಂಡಿವೆ. ಬಹುಪಾಲು ಕಾವ್ಯಗಳು ಭಕ್ತಿ ಭಾವವನ್ನು ವ್ಯಕ್ತಗೊಳಿಸುವ ಮಠದ ಸ್ವಾಮಿಗಳ ಚರಿತ್ರೆಯನ್ನು ಸಾರುವವು. ಮಠದ ಸ್ವಾಮಿಗಳು ಬದುಕಿದ ಅನುಪಮ, ಅಸಾಧಾರಣ, ಅನನ್ಯ ಜೀವನವನ್ನು ದಾಖಲೆಮಾಡಲೆಂದು ಆರಂಭದಲ್ಲಿ ದ್ಯಾಂಪುರ ಚನ್ನಕವಿಗಳು, ಕಲ್ಲಿನಾಥ ಶಾಸ್ತ್ರಿಗಳು, ಪಂ. ವೈ. ನಾಗೇಶ ಶಾಸ್ತ್ರಿಗಳು ಪುರಾಣ ಕಾವ್ಯಗಳಿಗೆ ಮಾರ್ಗಹಾಕಿಕೊಟ್ಟರು. ಆ ಬಳಿಕ ಇದೆ ಮಾರ್ಗವನ್ನು ಅನುಸರಿಸಿದ ಕವಿಗಳು. ಕಾವ್ಯನಾಯಕರಾದವರನ್ನು ಅತಿಮಾನಸರಂತೆ ಚಿತ್ರಿಸುತ್ತ ಪವಾಡಗಳನ್ನು ಸೃಷ್ಟಿಸಿ ಕಾವ್ಯಗಳನ್ನು ಬರೆದರು.

ಸಾಮಾನ್ಯವಾದ ವ್ಯಕ್ತಿ ಜೀವನ ಆತನ ಸಾಧನೆಸಿದ್ಧಿಗಳಿಂದ ಅಸಾಧಾರಣವೆನಿಸುವದು. ಪವಾಡಗಳ ಹಿನ್ನೆಲೆ ಎಂದರೆ ಆ ಪವಾಡಗಳ ಬಲದಿಂದಲೆ ವ್ಯಕ್ತಿ ಜೀವನ ಅಸಾಧಾರಣವೆನ್ನಿಸುವ ಹಂತಕ್ಕೆ ಬರುವದು. ಇದನ್ನು ಪುರಾಣ ಬರೆಯಿಸುವ ಭಕ್ತರೆ ಕವಿಗಳಿಗೆ ಹೇಳಿ ಬರೆಯಿಸುವರು. ಇದು ಒಂದು ಕೃತ್ರಿಮ ಪರಂಪರೆಯಾಯಿತು. ಹೀಗಾಗಿ ಬಹುಪಾಲು ಇಲ್ಲಿಯ ಪುರಾಣ ಕಾವ್ಯಗಳು ಮುದ್ದಾಂ ಕಾವ್ಯಗಳಾಗಿವೆ. ಇದರಿಂದ ಸಹಜವಾದ ಕವಿತ್ವಕ್ಕೆ ಅಡೆತಡೆ ಉಂಟಾಗುವದು. ಜನಮಾನಸಕ್ಕೆ ಪುರಾಣಗಳ ಭಕ್ತಿ ಸಂವೇದನೆಯನ್ನು ಪ್ರವಚನಗಳ ಮೂಲಕ ಮುಟ್ಟಿಸುವ ಕಾರ್ಯ ಇಲ್ಲಿ ಮುಖ್ಯವಾಯಿತು.

ಪುರಾಣ ಕರ್ತೃಗಳಲ್ಲಿ ವಿಶೇಷತೆ ಎಂದರೆ ಅಂಧರಾದ ಪಂಡಿತ ಪುಟ್ಟರಾಜಕವಿಗಳು ಮನೋಭಿತ್ತಿಯಲ್ಲಿಯೆ ಕಾವ್ಯವನ್ನು ರಚಿಸಿ ಅದನ್ನು ಬಾಯಿಂದ ನುಡಿದು ಬರೆಯಿಸುತ್ತಿದ್ದುದು. ಪರರ ಹಂಗಿಲ್ಲದೆ ಬರೆದ ಕವಿ ಗವಾಯಿಗಳು ಸ್ವಯಂಸ್ಫೂರ್ತಿಯಿಂದಲೂ ಅನೇಕ ಕಾವ್ಯಗಳನ್ನು ರಚಿಸಿದ್ದಾರೆ. ಅಂತೆಯೆ ಕಾವ್ಯಗಳಲ್ಲಿ ಅವರು ಕವಿ ಪ್ರತಿಭೆಯನ್ನು ಮೆರೆದಿದ್ದಾರೆ. ಹಾಗೆಯೆ 'ಕುಜೆತೋದದೆಯುಂ ಕಾವ್ಯ ರಚನಾ ಚತುರತೆ'ಯನ್ನು ಹೊಂದಿದ ಶ್ರೀ ಬ್ಯಾಟಿ ರಾಮಣ್ಣನಂಥವರು

ಇಲ್ಲಿದ್ದಾರೆ. ಉನ್ನತ ಕಾವ್ಯ ಜ್ಞಾನವನ್ನು ಹೊಂದಿ ಕಾವ್ಯಗಳನ್ನು ರಚಿಸಿದ್ದಾರೆ. ಪ್ರವಚನ ಪಟುಗಳೇ ಕವಿಗಳಾಗಿ ಕಾವ್ಯಗಳನ್ನು ರಚಿಸಿರುವುದು ಇಲ್ಲಿ ವಿಶೇಷತೆ. ಸಂಗೀತದಲ್ಲಿ ಸಾಧನೆ ತೋರಿದ, ಪುರಾಣ ಕಾವ್ಯಗಳನ್ನು ಬರೆದ ಪಂ. ರಾಜಗುರು ಗುರುಸ್ವಾಮಿ ಕಲಕೇರಿ ಅವರಿಂದ ಕಾವ್ಯಗಟ್ಟಿಗೊಂಡಿದೆ.

ಪುರಾಣ ಕಾವ್ಯಗಳು ಸಾಮಾನ್ಯ ಜನರನ್ನು ಗುರಿಯಾಗಿಟ್ಟುಕೊಂಡು ರಚನೆಗೊಂಡಿವೆ. ಅವುಗಳ ರಚನಾರೂಪ ಪಂಡಿತರನ್ನು ಓಲೈಸುವತ್ತ ಇಲ್ಲ . ಕೇವಲ ಮೂರು ನಾಲ್ಕು ಕೃತಿಗಳು ಪವಾಡದ ವಲಯದಿಂದ ದೂರ ಸರಿದು ವ್ಯಕ್ತಿಚರಿತೆಯ ಮೌಲ್ಯಗಳನ್ನು ವಿವೇಚಿಸಿವೆ. ಆಧುನಿಕ ಕಾಲಘಟ್ಟದಲ್ಲಿದ್ದ ಬಾಬಾಸಾಹೇಬ ಅಂಬೇಡ್ಕರ ಅಂಥವರ ಮಹೋನ್ನತವಾದ ಜೀವನವನ್ನು ಚಿತ್ರಿಸುವದನ್ನು ಕಾಣಬಹುದು. ಉಳಿದಂತೆ ಲೀಲೆ ಪವಾಡಗಳನ್ನೇ ನಿರೂಪಿಸುವ ಕಾವ್ಯಗಳು ರಚನೆಗೊಂಡಿವೆ.

ಕಾವ್ಯಕಲೆಯ ಬಗೆಗೆ ತಿಳಿಯುವ ಹಂತದಲ್ಲಿ ಆಧುನಿಕ ಕಾಲಘಟ್ಟದಲ್ಲಿ ಷಟ್ಪದಿಯು ಹರಿದು ಬರುತ್ತಿರುವದು ಈ ಪುರಾಣಕಾವ್ಯಗಳ ವಿಶೇಷ ಅಂಶವಾಗಿದೆ. ಈ ಷಟ್ಪದಿಯಲ್ಲಿ ವಾರ್ಧಕವು ಸಂಸ್ಕೃತ ಭೂಯಿಷ್ಠ 'ಪ್ರೌಢಮಾರ್ಗ'ದಲ್ಲಿಯೂ, ಭಾಮಿನಿಯು ಕನ್ನಡ ಸತ್ವದ 'ದೇಶಿಮಾರ್ಗ'ದಲ್ಲಿ ಮೂಡಿಬಂದಿವೆ. ಕೆಲವೆಡೆಯಲ್ಲಿ ಕಾವ್ಯದ ಕಲಾತ್ಮಕ ಸ್ವರೂಪ ಇಲ್ಲಿ ಮೂಡಿದೆ. ಕಥನಕಲೆಯು ವೈಭವೀಕರಣದತ್ತ ಸಾಗುತ್ತಿದೆ. ಕಾವ್ಯಕಲೆಗೆ ಆಧಾರವಾದ ಅಲಂಕಾರ, ಧ್ವನಿ, ರೀತಿ, ರಸಗಳು ಒಂದೇ ಹಾದಿಯಲ್ಲಿದ್ದು ಸಾಂಪ್ರದಾಯಿಕವಾಗಿವೆ. ಕವಿಗಳ ಸಂದರ್ಶನದಿಂದ ಅವರು ರಚನೆ ಮಾಡಿದ ಕಾವ್ಯಗಳ ಹಿನ್ನೆಲೆ, ಆಶಯಗಳು, ಅಭಿವ್ಯಕ್ತಿ ಸ್ವರೂಪ, ಸಾಧಕ–ಬಾಧಕಗಳನ್ನು ತಿಳಿಯಬಹುದಾಗಿದೆ.

ಗದಗ ಜಿಲ್ಲೆಯ ಪುರಾಣ ಕವಿಗಳಾದ ಶ್ರೀ ಪಂ. ಪುಟ್ಟರಾಜ ಕವಿ ಗವಾಯಿಗಳು, ಪಂ. ಸದಾಶಿವಶಾಸ್ತ್ರಿಗಳು, ಪಂ. ಶ್ರೀ ರಾಜಗುರು ಗುರುಸ್ವಾಮಿ ಕಲಕೇರಿ, ಶ್ರೀ ರಾಮಣ್ಣ ಬ್ಯಾಟಿ, ಶ್ರೀ ವಾಸುದೇವ ಹೂಲಿ, ಶ್ರೀ ಕರವೀರಪ್ಪ ಅಂಗಡಿ, ಶ್ರೀ ಪ್ರಭಣ್ಣ ಬೊಮ್ಮನಹಳ್ಳಿ (ಲಕ್ಷ್ಮೇಶ್ವರ), ಪಂ. ಶ್ರೀ ಸೋಮಶೇಖರ ಶಾಸ್ತ್ರಿಗಳು ಪುರಾಣಿಕಮಠ, ಶ್ರೀ ನೀಲಕಂಠ ಜಾಡಗೌಡರ, ಶ್ರೀ ಶಿವದೇವಶಾಸ್ತ್ರಿಗಳು, ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ಪಂ. ಶ್ರೀ ಬಾಲಚಂದ್ರಶಾಸ್ತ್ರಿಗಳು ಹಿರೇಮಠ (ರೋಣ), ಶ್ರೀ ಬಸವಂತಾಚಾರ್ಯ ಕ. ಮನ್ವಾಚಾರ್ಯ ಇವರೆಲ್ಲರೂ ಶಾಸ್ತ್ರ ಮತ್ತು ಧರ್ಮಗಳನ್ನು ಮುಖ್ಯವಾಗಿಟ್ಟುಕೊಂಡು ಬಹುಪಾಲು ಮಠಗಳ ಸ್ವಾಮಿಗಳ ಚರಿತ್ರೆಗಳನ್ನು ಹೇಳಿದ್ದಾರೆ. ಮಠಪರಂಪರೆಗಳು ಅನೇಕ ತತ್ತ್ವ ಸಂಪ್ರದಾಯಗಳನ್ನು ಒಳಗೊಂಡಿವೆ. ಬೇರೆ ಧರ್ಮ ಮತ್ತು ತತ್ವಸಿದ್ಧಾಂತಗಳ ಪುರಾಣಗಳು ಇಲ್ಲಿ ರಚನೆಗೊಂಡಿವೆ. ಅಪ್ಪಟ ಕಾವ್ಯಗಳು ಪುರಾಣರೂಪದ ಹೆಸರಿನಲ್ಲಿ ಬಂದಿರುವದನ್ನು ನೋಡಬಹುದು.

ತೋಂಟದ ಸಿದ್ಧಲಿಂಗಯತಿಗಳ ಜೀವನವನ್ನೇ ಕಾವ್ಯವಸ್ತುವಾಗಿಸುವ ಮೂಲಕ ಹೊಸ ಪುರಾಣ ಕಾವ್ಯಗಳ ಹೊಸ ಮಾರ್ಗವು; ೨೦ನೆಯ ಶತಮಾನದಲ್ಲಿ ವ್ಯಾಪಕವಾದ ಸಮೃದ್ಧ ಬೆಳೆಯನ್ನು ತಂದಿತು. ಗದಗ ಜಿಲ್ಲೆಯಲ್ಲಿ ಹುಟ್ಟಿದ ಕಾವ್ಯಕೃತಿಗಳು ಬಹುಪಾಲು ಮಠದ ಸ್ವಾಮಿಗಳ ಚರಿತ್ರೆಗಳೆ ಆಗಿವೆ. ಅದರಲ್ಲಿಯೂ ಪ್ರತಿಶತ ೯೫% ಕಾವ್ಯಗಳು ವೀರಶೈವ ಕಾವ್ಯಕೃತಿಗಳಾಗಿವೆ. ನೂರಕ್ಕೆ ನೂರರಷ್ಟು ಸ್ವಾಮಿ ಮಠಪರಂಪರೆಯನ್ನು ಅಲ್ಪಮಟ್ಟಿಗೆ ಅಳಿಸುವಂತೆ ಕಲ್ಯಾಣದ ಶರಣರ, ಅಂಬೇಡ್ಕರ ಅವರ, ತಮಿಳುನಾಡಿನ ಶರಣರ ಚರಿತ್ರೆಗಳಿವೆ. ಆಧುನಿಕ ಕಾಲದ ದಾನಿಗಳಾದಂತ ಅಣ್ಣಯ್ಯ-ತಮ್ಮಯ್ಯ (ಜಕ್ಕಲಿ, ತಾ: ರೋಣ) ಅಂತವರ ಚರಿತ್ರೆಗಳು ಇವೆ. ಈ ಎಲ್ಲ ಚರಿತ್ರೆಗಳು ಮಹಾತ್ಮರ ಬದುಕಿನಲ್ಲಿ ಕೈಕೊಂಡ ಜನಹಿತ ಜನಮುಖಿ ಕಾರ್ಯಬಲದಿಂದ ನಿರೂಪಿತವಾಗಿವೆ.

ಮಠ ಪರಂಪರೆಯ ಸ್ವಾಮಿಗಳ ಚರಿತ್ರೆಗಳಿಗೆ ಲೀಲೆ/ಪವಾಡಗಳನ್ನು ತುಂಬುವ ಕೆಲಸವು ಒಂದು ಉದ್ದೇಶಿತ ವಿಧಾನದಂತೆಯೆ ಕಂಡುಬಂದಿತು. ಈ ಪವಾಡಗಳು ಜನರ ನಾಲಿಗೆಯಲ್ಲಿ ಹುಟ್ಟಿದಂತೆ ಕಲ್ಪನಾಕತೆಗಳಾಗಿವೆ. ಅವುಗಳಿಗೆ ಅದ್ಯತೆ ಸಿಗುವದರಿಂದ ಆ ವ್ಯಕ್ತಿಯ ಚರಿತ್ರೆಯನ್ನು ಭವ್ಯಗೊಳಿಸುವ ದಿವ್ಯತ್ವಕ್ಕೇರಿಸುವ ಅಂಶಗಳು ಮುಖ್ಯವಾಗಿವೆ ಎನಿಸುವುದು. ಆಯಾ ಸ್ವಾಮಿಗಳು ಸಹಜವಾಗಿ ಸಾತ್ವಿಕ ಬದುಕನ್ನು ಬದುಕಿರುವುದೆ ಭವ್ಯ ದಿವ್ಯವಾಗಿರುವದು. ಈ ಪವಾಡಗಳಿಂದ ಅಲಂಕರಿಸುವದೊಂದು ವ್ಯರ್ಥ ಸಾಹಸ ಎನಿಸುವದು. ಪುರಾಣ ಕಾವ್ಯಗಳು ಇದರಿಂದ ಕುಸಿಯುವ ಸಂಭವವಿದೆ.

ಕಲ್ಯಾಣದ ಶರಣರು ಆ ಪರಂಪರೆಯ ಬಳಿವಿಡಿದ ಸ್ವಾಮಿಗಳು ವೀರಶೈವ ಲಿಂಗಾಯತ ತತ್ವವಿವೇಚನೆಗಳು, ಅದಕ್ಕೆ ಪೂರಕವಾದ ಕಥಾ ನಿರೂಪಣೆಗಳು ಇಲ್ಲಿ ಗಮನಾರ್ಹವಾಗಿ ಉಕ್ತಗೊಂಡಿವೆ. ಶರಣರಂತೆ; ಶಿವಾನಂದ, ಸಿದ್ಧಾರೂಢ ಪರಂಪರೆಗಳು, ಅವಧೂತ ಅನುಭಾವಿ ಪರಂಪರೆಗಳು ಕಾವ್ಯಗಳಲ್ಲಿ ಕಾಣಿಸಿವೆ. ಲಿಂಗಾಯತ ತತ್ವ ವಿವೇಚನೆಯೊಂದಿಗೆ ಗುರು ವಿರಕ್ತ ಸ್ವಾಮಿಗಳ ಮಾರ್ಗಗಳು ಇಲ್ಲಿ ಕಾಣಿಸಿವೆ. ಶುದ್ಧ ಚಾರಿತ್ರಿಕ ಕಾವ್ಯಗಳಾದ ಅಕ್ಕಮಹಾದೇವಿ ಪುರಾಣ. ಅಂಬೇಡ್ಕರ ಪುರಾಣಗಳು ವಸ್ತುವಿನ ಸತ್ಯನಿಷ್ಠತೆಯಿಂದ ಗಮನ ಸೆಳೆಯುವವು.

ಕ್ರಿ.ಶ. ೧೯೫೬ರಷ್ಟು ಹಿಂದಿನಿಂದ ೨೦೦೫ರ ವರೆಗೆ ಬರೆಯುತ್ತ ಅರ್ಧ ಶತಕ ಕಾವ್ಯಾನುಸಂಧಾನ ಮಾಡಿದ ಪಂ.ಪುಟ್ಟರಾಜ ಕವಿಗವಾಯಿಗಳು ಬದುಕಿದ್ದಾಗಲೆ ದಂತ ಕತೆಯಾದವರು. ಅವರು ಕಾವ್ಯಾಂಗಗಳನ್ನು ಶಾಸ್ತ್ರಬದ್ಧವಾಗಿ ಅಧ್ಯಯನ ಮಾಡಿದ್ದರ ಫಲವೇ ಅವರ ಕಾವ್ಯಗಳು ಶ್ರೇಷ್ಠ ಶಿಷ್ಠತೆಯನ್ನು ಹೊಂದುವಂತಾಯಿತು. ನವೀನ ಕಲ್ಪನೆ ಭಾವಪ್ರದ ನಿರೂಪಣೆಗಳಿಂದ ಅವರ ಶೈಲಿ ಸಹಜ ಮಾರ್ಗ ಭೂಯಿಷ್ಠ ಎನಿಸುವದು. ಇವರು ಕಾವ್ಯ ಕೃತಿಗಳನ್ನು ರಚಿಸಿದ ಕವಿಗಳು, ಪ್ರವಚನ ಪಟುಗಳಾಗಿದ್ದು, ಪುರಾಣ ಕಾವ್ಯಗಳನ್ನು ಪ್ರವಚನ ಮಾಡಲು ರಚಿಸಿದ್ದಾರೆ. ಇದು ಪಂಡಿತರು ವಿವಿಧ ಕಲಾ ಪಂಡಿತರನ್ನು ಉದ್ದೇಶಿಸಿದ

ಮಾರ್ಗವಲ್ಲ, ಪಾಮರರನ್ನು ಗುರಿಯಾಗಿಸಿಕೊಂಡ ಮಾರ್ಗವಾಗಿದೆ. 'ಬಹುಜನಾಯ ಆನಂದಾಯ' ಎಂಬುದು ಇಲ್ಲಿಯ ವಿಧಾನವಾಗಿದೆ. ಆ ಮೂಲಕ ಬಹು ಸಂಚಲನವು ಸಂವೇದನಾ ಶೀಲವೆನಿಸಿತು. ಇಂದಿಗೂ ಜನಪದದಲ್ಲಿ ಈ ಮಾರ್ಗವೇ ಮನಮುಟ್ಟುವ ಮಾರ್ಗವಾಗಿದೆ. ಇದು ಜನಪದೀಯ ವಿಧಾನವು ಹೌದು. ಈ ಜಿಲ್ಲೆಯ ಕವಿಗಳನೇಕರು ರಚನಾಕಾರ್ಯವಲ್ಲದೇ ಪ್ರವಚನಾ ಕಾರ್ಯ ಮಾಡಿ ಕಾವ್ಯಗಳನ್ನು ಜನರ ಹತ್ತಿರ ತಂದಿದ್ದಾರೆ.

ಪಂ. ಪುಟ್ಟರಾಜ ಕವಿ ಗವಾಯಿಯವರ ಕಾವ್ಯಮಾರ್ಗವನ್ನು ಶಿಷ್ಯ ಪಂ.ರಾಜಗುರು ಗುರುಸ್ವಾಮಿ ಕಲಕೇರಿಯವರು ಅನುಸರಿಸಿದ್ದಾರೆ. ಇರ್ವರು ಭಾಮಿನಿ, ವಾರ್ಧಕ ಷಟ್ಪದಿಗಳಲ್ಲಿ ಸಹಜವಾಗಿ ಬರೆಯಬಲ್ಲರು. ಕುಜಿತೋದದೆಯೂ ಕಾವ್ಯಪ್ರಯೋಗ ಮತಿಯಾದ ಶ್ರೀ ಬ್ಯಾಟಿ ರಾಮಣ್ಣ ಅವರು ಕಾವ್ಯ ಸಾಧನೆಯಲ್ಲಿ ಅದ್ವಿತೀಯತೆಯನ್ನು ಹೊಂದಿದ್ದಾರೆ. ಅದೇ ರೀತಿ ಸದಾಶಿವ ಶಾಸ್ತ್ರಿಗಳು, ಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀ ಅಂಗಡಿ ಕರವೀರಪ್ಪನವರು ಶಿಷ್ಟ ಮಾರ್ಗ ಪರಂಪರೆಯ ರಚನೆಯನ್ನು ಕೈಗೊಂಡರು. ಪಂ.ಸೋಮಶೇಖರ ಶಾಸ್ತ್ರಿಗಳು ಪುರಾಣಿಕಮಠ, ಶ್ರೀ ಪ್ರಭಣ್ಣ ಬೊಮ್ಮನಹಳ್ಳಿ, ಶ್ರೀ ಬಾಲಚಂದ್ರ ಶಾಸ್ತ್ರಿಗಳು, ಶ್ರೀ ಬಸವಂತಾಚಾರ್ಯ ಮನ್ವಾಚಾರ್ಯ, ಪಂ.ಶಿವದೇವ ಶಾಸ್ತ್ರಿಗಳು, ಶ್ರೀ ವಾಸುದೇವ ಹೂಲಿ, ಶ್ರೀ ನೀಲಕಂಠಪ್ಪ ಜಾಡಗೌಡರ ಇವರು ತಮ್ಮ ಕಾವ್ಯದ ವಸ್ತು ವೈವಿಧ್ಯತೆಯಿಂದ ಗಮನ ಸೆಳೆದಿರುವರು.

ಧರ್ಮ ವಿವೇಚನೆ, ಭಕ್ತಿ ನಿರೂಪಣೆ ಬಹುಪಾಲು ಕಾವ್ಯಗಳ ಮೂಲ ಭಿತ್ತಿಯಾಗಿದೆ. ಬೆರಳೆಣಿಕೆಯ ಕೃತಿಗಳು ಮಾನವತೆಯ ನೆಲೆ ಪಡೆದಿವೆ. ಇಲ್ಲಿಯ ಬಹುಪಾಲು ಕೃತಿಗಳು ಭಕ್ತ-ಅನುಯಾಯಿಗಳ ಆಶಯದಂತೆ ನಿರೂಪಣೆಗೊಂಡಿವೆ. ಒಂದರ್ಥದಲ್ಲಿ ಕಾವ್ಯ ಸ್ವಾತಂತ್ರ್ಯಕ್ಕೆ ಇಲ್ಲಿ ಅವಕಾಶಗಳು ಕಡಿಮೆಯಾಗಿವೆ. ಕಾವ್ಯ ರಂಜಕಾಂಶಗಳು ಇಲ್ಲವಾದಂತೆ 'ಲೀಲಾವಿಲಾಸ ಪವಾಡಪ್ರಸರಣ'ವು ಹೆಚ್ಚಾಗುತ್ತ ಸಾಗಿರುವದನ್ನು ಕಾಣುತ್ತೇವೆ. ನೀತಿ ಮತ್ತು ಸಮುದಾಯ ಹಿತಗಳು ಅಲ್ಲಲ್ಲಿ ಮುಖ್ಯವಾಗಿವೆ. ಭವ್ಯತೆಯನ್ನು ನಿರೂಪಿಸುವಲ್ಲಿ ಕೆಲವೊಮ್ಮೆ ಅವಾಸ್ತವವು ಕಾಣಿಸಿಕೊಂಡಿರುವದನ್ನು ಕಾಣಬಹುದು.

◆◆◆

ಅಧ್ಯಾಯ – ೩

ಕವಿಗಳು – ಪುರಾಣಕಾವ್ಯಗಳು

೩.೧. ಪಂ. ಪುಟ್ಟರಾಜ ಕವಿ ಗವಾಯಿಗಳ ಪುರಾಣ ಕಾವ್ಯಗಳು

೩.೨. ಶ್ರೀ ರಾಮಣ್ಣ ಬ್ಯಾಟಯವರ ಪುರಾಣ ಕಾವ್ಯಗಳು

೩.೩. ಪಂ. ರಾಜಗುರು ಗುರುಸ್ವಾಮಿ ಕಲಿಕೇರಿಯವರ ಪುರಾಣ ಕಾವ್ಯಗಳು

೩.೪. ಶ್ರೀ ಕರವೀರಪ್ಪ ಅಂಗಡಿಯವರ ಪುರಾಣ ಕಾವ್ಯಗಳು

೩.೫. ಶ್ರೀ ವಾಸುದೇವ ಹೂಲಿಯವರ ಪುರಾಣ ಕಾವ್ಯಗಳು

೩.೬. ಪಂ. ಸೋಮಶೇಖರ ಶಾಸ್ತ್ರಿಗಳು ಪುರಾಣಿಕಮಠ ಅವರ ಪುರಾಣ ಕಾವ್ಯಗಳು

೩.೭. ಪಂ. ಸದಾಶಿವ ಶಾಸ್ತ್ರಿಗಳ ಪುರಾಣ ಕಾವ್ಯಗಳು

೩.೮. ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ಪುರಾಣ ಕಾವ್ಯ

೩.೯. ಶ್ರೀ ಪ್ರಭಣ್ಣ ಬೊಮ್ಮನಹಳ್ಳಿಯವರ ಪುರಾಣ ಕಾವ್ಯಗಳು

೩.೧೦. ಪಂ. ಬಾಲಚಂದ್ರಶಾಸ್ತ್ರಿ ಹಿರೇಮಠ ಅವರ ಪುರಾಣ ಕಾವ್ಯಗಳು

೩.೧೧. ಪಂ. ಶಿವದೇವ ಶಾಸ್ತ್ರಿಗಳ ಪುರಾಣ ಕಾವ್ಯ

೩.೧೨. ಶ್ರೀ ಬಸವಂತಾಚಾರ್ಯ ಕಾಳಾಚಾರ್ಯ ಮನ್ವಾಚಾರ್ಯರ ಪುರಾಣ ಕಾವ್ಯ

೩.೧೩. ಶ್ರೀ ನೀಲಕಂಠ ಜಾಡಗೌಡರ ಅವರ ಪುರಾಣ ಕಾವ್ಯ.

ಕವಿಗಳು – ಪುರಾಣಕಾವ್ಯಗಳು

೩.೧. ಪಂ. ಪುಟ್ಟರಾಜ ಕವಿ ಗವಾಯಿಗಳ ಪುರಾಣ ಕಾವ್ಯಗಳು

* ಕವಿ
* ಕೃತಿಗಳು

೧. ಉಡುತಡಿಯ ಅಕ್ಕಮಹಾದೇವಿಯ ಪುರಾಣ.

೨. ಹಾವೇರಿಯ ಹುಕ್ಕೇರಿಮಠದ ಶ್ರೀ ಶಿವಬಸವೇಶ್ವರ ಪುರಾಣ.

೩. ಕಲಬುರ್ಗಿ ಶ್ರೀ ಶರಣಬಸವೇಶ್ವರ ಪುರಾಣ.

೪. ತ್ರಿಷಷ್ಠಿ ಪುರಾತನರ ಪುರಾಣವು.

೫. ಶ್ರೀ ಜಗದ್ಗುರು ಸಿದ್ಧೇಶ್ವರ ಪುರಾಣ.

೬. ಶ್ರೀ ವೀರಭದ್ರೇಶ್ವರ ಪುರಾಣ.

೭. ಶ್ರೀ ಯೋಗಿರಾಜ ಪುರಾಣ.

೮. ಶ್ರೀ ಗಂಜೀಗಟ್ಟಿ ಚರಮೂರ್ತೀಶ್ವರ ಪುರಾಣ.

೯. ಶ್ರೀ ಅನ್ನದಾನೇಶ್ವರ ಪುರಾಣ.

೧೦. ಶ್ರೀ ಗುಡ್ಡಾಪುರದ ದಾನಮ್ಮದೇವಿ ಪುರಾಣ.

೧೧. ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಪುರಾಣ.

೧೨. ಗಂಗಾವತಿಯ ಶ್ರೀ ಚನ್ನಬಸವ ಸ್ವಾಮಿ ಪುರಾಣ.

೧೩. ಶ್ರೀ ಗುರು ವೀರಸಿದ್ಧೇಶ್ವರ ಪುರಾಣ.

೧೪. ಚಿಕ್ಕೇನಕೊಪ್ಪದ ಶ್ರೀ ಚನ್ನವೀರ ಶರಣರ ಪುರಾಣ.

೧೫. ಶ್ರೀ ಅಂಕಲಗಿ ಅಡವೀಶ್ವರ ಪುರಾಣ.

೧೬. ಶ್ರೀ ಎಡೆಯೂರು ಸಿದ್ಧಲಿಂಗ ವಿಜಯ ಮಹಾಪುರಾಣ.

೧೭. ಗೂಳ್ಯದ ಶ್ರೀ ಗಾದಿಲಿಂಗೇಶ್ವರ ಪುರಾಣ.

೧೮. ಕಲಕೇರಿ ಶ್ರೀ ಗುರುಮಹಿಮಾ ಪುರಾಣ.

೧೯. ಶ್ರೀ ಶಿವಶರಣೆ ಹೇಮರಡ್ಡಿ ಮಲ್ಲಮಾಂಬೆಯ ಪುರಾಣಂ.

೨೦. ಶ್ರೀ ಸಿರಿಯೂರು ಸಿದ್ಧಲಿಂಗೇಶ್ವರ ಪುರಾಣಂ.

ಪ್ರಕಟಗೊಂಡು ಉಪಲಬ್ಧವಿಲ್ಲದ ಕೃತಿಗಳು

೨೧. ನಾಲತ್ತವಾಡ ಶ್ರೀ ವೀರೇಶ ಶರಣರ ಪುರಾಣ.

೨೨. ಶ್ರೀ ಶ್ರೀಶೈಲ ಪಂಡಿತಾರಾಧ್ಯರ ಪುರಾಣ.

ಕವಿ : (೧೯೧೩-೨೦೧೦).

ಗದುಗಿನ ಶ್ರೀ ಗುರು ಪಂ. ಪುಟ್ಟರಾಜರು ತಮ್ಮ ಜೀವನದ ಸಾಧನೆಗಳಿಂದ ಸಂಸ್ಕೃತಿಯನ್ನೇ ನಿರ್ಮಾಣ ಮಾಡಿದವರು. ಎಲ್ಲರ ಹೃದಯದಲ್ಲಿ ಜೀವಂತ ದೇವರೆಂಬ ಅತ್ಯುನ್ನತ ಭಾವನೆಯನ್ನು ಮೂಡಿಸಿದ್ದಾರೆ. ಆ ಭಾವನೆಯ ಹಿಂದೆ ಅವರ ಸಾಧನೆಯೇ ಕಾರಣವಾಗಿದೆ.

ತ್ರಿಭಾಷೆಗಳನ್ನು ಪರಿಪೂರ್ಣವಾಗಿ ಅರಗಿಸಿಕೊಂಡು ತ್ರಿಭಾಷಾ ಕವಿಯಾಗಿ ಸಾಹಿತ್ಯದ ಕಲೆಯ ಹಲವು ಧಾರೆಗಳಲ್ಲಿ ಶ್ರೇಷ್ಠತೆಯನ್ನು ಮೆರೆದವರು. ಸಾಹಿತ್ಯ ಮತ್ತು ಸಂಗೀತಗಳಲ್ಲಿ ಕಲಾರೂಪವನ್ನು ತುಂಬಿ ಕಲೆಗಳ ಮಹೋನ್ನತ ಶಿಖರಕ್ಕೆ ಏರಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಸಾಹಿತ್ಯಸೃಷ್ಟಿ, ಗಮಕ, ಸಂಗೀತ ಹಾಗೂ ಸಂಗೀತದ ಎಲ್ಲ ರೀತಿಯ ಪರಿಣತ ವಾದ್ಯಗಳನ್ನು ನುಡಿಸುವಲ್ಲಿ ಮತ್ತು ಎರಡೂ ಪದ್ಧತಿಯ ಹಾಡುಗಾರಿಕೆ, ನಾಟಕ ರಚನೆ ಮತ್ತು ರಂಗಕ್ಕೆ ತರುವದು, ರಂಗಭೂಮಿಯ ಸಂಚಲನ, ಪ್ರವಚನ, ಗಮಕಮಾರ್ಗಗಳು ಪಂಡಿತ ಪುಟ್ಟರಾಜರ ಸಾಧನೆಯುದ್ದಕ್ಕೂ ಬೆಳೆಯುತ್ತಾ ಹೋಗುತ್ತವೆ. ಇದರಿಂದ 'ಸಂಸ್ಕೃತಿಯ ರೂವಾರಿ'ಗಳೆಂದು ಸಿದ್ಧವಾಗುತ್ತದೆ.

ಡಾ. ಪಂ. ಪುಟ್ಟರಾಜರ ಸಾಧನೆಯು ಜ್ಯೋತಿಯಿಂದ ಮತ್ತೊಂದು ಜ್ಯೋತಿ ಬೆಳಗುವಂತೆ ಅವರ ದೂರಗಾಮಿ ದರ್ಶನದಿಂದಲೆ ತಿಳಿದು ಬರುವದು. ಅವರ ದಿವ್ಯದರ್ಶನದ ಶಕ್ತಿ ಕಲಿಕೆ, ಕಲಿಕೆಯ ಶಕ್ತಿ ಪಂಚಾಕ್ಷರಿ ಗವಾಯಿಗಳಿಗೆ ಸಲ್ಲುತ್ತದೆ. ಪುಟ್ಟರಾಜರನ್ನು ಈ ನಾಡಿನ ಜ್ಞಾನ ಮೇರುವನ್ನು ಮಾಡಬೇಕೆಂದು ಪಂಚಾಕ್ಷರಿ ಗವಾಯಿಗಳವರು ಆಯಾ ನಾಡಿನಲ್ಲಿ ಇರುವಂತ ಪರಿಣಿತ ಪಂಡಿತರನ್ನು ಕರೆಯಿಸಿ ಅವರಿಂದ ಜ್ಞಾನಾರ್ಜನೆಯನ್ನು ಮಾಡಿಸಿದರು. ಇದರಿಂದ ಪಂಡಿತ ಪುಟ್ಟರಾಜರು ಸಮಾಜ ಸೇವೆಯನ್ನು ತ್ರಿಕರ್ಣಪೂರ್ವಕವಾಗಿ ಮಾಡುವ ಯೋಗ್ಯತೆ ಪಡೆಯಬೇಕೆಂದು ಸದಾ ಆಶೀರ್ವಾದ ಮಾಡುತ್ತಿದ್ದರು. ವೇದಾಂತವನ್ನು ಗದುಗಿನ ಹಾಳುಕೆರೆ ಮಠದಲ್ಲಿ ಶ್ರೀ ಪಂ. ನಾಗಭೂಷಣ ಸ್ವಾಮಿಗಳಿಂದ ಕೊಡಿಸಿದರು. ಈ ವಿಷಯವಾಗಿ ಪುಟ್ಟರಾಜರು ಪಂಚಾಕ್ಷರಿ ಗವಾಯಿಗಳನ್ನು ಉದ್ದಕ್ಕೂ ನೆನೆದಿರುವರು.

'ಪರಮ ಪಂಚಾಕ್ಷರನ ಶಿಷ್ಯಂ'

(ಶ್ರೀ ಶರಣ ಬಸವೇಶ್ವರ ಪುರಾಣ. ಪುಟ : ೫, ಪದ್ಯ : ೧೫.)

'ಪರಮ ಪಂಚಾಕ್ಷರ ಮಹಾತ್ಮಂ ಕರುಣೆ ಗಾಯನ ಗುರು'

(ಶ್ರೀ ಶರಣ ಬಸವೇಶ್ವರ ಪುರಾಣ. ಪುಟ : ೭, ಪದ್ಯ : ೨೩.)

'ಇವನೆ ಮತ್ಪಿತನಿವನೆಮ್ಮ ಗುರುವಿವನೆಮಪಾಲಕನು

ಬಾಂಧವನಿವನೆ ಸರ್ವಸ್ವಂ ನೀವನೆ ದೈವತನು'

(ಹುಕ್ಕೇರಿಮಠ ಶ್ರೀ ಶಿವಬಸವೇಶ್ವರ ಪುರಾಣ. ಪುಟ: ೩, ಪದ್ಯ: ೧೨.)

'ಕಲಿತೆ ಪಂಚಾಕ್ಷರಾರ್ಯನೊಳ್ ಆಲಘುಸಂಗೀತವ ॥'

(ತ್ರಿಷಷ್ಠಿ ಪುರಾತನರ ಪುರಾಣ. ಪುಟ: ೩, ಪದ್ಯ: ೭.)

ಹೀಗೆ ಪಂಡಿತ ಪುಟ್ಟರಾಜರು ಪಂಚಾಕ್ಷರ ಗವಾಯಿಗಳನ್ನು ಪ್ರತಿಕ್ಷಣವು ನೆನೆಯುವುದನ್ನು ಇಲ್ಲಿ ಕಾಣಬಹುದು. ಅವರ ಸಾಧನೆಗೆ ಅಕ್ಷರಶಃ ಮಾರ್ಗ ತೋರಿದವರು. ಪಂ. ಪಂಚಾಕ್ಷರರು.

ಜ್ಞಾನಿಧುರ್ಯಂ ಧರ್ಮಕಾರ್ಯಂ । ಮಾನಿದಾರ್ಯ ಗಾನಕಾರ್ಯ ।

ಜ್ಞಾನಸೂರ್ಯಂ ಶಾಂತಿ ಭಾರ್ಯಂ ಪೊರೆಗೆ ಗುರುವರ್ಯಂ ।

ಧೀನರೈಶ್ವರ್ಯಂ ಸುಯಿರ್ಯಂ । ದಾನಶೌರ್ಯಂ ವಿಜಿತ ತೂರ್ಯಂ ।

ಧ್ಯಾನದಿಂ ಪಂಚಾಕ್ಷರಾರ್ಯಮಾಗಿಸಲಿದನಾರ್ಯಂ ।

ಪಂಚಾಕ್ಷರನ ಸ್ಮರಿಸುತ್ತಲಡಿಗಡಿಗೆ

(ಎಡೆಯೂರು ಸಿದ್ಧಲಿಂಗ ವಿಜಯ ಮಹಾಪುರಾಣ. ಪು: ೩, ಪ: ೧೦.)

ಹೀಗೆ ಪುಟ್ಟರಾಜರ ಹಿಂದೆ ಪಂಚಾಕ್ಷರ ಗವಾಯಿಗಳ ಸತತಶ್ರಮ ಶೃದ್ದೆಗಳಿರುವುದನ್ನು ಕಾಣಬಹುದಾಗಿದೆ. ಪೂಜಾನಿಷ್ಠರು, ಕವಿಗಳು, ತ್ರಿಭಾಷಾ ಪಂಡಿತರು, ಪುರಾಣಿಕರು, ಪ್ರವಚನಕಾರರು, ಸಂಗೀತದ ವಿದ್ವಾನರು ಆಗಬೇಕೆಂಬ ಸತ್ಯ ಸಂಕಲ್ಪವು ಪುಟ್ಟರಾಜರಿಂದ ಸಾಕ್ಷಾತ್ಕಾರಗೊಂಡಿತು.

"ಗುರುವಿಲ್ಲದೆ ಜ್ಞಾನವಿಲ್ಲ" ಎಂಬ ವಿಚಾರದಂತೆ ಪಂಡಿತ ಪುಟ್ಟರಾಜರಿಗೆ ಜ್ಞಾನಗಳನ್ನು ಕೊಡಿಸಿ ಸಂಗೀತ ಸಾಹಿತ್ಯ ಕ್ಷೇತ್ರಗಳಲ್ಲಿ ಅಧಿಪತಿಯಾಗುವಂತೆ ಮಾಡಿದರು. ಪಂಡಿತ ಪುಟ್ಟರಾಜರು ಸೋದರ ಮಾವನವರಾದ 'ಚಂದ್ರಶೇಖರ ಶಾಸ್ತ್ರಿ'ಗಳಿಂದ ಸಂಗೀತ ಕಲಿತುಕೊಂಡರು. ಛಂದಸ್ಸು, ಶಬ್ದಮಣಿ ದರ್ಪಣಗಳನ್ನು ಕಲಿಸಿದವರು ಪಂ. ನಾಗಭೂಷಣ ಶಾಸ್ತ್ರಿಗಳು. ಕಲಿಗಣನಾಥಶಾಸ್ತ್ರಿಗಳು ತರ್ಕಶಾಸ್ತ್ರ, ನ್ಯಾಯಶಾಸ್ತ್ರಗಳನ್ನು ಕಲಿಸಿದರು. ಸಂಸ್ಕೃತವನ್ನು ಸದಾಶಿವ ಶಾಸ್ತ್ರಿಗಳು ಕಲಿಸಿದರು, ಆಧ್ಯಾತ್ಮವನ್ನು ತಾಳಿಕೋಟೆ ಬಸವಪ್ಪ ಬೆಳಗಲಿಮಠ ಹಾಗೂ ವೆಂಕಟಪ್ಪ ಬಳ್ಳಾರಿಯವರಿಂದ ಬ್ರೈಲ್‌ಲಿಪಿಯನ್ನು ಕಲಿತರು. ಹೀಗೆ ಅನೇಕ ವಿದ್ವಾಂಸರು ಪಂ. ಪುಟ್ಟರಾಜರಿಗೆ ಜ್ಞಾನ ಕ್ಷೇತ್ರದ ಮಾರ್ಗದರ್ಶಿಗಳಾಗಿದ್ದರು.

ಸಂಗೀತ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆಯನ್ನು ಮಾಡಿದ ಪಂ. ಪುಟ್ಟರಾಜರು ದಕ್ಷಿಣಾದಿ ಕರ್ನಾಟಕ ಮತ್ತು ಉತ್ತರಾದಿ ಹಿಂದೂಸ್ತಾನಿಯಲ್ಲಿ ಅಪಾರ ಪರಿಣತ ಜ್ಞಾನ ಪಡೆದುಕೊಂಡು ಸಂಗೀತದ ಕೃತಿಗಳನ್ನು ರಚನೆ ಮಾಡಿದರು. ಸಂಗೀತ ಶಾಸ್ತ್ರಜ್ಞಾನ ಕುರಿತು 'ಗಾನಸುಧಾ ಭಾಗ-೧', 'ಗಾನಸುಧಾ ಭಾಗ-೨', ಮತ್ತು 'ತಾಲಪಂಚಾಕ್ಷರ'ವೆಂಬ ಕೃತಿಗಳನ್ನು ರಚಿಸಿದ್ದಾರೆ. ಸೃಜನ ಸಾಹಿತ್ಯದಲ್ಲಿ ಅವರ ಪ್ರತಿಭೆ ಸಿಂಹಪಾಲು ವ್ಯಕ್ತವಾಗಿದೆ. ಪಂಡಿತರಿಗೆ ಪ್ರಿಯವಾದ

ವಾರ್ಧಕ ಷಟ್ಪದಿಯಲ್ಲಿ ಮತ್ತು ಜನಪ್ರಿಯವಾದ ಭಾಮಿನಿ ಷಟ್ಪದಿಯಲ್ಲಿ ಇವರು ಕಾವ್ಯಗಳನ್ನು ರಚಿಸಿದ್ದಾರೆ. ಹಿಂದಿ ಭಾಷೆಯಲ್ಲಿಯೂ ಕೂಡಾ ಪುರಾಣಗಳನ್ನು ರಚಿಸಿರುವದನ್ನು ಕಾಣಬಹುದಾಗಿದೆ.

ಪುರಾಣ ಕಾವ್ಯಗಳ ಕ್ಷೇತ್ರದಂತೆಯೇ ನಾಟಕ ರಚನೆಯಲ್ಲಿ ಪಂ. ಪುಟ್ಟರಾಜರ ಸಾಧನೆ ಹಿರಿದಾಗಿದೆ. ೧೯ ನಾಟಕ ಕೃತಿಗಳನ್ನು ರಚಿಸಿದ್ದಾರೆ. ಬಹುಪಾಲು ಅವರದೇ ಆದ ವೃತ್ತಿ ರಂಗಭೂಮಿಯಲ್ಲಿ ಅವು ರಂಗವನ್ನೇರಿವೆ. ಕನ್ನಡದಲ್ಲಿ ೧೧ ಸಂಸ್ಕೃತದಲ್ಲಿ ೦೫ ಹಿಂದಿಯಲ್ಲಿ 'ಸಿದ್ಧಾಂತ ಶಿಖಾಮಣಿ'ಯ ಅನುವಾದ (ಕಾವ್ಯ) ಮಾಡಿದ್ದಾರೆ. ಕನ್ನಡದಲ್ಲಿ ವಚನ ಸಂಕಲನ ಮತ್ತು ಭಾವಗೀತೆಗಳನ್ನು ರಚಿಸಿದ್ದಾರೆ. ಒಟ್ಟು ೨೦೦೫ರ ವರೆಗೆ ೭೧ ಕೃತಿಗಳನ್ನು ರಚಿಸಿದ್ದಾರೆ. (ಎಡೆಯೂರು ಶ್ರೀ ಸಿದ್ಧಲಿಂಗೇಶ್ವರ ಪುರಾಣ : ಬೆನ್ನುಡಿ) ವಿಷಯ ಜ್ಞಾನ, ಅನುಭಾವ ತತ್ವಜ್ಞಾನ ಮತ್ತು ದರ್ಶನಗಳಿಂದ ತುಂಬಿ ಪ್ರೌಢವಾದ ಭಾಷಾ ಬಳಕೆ ಮಾಡಿ, ಪಾಂಡಿತ್ಯಮಯವಾಗಿ, ಹೃದ್ಯವಾಗಿ ಪಂಡಿತ ಪುಟ್ಟರಾಜರು ಬರೆಯುತ್ತಾರೆ. ಶಾಸ್ತ್ರ ಖಚಿತತೆ ಅವರ ಬರಹದ ಜೀವಾಳವಾಗಿದೆ.

ಪಂ. ಪುಟ್ಟರಾಜರ ಸಾಹಿತ್ಯದ ವಸ್ತು ಆಧ್ಯಾತ್ಮವಾಗಿದೆ. ಶರಣರ ಮತ್ತು ಪರಂಪರೆಯ ಶಿವಭಕ್ತರ ಜೀವನಸಾಧನೆ, ದರ್ಶನ, ಅವರ ಸೇವೆ, ಉದಾತ್ತತೆಯನ್ನು ಕಾವ್ಯ ಮತ್ತು ನಾಟಕಗಳ ಮೂಲಕ ಎತ್ತಿ ಹೇಳುವದು ಇಲ್ಲಿ ಮುಖ್ಯವಾಗಿದೆ. ಆಧುನಿಕ ಪುರಾಣ ಕಾವ್ಯ ಪರಂಪರೆಯಲ್ಲಿ ಪಂ. ನಾಗಭೂಷಣ ಶಾಸ್ತ್ರಿಗಳು, ದ್ಯಾಂಪೂರಚನ್ನಕವಿಗಳು, ಪಂ. ವೈ. ನಾಗೇಶ ಶಾಸ್ತ್ರಿಗಳ ಎತ್ತರವನ್ನು ಹೊಂದಿದ ಕೀರ್ತಿ ಪಂಡಿತ ಪುಟ್ಟರಾಜರಿಗೆ ಸಲ್ಲುತ್ತದೆ. ಇವರು ತಮ್ಮ ಅನುಪಮ ಸಾಧನೆ–ಶ್ರೇಯಸ್ಸು; ವಸ್ತು ವಿವೇಚನೆಗೆ ತಮ್ಮ ಪರಂಪರೆಯ ಶರಣರೆ ಕಾರಣವೆಂದಿರುವರು.

ಆರ್ಯರಂ ಸತ್‌ಪ್ರಮಥವರ್ಯರಂ ಗುರು ಶಿವಾ
ಚಾರ್ಯರಂ ಸದ್‌ವೃತ್ತ ಪಥದುರ್ಯರಂ ಶಿವಧರ್ಮ
ಕಾರ್ಯರಂ ಸದ್‌ವೃತ್ತಿ ಚರ್ಯರಂ ಸುಗುಣ ಮಣಿದಾರ್ಯರ ॥
ನಿತ್ಯಮೊಲಿದುವೀರ್ಯರಂ ಭವಜಲಧಿತಾರ್ಯರಂ
ಹೃತ್ ಕಮಲ ಸೂರ್ಯರಂ ಸಮಾತೀತತೂರ್ಯರಂ
ರಿಪುಗಣವಿದಾರ್ಯರಂ ಬಲವಂದನಾರ್ಯರಂ ನುತಿಪೆಂ

(ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಪುರಾಣ. ಪುಟ : ೩, ಪದ್ಯ : ೬.)

ಕಲ್ಯಾಣದ ಶರಣರನ್ನು, ಮಧ್ಯಕಾಲದ ಶರಣರನ್ನು, ಸಂಪ್ರದಾಯದ ಸ್ವಾಮಿಗಳ ಜೀವನವನ್ನು ವೀರಶೈವ ವಚನಗಳನ್ನು ಹಾಗೂ ಸಿದ್ಧಾಂತ ಶಿಖಾಮಣಿ ಇವೆಲ್ಲವನ್ನು ಕಾವ್ಯಕ್ಕೆ ವಸ್ತುವನ್ನಾಗಿ ಬಳಸಿಕೊಂಡಿರುವದನ್ನು ಕಾಣಬಹುದಾಗಿದೆ. ಪಂ. ಪುಟ್ಟರಾಜರು ಗುರುಕುಲ ಪರಂಪರೆಯಲ್ಲಿ

'ಪುಟವಿಕ್ಕಿದ ಚಿನ್ನ', 'ದೀಪ್ತಿಗೊಂಡ ದೀಪ', 'ಅರಳಿದ ಅರಳು' ಹೀಗಾಗಿ ಶರಣರ ಮಾರ್ಗ ಇವರ ಕಾವ್ಯವಾಯಿತು.

ಪಂ. ಪುಟ್ಟರಾಜರು ಅಂಧರಾಗಿದ್ದು ಬರಿ ಬಾಯಲ್ಲಿ ನುಡಿಯುತ್ತಾ ಹೋದುದನ್ನು ಇನ್ನೊಬ್ಬರು ಬರೆದುಕೊಳ್ಳುವದು ಇವರ ಲೇಖದ ಪದ್ಧತಿಯಾಗಿದೆ. "ಡಾ ಪಂಡಿತ. ಪುಟ್ಟರಾಜರು ತಂದೆ-ತಾಯಿಯಿಂದ ಬಂದ ವೃತ್ತಿ ಪರಂಪರೆಯನ್ನು ಚಿತ್ ಮಾಡಿಕೊಂಡು ನಾಡಿನ ಸೇವೆ ಮಾಡುತ್ತಿರುವುದು ಸಮಾಜದ ಭಾಗ್ಯವಾಗಿರುವುದು. (ಜ್ಞಾನದೇಗುಲ ಪುಟ. ೭೦) ಪಂ. ಪುಟ್ಟರಾಜ ಕವಿ ಗವಾಯಿಗಳವರು ಶ್ರೇಷ್ಠ ಮತ್ತು ಶಿಷ್ಠ. ಪದ್ಧತಿಯ ಕಾವ್ಯರಚನೆ ಮಾಡಿದ್ದಾರೆ. ಹಿಂದಿನ ಪುರಾಣ ಕಾವ್ಯ ಪರಂಪರೆಯನ್ನು ಮುಂದುವರೆಸಿದ್ದಲ್ಲದೆ ಆಧುನಿಕ ಕಾವ್ಯ ಪರಂಪರೆಯಲ್ಲಿ ಕಾವ್ಯಕ್ಕೆ ಹೊಸದಿಕ್ಕು ಹಾಗೂ ಪುರಾಣದ ನಾಯಕನಾಗಿ, ಐತಿಹಾಸಿಕ ವ್ಯಕ್ತಿಯಾಗಿ ಎಲ್ಲರನ್ನು ನಿಬ್ಬೆರಗಾಗಿಸುವ ಅದ್ಬುತ ಕಾರ್ಯಗಳನ್ನು ಎಸಗಿ ಯುಗ ಪರಿವರ್ತನೆಗೆ ಕಾರಣರಾಗುತ್ತಾರೆ.

ಮಹಾಪುರುಷರ ಜೀವನದಲ್ಲಿ ನಡೆದ ಘಟನೆಗಳನ್ನು ತನ್ನ ಕಾವ್ಯದಲ್ಲಿ ಅಳವಡಿಸಿಕೊಂಡು ಅವರ ಸಾಧನೆ ಸತ್ಯಕತೆಯನ್ನು ಜನಸ್ತೋಮರಿಗೆ ಪುರಾಣ ಕಾವ್ಯದ ಮೂಲಕ ಪರಿಚಯಿಸಿದರು. ಅವರು ಬಳಸಿದ ಭಾಷೆ ಸಾಮಾನ್ಯ ಜನರಿಗೆ ತಿಳಿಯುವಂತೆ ಬರೆದ ಕೀರ್ತಿ ಅವರದು.

ನಡೆ ಗಲಿತಿಹಳು ತಾಯಿಯಲ್ಲಿಯೆ
ನುಡಿಗಲಿತಿಹಳು ತಂದೆಯಲ್ಲಿಯೆ
ಬಿಡದಲಕ್ಷರ ವಿದ್ಯೆಯಂ ಗುರುಮಠದಿ ಕಲಿತಿಹಳು ।
ಸಡಗರದೆ ಶಿವಯೋಗ ವಿದ್ಯೆಯ
ಮೃಡ ಗುರುವಿನಂ ಕಲಿತು ಲಿಂಗಮಂ ॥

(ಶಿವಶರಣೆ ಗುಡ್ಡಾಪುರ ದಾನಮ್ಮ ದೇವಿಯ ಪುರಾಣಂ. ಪುಟ : ೧೦೬, ಪ : ೬.)

ಚಾಮರಸನ ಪ್ರಭುಲಿಂಗ ಲೀಲೆಯ 'ನುಡಿಕಲಿಸಿದಳರಗಿಳಿಗೆ' ಎಂಬುದರ ಛಾಯೆ ಇಲ್ಲಿದ್ದರೂ ಅದು 'ರೂಪ'ಕ್ಕೆ ಸಂಬಂಧಿಸಿದ್ದು, ಅರ್ಥದ ಪರಿಸರ ಬೇರೆಯಾಗಿ ಸ್ಫುಟವಾದ ನವೀನ ಪದ್ಯವಾಗಿ ಇದು ಮೂಡಿ ಬಂದಿದೆ. ಒಟ್ಟು ಇಪ್ಪತ್ತೆರಡು ಪುರಾಣ ಕಾವ್ಯಗಳಲ್ಲಿ ೨೦,೦೦೦ ಭಾಮಿನಿ ಷಟ್ಪದಿಗಳನ್ನು ಬರೆದ ಪಂ. ಪುಟ್ಟರಾಜರದು ಅದ್ಭುತವೆನಿಸುವ ಸಾಧನೆಯಾಗಿದೆ. ಮಹಾಭಾರತ ಕಾವ್ಯದಲ್ಲಿ ೨೪,೦೦೦ ಶ್ಲೋಕಗಳು ಬಂದರೂ ಅದು ಏಕ ಏಕೃತ ಅಲ್ಲ. ಅದನ್ನು ಗಮನಿಸದಿದ್ದರೂ ಮಹಾಭಾರತದ ಒಟ್ಟು ಸಾಲುಗಳು ೪೮,೦೦೦ ಮಾತ್ರವಾಗಿವೆ. ಅದೇ ಪುಟ್ಟರಾಜರದ್ದು ಒಂದು ಲಕ್ಷ ಇಪ್ಪತ್ತುಸಾವಿರದ ಸಾಲುಗಳ ಸಾಹಿತ್ಯವಾಗಿದೆ. ಯಾವ ಯುಗದಲ್ಲಿಯೂ ಇಂತಹ ಸಾಧನೆ ಆಗಿಲ್ಲ. ಡಾ. ಪಂ. ಪುಟ್ಟರಾಜರ ಸಾಧನೆ "ಸಾಗರಕ್ಕೆ ಸಾಗರವೇ ಸಾಕ್ಷಿ, ಪರ್ವತಕ್ಕೆ ಪರ್ವತವೇ ಸಮಾನ" ಎಂಬ ರೀತಿಯ ಸಾಧನೆಯಾಗಿದೆ.

೩.೧.೧ ಉಡುತಡಿಯ ಅಕ್ಕಮಹಾದೇವಿ ಪುರಾಣ

"ಉಡತಡಿಯ ಅಕ್ಕಮಹಾದೇವಿ ಪುರಾಣಂ" ಇದು ಪಂ. ಪುಟ್ಟರಾಜರ ಪ್ರಥಮ ಕೃತಿಯಾಗಿದ್ದು, ೧೯೫೭ರಲ್ಲಿ ಹಳಗನ್ನಡ ಭಾಷಾ ಶೈಲಿಯಲ್ಲಿ ರಚನೆಗೊಂಡಿದೆ. ಇದಕ್ಕೆ ಪುರಾಣವೆನ್ನುವದಕ್ಕಿಂತ ಇದು ವಾಸ್ತವವಾಗಿ ಕಾವ್ಯರೂಪದಲ್ಲಿದ್ದು; ಪಂಡಿತ ಮಾರ್ಗದ ವಾರ್ಧಕ ಷಟ್ಪದಿಯಲ್ಲಿ ರಚನೆಗೊಂಡಿದೆ. ಅವರ ಪುರಾಣ ಕೃತಿಗಿಂತ ಇದು ಶ್ರೇಷ್ಠವಾಗಿರುವದನ್ನು ಇಲ್ಲಿ ಕಾಣಬಹುದಾಗಿದೆ. ಇದು ಅಕ್ಕಮಹಾದೇವಿಯ ವಚನಗಳ ಶುದ್ಧ ಕಾವ್ಯ ರೂಪವೆನಿಸಿದೆ. ಇದಕ್ಕೆ ಪುರಾಣವೆನ್ನಲು ಕಾರಣ ಇದನ್ನು ಕವಿಗಳು ಪ್ರವಚನ ರೂಪದಲ್ಲಿ ಹೇಳುತ್ತಿದ್ದರು. ಇನ್ನೊಂದು ಸಂಗತಿಯೆಂದರೆ ಬಹುಪಾಲು ಪುರಾಣಗಳು ಹೇಳಿ ಬರೆಯಿಸಿದಂತವುಗಳು. ಇದು ಮಾತ್ರ ಸ್ವಯಂ ಸ್ಫೂರ್ತಿಯಿಂದ ಬರೆದಿರುವದಾಗಿದೆ.

'ಶರಣರ ಸಮ್ಯಗ್‌ಜ್ಞಾನ ಸುಖವನಾಸ್ವಾದಿಸಲು ಹರಸತಿಯೆ ಧರೆಗಿಳಿದು ಬಂದಿಹಳು' ಎಂದು ಈ ಪುರಾಣದ ತಿರುಳಿನಲ್ಲಿ ತಿಳಿದು ಬರುವದು. ಅಕ್ಕನ ಶುದ್ಧ ಚಾರಿತ್ರ್ಯದ ಕಥೆಯನ್ನು ಎಳೆ ಎಳೆಯಾಗಿ ಬಿಡಿಸುತ್ತಾ ಶರಣರ ಸಂಘವನ್ನು ಸೇರುವ ಅಕ್ಕನ ವ್ಯಕ್ತಿತ್ವದ ಶಕ್ತಿಯನ್ನು ತಿಳಿಸುತ್ತಾ ಸಾಗುವದು.

ಅಕ್ಕರತೆಯ ಅಂಗವೇ ಮಾದೇವಿ
ಲಿಂಗವೇ ಪತಿ ಮಲ್ಲಿಕಾರ್ಜುನ
ದುಷ್ಕಾಮವೇ ಕೌಶಿಕ
ನಿಷ್ಕಾಮವೇ ತ್ಯಾಗ, ಸತ್ಕಾಮಮು
ಉಡುತಡೆಯು
ಚಿತ್ಕಳೆಯದೇ ಕಲ್ಯಾಣ ಮಂಟಪವು
ಚಿತ್ಕಳೆಯೇ ಪ್ರಭುರಾಯನು.

(ಉಡುತಡಿಯ ಅಕ್ಕಮಹಾದೇವಿ ಪುರಾಣ. ಪುಟ : ೪, ಪದ್ಯ : ೧೧)

ಕಾವ್ಯವು ಅಕ್ಕಮಹಾದೇವಿಯ ದಿವ್ಯ ಶುಚಿತ್ವದ ಜೊತೆ ಆಧ್ಯಾತ್ಮಿಕದ ಸಾಧನೆಯನ್ನು ತಿಳಿಸುತ್ತದೆ. ಪ್ರಭುಲಿಂಗ ಲೀಲೆಯಲ್ಲಿ ಕಂಡ ಆಧ್ಯಾತ್ಮಿಕ ಅರ್ಥ ಸಂಕೇತವು ಇಲ್ಲಿಯೂ ಕಂಡು ಬರುವುದು. ಈ ರೀತಿಯಾಗಿ ಕಾವ್ಯವು ಅರ್ಥೈಸಿಕೊಂಡು ಹೋಗುತ್ತದೆ. ಪಂ. ಪುಟ್ಟರಾಜರ ಕಾವ್ಯ ಶಕ್ತಿಯನ್ನು ಕಾವ್ಯದಲ್ಲಿ ಕಾಣಬಹುದಾಗಿದೆ. ಅವರು ಸಂಕ್ಷಿಪ್ತವಾಗಿ ಅಕ್ಕನ ಚರಿತ್ರೆಯನ್ನು ತಿಳಿಸುತ್ತಾರೆ.

"ಪುಟ್ಟರಾಜರಿಗೆ ನಿಮ್ಮ ಕಾವ್ಯಗಳಲ್ಲಿ ಸಂತೃಪ್ತಿ ಕೊಟ್ಟ ಕೃತಿ ಯಾವುದು ಎಂದು ಕೇಳಿದರೆ ಅಕ್ಕಮಹಾದೇವಿ ಪುರಾಣ ಎಂದು ಹೇಳಿದರಂತೆ." (ಜ್ಞಾನದೇಗುಲ) ಹೀಗೆ ಅವರು

ಬರೆದಿರುವ ಕೃತಿಯಲ್ಲಿ ಅದು ಅಭಿಜಾತ ಕೃತಿಯಾಗಿದೆ. ಇದು ಅಭೂತಪೂರ್ವವಾದ ಪ್ರಯತ್ನವಾಗಿದೆ. ಆ ಬಳಿಕ ಕನ್ನಡ ಸಾಹಿತ್ಯದಲ್ಲಿ 'ಕದಳಿ ಕರ್ಪೂರ' ಮತ್ತು 'ಭವ್ಯಮಾನವ' ಕೃತಿಗಳು ರಚನೆಗೊಂಡಿವೆ, ಇವು ಆಧುನಿಕ ರೂಪದ ಕೃತಿಗಳು.

ಅಕ್ಕಮಹಾದೇವಿಯ ಚರಿತ್ರೆಯನ್ನು ಮೊದಲು ನಿರೂಪಿಸಿದ ಕೀರ್ತಿ ಹರಿಹರನಿಗೆ ಸಲ್ಲುತ್ತದೆ. ಪಾಲ್ಕುರಿಕೆ ಸೋಮನಾಥನು ನಾಮಮಾತ್ರ ಕಾವ್ಯದಲ್ಲಿ ತಂದಿರುವುದನ್ನು ಕಾಣಬಹುದು. ನಂತರ ಚಾಮರಸನ ಕಾವ್ಯದಲ್ಲಿ ಒಂದು ಪೂರ್ಣ ಹಂತ ತಲುಪಿತು. ಅದೇ ಸಂದರ್ಭದಲ್ಲಿ ಶೂನ್ಯ ಸಂಪಾದನೆಯಲ್ಲಿ ತಾತ್ವಿಕ ವಿಚಾರ ಹಾಗೂ ಅಕ್ಕನ ದರ್ಶನ ಚರಿತ್ರೆ ವ್ಯಕ್ತಗೊಂಡಿದೆ. ಈ ಎರಡು ಮೇರು ಕೃತಿಗಳ ಸಾರವನ್ನು ಪಂ. ಪುಟ್ಟರಾಜರು ತಮ್ಮ ಪುರಾಣದಲ್ಲಿ ತಂದಿರುವದನ್ನು ನೋಡುತ್ತೇವೆ.

ಅಕ್ಕಮಹಾದೇವಿಯ ಶಿವಭಕ್ತಿ, ಅವಳ ತತ್ವನಿಷ್ಠೆ, ಭಗವತ್ ಪ್ರೇಮ, ಹೀಗೆ ಹಲವಾರು ಅಂಶಗಳನ್ನು, ಶರಣತತ್ವವನ್ನು, ಜೀವನದುದ್ದಕ್ಕೂ ಅಳವಡಿಸಿಕೊಂಡು ಮಹಾಶರಣೆಯಾಗಿ ಬೆಳೆದು ಲೋಕಾತ್ಮಳಾದವಳ ಕಥೆಯನ್ನು ಇಲ್ಲಿ ಪಂ. ಪುಟ್ಟರಾಜರು ಬಹಳ ವಿಸ್ತಾರವಾಗಿ ತಮ್ಮ ಪದಪುಂಜಗಳಿಂದ ಹೇಳಿ ಗಮನ ಸೆಳೆಯುತ್ತಾ ಹೋಗಿದ್ದಾರೆ.

ಭಕ್ತಿಸುಜ್ಞಾನ ವೈರಾಗ್ಯಗಳು ಧರೆಯೊಳಗೆ
ವ್ಯಕ್ತಿಯಿಂದಾಗಿಳಿದು ಬಂದವೋಯೆಂಬಂತೆ
ಭಕ್ತರಾದ ಸುಮತಿ ನಿರ್ಮಲರೊಳುಪಿದಿಸಿದಳು
ಘನ ಮಹಾದೇವಿಯಕ್ಕಂ (ಪುಟ : ೬, ॥ ಪ ॥)

ಹೀಗೆ 'ಅಕ್ಕಳ ಬದುಕು ಭಕ್ತಿ-ಜ್ಞಾನ-ವೈರಾಗ್ಯಗಳ ಮುಪ್ಪರಿ'ಯಾಗಿದೆ ಎಂಬುದನ್ನು ಇಲ್ಲಿ ಕಾಣಬಹುದಾಗಿದೆ. ಅವಳು ಸಣ್ಣವಳಿರುವಾಗಲೆ ತಂದೆ-ತಾಯಿಗಳು ಪೂಜಾ ನಿಷ್ಠರಾಗಿದ್ದರಿಂದ, ಅವಳ ಮೇಲೆ ಗಾಢವಾದ ಪ್ರಭಾವವು ಬೀರಿದ್ದನ್ನು ಇಲ್ಲಿ ಕಾಣಬಹುದಾಗಿದೆ. ಮುಂದೆ ಬೆಳೆದು ದೊಡ್ಡವಳಾದ ಬಳಿಕ ಅವಳ ಅಲೌಕಿಕ ಸೌಂದರ್ಯಕ್ಕೆ ಮನಸೋತ ಕೌಶಿಕ ಮಹಾರಾಜ ಧರ್ಮ, ಅಧರ್ಮಗಳು ಎನ್ನದೆ ಆ ಕ್ಷಣ ರೂಪಕ್ಕೆ ಮನಸೋತು ಮದುವೆಯಾಗಲು ಇಚ್ಛಿಸಿದಾಗ, ಅವಳು ಲಿಂಗಪೂಜಾ ನಿಷ್ಠಳಾಗಿ ಇದ್ದಾಗ ಮಾತ್ರ ನೀನು ನನ್ನನ್ನು ಮುಟ್ಟು ಎಂದಾಗ ಅಲ್ಲಿಂದ ರಾಜನು ಅವಳಗೆ ಸೋಲುವದು, ಅಲ್ಲಿಂದ ಶರಣರ ಸಂಗವನ್ನು ಅಕ್ಕ ಸೇರುವದನ್ನು ಎಳೆ ಎಳೆಯಾಗಿ ಪುಟ್ಟರಾಜ ಕವಿಗಳು ವಿವರಿಸಿದ್ದಾರೆ.

ತನುಕರಗದವರಲ್ಲಿ ಮಜ್ಜನವ ನೊಲ್ಲೆಯೈ
ಮನಕರಗದವರಲ್ಲಿ ಪುಷ್ಪಗಳನೊಲ್ಲೆಯೈ
ನೆನೆದು ಪದುಗಳಿಗರಾಗದವರಲ್ಲಿ ಗಂಧವಂ ನೀನೊಲ್ಲೆಯಯ್ಯ ದೇವಾ ।

ಇನಿತು ಭೇದವದಿಲ್ಲದವರೊಳಕ್ಷತೆಯನೊಲ್ಲೆ
ಘನಭಾವ ಶುದ್ಧವಿಲ್ಲದವರ ಧೂಪವನೊಲ್ಲೆ
ತಣಿದರಿವು ಕಣ್ದೆರೆಯದವರಲ್ಲಿ ಕಪುರವನೊಲ್ಲೆಯೈ ನೀನು ಶಿವನ ।
ಪರಿಣಾಮಕಾಮಿಳಾಗದಿರಲೊಲ್ಲೆ ನೈವೇದ್ಯವನು
ವರಗುಣಿಗಳಾಗದಿರಲೊಲ್ಲೆ ತಾಂಬೂಲವನು
ನೆರೆ ಹೃದಯ ಶುದ್ಧವಿರದವರಲ್ಲಿ ಇರಲೊಲ್ಲೆಯೆನ್ನೊಳೇನುಂಟೆಂದು ನೀ
ಮೆರೆವೆಯನ್ನೀ ಕರತಲವನಿಂಬುಗೊಂಡೈ ಪೇಳು ವರಚೆನ್ನ ಮಲ್ಲಿನಾಥನೆ ॥

(ಪುಟ : ೮೮. ಪದ್ಯ : ೩)

ಅಕ್ಕನು ಅರಮನೆಯನ್ನು ತಿರಸ್ಕರಿಸಿ, ದೇಹ ವ್ಯಾಮೋಹವನ್ನು ಬಿಟ್ಟು ದಿಗಂಬರೆಯಾಗಿ, ಕೇಶಪಾಶವನ್ನು ಬಿಚ್ಚಿ ಹೊರಟಳು. ಮುಂದೆ ಅಕ್ಕ ಹಲವಾರು ವಚನಗಳನ್ನು ಜನ–ಮನಕ್ಕೆ ತಿಳಿಸುತ್ತಾ ಹೋಗುವಳು. ಅಕ್ಕನು ಅನುಭವ ಮಂಟಪಕ್ಕೆ ಬಂದಾಗ ಅವಳು ಅರಬೆತ್ತಲೆಯಾದ ವಿಷಯವೇ ಮೊದಲು ಚರ್ಚೆಗೆ ಬಂದಿತು. ಇಲ್ಲಿ ಸಂಸಾರ ನಿರಸನದಂತೆ, ದೇಹ ನಿರಸನವನ್ನು ತಾತ್ವಿಕವಾಗಿ ಹೇಳಿ ಅಕ್ಕನು ಗೆಲುವನ್ನು ಪಡೆಯುತ್ತಾಳೆ. ದೇಹಕ್ಕಿಂತ ಮನಸ್ಸು, ಮನಸ್ಸಿಗಿಂತ ಆತ್ಮ, ಆತ್ಮಕ್ಕಿಂತ ಅರಿವು ದೊಡ್ಡದೆಂದು ತಿಳಿಸಿ ಗೆಲುವು ಸಾಧಿಸಿದ್ದಾಳೆ. ಇದರಿಂದ ಆಕೆಯ ವ್ಯಕ್ತಿತ್ವ "ಪುಟಕ್ಕಿಟ್ಟ ಕುಂದಣದಂತೆ, ತೇದ ಗಂಧದಂತೆ ಹೊಳಪುಳ್ಳುದ್ದಾಗಿದೆ." ಮುಂದೆ ಗೆಲವು ಸಾಧಿಸಿ ಅಕ್ಕ ಶ್ರೀಶೈಲಕ್ಕೆ ಹೋಗುತ್ತಾಳೆ. ಮಾರ್ಗದಲ್ಲಿ ಮರಗಿಡಬಳ್ಳಿ, ಲತೆ, ಪಕ್ಷಿ ಹೀಗೆ ಅನೇಕ ನೈಸರ್ಗಿಕ ಜೀವಿಗಳ ಜೊತೆ ಸಂಭಾಷಿಸಿ ಅವುಗಳ ಅಮೃತೋಪಮ ಉಪಕಾರ ಗುಣವನ್ನು ಸ್ಮರಿಸುತ್ತಾಳೆ.

ನಿಸರ್ಗದಲ್ಲಿರುವ ಜೀವ ಜಗತ್ತೆಲ್ಲಾ ಶಿವನೇ ಎಂದು ಭಾವಿಸುವ ಆಕೆಯ ವ್ಯಕ್ತಿತ್ವ ಮೇರುವಾಗಿದೆ.

ಉರುತನುವಿನೊಳಗಿರ್ದು ತನುವಗೆದ್ದಳು ಮತ್ತ
ಮುರು ಮನದೊಳಿರ್ದು ಮನಮಂ ಗೆದ್ದವಳು ಮ
ತ್ತುರು ವಿಷಯದೊಳಗಿರ್ದು ವಿಷಯಮಂ ಗೆಲ್ದಿರುವಳಂಗಸಂಗವತೆರೆಯುತಾ ॥

(ಪುಟ : ೧೪೦, ಪದ್ಯ : ೧೭.)

ಬದುಕಿನಲ್ಲಿ ಎಲ್ಲ ತರಹದ ಜಯ ಸಾಧಿಸಿ ದಿಗ್ಗಜವನ್ನೆ ಸೂಚಿಸುವ ಅವಳು ಹೆಂಗಸೆನ್ನುವದನ್ನು ಕಿತ್ತೆಸೆದಳು. "ಜಗದ ಜಂಗುಳಿಗೆಲ್ಲಾ ಬೆಂಗೋಲನೆತ್ತಿದ ಮಾಯೆಯನ್ನು ಕೊಂದ ಅಲ್ಲಮನಂತೆ ಅಕ್ಕನು ಮಾಯಾ ಕೋಲಾಹಲೆ" ಎನಿಸಿದಳು. "ಹೆಂಗಸೆಂಬ ಭಾವ ಬಯಲು ಬೆರೆಸಿತ್ತು" ಎಂದು ವಚನಕಾರ ಮಡಿವಾಳ ಮಾಚಿದೇವ ಸ್ತುತಿ ಮಾಡಿರುವದು ಅತ್ಯಂತ ಯುಕ್ತವಾಗಿರುವದು.

೩.೧.೨ ಹಾವೇರಿ ಹುಕ್ಕೇರಿಮಠದ ಶ್ರೀ ಶಿವಬಸವೇಶ್ವರ ಪುರಾಣ

ಪಂ. ಪುಟ್ಟರಾಜರು ಬರೆದ ೨ನೇ ಪುರಾಣ ಕಾವ್ಯವು ಕ್ರಿ.ಶ. ೧೯೬೩ರಲ್ಲಿ ಪ್ರಕಟಗೊಂಡ ಹಾವೇರಿ ಹುಕ್ಕೇರಿಮಠದ ಶ್ರೀ ಶಿವಬಸವೇಶ್ವರ ಪುರಾಣವು. ಈ ಕೃತಿಯು ಭಾಮಿನಿ ಷಟ್ಪದಿಯಲ್ಲಿ ರಚನೆಗೊಂಡಿದೆ. ೧೧೯೫ ಪದ್ಯಗಳನ್ನು ಹೊಂದಿದೆ. ೨೨ ಸಂಧಿಗಳನ್ನು ಹೊಂದಿರುವ ಈ ಕೃತಿಯು ಶಿವಬಸವೇಶ್ವರರವರ ಜೀವನವನ್ನು ಒಳಗೊಂಡಿದೆ. ಹಾನಗಲ್ಲ ಕುಮಾರಸ್ವಾಮಿಯ ಪ್ರಭಾವ ಹಾಗೂ ಅವರ ಸಮಾಜ ಸೇವಾ ಮನೋಭಾವಗಳು; ಆ ಕಾಲದಲ್ಲಿ ಹಾವೇರಿ ಶ್ರೀಮಠದ ಶ್ರೀ ಶಿವಲಿಂಗ ಮಹಾಸ್ವಾಮಿಗಳಿಗೆ ಪ್ರೇರಣೆ ನೀಡಿ ಈ ಕೃತಿ ರಚನೆಗೆ ಬೆನ್ನೆಲುಬಾದರು.

'ಭಕ್ತ ಕಂಪಿತ ನಮ್ಮ ಕೂಡಲಸಂಗಮ' ಎಂಬ ರೀತಿ ಲಿಂಗಾಯತ ದರ್ಶನದಲ್ಲಿ ಅಂಗ ತತ್ವವೇ ಲಿಂಗತತ್ವಕ್ಕೆ ಮಿಗಿಲೆನಿಸಿದೆ. ಇದನ್ನು ಕವಿಗಳು ಕಾವ್ಯಾರಂಭದಲ್ಲಿ

ಶಿವನಿತರ ದೈವಂಗಳೊಳಧಿಕಂ ಶಿವನಿಗಿಂ ಸದ್ಭಕ್ತನಧಿಕಂ
ಶಿವಯೋಗಿಯ ಭಕ್ತರೊಳಗತ್ಯಧಿಕನೀ ಜಗದೆ
ಸ್ತವನವೀಪರಿ ಗೈಯುವಾಗಮ ಸುವಚನನಾಲಿಸುತೆ ನಾನಿ
ಭವವ ನೀಗಲು ಶಿವಬಸವ ಚಾರಿತ್ರ್ಯವದನು ಪೇಳ್ವೆಂ ॥

(ಹುಕ್ಕೇರಿಮಠದ ಶ್ರೀ ಶಿವಬಸವೇಶ್ವರ ಪುರಾಣ. ಪುಟ : ೦೪, ಪದ್ಯ : ೧೫.)

ಹೀಗೆ ಕವಿಯು ಹೊರಗೆ ನಿಂತು ಬರೆಯುವದಿಲ್ಲ, ಒಳಗೆ ಬೆರೆತು ಬರೆಯುವನು. ಬಸವೇಶ್ವರ, ಹರಿಹರ, ಕುಮಾರವ್ಯಾಸ, ಪುರಂದರದಾಸರು ಇದೆ ತೆರನಾದ ಅನುಭಾವದ ಅರ್ಪಣದ ಕೃತಿಗಳನ್ನು ರಚಿಸಿರುವದನ್ನು ಕಾಣಬಹುದಾಗಿದೆ.

ಇಲ್ಲಿ ಪ್ರತಿಯೊಬ್ಬನು ಕಾಯಕದ ದಾಸೋಹಿಯಾಗಬೇಕೆಂಬ ಸಮಾಜದ ಸೇವೆಯನ್ನೇ ಮೂಲವಾಗಿರಿಸಿಕೊಳ್ಳಬೇಕೆಂಬ ಹಂಬಲ ವ್ಯಕ್ತವಾಗಿದೆ. ಶರಣ ತತ್ವದ ಬದುಕಿನ ಮಾರ್ಗವನ್ನು ಜನರಿಗೆ ಮಾರ್ಗದರ್ಶಿಸುವ ಈ ಪರಂಪರೆಯು ಮುಖ್ಯ ತತ್ವವಾಗಿರುವದನ್ನು ಇಲ್ಲಿ ಕಂಡುಕೊಳ್ಳಬಹುದು.

ಪಂ. ಪುಟ್ಟರಾಜರು ಕಾವ್ಯದ ವಸ್ತುವನ್ನು ಚರಿತ್ರೆಯಾಗಿ ಆಯ್ಕೆ ಮಾಡಲು ಯೋಗಿಯಲ್ಲಿರುವ ಹಲವು ತತ್ವಗಳೇ ಕಾರಣ ಎಂಬುದನ್ನು

ಯೋಗಿಯಿಂದಲೆ ಧರ್ಮದುನ್ನತಿ । ಯೋಗಿಯಿಂದಲೆ ದೇಶದುನ್ನತಿ
ಯೋಗಿಯಿಂದಲೆ ವಂಶದುನ್ನತಿಯಹುದುಸಟೆಯಲ್ಲಾ
ಯೋಗಿಯಿಂದಲೆ ನೈತಿಕೋನ್ನತಿ । ಯೋಗಿಯಿಂದಲೆ ತಾತ್ವಿಕೋನ್ನತಿ ।
ಯೋಗಿಯಿಂದಲೆ ಜನ್ಮದುನ್ನತಿಯಿದೆ ವಿಚಾರಿಸಿರಿ. ॥

(ಪುಟ : ೧೩. ಪದ್ಯ : ೩೦.)

ಹೀಗೆ ಯೋಗಿಯಿಂದಲೆ ಜಗವು ಬೆಳಗುವುದು ಎಂಬದನ್ನು ಬಹುಸ್ಪಷ್ಟವಾಗಿ ತಮ್ಮ ನಿಲುವನ್ನು ವ್ಯಕ್ತಪಡಿಸಿದ್ದಾರೆ. ಶರಣರ ಸಂಗದಿಂದ ಅಸಾಧಾರಣ ವ್ಯಕ್ತಿತ್ವವು ರೂಪುಗೊಳ್ಳುವದು ಎಂದಿದ್ದಾರೆ.

ಆದರೆ ಅತಿಶಯೋಕ್ತಿ ಎಂದರೆ ಶ್ರೀ ಶಿವಬಸವ ಸ್ವಾಮಿಗಳ ಪುರಾಣದಲ್ಲಿ ಹಲವಾರು ಪವಾಡಗಳು ನಿರೂಪಿತಗೊಂಡಿವೆ. ಈ ಪವಾಡಗಳಿಂದ ಕಥಾನಾಯಕನ ಪಾತ್ರಕ್ಕೆ ಹಿನ್ನಡೆಯುಂಟಾಗಿದೆ.

ಶಿವಬಸವ ಸ್ವಾಮಿಗಳ ಜನ್ಮ ಸ್ಥಳ ಕರ್ನಾಟಕದ ಬೆಳಗಾಂವ ಜಿಲ್ಲೆಯ ಕೃಷ್ಣಾನದಿ ತೀರದ ಅಥಣಿಯು. ಇದು ಮುರುಘೇಂದ್ರ ಶಿವಯೋಗಿಗಳ ಪವಿತ್ರ ನೆಲವೂ ಆಗಿದೆ. ಅದೆ ಪರಿಸರದ ಸಪ್ತಸಾಗರ ಗ್ರಾಮದಲ್ಲಿ 'ಗಿರಿಮಲ್ಲ' ಮತ್ತು 'ಗಂಗಾಂಬೆ' ಎಂಬುವರ ಉದರದಲ್ಲಿ ಈ ಸ್ವಾಮಿಗಳ ಜನನವಾಗುತ್ತದೆ. ಅಥಣಿಯಲ್ಲೆ ಇವರ ಶಿಕ್ಷಣ ನಡೆಯಿತು. ೧೨ ವರ್ಷದವರಿದ್ದಾಗ ದೀಕ್ಷೆ ಮಾಡಲಾಯಿತು. ಆವಾಗ ಅವರ ತೇಜಸ್ಸು ಗುರುಭಕ್ತಿ ಹೇಗಿತ್ತೆಂಬುದನ್ನು ಕವಿ ಹೀಗೆ ವಿವರಿಸುವರು –

ಗುರುವಿನಿದಿರೋಳ್ ಮಲಗಲಿಲ್ಲಂ । ಗುರುವಿನಿದಿರೋಳ್ ಹರಟಲಿಲ್ಲಂ ।
ಗುರುವಿನಿದಿರೋಳ್ ಕುಳ್ಳಿರನು ಮೇಲಾಸನದೊಳೆಂದೊಂ ॥
ಗುರುವಿನಿದಿರೋಳ್ ಕೆಲೆಯಲಿಲ್ಲಂ । ಗುರುವಿನಿದಿರೋಳ್ ಗಲೆಯಲಿಲ್ಲಂ ।
ಗುರುವಿನಿದಿರೋಳ್ ನಗಲೆ ಇಲ್ಲಂ ಆ ವಟೂತ್ತಮನು ॥

(ಪುಟ : ೩೨, ಪದ್ಯ : ೩.)

ಶಿವಬಸವ ಸ್ವಾಮಿಗಳು ಹಾವೇರಿ ಮಠದ (ಹುಕ್ಕೇರಿಮಠದ) ಅಧಿಪತಿಗಳಾದರು. ಹೀಗೆ ಅವರ ಶಿವಪೂಜೆ–ನಿಷ್ಠೆಗಳಿಂದ ಹಲವಾರು ಲೀಲೆಗಳು ಕಂಡು ಬರುವವು. ಒಣಗಿದ ಮರವು ಚಿಗಿತದ್ದು, ಬರಗಾಲದಲ್ಲಿ ಮಳೆ ಬರಿಸಿದ್ದು ಈ ಎಲ್ಲಾ ಲೀಲೆಗಳ ವರ್ಣನೆ ಸಹಜವಾದ ಘಟನೆಗಳು ೧೨ನೆಯ ಸಂಧಿಯಲ್ಲಿ ಕಂಡುಬರುವವು. ಹೀಗೆ ಹಲವಾರು ಸದ್ಗುಣಗಳಿಂದ ಅವರು ಬದುಕಿದ ರೀತಿಯನ್ನು ಕಾಣಬಹುದು. ಸ್ವಾಮಿಗಳ ಸಾತ್ವಿಕ ವಿರಕ್ತ ಜೀವನದ ಉನ್ನತಿಯೆಂಬಂತೆ, ಹೆಣ್ಣೊಬ್ಬಳು ಇವರಲ್ಲಿ ಅನುರಾಗ ತಾಳಿ ಬಯಸಿದಾಗ ಅವರು ಹೀಗೆ ಹೇಳಿದರು.

ಮಾತೆಯಾನು ಒರ್ವನ ಸತಿ ಇಹೆನು । ಖ್ಯಾತಮಿದು ಪೆಣ್ ಪೆಣ್‌ನೊಡನೆ ಬೆರೆದು
ಏತರ ಸುಖ ಪಡೆಯುವುದು ತೊಲಗೈ ತಾಯೇ ॥

(ಪುಟ : ೧೩೯, ಪದ್ಯ : ೫೮.)

ಹೀಗೆ ಅವರ ಗುಣಗಳ ಬಗ್ಗೆ ತಿಳಿಯುವುದು. ಒಂದು ಸಲ ಒಬ್ಬ ಬಡವನ ಮದುವೆಯನ್ನು ತಾವೇ ಮಾಡಿದರೆಂದು ತಿಳಿದು ಬರುವದು. ರೋಗ–ರುಜಿನಗಳನ್ನು ವಾಸಿ ಮಾಡಿದ ಬಗ್ಗೆ ತಿಳಿದು ಬರುವದು. ಕೊನೆಗೆ ತಮ್ಮ ಕರ್ತೃತ್ವ ಶಕ್ತಿಯನ್ನೆ ಗುರ್ತಿಸುವದು.

ಕ್ರಿ.ಶ. ೧೯೪೬ನೇ ವರ್ಷದಲ್ಲಿ ಸ್ವಾಮಿಗಳು ಲಿಂಗೈಕ್ಯರಾದರು. ಈಗ ಅವರ ಸಮಾಧಿಯು ಗದ್ದುಗೆಯಾಗಿ ಪೂಜೆಗೊಳ್ಳುತ್ತದೆ. ೧೯೬೭ರಲ್ಲಿ ಮುಗಿಸಿದನೆಂದು ಕವಿ ತಿಳಿಸುತ್ತಾರೆ.

೩.೧.೩ ಕಲಬುರ್ಗಿ ಶ್ರೀ ಶರಣಬಸವೇಶ್ವರ ಪುರಾಣ

ಪಂ. ಪುಟ್ಟರಾಜರು ಬರೆದ ಈ ಪುರಾಣ ಕಾವ್ಯವು ಭಾಮಿನಿಷಟ್ಪದಿಯ ಛಂದಸ್ಸಿನಲ್ಲಿ, ೮೬೪ ಪದ್ಯ, ಹಾಗೂ ೨೦ ಸಂಧಿಗಳನ್ನು ಒಳಗೊಂಡಿದ್ದು ಕ್ರಿ.ಶ.೧೯೭೨ರಲ್ಲಿ ರಚನೆಗೊಂಡಿದೆ. ಶರಣ ಸಂಸ್ಕೃತಿಯನ್ನು ಮೆರೆದು ಜಗತ್ತಿಗೆ ನೀಡಿದ ಶರಣರಾದ ಶರಣಬಸವೇಶ್ವರ ಪುರಾಣ ಇಲ್ಲಿ ವ್ಯಕ್ತವಾಗುವುದು. ಸ್ವಾಮಿಗಳು ಕಾಲ ೧೭೪೬ರಲ್ಲಿ ಜನಿಸಿ, ೧೮೨೨ರಲ್ಲಿ ಲಿಂಗೈಕ್ಯರಾದರು ಎಂದು ತಿಳಿದು ಬರುವದು. (ಕರ್ನಾಟಕ ಕವಿಚರಿತೆ ಸಂ-III. ಪ್ರ. ಕ.ಸಾ.ಪ. ಪು.೧೯೧). ಮೊದಲು ದ್ಯಾಂಪೂರ ಕಲ್ಲಿನಾಥ ಶಾಸ್ತ್ರಿಗಳು ಬರೆದಾದ ಬಳಿಕ ಪಂ. ಪುಟ್ಟರಾಜರು ಶರಣ ಬಸವೇಶ್ವರರ ಬಗೆಗೆ ಬರೆದಿದ್ದಾರೆ.

ಶರಣ ಬಸವೇಶ್ವರರ ಜೀವನವು ಕಲಬುರ್ಗಿಯನ್ನು ಕೇಂದ್ರವಾಗಿಟ್ಟುಕೊಂಡು ಹಲವಾರು ಜನರಿಂದ ಹಳ್ಳಿ-ನಗರ ಹೀಗೆ ಕೆಲವು ಕಡೆ ಗುಡಿ, ಆರಾಧನೆಗಳು ಪುರಾಣಗಳು ಹುಟ್ಟಿಕೊಂಡವು. ಶರಣಬಸವೇಶ್ವರರ ಪುರಾಣವು ಕರ್ನಾಟಕದಲ್ಲಿ ಸಮಾಜೋಧಾರ್ಮಿಕ ಕ್ಷೇತ್ರದ ಒಂದು ಅನನ್ಯ ಆರಾಧನಾ ವಿಷಯವಾಗಿದೆ. ಶರಣ ಬಸವೇಶ್ವರರ ಪುರಾಣ ಬರೆದು ಪುರಾಣಕ್ಕೊಂದು ಮೆರಗು ನೀಡಿದ್ದಾರೆ. ಭಕ್ತಿಭಾವಗಳಿಂದ ಕಾವ್ಯದ ಘನತೆಯನ್ನು ಹೆಚ್ಚಿಸಿದ್ದಾರೆ.

ಭೋಜ್ಯ ಭಕ್ಷ್ಯಮನೇಕಮಿರ್ದೊಡು । ಮಾಜ್ಯ ಘೃತ ಮಿರವೇಳ್ಕದರವೋಲ್
ತ್ಯಾಜ್ಯಮಲ್ಲ ಪುರಾಣಮಿದು ಪಾಮರ ಬುಧ ಜನರ್ಗೆ
ವ್ಯಾಜ್ಯಮಿಲ್ಲದೆ ಮಾತನೊಂದಂ । ಭಾಜ್ಯಗೊಳಿಸದೆ ಪೇಳುತಿಹನಾಂ ॥

(ಕಲಬುರ್ಗಿ ಶ್ರೀ ಶರಣಬಸವೇಶ್ವರ ಪುರಾಣ. ಪುಟ : ೫, ಪದ್ಯ : ೧೫)

ಹೀಗೆ ಈ ಕೃತಿಯ ಬಗ್ಗೆ ತಮ್ಮದಾದ ನಿಲುವಿದು. ಇದರಿಂದ 'ಶರಣತ್ವ' ಎಂದರೆ ಗುಲಾಮಗಿರಿಯಲ್ಲ, ಅರಿವನ್ನು ಕೊಡವದಾಗಿದೆ ಎಂದು ತಿಳಿಸುವರು. 'ಜಂಗಮ ಸೇವೆ' ಎಂದರೆ ಕಾಯಕ ದಾಸೋಹಗಳಿಂದ ಸಮಾಜಸೇವೆಯನ್ನು ಮಾಡುವ ಅದರಲ್ಲಿಯೆ ದಿವ್ಯತೆಯನ್ನು ಕಂಡು ಅದಕ್ಕಾಗಿಯೆ ಜೀವನ ಪರಿತ್ಯಾಗ ಮಾಡುವರು. ಶರಣರ ಬದುಕೆ ಒಂದು ಪವಾಡದಂತೆ ನಡೆದು ಬರುವದಾಗಿದೆ. ಮಾನವೀಯ ಮಟ್ಟದ ಮೇಲೆ ಏರಿ ನಿಲ್ಲುವ ಅವರ ನಿಲುವು ಬಹಳ ಮಹತ್ವದ್ದಾಗಿದೆ. ಸಾಮಾನ್ಯರ ಕಣ್ಣಿಗೆ ಅಸಾಮಾನ್ಯರಂತೆ ಕಂಡರೂ ಕೂಡ ಅವರು ಬದಕು ಒಂದು ಚೇತನವಾಗಿ ಗೋಚರಿಸುತ್ತದೆ.

ಭೂಮಿಯೊಳಗೆಲ್ಲಿಯವರೆಗುಮದು
ತಾಮಸವ ಕೆಡಿಸುವ ಸುಕೃತಮದು
ನೇಮದಿಂ ನಡೆಯುವದೊ ಕೇಳಲ್ಲಿಯವರೆಗುಮವ
ಕಾಮಹರ ಕೈಲಾಸಕೆ ಸುಖಂ
ಕಾಮಕಾ ಜನತೆ ಬಲಿಯಾಗುತೆ
ಸೋಮಧರ ನಿಮ್ಮಡಿಯ ಭಕ್ತಿಯ ಮರೆಯತೊಡಗಿಹುದು ॥

(ಶ್ರೀ ಪಂ. ಪು. ಗ. ಪುರಾಣ ಕೃತಿಗಳ ವಿಮರ್ಶಾ ಸಂಪುಟ. ಪುಟ : ೧೪, ಪದ್ಯ : ೨೨.)

ಶಿವನು ಭೂಮಿಗೆ ಅಡರಿದ ತಮವನ್ನು ಹೊಡೆದಟ್ಟಲು ನಂದಿಗೆ ಆಜ್ಞಾಪಿಸುವನು. "ನೀನು ಬಸವಣ್ಣನು ಮಾಡಿದ ಕಾರ್ಯವನ್ನೇ ಈಗ ಮಾಡು" ಎಂದನು. ಒಪ್ಪದೆ ಇರುವಾಗ ನಿನ್ನನಗಲಿ ನಾನಿರಲಾರೆ ಎಂದಾಗ ಹೃದಯದಲ್ಲಿ ನಾನಿರುವೆ. (ಪು. ೧೮. ಪ. ೩೯). ಎಂದು ಕಳಿಸಿದನು. ಅವನೆ ಶರಣ ಬಸವೇಶನಾಗಿ ಅರಳಗುಂಡಿಗೆಯಲ್ಲಿ ಜನಿಸಿ ಬಂದನೆಂದು ತಿಳಿಯುವುದು. ಶರಣಬಬಸವೇಶ್ವರರು ಉನ್ನತ ಕಾಯಕ ಜೀವಿ ದಾಸೋಹ ಪ್ರೇಮಿಗಳಾಗಿದ್ದರು.

ಒಂದು ಸಲ ಹಕ್ಕಿಗಳು ಹೊಲದಲ್ಲಿನ ಕಾಳನ್ನು ತಿಂದಾಗ ಅವುಗಳಿಗೆ ಕುಡಿಯಲು ನೀರಿನ ವ್ಯವಸ್ಥೆ ಮಾಡಿದ್ದರು. ಹಕ್ಕಿಗಳನ್ನು ಎಲ್ಲರೂ ಓಡಿಸಿದರೆ, ಹಕ್ಕಿಗಳು ಕಾಳು ಮೆಯ್ದರೂ ವ್ಯಥೆ ಪಡದೆ ಹಾಗೆ ಬಿಟ್ಟ ಘಟನೆ ಅವರ ದಯಾಗುಣವನ್ನು ಎತ್ತಿ ತೊರುವದು. ಅದೇ ರೀತಿಯಾಗಿ ಕಳ್ಳರ ಮನಃ ಪರಿವರ್ತನೆ ಮಾಡಿರುವದು ಕೂಡ ಮಹತ್ವದ್ದೆನಿಸುವದು. ಒಂದು ಸಲ ಶರಣರನ್ನು ಪರೀಕ್ಷಿಸುವಂತೆ ನಾಡಿಗೆ ಭೀಕರವಾದ ಬರಗಾಲ ಬಂದೊದಗಿತು ಅದರ ಕುರಿತು–

ಬರಮೆಂಬದು ಉರುತರ ಭೀಕರ
ಪುರಷನನದೃಶ್ಯಗೊಳಿಸಿ ಸಲೆ ಮೆರೆ
ಯರಿಯೆ ದಾಸೋಹದುರು ನಿಷ್ಠೆಯ ಪರೀಕ್ಷಿಸಲೆಂದು ।
ಪರಮ ಲೀಲೆಯೊಳಟ್ಟಿದನಂಯೆನೆ
ಬೆರಗಿನಲಿ ಶಂಕೆಯನೆ ಪುಟ್ಟಿಸಿ
ಬರುತಿರುವದಾ ವಿಷಮ ದುರ್ಭಕ್ಷಮದನೇನೆಂಬೆಮ್ ॥

(ಪುಟ : ೧೫೭, ಪದ್ಯ : ೦೫.)

ಹೀಗೆ ಭಯಂಕರವಾದ ಬರಗಾಲ ಬಂದೊದಗಿದಾಗ ಆಹಾರವಿಲ್ಲದೆ ಎಲ್ಲಿ ನೋಡಿದಲ್ಲಿ ಹೆಣ–ಹೆಣಗಳ ರಾಶಿಯೇ ಕಂಡು ಬರುವಂತೆ, ಸಂಸ್ಕಾರ ಮಾಡಲು ಸಾಧ್ಯವಿಲ್ಲದೆ ಹೆಣಗಳು ಕೊಳೆತವು. ಆ ಭಯಂಕರವನ್ನು 'ಡೌಗಿ ಬರ' ಎಂದೆ ಜನರು ಗುರುತಿಸಿದ್ದರು. ಅಂತಹ ಸಂದರ್ಭದಲ್ಲಿ ಮಹಾ ದಾಸೋಹವನ್ನು ಏರ್ಪಡಿಸಿ ಜನರನ್ನು ಬದುಕಿಸಿ, ಸಮಾಜ ಮರೆಯದ

ಮಹಾ ಶರಣ ಚೇತನವೇ ಬಸವೇಶ್ವರರು. ಇದರಿಂದ ಇವರಿಗೆ 'ಬರಗಾಲದ ಭಟ'ರೆಂದೇ ಕರೆಯುತ್ತಿದ್ದರಂತೆ. ಕಟುಕನು ಆಕಳನ್ನು ಕಡಿದು ಮಾರುವಂತಹ ಸಂದರ್ಭದಲ್ಲಿ ಅವನಿಗೆ ಅದರ ರೊಕ್ಕವನ್ನು ಕೊಟ್ಟು ಆ ಆಕಳನ್ನು ಕೊಲೆಯಿಂದ ಮುಕ್ತಿಗೊಳಿಸುತ್ತಾರೆ. ಹೀಗೆ ಅವರ ಪವಾಡಗಳು ಲೀಲೆಗಳಾಗಿ ಜನಜನಿತವಾಗಿರುವದು. ಶರಣಬಸವೇಶ್ವರರು ಯುಗದ ಅವತಾರಿ ಪುರುಷರಾಗಿ ಕಾಣಿಸಿಕೊಳ್ಳುತ್ತಾರೆ. ನಾಡಿನಾದ್ಯಂತ ಅಲೆದಾಡಿ ಕಳ್ಳ-ಕಾಕರನ್ನು ಸನ್ಮಾರ್ಗಕ್ಕೆ ತಂದ ಕೀರ್ತಿ ಶರಣ ಬಸವೇಶ್ವರರಿಗೆ ಸಲ್ಲುತ್ತದೆ. ಹೀಗೆ ದಾಸೋಹ ನಿಷ್ಠೆಯಿಂದ ಅವರು ನಾಡಿನಲ್ಲಿ ಅಮರರಾಗಿರುವದು ಸೇವಾಪರ ಗುಣಗಳಿಂದ.

೩.೧.೪. ತ್ರಿಷಷ್ಠಿ ಪುರಾತನರ ಪುರಾಣವು

ಪಂ. ಪುಟ್ಟರಾಜರ ಪುರಾಣ ಕಾವ್ಯಗಳಲ್ಲಿ ತ್ರಿಷಷ್ಠಿ ಪುರಾತನರ ಪುರಾಣವು ಮಹತ್ವದ ಕಾವ್ಯವಾಗಿದೆ. ಕ್ರಿ.ಶ. ೧೯೮೪ರಲ್ಲಿ ರಚನೆಗೊಂಡಿದೆ. ಇದು ತಮಿಳುನಾಡಿನ ಶಿವ ಭಕ್ತರಾದ 'ನಾಯನಾರ್'ರ ಭಕ್ತಿ ಲೀಲೆಗಳನ್ನು ಹೇಳುವ ಕೃತಿಯಾಗಿದೆ. ಇದರ ಒಂದು ವಿಶೇಷತೆ ಎಂದರೆ ಅರವತ್ತುಮೂರು ಪುರಾತನರಿಗೆ ಸಂಬಂಧಿಸಿದಂತೆ ೬೩ ಸಂಧಿಗಳು ಈ ಕಾವ್ಯದಲ್ಲಿರುವವು. ಪ್ರತಿ ಸಂಧಿಯ ಆರಂಭದಲ್ಲಿ ಒಂದು ಪದ್ಯದಲ್ಲಿ ಬದುಕಿನ ಮೌಲ್ಯಗಳನ್ನು ಎತ್ತಿ ತೋರಿಸುವದಾಗಿದೆ.

ತಮಿಳುನಾಡಿನಲ್ಲಿ ಶೈವ ಭಕ್ತರು 'ತೇವಾರಂ' ಎಂಬ ಭಕ್ತಿಗೀತೆಗಳನ್ನು ರಚಿಸಿ ಕ್ರಿ.ಶ. ೫ ರಿಂದ ೯ನೇ ಶತಮಾನದವರೆಗೂ ಬದುಕಿದರು. ತಮಿಳುನಾಡಿನಲ್ಲಿ ತಂಜಾವೂರಿನ ದೇವಾಲಯಗಳು ಕಾಳಹಸ್ತಿ ಹೀಗೆ ಹಲವಾರು ಗುಡಿಗೋಪುರಗಳು ಆ ಶಿವ ಭಕ್ತಿಯನ್ನು ಎತ್ತಿ ಹಿಡಿದಿವೆ. ಪಂ. ಪುಟ್ಟರಾಜರು ಹರಿಹರ ಮತ್ತು ಸುರಂಗ ಕವಿಗಳನ್ನು ಅನುಸರಿಸಿ ಕಾವ್ಯ ರಚಿಸಿರುವಂತೆ ತೋರುವದು-

ಹರಿಹರನವ ದಾನವೀರನರಿಯಲೆನಗೆ
ಪುರಾತನ ಕಥೆಯ ಕರೆದು ಕೊಟ್ಟಿಹ
ನುರುಸುರಂಗ ಕವೀಶ ಕಾವ್ಯವನು
ಈಯೆರಡನೀಕ್ಷಿಸುತೀ ಪುರಾಣವ ಬರೆಯಲ್ ॥

(ತ್ರಿ. ಪು. ಪು. ಪುಟ : ೫೧೨, ಪ : ೨೬.)

ಹೀಗೆ ಕವಿಯು ಹರಿಹರ ಮತ್ತು ಸುರಂಗ ಕವಿಗಳನ್ನು ಸ್ಮರಿಸಿರುವದನ್ನು ಇಲ್ಲಿ ಕಾಣಬಹುದು. ತ್ರಿಷಷ್ಠಿ ಪುರಾತನರ ಪುರಾಣದಲ್ಲಿ ಪುರಾತನರೇ ನಾಯಕರೆಂದು ಪಂ. ಪುಟ್ಟರಾಜರು ತಿಳಿಸಿದ್ದಾರೆ. ಜೈನ ಮತ್ತು ಬೌದ್ಧ ಧರ್ಮಗಳ ಪ್ರಾಮುಖ್ಯತೆಯು ಇಳಿಮುಖವಾದ ಆ ಕಾಲದಲ್ಲಿ ಶೈವ ಭಕ್ತರು ಕಾವ್ಯ ರಚಿಸಿದರು. ಅವರು ಬರೆದ ತೇವಾರಂ

(ದೇವರ ಮಾಲೆ) ತಮಿಳು ಸಾಹಿತ್ಯದಲ್ಲಿ ವಚನದಂತಹ ಪ್ರಭಾವದ ಪ್ರಕಾರವಾಗಿದೆ. ಚೋಳ ಮತ್ತು ಪಲ್ಲವ ಅರಸರು ಇದಕ್ಕೆ ಕಾರಣೀಭೂತರೆನಿಸುವರು. ಇಂತಹ ಕವಿಗಳ ಫಲದಿಂದ ಕನ್ನಡಕ್ಕೆ ಬಂದ ತಮಿಳಿನ ಭಕ್ತಿಯ ಸಾಹಿತ್ಯವು ಉತ್ತುಂಗವಾಗಿರುವದು. ಈ ತೆರನಾದ ತಾತ್ವಿಕತೆ, ಕೃತಿಯವಸ್ತು, ತತ್ವ, ಪಾತ್ರ ಹೀಗೆ ಈ ನಿಲುವುಗಳನ್ನು ಇಟ್ಟುಕೊಂಡು ಕಾವ್ಯರಚನೆ ಮಾಡಿದ ಪಂಪ, ಹರಿಹರ, ರನ್ನ, ಬಸವ, ಚಾಮರಸ, ಕುಮಾರವ್ಯಾಸ, ಕುವೆಂಪು ಇವರೆಲ್ಲರುಗಳು ಮಹಾ ದಾರ್ಶನಿಕ ಕವಿಗಳೆನಿಸಿದರು.

ಪುರಾಣವನ್ನು ರಚಿಸಬೇಕಾದರೆ ಒಂದು ಕವಿಯ ಸ್ವಯಂ ಪ್ರೇರಣೆ, ಇಲ್ಲವೆ ಇನ್ನೊಬ್ಬರು ಹೇಳಿ ಬರೆಯಿಸುವದು. ಆದರೆ ಪುಟ್ಟಜ್ಜನವರ ಈ ಪುರಾಣವು ಸ್ವಯಂ ಕ್ರಿಯಾಶೀಲತೆಯಿಂದ ಕೂಡಿರುವದನ್ನು ಇಲ್ಲಿ ಕಾಣಬಹುದಾಗಿದೆ –

ಬೀಸುವ ಕಲ್ಲೊಳು ಬಿದ್ದ ಕಾಳೊಳ
ಮಾಸರಿಸಿ ತಳಗೂಟವ ಕೆಲವು
ಮೀಸಲಾಗುಳಿಯುವವು ಪಿಟ್ಟಾಗದಲೆಯಂತಂತೆ
ಈಸರನೆ ನಿನ್ನಾಶ್ರಯಸಿ ಕೆಲ
ರೋಸರಿಸದುಳಿಯುವ ಜೀವರ್
ಗಾಸಿ ಮಾಡದೆ ದುರ್ಭವದ ಚಕ್ರದೊಳೆ ಸಲಹಭವ ॥

(ಅದೇ ಪುಟ : ೧೪, ಪದ್ಯ : ೧)

ಹೀಗೆ ಕಾಳುಗಳನ್ನು ಬೀಸುವಾಗ ಕಾಳುಗಳು ಚಕ್ರಕ್ಕೆ ಸಿಕ್ಕಿ ಹಿಟ್ಟಾಗುವದು. ಅದರಂತೆ ಶಿವನನ್ನು ಆಶ್ರಯಿಸಿ ಭಕ್ತರು ಭವದಲ್ಲಿ ನಾಶವಾಗಲಾರರು ಎಂದು ತಿಳಿಸುವರು.

ತ್ರಿಷಷ್ಠಿ ಪುರಾತನರ ಪುರಾಣದ ಮೂಲ ಉದ್ದೇಶವು ಭಕ್ತಿಯಾಗಿರುವದನ್ನು ಇಲ್ಲಿ ಕಾಣಬಹುದಾಗಿದೆ. ಪಂ. ಪುಟ್ಟರಾಜರ ಭಕ್ತಿಯ ಸಾಹಿತ್ಯವು ಕನ್ನಡಕ್ಕೆ ದೊಡ್ಡ ಶಕ್ತಿಯನ್ನೇ ನೀಡಿದೆ. ದೇವರಿಗಾಗಿ ಪ್ರಾಣಬಿಟ್ಟವರು, ಜೀವನವನ್ನೇ ಮುಡಿಪಾಗಿ ಇಟ್ಟವರು ಇಲ್ಲಿ ಕಾಣ ಸಿಗುವವರಾಗಿದ್ದಾರೆ. ಸತ್ವಪರ, ಸೌಮ್ಯ, ದಯಾಪರ ಅರಿವಿನ ನೆಲೆ, ಧಾರ್ಮಿಕ ನೆಲೆಗಟ್ಟು ಈ ಕಾವ್ಯದಲ್ಲಿ ಮೂಡಿಬಂದಿದೆ.

ಕಾವ್ಯದ ವರ್ಣನೆಯು ರಮ್ಯವಾಗಿ ಮೂಡಿ ಬಂದಿದೆ. ಅದನ್ನು ಈ ರೀತಿಯಾಗಿ ಕಾಣಬಹುದಾಗಿದೆ.

ಮಲ್ಲಿಗೆಯು ತಾನಾದಡೇನದು
ಸಲ್ಲಲಿತ ನಂದನದೊಳುದಯಿಸಿ
ಪಲ್ಲವಿಸಿ ಪುಷ್ಪಗಳಕೊಟ್ಟೊಡೆ ಸುಜನಮಾನ್ಯಂ

ಬಲ್ಲ ಮಾನವನಾದೊಡೆ ನಾಂ
ಸಲ್ಲುತಿಹ ಭಕ್ತರೊಳುದಿಸುತೆ
ಮೆಲ್ಲಡಿಯ ಭಕ್ತಿಯು ಚರಿಸದಿರೆ ಸಲ್ಲುವೆನು ಶಿವನೆ ॥

(ತ್ರಿ.ಪು.ಪು. ಪುಟ : ೮೬. ಪದ್ಯ : ೦೧.)

ಹೀಗೆ ಕಾವ್ಯದಲ್ಲಿಯ ವರ್ಣನೆಯು ಕಾವ್ಯದ ಸತ್ವವನ್ನು ಹೆಚ್ಚಿಸಿರುವದು ಕಂಡುಬರುವದು.

ಶಾಂತಿ ಸಹನೆಯದರ ಕೋಟೆಯು
ಕಾಂತಿಯೋಜಂ ಕಂದಕಮದಕೆ
ಸಂತಸಂ ಕೊತ್ತಳ ಮೆನಿಸಿರಲ್ ಸತ್ಯದಗಸಿಯದೆ
ಸಂತತಂ ಸಮತೆಯ ಮನೆಯೆನಿಸೆ
ಭ್ರಾಂತಿವರಚಿತ ನಯಮುಪವನಂ
ಕ್ರಾಂತಿ ದೇವಾಲಯ ಮೆಸೆಯುತಿರೆ ಪುರಿಯುರಂಜಿಸುತ ॥

(ಅದೇ ಪುಟ : ೨೫೯ ಪದ್ಯ : ೦೫.)

ಹೀಗೆ ಕಾವ್ಯದ ತುಂಬೆಲ್ಲಾ ಸೊಬಗಿನಿಂದ ಕೂಡಿದ ಸತ್ವ ಹೆಚ್ಚಿದೆ. ೬೩ ಜನ ತಮಿಳು ಭಕ್ತರ ಭಕ್ತಿ ವಿಶೇಷತೆಯನ್ನು ವಿವರಿಸುವದು. ಒಂದೊಂದು ಸಂಧಿಗಳು ಒಬ್ಬ ಭಕ್ತರಿಗೆ ಮೀಸಲಾಗಿರುವದನ್ನು ಇಲ್ಲಿ ಕಾಣಬಹುದಾಗಿದೆ.

ಪಂ. ಪುಟ್ಟರಾಜರ ಒಟ್ಟು ಪುರಾಣ ಕಾವ್ಯಗಳಲ್ಲಿ ತ್ರಿಷಷ್ಠಿ ಪುರಾತನರ ಪುರಾಣವು ಬಹಳ ಮಹತ್ವದ್ದಾಗಿದೆ. ಹಳಗನ್ನಡ ಮತ್ತು ನಡುಗನ್ನಡದ ಮಿಶ್ರ ಶೈಲಿಯಲ್ಲಿ ಕಾವ್ಯ ಮೂಡಿ ಬಂದಿದೆ. ಪ್ರೌಢ ಮಾರ್ಗವನ್ನು ಪ್ರಸ್ತುತ ಪಡಿಸಿದೆ.

೩.೧.೫ ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಪುರಾಣ

ಪಂ. ಪುಟ್ಟರಾಜರ ಕಾವ್ಯ ಪುರಾಣಗಳಲ್ಲಿ ಇದು ಕೂಡ ಮಹತ್ವದ ಪುರಾಣವಾಗಿದೆ. ಇತ್ತೀಚಿನ ಪುರಾಣಗಳಲ್ಲಿ ೩ ವಿಧವಾಗಿ ಗುರುತಿಸಲಾಗುವದು. ಒಂದು ಸ್ವ–ಇಚ್ಛೆಯಿಂದ ಬರೆದ ಪುರಾಣ ಕಾವ್ಯಗಳು, ಇನ್ನೊಬ್ಬರು ಹೇಳಿ ಬರೆಸಿದ್ದು ಸ್ವ ಮತ್ತು ಪರರ ಪ್ರಭಾವಿ ನೆಲೆಗಳಲ್ಲಿ ಕಂಡು ಬರುವವು. ಕವಿಯು ಸ್ವ–ಇಚ್ಛೆಯಿಂದ ಬರೆದ ಪುರಾಣ ಕಾವ್ಯವು ಕಾವ್ಯದ ಸತ್ವದಿಂದ ತಾತ್ವಿಕವಾಗಿ ಮೂಡಿ ಬರುವದು. ಹೇಳಿ ಬರೆಯಿಸಿದ ಪುರಾಣವು ಕವಿಯ ಸ್ವಂತಿಕೆಯನ್ನು ಕಳೆದುಕೊಳ್ಳುವದು. ಹೀಗೆ ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಪುರಾಣ (ಹುಬ್ಬಳ್ಳಿ ಮೂರುಸಾವಿರಮಠ) ಹೇಳಿ ಬರೆಯಿಸಿದ ಪುರಾಣ ಕಾವ್ಯವಾಗಿದೆ.

ಎಲ್ಲಾ ಪುರಾಣ ಕಾವ್ಯಗಳಂತೆ ಇದು ಅಲ್ಲಲ್ಲಿ ಕಾವ್ಯತ್ಮಕ ರಮ್ಯತೆಯಿಂದ ಕೂಡಿರುವದು. ಕಾವ್ಯವು ಅತ್ಯಂತ ಗಡಚಾದ ಪಂಡಿತ ಮಾರ್ಗದಲ್ಲಿ ಸಾಗಿ ಹಳಗನ್ನಡ ಪ್ರೌಢಿಮೆಯನ್ನು

ಒಳಗೊಂಡಿದ್ದು. ವಾರ್ಧಕ ಷಟ್ಪದಿಯ ೧೧೧೧ ಪದ್ಯಗಳಲ್ಲಿ ಕಾವ್ಯವು ಮೂಡಿಬಂದಿದೆ. ಹುಬ್ಬಳ್ಳಿಯ ಮೂಲ ಮಠದ ಶ್ರೀ ಗುರುಸಿದ್ಧೇಶ್ವರರ ಚರಿತ್ರೆಯನ್ನು ಒಳಗೊಂಡಿದೆ. ಕವಿ ತನ್ನ ಕಾವ್ಯಶಕ್ತಿಯ ಮೂಲಕ ಹೀಗೆ ಸ್ಮರಿಸಿದ್ದಾರೆ–

ಜಗದ ಗುರು ಗುರು ಸಿದ್ಧರಾಜನ ಪುರಾಣಮಂ
ಮಿಗೆ ಬರೆಯಲೆನಗೆ ಸೇವೆಯನೊಪ್ಪಿಸಿದ ಜಗತ್
ಸುಗುಣಿ ಗುರುವರ್ಯ ಗಂಗಾಧರ ಮಹಾತ್ಮ ॥

(ಶ್ರೀ ಜ. ಗು.ಸಿ. ಪು. ಪುಟ : ೦೩. ಪದ್ಯ : ೦೭.)

ಇಂದಿಗೂ ಗುರುಸಿದ್ದೇಶ್ವರ ಮಠವು ಮೂರು ಸಾವಿರಮಠವೆಂದು ಪ್ರಸಿದ್ಧಗೊಂಡಿರುವದು. 'ಋಷಿ ಮೂಲ, ನದಿ ಮೂಲಗಳನ್ನು ಹುಡುಕಬಾರದು ಸಿಗುವದಿಲ್ಲ' ಎಂಬ ನುಡಿಯು ಇದೆ. ಶ್ರೀ ಗುರುಸಿದ್ಧೇಶ್ವರರ ಕಾಲವು ನಿರ್ಧಿಷ್ಟವಾಗಿರುವದಿಲ್ಲ. ಆದ್ದರಿಂದ ಅದನ್ನು ಶಿವನಿಗೆ ಬಿಡು ಎಂದು ಇಲ್ಲಿ ಸಮೀಕರಿಸಲಾಗಿದೆ. ಈ ಮಠಕ್ಕೆ ಮೂಲ ಕರ್ತೃ ಗುರುಸಿದ್ಧನೇ ನಾಯಕನೆಂದು ಕವಿ ಸ್ಪಷ್ಟಗೊಳಿಸುತ್ತಾನೆ.

ಅನೇಕ ಶರಣ–ಸಂತ–ಸಾಧುಗಳನ್ನು 'ಹುಚ್ಚರು' ಎಂದು ಕರೆದಿದ್ದುಂಟು. ಆದ್ದರಿಂದ ಎಲ್ಲಾ ಸಂತ–ಶರಣರು ಇಂತಹ ನೋವುಗಳನ್ನು ಅನುಭವಿಸಿಯೇ ಜಗದ ದಾರ್ಶನಿಕರಾಗಿರುವದು ಕಂಡು ಬರುವದು. ಗುರುಸಿದ್ಧೇಶ್ವರ ಶರಣರು ಧಾರ್ಮಿಕ ಸಾಮಾಜಿಕ ಉದ್ಧಾರಕ್ಕಾಗಿ ಅವತಾರ ಎತ್ತಿದ ಮಹಾದಾರ್ಶನಿಕರಾಗಿ ಕಂಡಿದ್ದಾರೆ. ಅವರ ಬದುಕಿನಲ್ಲಿ ಹಲವಾರು ಪ್ರಸಂಗಗಳನ್ನು ಕಾಣುತ್ತೇವೆ. ಒಬ್ಬ ಕುರುಬ, ಮತ್ತು ಉಳಿವೆಪ್ಪನೆಂಬುವರು ಗುರುಗಳಿಗೆ ದಕ್ಷಿಣೆಯನ್ನು ಕೊಟ್ಟಾಗ ಅದನ್ನು ಗುರುಗಳು ಬಡವನಿಗೆ ಕೊಟ್ಟದ್ದು, ಬಡ್ಡಿಗಾಗಿ ಹಣವನ್ನು ಕೊಟ್ಟು ಬಡವರನ್ನು ಪೀಡಿಸುವವರಿಗೆ ಅವರ ಮೋಸದ ಬಗ್ಗೆ ತಿಳುವಳಿಕೆ ಕೊಟ್ಟದ್ದು ಹಲವರನ್ನು ಕಷ್ಟದಿಂದ ಕಾಪಾಡಿದ ಕೀರ್ತಿ ಅವರ ವ್ಯಕ್ತಿತ್ವವನ್ನು ಎತ್ತರಿಸುತ್ತದೆ.

ಅಲ್ಲಲ್ಲಿ ಪವಾಡಗಳಂತೆ ಕೆಲವು ವಾಸ್ತವ ನೆಲೆಗಟ್ಟಿನ ರೂಪಕವನ್ನು ನೋಡಬಹುದು. ಶ್ರೀಮಂತನ ಹೆಂಡತಿಯ ದೆವ್ವವನ್ನು ಬಿಡಿಸಿದ್ದು , ಹಲವಾರು ಜನರುಗಳ ದುಶ್ಚಟವನ್ನು ಬಿಡಿಸಿದ್ದು . ಹತ್ತು–ಹಲವು ಪ್ರಸಂಗಗಳು ಕಾಣ ಸಿಗುವವು. ಹಲವಾರು ಪುರಾಣ ಕಾವ್ಯಗಳಂತೆ ಇಲ್ಲಿಯೂ ಕೂಡ ಸೌಂದರ್ಯ ಪ್ರತೀಕದ ವರ್ಣನೆಗಳು ಕಾಣಸಿಗುವವು–

ಸುಧೆಯಂತೆಯಮೃತಾಖ್ಯಮೀಶನೊಲಹಿಂ ನಗಂ
ನಿಧಿಯಂತೆ ನವಯುತಂ ಹರಿಯಂತೆ ಸವಿರವಂ
ವಿಧಿಯಂತೆ ಸತ್ಯಲೋಕಾಶ್ರಯಂ ಕವಿಯಂತೆ ವಾಗರ್ಥಕೋಶಮಿದುವೆ
ವಧುವಿನಂತೆ ಸಕಲಂದಿವದಂತೆ ಬುಧರತ್ನಂ

ವಧುವಿನಂತಾಶಾಶ್ರುತಂ ಕಡಿಯವೊಲ್ ಸುಗುಣ
ಮಧುರದಂತುರು ರಸವೃತಂ ವದನದಂತೆ ವೃತ್ತೋತ್ತಮಂ ಸತ್ ಪುರಾಣಂ ॥

(ಶ್ರೀ ಜ.ಗು. ಸಿ. ಪು. ಪುಟ: ೫, ಪದ್ಯ: ೧೭)

ಹೀಗೆ ಶಿವನ ಭಕ್ತಿಯು ಕಾವ್ಯದಲ್ಲಿ ಅವಿರತವಾಗಿ ಬಿಂಬಿಸುತ್ತಾ ಹೋಗಿರುವದನ್ನು ಕಾಣಬಹುದಾಗಿದೆ. ಅದೇ ರೀತಿಯಾಗಿ ಶ್ರೇಷ್ಠತರನಾದ ಸುಗುಣೆಯಂತೆ, ಮಧುರವಾದ ವದನದಂತೆ ವೃತ್ತೋತ್ತಮವಾಗಿ ಈ ಪುರಾಣವಿದೆ ಎಂದು ಬಿಂಬಿಸುತ್ತಾರೆ. ಹೀಗೆ ಕಾವ್ಯದಲ್ಲಿ ಪಕ್ವತೆ ಎದ್ದು ಕಾಣುತ್ತದೆ ಹಾಗೂ ಶ್ರೀಗುರು ಸಿದ್ಧೇಶ್ವರ ಶರಣತ್ವ ಮಹತ್ವದ್ದೆನಿಸುತ್ತದೆ.

೩.೧.೬ ಶ್ರೀ ವೀರಭದ್ರೇಶ್ವರ ಪುರಾಣ

ವೀರಭದ್ರನ ಅವತಾರದ ಹಿನ್ನೆಲೆಯಲ್ಲಿ ಮೂಡಿಬಂದ ಭಾಮಿನಿ ಷಟ್ಪದಿಯ ಕಾವ್ಯವಿದು. ೩೧೨ ಪದ್ಯಗಳುಳ್ಳ ಚಿಕ್ಕ ಕಾವ್ಯವು. ರಾಘವಾಂಕನ ಮೀಸಲು ಕವಿತೆಯಾದ ವೀರೇಶ ಚರಿತೆಯ ವಸ್ತುವನ್ನಲ್ಲದೇ ಶಿವನ ೨೫ ಲೀಲೆಗಳಲ್ಲೊಂದಾದ ಶರಭ ಚಾರಿತ್ರವನ್ನು ಈ ಕಾವ್ಯವು ಒಳಗೊಳ್ಳುವದು. ಬೇರೆ ಬೇರೆ ಕಾವ್ಯಗಳಲ್ಲಿ ಉಪಕಥೆಯಾಗಿ ಮೂಡಿಬಂದ ವೀರೇಶನ ಚರಿತೆಯನ್ನು ರಾಘವಾಂಕನು ಮೊದಲ ಬಾರಿಗೆ ಚಿಕ್ಕದಾದರೂ ಅತ್ಯುತ್ತಮವಾದ ರೀತಿಯಲ್ಲಿ ವಾರ್ಧಕ ಷಟ್ಪದಿಯಲ್ಲಿ ಹಿಂದೆಯೇ ರಚಿಸಿದ್ದನು. ಅದನ್ನೆ ಭಾಮಿನಿ ಷಟ್ಪದಿಯಲ್ಲಿ ಪಂ. ಪುಟ್ಟರಾಜ ಕವಿಗಳು ನಿರ್ಮಿಸಿದ್ದಾರೆ. ಇದು ಒಂದೆರಡು ಘಟನೆಗಳ ಹಿನ್ನೆಲೆಯಲ್ಲಿ ರೂಪಗೊಂಡ ಚಿಕ್ಕ ಕಾವ್ಯವೇ. ಕವಿತೆಯ ವಸ್ತು ಕಿರಿದೆನಿಸಿದರೂ ಧಾರ್ಮಿಕ ಹೋರಾಟದಲ್ಲಿ ಹಿರಿದಾದ ಸ್ಥಾನ ಈ ಕಾವ್ಯದ ವಸ್ತುವಿಗಿದೆ.

ದಕ್ಷಿಣ ಭಾರತದಲ್ಲಿ ಉತ್ತರ ಕರ್ನಾಟಕ ಮತ್ತು ಇದಕ್ಕೆ ಅಂಟಿಕೊಂಡಂತೆ ಆಂಧ್ರಪ್ರದೇಶದಲ್ಲಿ ವೀರಭದ್ರನ ಅನೇಕ ದೇವಾಲಯಗಳು ಬಹು ಹಿಂದಿನಿಂದಲೆ ಆರಾಧನೆಯ ಕೇಂದ್ರವಾಗಿ ನೆಲೆ ನಿಂತಿವೆ. ಆರ್ಯ ಮತ್ತು ದ್ರಾವಿಡ ಹೋರಾಟವನ್ನೇ ಮುಖ್ಯವಾಗಿ ಎತ್ತಿ ಹೇಳುವ ವೀರಭದ್ರನ ಲೀಲೆ ಎಂದರೆ ಯಜ್ಞದ ಸುತ್ತಲೂ ಹುಟ್ಟಿಕೊಂಡ ಆರ್ಯದೇವತೆಗಳನ್ನು ಸದೆಬಡೆದು ಯಜ್ಞವನ್ನು ಹಾಳು ಮಾಡಿದ ಒಂದು ಸಂಘರ್ಷವೇ ಆಗಿದೆ. ರಾಮ-ರಾವಣರ ಯುದ್ಧವು ಇಂತದೆ ಸಂಘರ್ಷದ ಇನ್ನೊಂದು ಮುಖವಾಗಿದ್ದರೆ, ವೀರಭದ್ರನ ಲೀಲೆಯು ಸಂಘರ್ಷದ ನೇರತನವನ್ನು ಸ್ಪಷ್ಟವಾಗಿ ಎತ್ತಿಹೇಳುವದು. ಶಿವಯೋಗಿಯು ದ್ರಾವಿಡರ ಮೂಲದೈವವಾಗಿರುವನು. ಆರ್ಯರು ಭಾರತದಲ್ಲಿ ನೆಲೆಸಬೇಕಾದಾಗ ಅನಿವಾರ್ಯವಾದ ಕೆಲವು ಬದುಕಿನ ಇರುವಿಕೆಗೆ ಅನುಬಂಧಿಯಾದ ಹೊಂದಾಣಿಕೆಗಳನ್ನು ಮಾಡಿಕೊಂಡರು. ಅಂತಹ ಒಂದು ಹೊಂದಾಣಿಕೆಯಂತೆ ಅನಾರ್ಯನಾದ ಶಿವನಿಗೆ ಆರ್ಯನಾದ ದಕ್ಷಬ್ರಹ್ಮನು ತನ್ನ ಮಗಳು ದಾಕ್ಷಾಯಿಣಿಯನ್ನು ಕೊಟ್ಟು ಸಂಬಂಧ ಏರ್ಪಡಿಸಿಕೊಂಡ. ಇದು ಕೌಟುಂಬಿಕವಾದ ರಕ್ತ ಸಂಬಂಧದ ಮಟ್ಟಿಗೆ

ಮಾತ್ರವಾಗಿ ಉಳಿಯಿತೆ ಹೊರತು ಬದುಕುವಿಕೆಗೆ ಬೇಕಾದ ಸಾಮಾಜಿಕ ಸಂಬಂಧವು ಸಾಕಷ್ಟು ಇರಸು-ಮುರಿಸಿಗೆ ಕಾರಣವಾಯಿತು. ಇದರಿಂದ ಸಮಾಜ ಪ್ರಬಲವಾಗಿ ಈ ಕೌಟುಂಬಿಕ ಸಮಾಜವನ್ನು ಆರ್ಯ-ಅನಾರ್ಯವೆಂಬ ಹಿನ್ನೆಲೆಯಲ್ಲಿ ನೋಡುತ್ತ ದಕ್ಷ ಬ್ರಹ್ಮನನ್ನೆ ದೂರಿಡುವ ದೂರುವ ಪ್ರಯತ್ನ ಮಾಡಿತು. ಸಾಮಾಜಿಕ ಪ್ರತಿಷ್ಠೆಯ ಮತ್ತು ಸಾಮಾಜಿಕ ಸಂಬಂಧಗಳು ಬಹುಮುಖ್ಯವಾದ ಕಾಲಘಟ್ಟದಲ್ಲಿ ಸಮಾಜವನ್ನು ವಿರೋಧಿಸಿ ಬದುಕುವ ಗಟ್ಟಿತನಗಳು ಗೋಚರಿಸಲಾರವು. ಈ ಸಂಧಿಗ್ಧತೆಯಲ್ಲಿ ಆರ್ಯನಾದ ದಕ್ಷನು ಸಮಾಜಕ್ಕೆ ಶರಣಾಗುತ್ತಾನೆ. ತಾನೊಂದು ದೊಡ್ಡ ಯಜ್ಞವನ್ನು ಹಮ್ಮಿಕೊಂಡು ಎಲ್ಲಾ ದೇವಾನು-ದೇವತೆಗಳನ್ನು ಕರೆದು ತನ್ನ ಅಳಿಯ ಶಿವನನ್ನು, ತನ್ನ ಮಗಳು ದಾಕ್ಷಾಯಣಿಯನ್ನು ಕರೆಯದೇ ಹೋಗುತ್ತಾನೆ. ಭವ್ಯವಾದ ಯಜ್ಞವನ್ನು ನೋಡ ಬಯಸಿದ ಹೆಣ್ಣುಜೀವ ದಾಕ್ಷಾಯಣಿ ತವರು ಮನೆಗೆ ಹೋಗಬೇಕೆಂಬ ತುಡಿತಕ್ಕೆ ಒಳಗಾಗಿ ಯಜ್ಞದಲ್ಲಿ ಭಾಗವಹಿಸಲು ಬರುತ್ತಾಳೆ. ಮಗಳ ಬರುವಿಕೆಗೆ ಕ್ರೋಧಿತನಾದ ದಕ್ಷಬ್ರಹ್ಮ ಆಕೆಯನ್ನು, ಆಕೆಯ ಪತಿಯಾದ ಶಿವನನ್ನು ಎಲ್ಲೆ ಮೀರಿ ಬಯ್ಯುತ್ತಾನೆ. ಇದರಿಂದ ನೊಂದ ದಾಕ್ಷಯಣಿ ಪತಿನಿಂದೆಗೆ ಮೂಲ ಕಾರಣವಾದ ತಾನು ಬದಕಿರಬಾರದೆಂದು ಯಜ್ಞಕುಂಡದಲ್ಲಿ ಹಾರುತ್ತಾಳೆ. ಇದರಿಂದ ನೊಂದ ಶಿವ ಮತ್ತು ಪರಿವಾರದವರಲ್ಲಿ ವೀರಭದ್ರನು ದಕ್ಷಬ್ರಹ್ಮನ ಯಜ್ಞವನ್ನು ಹಾಳುಮಾಡಿದನು. ಶಿವ ಮಾನಸಿಕವಾಗಿ ಜರ್ಜರಿತನಾಗಿ ಹಿಮದ ಅಡಿಯಲ್ಲಿ ಕುಳಿತು ಘೋರ ತಪಸ್ಸನ್ನು ಮಾಡುತ್ತಾನೆ. ಅಲ್ಲಿ ಉಪಸ್ಥಿತರಿದ್ದ ದೇವತೆಗಳನ್ನು ವಿಕಲಾಂಗರನ್ನಾಗಿ ಮಾಡುತ್ತಾನೆ. ಇಷ್ಟು ಮಹತ್ವದ ಧಾರ್ಮಿಕ ಹೋರಾಟವನ್ನು ವೀರೇಶ ಚರಿತೆ ಒಳಗೊಳ್ಳುತ್ತದೆ. ಶಿವನ ೨೫ ಲೀಲೆಗಳಲ್ಲಿ ಒಂದಾದ ಇದನ್ನು ಪುರಾಣಗಳು, ಆಗಮ ಮತ್ತು ಕಾವ್ಯಗಳು, ಕಾಳಿದಾಸನಂತ ಕವಿಯು ಸಂಸ್ಕೃತದಲ್ಲಿ, ಹರಿಹರ ಕವಿಯು ಕನ್ನಡದಲ್ಲಿ ಈ ವೀರಭದ್ರನ ಲೀಲೆಯ ಮುಂದಿನ ಕಥೆಯನ್ನು ಹೇಳಿದ್ದಾರೆ. ರಾಘವಾಂಕನು ವೀರಭದ್ರನ ಲೀಲೆಯ ಕಥೆಯನ್ನೇ ನೇರವಾಗಿ ಮೀಸಲು ಕವಿತೆಯಾಗಿ ಬರೆದನು. ಅದನ್ನು ಆಧುನಿಕ ಕಾಲದಲ್ಲಿ ಮಧ್ಯಕಾಲೀನವಾದ ಛಂದಸ್ಸಿನಲ್ಲಿ ಪಂ. ಪುಟ್ಟರಾಜ ಕವಿ ಗವಾಯಿಗಳವರು ನಿರೂಪಣೆ ಮಾಡಿದ್ದಾರೆ.

ವೀರೇಶ ಚರಿತೆಯ ಮುಖ್ಯ ತತ್ವವೇ ಶೈವ ಮತ್ತು ಆರ್ಯ ಹೋರಾಟವಾಗಿದೆ. ಒಂದು ಹಂತದಲ್ಲಿ ಆರ್ಯ ದ್ರಾವಿಡರ ಹೋರಾಟವೇ ಇದು. ಇಂದು ಕೂಡ ಆ ದ್ರಾವಿಡ ಪರಂಪರೆಯು ಶೈವ-ವೀರಶೈವ ಧರ್ಮ ಸಂದರ್ಭಗಳಲ್ಲಿ ಉಳಿದು ಬಂದು ಲಿಂಗಾಯತರಲ್ಲಿ ವಿಶಿಷ್ಟವಾದ ಧಾರ್ಮಿಕ ಆಚರಣೆಗಳಲ್ಲಿ ಜೀವಂತವಾಗಿಯೇ ಉಳಿದಿದೆ. ಒಂದು ಪ್ರತಿಷ್ಠಿತ ಧರ್ಮವು ತನ್ನ ಪ್ರತಿಷ್ಠೆಯನ್ನು ಕಾಪಾಡುವುದಕ್ಕಾಗಿ ಈ ತೆರನಾದ ಹೋರಾಟಗಳಿಗೆ ನಾಂದಿ ಹಾಡುವುದು. ಈ ತೆರನಾದ ಧಾರ್ಮಿಕ ಯುದ್ಧಗಳಲ್ಲಿ ಸಾವು-ಹಿಂಸೆ ಸಹಜವಾಗುತ್ತವೆ. ಸಾವಿನ ನೋವು ಕೂಡ ಯುಗಗಳಲ್ಲಿ ಕಾಡುತ್ತದೆ. ಮುಸ್ಲಿಂರಲ್ಲಿ ಇಂದಿಗೂ ಆಚರಣೆಯಲ್ಲಿರುವ

'ಮೊಹರಂ' ಎಂಬ ಹಬ್ಬವು ಜೀವಂತವಾಗಿದೆ. ಈ ಸಾವಿನ-ನೋವಿನ ಪರಿಣಾಮಗಳು ಮುಂದೆ ಬರುವ ಜನಾಂಗದ ಮೇಲೆ ಅವ್ಯಾಹತವಾಗಿ ಪ್ರಭಾವ ಬೀರುವ ತಾತ್ವಿಕ ಏಕತೆ ಧಾರ್ಮಿಕ ಏಕತೆಯನ್ನು ತಂದುಕೊಟ್ಟವು.

೩.೧.೭. ಶ್ರೀ ಯೋಗಿರಾಜ ಪುರಾಣ

ಪಂ. ಪುಟ್ಟರಾಜ ಕವಿ ಗವಾಯಿಗಳ ಶ್ರೀ ಯೋಗಿರಾಜ ಪುರಾಣವು ೧೯೮೮ರಲ್ಲಿ ರಚನೆಗೊಂಡಿದೆ. ಒಟ್ಟು ೭೦೯ ಪದ್ಯಗಳು ೧೫ ಸಂಧಿಗಳು ಈ ಕಾವ್ಯದಲ್ಲಿವೆ. ಯೋಗಿರಾಜರೆಂದು ಪ್ರಖ್ಯಾತರಾದ ಪ್ರಭುಕುಮಾರ ಪಟ್ಟಾಧ್ಯಕ್ಷರು. ಹಾನಗಲ್ಲ ಕುಮಾರ ಮಹಾಶಿವಯೋಗಿಗಳ ಹಠಯೋಗ ಸಾಧನೆಯಲ್ಲಿ ಸಿದ್ಧಿಯನ್ನು ಪಡೆದವರು. ಅವರು ನಿಜಕ್ಕೂ ಗುರುಗಳು. ಅವರ ಶಿವಯೋಗ ಸಮಾಧಿಯು ಕಡೂರು ತಾಲೂಕಿನ ಗಿರಿಯಾಪುರದಲ್ಲಿದೆ. ಈ ಶಿವಯೋಗಿಗಳ ವಿಶೇಷತೆ ಎಂದರೆ ಅವರು ಮಠ-ಮಾನ್ಯಗಳಿಗೆ ಆಸೆ ಪಡದೆ ಶಿವಪೂಜೆಯಲ್ಲಿ ಸರ್ವವನ್ನು ಕಂಡವರು. ಕಂಚಕಲ್ಲು ಬಿದರಿಯ ದೊಡ್ಡಮಠದ ಗುರುಪರಂಪರೆಯಲ್ಲಿ ಇವರು ಪಟ್ಟಾಧ್ಯಕ್ಷರಾಗಿ ಕಂಗೊಳಿಸಿದರು.

ಅನೇಕ ಮಠಾಧೀಶರಿಗೆ ಶಿವದೀಕ್ಷೆಯನ್ನು ನೀಡಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ. ಡಾ. ಜ.ಚ.ನಿಯವರು ಇವರಿಂದ ಶಿವ ದೀಕ್ಷೆ ಪಡೆದವರು. ಪ್ರಸ್ತುತ ಪುರಾಣ ಕಾವ್ಯಕ್ಕೆ ವಿಷಯ ವಸ್ತುವನ್ನು ಯೋಗಿರಾಜರ ಪೂರ್ವಾಶ್ರಮದ ಸಹೋದರರಾದ ಕೆ. ರುದ್ರಯ್ಯನವರು ಅನುಭವಗಳನ್ನು ಕ್ರೋಢೀಕರಿಸಿ ನೀಡಿದಾಗ ಡಾ. ಜ.ಚ.ನಿಯವರು ಗದ್ಯದಲ್ಲಿ ಯೋಗಿರಾಜರ ಚರಿತ್ರೆಯನ್ನು ನಿರೂಪಿಸಿದ್ದಾರೆ. ಅದನ್ನು ಅನುಸರಿಸಿ ಪಂ. ಪುಟ್ಟರಾಜ ಕವಿ ಗವಾಯಿಗಳವರು ಈ ಕಾವ್ಯವನ್ನು ರಚಿಸಿದ್ದಾರೆ.

ಕರ್ನಾಟಕದ ವೀರಶೈವ ಧಾರ್ಮಿಕ ಇತಿಹಾಸದಲ್ಲಿ 'ಶಿವಯೋಗ ಮಂದಿರದ ಸ್ಥಾಪನೆ'ಯು ಹೊಸ ಯುಗವೊಂದರ ನಿರ್ಮಾಣವೇ ಎನಿಸಿದೆ. ಹಾನಗಲ್ಲ ಕುಮಾರ ಸ್ವಾಮಿಗಳ ದೂರಗಾಮಿ ದೃಷ್ಟಿಯ ಪರಿಣಾಮವಾಗಿ ಮೂಡಿದ ಶಿವಯೋಗ ಮಂದಿರವು ಯೋಗಿರಾಜರಾದ ಪ್ರಭುಕುಮಾರ ಪಟ್ಟಾಧ್ಯಕ್ಷರ ಕಣ್ಣರಿಕೆಯಲ್ಲಿ ಬೆಳೆದು ಬಂದಿತು. ಸ್ವಯಂ ಆಸ್ತಿಗೆ ಆಶಿಸದೆ, ಮಠ-ಘಟಗಳನ್ನು ಬೆಳೆಸಿಕೊಳ್ಳದೆ, ಭಕ್ತರ ಸೇವೆಯೆ ತನ್ನ ಆಸ್ತಿಯೆಂದು ನಂಬಿ ಬಾಳಿದವರು ಶ್ರೀ ಪ್ರಭುಕುಮಾರ ಸ್ವಾಮಿಗಳು. ಇವರು ಕ್ರಿ.ಶ. ೧೯೩೦ರಲ್ಲಿ ಲಿಂಗೈಕ್ಯರಾದ ಬಳಿಕ ೫೦ ವರ್ಷಗಳ ನಂತರ ಈ ಪುರಾಣ ಕಾವ್ಯವು ನಿರ್ಮಾಣಗೊಂಡಿದೆ. ಇದರಲ್ಲಿ ಯಾವುದೆ ಉದ್ದೇಶಿತ ಅನಪೇಕ್ಷಿತ ವರ್ಣನೆಗಳು ಬರದೆ ಯೋಗಿರಾಜರ ಜೀವನ ಅರಳಿ ನಿಂತಿರುವದು. ಅವರ ಶಿಷ್ಯರು-ಪ್ರಶಿಷ್ಯರು ಅವರನ್ನು ನೆನೆಸುತ್ತಾ ಅವರ ಬಗೆಗೆ ಈ ಪುರಾಣ ಕಾವ್ಯದ ರಚನೆಗೆ ಪ್ರೇರಣೆ ನೀಡಿದ್ದಾರೆ. ಕಾವ್ಯವು ವೀರಶೈವ ತಾತ್ವಿಕ ಅಂಶಗಳನ್ನು ಅಂದರೆ ಅಷ್ಟಾವರಣ, ಪಂಚಾಚಾರ,

ಷಟ್‌ಸ್ಥಲಗಳನ್ನು ಒಳಗೊಳ್ಳುವುದು. ಆರಂಭದಲ್ಲಿಯೆ ಯೋಗಿರಾಜರ ವ್ಯಕ್ತಿತ್ವವನ್ನು ಕುರಿತು ಕಾವ್ಯ ರಚಿಸಲು ಅಲ್ಲಮ ಪ್ರಭುವಿನ ಪ್ರೇರಣೆಯಾಯಿತೆಂದು –

ಪ್ರಭುವು ಮಹಿತ ಪ್ರಭುವ ವಿ
ಪ್ರಭುವು ಭಕ್ತ ಪ್ರಭುವ ಶರಣ
ಪ್ರಭುವು ಶ್ರೀಮತ್ ಪ್ರಭುವು ವಿನುತ ಪ್ರಭುವು ಸತ್‌ಪ್ರಭುವು
ಪ್ರಭುವು ವರದ ಪ್ರಭುವು ಶುಭಗ
ಪ್ರಭುವು ಚಿತ್ ಪ್ರಭುವಲ್ಲಮಂ ಶ್ರೀ
ಪ್ರಭುಕುಮಾರ ಪುರಾಣಮಂ ಬರೆಯಿಸಲಿ ಮತ್ ಪ್ರಭುವು ॥

(ಶ್ರೀ ಯೋಗಿರಾಜ ಪುರಾಣ. ಪುಟ : ೦೨, ಪದ್ಯ : ೬)

ಕವಿ ಪುಟ್ಟರಾಜರು ಯೋಗಿರಾಜನ ವ್ಯಕ್ತಿತ್ವವನ್ನು ಭಕ್ತ, ಶರಣ, ವರದ, ಶುಭಗ ಎಂದು ಕೊಂಡಾಡಿದ್ದಾರೆ. ಈ ಕಾವ್ಯವನ್ನು ಸುಜನರು ಒಪ್ಪುವಂತೆ ನಿರ್ಮಿಸಿದ್ದೇನೆಂದು ಕವಿಗಳು ಹೇಳಿದ್ದಾರೆ. ಸಮಾಪ್ತಿ ವ್ಯಾಕ್ಯಗಳಲ್ಲಿ ಸಹಜವಾಗಿ ಫಲಾಶಯಗಳನ್ನು ಪ್ರಕಟಿಸಿದ್ದಾರೆ.

ಶ್ರೀ ಯೋಗಿರಾಜರು ಕಡೂರು ಸೀಮೆಯ ಕಂಚಕಲ್ಲು ಬಿದರಿಯಲ್ಲಿ ಇರುವ ಸಜ್ಜನ ದಂಪತಿಗಳು 'ಗಂಗಮಾಂಬೆ', 'ಶಿವಾರ್ಯರ' ಉದರದಲ್ಲಿ ಕ್ರಿ.ಶ. ೧೮೯೦ರಂದು ಜನಿಸಿದರು. ಶರಣ ಮಾರ್ಗದಲ್ಲಿದ್ದ ದಂಪತಿಗಳ ಪರಿಸರವು ಶರಣ ಕ್ಷೇತ್ರವೇ ಎನಿಸಿತ್ತು. ಅಲ್ಲಿ ಹುಟ್ಟಿದ ಯೋಗಿರಾಜನಿಗೆ 'ಮರುಳಾರ್ಯ' ಎಂದು ಹೆಸರಿಸಲಾಗಿತ್ತು.

ಮರುಳಾರ್ಯನಾಗಿ ಬಾಲ್ಯವನ್ನು ಸವಿಸಿದ ಯೋಗಿರಾಜರು ಬಾಲ್ಯಘಟ್ಟದಲ್ಲಿ ಸಂಸ್ಕೃತ ಅಧ್ಯಯನ ಮಾಡಿ; ಮುಂದೆ ಹಾನಗಲ್ಲ ಕುಮಾರ ಶಿವಯೋಗಿಗಳಿಂದ ಯೋಗದ ಮಹತ್ವವನ್ನು ಅರಿತು, ಯೋಗದಲ್ಲೆ ಅಪ್ರತಿಮ ಸಾಧನೆ ಮಾಡಿ ಯೋಗಿರಾಜರಾದರು. ಉತ್ತರ ಭಾರತದಲ್ಲಿ ನಡೆಯುವ ಕುಂಭ ಮೇಳದಲ್ಲಿ ನೆರೆದಿದ್ದ ಜನವೆಲ್ಲಾ ತಲೆದೂಗುವಂತೆ ಯೋಗಪ್ರದರ್ಶನ ಮಾಡಿದ ಶ್ರೇಯಸ್ಸು ಶ್ರೀ ಯೋಗಿರಾಜರಿಗೆ ಸಲ್ಲುತ್ತದೆ. ಯೋಗದ ಬಗ್ಗೆ ವಿವರಿಸುತ್ತ ಕಾವ್ಯ ಹೀಗೆ ತಿಳಿಸುತ್ತದೆ.

ಯೋಗದರ್ಥ ಸಾಮರಸ್ಯಂ
ಯೋಗದರ್ಥ ನಿಶ್ಚಿತತ್ವಂ
ಯೋಗದರ್ಥ ಚಿತ್ತವೃತ್ತಿ ನಿರೋಧಮೆಂದಹುದು ।
ಯೋಗದರ್ಥ ತತ್‌ಸಮತ್ವಂ
ಯೋಗದರ್ಥ ಕರ್ಮಕುಶಲತೆ
ಯೋಗದರ್ಥಗಳಿವು ಪಂಡಿತರಿಂದೆ ವಿದಿತಗಳು ॥

(ಶ್ರೀ ಯೋಗಿರಾಜ ಪುರಾಣ. ಪುಟ : ೨೬, ಪದ್ಯ : ೧೪)

ಯೋಗದ ಮಹತ್ವವನ್ನು ಅನಾದಿಕಾಲದಿಂದಲೆ ಭಾರತೀಯರು ಅರ್ಥ ಮಾಡಿಕೊಂಡಿದ್ದರು. ದೈಹಿಕ ಮಾನಸಿಕ ಸ್ವಾಸ್ಥ್ಯಗಳೆರಡಕ್ಕೂ ಯೋಗಕಾರಣವೆಂದು ಯೋಗಾಸನಗಳನ್ನು, ಪ್ರಾಣಾಯಾಮಗಳನ್ನು, ಶಾಸ್ತ್ರಿಯವಾಗಿ ತಿಳಿ ಹೇಳಿದ್ದರಿಂದ ಸಾವಿರ-ಸಾವಿರ ವರ್ಷಗಳು ದಾಟಿದರೂ ಯೋಗವು ವಿಜ್ಞಾನ ಯುಗದಲ್ಲಿಯೂ ಮುಂದುವರೆದಿದೆ. ಯೋಗವನ್ನು ವೈಜ್ಞಾನಿಕ, ಮನೋವೈಜ್ಞಾನಿಕ, ಶಾರೀರಿಕ, ಧಾರ್ಮಿಕ, ಅನುಭಾವಿಕ ನೆಲೆಗಳಲ್ಲಿ ಗುರುತಿಸಲಾಗಿದೆ. ಯೋಗದ ಮುಖ್ಯ ಅಂಶವೇ ಮಿತಾಹಾರ ಮತ್ತು ಮಿತನಿದ್ರೆ. ಇದಲ್ಲದೆ ಯೋಗವನ್ನು 'ಶಿವಯೋಗ'ವೆಂದು ವಿಶಿಷ್ಠವಾದ ನೆಲೆಯಲ್ಲಿ ಪಂಚಾಕ್ಷರ ಮತ್ತು ಷಡಕ್ಷರ ಮಂತ್ರಗಳೆಲ್ಲ ಯೋಗದ ಮೂಲತತ್ವಗಳೇ ಎಂದು ಆಚರಿಸಿದ ಯೋಗಿಪಟು ಶ್ರೀ ಯೋಗಿರಾಜ ಪ್ರಭುಕುಮಾರರಾಗಿದ್ದರು. ಸ್ವಯಂ ಪಂಡಿತ ಪುಟ್ಟರಾಜ ಕವಿ ಗವಾಯಿಗಳವರು ಯೋಗ ಸಾಧನೆಯಲ್ಲಿ ಹೆಸರುವಾಸಿಗಳಾಗಿರು-ವದರಿಂದ ಯೋಗದ ಬಗ್ಗೆ ಹೇಳುವಾಗ ಶಾಸ್ತ್ರ ಖಚಿತವಾಗಿ ನಿರೂಪಿಸುವದನ್ನು ಕಾಣಬಹುದು. ಧ್ಯಾನ ಮೌನಗಳನ್ನು ಹೊಂದುತ್ತಾ, ಮಂತ್ರ ಶಕ್ತಿಯನ್ನು ಅವಗಾಹನ ಮಾಡುತ್ತಾ, ನಾದಬಿಂದು ಕಲೆಗಳಿಂದ ಅತೀತನಾಗಿ ಇರುವ ಅತ್ಮನ ಸ್ವರೂಪವನ್ನು ಚಾಮರಸನು 'ಪ್ರಭುಲಿಂಗಲೀಲೆ'ಯ ಆರಂಭದ ಸ್ತುತಿ ಪದ್ಯದಲ್ಲಿ ಹೇಳಿದ್ದಾನೆ. ಮನೋಲಯ ಮತ್ತು ಸಿದ್ಧಿಗಳನ್ನು ಕುರಿತು ಕವಿಗಳು ಹೀಗೆ ಸೂಚಿಸಿದ್ದಾರೆ.

ಏನು ಕೇಳಿದಡುಂ ಕದಡದಲೆ
ಯೇನು ನೋಡಿದಡುಂ ಚಲಿಸದಲೆ
ಯೇನು ನೋದಿದಡುಂ ಕದಡದಲೆ ಮನಮಿರೆ ಲಯಮದು ।
ಯೇನು ಮಾಡಿದಡುಂ ನಡುಗದಲೆ
ಯೇನನಾಡಿದಡುಂ ಬೆದರದಲೆ
ಯೇನ ನೈದಿದಡುಂ ಕರಗದಲೆ ನಿಲಲಹುದು ಸಿದ್ಧಿ

(ಶ್ರೀ ಯೋಗಿರಾಜ ಪುರಾಣ. ಪು : ೨೯, ಪದ್ಯ : ೩೨)

ಈ ರೀತಿಯಾಗಿ ಯೋಗ ಸಾಧನೆಯಲ್ಲಿ ಅಪಾರವಾದ ಸಿದ್ಧಿಯನ್ನು ಪಡೆದು ಕಿರಿಯ ವಯಸ್ಸಿನಲ್ಲಿಯೆ ಹಿರಿದುದನ್ನು ಸಾಧಿಸಿದರು.

ಯೋಗಿರಾಜ ಪ್ರಭುಕುಮಾರರ ವ್ಯಕ್ತಿತ್ವವನ್ನು ವಿವರಿಸುತ್ತಾ

ಇವನ ನಿರಹಂಭಾವಕಂ ಮೇ
ಣಿವನ ಜಂಗಮ ಭಕ್ತಿಗಾ ಮೇ
ಣಿವನ ಲಿಂಗದ ನಿಷ್ಠೆಗಂ ಶೀಲಾಚರಣೆಗಂ ಮೇಣ್ ।
ಇವನ ಸುಗಣ ಸಮ್ಮೋಹಕಂ ಮೇ

ಣಿವನ ಸತ್ ಕರ್ತವ್ಯಕುಂ ಮೇ
ಣಿವನ ಸತ್‌ಚಾರಿತ್ರಕಂ ಮೆಚ್ಚಿದನಾ ಗುರುವು ॥

(ಶ್ರೀ ಯೋಗಿರಾಜ ಪುರಾಣ. ಪುಟ : ೩೯, ಪದ್ಯ : ೧೧)

ಈ ರೀತಿಯಲ್ಲಿ ನಿರಹಂಭಾವವು ಮನಸ್ಸಿನಲ್ಲಿ, ಜಂಗಮ ಭಕ್ತಿ-ಸೇವೆ ಬಾಹ್ಯದಲ್ಲಿ, ಲಿಂಗನಿಷ್ಠೆ ಆತ್ಮದಲ್ಲಿ ಮುಪ್ಪುರಿಗೊಂಡ ವ್ಯಕ್ತಿತ್ವ ಅವರಲ್ಲಿತ್ತು.

ಪ್ರಭುಕುಮಾರರ ಶರಣಪ್ರಜ್ಞೆ, ಲಿಂಗನಿಷ್ಠೆಗಳನ್ನು ಕಲ್ಯಾಣಿ ಚಾಲುಕ್ಯರ ಆರನೆ ವಿಕ್ರಮಾದಿತ್ಯನ ಮಹಾದಂಡನಾಯಕ ಕೇಶಿರಾಜನ ಕಥೆಯನ್ನು ವಿವರಿಸುತ್ತಾ, ಕೃತಿಯ ಸೊಬಗನ್ನು ಹೆಚ್ಚಿಸಲಾಗಿದೆ.

೩.೧.೮ ಶ್ರೀ ಗಂಜೀಗಟ್ಟಿ ಚರಮೂರ್ತೀಶ್ವರ ಪುರಾಣ

ಹಾವೇರಿ ಜಿಲ್ಲೆಯ ಗಂಜೀಗಟ್ಟಿಯಲ್ಲಿ ಕಳೆದ ಶತಮಾನದಲ್ಲಿ ಆಗಿಹೋದ ಅನುಭಾವಿಗಳ ಪುರಾಣ ಕಾವ್ಯವು ಶ್ರೀ ಶಂಭುಲಿಂಗ ಚರಮೂರ್ತಿ ಮಹಾಸ್ವಾಮಿಗಳ ಚರಿತ್ರೆಯಾಗಿದೆ. ೧೯೭೧ರಲ್ಲಿ ರಚನೆಗೊಂಡ ಈ ಪುರಾಣವು ಆಗಿನ ಪೀಠಾಧಿಪತಿಗಳಾದ ಶ್ರೀ ಚರಮೂರ್ತಿ ಸ್ವಾಮಿಗಳು ಹೇಳಿ ಬರೆಸಿದ್ದಾಗಿದೆ. ೧೯ ಸಂಧಿಗಳುಳ್ಳ ೬೧೮ ಭಾಮಿನಿ ಷಟ್ಪದಿ ಪದ್ಯಗಳಲ್ಲಿ ಈ ಕಾವ್ಯವು ಮೂಡಿ ಬಂದಿದೆ. ಚರಮೂರ್ತಿಗಳಾದ ಶ್ರೀ ಶಂಭುಲಿಂಗ ಸ್ವಾಮಿಗಳು ಆ ಕಾಲದ ಅನುಭಾವಿಗಳಾದ ಸಿದ್ಧಾರೂಢರು, ಗರಗದ ಮಡಿವಾಳಪ್ಪ, ಶಿಶುನಾಳ ಶರೀಫರು ಇವರ ಸಂಪರ್ಕದಲ್ಲಿದ್ದು ಚರಮೂರ್ತಿಗಳಾಗಿ ನಾಡನ್ನು ಸಂಚರಿಸಿ ತಾತ್ವಿಕ ಅನುಸಂಧಾನ ನಡೆಸಿದರು.

ಈ ಪುರಾಣ ಕಾವ್ಯದಲ್ಲಿ ಜನಜನಿತವಾದ ಸ್ವಾಮಿಗಳ ಲೀಲೆಗಳನ್ನು ಮತ್ತು ಅವರೊಂದಿಗೆ ಇದ್ದ ಜನರ ಜೀವನ ಚರಿತ್ರೆಗಳಿಂದಲೂ ವಿಷಯ ಸಂಗ್ರಹಿಸಿದವರು. ಶ್ರೀ ಮಹಾಂತಸ್ವಾಮಿಗಳು ಸಾ. ಚಿಕ್ಕಮಲ್ಲೂರು. ಅದನ್ನು ಆಧಾರವಾಗಿಟ್ಟುಕೊಂಡು ಈ ಕೃತಿಯನ್ನು ರಚಿಸಲಾಗಿದೆ. ಕೃತಿಗೆ 'ನಾಯಕಂ ಚರಮೂರ್ತಿಯೇ' ಎಂದು ಕವಿಗಳು ಸೂಚಿಸಿದ್ದಾರೆ. ಆರಂಭದಲ್ಲಿ ಅತ್ಯತ್ತುಮ ವರ್ಣನೆಗಳು ಇರುವದು ಈ ಕೃತಿಯ ವಿಶೇಷತೆಯಾಗಿದೆ. ಸಂಕ್ಷಿಪ್ತವಾಗಿ ಈ ಪುರಾಣದ ವಸ್ತು ಇಂತಿದೆ. ಸವಣೂರಿನ ಸಮೀಪ ಮಾದಾಪುರದ 'ಶಿವಾರ್ಯ' ಮತ್ತು 'ಪಾರ್ವತಿ' ಎಂಬ ದಂಪತಿಗಳಿಗೆ ಮಗುವಾಗಿ ಹುಟ್ಟಿದ ಶ್ರೀ ಚರಮೂರ್ತಿಗಳು 'ಶಂಭುಲಿಂಗ' ಎಂಬ ಹೆಸರಿನೊಂದಿಗೆ ಬೆಳೆದು ದೊಡ್ಡವರಾದರು. ಸಾಮಾನ್ಯವಾದ ಮಗುವಿನಂತೆ ಇರದ ಶಂಭುಲಿಂಗ ಭಕ್ತಿ ಪರಿಸರದಲ್ಲಿಯೇ ಬೆಳೆದರು. ತಂದೆ-ತಾಯಿಗಳು ಅಧ್ಯಾತ್ಮ ಪರಿಸರದಲ್ಲಿದ್ದುದರಿಂದ ಅದೇ ಭಕ್ತಿ-ಭಾವಗಳನ್ನು ಮೈಗೂಡಿಸಿಕೊಂಡು ಶಂಭುಲಿಂಗನು ಬೆಳೆದನು. ಅವರ ಮನೆ ಮಠವಾದದ್ದರಿಂದ ಅಲ್ಲಿ ವಿದ್ಯಾಭ್ಯಾಸ ಮತ್ತು ಆಧ್ಯಾತ್ಮವು ಸಮ-ಸಮನಾಗಿ ಮಗುವಿನಲ್ಲಿ ಬೆಳೆದವು. ಅದನ್ನು ಕುರಿತು ಕವಿಗಳು –

ಗುರುವಿನಿದಿರೋಳ್ ಕುಳ್ಳಿರಲಿಲ್ಲ
ಗುರುವಿನಿದಿರೋಳ್ ಮಲಗಲಿಲ್ಲಂ
ಗುರುವಿನಿದಿರೊಳ್ ನಮ್ರತೆಗೆಟ್ಟು ತಿರುಗಲಿಲ್ಲವನು ।
ಗುರುವಿನಿದಿರೋಳ್ ಮೇಲಿರಲಿಲ್ಲ
ಗುರುವಿನಿದಿರೋಳ್ ಗಳುಹಲಿಲ್ಲಂ
ಗುರುವಿನಿದಿರೋಳ್ ತೂಕಡಿಸಲಿಲ್ಲಾಕಳಿಸಲಿಲ್ಲಾ ॥

(ಶ್ರೀ ಗಂಜೀಗಟ್ಟಿ ಚರಮೂರ್ತೀಶ್ವರ ಪುರಾಣ. ಪುಟ : ೩೧, ಪದ್ಯ : ೨೨)

ವಿದ್ಯಾರ್ಥಿಯಾಗಿರುವಾಗಲೆ ಇವರಿಗೆ ಲೀಲಾನುಭಾವನೆಯ ವ್ಯಕ್ತಿತ್ವ ಇದ್ದಿತು. ಆಗಲೆ ದಯಾಪರ ಗುಣ, ತಾಳ್ಮೆ-ಸಹನೆ, ಮಾನವೀಯ ಅನುಕಂಪೆ ಇವೆಲ್ಲವು ಇದ್ದವು. ಕಚ್ಚಿದ ಚೋಳನ್ನು ಕೊಲ್ಲದೇ ಬಿಟ್ಟು ದಯಾಪರತೆಯ ಜೊತೆ ಸರ್ವವು ಶಿವಮಯ ಎಂಬ ಭಾವ ಇವರದಾಗಿತ್ತು.

ಶಿವ ಶಿವನೆಂದು ನೋವುನಳಿಯುತೆ
ಶಿವನ ಪ್ರೇರಣೆಯಿಂದೆ ತುಳಿದೇಂ
ಶಿವನೆ ಶಿಕ್ಷೆಯನೆನಗಿತ್ತಿಹಂ ಚೋಳ ಕೊಂದೊಡನೆ ।
ಶಿವನವ ಕೃಪೆಗೆ ಪಾತ್ರನಪ್ಪೇಂ
ಶಿವನಿಚ್ಛೆಯು ನಿಮಗೆ ಪೇಳ್ದೇಂ
ಶಿವನ ಲೀಲೆಯಿದೆಂದುಂ ಶಂಭುಲಿಂಗಂ॥

(ಪುಟ : ೩೪, ಪದ್ಯ : ೩೪.)

ಹೀಗೆ ಒಳ ಹೊರಗೆಲ್ಲಾ ಶಿವ ಭಾವವನ್ನು ತುಂಬಿ ಹತ್ತೇ ವರ್ಷದಲ್ಲಿ ನೂರಾರು ವರ್ಷದ ಬುದ್ಧಿ ಸಾಮರ್ಥ್ಯವನ್ನು ಹೊಂದಿ ಬೆಳೆದು ಬಂದನು.

ಸಹಜವಾಗಿ ಬಾಲಕ ಶಂಭುಲಿಂಗನಿಗೆ ದೀಕ್ಷೆಯನ್ನು ಹಮ್ಮಿಕೊಳ್ಳಲಾಯಿತು. ಆ ಸಂದರ್ಭದಲ್ಲಿ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ ಮೊದಲಾದ ತತ್ವಗಳನ್ನು ತಿಳಿ ಹೇಳಿ ೧೨ ವರ್ಷಕ್ಕೆ ತಿಳುವಳಿಕೆಯ ನಿಧಿಯಾಗಿ ಶಂಭುಲಿಂಗ ಬೆಳೆದು ಬಂದ. ಸಹಜವಾಗಿ ಆತನಿಗೆ ಲಗ್ನ ಮಾಡಲು ಮನೆಯಲ್ಲಿ ಆಲೋಚಿಸಿದಾಗ ದಾರ್ಶನಿಕ ಮತ್ತು ತಾತ್ವಿಕ ಕಾರಣಗಳನ್ನು ಮುಂದಿಟ್ಟು ಆ ಲಗ್ನವನ್ನು ತೊರೆಯುತ್ತಾನೆ. ಶಂಭುಲಿಂಗನ ಮದುವೆ ಮಾಡಬೇಕೆಂಬ ನಿಮ್ಮ ಇಚ್ಛೆಯು ಪೂರ್ಣಗೊಳ್ಳಲಾರದು. ಬಾಲ್ಯದಲ್ಲಿಯೇ ನನ್ನ ಲಗ್ನವಾಗಿದೆ. ನೀವೆಲ್ಲರೂ ಗುರುಗಳಾಗಿ ಸತಿಯಾದ (ಜೀವ) ಅಂಗವನ್ನು ಪತಿಯಾದ ಲಿಂಗಕ್ಕೆ ಧಾರೆ ಎರೆದಿದ್ದೀರಿ. ಆದ್ದರಿಂದ

ಸ್ತ್ರೀಯು ಸ್ತ್ರೀಯೊಡನೆಹ ವಿವಾಹಂ
ನ್ಯಾಯದಿಂ ನಗೆಗೇಡಲ್ಲವೆಯ
ಪಾಯಕೆನ್ನಂ ತಿಳಿದು ತಿಳಿದುಮದೇತಕೆಳೆಯುವಿರಿ ॥

(ಪುಟ : ೮೪, ಪದ್ಯ : ೨೩)

ಹೀಗೆ ಮದುವೆಯನ್ನು ತಿರಸ್ಕರಿಸಿದ ಶಂಭುಲಿಂಗನಿಗೆ ಮಠದ ಅಧಿಕಾರವು ಕಳೆದು ಹೋಗುವದು. ಸ್ವತಃ ತಂದೆಯೆ ನೀನು ಚರಮೂರ್ತಿಯಾಗಿ ಅಲೆದಾಡು. ನಿನಗೆ ಪಟ್ಟಾಧ್ಯಕ್ಷ (ಮಠದ) ಪದವಿ ಬೇಕೆಂದರೆ; ಮಠದ ಅಧಿಕಾರವು ಉಳಿಯಬೇಕಾದರೆ, ನೀನು ಮದುವೆಯಾಗು. ಮದುವೆ ಬೇಡವೆನ್ನುವುದಾದರೆ ಮಠದಿಂದ ಹೊರಗೆ ಹೋಗಿ ವಿರಾಗಿಯಾಗು ಎಂದು ಹೇಳಿದರು. ಅದೇ ರೀತಿ ಚಲಿಸುತ್ತಾ ಚರಮೂರ್ತಿಯಾದ ಶಂಭುಲಿಂಗನಿಗೆ ಜನರು ಅಲೆಮಾರಿ ಹುಚ್ಚರೆಂದೇ ಆರಂಭದಲ್ಲಿ ತಿಳಿದರು. ಹೀಗೆ ಅಲೆಯುತ್ತಾ ನಾಡಿನ ವಿವಿಧೆಡೆ ಸಂಚರಿಸುತ್ತಾ ದುಂಡಸಿ ಗ್ರಾಮಕ್ಕೆ ಆಗಮಿಸುತ್ತಾರೆ. ಈ ವೇಳೆಗಾಗಲೇ ಸ್ವಾಮಿಗಳ ವಿಚಾರಧಾರೆ ವ್ಯಾಪಕವಾದ ಮನೋಭೂಮಿಕೆಯನ್ನು ಹೊಂದಿತ್ತು.

ಎಲ್ಲ ಮತದವರೆಲ್ಲ ಮತಿಯವರು
ರೆಲ್ಲಾ ಜಾತಿಗರೆಲ್ಲ ನೀತಿಗರು
ರೆಲ್ಲಾ ಕುಲದವರೆಲ್ಲ ನೆಲದವರಲ್ಲಿ ಕೂಡಿಹರು ।
ಎಲ್ಲ ಪಥದವರೆಲ್ಲ ವ್ರತದವರು
ರೆಲ್ಲ ಕಲಿಯವರೆಲ್ಲ ನೆಲೆಯುವ
ರೆಲ್ಲ ಜನರೊಮ್ಮನದಿಂದೆ ನೆರೆದಿದ್ದಿರತಿ ಮುದದೆ ॥

(ಪುಟ : ೯೨, ಪದ್ಯ : ೨೪.)

ಈ ರೀತಿಯಾಗಿ 'ಜಗತ್ತೆ ತನ್ನ ಮನೆ, ಮಾನವ ಕುಟುಂಬವೇ ತನ್ನ ಬಳಗ' ಎಂದು ಲೋಕಾರ್ಪಿತ ಜೀವನವನ್ನು ನಡೆಸಿ ಮಾದಾಪುರ ಗ್ರಾಮದ ಚರಮೂರ್ತಿ ಮೈಸೂರು ಸೀಮೆಗೆ ಭೆಟ್ಟಿಕೊಡುವರು. ಆಗ ಮೈಸೂರು ಮಠದ, ಕೊಂಡಿಮಠದ ಸ್ವಾಮಿಗಳಿಗೆ ಭೇಟಿಯಾದಾಗ ಈತನ ಹಿರಿಮೆಯನ್ನು ಅರ್ಥಮಾಡಿಕೊಂಡು ಇವನಿಗೆ ಯೋಗ್ಯವಾದ ಬೋಧ ಮಾರ್ಗಗಳನ್ನು ಕರುಣಿಸಿದರು.

ಅವಧೂತ ಮತ್ತು ಅನುಭಾವ ಪರಂಪರೆಯಲ್ಲಿ ಬಂದ ಎಲ್ಲರು ಲೋಕದ ಕಣ್ಣಿಗೆ ಹುಚ್ಚರಂತಿದ್ದು, ಅವರಂತರಂಗವನ್ನು ಅರಿತವರು ಮಾತ್ರ ಅವರನ್ನು ಮಹಾತ್ಮರೆಂದು ಗುರುತಿಸುತ್ತಿದ್ದರು. ಅವರ ಜೀವನವು ವಿಶೇಷವಾದ ಘಟನಾವಳಿಗಳನ್ನು ಹೊಂದಿದಂತೆ ಅಲೌಕಿಕವಾದ ಘಟನೆಗಳನ್ನು-ಲೀಲೆ ಎಂಬಂತೆ; ಪವಾಡವೆಂಬಂತೆ ಮುಂದೆ ಜನಜನಿತಗೊಳಿಸಿ-ದವರು ಸ್ವಾಮಿಜಿಗಳ ಭಕ್ತರೇ ! ಈ ಲೀಲೆಗಳು ಸಾಮಾನ್ಯ ಘಟನೆಗಳನ್ನೇ ವಿಜೃಂಭಿಸಿದ

ಘಟನೆಗಳಾಗುವವು. ಇವುಗಳಲ್ಲಿ ಬಹಳಷ್ಟು ಪವಾಡಗಳು ಸ್ವಕಪೋಲ ಕಲ್ಪಿತಗಳಾಗಿರುವವು. ಇಂತಹ ಪವಾಡಗಳು ಆಯಾವ್ಯಕ್ತಿಗಳ ಬದುಕಿನಲ್ಲಿ ಘಟಿಸಿದವೆಂದೆ ಬಿಂಬಿಸಲಾಗುವದು. ಆ ವ್ಯಕ್ತಿಯ ಬದುಕಿನ ಮಹತಿಯನ್ನೆತ್ತರಿಸಲು ಈ ರೀತಿಯಾದ ಲೀಲೆಗಳ ವರ್ಣನೆಯು ಬಂದಿರುವದು. ಮಹಾತ್ಮರ ಬದುಕು ಮತ್ತು ಸಾಧನೆ-ಸಿದ್ಧಿಗಳು ಸಾಮಾನ್ಯರಿಗೆ ಸಾಧ್ಯವಿಲ್ಲದ್ದ-ರಿಂದಲೂ ಅವುಗಳನ್ನು ಅನುಸರಿಸಲು ಸಾಧ್ಯವಾಗದ್ದರಿಂದಲೂ; ಅವರನ್ನು ಎತ್ತರದಲ್ಲಿ ನೋಡುವ ಪ್ರಯತ್ನ ವಿರುವದರಿಂದಲೂ ಲೀಲೆ ಮತ್ತು ಪವಾಡಗಳನ್ನು ಹೇಳಲಾಗುವದು.

ಶ್ರೀ ಚರಮೂರ್ತಿಗಳ ಬದುಕಿನಲ್ಲಿ ಈ ರೀತಿ ಲೀಲೆಗಳು ವ್ಯಾಪಕವಾಗಿ ನಿರೂಪಿತವಾಗಿವೆ. ನೀರಿನಲ್ಲಿ ಬಿದ್ದ ರೊಟ್ಟಿಯನ್ನು ಸ್ವಾಮಿಗಳು ಎತ್ತಿಕೊಂಡಾಗ ಅದು ಬಿಸಿಯಾಗಿರುವದು. ಈ ತೆರನಾದ ಲೀಲೆಗಳು ಸಹಜವಾದ ಘಟನೆಗಳಿಗೆ ಪವಾಡದ ಬಣ್ಣ ಲೇಪಿಸಿದಂತೆ ಕಾಣುತ್ತದೆ. ಭಾರತದ ವಿವಿಧ ಪ್ರಾಂತಗಳಲ್ಲಿ ಈ ತೆರನಾದ ನಿರೂಪಣೆಗಳಿವೆ. ಮಹಾರಾಷ್ಟ್ರದಲ್ಲಿ ಜ್ಞಾನದೇವ ಗೋಡೆಯನ್ನೇ ಏರಿ ನಡೆಯಿಸಿಕೊಂಡು ಹೋದುದು. ಹುಲಿಯನ್ನೇರಿದ ಸಂತ, ಎಷ್ಟೋ ಶತಮಾನಗಳ ಕಾಲ ಬದುಕಿರುವದು, ನೀರನ್ನುರಿಸಿ ದೀಪ ಬೆಳಗಿಸಿದ್ದು, ಕಲ್ಲಲ್ಲಿ ನೀರನ್ನು ಬರಿಸಿದ್ದು, ಮಕ್ಕಳನ್ನು ನೀಡಿದ್ದು, ಸಂಪತ್ತನ್ನು ನೀಡಿದ್ದು - ಹೀಗೆ ಪಟ್ಟಿ ಬೆಳೆದು ಬೆಳೆದು ಅನಂತವಾಗುವದು. ಈ ತೆರನಾದುದು ಪಾಶ್ಚಿಮಾತ್ಯರಲ್ಲಿಯೂ ಇರುವದನ್ನು ಗುರುತಿಸಬಹುದು. ಒಟ್ಟಾರೆ ವ್ಯಕ್ತಿಯ ಮಹತಿಯನ್ನು ಅವರ ಅಸಾಮಾನ್ಯವೆನಿಸುವ ಕ್ರಿಯೆಯಲ್ಲಿಯೆ ಕಾಣಬೇಕು. ಹೀಗೆ ಪವಾಡಗಳ ಸುತ್ತು ಬಳಕೆಯಿಂದಲ್ಲ !

೩.೧೯ ಶ್ರೀ ಅನ್ನದಾನೇಶ್ವರ ಪುರಾಣ

ಶ್ರೀ ಅನ್ನದಾನೇಶ್ವರ ಪುರಾಣವು ಮುಂಡರಗಿಯ ಶ್ರೀ ಜಗದ್ಗುರು ಅನ್ನದಾನೇಶ್ವರ ಸಂಸ್ಥಾನಮಠದ ಕರ್ತೃ ಅನ್ನದಾನೇಶ ಸ್ವಾಮಿಗಳ ಪುರಾಣ ಕಾವ್ಯವಾಗಿದೆ. ೨೬ ಸಂಧಿಗಳಲ್ಲಿ ೧೪೪೬ ಭಾಮಿನಿ ಷಟ್ಪದಿಯ ಪದ್ಯಗಳಲ್ಲಿ ಮೂಡಿದ ಈ ಕಾವ್ಯವು ೧೯೫೫ರಲ್ಲಿ ಪ್ರಕಟಗೊಂಡಿದೆ. ಇಲ್ಲಿ ಬರುವ ವಿಷಯಗಳು ಚಾರಿತ್ರಿಕವಾದ ಹಿನ್ನೆಲೆಯಲ್ಲಿ ಐತಿಹಾಸಿಕವಾದ ಸತ್ಯವನ್ನು ಹಿಂದೂಡುತ್ತ ತಾತ್ವಿಕವಾದ ವಿವೇಚನೆಯೊಂದಿಗೆ ಮೂಡಿವೆ. ಆರಂಭದಲ್ಲಿ ಕವಿ ಪಂ. ಪುಟ್ಟರಾಜರು ಹೇಳುವಂತೆ ಈ ಮೃಡಗಿರಿ ಕರ್ತೃ ಶ್ರೀ ಜಗದ್ಗುರು ಅನ್ನದಾನೇಶ್ವರ ಪುರಾಣವು ಚಾರಿತ್ರಿಕವಾದದ್ದಲ್ಲ, ಕೇವಲ ತಾತ್ವಿಕವಾದದ್ದು, (ಶ್ರೀ ಅ.ಪು.ಪು. viii) ಇದಕ್ಕೆ ಹಿನ್ನೆಲೆಯಾಗಿ ಶ್ರೀ ವಾಣಿಯಲ್ಲಿ ಕೆಲವು ಮಾತುಗಳನ್ನು ಗಮನಿಸಬಹುದು. "ಶ್ರೀ ಜಗದ್ಗುರು ಅನ್ನದಾನೇಶ್ವರ ಮಹಾಸ್ವಾಮಿಗಳನ್ನು ಪರಿಚಯಿಸುವದು ನಮ್ಮ ಕರ್ತವ್ಯ, ಸರಿಯಾದ ಸಾಹಿತ್ಯ ಲಭಿಸದಿದ್ದರೂ ಸತತವಾಗಿ ಅನುಷ್ಠಾನ ಮಾಡುತ್ತ, ಮಾಡುವವರು ಬರೆಸಿದಂತೆ ಆತನನ್ನು ಕುರಿತು ಚಿನ್ಮಯ ಚೇತನವಾಯಿತು" (ಶ್ರೀ ವಾಣಿ.)

ಸ್ವಾಮಿಗಳು ಸ್ವಂತ ಅಲ್ಲಲ್ಲಿ ಕಂಡ ಕುರುಹುಗಳು, ಶ್ರೀ ಮಠದ ದಾಖಲೆಗಳು, ಕೆಲವು ಐತಿಹಾಸಿಕ ಸಂಗತಿಗಳು ಇವೆಗಳನ್ನೆಲ್ಲಾ ಆಧಾರವಾಗಿಟ್ಟುಕೊಂಡು ಗುರು ಬರೆಯಿಸಿದಂತೆ ಬರೆಯಲಾಯಿತು. (ಶ್ರೀ ವಾಣಿ.) ಹೀಗೆ ಈ ಪುರಾಣ ಕಾವ್ಯದ ವಸ್ತುವನ್ನು ಮೂಲತ ಕಲ್ಪಿಸಿಕೊಂಡು ಬರೆದವರು ಈಗ ಪೀಠಾಧಿಕಾರಿಗಳಾದ ಶ್ರೀ ಜಗದ್ಗುರು ಅನ್ನದಾನೇಶ್ವರ ಸ್ವಾಮೀಜಿಯವರು. 'ಚಿನ್ಮಯ ಚೇತನ'ವೆಂಬ ಕೃತಿಯನ್ನು ರಚಿಸಿ ಅದನ್ನು ಪಂ. ಪುಟ್ಟರಾಜ ಗವಾಯಿಗಳಿಗೆ ತೋರಿಸಿ, ಆ ಮಾರ್ಗದಲ್ಲಿಯೆ ಈ ಪುರಾಣವು ರಚನೆಯಾಗುವಂತೆ ಸ್ವಾಮೀಜಿಯವರು ಪ್ರಯತ್ನ ಪಟ್ಟಿದ್ದಾರೆ. ಅದೇ ವಿಷಯವನ್ನು 'ಅನುಭಾವಿ' ಎಂಬ ಗ್ರಂಥದಲ್ಲಿಯೂ (೧೯೫೫) ಪ್ರಸ್ತಾಪಿಸಲಾಗಿದೆ. ಮುಂಡರಗಿಯ ಅನ್ನದಾನೇಶ್ವರ ಮಠದ ಪ್ರಸ್ತುತ ಜಗದ್ಗುರುಗಳು ೧೦ನೇ ಪೀಠಾಧಿಕಾರಿಗಳಾಗಿದ್ದಾರೆ. ಇವರಿಗಿಂತ ಹಿಂದಿನ ೪ ಪೀಠಾಧಿಪತಿಗಳ ಕಾಲ ಉಲ್ಲೇಖವನ್ನು ತಿಳಿಯಬಹುದು. ೫ನೇ ಪೀಠಾಧಿಪತಿಗಳು ಕ್ರಿ.ಶ. ೧೭೫೦ ರಿಂದ ಪೀಠವನ್ನು ಏರಿದರೆಂದು ಅನುಭಾವಿ ಗ್ರಂಥದಲ್ಲಿ ಉಲ್ಲೇಖವಿದೆ. (ಅನುಭಾವಿ ಅ.ಗ್ರಂ. ಶ್ರೀ ಜ.ಅ.ಸಂ.ಮು.ಪು ೪೫೨.) ಅದಕ್ಕೂ ಹಿಂದಿನ ಶ್ರೀ ಜಗದ್ಗುರುಗಳ ಕಾಲ ಉಲ್ಲೇಖವಿಲ್ಲ, ಇವರ್ಯಾರ ಹೆಸರು ಸಿಗಲಾರವು. ಈ ಪೀಠಾಧಿಪತಿಗಳೆಲ್ಲಾ ಒಂದೇ ನಾಮದಿಂದ ಬೆಳಗಿದ್ದಾರೆ ಎಂದು ಸ್ಥೂಲವಾದ ಒಂದು ಹೇಳಿಕೆ ಇದೆ. ಈಗಿನ ಸ್ವಾಮಿಗಳು ತಿಳಿಸಿದಂತೆ (ಚಿನ್ಮಯ ಚೇತನ) ೧೭೫೦ಕ್ಕೆ ಹಿಂದಿನ ಮಠದ ಚರಿತ್ರೆಯನ್ನು ಪ್ರಸ್ತುತ ಸ್ವಾಮಿಗಳೆ ನಿರೂಪಿಸಿದ್ದಾರೆ. ಅಷ್ಟೇ ಅಲ್ಲದೇ ಚನ್ನಬಸವಣ್ಣನವರಿಂದ ಕ್ರಿಯಾಗಟ್ಟಿಯನ್ನು ಪಡೆದ ಯಲ್ಲಾಪುರದ ಯುವಕನೊಬ್ಬ ಮುಂದೆ ಈ ಮಠದ ಕರ್ತೃ ಆದನೆಂದು, ಆತನೇ ವಿಜಯನಗರ ಕಾಲದವರೆಗೆ ಬಾಳಿ ಬದುಕಿದ ಪವಾಡ ಪುರುಷನೆಂದು ಸ್ವಾಮಿಜೀಯವರು 'ಚಿನ್ಮಯಚೇತನ'ದಲ್ಲಿ ತಿಳಿಸಿದ್ದಾರೆ. ಹೊಸಳ್ಳಿಯ 'ಬೂದೀಶ್ವರ ಮಹಾಸ್ವಾಮಿಗಳು' ೭೭೦ ವರ್ಷ ಬದುಕಿದರೆಂಬ ಹಿನ್ನೆಲೆಯಲ್ಲಿ ಸ್ವಾಮೀಜಿಯವರು ಆ ಉದಾಹರಣೆ ಮುಂದಿಟ್ಟುಕೊಂಡು ತಮ್ಮ ಕರ್ತೃ ಹೀಗೆ ೩೦೦ ವರ್ಷಗಳ ಕಾಲ ಬದುಕಿದ್ದ ಎಂಬ ವಿಷಯವನ್ನು ಬರೆದಿದ್ದಾರೆ ಮತ್ತು ಬರೆಸಿದ್ದಾರೆ. ಹುಬ್ಬಳ್ಳಿಯ ಮೂರುಸಾವಿರಮಠದ ಕರ್ತೃ ಕೂಡ ಕಲ್ಯಾಣದ ಅಲ್ಲಮನ ಕಾಲದವರೆಗೆ ಸ್ವಕಲ್ಪಿತ ಚರಿತ್ರೆಯನ್ನು ಬರೆಯಿಸಿದ್ದರು. ಮೂಲ ಗೊತ್ತಿಲ್ಲದೇ ಹೋದಾಗ ರಹಸ್ಯಕ್ಕೆ ಹೀಗೆ ಕಲ್ಪನೆಯ ಬಣ್ಣವನ್ನು ಕೊಡುವ ಸಾಧ್ಯತೆಗಳಿವೆ. ಅರಸರು ಚಂದ್ರವಂಶ, ಸೂರ್ಯವಂಶ, ಎಂದು ಕರೆದುಕೊಳ್ಳುವದು, ಅಲ್ಲದೆ ಸ್ವಾಮಿಗಳು ಕೂಡ ತಮ್ಮದು ಶರಣ ಸಂಜಾತವೆಂದು ಕರೆದುಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಇನ್ನೂ ವಿರಕ್ತ ಸ್ವಾಮಿಗಳಿಗೆ ಯಾವದಾದರೊಂದು ಸಮಯದ ಹಿನ್ನೆಲೆ ಇರುತ್ತದೆ. ಮುರುಘಾಸಮಯ, ಚಿಲಾಳಸಮಯ, ಇಂಥ ಒಂದು ಸಮಯಕ್ಕೆ ಬದ್ಧರಾಗಿಯೆ ಸ್ವಾಮಿಗಳು ತಮ್ಮನ್ನು ಗುರ್ತಿಸಿಕೊಳ್ಳುವದಿದೆ. ಇಲ್ಲಿ ಅವುಗಳನ್ನು ಯಾವನ್ನು ಹೇಳಿಲ್ಲ. ಚಾರಿತ್ರಿಕ ನಿಲುವು ಇಲ್ಲಿ ಎಳ್ಳಷ್ಟು ಪ್ರಾಮುಖ್ಯತೆಯನ್ನು ಪಡೆಯುವದಿಲ್ಲ. ಆಧಾರವಿಲ್ಲದ ಚಾರಿತ್ರಿಕ ಘಟನೆಗಳನ್ನು

ಹೇಳಿಕೊಳ್ಳುವದು ತಮ್ಮನ್ನು ಶರಣರೊಂದಿಗೆ ಸಮೀಕರಿಸಿಕೊಳ್ಳುವ ಒಂದು ಹುಚ್ಚು ಸಾಹಸವಾಗುತ್ತದೆ.

ಅನ್ನದಾನೇಶ್ವರ ಪುರಾಣದ ಮುಖ್ಯವಾದ ಘಟನೆಗಳು ಕಲ್ಯಾಣದ ಪರಿಸರದಿಂದ ಪ್ರಾರಂಭವಾಗಿ ಕರ್ನಾಟಕವನ್ನು ಸುತ್ತಿ ಮೂರು ಶತಮಾನಗಳ ನಂತರ ವಿಜಯನಗರ ಕಾಲದ ಮಧ್ಯಭಾಗದಲ್ಲಿ ನಿಂತು ಬಿಡುತ್ತದೆ. ಉತ್ತರ ಕರ್ನಾಟಕದ ಅದರಲ್ಲಿಯೂ ಗದಗ ಜಿಲ್ಲೆಯ ಕೆಲವು ಘಟನೆಗಳನ್ನು ಈ ಕೃತಿಯು ನಿರೂಪಿಸುವುದು. ಕರ್ತೃ ಅನ್ನದಾನೇಶನೇ ನಾಯಕನೆಂದು ಈ ಕಾವ್ಯವು ಹೇಳುತ್ತದೆ. ಕೊನೆಗೆ ಆ ಕರ್ತೃ ಅಣ್ಣಿಗೇರಿಯಲ್ಲಿ ಸಮಾಧಿ ಹೊಂದಿದರೆಂದು ಕಾವ್ಯ ತಿಳಿಸುತ್ತದೆ. ಇದರಲ್ಲಿ ಬಸವಾದಿ ಶರಣರ ವಚನಗಳ ಉಲ್ಲೇಖವು, ಸರ್ವಜ್ಞನ ವಚನಗಳು, ಕೊನೆಗೆ ಪೀಠಾಧಿಪತಿಯಾದ (೧೦ನೇ) ಅನ್ನದಾನೇಶ್ವರ ಸ್ವಾಮಿಯ ವಚನಗಳು ಇಲ್ಲಿ ಮುಖ್ಯ ಭಾಗವಾಗಿಯೇ ಉಲ್ಲೇಖಗೊಂಡಿವೆ. ಯಾವುದೇ ಒಂದು ತಂತ್ರವಿಲ್ಲದೆ ಕಾವ್ಯದ ಔಚಿತ್ಯವನ್ನು ಮೀರಿ ಈ ಎಲ್ಲಾ ಅನ್ಯೋಕ್ತಿಗಳ ಉಲ್ಲೇಖವಿದೆ. ಹಲ-ಕೆಲವು ಸಂದರ್ಭ ಘಟನೆಗಳನ್ನು ಪವಾಡ ರೂಪದಲ್ಲಿಯೂ ಹೇಳಲಾಗಿದೆ. ಸ್ವತಃ ದಶಮ ಪೀಠಾಧಿಪತಿಗಳು ಈ ಕಾವ್ಯವು ಹೀಗೆ ಇರಬೇಕೆಂದು ಮಾರ್ಗ ಸೂಚನೆಗಳನ್ನು ಕೊಟ್ಟಿರುವದರಿಂದ ಕಾವ್ಯವು ತನ್ನ 'ಬಂಧ'ವನ್ನು ಕಳೆದುಕೊಂಡಿದೆ. ಅದನ್ನು ಕವಿಗಳು ಪರ್ಯಾಯವಾಗಿ ಹೀಗೆ ಹೇಳಿದ್ದಾರೆ.

"ಈ ಪುರಾಣವು ಮೊದಲಿಂದಲೂ ಕೊನೆಯವರೆಗೂ ಇದು ತತ್ವದ ಬುನಾದಿಯಿಂದಲೆ ಪ್ರಾರಂಭವಾಗಿ ಅದರಲ್ಲಿಯೇ ಮುಗಿದು ಹೋಗಿದೆ." (ಶ್ರೀ ಅ.ಪು.ಪು. VIII ಕವಿವಾಣಿ.) ತಾತ್ವಿಕ ಅಂಶಗಳು ಕಾವ್ಯದಲ್ಲಿ ಒಡಮೂಡಿದ್ದು ಇಲ್ಲಿ ಮುಖ್ಯವಾದ ಅಂಶವಲ್ಲ. ಕರ್ತೃವೆಂದು ಒಂದು ಮಠದ ಮೂಲವ್ಯಕ್ತಿಯ ಬಗೆಗೆ ಚಾರಿತ್ರಿಕ ದಾಖಲೆಗಳು ಸಿಗದೆ ಬರಿಕಲ್ಪನೆಯ ಊಹೆಯ ಬಲದಿಂದ ಅದನ್ನು ಕಟ್ಟಿಕೊಡುವದು ಎಷ್ಟು ಸಮಂಜಸ ? ಸ್ವಯಂ ೧೦ನೆಯ ಪೀಠಾಧಿಕಾರಿಗಳು ಚಿಂತಕರು ಕಾವ್ಯಪ್ರತಿಭೆ ಉಳ್ಳವರು ವಿದ್ವತ್ತಿಕೆಯಿಂದ ಕೂಡಿದವರು. ಅವರ ಬದುಕು ಕಾವ್ಯಕ್ಕೆ ವಸ್ತುವಾಗುವಷ್ಟು ದೊಡ್ಡವ್ಯಾಪ್ತಿ ಪಡೆದಿದೆ. ಅವರೆ ಈ ರೀತಿ ಯಾವದೊ ಸ್ವಂತಿಕೆಯ ಮೂಲವನ್ನು ಸೃಷ್ಟಿಸುವದಕ್ಕಾಗಿ ಈ ತೆರನಾದ ಕಲ್ಪಿತ ಚರಿತ್ರೆಯನ್ನು ನಿರೂಪಿಸಿ ಅದನ್ನೆ ಬರೆಯ ಹಚ್ಚಿದ್ದಾರೆ.

ಕಾವ್ಯದ ವಸ್ತು ವಿವೇಚನೆಗೆ ಕಥೆಯ ಒಂದು ವಿಹಂಗಮ ನೋಟವನ್ನು ಕಾಣಬಹುದಾದ ಕಾರ್ಯವೆಂದರೆ ಆರಂಭದಲ್ಲಿ (ಪು. ix) ಪುರಾಣದ ಅಂತರಂಗವೆಂದು ಸಂಕ್ಷಿಪ್ತ ಕಥಾಸಾರವನ್ನು ನೀಡಿರುವದು. ಮೂರನೆಯ ಸಂಧಿಯಿಂದ ಕರ್ತೃವಿನ ಚರಿತ್ರೆಯು ಆರಂಭಗೊಳ್ಳುವದು. ಕಲ್ಯಾಣದ ಶರಣರ ಅನುಭಾವ ದೀಪ್ತಿ ಕಲ್ಯಾಣವನ್ನು ದಾಟಿ ನಾಲ್ದೆಸೆಗೆ ಹಬ್ಬಿತು. ಹರಳಯ್ಯ-ಮಧುವರಸರ ಸಂಬಂಧದಿಂದ ಕಲ್ಯಾಣದಲ್ಲಿ ಕ್ರಾಂತಿ ಕೋಲಾಹಲ ನಡೆದವು. ಶರಣರ ಒಂದು ಮುಖ್ಯ ಗುಂಪು ಹೋರಾಟದ ಮನೋಭಾವವುಳ್ಳದ್ದು ಉಳವಿಗೆ ಹೋಯಿತು. ಅಲ್ಲಿ

ಶಿವಯೋಗದಲ್ಲಿ ಚನ್ನಬಸವಣ್ಣನಿಗೆ ಸೇವೆ ಮಾಡಿದ್ದ ಯಲ್ಲಾಪುರದ ತೇಜಸ್ವಿ ಯುವಕನಿಗೆ ಚೆನ್ನಬಸವಣ್ಣನು ಕ್ರಿಯಾಗಟ್ಟಿಯನ್ನು ನೀಡಿದನು. ಅವನು ಶರಣ ರಾಚಯ್ಯನೊಂದಿಗೆ ಯಾವುದೋ ಒಂದು ಘಟನೆಯಲ್ಲಿ ತಪ್ಪು ಮಾಡಿದ್ದನು. ಆ ನಿಮಿತ್ಯ ಭೂಲೋಕದಲ್ಲಿ ಹೆಚ್ಚು ಕಾಲ ಇರುವ ಆದೇಶ ಉಂಟಾಯಿತು. ಆ ಯುವ ಶರಣನು ಬೆಳಗಾವಿ ಜಿಲ್ಲೆ; ಖಾನಾಪುರ ತಾಲೂಕಿನ, ಬಾಚಣಿಕೆ ಗುಡ್ಡದಲ್ಲಿ ಅಡ್ಡಾಡಿ ಅದನ್ನು ಪುಣ್ಯ ಕ್ಷೇತ್ರವನ್ನಾಗಿ ಮಾಡಿ 'ಅನ್ನದಾನೇಶ' ಎಂಬ ಹೆಸರನ್ನು ಹೊತ್ತು ಲೋಕಕಲ್ಯಾಣಕ್ಕಾಗಿ ಸಂಚಾರವನ್ನು ಕೈಕೊಂಡನು. ಈ ಶಿವಯೋಗಿಯು ಸಂಚಾರದ ವೇಳೆ ಸಸ್ಯಾದಿಗಳಲ್ಲಿ ಶರಣಭಾವವನ್ನು ತಾಳಿ ಗಿಡಮರಗಳಲ್ಲಿ ಪ್ರೀತಿ ಉಕ್ಕುವಂತೆ ಜನತೆಯಲ್ಲಿ ಪ್ರಕೃತಿಪ್ರೇಮವನ್ನು ಬೆಳೆಸಿದನು. ಅದೇ ರೀತಿ ಪ್ರಾಣಿಗಳಲ್ಲಿ ಕೂಡ ದಯಾ ಗುಣವನ್ನು ಹೊಂದಿದ್ದನು. ಮಾನವರನ್ನು ಸತ್ಪಾತ್ರಕ್ಕೆ ತರುವ ತಾತ್ವಿಕವಾದ ಮಾರ್ಗವನ್ನು ಬೋಧಿಸುತ್ತಿದ್ದ ಮಲೆನಾಡಿನಿಂದ ಬಯಲಿಗೆ ಬಂದು ಬ್ಯಾಡಗಿಯ ಸಮೀಪದ ಕೊಪ್ಪದಲ್ಲಿ ಅನ್ನದಾನ ಮಾಡಿ 'ಅನ್ನದಾನೇಶ' ಎಂಬ ಹೆಸರನ್ನು ಪಡೆದನು. ಹೋದಲ್ಲೆಲ್ಲಾ ಶರಣ ತತ್ವವನ್ನು ವಿಚಾರಧಾರೆಯನ್ನು ಪ್ರಚಾರಗೊಳಿಸಿದನು. ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನ ಲಿಂಗನಾಯ್ಕನಹಳ್ಳಿಗೆ ಹೋಗಿ ತತ್ವ ಬೋಧಿಸಿದನು. ಅನಂತರ ಬುಕ್ಕಸಾಗರದ ಕರಿಸಿದ್ದೇಶ್ವರ ಮಠದಲ್ಲಿ ಅನುಷ್ಠಾನ ಗೈದ ಈತನ ವಿಶೇಷತೆ ಎಂದರೆ ಹೀಗೆ ಯುಗ-ಯುಗಗಳನ್ನು ದಾಟಿದ್ದು. ವಿಜಯನಗರದ ವೇಳೆ ಪ್ರೌಢದೇವರಾಯನ ಕಾಲದಲ್ಲಿ ವಚನ ಸಾಹಿತ್ಯದ ಕೃಷಿ ಸಂಪಾದನೆಯನ್ನು ಕಂಡು ಸಂತೋಷಪಟ್ಟನು. ಅಲ್ಲಿಂದ ಮುಂಡರಗಿಗೆ ಬಂದು ನೆಲೆಸಿದರು ಎಂದು ಕಾವ್ಯವು ವಿವರಿಸುವದು.

೩.೧.೧೦. ಶ್ರೀ ಗುಡ್ಡಾಪುರದ ದಾನಮ್ಮದೇವಿ ಪುರಾಣಂ

ಶಿವಶರಣೆಯರಲ್ಲಿ ಒಬ್ಬಳಾದ ಇಂದಿನವರೆಗೆ ಜಾನಪದೀಯ ಆರಾಧನಾ ಮೂರ್ತಿಯೆನಿಸಿದ ಗುಡ್ಡಾಪೂರದ ದಾನಮ್ಮದೇವಿಯ ಪುರಾಣವನ್ನು ದಾವಣಗೇರಿಯ ಶ್ರೀ ಮುರುಘೇಂದ್ರ ಶಿವಯೋಗಿಶ್ವರ ಶರಣರ ಸಾಂಸ್ಕೃತಿಕ ಸಂಘ ದಾವಣಗೇರಿ ಅವರ ಸಹೋದರರೊಂದಿಗೆ ಪಂ. ಪುಟ್ಟರಾಜ ಕವಿ ಗವಾಯಿಗಳವರು ಕ್ರಿ.ಶ. ೧೯೯೭ರಲ್ಲಿ ಈ ಗ್ರಂಥವನ್ನು ರಚಿಸಿದ್ದಾರೆ. ಒಟ್ಟು ೫೦೦ ಭಾಮಿನಿ ಷಟ್ಪದಿಗಳ ಈ ಕಾವ್ಯ ಶರಣರ ವಚನಗಳನ್ನು ಅಳವಡಿಸಿಕೊಳ್ಳುತ್ತಾ ಸಾಗುತ್ತದೆ. ಈ ಪುರಾಣ ಕಾವ್ಯಕ್ಕೆ ಶ್ರೀಮತಿ ಶಿವಪುತ್ರಾದೇವಿ ಕರಿಬಸಪ್ಪ ಕಾತರಕಿ ಅವರು ಗದ್ಯದಲ್ಲಿ ಬರೆದ ಪುಸ್ತಕವು ಆಧಾರವಾಗಿದೆ. ಈ ಕೃತಿಯ ಗದ್ಯಕಥಾ ರೂಪವನ್ನು ಶಿವಕವಿ ವೀರಭದ್ರಪ್ಪ ಗೋಪಾಲಪುರ ದಾವಣಗೇರಿ ಅವರು ರಚಿಸಿದ್ದಾರೆ. ಮೂಲ ಗದ್ಯ ಬರಹವು ಜನಜನಿತವಾದ ಐತಿಹ್ಯಗಳ ಆಧಾರದ ಮೇಲೆ ರಚನೆಗೊಂಡಿದೆ. ಕವಿ ಪಂ. ಪುಟ್ಟರಾಜ ಗವಾಯಿಗಳವರು ಅಲ್ಲಲ್ಲಿ ಶಾಸನಗಳ ಉಲ್ಲೇಖವನ್ನು ಪದ್ಯಗಳಲ್ಲಿ ತೋರಿದ್ದಾರೆ. ಗುಡ್ಡಾಪುರದ

ದಾನಮ್ಮದೇವಿಯ ಲಿಖಿತ ಕಾವ್ಯರೂಪದಲ್ಲಿ ಹೆಚ್ಚು ದೊರೆಯದೆ, ಜಾನಪದೀಯ ಐತಿಹ್ಯ ರೂಪಗಳಲ್ಲಿ ಜೊತೆಗೆ ಪವಾಡಗಳ ನಿರೂಪಣೆಯಲ್ಲಿಯೆ ಮುಖ್ಯವಾಗಿ ಕಂಡುಬರುವದು. ಅದನ್ನು ಕವಿಗಳು ಹೀಗೆ ನಿರೂಪಿಸಿದ್ದಾರೆ–

ವಿನುತ ಗುಡ್ಡಾಪುರದ ದಾನಂ
ಮನೆ ಮಹಾ ಸೋಮೇಶನಾಮಕ
ಮುನಿನುತನೊಡನೆ ಮದುವೆಯಾಗುತೆ ನೆರೆ ಪವಾಡಗಳ ।
ಅನುಪಮಳ್ ಮೆರೆಯಿಸಿದಳಾ ಬಸ
ವನ ಪ್ರಮಥರಾ ಭಕ್ತಳೆನಿಪಾ
ವಿನುತೆ ಪೊರೆಯಲಿ ಚನ್ನಬಸವನ ಶಿಷ್ಯಳಾದವಳು ॥

(ಶ್ರೀ ಗುಡ್ಡಾಪುರದ ದಾನಮ್ಮದೇವಿ ಪುರಾಣ ಪುಟ: ೧೮೨, ಪದ್ಯ: ೧೪)

ಈ ರೀತಿಯಾಗಿ ದಾನಮ್ಮನ ಚರಿತ್ರೆ ಅನೇಕ ಪವಾಡಗಳಿಂದ ತುಂಬಿ ವಾಸ್ತವವಾದ ಶರಣತತ್ವದ ಯಾವ ಉಲ್ಲೇಖಗಳು ಐತಿಹಾಸಿಕವಾಗಿ ದೊರೆಯುವದಿಲ್ಲ . ಆಕೆಯ ಮದುವೆಯು ಇಂತಹ ಐತಿಹ್ಯಗಳ ವಿವರಣೆಯಾಗಿದೆ. ಸೋಮನಾಥ ಎಂಬುದು ಆಕೆಯ ಪತಿಯ ಹೆಸರು. ಆದರೆ ಸೋಮನಾಥ ಎಂಬುದು ದೇವನೋ ವ್ಯಕ್ತಿಯೋ ಸ್ಪಷ್ಟವಾಗಿ ಉಲ್ಲೇಖಗೊಂಡಿಲ್ಲ.

ದಾನಮ್ಮ ದೇವಿಯ ಬಗೆಗೆ ಅನೇಕ ಶಾಸನೋಕ್ತ ವಿವರಗಳು ದೊರಕುವವೆಂದು 'ಗದ್ಯ ಕಥಾಸಾರ'ದಲ್ಲಿ (ಪುಟ ೬೩) ವಿವರಿಸಲಾಗಿದೆ. 'ಸೌತ್ ಇಂಡಿಯನ್ಸ್ ಇನಸ್ಕ್ರಿಪ್ಷೆನ್ಸ್' (ಸಂಪುಟ ೧೫) ನಂಬರಿನ ತಾಳಿಕೋಟೆಯ ಶರಣ ಸಾಹಿತ್ಯ (ಸಂಪುಟ ೨೧) ಸಂಚಿಕೆಯಲ್ಲಿ ಪ್ರಕಟವಾದ ಇಂಗಳಿಗೆಯ ಶಾಸನ, 'ಇನ್‌ಸ್ಕ್ರಿಪ್ಷೆನ್ಸ್ ನಾರ್ದರ್ನ್ ಕರ್ನಾಟಕ ಆಂಡ್ ಕೊಲ್ಲಾಪುರ್ ಸ್ಟೇಟ್' ಎಂಬ ದಿವಂಗತ ಕುಂದಣಗಾರರ ಪುಸ್ತಕದಲ್ಲಿಯ ವಿಜಾಪುರದ ಶರಣ ಶಾಸನಗಳು ದಾನಮ್ಮಳ ಬಗೆಗೆ ವಿವರಗಳನ್ನು ತಿಳಿಸುತ್ತವೆ. ತಾಳಿಕೋಟೆಯ ಶಾಸನದ ಕಾಲ ಕ್ರಿ.ಶ. ೧೧೮೪, ಇಂಗಳಿಗೆಯ ಶಾಸನದ ಕಾಲ ಕ್ರಿ.ಶ. ೧೨೦೯, ವಿಜಾಪುರದ ಶಾಸನದ ಕಾಲ ಕ್ರಿ.ಶ. ೧೨೨೮ ಎಂದು ಸಂಶೋಧಕರು ನಿರ್ಣಯಿಸಿದ್ದಾರೆ. ಈ ಎಲ್ಲಾ ಅಧಾರಗಳಿಂದ ದಾನಮ್ಮಳು ಕ್ರಿ.ಶ. ೧೧೮೪ಕ್ಕಿಂತ ಪೂರ್ವದಲ್ಲಿ ಬಾಳಿ ಬೆಳಗಿರಬಹುದೆಂದು ಊಹಿಸಬಹುದಾಗಿದೆ. (ಪುಟ.೧೦) ಈ ರೀತಿಯಾಗಿ ೧೧೮೪ಕ್ಕಿಂತ ಹಿಂದೆ ಬದುಕಿದ ವಿವರಗಳು ಹರಿಹರ ಮತ್ತು ಭೀಮಕವಿ ಇವರಿರ್ವರಲ್ಲಿ ದಾನಮ್ಮನ ಉಲ್ಲೇಖ ಸಿಗುವದಿಲ್ಲ. ಆಕೆಯ ಧಾರ್ಮಿಕ ಹೋರಾಟಗಳು, ಧಾರ್ಮಿಕ ಅಲೆದಾಟಗಳು ಇವೆಲ್ಲವು ಐತಿಹ್ಯದಲ್ಲಿಯೇ ಕಾಣಸಿಗುತ್ತವೆ. ಮಧ್ಯಕಾಲೀನ ಕಾವ್ಯಗಳಲ್ಲಿ 'ಲಕ್ಕಣ್ಣ ದಂಡೇಶ'ನ 'ಶಿವತತ್ವ ಚಿಂತಾಮಣಿ'ಯಲ್ಲಿ 'ನೂತನ ಗಣಂಗಳು' ಎಂಬ ಭಾಗದಲ್ಲಿ 'ವರದಾನಿಯಮ್ಮ' ಎಂಬವಳು 'ಕೂರಂಗಿಕೋಟೆ' ಎಂಬ ಊರಲ್ಲಿ ಇದ್ದಾಳೆಂಬ ವಿವರಗಳು ಸಿಗುತ್ತವೆ. (ಪುಟ: ೬೩). ಅಲ್ಲಿ ಬರುವ ಶರಣೆಯು ಒಂದು ಕುದುರೆಗೆ ಹೆರಿಗೆ ನೋವು ಉಂಟಾದಾಗ ಮಂತ್ರದ

ಜಲವನ್ನು ಕುದುರೆಗೆ ಹಾಕಲು ಸರಳವಾಗಿ ಮರಿಯನ್ನು ಹಾಕಿತು. ಆಕೆಯ ಈ ಕೃತಿಯು ಜನಜನಿತವಾದ ಐತಿಹ್ಯಗಳನ್ನು ಆಧರಿಸಿ ನಿರೂಪಣೆಗೊಂಡ ಜೀವನಚರಿತ್ರೆಯ ಕಾವ್ಯ ರೂಪವಾಗಿದೆ. ಕಥಾನುಪೂರ್ವಿಯಾಗಿ ಹರಿಹರಾದಿಗಳು ಶರಣರ ಬದುಕನ್ನು ಕೈಲಾಸದಿಂದ ಆರಂಭಿಸಿ ಅಂತ್ಯವನ್ನು ಕೈಲಾಸಕ್ಕೆ ಮುಟ್ಟಿಸುವರು. ಅದೇ ಮಾದರಿಯನ್ನು ಇಲ್ಲಿಯೂ ಅನುಸರಿಸಲಾಗಿದೆ. ಶಿವನ ನಾಟ್ಯವನ್ನು ಕಂಡು ಮೈಮರೆತ ಭೃಂಗಿಯು ತಾನು ನಾಟ್ಯವಾಡಿದುದನ್ನು ಕಂಡು ತನಗೆ ವಂದಿಸದೆ ಈ ಭೃಂಗಿ ಅಪಮಾನ ಮಾಡಿದ್ದಾನೆಂದು ಪಾರ್ವತಿಯು ಸಿಟ್ಟಗೆದ್ದಳು. ಕೊನೆಗೆ ಶಿವನು ನೀನು ನನ್ನ ಅರ್ಧಭಾಗವಿರುವಾಗ ನನಗೆ ವಂದಿಸುವಾಗಲೆ ನಿನಗೂ ಕೂಡ ವಂದಿಸಿದಂತಾಗಿದೆ. ನೀನು ಹೀಗೆ ತಪ್ಪು ತಿಳಿದದ್ದರಿಂದ ಭೂಲೋಕದಲ್ಲಿ ಹುಟ್ಟಿ ಬಾ ಎನ್ನುತ್ತಾನೆ. ಆ ಪ್ರಕಾರ ಪಾರ್ವತಿಯ ರೂಪವೇ ದಾನಮ್ಮನ ಅವತಾರ ಎಂಬ ವಿವರಣೆ ದಾನಮ್ಮನ ದೈವಿ ಆವರಣವನ್ನು ಸೂಚಿಸುವದಕ್ಕೆ ಮೂಡಿ ಬಂದಿದೆ.

ದಾನಮ್ಮನ ತಂದೆ-ತಾಯಿಗಳು 'ಅನಂತರಾಯ-ಶಿರಸಮ್ಮ'. ಕರ್ನಾಟಕದಲ್ಲಿ ಈ ರೀತಿ ಹೆಸರಿಸುವ ಪದ್ಧತಿ ೧೫೦೦ರಿಂದ ಈಚೆಗೆ ಬಂದಿತು. ಮೊದಲು ಅಂಬೆ, ಅಬ್ಬೆ, ಅಂಬಿಕೆ ಇತ್ಯಾದಿ ಅಂತ್ಯಗೊಳ್ಳುವ ಸ್ತ್ರೀಲಿಂಗ ಶಬ್ದಗಳಿದ್ದವು. ಅವ್ವ, ಅಮ್ಮ ಎನ್ನುವವು ಇತ್ತೀಚಿನ ಬೆಳವಣಿಗೆಗಳು. ಈ ಹಂತದಲ್ಲಿಯೂ ದಾನಮ್ಮನ ಕಾಲ ೧೫ನೇ ಶತಮಾನದ ಈಚೆಗೆ ಎನಿಸುವುದು. ಮಗು ದಾನಮ್ಮನಿಗೆ ಓರ್ವ ಜಂಗಮ ಶ್ರೇಷ್ಠನು ವೀರ ಮಲ್ಲೇಶ್ವರನ ನಾಮಸ್ಮರಣೆ ಮಾಡುತ್ತಾ ಲಿಂಗಧಾರಣೆ ಮಾಡಿದ ಮಗುವಿಗೆ ವಿದ್ಯೆಯನ್ನು ಕಲಿಸಲಾಯಿತು. ಇದೆಲ್ಲವು 'ಉಮರಾಣಿ' ಎಂಬ ಊರಿನಲ್ಲಿ ನಡೆಯಿತು. ಅವರು ಜಾತಿಯಿಂದ ಅಕ್ಕಸಾಲಿಗರಾದರೂ ನೀತಿ ಭಕ್ತಿಗಳಿಂದ ಲಿಂಗವಂತರಾಗಿದ್ದರು.

ಈ ಹಂತದಲ್ಲಿ ಕಿನ್ನರಿ ಬೊಮ್ಮಯ್ಯನ ಕುರಿಯನ್ನು ರಕ್ಷಿಸಿದ ಕಥೆಯನ್ನು ಕಾವ್ಯ ಉಲ್ಲೇಖಿಸುತ್ತದೆ. ಅಲ್ಲದೆ ಕಲಿಕೇತ ಬೊಮ್ಮಯ್ಯನ ಕಥೆಯನ್ನು ಉಲ್ಲೇಖಿಸಲಾಗಿದೆ. ಯೌವ್ವನಕ್ಕೆ ಬಂದ ದಾನಮ್ಮನಿಗೆ ಲಗ್ನದ ವಿಷಯವನ್ನು ತಂದೆ-ತಾಯಿಯರು ಪ್ರಸ್ತಾಪಿಸುತ್ತಾರೆ. ದಾನಮ್ಮನ ಮೊದಲಿನ ಹೆಸರು ಲಿಂಗಮ್ಮ. ಆ ಲಿಂಗಮ್ಮಳು ಉಮರಾಣಿಯನ್ನು ಬಿಟ್ಟು ಮುದಕಿ ವೇಷ ಧರಿಸಿ ಸೊಲ್ಲಾಪುರಕ್ಕೆ ಬಂದಳು. ಸಿದ್ಧರಾಮನ ಕೆರೆಯ ಕೆಲಸಕ್ಕೆ ಒತ್ತಾಯಪೂರ್ವಕವಾಗಿ ಲಿಂಗಮ್ಮಳನ್ನು ಕರೆದೊಯ್ಯಲು ಪ್ರಯತ್ನಿಸಿದಾಗ ಆಕೆ ಅಲ್ಲಿಂದ ಹೊರಟಳು. ಲಿಂಗಮ್ಮಳು ಸಂಚಾರಿಯಾಗಿ 'ಮೊಳಕೇರಿ' ಎಂಬ ಗ್ರಾಮಕ್ಕೆ ಬರುತ್ತಾಳೆ. ಅಲ್ಲಿ ಗಂಡನನ್ನು ಕಳೆದುಕೊಂಡ ಹೆಣ್ಣುಮಗಳಿಗೆ ಆಕೆಯ ಗಂಡನನ್ನು ದೊರಕಿಸಿ ಕೊಡುತ್ತಾಳೆ. ಮತ್ತೆ ಲಿಂಗಮ್ಮಳು ಸಂಚಾರಿಯಾಗಿ ಮಾರ್ಗ ಮಧ್ಯೆ ಪೂಜೆ ಮಾಡುತ್ತಾ ಸಾಗುತ್ತಾಳೆ. ಇಂಥ ಲಿಂಗ ಪೂಜಾ ಸಂದರ್ಭದಲ್ಲಿ ಮಡಿವಾಳ ಮಾಚಿದೇವನ, ಅಕ್ಕಮಹಾದೇವಿಯ, ಬಸವಣ್ಣನ, ವಚನಗಳನ್ನು ಆಕೆ ಹಾಡುತ್ತಾ ಇದ್ದಳೆಂಬ ಉಲ್ಲೇಖವಿದೆ. ಅಲ್ಲಿ ಬರುವ ವಚನಗಳು ಶರಣರ ಪ್ರಸಿದ್ಧ ವಚನಗಳೇ ಆಗಿವೆ.

ಇದಾದ ಬಳಿಕ ಸಾಕ್ಷತ್ ಶಿವನೇ ಜಂಗಮ ರೂಪದಿಂದ ಬಂದು ನನ್ನ–ನಿನ್ನ ಲಗ್ನ ಮುಹೂರ್ತ ಸಮೀಪಿಸಿದೆ. ನಮ್ಮ ಮದುವೆ ಸಂದರ್ಭದಲ್ಲಿ ೫೫ ಜೋಡಿ ಮದುವೆಗಳು ನಡೆಯಬೇಕು ಎಂದು ಸೂಚಿಸುತ್ತಾನೆ. ಬಸವಾದಿ ಶರಣರು ಈ ಲಿಂಗಮ್ಮಳ ಅನುಭಾವವನ್ನು ಕಂಡು ಆನಂದ ಪಟ್ಟು ಅನುಭವ ಮಂಟಪಕ್ಕೆ ಲಿಂಗಮ್ಮಳನ್ನು ಕರೆದೊಯ್ಯುವರು. ಪ್ರಭುದೇವರ ಸಮ್ಮುಖದಲ್ಲಿ ಲಿಂಗಮ್ಮಳನ್ನು 'ದಾನಮ್ಮ'ನೆಂದು ಕರೆಯಲಾಯಿತು. ಅಲ್ಲಿ ದಾನಮ್ಮಳಿಗೆ ಶರಣರ ಗೌರವ–ಅನುಭಾವಗಳು ಪ್ರಾಪ್ತವಾದವು. ಈ ಮೊದಲು ಶೂನ್ಯ ಸಂಪಾದನೆಯಲ್ಲಿ ಅಥವಾ ಯಾವುದೇ ಕಾವ್ಯಗಳಲ್ಲಿ ಈ ಪ್ರಸಂಗವು ನಿರೂಪಿತವಾಗಿಲ್ಲ. ಬಹುಶಃ ಗದ್ಯದಲ್ಲಿ ಬರೆದ ಬರಹವನ್ನು ಅನುಸರಿಸಿ ಕಾವ್ಯದಲ್ಲಿ ಹೇಳಲಾಗಿದೆ. ಅಕ್ಕಮಹಾದೇವಿಯ ಅನುಭವ ಮಂಟಪದ ಪ್ರಸಂಗದಂತೆ ಇದನ್ನು ನಿರೂಪಿಸಲಾಗಿದೆ.

ದಾನಮ್ಮನು ಮುಂದೆ ನಾಡಿನ ವಿವಿಧ ಭಾಗಗಳಿಗೂ ಸಂಚರಿಸುತ್ತಾ ಹೊರಡುವ ಸಂದರ್ಭದಲ್ಲಿಯೇ ಸೋಮಲಿಂಗನ ಸಂಕತೀರ್ಥದಲ್ಲಿ ಆಕೆಯ ಮದುವೆ ನಡೆಯುತ್ತದೆ. ಅಲ್ಲಿಂದ ಮುಂದೆ 'ದಾನಮ್ಮ' ಮತ್ತು 'ಸಂಗಮನಾಥ' ಇಬ್ಬರು ಜೊತೆ–ಜೊತೆಗೆನೆ ಅಲೆದಾಡುತ್ತಾರೆ. ಆಕೆಯ ಸಂಚಾರದ ಕಾಲದಲ್ಲಿಯೇ ಅನೇಕ ಪವಾಡಗಳು ಜರಗಿದವು. ಒಂದು ಹಂತದಲ್ಲಿ ದಾನಮ್ಮಳು ಆಂದ್ರಪ್ರದೇಶದ ಆದವಾನಿ, ಅಲಂಪುರಗಳಿಗೆ ಹೋಗಿ ಜನರಲ್ಲಿ ಲಿಂಗವಂತ ತತ್ವಗಳನ್ನು, ಆಚರಣೆಗಳನ್ನು ಪ್ರಚಾರಕ್ಕೆ ತಂದು ಧರ್ಮ ರೂಢಿ ಮಾಡಿದಳು. ಮಧ್ಯದಲ್ಲಿ ಮಾಂತ್ರಿಕನೊಬ್ಬನ ಅಹಂಕಾರವನ್ನು ನಾಶಗೊಳಿಸಿದಳು. ಅಲಂಪುರದಲ್ಲಿ ವೈಷ್ಣವರು ಶಿವ ದೇವಾಲಯದ ಬ್ರಹ್ಮ ದೇವಾಲಯವನ್ನು ಕಿತ್ತು ನದಿಗೆ ಎಸೆದ ಸಂದರ್ಭದಲ್ಲಿ, ದಾನಮ್ಮ ಭಕ್ತರೊಂದಿಗೆ ಹೋಗಿ ಲಿಂಗವನ್ನು ಹುಡುಕಿಸಿ, ಪುನಃ ದೇವಾಲಯದಲ್ಲಿ ವೈಷ್ಣವ ಮೂರ್ತಿಯನ್ನು ಕಿತ್ತೆಸೆದು ಲಿಂಗವನ್ನು ಪ್ರತಿಸ್ಥಾಪನೆ ಮಾಡಿದಳು. ಈ ಘಟನೆಯು ಏಕಾಂತರಾಮಯ್ಯ, ಆದಯ್ಯ ಮೊದಲಾದವರ ಧಾರ್ಮಿಕ ಯುದ್ಧವನ್ನು ನೆನಪಿಸುತ್ತದೆ. ದಾನಮ್ಮನು ಅನೇಕ ಪವಾಡ ಸದೃಶ್ಯ ಲೀಲೆಗಳನ್ನು ತೋರಿದಳು. ಆಕೆಯು ತಮಿಳುನಾಡಿನ ರಾಮೇಶ್ವರಕ್ಕೂ, ಕನ್ಯಾಕುಮಾರಿಗೂ ಭೆಟ್ಟಿಕೊಟ್ಟಳು. ಅಲ್ಲಿಂದ ಮುಂದೆ ಕಂಚಿ, ಕಾಳಹಸ್ತಿ ಮೊದಲಾದ ತೀರ್ಥ ಕ್ಷೇತ್ರಗಳಿಗೆ ಸಂಚರಿಸಿದಳು.

೩.೧.೧೧ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಪುರಾಣ

'ಶ್ರೀಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಪುರಾಣಂ', ಇದು ಭಾಮಿನಿ ಷಟ್ಪದಿಯಲ್ಲಿ ರಚನೆಗೊಂಡ ಪಂಡಿತ ಡಾ. ಪುಟ್ಟರಾಜ ಕವಿಗವಾಯಿಗಳ ಪುರಾಣ ಕೃತಿಯಾಗಿದೆ. ಕ್ರಿ.ಶ. ೧೯೯೯ರಲ್ಲಿ ರಚನೆಗೊಂಡ ಈ ಕೃತಿಯು ಶ್ರೀಗುರು ಬಕ್ಕೇಶ್ವರ ಮಹಾಸ್ವಾಮಿ ಸೇವಾ

ಸಂಘ–ದಾವಣಗೇರಿ ಅವರಿಂದ ಪ್ರಕಾಶನಗೊಂಡಿದೆ. ಏಳನೂರ ನಾಲವತ್ತನಾಲ್ಕು ಷಟ್ಪದಿಗಳು ಈ ಕೃತಿಯಲ್ಲಿವೆ. ಕ್ರಿ.ಶ. ೧೯ನೆಯ ಶತಮಾನದ ಪೂರ್ವಾರ್ಧದಲ್ಲಿ ಬಾಳಿ ಬದುಕಿದ ಶ್ರೀ ಬಕ್ಕೇಶ್ವರ ಮಹಾ ಶಿವಯೋಗಿಗಳು, ದಾವಣಗೆರೆ ಹತ್ತಿರದ 'ಗುಮ್ಮನೂರಿ'ನಲ್ಲಿ ಜನಿಸಿ ಜಗವೇ ತನ್ನ ಮನೆಯೆಂದು ವಿಶ್ವವಿಶಾಲವಾದ ಜಂಗಮ ತತ್ವದ ಮೂರ್ತರೂಪವಾದರು. ಶ್ರೀ ಬಕ್ಕೇಶ್ವರರು ಲಿಂಗ ಜಂಗಮರಾಗಿ, ಚರ ಜಂಗಮರಾಗಿ, ಲೋಕೋದ್ಧಾರಕ್ಕೆ ನಾಡಿನಾದ್ಯಂತ ಸಂಚರಿಸಿದರು. (ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಪುರಾಣ-ಮುನ್ನುಡಿ ಪುಟ). ಅವರು ಸರ್ವರು ಸುಖಿಯಾಗಿರಲೆಂಬ ಸದಾಶಯ ಹೊಂದಿದ್ದು, ಸಸ್ಯ ಪ್ರಾಣಿಯಾದಿಯಾಗಿ ಸರ್ವಜೀವ ದಯಾಪರವಾದ ಮಹೋನ್ನತ ಅರಿವು ಅವರ ಅಂತರಂಗದ ಮಿಡಿತ–ತುಡಿತವಾಗಿತ್ತು. ಶಿವಯೋಗಿಯಾದ ಅವರ ಜೀವನವು ಅವರು ಜೀವಂತವಾಗಿದ್ದಾಗಲೆ ಪವಾಡರೂಪದಲ್ಲಿ ಜನಜನಿತವಾಗಿತ್ತು.

ಶ್ರೀ ಬಕ್ಕೇಶ್ವರ ಪುರಾಣವು ಪುರಾಣಕಾವ್ಯವೆನಿಸಿಕೊಳ್ಳಲು ಬೇಕಾದ ಲೀಲೆ ಮತ್ತು ಪವಾಡಗಳನ್ನು ಹೊಂದಿದೆ. ಶಿವಯೋಗಿಗಳ ಚರಿತ್ರೆಯನ್ನು ಬರೆಯಿಸುವ ಪೂರ್ವದಲ್ಲಿ ಶ್ರೀ ಗುಡದಪ್ಪ ಮಾಸ್ತರರಿಂದ ಗದ್ಯದಲ್ಲಿ ಜೀವನಲೀಲೆಗಳನ್ನು ಪ್ರಕಟಿಸಲಾಗಿತ್ತು. ಅದು ಪಂಡಿತ ಪುಟ್ಟರಾಜ ಕವಿ ಗವಾಯಿಗಳು ಗದ್ಯ ಪದ್ಯರೂಪದಲ್ಲಿ ಬರೆಯಲು ಮೂಲವಾಗಿದೆ. ಕಾವ್ಯದ ಗದ್ಯರೂಪವಾಗಿ ಸಂಕ್ಷಿಪ್ತ ಕಥಾರೂಪವನ್ನು ಸ್ವಯಂ ಪಂಡಿತ ಪುಟ್ಟರಾಜ ಕವಿಗಳು ಬರೆದಿರುವರು. ಕವಿಯು ಆರಂಭದಲ್ಲಿಯೆ–

ಪರಮ ಬಕ್ಕೇಶ್ವರನು ತನ್ನಯ
ಚರಿತಮಂ ಸುಪುರಾಣ ರೂಪದೇ
ಬರೆವ ಶಕ್ತಿಯ ಕರುಣಿಸಲಿ ನಿಜಪಾದ ಭಕ್ತಿಯನು ॥
ಕರುಣೆ ಇಲ್ಲದೆ ಬರೆಯಲಾರೆನು
ಕರುಣೆ ಇಲ್ಲದೆ ಬಾಳಲಾರೆನು
ಕರುಣೆಯೇ ಜನ್ಮಾಂಧನ ಬದುಕಿಗಾಶ್ರಯವೆನಿಸಿದೆ ॥

(ಶ್ರೀ ಬ.ಮ.ಪು. ಪುಟ : ೪, ಪ : ೧೪.)

ಎಂದು ಕರುಣೆಯನ್ನು ಶಿವಯೋಗಿಗಳಲ್ಲಿ ಆಶಿಸಿದ್ದಾರೆ. ಕೃತಿಯ ಆದಿಭಾಗದಲ್ಲಿ ಭಾರತ ಮತ್ತು ಅದರ ಹಿರಿಮೆಗಳನ್ನು ಕವಿ ಹೀಗೆ ಕೊಂಡಾಡಿದ್ದಾರೆ–

ಭಾರತವೇ ತೇಜಸ್ವಿ ರಾಷ್ಟ್ರಂ
ಭಾರತವೇ ಶ್ರೀ ಯುಕ್ತರಾಷ್ಟ್ರಂ
ಭಾರತವೇ ವಿಶ್ವತಿಯ ರಾಷ್ಟ್ರಂ ಮೆರೆಯುವುದೆನಿಸುತೇ ।

ಸಾರಿಹುದು ತೇಜಸ್ವಿ ಜನತೆಯು
ಸಾರಿಹುದು ಮಣಿಕನಕವಿಭವಂ
ಸಾರಿಹುದು ಭೂವಿಸ್ತರಂ ತ್ರಿಸಮುದ್ರ ಪರಿಯಂತಂ ॥

(ಪುಟ : ೯, ಪದ್ಯ : ೧೦)

ಭಾರತದ ಭಾವೈಕ್ಯತೆ ಮತ್ತು ಏಕತೆಗಳನ್ನು ಅದರ ಉನ್ನತಿಗಳನ್ನು ಹೀಗೆ ವರ್ಣಿಸಲಾಗಿದೆ.

ಎಲ್ಲ ಕುಲದವರೆಲ್ಲ ಛಲದವ
ರೆಲ್ಲ ನೆಲೆಯವರೆಲ್ಲ ಬಲದವ
ರೆಲ್ಲರೊಂದಾಗಿಹರ್ ಪರಿರಾಷ್ಟ್ರದೊಳೆ ಸುಕೃತಿಗಳ್ ।
ಎಲ್ಲ ಮತಿಯರೆಲ್ಲ ಕೃತಿಯವ
ರೆಲ್ಲ ಸ್ಥಿತಿಯವರೆಲ್ಲ ಗತಿಯವ
ರೆಲ್ಲರಿಲ್ಲಿರ್ಪರ್ ಸ್ವದೇಶದ ಹಿತಕೆ ದುಡಿಯುವರು ॥

(ಪುಟ : ೧೦, ಪದ್ಯ : ೧೨)

ಆ ಬಳಿಕ ಕರ್ನಾಟಕದ ಪರಂಪರೆ, ಸಾಮ್ರಾಜ್ಯಗಳ ಆಳ್ವಿಕೆ, ಸಾಂಸ್ಕೃತಿಕ ಹಿರಿಮೆ-ಗರಿಮೆಗಳನ್ನು ಕೊಂಡಾಡಲಾಗಿದೆ. ಕನ್ನಡ ನಾಡಿನಲ್ಲಿ ಲಿಂಗವಂತ ಧರ್ಮವು ಆದಿ ಅಂತ್ಯವಾಗಿ ಹಬ್ಬಿದ ಪರಿಯನ್ನು ವರ್ಣಿಸಿ ಆ ಧರ್ಮದಲ್ಲಿ ಇರುವ ವಿರಕ್ತ ಪರಂಪರೆಯ ಮೂರು ಮಾರ್ಗಗಳನ್ನು ವಿವರಿಸುತ್ತಾರೆ. ಅವೇ 'ಚಿಲಾಳ', 'ಕುಮಾರ' 'ಮುರಘಾ' ಸಮಯಗಳು 'ಸಮಯ' (ಧರ್ಮಮಾರ್ಗಗಳು; ಸ್ವಾಮಿಗಳ ಹೆಸರಿನೊಂದಿಗೆ ನಾಮಕರಣಗೊಂಡಿವೆ. ಚಿಲಾಳ ಮುಂತಾಗಿ) ಬೆಳೆದು ಬಂದವು. ಆ ಸಮಯದ ಸ್ವಾಮಿಗಳು-

...ಸ್ವಾಮಿಗಳರಿಯೆ ವಾಚಕಮತೀತ ಪ್ರಭಾವರು
ಈ ಚತುರ್ದಶಿ ಭುವನನತರ್ ಆಲೋಚನಾತೀತ ಸ್ವಭಾವದರೆಲ್ಲ

(ಪುಟ : ೧೪, ಪದ್ಯ : ३೦)

ಇಂತಹ ಸಮಯಗಳಲ್ಲಿ 'ಮುರಘಾ' ಸಮಯದಲ್ಲಿ ಚಿತ್ರದುರ್ಗ ಮಠದ ಶಾಖಾ ಮಠಗಳು ಇರುವ ಊರುಗಳಲ್ಲಿ 'ಗುಮ್ಮನೂರು' ಒಂದು. ಅದಕ್ಕೆ 'ಸುಮ್ಮಾನೂರೆಂದು' (ಪುಟ : ೧೫ ಪದ್ಯ : ३೪) ಪ್ರೀತಿಯಿಂದ ಕರೆಯುತ್ತಿದ್ದರು.

ಶ್ರೀ ಬಕ್ಕೇಶ್ವರನ ಸಾಮಾಜಿಕ ಸ್ಪಂದನವು ಮನಸ್ಸೆಳೆಯುವಂತಹುದು. ಗಾಂಜಿಯ ವ್ಯಸನಿಗಳನ್ನು ಬಿಡಿಸಿ, ಶಿವಬೋಧೆಯನ್ನು ಕೇಳತೊಡಗಿಸಿದರು. 'ಹೆಂಡರ ಕೊರಳ ತಾಳಿಯಂ ಸಹ ಭಂಡರೆನಿಸುತ ಮಾರಿ ಕುಡಿಯುತ ಕಂಡ ಕಂಡಲ್ಲಿಯೆ ಚರಂಡಿಯೊಳಿವರು ಬೀಳುವರು' (ಪುಟ : ೧೬३, ಪ : ೧೦) ಇಂತವರ ಜೀವನವನ್ನು ಕಲ್ಯಾಣದ ಶರಣರು ತಿದ್ದಿ ಅವರನ್ನು ಶರಣರನ್ನಾಗಿ ಮಾಡಿದ ಘಟನೆಯನ್ನು, ಹೆಂಡದ ಮಾರಯ್ಯ ಹಾಲನ್ನು ಮಾರುವವನಾದುದನ್ನು

ವಿವರಿಸಿ ಜನತೆಯನ್ನು ತಿದ್ದಿದನು. 'ಅರಿದಡೆ ಶರಣ ಮರೆದಡೆ ಮಾನವ' ಎಂದು ಅರಿವಿನ ಮಾರ್ಗವನ್ನು ಬೋಧಿಸಿದನು. ಈ ಮಧ್ಯದಲ್ಲಿ ಕವಿಗಳು ದಾವಣಗೇರಿಯ ಗ್ರಾಮನಾಮವನ್ನು ಬಿಡಿಸಿದ್ದಾರೆ.

ದೇವನಗರಿಯ ಹೆಸರ ಬದಲಿಸಿ
ಭಾವಮೊಪ್ಪಲ್ ದವನಗಿರಿಯು
ದಾವನಗಿರಿಯಿಂದಾಗಿ ಡಾವಣಗೇರಿಯೆಂದಾಗಿ ॥

(ಪುಟ : ೧೬೯, ಪದ್ಯ : ೦೩.)

ಈ ನಿಷ್ಪತ್ತಿಯು ಪಂಡಿತ ನಿಷ್ಪತ್ತಿಯಾಗಿದೆ.

ತಾಲೂಕಾ ಸ್ಥಳವಾದ ಡಾವಣಗೇರಿಯಲ್ಲಿ ಒಮ್ಮೆ ಶ್ರೀ ಬಕ್ಕೇಶ್ವರರು ಹಾದಿಯಲ್ಲಿ ಹೋಗುವಾಗ ಕಾಲಿಗೆ ಕಟ್ಟಿದ ಜಂಗಿನ ಸಪ್ಪಳಕೆ ಮಾಮಲೆದಾರನ ಕುದುರೆ ಬೆದರುತ್ತ ಓಡಾಡಿತು. ಆ ಅಧಿಕಾರಿಯು ಬಕ್ಕೇಶ್ವರರನ್ನು ಕರೆದು ಬಯ್ದನು. ಶಾಂತವಾಗಿ ಬಕ್ಕೇಶರರು ಮಠಕ್ಕೆ ಮರಳಿದರು. ಅಧಿಕಾರಿಗೆ ತನ್ನ ತಪ್ಪಿನ ಅರಿವಾಗಿ ಮರಳಿ ಮಠಕ್ಕೆ ಜವಾನನ್ನು ಕಳಿಸಿ ಸ್ವಾಮಿಗಳನ್ನು ಕರೆಕಳುಹಿದ. ಆದರೆ ಸ್ವಾಮಿ ಬಕ್ಕೇಶ್ವರರು ಬರಲಿಲ್ಲ. ಅಲ್ಲದೆ ಅದೇ ವೇಳೆ ಮಾಮಲೆದಾರನ ಪುತ್ರಿಗೆ ತೀವ್ರ ಸಂಕಟವಾಗಿ ರೋಗ ಪೀಡಿತೆಯಾದಳು. ಮಠದ ಭಸ್ಮದ ಮಹಿಮೆಯನ್ನರಿತ ಅಧಿಕಾರಿ ಮಠದಿಂದ ಅದನ್ನು ತರಿಸಿ ಪುತ್ರಿಗೆ ಹಚ್ಚಿದಾಗ ಆ ನೋವು ನಿವಾರಣೆಯಾಯಿತು. ಅಧಿಕಾರಿ ಕುಟುಂಬ ಪರಿವಾರದೊಂದಿಗೆ ಮಠಕ್ಕೆ ಆಗಮಿಸಿ ಸ್ವಾಮಿಗಳಿಗೆ ಬೆಳ್ಳಿಯ ಸಮೆಗಳನ್ನು ನೀಡಿ ಕ್ಷಮೆ ಕೇಳಿದನು. ಸ್ವಾಮಿಗಳು ಇವುಗಳನ್ನು ಬಡವರಿಗೆ ನೀಡು ಎಂದು ತಿಳಿಸಿದರು.

ಬಕ್ಕೇಶ್ವರರು ಸ್ವಾಮಿಗಳಾಗಿ ಆ ಕಾಲದ ಪ್ರಸಿದ್ಧ ಮಠವಾದ ಚಿತ್ರದುರ್ಗದ ಬ್ರಹನ್ಮಠದ ಸ್ವಾಮಿಗಳೊಂದಿಗೆ, ಹಾಗೆಯೆ ನರಗುಂದ ಮೊದಲಾದ ಊರುಗಳ ಸ್ವಾಮಿಗಳೊಂದಿಗೆ ಉನ್ನತವಾದ ಆಧ್ಯಾತ್ಮಿಕ ಚರ್ಚೆ ನಡೆಸುತ್ತಿದ್ದರು. ಜನತೆಯಲ್ಲಿ ದುರ್ಗುಣಗಳನ್ನು ಬಿಡಿಸುವ, ಸದ್ಗುಣಗಳನ್ನು ಬಿತ್ತುವ ಮಹಾಕಾರ್ಯವನ್ನು ಬಕ್ಕೇಶ್ವರ ಸ್ವಾಮಿಗಳು ನಡೆಸಿದರು.

ತಾವು ಲಿಂಗೈಕ್ಯರಾಗುವ ವಿಷಯವನ್ನು ಮೊದಲೆ ತಿಳಿಸಿ ಲಿಂಗಾರ್ಚನೆಗೆ ಕುಳಿತು –

ಲಿಂಗದೊಳ್ ದೃಷ್ಟಿಯನು ನಿಲಿಸಿ
ಲಿಂಗದೊಳ್ ಮನಮಂ ನಿಲಿಸುತ
ಲಿಂಗದೊಳ್ ಭಾವಮಂ ತಾನೇಕೀಕರಿಸಿ ಬೆರೆದಂ॥

(ಪುಟ : ೧೯೬, ಪ : ೪೧.)

ಲಿಂಗದೊಳಗಾದ ಸ್ವಾಮಿಗಳ ಗುಣಗಾನವು ನಡೆದು ದುರ್ಗದ ಶ್ರೀಗಳ ಸಮ್ಮುಖದಲ್ಲಿ ಚೌಕಿಯಲ್ಲಿ ಭಸ್ಮಗಳಿಂದ ಕ್ರಿಯಾಸಮಾಧಿ ಮಾಡಲಾಯಿತು.

ಆಧುನಿಕ ಕಾಲಘಟ್ಟದ ಆರಂಭದಲ್ಲಿದ್ದ ಬಕ್ಕೇಶ್ವರ ಸ್ವಾಮಿಗಳ ಜೀವನವು ಸಾಮಾನ್ಯವಾದ ನೆಲೆಯಿಂದ ಪ್ರಾರಂಭವಾಗಿ ಅವಧೂತ ಸಂಪ್ರದಾಯಗಳೊಂದಿಗೆ ಮೇಳವಿಸಿ ಆ ಬಳಿಕ ಲಿಂಗಾಯತ ತಾತ್ವಿಕ ನೆಲೆಗಳಲ್ಲಿ ವಿರಮಿಸುವದು. ಅತಿಯಾದ ಪವಾಡಗಳ ಹೇರಿಕೆ ಇಲ್ಲಿಲ್ಲ. ಭಕ್ತರ ಇಚ್ಛೆಯಂತೆ ಒಂದೆರಡು ಪವಾಡಗಳನ್ನು ಹೇಳಲಾಗಿದೆ. ಬಕ್ಕೇಶ್ವರ ಸ್ವಾಮಿಗಳ ಸಮಾಧಿ ಸ್ಥಳವು ಇಂದು ಆರಾಧನಾ ಕೇಂದ್ರವಾಗಿದೆ. ಕವಿ ಪಂಡಿತ ಪುಟ್ಟರಾಜ ಗವಾಯಿಗಳೇ ಕೃತಿಯ ಆರಂಭದಲ್ಲಿ ಕಥಾಸಾರವನ್ನು ಗದ್ಯದಲ್ಲಿ ಬರೆದಿರುವವರು. ಕಾವ್ಯ ನಿರೂಪಣೆಯು ಅವರಿಗೆ ನೀರು ಕುಡಿದಷ್ಟೇ ಸುಲಭವಾಗಿದೆ.

೩.೧.೧೨ ಗಂಗಾವತಿಯ ಶ್ರೀ ಚನ್ನಬಸವ ಸ್ವಾಮಿ ಪುರಾಣ

ಪ್ರಸ್ತುತ ಭಾಮಿನಿ ಷಟ್ಪದಿಯ ಕಾವ್ಯವು ೮೦೦ ಪದ್ಯಗಳನ್ನು ಒಳಗೊಂಡು ೨೦ ಸಂಧಿಗಳಲ್ಲಿ ಮೂಡಿ ಬಂದಿದೆ. ಅತ್ಯುತ್ತಮ ವರ್ಣನೆಗಳಿಂದ ಕೂಡಿದ ಈ ಕಾವ್ಯವು ಗಂಗಾವತಿಯಲ್ಲಿ ನೆಲೆಸಿದ ಚನ್ನಬಸವ ಸ್ವಾಮಿಗಳ ಚರಿತ್ರೆಯನ್ನು ವಿವರಿಸುತ್ತದೆ. ಮಂಗಲಾಚರಣದಲ್ಲಿಯೇ –

ಚನ್ನ ಬಸವಸ್ವಾಮಿಯನುಪಮ
ಸನ್ನುತಂ ನಿಷ್ಕಾಮಿ ನಿರ್ಭ್ರಮ
ಚಿನ್ನಿಧಿಯು ಸತ್‌ಪ್ರೇಮಿ ಸಮಹಿಮ ಕಲ್ಮಠವಾಸಿದು ।
ಉನ್ನತಂ ಹಿತನಿಯಮ ಷಟ್‌ಪ್ರೇಮ
ಮನ್ನಿಸಲಿ ಮಂಗಳವಿತ್ತಸಮ
ನೆನ್ನನೀ ಜನಹಿತವೀವ ಗಂಗಾವತಿಯ ಪ್ರಭುವು ॥

(ಗಂ. ಶ್ರೀ ಚ.ಪು.ಪು : ೦೭. ಪ : ೧೮.)

ಎಂಬ ರೀತಿಯಲ್ಲಿ ವರ್ಣಿತಗೊಂಡಿದೆ. ಗಂಗಾವತಿಯಲ್ಲಿ ಸ್ವಯಂ ಪರಂಪರೆಯನ್ನು ನಿರ್ಮಿಸಿದ ಸ್ವಾಮಿಗಳ ಮಠವು ಇಂದು ಪ್ರಖ್ಯಾತವಾಗಿದೆ. ಅದರ ಮೂಲ ಕರ್ತೃಗಳಾದ ಚನ್ನಬಸವ ಸ್ವಾಮಿಗಳ ಪುರಾಣವು ಅವರ ಜೀವನದ ಚರಿತ್ರೆ, ತಾತ್ವಿಕ ನಿರೂಪಣೆ ಮತ್ತು ಲೀಲಾ ನಿರೂಪಣೆ ಎಂದು ೩ ಭಾಗಗಳಲ್ಲಿ ಮೂಡಿ ಬಂದಿದೆ.

ಶ್ರೀ ಚನ್ನಬಸವ ಸ್ವಾಮಿಗಳು ಮೂಲತಃ ಬಾಗಲಕೋಟೆ ಜಿಲ್ಲೆಯ ಶಿರೂರಿನವರು. ಅವರ ತಂದೆ ಶ್ರೀ 'ಮರುಳ ಸಿದ್ದಾರ್ಯ'ನು ಅಲ್ಲಿಯ ಚೌಕಿಮಠಕ್ಕೆ ಅಧಿಪತಿಯಾಗಿದ್ದನು. ಅವನ ಧರ್ಮಪತ್ನಿ 'ಗೌರಮ್ಮ'. ಈ ಮರಳು ಸಿದ್ದಾರ್ಯನು ತನ್ನ ಮಠವನ್ನೇ ವಿದ್ಯಾಲಯವನ್ನಾಗಿ ಮಾಡಿ, ಊರಿನ ಮಕ್ಕಳಿಗೆ ವಿದ್ಯೆಯನ್ನು ತಾತ್ವಿಕವಾದ ಶಾಸ್ತ್ರವನ್ನು ನಿರೂಪಿಸುತ್ತಾ ಇದ್ದ ಸಂದರ್ಭದಲ್ಲಿ ಊರಿನ ಜನ ಈತನನ್ನು ಗುರುವೆಂದೇ ಭಕ್ತಿಯಿಂದ ಕಾಣುತ್ತಿದ್ದರು.

'ಪರೋಪಕಾರವು ಪರಶಿವನ ಸೇವೆ' ಎಂದು ಬದುಕಿದ ಮರುಳ ಸಿದ್ದಾರ್ಯನು ಜನತೆಯಲ್ಲಿ ನ್ಯಾಯಯುತವಾಗಿ ಬದುಕುವ ಬಗೆಯನ್ನು ತಿಳಿಸುತ್ತಿದ್ದನು.

ಮರುಳ ಸಿದ್ದಾರ್ಯನಿಗೆ ಮಕ್ಕಳಿಲ್ಲದ ಚಿಂತೆ. ಒಂದು ದಿನ 'ಬಾಲಳ್ಳಿಯ ಹುಚ್ಚೀರೇಶ್ವರ' ಎಂಬ ಯೋಗಿಯು ಬಂದು 'ಮರುಳ ಸಿದ್ದಾರ್ಯ' ದಂಪತಿಗಳನ್ನು ಕಂಡು ಗೌರಮ್ಮನಿಗೆ ನಮಸ್ಕರಿಸಿದನು. ಆಗ ಅವರು ಕಾರಣ ಕೇಳಲು "ನಾನು ನಿನ್ನ ಗರ್ಭಸ್ಥ ಶಿಶುವಿಗೆ ನಮಸ್ಕರಿಸುವೆ." ಶಿವನೆ ಜಗವನ್ನು ಪಾವನ ಮಾಡಲು ಬರುತಿದ್ದಾನೆಂದು 'ಶ್ರೀಚನ್ನಬಸವ ಸ್ವಾಮಿಗಳ' ಜನನದ ಭವಿಷ್ಯವನ್ನು ನುಡಿಯುತ್ತಾನೆ. ಸಹಜವಾಗಿಯೆ ಲೋಕೋತ್ತರವಾದ ಮಗುವಾಗಿ ಶ್ರೀ ಚನ್ನಬಸವ ಸ್ವಾಮಿಗಳು ಹುಟ್ಟಿಬಂದರೆಂದು ವರ್ಣನೆ ಇದೆ.

ರವಿತೇಜಮಂ ಮಿಗುವ ಮಗುವಿನ ಶಿವತೇಜಮಂ

(ಪುಟ : ೩೦, ಪದ್ಯ : ೫)

ಎಂಬ ರೀತಿಯಲ್ಲಿ ದಿವ್ಯಕಾಂತಿಯಿಂದ ಮಗುವಿನ ಜನನವಾಯಿತು. ಮಗುವಿದ್ದಾಗಲೆ ಮೂಡಿದ ಶಿವಭಕ್ತಿಯನ್ನು ಹೊಂದಿದ ಬಗೆಯನ್ನು –

ಮಗುವು ತನ್ನಯ ಸ್ತುತಿಯ ಕೇಳ್ದೊಡೆ
ಬಗೆಯೊಳ್ ಕುದಿದು ಕಿವಿಯ ಕೈಯ್ಯಿಂ
ಹೊಗುಮಿಗೆಯೊಳುರೆ ಮುಚ್ಚಿಕೊಳ್ಳುವುದು ಶಿವನುತಿಯ ಕೇಳಿ

(ಪುಟ : ೩೩, ಪದ್ಯ : ೧೮.)

ಎಂಬ ಈ ವರ್ಣನೆಯಲ್ಲಿ ಚನ್ನಬಸವ ಸ್ವಾಮಿಗಳಲ್ಲಿ ಮಗುವಿದ್ದಾಗಲೆ ನಿರಾಲಂಭ ಶಿವಪ್ರಿಯ, ಗುಣಗಳು ಇದ್ದವೆಂದು ಕವಿ ಹೃದ್ಯವಾಗಿ ವರ್ಣಿಸುತ್ತಾರೆ.

ಇಂತಹ ಅನುಪಮ ಬಾಲ್ಯ ಕಾಲದಲ್ಲಿ ಒಂದು ದಿನ ಚೌಕಿಯ ಮಠಕ್ಕೆ ಒಬ್ಬ ಶಿವಯೋಗಿ ಆಗಮಿಸಿ ಪ್ರಸಾದ ತತ್ವದ ಮಹತ್ವವನ್ನು ತಿಳಿಸುವನು. ಚನ್ನಬಸವನ ನಂತರ 'ಗುರುಪಾದ'ನೆಂಬ ಇನ್ನೊಬ್ಬ ಮಗುಹುಟ್ಟಿ ಬೆಳೆದಾಗ, ಲೌಕಿಕ ವಿದ್ಯೆಯನ್ನು ಗಮನಿಸದ ಚೆನ್ನಬಸವನಿಗೆ ಅಧ್ಯಾತ್ಮವೇ ಮುಖ್ಯವಾಯಿತು. ಬಾಲ್ಯ ಕಾಲದಲ್ಲಿಯೇ ತಂದೆ 'ಮರುಳಸಿದ್ಧ'ನು ಒಂದು ರೋಗಕ್ಕೆ ಗುರಿಯಾಗಿ ಲಿಂಗೈಕ್ಯರಾದರು. ಅಷ್ಟೊತ್ತಿಗೆ ಮೂರು ಗಂಡುಮಕ್ಕಳನ್ನು ಪಡೆದ ಗೌರಮ್ಮನು, ದಿಙ್ಮೂಢಳಾದಳು. ಆಗ ಜಾಲಳ್ಳಿಯ ಹುಚ್ಚೇಶ್ವರನು ಆಗಮಿಸಿ ಅವಳಿಗೆ ಸಾಂತ್ವನ ಹೇಳಿದನು. ಮುಂದೆ ಜಾಲಳ್ಳಿಯ ಹುಚ್ಚೇಶ್ವರನಲ್ಲಿ ಚನ್ನಬಸವ ಸ್ವಾಮಿ, ವಿದ್ಯಾಭ್ಯಾಸವನ್ನು ಮುಂದುವರಿಸಿದನು. ಹಲವಾರು ತಿಂಗಳುಗಳ ನಂತರ ತಾಯಿಯು ಲಿಂಗೈಕ್ಯಳಾದಳು.

ಚನ್ನಬಸವ ಸ್ವಾಮಿಗಳ ಮುಂದಿನ ಜೀವನವೆಲ್ಲಾ ತಾತ್ವಿಕ ವಿದ್ಯೆಯಲ್ಲಿಯೇ ಮುಂದುವರೆಯಿತು. ೧೦ ವರ್ಷದವನಾಗುವ ವೇಳೆಗೆ ಮಠದ ಜನಸೇವೆಯನ್ನು ಮಾಡುತ್ತಾ ಅರಿವಿನ ನಿಧಿಯಾಗಿಯೆ

ಬೆಳೆದನು. ಅಷ್ಟಾವರಣ ಮೊದಲಾದ ತತ್ವಗಳನ್ನು ತಿಳಿಯಲು ಅನೇಕ ಕಥೆಗಳನ್ನು ಹುಚ್ಚೇಶ್ವರ ಸ್ವಾಮಿಗಳು ತಿಳಿಸುತ್ತಾ ಹೋಗುತ್ತಾರೆ. ಈ ಮಧ್ಯೆ ವಚನಗಳನ್ನು ಅಧ್ಯಯನ ಮಾಡಲು ತಿಳಿಸುತ್ತಾರೆ. ಈ ಸಂದರ್ಭದಲ್ಲಿ ಗುರುಭಕ್ತ ಆಂಡಯ್ಯ, ನುಲಿಯ ಚಂದಯ್ಯ ಮೊದಲಾದ ಶರಣರ ಚರಿತ್ರೆಗಳನ್ನು ತಿಳಿಸುವರು. ಹಾಗೆಯೇ ವಿಭೂತಿ, ರುದ್ರಾಕ್ಷಿ, ಮಂತ್ರ, ಗುರು ಮೊದಲಾದ ತತ್ವಗಳ ವಿವರಣೆ ಇಲ್ಲಿ ಮೂಡಿ ಬಂದಿದೆ. ಪಂಚಾಚಾರಗಳ ವಿಷಯವನ್ನು ವಿವೇಚಿಸುತ್ತಾ 'ಏಕಾಂತ ರಾಮಯ್ಯ', 'ಆದಯ್ಯ' ಮೊದಲಾದವರ ಕಥೆಗಳನ್ನು ಇಲ್ಲಿ ನಿರೂಪಿಸಲಾಗಿದೆ. ಪಾದೋದಕವನ್ನು ಕುರಿತು ಒಂದು ವಿವರಣೆ ಹೀಗಿದೆ.

ಪಾಯನಲ್ ಪಾಪದ ವಿನಾಶಂ
ದೋಯನಲ್ ದೋಷದ ವಿನಾಶಂ
ಮಾಯೆಯ ದಹನಮಹುದ ದಯನಲ್ಕೆಯನೆ ಕರ್ಮಹೃತಿ
ಜ್ಞೇಯಮಹುದಿದು ಭಕ್ತಿಯಿರ್ದೊಡೆ
ರಾಯಗುರುಚರ ಪದದೊಳುದಿಪುದು
ನ್ಯಾಯದಿಂ ಪಾದೋದಕ ಮೆನಲ್ ಸರ್ವದುಃಖ ಹರಂ ॥

(ಪುಟ : ೧೧೩, ಪದ್ಯ : ೭.)

ಪಾದೋದಕದಲ್ಲಿಯೆ ದೂಳುಪಾದೋದಕ, ಗುರುಪಾದೋದಕ, ಕ್ರಿಯಾಪಾದೋದಕ, ಜಂಗಮ ಪಾದೋದಕ ಎಂಬ ವಿವರಗಳನ್ನು ಹೇಮರಡ್ಡಿ ಮಲ್ಲಮ್ಮನ ಕತೆಯ ಹಿನ್ನೆಲೆಯಲ್ಲಿ ವಿವರಿಸುತ್ತಾರೆ.

ಕಲ್ಯಾಣದ ಶರಣರಲ್ಲಿ 'ಅಮುಗೆ ದೇವಯ್ಯ'ನ ಚರಿತ್ರೆಯನ್ನು ಹೀಗೆ ವಿವರಿಸುತ್ತಾರೆ. ಪಂಚಾಚಾರಗಳ ವಿವರಣೆಯನ್ನು ನೀಡಿರುವದು ಕೃತಿಯ ಸೊಬಗನ್ನು ಹೆಚ್ಚಿಸಿದೆ. ಹುಚ್ಚೇಶ್ವರ ಮಠದಲ್ಲಿ ಕಸಗೂಡಿಸುವ ಕಾಯಕವನ್ನು ಅತ್ಯಂತ ಶ್ರದ್ಧೆಯಿಂದ ಚನ್ನಬಸವನು ನೆರವೇರಿಸುತ್ತಿದ್ದನು. ಗುರುಸೇವೆ, ಜಂಗಮಸೇವೆ, ಲಿಂಗಸೇವೆಯೆ ಹೌದು ಎಂಬ ತಾತ್ವಿಕ ಚಿಂತನೆಯನ್ನು ಎಡೆಯೂರು ಸಿದ್ಧಲಿಂಗೇಶ್ವರ ಅಥಣಿಯ ಶಿವಯೋಗಿಯ ಉದಾಹರಣೆಯೊಂದಿಗೆ ಸೇವೆಯ ಮಹತ್ವ ನಿರೂಪಿಸಲಾಗಿದೆ.

ಚನ್ನಬಸವ ಸ್ವಾಮಿಗಳು ಗಂಗಾವತಿಗೆ ಆಗಮಿಸಿ, ಅಲ್ಲಿ ಮಲ್ಲಿಕಾರ್ಜುನ ಮಠದಲ್ಲಿ ಉಳಿಯುತ್ತಾರೆ. ಗಂಗಾವತಿಯು ಚಾಲುಕ್ಯರ ಕಾಲದಿಂದ ಪ್ರಖ್ಯಾತವಾದದು. ಕಂಪಿಲದುರ್ಗದ ನೃಪನು ಮಂಗಲವಾಡವನ್ನು ಆಳುವ ಬಿಜ್ಜಳನಿಗೆ, ಕಲ್ಯಾಣವನ್ನು ಆಳುವ ಚಾಲುಕ್ಯ ತೈಲಪನಿಗೆ ಆತ್ಮೀಯ ವ್ಯಕ್ತಿಯಾಗಿದ್ದನು. ಅಲ್ಲಿಯೆ ಸಮೀಪದ ಮಾತುಂಗ ಪರ್ವತದಲ್ಲಿ ಅಲ್ಲಮಪ್ರಭು ಅನುಷ್ಠಾನ ಗೈದನೆಂದು ಕಾವ್ಯದಲ್ಲಿ ವಿವರಗಳಿವೆ. ಅಲ್ಲಿಯ 'ಪಂಪಾ ಪರಿಸರ'ವು ಅನಾದಿಕಾಲದಿಂದಲೂ ಪ್ರಸಿದ್ಧವಾಗಿತ್ತು. ಗಂಗಾವತಿಯ ಕಲ್ಮಠವು ನಾಲ್ಕೈದು ನೂರು ವರ್ಷಗಳ ಇತಿಹಾಸ ಹೊಂದಿದೆ. ಹಿರೇಕೊಟ್ನೂರು ಸ್ವಾಮಿಗಳು ಈ ಮಠದ ಸಂಬಂಧವನ್ನು ಹೊಂದಿದ್ದರು.

ಶ್ರೀ ಚನ್ನಬಸವ ಸ್ವಾಮಿಗಳು ಜಾಲಳ್ಳಿ ಮತ್ತಿತರ ಕ್ಷೇತ್ರಗಳನ್ನು ಸುತ್ತಿ ಕೊನೆಗೆ ಜಾಲಳ್ಳಿಗೆ ಬಂದು ಗುರು ಐಕ್ಯವಾದಾಗ, ಅವರ ಗದ್ದುಗೆಯನ್ನು ನಿರ್ಮಿಸಿ ಅದನ್ನೊಂದು ಪುಣ್ಯ ಕ್ಷೇತ್ರವನ್ನಾಗಿ ಮಾಡುತ್ತಾನೆ. ಅಲ್ಲಿಗೆ ಘನಮಠಾದಾರ್ಯ ಸಂತೆ ಕೇಲೂರು ಸ್ವಾಮಿಗಳು ಆಗಮಿಸಿ ಚನ್ನಬಸವನಿಗೆ ಆಧ್ಯಾತ್ಮ ತತ್ವವನ್ನು ತಿಳಿಸುತ್ತಾರೆ. ಇಳಕಲ್ಲ ಚಿತ್ತರಗಿ ಮಠದ ವಿಜಯ ಮಹಾಂತ ಸ್ವಾಮಿಗಳು ಇವರ ಮೇಲೆ ಕೃಪೆ ತೋರಿದರು. ಹೀಗೆ ಮಹಾತ್ಮರ ಸಂಗದಿಂದ ಮಹಾ ಶರಣನಾಗಿ ಚನ್ನಬಸವ ಸ್ವಾಮಿಗಳು ಬೆಳೆಯುತ್ತಾರೆ.

ದೊಡ್ಡ ಸ್ವಾಮಿಗಳಾಗಿ ಬೆಳೆದರೂ ಸರಳ ನಡವಳಿಕೆಗಳಿಂದ ಅವರು ಮಹಾತ್ಮರಾದರು.

ನೆಲದ ಮೇಲೆಯೆ ಕುಳಿತುಕೊಳ್ವಂ
ಸಲೆ ಜನರ ದುಃಖವ ಕಳೆಯುವಂ
ಮಿಲಿತರೋಗಕ್ಕೌಷಧಮನೀವಂ ಶಿವಯೋಗಿಯು ॥

(ಪುಟ : ೨೦೩, ಪದ್ಯ : ೨೧.)

ಸ್ವಾಮಿಗಳು ಶಾಂತಿ ಕರುಣೆ ಸತ್ಯ, ತ್ಯಾಗಗಳ ರೂಪವಾಗಿದ್ದರು.

೩.೧.೧೩ ಶ್ರೀಗುರು ವೀರಸಿದ್ಧೇಶ್ವರ ಪುರಾಣ

ಕ್ರಿ.ಶ. ೨೦೦೧ರಲ್ಲಿ ಪ್ರಕಟವಾದ ಈ ಪುರಾಣವು ವಡವಡಿಗೆಯ ನಂದೀಶ್ವರ ಮಠದ ವೀರ ಸಿದ್ದೇಶ್ವರ ಮಹಾಯೋಗಿಗಳ ಜನ್ಮ ಶತಾಬ್ದಿಯ ಸವಿ ನೆನಪಿನಲ್ಲಿ ಪ್ರಕಟವಾಗಿದೆ. ಪ್ರಸ್ತುತ ಗ್ರಂಥದಲ್ಲಿ ೧೮ ಸಂಧಿಗಳು ೭೪೯ ಭಾಮಿನಿ ಷಟ್ಪದಿಗಳು ೧೭ ಸೂಚನಾ ಪದ್ಯಗಳಿವೆ. ಮುನ್ನುಡಿಯಲ್ಲಿ ಇದನ್ನು ಮಹಾತ್ಮರ ಚರಿತ್ರೆ ಎಂದು ಕರೆಯಲಾಗಿದೆ. "ಮಹಾತ್ಮರ ಚರಿತ್ರೆಯನ್ನು ಮಹಾಕಾವ್ಯದಲ್ಲಿ ರೇಖಿಸಿದವರು ಒಬ್ಬ ಮಹಾತ್ಮರೆ. ಉಭಯ ಮಹಾತ್ಮರ ಮಹಾ ಸಂಗಮ ಈ ಮಹಾಕಾವ್ಯದ ಮೂಲಕ ಘಟಿಸಿದೆ." (ಶ್ರೀ ಗುರು ವೀರಸಿದ್ಧೇಶ್ವರ ಪುರಾಣ. ಮುನ್ನುಡಿ, ಪುಟ : ೦೯). ಈ ಕಾವ್ಯವು ಮಹಾಕಾವ್ಯವೆಂದು, ವೀರಸಿದ್ದೇಶ್ವರ ಶಿವಯೋಗಿಗಳು ಸರ್ವಭಕ್ತರ ಕಾಮಧೇನು ಎಂದು ತಿಳಿಸುತ್ತಾ ಕವಿಗಳು ಅರಿವಿನ ಮಹತ್ವವನ್ನು, ಗುರುವಿನ ಮಹತ್ವವನ್ನು ಇದರಲ್ಲಿ ಹೇಳಿದ್ದಾರೆ. ಕಲ್ಯಾಣದ ಪರಂಪರೆಯಿಂದ ಪ್ರಾರಂಭಗೊಂಡು, ನಾಡಿನ ನಾಲ್ದೆಸೆಗೆ ಹರಿದ ಅರಿವಿನ ಪ್ರವಾಹವು, ಕಳೆದ ಶತಮಾನದಲ್ಲಿ ಬಿಜಾಪುರ ಜಿಲ್ಲೆಯ ವಡವಡಗಿಯಲ್ಲಿ ಮುಂದುವರೆದು, ಅಲ್ಲಿ ನಂದಿಮಠವನ್ನು ಸ್ಥಾಪಿಸುವುದರ ಮೂಲಕ ಮೂಲಕರ್ತೃರ್ವಾದ ವೀರಸಿದ್ಧೇಶ್ವರ ಸ್ವಾಮಿಗಳು ಶರಣ ತತ್ವದ ಸಾಕಾರವಾಗಿದ್ದರು. ಅವರು ಭಕ್ತರಿಗೆ ಬಂಧುಗಳಾಗಿಯೆ ಲೀಲಾಮೂರ್ತಿಗಳಾದವರು.

ಪ್ರಥಮ ಸಂಧಿಯಲ್ಲಿ ಗುರು ವೀರ ಸಿದ್ದೇಶ್ವರರ ಜನನ-ಮರಣಗಳ ವಿವರಣೆ ಇದೆ. ಬಿಜಾಪುರ ಜಿಲ್ಲೆಯ ಸಿಂಧಗಿ ತಾಲೂಕಿನ 'ಪಡಗಾನೂರಿ'ನಲ್ಲಿ ಲಿಂಗಪೂಜಾ ನಿಷ್ಠರಾದ

'ರೇವಯ್ಯ' ಮತ್ತು 'ನೀಲಗಂಗಾ' ಎಂಬುವರೇ ಸ್ವಾಮಿಗಳ ತಂದೆ-ತಾಯಿಗಳು. ಈ ರೇವಯ್ಯನ ವಂಶಜರು ಬಸವಕಲ್ಯಾಣದ ಹುಲಿಕಾಂತಿ ಮಠದ ಪಟ್ಟಾಧ್ಯಕ್ಷರಾಗಿದ್ದರು. ರೇವಯ್ಯನು ಸಾತ್ವಿಕವಾಗಿ, ವಿಶಾಲ ಹೃದಯಿಯಾಗಿ, ಶ್ರಾವಣಮಾಸದಲ್ಲಿ ಪುರಾಣ ಪ್ರವಚನ ಮಾಡುವ ಪುಣ್ಯಕಾರ್ಯವನ್ನು ಮಾಡುತ್ತಿದ್ದ . ಅವರಿಗೆ ಗಂಡು ಮಗುವಿಲ್ಲದ ದುಃಖ. ಅದಕ್ಕಾಗಿ ೧೬ ಸೋಮವಾರ ಲಿಂಗಪೂಜೆ, ವ್ರತಾಚರಣೆ ಮಾಡುತ್ತಾರೆ. ಪರಿಣಾಮವಾಗಿ ಶಾಲಿವಾಹನ ಶಕೆ ೧೮೦೧ರಲ್ಲಿ ಅಂದರೆ ಕ್ರಿ.ಶ. ೧೮೭೯ರಲ್ಲಿ 'ಬಾಲಕ ವೀರ ಸಿದ್ದೇಶ್ವರ'ರು ಜನಿಸಿ ಬಂದರು. ಸಾಂಪ್ರದಾಯಿಕವಾಗಿ ಮಹಾತ್ಮರ ಜೀವನ ಉದಯವು ಪವಾಡ ಸದೃಶ್ಯವಾಗಿ ನಿರೂಪಿತವಾಗುವದು ಒಂದು ಸಂಪ್ರದಾಯ. ಅದನ್ನು ಕೈ ಬಿಟ್ಟು ಪ್ರಕೃತಿ ಸ್ವರೂಪ ಸಹಜ ಜನನವನ್ನು, ಮಗುವಾಗಿದ್ದಾಗ

ಲಿಂಗರಹಿತರ್ ಮುಟ್ಟಲಳುವದು
ಲಿಂಗಸಹಿತರ್ ಮುಟ್ಟೆ ನಗುವದು
ಮಂಗಲದ ಮಗವಿನುರು ಲಿಂಗ ನಿಷ್ಠೆಯನರಿಯುತೆ ॥

(ಪುಟ : ೨೧, ಪದ್ಯ : ೦೩.)

ವೀರ ಸಿದ್ದೇಶ್ವರರ ಸುನಾಮವನ್ನು ಹೊತ್ತು ಲಿಂಗನಿಷ್ಠೆಯಲ್ಲಿ ಮಗು ಬೆಳೆದನು. ಸಹಜವಾಗಿ ತಂದೆ-ತಾಯಿಗಳಿಗೆ ಆತ್ಮೀಯನಾಗೆ ಬೆಳೆದನು. ೫ ವರ್ಷ ಮುಗಿದ ಬಳಿಕ 'ಓಂಕಾರ ನಾದದಕ್ಷರ'ದೊಂದಿಗೆ ವಿದ್ಯಾಭ್ಯಾಸ ಪ್ರಾರಂಭವಾಯಿತು. ಓಂಕಾರ ಚಿತ್ರದಲ್ಲಿ ಲಿಂಗವನ್ನು ಮೂಡಿಸಿದ ರೀತಿಯ ಬಗೆಗೆ ಮಗುವಿಗೆ ಕೂತೂಹಲ ಉಂಟಾಗಿ ಕೊನೆಗೆ ಗುರುಗಳು ಪ್ರಣವ ಪಂಚಾಕ್ಷರ ತತ್ವವನ್ನು ವಿವರಿಸಬೇಕಾಯಿತು. ಮಗನಿಗೆ 'ರೇವಯ್ಯ'ನವರು ದೀಕ್ಷೆಯನ್ನು ಮಾಡಿಸಿ ವೀರಶೈವ ಸಿದ್ಧಾಂತವಾದ ಪಂಚಾಚಾರಗಳು, ಷಟಸ್ಥಲಗಳು, ಅಷ್ಟಾವರಣದ ಬಗೆಗೆ ತಿಳಿವಳಿಕೆ ನೀಡಿದರು. ಪಂಚಾಚಾರದ ಬಗೆಗೆ ಕವಿಗಳು ವಿವರಿಸುವದು ಹೀಗೆ-

ಜಗದ ಸೇವಕ ನಾನೆನಿಪ್ಪುದೆ
ಸೊಗದ ಭೃತ್ಯಾಚಾರಮೆನಿಪುದು
ಮಿಗುವಖಿಲ ಸದ್ಗುಣಸುವರ್ತನ ಮುರುಸದಾಚಾರಂ ।
ಮಿಗೆ ಶಿವಾಚಾರಂ ಶಿವಸ್ಥಿತಿ
ಬಗೆಯ ಲಿಂಗಾಚಾರ ಮಚಲತೆ
ಸೊಗತ ನಿಂದೆಯ ಬಿಡುವುದೆ ಗಣಾಚಾರಮೆನಿಸುವುದು ॥

(ಪುಟ : ೩೪, ಪದ್ಯ : ೨೪.)

ಹೀಗೆ ತತ್ವ ಪರಿಸರದಲ್ಲಿಯೆ ಬಾಲಕ ವೀರ ಸಿದ್ಧೇಶ್ವರನು ಬೆಳೆದು ಬರುತ್ತಾನೆ. ಹೀಗೆ ೧೨ ವರ್ಷದವನಾಗಿ ವೀರ ಸಿದ್ದೇಶ್ವರ ಬೆಳೆದು ನಿಂತನು.

ಈತನಿಗೆ ಅನೇಕ ಶಿವ–ಶರಣರ ಕತೆಗಳನ್ನು ಗುರುಗಳು ತಿಳಿಸಿ ಹೇಳಿದರು. ಶಿವಯೋಗಿಯು ೧೨ ವರ್ಷದವನಾದಾಗ ಡೊಂಬರ ಒಡತಿ ಚನ್ನಮ್ಮನ ಸಂಗದಲ್ಲಿ ಉಳಿದು ಕತ್ತೆಗಳನ್ನು ಕಾಯುವ ಕೆಲಸ ಮಾಡುತ್ತಿದ್ದನು.

ಹಂಬಲಿಸದಲೆ ಕಾನನದೊಳಗೆ
ತ್ರ್ಯಂಬಕ ಮಹಾಲಿಂಗ ಪೂಜೆಯ
ತಾಂಬಿಡದಲೆಸಗುತ್ತೆ ಪರ್ಣ್‌ಕಾರ್ಯ್‌ಗಳನು ಸೇವಿಪನು ॥

(ಪುಟ : ೩೭, ಪದ್ಯ : ೧೦)

ಹೀಗೆ ಶಿವಲಿಂಗ ಪೂಜೆಯಲಿ ಮನವನ್ನು, ಕಾಯಕದಲ್ಲಿ ತನುವನ್ನು ಮೀಸಲಿರಿಸಿ ಬೆಳೆದನು. ವಡವಡಗಿಗೆ ಬಂದ ಬಳಿಕ ಇವರ ಚರಿತ್ರೆಯೆ ಬದಲಾಗಿ ಅಲ್ಲಿ ಗುರುಪಾದಪ್ಪನೆಂಬ ಗುರುವಿನಿಂದ ಆತನ ಜೀವನವು ಪರಿವರ್ತನೆಗೊಂಡು ಗುರುತ್ವವನ್ನು ಪಡೆಯಿತು. ಈ ಹಂತದಲ್ಲಿ ಅನೇಕ ಲೀಲೆಗಳು ಘಟಿಸಿದವು. ಮುಂದೆ ನಂದಿಮಠವನ್ನು ಸ್ಥಾಪಿಸಲಾಯಿತು. ಸ್ವಾಮಿಗಳು ಕ್ರಿ.ಶ. ೧೯೪೪ ರಲ್ಲಿ ಲಿಂಗೈಕ್ಯರಾದರು. ಅವರ ಸಮಾಧಿಯು ಆ ಮಠದಲ್ಲಿ ಇರುವುದು.

೩.೧.೧೪. ಚಿಕೇನಕೊಪ್ಪದ ಶ್ರೀ ಚನ್ನವೀರ ಶರಣರ ಪುರಾಣ

ಕ್ರಿ.ಶ. ೨೦೦೦ ದಲ್ಲಿ ಪ್ರಕಟವಾದ ಶ್ರೀ ಚಿಕೇನಕೊಪ್ಪ ಚನ್ನವೀರಶರಣರ ಚರಿತ್ರೆಯು ವಾರ್ಧಕಷಟ್ಪದಿ ಕಾವ್ಯವಾಗಿ ಇಲ್ಲಿ ಕಂಗೊಳಿಸಿದೆ. ಚನ್ನವೀರ ಶರಣರ ಚರಿತ್ರೆಯು ಮೂವತ್ತು ಸಂಧಿಗಳಲ್ಲಿ ೧೦೩೮ ಪದ್ಯಗಳಲ್ಲಿ ಮೂಡಿಬಂದಿದೆ. ಶರಣರು ೧೯೯೫ರಲ್ಲಿ ಐಕ್ಯರಾದ ಅನತಿಕಾಲದಲ್ಲಿ ಅಂದರೆ ೧೯೯೯ರಲ್ಲಿ ಈ ಕಾವ್ಯವನ್ನು ಬರೆಯಲಾಗಿದೆ. ಅಲ್ಲದೆ ಪಂ. ಪುಟ್ಟರಾಜ ಕವಿಗವಾಯಿಗಳು ಶರಣರ ಜೀವನದ ಎಲ್ಲವನ್ನು ಕಣ್ಣಾರೆಕಂಡಿದ್ದಾರೆ. ಹೀಗಾಗಿ ಕಾವ್ಯವು ವಾಸ್ತವ ನೆಲೆಗಟ್ಟಿನ ಮೇಲೆ ಮೂಡಿಬಂದಿರುವದು. ವಾರ್ಧಕ ಷಟ್ಪದಿಯ ಬಿಗಿ ಬಂಧದಂತೆಯೆ ಶರಣರ ಜಿವನದ ಬಂಧವು ಗಟ್ಟಿಗೊಳ್ಳುತ್ತಾ ಸಾಗುತ್ತದೆ. ಮುನ್ನುಡಿಯಲ್ಲಿ ಅತ್ಯುತ್ತಮವಾದ ವಿವರಣೆಯನ್ನು ಇನ್ನೋರ್ವ ಕವಿಗಳಾದ ಪಂ. ರಾಜಗುರು ಗುರುಸ್ವಾಮಿ ಕಲಕೇರಿಯವರು ವಿದ್ವತ್‌ಪೂರ್ಣ ವಿವರಣೆ ನೀಡಿದ್ದಾರೆ. "ಈ ಶಕದ 'ನಡೆದಾಡುವ ದೇವರು ಗುರು ಪುಟ್ಟರಾಜರು' ಹಾಗೂ 'ಚನ್ನವೀರ ಶರಣರು' ಎಂದು ಜನಕೋಟಿ ಕೊಂಡಾಡುತ್ತದೆ. ಚನ್ನವೀರರು ಮೌನತಪಸ್ವಿ, ಪುಟ್ಟರಾಜರು ಗಾನತಪಸ್ವಿ, ಒಬ್ಬ ತಪಸ್ವಿಯ ಪುರಾಣವನ್ನು ಇನ್ನೊಬ್ಬ ತಪಸ್ವಿ ಬರೆದಾಗ ಆ ಗ್ರಂಥದ ಘನತೆ ಮುಗಿಲೆತ್ತರ. ಅದರ ಪಾವನತೆ ಗಗನದೆತ್ತರ, ಮಧುರಕ್ಕೆ ಮಧುರ ಸೇರಿದಂತೆ, ನಿತ್ಯಕ್ಕೆ ಸತ್ಯ ಬಂದಪ್ಪಿದಂತೆ, ಬೆಳಗಿಗೆ ಬೆಳಕು ಮುತ್ತಿಕ್ಕಿದಂತೆ ಪುಟ್ಟರಾಜರಿಂದ ಚನ್ನವೀರ ಶರಣರ ಪುರಾಣ ರಚನೆಯಾಗಿದೆ." (ಚಿ. ಶ್ರೀ. ಚ.ಶ.ಪು. ಪುಟ : ೧೬) ಎಂಬ ಮಾತು ಪುರಾಣ

ಕಾವ್ಯದ ವಸ್ತು ಸ್ವರೂಪವನ್ನು ಸರಿಯಾಗಿ ವಿವರಿಸುವುದು. ಮಂಗಳಾಚರಣದ ಸಂಧಿಯಲ್ಲಿ ಕಾವ್ಯ ರಚನೆಯಿಂದಲೆ ಹಿನ್ನೆಲೆಯನ್ನು ಕವಿಗಳು ವಿವರಿಸುತ್ತಾರೆ.

ಚನ್ನವೀರ ಶರಣರ ಪೂರ್ವಜರು ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ 'ಮಮದಾಪೂರ' ಎಂಬ ಗ್ರಾಮದವರು. ಆ ಪರಂಪರೆಯಲ್ಲಿ ಗುಗ್ಗಳ ಮಹಾಂತೇಶರೆಂದು ಪ್ರಖ್ಯಾತರಾದ ವ್ಯಕ್ತಿಯ ಪರಂಪರೆಯ ಸಿದ್ಧಲಿಂಗಯ್ಯನ ಮಗ ಖಾನಯ್ಯ. ಖಾನಯ್ಯನವರ ಮಗನೇ ಚನ್ನವೀರ ಶರಣರು. ಶರಣರ ತಾಯಿಯ ಹೆಸರು ಶಿವಮ್ಮ. ಕ್ರಿ.ಶ. ೧೯೨೩ರಲ್ಲಿ ಶರಣರ ಜನನವಾಯಿತು. ಬೆಳೆದಂತೆ ಆಧ್ಯಾತ್ಮದತ್ತ ವಿರಕ್ತಿಯೂ ಬೆಳೆಯುತ್ತದೆ. ಮುಂದೆ ಮದುವೆಯ ಸಂದರ್ಭದಲ್ಲಿ ಚನ್ನವೀರ ಶರಣರು ಮದುವೆ ಬಂಧನಕ್ಕೆ ಒಳಗಾಗದೆ ಸಂಸಾರವನ್ನು ತ್ಯಜಿಸಿ ಸನ್ಯಾಸತ್ವವನ್ನು ಸ್ವೀಕರಿಸಿದರು.

ಚನ್ನವೀರ ಶರಣರು ಬಾಲ್ಯಕಾಲದಲ್ಲಿಯೆ ಶಾಲಾಭ್ಯಾಸ, ಶಾಸ್ತ್ರಾಭ್ಯಾಸವನ್ನು ಮಾಡಿದರು. ನಿಜಗುಣರ ಶಾಸ್ತ್ರ ಮೊದಲಾಗಿ ಅಪಾರ ಜ್ಞಾನವನ್ನು ಪಡೆದು, ಗಾವಟಿ ಶಾಲೆಯಲ್ಲಿ ಹಲವು ವರ್ಷ ಶಿಕ್ಷಕರಾಗಿದ್ದರು. ಆ ಕಾಲದಲ್ಲಿಯೆ ಶರಣರ ವಚನಗಳನ್ನು ಸುಶ್ರಾವ್ಯವಾಗಿ ಹಾಡುವದನ್ನು ರೂಢಿಸಿಕೊಂಡಿದ್ದರು. ಅಡೂರಿನಲ್ಲಿ ಶಿಕ್ಷಕರಾಗಿದ್ದ ವೇಳೆಯಲ್ಲಿಯೆ ಅವರು ಪುರಾಣ-ಪ್ರವಚನಗಳನ್ನು ಮಾಡುತ್ತಾ ಜನಜಾಗೃತಿ ಮಾಡಿದರು. ಹೀಗೆ ಪ್ರಸಿದ್ಧವಾದ ಜೀವನವನ್ನು ಪಾರಮಾರ್ಥಿಕ ಕಕ್ಷೆಗೆ ತಂದು ಜಂಭುಕೇಶ್ವರಗಿರಿ ಹಂಪೆಯಲ್ಲಿ ಅವರು ಜ್ಞಾನ ಸಂಪಾದನೆಯನ್ನು ಮಾಡಿದರು.

ಕಾಲಾಂತರದಲ್ಲಿ ಅವರು ಜಂತಲಿ-ಶಿರೂರಿನಲ್ಲಿ ಅನುಷ್ಠಾನಗೈದು, ಕೊಪ್ಪಳದ ಗವಿಮಠಕ್ಕೆ ಬಂದರು. ಅಲ್ಲಿ ಗುರುಗಳಿಂದ ದೀಕ್ಷೆ ಪಡೆದು ಇವರು ಶರಣರೆನಿಸಿದರು. ಅವರ ವ್ಯಕ್ತಿತ್ವವನ್ನು ಕಾವ್ಯ ಹೀಗೆ ಪರಿಚಯಿಸುತ್ತದೆ –

ಕೆಂಪುದಡಿ ಬಿಳಿ ಪಂಚೆಯುಡಿಸಿ ಬಿಳಿಯಂಗಿಯಂ
ಪೆಂಪಿನಿಂ ತೊಡಿಸಿ ಮಸ್ತಕಕೆ ತಿಳಿಗಾವಿಯಾ
ಸೊಂಪಿನಿಂ ವಸ್ತ್ರಮಂ ಸುತ್ತಿಸುತೆ ಜೋಳಿಗೆಯ ಬೆತ್ತಮಂ ಕೊಟ್ಟುಪರಿಸಿ ।
ಇಂಪಿನಿಂ ಧರ್ಮಮಂ ಜನತೆಗೊರೆಯವನು ತನು
ಕಂಪದಿಂ ಬೋಧಿಸಿದ ಮರಿಶಾಂತ ವೀರಯತಿ
ಯಂಪರಾತ್ಪರ ಶಂಬುವೆಂದರಿದು ನಂಬಿ ಸೇವಿಸುತಿರ್ದನೀ ಶಿಷ್ಯನು. ॥

(ಪುಟ : ೧೦೦, ಪದ್ಯ : ೨೬೪.)

ಹೀಗೆ ಚನ್ನವೀರ ಶರಣರ ನೈಜ ವ್ಯಕ್ತಿತ್ವವನ್ನು ಕವಿಗಳು ಎತ್ತಿ ತೋರಿದ್ದಾರೆ.

ಈ ಪುರಾಣ ಕಾವ್ಯದ ಒಡಲಲ್ಲಿ ನೇರವಾಗಿ ವಚನಗಳನ್ನು ಸಾಂದರ್ಭಿಕವಾಗಿ ಅಳವಡಿಸಿದ್ದಾರೆ. ನೀನೊಲಿದರೆ ಕೊರಡು ಕೊನರುವದು, ಗುರುವೇ ಭಕ್ತರ ಕಲ್ಪತರುವೆ,

ಜ್ಯೋತಿ ಮುಟ್ಟಿದ ಬತ್ತಿ, ನರಜನ್ಮವ ತೊಡೆದು, ಮೊದಲಾದ ವಚನಗಳು ಇಲ್ಲಿವೆ. ಪವಾಡ ಸದೃಶವಾದ ಘಟನೆಗಳು ಕಾವ್ಯದಲ್ಲಿ ಉಕ್ತವಾಗಿವೆ. ಕೊಪ್ಪಳದಿಂದ ಬಳಗಾನೂರಿಗೆ ಸಾಗುವಾಗ ಎತ್ತಿನ ಗಾಡಿಯನ್ನು ತಾವೇ ಹೆಗಲು ಕೊಟ್ಟು ಜಗ್ಗಿದಂತಹ ಘಟನೆಗಳ ನಿರೂಪಣೆಯು ಇಲ್ಲಿದೆ. ದೇವಿ ಪುರಾಣವನ್ನು ನವರಾತ್ರಿಯಲ್ಲಿ ಹೇಳುವ ಪದ್ಧತಿಯನ್ನು ಶರಣರು ರೂಢಿಸಿಕೊಂಡಿದ್ದರು. ಚನ್ನವೀರ ಶರಣರ ನುಡಿ ಆಧ್ಯಾತ್ಮದ ಅಲೆಗಳನ್ನು ಉಂಟು ಮಾಡುವ ಧ್ವನಿಯೂ ಆಗಿತ್ತು. ಅವರು ಸುಶ್ರಾವ್ಯವಾಗಿ ವಚನಗಳನ್ನು ಹಾಡುವ ರೀತಿಯೆಂತೂ ಅದ್ಭುತ, ಅನನ್ಯ.

ಕೊಪ್ಪಳ, ಗದಗ, ಬಳ್ಳಾರಿ ಜಿಲ್ಲೆ ಮತ್ತು ಆಂಧ್ರಪ್ರದೇಶದ ಬಹುಭಾಗವನ್ನು ಸಂಚರಿಸಿ ಜನಮಾನಸವನ್ನು ತಿದ್ದುವ ಕಾರ್ಯದೊಂದಿಗೆ ಭಜನೆ, ಪುರಾಣ, ಪ್ರವಚನ, ಸಣ್ಣಾಟ, ದೊಡ್ಡಾಟಗಳ ಪ್ರದರ್ಶನ ಹೀಗೆ ಕಲಾ ಮಾಧ್ಯಮದ ಮೂಲಕ ಜನಮಾನಸ ಶುಚಿಗೊಳಿಸಿದಂತಹ ಕಾರ್ಯಗಳು ಈ ಕಾವ್ಯದಲ್ಲಿವೆ. ಶರಣರ ವ್ಯಕ್ತಿತ್ವವು ಒಂದು ಘಟನೆಯಿಂದ ನಿಚ್ಚಳವಾಗಿ ನಿರೂಪಿತವಾಗಿದೆ. ಒಮ್ಮೆ ಕೊಲೆ ಮಾಡಲು ಬಂದವನನ್ನೇ ಕಾಯ್ದ ಘನಮಹಿಮೆಯು ನಿರೂಪಣೆಗೊಂಡಿದೆ. ನೀರಿನಿಂದ ದೀಪ ಉರಿಸಿದ ಹಲಕೆಲವು ಘಟನೆಗಳು ಇಲ್ಲಿ ನಿರೂಪಣೆಗೊಂಡಿವೆ.

ವಿಶ್ವಮಾನವ ಪ್ರಜ್ಞೆಯನ್ನು ಹೇಳುತ್ತಾ ಕುವೆಂಪುರವರ 'ಓ ಎನ್ನ ಚೇತನ' ಪದ್ಯವನ್ನು ಕೂಡಾ ಅಲ್ಲಲ್ಲಿ ಹಾಡುವ ಪರಿಕ್ರಮವನ್ನು ಕೂಡಾ ಶರಣರು ಪಾಲಿಸಿಕೊಂಡಿದ್ದರು. ಅವರ ದೈನಂದಿನ ಪರಿಕರಗಳನ್ನು ತಮ್ಮ ಜೋಳಿಗೆಯಲ್ಲೇ ಹೊತ್ತುಕೊಂಡು ತಿರುಗುತ್ತಿದ್ದರು. ಗಾಂಧೀಜಿಯಂತೆ ಕಡಿಮೆ ವಸ್ತ್ರಗಳನ್ನು ಧರಿಸಿ ಸರಳತೆಯಿಂದ ಶ್ರೇಷ್ಠತೆಯನ್ನು ಮೆರೆದ ಕೀರ್ತಿ ಇವರಿಗೆ ಸಲ್ಲುತ್ತದೆ. ಮಾನವ ಧರ್ಮದ ನಿರೂಪಣೆ ಮಾಡುತ್ತಾ –

ಕಾವ್ಯಮಾನವರ ಧರ್ಮಮಿದುವೊಂದೆ ರೀತಿಯದರಿಯೆ
ಲೇನನುಂ ಕಳಬೇಡ ಕೊಲಬೇಡ ಪುಸಿಯದಿರು
ದೀನರೊಳಗನುಕಂಪಮಿರಲಿ ಯಾರನು ಪಳಿಯಬೇಡ ಶಾಂತಿಯ ಬಿಡದಿರು ।
ಮಾನಿತನೆನಿಸು ನಿನ್ನ ನೀನು ಬಣ್ಣಿಸದಲಿರು
ಜ್ಞಾನಿಯಾಗಿರು ಪರರ ಸತಿಯರನು ಬಯಸದಿರು
ಮೌನಿಯಾಗಿರು ಕಲಹ ಮಡಿಸಿದೊಡೆ ಮುಂತಾದ ನೀತಿ ಮಾನವ ಧರ್ಮ ॥

(ಪುಟ : ೧೬೦, ಪದ್ಯ : ೫೭೫.)

ಎಂದು ಮಾನವ ಧರ್ಮವನ್ನು ಶರಣ ಧರ್ಮದೊಂದಿಗೆ ಹೇಳಲಾಗಿದೆ.

ಬಳಗಾನೂರಲ್ಲಿ ೧೯೭೬ರಲ್ಲಿ ಒಂದು ಸಣ್ಣ ಮಠವನ್ನು ಪ್ರಾರಂಭಮಾಡಿ, ಅಲ್ಲಿ ಹಿಂದುಳಿದ ವರ್ಗದ ಅನೇಕರಿಗೆ ಲಿಂಗದೀಕ್ಷೆಯನ್ನು ಮಾಡುವ ಕಾರ್ಯವನ್ನು ಶರಣರು ನೆರವೇರಿಸಿದರು. ಬಳಗಾನೂರಿನ ಶ್ರೀಮಠದಿಂದ ಆರೋಗ್ಯ ಶಿಬಿರಗಳು, ರಾಷ್ಟ್ರೀಯ ಸೇವಾ

ಯೋಜನೆಯ ಆರೋಗ್ಯ ಶಿಬಿರಗಳು ಹೀಗೆ ಸಮುದಾಯದ ಹಿತರಕ್ಷಣೆಗಾಗಿ ಅನೇಕ ಕಾರ್ಯಗಳನ್ನು ಕೈಗೊಳ್ಳಲಾಯಿತು. ಇದಲ್ಲದೆ ಪ್ರತಿ ಹುಣ್ಣಿಮೆಯ ದಿನ ಶಿವಾನುಭವ ಕಾರ್ಯಕ್ರಮ ಏರ್ಪಡಿಸಿ ಜನತೆಯಲ್ಲಿ ತಾತ್ವಿಕತೆಯನ್ನು ಬಿತ್ತುವ ಪ್ರಯತ್ನ ಮಾಡಿದರು.

ಒಕ್ಕಲಿಗರ ನ್ಯಾಯ ನಿರ್ಣಯ ಮಾಡುತ್ತಾ 'ರಕ್ತರಾತ್ರಿ' ಎಂಬ ನಾಟಕ ಪ್ರದರ್ಶನದ ಮೂಲಕ ಜನಜಾಗೃತಿಯನ್ನು ಉಂಟು ಮಾಡಿದರು. ಈ ಮಧ್ಯದಲ್ಲಿ ಕಾವ್ಯವು ಅನೇಕ ಲೀಲೆಗಳನ್ನು ಹೆಸರಿಸುವದು. ಇಂತಹ ಶರಣರು ೧೯೯೫ ಫೆಬ್ರುವರಿ ೬ನೇ ತಾರೀಖು ಲಿಂಗದಲ್ಲಿ ಬೆರೆತರು. ಆ ವಿವರಗಳೊಂದಿಗೆ ಕಾವ್ಯವು ಮುಕ್ತಾಯಗೊಳ್ಳುವದು. ಹೀಗೆ ಚನ್ನವೀರ ಶರಣರ ಅಲೌಕಿಕ ವ್ಯಕ್ತಿತ್ವ ಪವಾಡ ಸದೃಶ ಜೀವನ ಇವುಗಳ ವಿವರಗಳು ಕಾವ್ಯದಲ್ಲಿ ಸಮರ್ಥವಾಗಿ ಮೂಡಿ ಬಂದಿವೆ.

೩.೧.೧೫. ಶ್ರೀ ಅಂಕಲಗಿ ಅಡವೀಶ್ವರ ಪುರಾಣ

ಕ್ರಿ.ಶ. ೧೯೭೪ರಲ್ಲಿ ಪ್ರಕಟಗೊಂಟ ಈ ಪುರಾಣ ಗ್ರಂಥವು ವಾರ್ಧಕ ಷಟ್ಪದಿಯಲ್ಲಿ ರಚಿತಗೊಂಡಿದ್ದು ೬೩೦ ಪದ್ಯಗಳನ್ನು ಒಳಗೊಂಡಿದೆ. ಅಂಕಲಗಿ ಬೆಳಗಾಂ ಜಿಲ್ಲೆಯ ಗೋಕಾಕ ತಾಲೂಕಿನ ಪ್ರಸಿದ್ಧ ಪಟ್ಟಣವಾಗಿದ್ದು, ಅಲ್ಲಿ ಅಡವಿಸಿದ್ದೇಶ್ವರ ಪರಂಪರೆಯ ಮಠ ಬಹಳ ಪ್ರಸಿದ್ಧವಾಗಿದೆ. ಪ್ರಸ್ತುತ ಕಾವ್ಯಕ್ಕೆ ಪ್ರಸಿದ್ಧ ವಿದ್ವಾಂಸರಾದ ಡಾ. ವ್ಹಿ. ಶಿವಾನಂದರವರು ಮುನ್ನುಡಿ ಬರೆದಿದ್ದಾರೆ. ಅಂಕಲಗಿ ಅಡವೀಶ್ವರ ಪುರಾಣವು ಒಂದು ಮಾದರಿಯಾಗಿದೆಯೆಂದು ತಿಳಿಸುತ್ತಾ :

ಮೂರು ನೂರರ ಮೇಲೆ ಸನ್ಮಠಂಗಳ್ ನಿನ್ನ
ಚಾರು ನಾಮಾಂಕಿತವ ಧರಿಸಿ ಮೆರೆದಪವೆಂದು
ಸಾರವಿದೆ ಸುಪ್ರಸಿದ್ಧವಿದೆ ಈ ನಾಡಿನೊಳಗಂತೆ ಪಿಂಡಾಂಡಮಿದುವೆ
ಸಾರಿಹುದು ನಿನ್ನ ಮಠವಾಗಿ ನೀನಿಲ್ಲಿರ್ದು
ಸಾಲಿದರ ಸುತ್ತಲಿಹ ಮೋಹಾಟವಿಯದಹಿಸಿ
ಬೀರಿರುತೆ ಚಿದರಣ್ಯಮಂ ಮಾಡಿ ತವತೇಜದಿಂ ಬೆಳಗಡವಿ ಶಿದ್ದೇಶನೆ ॥

(ಶ್ರೀ ಅ. ಅ. ಪುಟ : ೨೬೪, ಪದ್ಯ : ೪೪)

ಹೀಗೆ ಅಡವಿಸಿದ್ಧೇಶ್ವರ ಮಠದ ಪರಂಪರೆ ನಾಡಿನ ಉದ್ದಗಲಕ್ಕೂ ಆಧ್ಯಾತ್ಮಿಕ ಕಾರ್ಯದಲ್ಲಿ ನಿರತವಾಗಿದೆ. ಶರಣರ, ಸಾಧುಗಳ, ನದಿಗಳ ಮೂಲವನ್ನು ತಿಳಿಯಲು ಸಾಧ್ಯವಿಲ್ಲ. ಹಾಗೆ ಕೃಷಕಾಯನಾದ ಒಬ್ಬ ಬಾಲಕನೆ ಮಠಾಧಿಪತಿಗಳಾದರು. ಈ ಕಾವ್ಯದ ಆರಂಭದಿಂದ ಅಂತ್ಯದವೆರೆಗೆ ಪವಾಡಗಳ ನಿರೂಪಣೆಯಿದೆ. ಅಂಕಲಗಿ ಪ್ರದೇಶವು ಬಹಳ ರಮಣೀಯವಾದ ಪ್ರಕೃತಿ ಪರಿಸರವು, ಸತ್ವಪೂರ್ಣವಾದ ನೆಲವು ಅಲ್ಲಿದೆ. ಇಲ್ಲಿಯ ಪ್ರದೇಶವು ಕುಂದರನಾಡು,

ಸ್ವಾತಂತ್ರ್ಯ ಹೋರಾಟದ ವೀರರ ಬೀಡು ಹೌದು. ಪ್ರಸ್ತುತ ಕಾವ್ಯವು ಕಲ್ಯಾಣದ ಶರಣರ ಸಮ-ಸಮ ಕಾಲದಲ್ಲಿಯೆ ಅಡವಿ ಸಿದ್ದೇಶ್ವರರ ಇರುವಿಕೆಯನ್ನು ಉಲ್ಲೇಖಿಸುವದು. 'ಕನ್ನಡದ ಬ್ರಹ್ಮಯ್ಯ', ಮೊದಲಾದ ಶರಣರ ಚರಿತೆಗಳನ್ನು ಉಲ್ಲೇಖಿಸಿ, ೧೫ನೇ ಶತಮಾನದಲ್ಲಿ ಅಡವಿ ಸಿದ್ಧೇಶ್ವರರು ಇದ್ದರೆಂದು ಮಠ ಪರಂಪರೆಯು ಅಷ್ಟು ಪ್ರಾಚೀನ ಕಾಲದಿಂದ ಬೆಳದಿದೆಯೆಂದು ತಿಳಿಸುವರು.

ಅನೇಕ ತತ್ವ ಸಿದ್ಧಾಂತಗಳನ್ನು ತಿಳಿಸುತ್ತ ಅದಕ್ಕೆ ತಕ್ಕ ಶರಣ ಜೀವನದ ದೃಷ್ಟಾಂತಗಳನ್ನು ತಿಳಿಸುವರು. ಕುಂದರ ನಾಡಿನ ಅನೇಕ ಸ್ಥಳ ಪರಿಚಯ ಇಲ್ಲಿದೆ. ಬೆಳ್ಳಾರಿ ಹಳ್ಳ, ಸವದತ್ತಿಯ ಸಮೀಪದ ಪಂಚಲಿಂಗೇಶ್ವರ ದೇವಾಲಯ, ಆ ಪರಿಸರದ 'ರೇಚಾರ್ಯ'ರೆಂಬ ಶರಣರ ವಿವರಗಳು ಇಲ್ಲಿವೆ.

ರೇಚಾರ್ಯರು ಗಂಗೋದಕದಿಂದ ಕಣ್ಣುಗಳನ್ನು ತಂದುಕೊಟ್ಟ ವಿವರಗಳು ಪವಾಡರೂಪ-ದಲ್ಲಿವೆ. ಪುಣೇದ ಅರಸ ಎಂಬ ರಾಜನ ಉಲ್ಲೇಖವು ಇಲ್ಲಿದೆ. ಅಡವೀಶ್ವರ ಉಲ್ಲೇಖವು ಅಂಕಲಗಿಯಲ್ಲಿ ನೆಲೆಸಿದ ಬಳಿಕ ಮುನಿಗಳಿಗೆ ಈ ಹೆಸರು ಪ್ರಾಪ್ತವಾದಂತೆ ಕಂಡುಬರುವದು. ಅವರು ಕ್ಷುದ್ರದೇವತೆಗಳನ್ನು ಹೊರಹಾಕಿ ಸಿದ್ದೇಶ್ವರ ದೇವಾಲಯವನ್ನು ನಿರ್ಮಿಸಿದ ವಿವರಗಳು ಇವೆ. ಈ ಸಂದರ್ಭದಲ್ಲಿ ಅನೇಕ ಪವಾಡಗಳು ನಡೆದವು. ಅವುಗಳೆಲ್ಲವು ಇಲ್ಲಿ ಉಲ್ಲೇಖಿತ-ಗೊಂಡಿವೆ. 'ಅಡವೀಶ್ವರರ ಅಗಾಧ ಜೀವನಸಿದ್ಧಿಯನ್ನು ತಪಃಪ್ರಭಾವವನ್ನು, ಲೋಕೈಕ ಭೂತಹಿತ ಗುಣವನ್ನು, ತ್ರಿಕಾಲಜ್ಞಾನವನ್ನು ದಾಸೋಹ ಸಿರಿಯನ್ನು, ಭಕ್ತಿಯ ಬೆಳಗನ್ನು, ಶಿವಯೋಗದ ಘನತೆಯನ್ನು ಸಮಗ್ರ ಮಾನವ ಕುಲೋದ್ಧಾರ ದೃಷ್ಟಿಯನ್ನು ಪಂ. ಪುಟ್ಟರಾಜರು ಸಾರವತ್ತಾಗಿ ಈ ಪುರಾಣದಲ್ಲಿ ಸಂಯೋಜಿಸಿ ಹೇಳಿದ್ದಾರೆ' (ಡಾ. ವಿ. ಶಿವಾನಂದ ಶ್ರೀ ಅ. ಅ ಪು ಪು IX)

ಅಡವಿಸಿದ್ದೇಶ್ವರ ಮಠಗಳು ಬೆಳಗಾವಿ ಜಿಲ್ಲೆ ಮತ್ತು ದಕ್ಷಿಣ ಮಹಾರಾಷ್ಟ್ರದ ಹಲವಾರು ಸ್ಥಳಗಳಲ್ಲಿ ಇದ್ದು, ಈ ಎಲ್ಲ ಮಠಗಳಿಗೆ ಮೂಲಮಠವೇ ಅಂಕಲಗಿ ಮಠವಾಗಿರುವ ಸಾಧ್ಯತೆ ಇರುವದು. ಈ ಪುರಾಣ ಕಾವ್ಯದಲ್ಲಿ ಚಿತ್ರಿತಗೊಂಡ 'ರೇಚಯ್ಯ'ನೇ ಅಡವೀಶ್ವರನೆಂಬ ಹೆಸರಿನಿಂದ ಪ್ರಸಿದ್ಧನಾದಂತೆ ಕಂಡು ಬರುವದು. ಸ್ವಾಮಿಗಳು ಬಡ ಜನರ, ಕಲ್ಯಾಣಕಾರಕ ಕಾರ್ಯಗಳನ್ನು ಕೈಗೊಂಡರು. ಇಂದು ಭವ್ಯವಾದ ಮಠವು ಕ್ರಿ.ಶ. ೧೭೦೦ ರಿಂದೀಚೆ ನಿರ್ಮಾಣಗೊಂಡಿರ-ಬೇಕೆಂದು ತಿಳಿಯಬಹುದು. ಅದು ಅಲ್ಲದೆ ಆ ಪರಿಸರದಲ್ಲಿ ಇಂದಿಗೂ ನವಿಲು, ಮೊಲ, ಜಿಂಕೆಗಳು ಮುಕ್ತವಾಗಿ ಆಡಿಕೊಂಡಿರುವದನ್ನು ಕಾಣಬಹುದು.

ಅಂಕಲಗಿ ಪರಿಸರದ ಅಕ್ಕತಂಗೇರಹಳ್ಳ, ಕುರಗುಪ್ಪಿ, ಹುದಲಿ, ಹರ್ಲಾಪೂರಗಳಲ್ಲಿಯ ಅನೇಕ ಭಕ್ತರ ಚರಿತ್ರೆ ಘಟನೆಗಳು ಇಲ್ಲಿವೆ. ಪುಣೆಯ ಪೇಶ್ವೆಯರ ಉಲ್ಲೇಖವಾಗಿರುವದು. ಸವಣೂರಿನ ಕಾಲದ ನವಾಬರ ಉಲ್ಲೇಖವು ಇಲ್ಲಿದೆ. ಮಹಾಸ್ವಾಮಿಗಳ ಮಹಿಮೆಯನ್ನು ಹೆಚ್ಚಿಸಲು

ಅವರು ಅನೇಕ ಶತಕಗಳ ಕಾಲ ಬದುಕಿದ್ದಾರೆಂದು ತಿಳಿಸುವ ಒಂದು ಪರಂಪರೆ ಇದೆ. ಅದರಂತೆ ಅಡವೀಶ್ವರ ಸ್ವಾಮಿಗಳು ೬೦೦ ವರ್ಷ ಬದುಕಿದ್ದರೆಂದು ತಿಳಿಯಲಾಗಿದೆ. ಸ್ವಾಮಿಗಳು ಆದಿಲಖಾನನ ಕಾಲಕ್ಕೆ ಇದ್ದರೆಂದು ಆ ಕಾಲ ಕ್ರಿ.ಶ. ೧೫೫೦ ರ ಎಡಬಲವೆಂದು ತಿಳಿಯುವದು. ಮೈಸೂರು ಅರಸರ ವಿವರಣೆಯು ಇಲ್ಲಿದೆ. ಅದೇ ರೀತಿ ಮುಧೋಳದ ಅರಸರ ಬಗೆಗೆ ಉಲ್ಲೇಖವಿದೆ. ಮೂರು ಸಾವಿರ ಶಾಖಾಮಠಗಳ ಉಲ್ಲೇಖವಿರುವದರಿಂದ ಸಿದ್ದೇಶ್ವರ ಪೀಠದ ವಿಸ್ತಾರ ವೇದ್ಯವಾಗುವದು. ಇಂದು ಅಂಕಲಗಿಯಲ್ಲಿ ಸ್ವಾಮಿಗಳ ಭವ್ಯಗದ್ದಿಗೆಯು ಮಠವು ಶೋಭಾಯಮಾನವಾಗಿರುವವು. ೧೯೩೪ರಲ್ಲಿ ಅಡವೀಶ್ವರರು ಐಕ್ಯರಾದರು.

ಈ ರೀತಿಯಾದ ಉಲ್ಲೇಖವು ೧೮೫೬+೭೮=೧೯೩೪ ಇದು ಕ್ರಿ.ಶ. ಕಾಲ ಈಗಿನ ಸ್ವಾಮಿಗಳು ಈ ಪೀಠ ಪರಂಪರೆಯವರೆಂದು ತಿಳಿದುಬರುವದು.

೩.೧.೧೬ ಶ್ರೀ ಎಡೆಯೂರು ಸಿದ್ಧಲಿಂಗ ವಿಜಯ ಮಹಾಪುರಾಣ

ಕ್ರಿ.ಶ. ೨೦೦೫ರಲ್ಲಿ ಪ್ರಕಟವಾದ ಶ್ರೀ ಎಡೆಯೂರು ಸಿದ್ಧಲಿಂಗ ವಿಜಯವು ೧೩೩೬ ಭಾಮಿನಿಷಟ್ಪದಿ ಪದ್ಯಗಳಲ್ಲಿ ವಿಸ್ತಾರವಾಗಿದೆ. ಶ್ರೀ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು, ಗದಗ ಅವರು ಶುಭ-ನುಡಿಯಲ್ಲಿ ಕ್ರಿ.ಶ. ೧೫೦೦ರ ವೇಳೆಗೆ ಬದುಕಿದ್ದ ತೋಂಟದ ಶ್ರೀಗಳ ಪರಂಪರೆಯನ್ನು ವಿವರಿಸಿದ್ದಾರೆ. ಅಲ್ಲದೆ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಕಾಲದಲ್ಲಿಯೆ ಅವರ ಶಿಷ್ಯರು ಅವರ ಬಗೆಗೆ ಕಾವ್ಯಗಳನ್ನು ಸೃಷ್ಟಿಸಿದರು. ಕ್ರಿ.ಶ. ೧೫೬೧ರಲ್ಲಿ 'ಸಿದ್ಧೇಶ್ವರ ಪುರಾಣ', 'ಸಿದ್ಧೇಶ್ವರನ ಸಾಂಗತ್ಯ', 'ಷಟ್‌ಸ್ಥಲ ವಲ್ಲಭ' ಕಾವ್ಯಗಳನ್ನು ಬರೆದರು. ಅನತಿಕಾಲದಲ್ಲಿ ಅನೇಕ ಕಾವ್ಯಗಳು ಸೃಷ್ಟಿಯಾಗಿರುವದು, ಸ್ವಾಮಿಗಳನ್ನು ಕುರಿತು ಕಾವ್ಯ ಬರೆಯುವದಕ್ಕೆ ಚಾಲನೆ ದೊರಕಿತು. ಅಲ್ಲಿಂದ ಮುಂದೆ ಮಠದ ಅಧಿಪತಿಗಳ ಕಾವ್ಯಗಳು ಹುಟ್ಟಿಬಂದವು.

"ಶಿವಯೋಗಿ ಸಿದ್ಧಲಿಂಗರ ದಿವ್ಯಚರಿತ್ರೆ" ಇಲ್ಲಿ ಮನೋಹರವಾಗಿ ಚಿತ್ರಿತವಾಗಿದೆ. ಶಿವಯೋಗಿಗಳ ಬದುಕು, ಪೂಜಾನಿಷ್ಠೆ, ತಪಸ್ಸು, ಪವಾಡ, ದೇಶಸಂಚಾರ ಇತ್ಯಾದಿ ವಿವರಗಳ ಜತೆಗೆ ಅವರು ಹಂತ ಹಂತವಾಗಿ ಆಧ್ಯಾತ್ಮ ಶಿಖರವನ್ನೇರಿದ ಪರಿಯೂ ತುಂಬ ಸುಂದರವಾಗಿ ಮೂಡಿಬಂದಿದೆ. (ಶುಭನುಡಿ ಶ್ರೀ ಎ.ಸಿ.ವಿ.ಮ.ಪು) ಎಂಬ ಶ್ರೀಗಳ ನುಡಿಯು ಸಿದ್ಧಲಿಂಗ ಯತಿಗಳ ಬದುಕನ್ನು ನಿವೇದಿಸುವದು. ತೋಂಟದ ಸಿದ್ಧಲಿಂಗ ಯತಿಗಳು 'ದ್ವಿತೀಯ ಅಲ್ಲಮ'ನೆಂದು ಖ್ಯಾತಿ ಹೊಂದಿದವರು. ಅವರಿಂದ ವಿರಕ್ತ ಪರಂಪರೆಯು ಗಟ್ಟಿಗೊಂಡಿತು. ಅವರಿಗೆ ೭೦೧ ಶಿಷ್ಯರಿದ್ದು, ಅವರೊಂದಿಗೆ ಚರ ಜಂಗಮರಾಗಿ ದೇಶದ ಉದ್ದಗಲಕ್ಕೂ ಸಂಚರಿಸಿ, ತತ್ವ ಅನುಭಾವದ ನೆಲೆಯಾದರು. ಅವರು ವಚನ ಸಾಹಿತ್ಯದ ಎರಡನೆ ಹಂತವನ್ನು ಪ್ರಾರಂಭಿಸಿದರು. 'ಷಟ್‌ಸ್ಥಲ ಜ್ಞಾನಸಾರಾಮೃತ'ವೆಂಬ ೭೦೦ಕ್ಕೂ ಮಿಕ್ಕಿದ ವಚನಗಳ ರಚನೆ ಕೈಕೊಂಡರು. ಅವರ ಶಿಷ್ಯರು ಅವರ ಜೀವನವನ್ನೇ ಕುರಿತು ಕಾವ್ಯಗಳನ್ನು ಬರೆದರು. ಶೂನ್ಯ

ಸಂಪಾದನೆಗಳೆರಡನ್ನು ಅವರ ಶಿಷ್ಯರು ರಚಿಸಿದರು. ಹೀಗೆ ಲಿಂಗಾಯತ ತತ್ವಜ್ಞಾನ-ದರ್ಶನಗಳನ್ನು ಗ್ರಂಥರೂಪದಲ್ಲಿ ಹೇಳಿ, ತಾತ್ವಿಕ ಸಾಹಿತ್ಯವನ್ನು ನಿರ್ಮಾಣ ಮಾಡಿದರು.

ಪ್ರಸ್ತುತ 'ಮಹಾಪುರಾಣ'ವು ತಾತ್ವಿಕತೆಯ ನೆಲೆಯಲ್ಲಿ ಮಹಾಪುರಾಣವೇ ಆಗಿದೆ. ಆರಂಭದ ಪೀಠಿಕಾಸಂಧಿಯಲ್ಲಿ ಸಿದ್ಧಲಿಂಗೇಶ್ವರರ ಸ್ತೋತ್ರವನ್ನು ಮಾಡುತ್ತ-

ಸಿದ್ಧಲಿಂಗನ ಸಂಪ್ರದಾಯದ
ಬುದ್ಧನೆಳೆಯಂದೂರ್ ಗುರುವರನು
ಸಿದ್ಧನು ಬಸವಲಿಂಗ ಚರಪತಿಯುದ್ಧರಿಸಲೆನ್ನ ।
ಶುದ್ಧನ ಮಹಾಶಿಷ್ಯನೆನ್ನಪ್ರ
ಸಿದ್ಧ ಪರತರ ಗುರುಕುಮಾರನ
ವೃದ್ಧ ಕರುಣೆಯ ಪೊರೆಯಲೆನ್ನಂ ಗುರುಭಕ್ತಿಯಿತ್ತು ॥

(ಶ್ರೀ ಎ.ಸಿ.ವಿ.ಮ.ಪು ಪು ೩ ಪ. ೮)

ಸಿದ್ಧಲಿಂಗರ ಚರಿತ್ರೆಯನ್ನು ಕನ್ನಡ-ಸಂಸ್ಕೃತದಲ್ಲಿ ಬರೆದಿದ್ದಾರೆ. ತಾನು ಒಪ್ಪವಾಗಿ ಕನ್ನಡದಲ್ಲಿ ಬರೆಯುತ್ತಿರುವೆ ಎಂದು ಕವಿ ಪಂ ಪುಟ್ಟರಾಜರು ಸೂಚಿಸಿದ್ದಾರೆ.

ಹರದನಹಳ್ಳಿ ಗೋಸಲ ಚೆನ್ನಬಸವೇಶ್ವರರು ತತ್ವಬೋಧಕರಾಗಿದ್ದು, ಆ ಊರಿನ ಕೀರ್ತಿಯನ್ನು ಹೆಚ್ಚಿಸಿದರು. ಆ ಊರಲ್ಲಿ ಸುಶೀಲನಾದ 'ಮಲ್ಲಿಕಾರ್ಜುನ' ಮತ್ತು 'ಜ್ಞಾನಮಾಂಬೆ'ಯೆಂಬ ದಂಪತಿಗಳ ಉದರದಿಂದ ಸಿದ್ಧಲಿಂಗೇಶ್ವರರ ಜನನವಾಯಿತು. 'ನಿರಂಜನ ರೂಪನಾಗಿಹ ಮಾನಿತ ಮಹಿಮೆ ಸಿದ್ಧಲಿಂಗ' ಎಂದು ಕವಿಗಳು ಕೊಂಡಾಡಿದ್ದಾರೆ. ಗೋಸಲ ಚೆನ್ನಬಸವೇಶ್ವರರಿಂದ ದೀಕ್ಷೆ ಪಡೆದ ತಮ್ಮ ಜೀವನವನ್ನೆಲ್ಲಾ ತತ್ವದನುಸಂಧಾನ ಅನುಷ್ಠಾನಗಳಲ್ಲಿ ಶ್ರೀ ಸಿದ್ಧಲಿಂಗರು ಕಳೆದುದನ್ನು ಕಾವ್ಯವು ಹೃದ್ಯವಾಗಿ ವಿವರಿಸುವದು.

ಕಾವ್ಯದ ಒಳಭಾಗದಲ್ಲಿ ಅನೇಕ ಪುರಾಣ, ಆಗಮಗಳ ಕಥೆಗಳನ್ನು ಕವಿಗಳು ಹೇಳಿದ್ದಾರೆ. ಅಲ್ಲದೆ ಜೈನ, ವೈಷ್ಣವ, ವೈದಿಕ ತಾತ್ವಿಕರನ್ನು ಸಿದ್ಧಲಿಂಗರು ಎದುರಿಸಿದ ವಿವರಗಳು ಕಾವ್ಯದಲ್ಲಿವೆ. ಸಿದ್ಧಲಿಂಗರ ಪ್ರಭಾವ ಲೀಲೆಯಿಂದಲೆ ಜಲಕಾಣಿಸಿದ ಕತೆಯೂ ಸಿದ್ಧಗಂಗಾ ಕ್ಷೇತ್ರದ ಹಿನ್ನೆಲೆಗಿದೆ. ಕಗ್ಗೆರೆಯ ತೋಟದಲ್ಲಿ ಶಿವಯೋಗದಿಂದ ಹುತ್ತದಲ್ಲಿ ಕುಳಿತು ತಪಗೈದುದು ಚಿತ್ರ ರೂಪದಲ್ಲಿ ಆ ಕಾಲದಿಂದಲೆ ಪ್ರಚಾರವಾಯಿತು. ಆ ಹುತ್ತದ ಮೇಲೆ ಆಕಳು ಹಾಲು ಸುರಿಸುವದು ಅದಕ್ಕೊಂದು ನಂಬಿಯಣ್ಣನ ಘಟನಾವಳಿಯೂ ಚಿತ್ರಿತಗೊಂಡಿವೆ.

ಸಿದ್ಧಲಿಂಗೇಶ್ವರರು ತಾತ್ವಿಕ ಮಹಾಮೇರುವಾಗಿದ್ದರು. ಲೀಲೆ ಪವಾಡಗಳಿಂದ ಅವರ ಘನವ್ಯಕ್ತಿತ್ವವನ್ನು ಅಲಂಕರಿಸುವದನ್ನು ನಾವು ಕಾಣುತ್ತೇವೆ. ಹಾವಿನ ವಿಷ ಏರದ, ಬದ್ಧ ಭೂತಗಳು ತೊಲಗಿದ, ವಿಷಫಲಗಳು ಸಿಹಿಯಾದ, ಜ್ವರ ಇಳಿದ ಮೊದಲಾದ ಲೀಲೆಗಳನ್ನು

ಕಾವ್ಯವು ಉಲ್ಲೇಖಿಸುವದು. ಅಲ್ಲಲ್ಲಿ ಬಸವಾದಿ ಶರಣರ ವಚನಗಳನ್ನು ಪದ್ಯಕ್ಕೆ ತಿರುಗಿಸಿಕೊಂಡ ಕವಿಗಳು ಸ್ವಯಂ ಸಿದ್ಧಲಿಂಗರ ವಚನಗಳನ್ನು ಹೆಚ್ಚಾಗಿ ಹೇಳಿಲ್ಲ .

ಸಿದ್ಧಲಿಂಗೇಶ್ವರರಿಗೆ 'ಬೋಳ ಬಸವೇಶ'ನೆಂಬ ಶಿಷ್ಯನಿದ್ದು, ಆತನಿಗೆ ದರ್ಶನ ಜ್ಞಾನಗಳನ್ನು ನೀಡುವ ವಿವರಗಳನ್ನು ಕಾವ್ಯವು ಒಳಗೊಳ್ಳುತ್ತದೆ. ಯತಿವರರ ಭಕ್ತಸಂಕುಲ ನಾಡತುಂಬ ತುಂಬಿದೆ. ಷಟ್‌ಸ್ಥಲವನ್ನು ಮೊದಲು 'ಚೆನ್ನ ಬಸವೇಶ್ವರ'ರು ನಿರೂಪಿಸಿದ್ದನ್ನು ಮತ್ತೆ ಅಮೂಲಾಗ್ರವಾಗಿ ಮರು ನಿರೂಪಣೆ ಮಾಡಿದ ಕೀರ್ತಿ ಸಿದ್ಧಲಿಂಗರಿಗೆ ಸಲ್ಲುತ್ತದೆ. ಅದನ್ನೇ 'ಷಟ್ಸ್ಥಲವಲ್ಲಭ' ಎಂಬ ನಾಮದಿಂದ ನಿರ್ದೇಶಿಸಲಾಗಿದೆ. ಕಾವ್ಯದಲ್ಲಿ ಬೋಳಬಸವನಿಗೆ ಷಟ್ಸ್ಥಲಜ್ಞಾನ ನೀಡಿದಂತೆ ನಿರೂಪಿಸುವದನ್ನು ಕಾಣಬಹುದು.

೩.೧.೧೭ ಗೂಳ್ಯದ ಶ್ರೀ ಗಾದಿಲಿಂಗೇಶ್ವರ ಪುರಾಣ

ಕ್ರಿ.ಶ. ೧೯೮೯ರಲ್ಲಿ ಪ್ರಕಾಶನಗೊಂಡ ಗಾದಿಲಿಂಗೇಶ್ವರ ಪುರಾಣ ಕಾವ್ಯವು ಭಾಮಿನಿಷಟ್ಪದಿಯಲ್ಲಿ ರಚಿತವಾಗಿದ್ದು, ೭೨೨ ಪದ್ಯಗಳನ್ನು ಒಳಗೊಂಡಿದೆ. 'ಶರಣಸ್ತವನ'ವೆಂದು ಶಿವಶರಣ ಗಾದಿಲಿಂಗೇಶ್ವರ ಚರಿತ್ರೆಯನ್ನು ಇಲ್ಲಿ ನಿರೂಪಿಸಲಾಗಿದೆ. ಗಂಗಾವತಿ ಸೀಮೆಯ 'ಮಳ್ಳಿಹೊಸಗೇರೆ'ಯ ಹಾಲುಮತ (ಕುರುಬ) ಜನಾಂಗದ ಗಾದಿಲಿಂಗೇಶ್ವರನು ಗೂಳ್ಯದಲ್ಲಿದ್ದುದರಿಂದ ಆದಿನಾಮ ಗೂಳ್ಯ ಎಂದು ಬಂದಿದೆ. ಗಾದಿಲಿಂಗೇಶ್ವರನು 'ಶಂಕ್ರೆಪ್ಪ' 'ಶಾಂತಮ್ಮ'ನವರ ಗರ್ಭದಲ್ಲಿ ಜನಿಸಿದನು. ಆತನ ಬಾಲ್ಯವು ಶಿವಸಂಸ್ಕಾರದಲ್ಲಿ ಕಳೆಯಿತು. ೧೦ ವರ್ಷದ ಬಾಲಕನಾಗಿದ್ದಾಗ ಮನೆಬಿಟ್ಟು ಹೊರಟು ಸಕಲ ಲೋಕಗಳನ್ನು ಸುತ್ತಿದಂತೆ ಸಂಚಾರಿಯಾಗಿದ್ದು ಆಧ್ಯಾತ್ಮವನ್ನು ಅಪ್ಪಿದನು. ದೇವಿ ಪುರಾಣವನ್ನು ಬರೆದ ಚಿದಾನಂದ ಅವಧೂತನ ಭಕ್ತನಾಗಿದ್ದು ಆಧ್ಯಾತ್ಮಿಕ ಪರಿಸರದಲ್ಲಿ ಬೆಳೆದನು.

ಮೊದಲು ದೇವಿ ಆರಾಧಕನಾಗಿದ್ದ ಗಾದಿಲಿಂಗೇಶ್ವರನ ಬದುಕಿನಲ್ಲಿ ಒಂದು ತಿರುವು ಉಂಟಾಯಿತು. ಬಳ್ಳಾರಿಯ ಮರಿಸ್ವಾಮಿಯ ಶಿಷ್ಯನಾದ ಗಾದಿಲಿಂಗೇಶ್ವರನು ತಾತ್ವಿಕವಾಗಿ ಬೆಳೆದುಬಂದ ವಿವರಗಳನ್ನು ಕಾವ್ಯದ ಮೊದಲಾರ್ಧದಲ್ಲಿ ನಿರೂಪಿಸಲಾಗಿದೆ. ಲಿಂಗಪ್ಪನ ಅಂತರಂಗದ ಕದವು ತೆರೆದಾಗ ಆತನಲ್ಲಿ ಅಪೂರ್ವ ಬದಲಾವಣೆ ಆದವು. ಮೊದಮೊದಲು ಗಾದಿಲಿಂಗೇಶ್ವರರನ್ನು ಸಮಾಜವು ಕಾಡಿತು. ಬ್ರಾಹ್ಮಣನೊಬ್ಬನಿಗೆ ಗುರುವಿನ ಮಹತಿಯನ್ನು ತಿಳಿಸಿ ವೀರಶೈವರನೇಕರಿಗೆ ಷಟ್‌ಸ್ಥಲ ಬೋಧೆ ಮಾಡಿದನು.

ಲಿಂಗಪ್ಪನಿಗೆ ಮದುವೆ ಮಾಡಬೇಕೆಂಬ ಪ್ರಸ್ತಾಪಗಳು ಬಂದಾಗ, ಅದನ್ನು ಆತ ನಯವಾಗಿ ತಿರಸ್ಕರಿಸಿದನು. ಶರಣತ್ವದ ಸೀಮೆಗೆ ಬಂದ ಗಾದಿಲಿಂಗೇಶ್ವರನನ್ನು ಹುಚ್ಚ ಮರುಳನೆಂದೆ ಕಾಡಲಾಯಿತು. ಅದ್ಯಾವುದನ್ನು ಲೆಕ್ಕಿಸದೆ ಗಾದಿಲಿಂಗೇಶ್ವರನು ಆಧ್ಯಾತ್ಮಿಕ ಪಥದಲ್ಲಿ

ಮುನ್ನಡೆದನು. ಅನೇಕ ಪವಾಡಗಳ ನಿರೂಪಣೆಯು ಇಲ್ಲಿ ವ್ಯಾಪಕವಾಗಿ ಚಿತ್ರಿತವಾಗಿವೆ. ಬಳ್ಳಾರಿಜಿಲ್ಲೆಯ ತುಂಬ ಆತನ ಪ್ರಭಾವಿ ಭಕ್ತರು ಹುಟ್ಟಿಕೊಂಡರು.

ಗಾದಿಲಿಂಗೇಶ್ವರರ ನಂತರ ಅವರ ಜೀವನದ ಚರಿತ್ರೆ ಜನಜನಿತವಾಯಿತು. ಇವರ ಜೀವನವನ್ನು ಕವಿತಾಳ ಊರಿನ ಒಬ್ಬರು ಗದ್ಯದಲ್ಲಿ ರಚಿಸಿದರು. ಅದನ್ನು ಪದ್ಯದಲ್ಲಿ ರಚಿಸಿ ಪಂ. ಪುಟ್ಟರಾಜರು ಈ ಕಾವ್ಯವನ್ನು ರಚಿಸಿದ್ದಾರೆ. ಜಾತಿಮತಗಳನ್ನು ಮೀರಿದ ಶರಣ ಮಹಾಂತನಾಗಿದ್ದ ಗಾದಿಲಿಂಗೇಶ್ವರರು ಶರಣ ಪರಿಸರದಲ್ಲಿರುವಂತೆ ಈ ಕಾವ್ಯದಲ್ಲಿ ಚಿತ್ರಣವಾಗಿದೆ.

೩.೧.೧೮. ಕಲಕೇರಿ ಶ್ರೀ ಗುರುಮಹಿಮಾ ಪುರಾಣ

ಕ್ರಿ.ಶ. ೧೯೯೧ರಲ್ಲಿ ಭಾಮಿನಿಷಟ್ಪದಿಯಲ್ಲಿ ರಚನೆಗೊಂಡ ಈ ಪುರಾಣಕಾವ್ಯವು ೮೩೮ ಪದ್ಯಗಳನ್ನು ಹೊಂದಿದೆ. ಸುರಪುರ ತಾ. ಗುಲಬರ್ಗಾ ಜಿಲ್ಲೆಯಲ್ಲಿ ಕಲಿಕೇರಿ ಇದ್ದು, ಅಲ್ಲಿ ರಾಜಗುರುಮಠ ಮಾಳಾಪುರದಲ್ಲಿದೆ. ಆ ಪೀಠ ಪರಂಪರೆಯ ಕಲಿದೇವ ಕಲ್ಲಿನಾಥೇಶ್ವರರ ಪರಿಚಯ ಇಲ್ಲಿದೆ. ಮೂಲಮಠದ ಚರಿತ್ರೆಯನ್ನು ಪದ್ಯರೂಪಕ್ಕೆ ಅಳವಡಿಸಿರುವ ಕಾರ್ಯವು ಕಾವ್ಯದಲ್ಲಿ ಮೂಡಿ ಬಂದಿದೆ. ಸಂಗೀತ ಸಾಹಿತ್ಯಗಳಲ್ಲಿ ನಿಷ್ಣಾತರಾದ ಪಂ. ರಾಜಗುರು ಗುರುಸ್ವಾಮಿ ಕಲಿಕೇರಿಯವರು ಮಠದ ಚರಿತ್ರೆಯನ್ನು ಪ್ರಕಟಗೊಳಿಸಿದ್ದರು. ಬಸವಾದಿ ಶರಣರ ಕಾಲದಿಂದಲೆ ಕಲ್ಲಿನಾಥ ಶಿವಾಚಾರ್ಯರೆಂಬ ಶರಣಪರಂಪರೆಯ ಭಕ್ತ, ಅದೇ ಕಾಲದ ಮಡಿವಾಳ ಮಾಚಿದೇವ ಇವರು ಕಾವ್ಯದಲ್ಲಿ ಉಕ್ತಗೊಂಡ ಮೂಲ ಪುರಷರೆನಿಸಿದ್ದಾರೆಂಬ ವಿವರಗಳು ಕಾವ್ಯದಲ್ಲಿವೆ.

ಮಡಿವಾಳ ಮಾಚಿದೇವನು ಹೂವಿನ ಹಿಪ್ಪರಿಗೆಯ ಗಣಮಠದ ಒಡೆಯನೆಂದು ಗುರುಗಳಾದ ಕಲ್ಲಿನಾಥ ಶಿವಾಚಾರ್ಯ ಮತ್ತು ವೀರಘಂಟೇಶ್ವರ ವಿವರಗಳು ಕಾವ್ಯದಲ್ಲಿವೆ. ಶಿವತತ್ವ ಜ್ಞಾನಪ್ರಸಾರಕ್ಕಾಗಿ ಒಂದು ವಿದ್ಯಾಲಯವು ಅಲ್ಲಿ ಸ್ಥಾಪಿತವಾಗಿತ್ತೆಂದು ಮುಂದೆ ಪರಂಪರೆಯಲ್ಲಿ ವೀರಘಂಟೆಯ್ಯ ಕಲಿದೇವಯ್ಯ ಎಂಬ ಹೆಸರುಗಳು ಮತ್ತೆ ಮತ್ತೆ ವ್ಯಕ್ತಿ ನಾಮಗಳಾಗಿ ಉಕ್ತಗೊಂಡಿವೆ. ಜನಮಾನಸದಲ್ಲಿ ಮೂಡಿದ ಮಠದ ಬಗೆಗೆ ಭಕ್ತಿಯು ವಿಶೇಷವಾಗಿತ್ತೆಂದು ನುಡಿಯುವರು–

ಯುಗಯುಗದೆ ಕಲಿಕೇರಿ ಗುರುಗಳ್
ಸೊಗದೊಳವತರಿಸುತೆ ಶಿವಮತವ
ಬಗೆಬಗೆಯೊಳೋದ್ಧರಿಸಿ ॥

(ಶ್ರೀ ಕಲಕೇರಿ ಗುರು ಮಹಿಮಾ ಪುರಾಣ. ಪು: ೮, ಪ: ೧೮)

ಈ ಬಗೆಯಾಗಿ ಗುರುಪರಂಪರೆಯನ್ನು ಕಾವ್ಯ ವಿವರಿಸುವದು. ಬಿಲ್ಲಮರಸ– ಸಗರವನ್ನಾಳುವಾಗ ಸ್ವಾಮಿಗಳ ಗದ್ದಿಗೆಯ ಮೇಲೆ ದೇಗುಲವನ್ನು ರಚಿಸಿದ ವಿವರಗಳು

ಇಲ್ಲಿವೆ. ವೀರಘಂಟೇಶ್ವರ ಮಡಿವಾಳೇಶ್ವರರ ಚರಿತ್ರೆಯು ಇಲ್ಲಿ ವಿಸ್ತಾರವಾಗಿ ನಿರೂಪಿತವಾಗಿದೆ. ಕಲ್ಲಿನಾಥ ಶಿವಾಚಾರ್ಯರ ಭಕ್ತಿಯು ಇಲ್ಲಿ ಪ್ರಕಟಗೊಂಡಿದೆ. ಅರಳಗುಂಡಿಗೆ ಶರಣಬಸವನು, ಗುರುಮರುಳನು ವೀರಘಂಟೆ ಮಡವಾಳೇಶ್ವರರನ್ನು ಭಜಿಸಿ ಪೂಜಿಸಿದರೆಂದು ಕಾವ್ಯವು ತಿಳಿಸುವದು. ಅರಳಗುಂಡಿಗೆ ಶರಣಬಸವರ ಲೀಲಾಕ್ಷೇತ್ರವಾಗಿ ಇಂದಿಗೂ ಜಾಗೃತ ಕ್ಷೇತ್ರವಾಗಿರುವದು. ಹಾಗೆ ಕಲಿಕೇರಿ ಪುಣ್ಯಪೀಠವು ಕಲಬುರ್ಗಿಯ ಶರಣ ಬಸವೇಶ್ವರಪೀಠ ಪರಂಪರೆಗಳನ್ನು ಕೃತಿ ಉಲ್ಲೇಖಿಸುವದು.

೩.೧.೧೯. ಶ್ರೀ ಶಿವಶರಣೆ ಹೇಮರಡ್ಡಿ ಮಲ್ಲಮಾಂಬೆಯ ಪುರಾಣ

ಕ್ರಿಶ. ೧೯೯೬ರಲ್ಲಿ ಪ್ರಕಟಗೊಂಡ ಮಲ್ಲಮಾಂಬೆಯ ಪುರಾಣವು ವಾರ್ಧಕ ಷಟ್ಪದಿಯಲ್ಲಿ ರಚನೆಗೊಂಡಿದೆ. ಹದಿನೇಳು ಸಂಧಿಗಳಲ್ಲಿ, ಆರನೂರ ನಲವತ್ತು ಪದ್ಯಗಳು ಇಲ್ಲಿದ್ದು, ಮಲ್ಲಮ್ಮನ ಜೀವನವು ಜನಪದ ಸಾಹಿತ್ಯದಲ್ಲಿ ಕಂಡ ರೀತಿಯಲ್ಲಿ ಮೂಡಿ ಬಂದಿದೆ. ಕನ್ನಡನಾಡು ಮತ್ತು ಆಂಧ್ರಪ್ರದೇಶದಲ್ಲಿ ಜನಜನಿತವಾದ ಮಲ್ಲಮ್ಮಳ ಜೀವನ, ಸ್ತ್ರೀಯ ಸಹನೆ–ಸೈರಣೆಗಳಿಗೆ ಇನ್ನೊಂದು ಹೆಸರು. ತೀವ್ರ ಕಾಡಾಟ, ವಿಷಮ ಪರಿಸ್ಥಿತಿಗಳಲ್ಲಿ ಪತಿವ್ರತೆಯಾಗಿ ಕಾಯಕಜೀವಿ ಭಕ್ತಿಮೇರುವಾಗಿ ಮಲ್ಲಮ್ಮ ಕಾಣಿಸಿಕೊಂಡಿರುವಳು. ಆಕೆಯ ಚರಿತ್ರೆಯು ಪಾವನ ಚರಿತ್ರೆಯ ಪ್ರವಾಹ ಎನಿಸಿದೆ.

ಮಲ್ಲಮ್ಮನ ಚರಿತ್ರೆಯನ್ನು ಬರೆದ ಮೊದಲಿಗರು ದಾಂಪ್ಯೂರ ಚನ್ನಕವಿಗಳು. ಅವರು ಜನಪದದಲ್ಲಿ ಐತಿಹ್ಯರೂಪದಲ್ಲಿದ್ದ ಕತೆಯನ್ನು ಶ್ರೇಷ್ಠ ಸಾಹಿತ್ಯವಾಗಿಸಿದರು. ಚನ್ನಕವಿಗಳ ಕಾಲಕ್ರಿಯೆಗಳು ಭಕ್ತಿ–ದಾಸೋಹಗಳ ಅಭಿವ್ಯಕ್ತಿಯಾಗಿದ್ದವು. ಅದೇ ಮಾದರಿಯಲ್ಲಿ ಪಂ. ಪುಟ್ಟರಾಜರು ಈ ಕಾವ್ಯವನ್ನು ರಚಿಸಿದ್ದಾರೆ. ಮಲ್ಲಮ್ಮನ ಚರಿತ್ರೆಯನ್ನು –

ಶ್ರೀ ಶೈಲ ಮಲ್ಲಿಕಾರ್ಜುನನ ಕರುಣೆಯಂ ಪಡೆದು
ಕ್ಲೇಷಗಳಂಗೆಲೆದು ಭಕ್ತಿಯುರೆ ಹಿರಿಮೆಯಂ
ವೈಶಾಲ್ಯ ಮಹಾಜಗಕೇಶೀ ತೋರಿರ್ಪಮಲ್ಲಮಾಂಬೆ ॥

(ಶ್ರೀ ಶಿವಶರಣೆ ಹೇಮರಡ್ಡಿ ಮಲ್ಲಮಾಂಬೆಯ ಪುರಾಣ. ಪುಟ : ೦೨, ಪದ್ಯ : ೭.)

ಎಂದು ಕವಿಗಳು ಮಹಿಮೆಯನ್ನು ಹಾಡಿ ಹೊಗಳಿದ್ದಾರೆ.

ದಕ್ಷಿಣ ಭಾರತದ ಮಹತ್ವದ ಶೈವಧಾರ್ಮಿಕ ಕೇಂದ್ರವಾಗಿ ಶ್ರೀಶೈಲವು ಪ್ರಸಿದ್ಧವಾಗಿದೆ. ಅದು ಭೂಕೈಲಾಸವೆಂದೆ ಪ್ರತೀತಿಗೊಂಡಿದೆ. ದೇವ–ದೇವನಾದ ಮಲ್ಲಿಕಾರ್ಜುನನ ಭಕ್ತರು ಅರ್ಧ ದಕ್ಷಿಣ ಭಾರತದಲ್ಲಿ ತುಂಬಿದ್ದಾರೆ. ಆಂಧ್ರದಲ್ಲಿ ಅಂತಹ ಭಕ್ತ ರಡ್ಡಿ ಮನೆತನದ 'ಸೋಮರಡ್ಡಿ' ಇರುವ ಊರು 'ಶಿವಪುರ'. 'ಸೋಮರಡ್ಡಿ'ಯ ಹೆಂಡತಿ 'ಸೋಮಲಾಂಬೆ'ಯರಿಗೆ

ಮಗಳಾಗಿ 'ಮಲ್ಲಮ್ಮ' ಜನಿಸಿದಳು. ಬಾಲಕಿಯಾಗಿದ್ದಾಗ ಮಲ್ಲಮ್ಮನಿಗೆ ಮಲ್ಲಿಕಾರ್ಜುನನೆ ದರ್ಶನ ಕೊಟ್ಟನು. ಸನಿಹದ ಸಿದ್ಧಾಪುರದ ಹೇಮರಡ್ಡಿಯ ಮಗ 'ಭರಮರಡ್ಡಿ'ಯೊಂದಿಗೆ ಮಲ್ಲಮ್ಮನ ಮದುವೆಯಾಯಿತು. ಅತ್ತೆ-ನಾದನಿಯರ ಕಾಡಾಟಕ್ಕೆ ಮಿತಿ ಇಲ್ಲದಂತಹ ಸ್ಥಿತಿಯನ್ನು ಎದುರಿಸಿ ಭಕ್ತಿಯಿಂದಲೆ ಮಲ್ಲಮ್ಮನು ಬದುಕಿದ್ದು ಒಂದು ಜೀವನ ಸ್ಥೈರಣೆಯ ತಪವಾಗಿತ್ತು . ಮಲ್ಲಮ್ಮನ ಭಕ್ತಿಯನ್ನು ಜಗಕ್ಕೆ ಸಾರಲು ಮಲ್ಲಿಕಾರ್ಜುನನು ಹೇಮರಡ್ಡಿಯ ಮನೆಗೆ ಬಂದು ಭಿಕ್ಷೆ ಬೇಡಿದನು. ಅತ್ತೆ ವಾಚಾಮಗೋಚರವಾಗಿ ಬಯ್ದಳು. 'ಜಂಗಮಹೊಕ್ಕ ಮನೆ ಹಾಳಾಗುವದು' ಎಂದು ತಿಳಿಸಿ ಜಂಗಮರೂಪಿ ದೇವರನ್ನು ಬಡಿದು ಓಡಿಸಿದರು. ಮಲ್ಲಮ್ಮ ದುಃಖಪಟ್ಟು ಜಂಗಮನಲ್ಲಿಗೆ ಬಂದು ಕ್ಷಮೆ ಯಾಚಿಸಿದಳು. ಜಂಗಮನು ತನ್ನ ಬಾಸುಳಗಳನ್ನು ತೋರಿ 'ಹೇಮರಡ್ಡಿಯ ವಂಶವೇ ಹಾಳಾಗುವದು' ಎಂದು ಶಪಿಸಿದನು. ಮಲ್ಲಮ್ಮ 'ನೀನು ಹಚ್ಚಿದ ಗಿಡವ ನೀನೆ ಕೀಳುವುದುಚಿತವೆ ?' ಎಂದು ತಿಳಿಸಿ ತಾಪವನಾರಿಸಿ ಕಳುಹಿದಳು. ಶಿವನು ಈ ರೀತಿಯಾಗಿ ಅವಳ ಭಕ್ತಿಯನ್ನು ಮೆರಸಿದನು. ಈ ಹಿನ್ನೆಲೆಯಲ್ಲಿ ಧರ್ಮ-ಅಧರ್ಮಗಳ ವ್ಯಾಪಕ ಚರ್ಚೆ ನಡೆಯಿತು. ಬಳಿಕ ಮಲ್ಲಮ್ಮ ಶಿವನಿಗೆ ಎಡೆಮಾಡಿ ಮಹಾ ಆರೋಗಣೆಯನ್ನು ನಡೆಸಿದಳು. ಈ ಕಾರಣಕ್ಕಾಗಿ ಮಲ್ಲಮ್ಮನನ್ನು ಅತ್ತೆಯು ಮನೆಯಿಂದ ಹೊರಹಾಕಿದಳು. ಆದರೆ ಭಕ್ತೆಯಾದ ಆಕೆ ಇದ್ದ ಸ್ಥಳವೇ ಕೈಲಾಸವಾಯಿತು. "ಭಕ್ತಿವಂತರಿಗೆ ಮುಕ್ತಿಯು ತೃಣಸಮಾನವದು ಭುವನವು ಕೈಲಾಸ" ಎಂದು ಕವಿ ವರ್ಣಿಸುವನು.

ಹುಚ್ಚಪತಿ, ಕಾಡಾಟದ ವಿಷಮತೆಯ ಮಧ್ಯದಲ್ಲಿ ಬೆಂಕಿಯಲ್ಲಿ ಅರಳಿದ ಹೂವಂತೆ ಭಕ್ತಿಯ ಅರಳಾಗಿ ಮಲ್ಲಮ್ಮನು ಕಾಣಿಸಿಕೊಳ್ಳುವಳು. ಇಂಥ ಶರಣ ಸಂತರ ಚರಿತ್ರೆಯನ್ನು ಉದಾತ್ತಗೊಳಿಸಲು ಪವಾಡಗಳನ್ನು ಹೊಂದಿಸವದನ್ನು. ಜನಜನಿತವಾದ ಇವನ್ನು ಅತಿ ಅದ್ಭುತವೆಂದು ಚಿತ್ರಿಸುವದನ್ನು ಕಾಣುತ್ತೇವೆ. ಇಲ್ಲಿಯೂ ಅದೇ ರೀತಿಯ ಲೀಲೆಗಳ ವಿವರಣೆ ಇದೆ. 'ಉಸುಕು ಬಿತ್ತಿ ಕಾಳುಗಳನ್ನು ಪಡೆದ್ದು' ಮೊದಲಾದವುಗಳಿಲ್ಲಿ ಚಿತ್ರಣಗೊಂಡಿವೆ. ಸೂಳೆಯ ಬೆನ್ನುಹತ್ತಿ ಹಾಳಾದ ಮೈದುನನ ಜೀವನವನ್ನು ಪರಿವರ್ತನೆಗೊಳಿಸಿದ ಚಿತ್ರಣವು ಇಲ್ಲಿದೆ. ಈತನೆ ದಕ್ಷಿಣದ ಮೂರು ನೀತಿವೆತ್ತ ದಾರ್ಶನಿಕರಲ್ಲಿ ಒಬ್ಬನಾದ ತೆಲಗು ಭಾಷೆಯ ವೇಮನ. ಆ ಪ್ರದೇಶದ ಶೈವ ಸಂಸ್ಕೃತಿಯೊಂದಿಗೆ ಕರ್ನಾಟಕದ ಶರಣ ಸಂಸ್ಕೃತಿಯ ಚಿತ್ರಣವು ಇಲ್ಲಿದೆ-

ಗುರುಲಿಂಗ ಜಂಗಮರ ತೃಪ್ತಿಗೆ ದುಡಿದ ದುಡಿಮೆ
ಪರಮಾರ್ಥಮುರು ಕಾಯಕವೆನಿಸುವದು ತಿಳಿಯೆ
ನೆರೆದ ಲೌಕಿಕಮೆನಿಸುಮದರ ಪೋಷಣೆಗಾಗಿ ದುಡಿಯುವದೇ ಸಂಸಾರವು ॥

(ಶ್ರೀ ಶಿವಶರಣೆ ಹೇಮರಡ್ಡಿ ಮಲ್ಲಮಾಂಬೆಯ ಪುರಾಣ. ಪು : ೧೩೨, ಪದ್ಯ : ೫೧)

ಕಾಳಿದಾಸನೆಂಬ ವೈಷ್ಣವನಿಗೆ ಕಣ್ಣು ಕೊಟ್ಟ ಪ್ರಸಂಗವು ಇಲ್ಲಿದೆ. ಮಾವ ಹೇಮರಡ್ಡಿಯನ್ನು ಉದ್ಧರಿಸಿದ ಕೀರ್ತಿ ಮಲ್ಲಮ್ಮನಿಗೆ ಸಲ್ಲುತ್ತದೆ. ಮಲ್ಲಮ್ಮನ ವರ್ಣನೆಯು ಜನಪದ ಸಾಹಿತ್ಯದಲ್ಲಿಯೂ ಇರುವದು. ಇವೆಲ್ಲವುಗಳನ್ನು ಗಮನಿಸಿ ಈ ಕಾವ್ಯದ ವಸ್ತುವನ್ನು ನಿರ್ಮಿಸಲಾಗಿದೆ. ಜನಪದ ಐತಿಹ್ಯಗಳನ್ನು ಹೊಂದಿದ್ದರಿಂದ ಷಟ್ಪದಿಯು ಸಹಜವಾಗಿರುವ ಶೈಲಿಯಲ್ಲಿರುವದರಿಂದ ಕಾವ್ಯದ ಬಂಧವು ಗಟ್ಟಿಯಾಗಿದೆ.

೩.೧.೨೦. ಶ್ರೀ ಸಿರಿಯೂರು ಸಿದ್ಧಲಿಂಗೇಶ್ವರ ಪುರಾಣ

ಕ್ರಿ.ಶ. ೨೦೦೩ರಲ್ಲಿ ಪ್ರಕಾಶನಗೊಂಡ ಶ್ರೀ ಸಿರಿಯೂರು ಸಿದ್ಧಲಿಂಗೇಶ್ವರ ಪುರಾಣವು ಭಾಮಿನಿ ಷಟ್ಪದಿಯಲ್ಲಿ ನಿರ್ಮಾಣಗೊಂಡಿದೆ. ಈ ಕೃತಿಯು ೬೦೬ ಪದ್ಯಗಳನ್ನು ಹೊಂದಿದೆ ಶ್ರೀ ಸಿದ್ಧಲಿಂಗೇಶ್ವರರು ಬಾಗಲಕೋಟೆ ಸಮೀಪದ ಶಿರೂರ ಮತ್ತು ಸವದತ್ತಿ ಸಮೀಪದ ಇನಾಮಹೊಂಗಲದಲ್ಲಿರುವ ಮಠದ ಅಧಿಪತಿಗಳಾಗಿದ್ದರು. ಸರ್ವಭಕ್ತರನ್ನು ಸಮಭಾವದಿಂದ ಕಂಡು ಅವರಲ್ಲಿದ್ದ ಅರಿಷಡ್ವರ್ಗಗಳನ್ನು ನಿವಾರಿಸಿ ದಯಾ ಧರ್ಮಸಿದ್ಧಿಯೋಗವನ್ನು ಕಂಡುಕೊಳ್ಳುವಂತೆ ದೈವತ್ವವನ್ನು ಅರುಹಿದರು. (ಶ್ರೀ ಸಿರಿಯೂರು ಸಿದ್ಧಲಿಂಗೇಶ್ವರ ಪುರಾಣ. ಪುಟ: ೧೦) ಶ್ರೀ ಸಿದ್ಧಲಿಂಗೇಶ್ವರರು ಪಟ್ಟಕ್ಕೆ ಬರುವ ಮೊದಲು ಶ್ರೀ ಚನ್ನವೀರ ಶಿವಯೋಗಿಗಳು ಇನಾಮ ಹೊಂಗಲದ ಮಠಾಧಿಪತಿ–ಗಳಾಗಿದ್ದು, ಅವರು ಪುರಾಣ ಪ್ರವಚನ ಪಟುಗಳಾಗಿದ್ದರು. ಸ್ವಯಂ ಸಿದ್ಧಲಿಂಗೇಶ್ವರರು ಆಧ್ಯಾತ್ಮದ ಮೇರುವಾಗಿದ್ದರು.

ಶರಣ ತತ್ವಗಳನ್ನು ಸಾಕಾರಗೊಳಿಸಿಕೊಂಡ ಶ್ರೀ ಸಿದ್ಧಲಿಂಗಯತಿಗಳು ವಿಶ್ವವಿಶಾಲ ಮನವನ್ನು ಹೊಂದಿದ್ದರು. ಇವರು ಮಠದ ಮೂಲ ಪುರುಷರು. ಕಲ್ಯಾಣದಿಂದ ಹೊರಟು ಬಂದವರು. ಅವರಿಗೆ ಕಲ್ಯಾಣಸ್ವಾಮಿಗಳೆಂದು ಜನರೂಢಿಯಾಯಿತು. ಆ ಶರಣ ಪರಂಪರೆಯಲ್ಲಿ ಅನೇಕ ಶರಣರು ಆಗಿಹೋದರು. ಶ್ರೀ ಸಿದ್ಧಲಿಂಗೇಶ್ವರರು ಅದೇ ಪೀಠ ಪರಂಪರೆಯವರು. ಸ್ವಾಮಿಗಳು ತಪಸ್ವಿಗಳಾಗಿದ್ದು, ವಿದ್ಯಾಹಿತ ಕಾರ್ಯಗಳನ್ನು ಸಾಮಾಜಿಕ ಸೇವೆಯೆಂದು ಮಾಡಿದವರು. ಅವರು ಜೀವಂತವಾಗಿದ್ದಾಗಲೆ ಜನಜನಿತ ಸ್ವಾಮಿಗಳಾಗಿದ್ದರು. ಅವರ ಭಕ್ತರನೇಕರು ಸೇವೆ ಎಂದು ಈ ಕಾವ್ಯವನ್ನು ಬರೆಯಿಸಿ ಪ್ರಕಟಿಸಿದ್ದಾರೆ.

ಪಂ. ಪುಟ್ಟರಾಜರು ಕಥಾ ನಾಯಕನಾದ ಶ್ರೀ ಸಿರಿಯೂರ ಸ್ವಾಮಿಗಳನ್ನು –

ನಾಯಕನಾ ಪಾವಿತ್ರಾತ್ಮಂ ಶಿರೂರೊಳೆಯಾ । ಪವಿತ್ರನನುಷ್ಥಿಥಿಯನೆಸಗುತೆಜಲದ ಬರವ

ಪಾಪರಹಿತಂ ಕಳೆದು ವಿಭವಕೆ ಲೋಪಬರದಂತೆ । ಕರುಣೆಸಿದ ದೀಪಿಸುವ ಸಿರಿಯೂರ ಸಿದ್ದೇಶ ॥

(ಪುಟ : ೦೫, ಪದ್ಯ : ೧೬)

ಇವರ ಚರಿತ್ರೆಯನ್ನು ಶ್ರೀ ಎನ್. ಎನ್. ಸಂಗೊಳ್ಳಿಯವರು ಗದ್ಯದಲ್ಲಿ ರಚಿಸಿದ್ದಾರೆ. ಶಿರೂರಿನ ಶ್ರೀ ಶಂಕರಪ್ಪ ಶಿ. ನರೇಗಲ್ಲ ಅವರು ನೂರೆಂಟು ನಾಮಾವಳಿಗಳನ್ನು ರಚಿಸಿದ್ದರು. ಇವೆರಡನ್ನು ಅನುಸರಿಸಿ ಪಂಡಿತ ಪುಟ್ಟರಾಜರು ಈ ಪುರಾಣ ಕಾವ್ಯವನ್ನು ರಚಿಸಿದ್ದಾರೆ. ಕಾವ್ಯಕ್ಕೆ ಗದ್ಯದ ವಿವರಣೆಯು ಇರುವದು.

ಶ್ರೀ ಸಿದ್ಧಲಿಂಗೇಶ್ವರರು ಸವದತ್ತಿ ಧಾರವಾಡಗಳ ನಡುವೆ ಬರುವ ಚಿಕ್ಕ ಹಳ್ಳಿ ಎಡಳ್ಳಿಯಲ್ಲಿ 'ಚನ್ನಬಸವಯ್ಯ' ಮತ್ತು 'ಗೌರಮ್ಮರ' ಪುತ್ರನಾಗಿ ೧೯೦೮ರಲ್ಲಿ ಜನಿಸಿದರು. ಇವರ ಪೂರ್ವಾಶ್ರಮದ ಹೆಸರು 'ನಾಗಯ್ಯ'. ಇವರು ಸಾಧನೆ-ಸಿದ್ಧಿಗಳನ್ನು ಪಡೆದಾದ ಬಳಿಕ ಸಿರಸಂಗಿ ಲಿಂಗರಾಜರ ಪಂಡಿನಿಂದ ಕಾಶಿಗೆ ವಿದ್ಯಾಭ್ಯಾಸಕ್ಕಾಗಿ ಹೋದರು. ಆಯುರ್ವೇದದಲ್ಲಿ ಸ್ವಾಮಿಗಳಿಗೆ ಸಾಧನೆ ಇತ್ತು. ಅಲ್ಲಿಂದ ೧೯೪೨ರಲ್ಲಿ ಇನಾಮ ಹೊಂಗಲದ ಶ್ರೀ ಚನ್ನವೀರ ಸ್ವಾಮಿಗಳ ಐಕ್ಯಾನಂತರ ಆ ಮಠಕ್ಕೆ ಅಧಿಪತಿಯಾಗಿ ಬಂದು ಅವರ ಶಾಖಾಮಠಗಳಿಗೆ ಇವರು ಅಧಿಕಾರ ಹೊಂದಿದರು. ಕೊನೆಗೆ ಶಿರೂರಿನಲ್ಲಿ ಇವರು ಐಕ್ಯ. ಹೊಂದಿದರು. ಅಲ್ಲಿ ಇವರ ಸಮಾಧಿ ಇದೆ.

●●●

೩.೨. ಶ್ರೀ ರಾಮಣ್ಣ ಬ್ಯಾಟಿಯವರ ಪುರಾಣ ಕಾವ್ಯಗಳು

* ಕವಿ
* ಕೃತಿಗಳು

    ೧. ಶ್ರೀ ಗೌರಿಶಂಕರ ಚರಿತಾಮೃತಂ

    ೨. ಶ್ರೀ ಗುಡ್ಡಾಪುರ ದಾನಮ್ಮದೇವಿ ಪುರಾಣ.

    ೩. ಶ್ರೀ ನೀಲಕಂಠೇಶ್ವರ ಪುರಾಣ.

    ೪. ಶ್ರೀ ಇಟಗಿ ಭೀಮಾಂಬಿಕೆ ಪುರಾಣ.

    ೫. ಶ್ರೀ ಸದ್ಗುರು ಶಿವಾನಂದ ಪುರಾಣ.

    ೬. ಬಾದಾಮಿ ಶ್ರೀ ಬನಶಂಕರಿದೇವಿ ಮಹಾತ್ಮೆ ಪುರಾಣ.

    ೭. ಡಾ. ಬಾಬಾ ಸಾಹೇಬ ಅಂಬೇಡ್ಕರ ಪುರಾಣ.

ಕವಿ :

ರಾಮಣ್ಣಾ ಬ್ಯಾಟಿಯುವರು ಬೆಳಗಾವ ಜಿಲ್ಲೆಯ ರಾಮದುರ್ಗ ತಾಲೂಕಿನ ಮನಿಹಾಳದವರಾಗಿದ್ದು, ಪ್ರಸ್ತುತದಲ್ಲಿ ಗದಗ-ಬೆಟಗೇರಿಯಲ್ಲಿ ನೆಲೆಸಿದ್ದಾರೆ. ಶ್ರೀ ದೊಡ್ಡಪ್ಪ ಮತ್ತು ಶ್ರೀಮತಿ ಚೆನ್ನಬಸಮ್ಮ ದಂಪತಿಗಳಿಗೆ ೧-೯-೧೯೫೧ರಂದು ೮ನೇ ಮಗುವಾಗಿ ಜನಿಸಿದರು. ನೇಕಾರಿಕೆ ಅವಲಂಜಿತ ಕುಟುಂಬದ ನಿರ್ವಹಣೆಗಾಗಿ ದೊಡ್ಡಪ್ಪ ಬ್ಯಾಟಿಯವರು ೧೯೭೫ರಲ್ಲಿ ಗದಗ-ಬೆಟಗೇರಿಗೆ ಬಂದು ನೆಲೆಸಿದರು.

ಕವಿಯು ತಮ್ಮ ಜನನ ಕುರಿತು ಹೀಗೆ ಹೇಳಿದ್ದಾರೆ.

> **ಸುಂದರದ ಬೆಳಗಾವ ಜಿಲ್ಲೆಯ**
> **ಲಂದು ಸುರೆಬಾನ ಮನಿಹಾಳ**

ದಂದು ಶ್ರೀ ದೇವಾಂಗವಂಶದಿ ಬ್ಯಾಟದೊಡ್ಡಪ್ಪ ।
ಹೊಂದಿ ಚೆನ್ನಬಸಮ್ಮ ಸತಿಯಳ
ಅಂದು ಎಂಟನೆ ಗರ್ಭದೊಳ್ ಕವಿ
ಬಂದನಾ ದಿನದಂದು ಕರೆದರು ರಾಮ ನಾಮದಲಿ ॥

(ಶ್ರೀ ನೀಲಕಂಠೇಶ್ವರ ಪುರಾಣ. ಪುಟ : ೭, ಪದ್ಯ : ೨೫)

ಕವಿರಾಜ ಮಾರ್ಗಕಾರನು ಹೇಳುವಂತೆ, 'ಕುಱಿತೋದದೆಯುಂ ಕಾವ್ಯ ಪ್ರಯೋಗ ಪರಿಣಿತಮತಿಗಳ್' ಎಂಬ ಮಾತಿಗೆ ಜೀವಂತ ಉದಾಹರಣೆ ಕವಿ ರಾಮಣ್ಣನವರು. ಬಾಲ್ಯದಲ್ಲಿ ಓದು-ಬರಹದ ಗಂಧವರಿಯದ ಕವಿ ತಾಯಿಯ ಪ್ರೇರಣೆ, ಸ್ವಪ್ರಯತ್ನ ಹಾಗೂ 'ಕಪ್ಪತ್ತದ ಕಲ್ಪವೃಕ್ಷ'ವೆಂದು ಪ್ರಸಿದ್ಧವಾದ 'ಜಲಾಶಂಕರನ ಸನ್ನಿಧಾನ'ದಲ್ಲಿ ಅನನ್ಯ ಭಕ್ತಿಯಿಂದ ಪೂಜಿಸಿದ ಸತ್ಯ ನಾರಾಯಣನ ವ್ರತದ ಫಲದಿಂದಾದ ಜಲಾಶಂಕರನ ಅನುಗ್ರಹ ಮತ್ತು ಗದುಗಿನ ತೋಂಟದ ಸಿದ್ಧಲಿಂಗ ಶ್ರೀಗಳ ಕರುಣೆಯಿಂದ ಕವಿತ್ವವು ತಮಗೆ ಸಾಧ್ಯವಾಗಿದೆ ಎಂಬ ಮಾತನ್ನು ಕವಿಯು –

ಅಂದು ಕಪ್ಪತ್ತಗಿರಿಯ ಕ್ಷೇತ್ರದ ಜಲದ ಶಂಕರನಾ
ಮುಂದೆ ಕರುಣದಿ ಆದೆ ವರಕವಿ
ಇಂದು ಶಂಕರಿ ಕರುಣೆಯಾ ಶಿಶು
ತಂದೆ ತೋಂಟದ ಸಿದ್ಧಲಿಂಗನ ಶಿಷ್ಯನಾನಾಗಿ

(ಶ್ರೀ ಗೌರಿಶಂಕರ ಚರಿತಾಮೃತ ಪುಟ : XXXX ಪದ್ಯ : ೨೭)

ಎಂದು ಬಣ್ಣಿಸುತ್ತಾರೆ.

ಹೀಗೆ ಕವಿತ್ವ ಶಕ್ತಿಯನ್ನು ಪಡೆದ ಕವಿ ರಾಮಣ್ಣನವರ ಪುಣ್ಯ ಫಲದಿಂದ ಗದುಗಿನ ಜಗದ್ಗುರು ತೋಂಟದ ಸಿದ್ಧಲಿಂಗ ಯತಿಗಳ ದಿವ್ಯ ಸನ್ನಿಧಾನ ದೊರೆಯುವಂತೆ ಮಾಡಿತು. ಓದು-ಬರಹ ಬಾರದ ಇವರ ರಚನೆಗಳನ್ನು ಕೇಳಿದ, ಓದಿದ ಶ್ರೀಗಳು ಕವಿಯ ಅಂತಃಕರುಣೆಯಿಂದ ಹರಿದು ಬರುವ ಕಾವ್ಯಗಂಗೆಯ ಸೆಲೆಯನ್ನು ಗುರ್ತಿಸಿ ಸುಪ್ತವಾಗಿದ್ದ ಕಾವ್ಯರಚನಾ ಸಾಮರ್ಥ್ಯವು ಓತ-ಪ್ರೋತವಾಗಿ ಹೊರಹೊಮ್ಮುವಂತೆ ಕೃಪೆ ದೋರಿ ಆಶೀರ್ವದಿಸಿದುದು ಇವರ ಕಾವ್ಯ ರಚನೆಗೆ ಬಹುದೊಡ್ಡ ಪ್ರೇರಣೆಯಾಗಿ ಪರಿಣಮಿಸಿದೆ. 'ಶ್ರೀ ಸಿದ್ಧಲಿಂಗನ ಕಾವ್ಯ ಸುಧೆ' ಪ್ರಥಮ ಕಾವ್ಯ ಪುಷ್ಪವಾಗಿ ರಾಮಣ್ಣನವರಿಂದ ಹೊರ ಬಂದಿತು. ಮುಂದೆ ಬೆಟಗೇರಿಯು ಇವರ ಕಾವ್ಯ ರಚನೆಯ ಕರ್ಮಭೂಮಿಯಾಗಿ ಪರಿಣಮಿಸಿತು. ಇವರಿಗೆ ದೊರೆತ ಅನೇಕ ಸಹೃದಯ ಓದುಗ-ಸ್ನೇಹಿತರು ಇವರ ಬಾಯಿಂದ ಬರುವ ಕಾವ್ಯವನ್ನು ಬರೆದು ಕೊಡತೊಡಗಿದರು. ದೇವಿಯ ಕೃಪೆಯಿಂದ ಸ್ವತಃ ಕವಿಗಳೇ ಓದುವ-ಬರೆಯುವ ಕಲೆಯನ್ನು ರೂಢಿ ಮಾಡಿಕೊಂಡರು. ಓದುವ-ಬರೆಯುವ ಕಲೆಯಲ್ಲಿ ಕರಗತರಾದ ಮೇಲಂತೂ ಇವರ ಕಾವ್ಯ ರಚನೆ ನಿರಂತರವಾಗಿ ಹರಿದು ಬರುತ್ತಿದೆ.

ಅನೇಕ ಪೌರಾಣಿಕ ಶರಣರನ್ನು, ಸ್ವಾಮಿಗಳನ್ನು, ಆಧುನಿಕ ಪೂರ್ವ ಶರಣರನ್ನು ಹಾಗೂ ಆಧುನಿಕ ಕಾಲದ ಅಂಬೇಡ್ಕರ್‌ರನ್ನು ಕುರಿತು ಅವರ ಜೀವನ ಚರಿತ್ರೆಯನ್ನು ಷಟ್ಪದಿಯ ಲಯವನ್ನು ಬಳಸಿಕೊಂಡು ಏಳು ಪುರಾಣ ಕೃತಿಗಳನ್ನು ಬರೆದಿದ್ದಾರೆ. ಅಲ್ಲದೇ ಅನೇಕ ದೇವ-ದೇವತೆಗಳು ಕುರಿತಂತೆ ವೃತ-ಮಹಾತ್ಮೆಯ ಕಥೆಗಳನ್ನು ಗದ್ಯದಲ್ಲಿ ಬರೆದಿರುವರು. ಅವಧೂತ ಪರಂಪರೆಯ ಸಂತರು ಶರಣರು, ಪುಣ್ಯಕ್ಷೇತ್ರ ಕುರಿತಂತೆ ಶತಕಗಳನ್ನು ಬರೆದಿರುವರು, ಭಕ್ತಿಯೇ ಈ ಎಲ್ಲ ಸಾಹಿತ್ಯ ಕೃಷಿಗೆ ಮೂಲವಾಗಿದೆ.

ಇವರು ತಮ್ಮ ಕಾವ್ಯ ರಚನೆಯಲ್ಲಿ ತಾವು ಪಡೆದ ಅಂತರಂಗದ ಅನುಭಾವ ಅನುಭೂತಿಗಳು ಒಳಗಿನ ಪ್ರೇರಣೆಯಾಗಿ, ಶ್ರೀ ತೋಂಟದ ಸಿದ್ಧಲಿಂಗ ಶ್ರೀಗಳು ಬಾಹ್ಯ ಪ್ರೇರಣೆಯಾಗಿರುವುದನ್ನು ತಮ್ಮ ಪ್ರತಿ ಪುರಾಣ ಕಾವ್ಯಗಳಲ್ಲಿ ನೆನೆದಿದ್ದಾರೆ.

- ತಂದೆ ತೋಂಟದ ಸಿದ್ಧಲಿಂಗನ ಶಿಷ್ಯನಾಗಿ (ಶ್ರೀ ಗೌರಿ ಶಂಕರ ಪುರಾಣ)
- ತಂದೆ ಗದುಗಿನ ತೋಂಟದಾರ್ಯರು ಅಂದು ವರಗುರು ಸಿದ್ಧಲಿಂಗರು ಚೆಂದದಿಂ ಲಿಂಗಾಂಗಿ ಮಾಡಲು (ಶ್ರೀ ಇಟಗಿ ಭೀಮಾಂಬಿಕೆ ಪುರಾಣ)
- ಹೊಂದಿ ಕಾರುಣ್ಯದಾ ಫಲದೊಂದು ಅಕ್ಷರ ಕಲಿಯದವ ನಾನಂದು ಬರೆಯುವ ನಾನು ಲೇಖಕ ಕವಿಯಾಗಿ ಕೃಪೆಯಿಂದ (ಸದ್ಗುರು ಶ್ರೀ ಶಿವಾನಂದ ಪುರಾಣ)

ಹೀಗೆ ತೋಂಟದಾರ್ಯ ಯತಿಗಳು ಕವಿಯ ಸುಪ್ತ ಪ್ರತಿಭೆ ಕಾವ್ಯರೂಪವಾಗಿ ಅರಳಲು ಕಾರಣರಾಗಿರುವರು.

ಸ್ವ-ಪ್ರಯತ್ನ, ತಾಯಿಯ ಅಂತಃಕರಣ, ಸತ್ಯನಾರಾಯಣ ವೃತಾನುಷ್ಠಾನದ ಫಲ, ಜಲಾಶಂಕರನ ಅನುಗ್ರಹ, ಹಾಗೂ ತೋಂಟದ ಸಿದ್ಧಲಿಂಗ ಶ್ರೀಗಳ ಕೃಪಾಶೀರ್ವಾದಿಂದ ಕಾವ್ಯ ಕಲೆಯನ್ನು ಸಿದ್ಧಿಸಿಕೊಂಡ ಕವಿ ರಾಮಣ್ಣನವರ ಸಾಹಿತ್ಯ ಕೃಷಿ ಇಂತಿದೆ.

ಪುರಾಣ ಕಾವ್ಯಗಳು :

- ಶ್ರೀ ಗೌರಿಶಂಕರ ಚರಿತಾಮೃತಂ.
- ಶ್ರೀ ಗುಡ್ಡಾಪುರ ದಾನಮ್ಮದೇವಿ ಪುರಾಣ
- ಶ್ರೀ ಇಟಗಿ ಭೀಮಾಂಬಿಕಾ ಪುರಾಣ
- ಶ್ರೀ ನೀಲಕಂಠೇಶ್ವರ ಪುರಾಣ
- ಶ್ರೀ ಸದ್ಗುರು ಶಿವಾನಂದ ಪುರಾಣ
- ಬಾದಾಮಿ ಶ್ರೀ ಬನಶಂಕರಿ ಮಹಾತ್ಮೆ ಪುರಾಣ
- ಶ್ರೀ ಅಂಬೇಡ್ಕರ್ ಪುರಾಣ

ಹೀಗೆ ಪುರಾಣ ಕೃತಿಗಳ ಜೊತೆಗೆ ನಾಲ್ಕು ಖಂಡ ಕಾವ್ಯಗಳು, ಏಳು ಗದ್ಯ ಕೃತಿಗಳು ಹಾಗೂ ಎಂಟು ವ್ರತ ಮಹಾತ್ಮೆಯ ಕೃತಿಗಳನ್ನು ಬರೆದಿದ್ದು ಇವೆಲ್ಲವು ಇವರ ರಚನೆಗಳಾಗಿವೆ.

ಜೋತಿಷ್ಯ ಪಂಡಿತರಾದ ಇವರ ತಂದೆ ದೊಡ್ಡಪ್ಪನವರು ಕವಿಯ ಜನ್ಮವು ಸೂತಕವಾಗಿದೆ ಎಂದು ತಿಳಿದು, ಅದರ ಪರಿಹಾರವಾಗಿ ಕೂಸಿನ ಹತ್ಯೆಯನ್ನು ಮಾಡಬೇಕೆಂದು ಹಲವರು ಸೂಚಿಸಿದರೂ ಕವಿಯನ್ನು ಉಳಿಸಿಕೊಂಡರು. ಹಾಗಾಗಿದ್ದರೆ ಜೋತಿಷ್ಯದ ಮೌಢ್ಯಕ್ಕಾಗಿ ಇಂತಹ ಕವಿಯಿಂದ ಈ ನೆಲ ಮತ್ತು ಜನತೆ ವಂಚಿತರಾಗುತ್ತಿದ್ದರು. ಹಾಗೆ ಮಾಡದೆ ಹೋದ ಫಲವಾಗಿ ಕವಿ ರಾಮಣ್ಣನವರನ್ನು ಪಡೆದ ಪುಣ್ಯವು ಈ ನೆಲದ ಮಣ್ಣಿಗೆ ಸಂದಿದೆ. ಇಂತಹ ನಿರಕ್ಷರ ಕುಕ್ಷಿಯು ಓದು-ಬರಹ ಕಲಿತು ಕವಿತ್ವ ಸಾಧಿಸಿ ರಚಿಸಿದ ಕೃತಿಗಳನ್ನು ಓದುವುದು ನಿಜಕ್ಕೂ ಒಂದು ಪುಣ್ಯವೇ ಸರಿ !

೩.೨.೧ ಶ್ರೀ ಗೌರಿಶಂಕರ ಚರಿತಾಮೃತಂ

'ಭುವನದ ಭಾಗ್ಯದಿಂದಲ್ತೇ ಕವಿ ಉದಯಂ' ಎಂಬ ವಾಣಿಯಂತೆ ಈ ನೆಲದ ಪುಣ್ಯವಾಗಿ ಹೊರಹೊಮ್ಮಿದ ಕವಿ ರಾಮಣ್ಣನವರು ಬರೆದ ಮೊದಲ ಪುರಾಣ ಕಾವ್ಯವೇ ಶ್ರೀ ಗೌರಿಶಂಕರ ಚರಿತ್ರಾಮೃತವು. ಈ ಕೃತಿಯು ೧೪೪ ಅಧ್ಯಾಯಗಳಲ್ಲಿ ೩.೨೦೦ ಪದ್ಯಗಳ ಹರವನ್ನು ಪಡೆದ ಬೃಹತ್ ಕಾವ್ಯವಾಗಿದೆ. ಈ ಕಾವ್ಯವು ಬಾಗಲಕೋಟೆಯ ಕಿರಸೂರು ಬಿಲ್ವಾಶ್ರಮ ಬೃಹನ್ಮಠದ ಷ.ಬ್ರ. ಪರಮಪೂಜ್ಯ ಶ್ರೀ ಗೌರಿಶಂಕರ ಮಹಾಶಿವಯೋಗಿಗಳ ಜೀವನ ಹಾಗೂ ಅವರ ಆಧ್ಯಾತ್ಮಿಕ ಸಾಧನೆ, ಲೋಕಲ್ಯಾಣ ಗೈಯುವ ಸಮಯದಲ್ಲಿ ಎದುರಿಸಿದ ಕಷ್ಟ-ಕಾರ್ಪಣ್ಯಗಳ ವಿವರಗಳೇ ಕಾವ್ಯದ ಕಥಾವಸ್ತುವಾಗಿದ್ದು, ಭಕ್ತಿ-ತತ್ವ-ದರ್ಶನಗಳ ಅನುಷ್ಠಾನ ಮತ್ತು ಅನುಸಂಧಾನಗಳ ಸಂಪತ್ತಿನಿಂದ ಬೀಗುತ್ತದೆ.

ಶ್ರೀ ಜಗದ್ಗುರು ಪಂಡಿತಾರಾಧ್ಯರಿಂದ ನಾಡಿನ ಉದ್ದಗಲಕ್ಕೂ ಸ್ಥಾಪಿತಗೊಂಡ ಪಂಚಾಚಾರ್ಯ ಪರಂಪರೆಯ ಶ್ರೀಶೈಲಪೀಠದ ಶಾಖಾಮಠಗಳಲ್ಲಿ ಬಾಗಲಕೋಟೆ ಹತ್ತಿರದ ಈ ಕಿರಸೂರ ಮಠವು ಒಂದು. ಈ ಮಠಕ್ಕೆ ಒಬ್ಬ ಪೀಠಾಧಿಕಾರಿಯ ಅವಶ್ಯಕತೆಯಿದ್ದ ಸಂದರ್ಭದಲ್ಲಿ ಈ ಪೀಠದ ಪೂಜ್ಯ ಶ್ರೀಮಹಾದೇವಯ್ಯ ಗುರುಗಳಿಂದ ನೇಮಕಗೊಂಡ ಶ್ರೀ ಗೌರಿಶಂಕರರೇ ಈ ಕಾವ್ಯದ ಕಥಾನಾಯಕರು.

ಶ್ರೀ ಗೌರಿಶಂಕರರ ಮೂಲ ಹೆಸರು ಅಯ್ಯಪ್ಪ ಸ್ವಾಮಿ. ಇವರು ಬೆಳಗಾವ ಜಿಲ್ಲೆ; ರಾಮದುರ್ಗ ತಾಲೂಕಿನ, ಮುದನೂರು ಗ್ರಾಮದ 'ಶ್ರೀ ರೇವಣಸಿದ್ಧಯ್ಯ' 'ಗದಿಗೆಮ್ಮ' ದಂಪತಿಗಳಿಗೆ ಮಗನಾಗಿ ಜನಿಸಿದರು. ಮುಂದೆ ಕಿರಸೂರು ಮಠದ ಪೂಜ್ಯಶ್ರೀಮಹಾದೇವಯ್ಯ ಗುರುಗಳ ಇಚ್ಛೆಯಂತೆ ಅಯ್ಯಪ್ಪ ಸ್ವಾಮಿಯನ್ನು (ಗೌರಿಶಂಕರರು) ಪೀಠಕ್ಕೆ ಬಿಡುವರು.

ಗುರುಗಳು ಪೀಠ ಹಾಗೂ ಬಾಲಕನನ್ನು ಅನಾಥವಾಗಿ ಮಾಡಿ ಲಿಂಗೈಕ್ಯರಾದ ಬಳಿಕ ಅನಾಥ ಬಾಲಕನನ್ನು ತಾಯ್ತಂದೆಗಳು ಗುಳೇದಗುಡ್ಡದ ಬೃಹನ್ಮಠಕ್ಕೆ ಕರೆತರುವರು. ಬಾಲಕ ಪೀಠದ ಕುರ್ಚಿಯಲ್ಲಿ ಕೂಡಲು ಬೇಕಾದ ವೇದಾಂತ, ಮತತತ್ವ-ಸಿದ್ಧಾಂತದ ಪ್ರಶ್ನೆಗಳಿಗೆ ಉತ್ತರ ನೀಡಿ ಯತಿತ್ವವನ್ನು ಮೆರೆದನು. ನಂತರ ಗುಳೇದಗುಡ್ಡದ ಕೋಟೆಕಲ್ಲಿ ಗ್ರಾಮದಲ್ಲಿಯ ಪಾಠಶಾಲೆಯಲ್ಲಿ ವಿದ್ಯಾರ್ಜನೆಗೆ ಸೇರಿದರು. ಆದರೆ ವಿಧಿ ಅಲ್ಲಿಯೂ ಇವರ ಬೆನ್ನು ಬಿಡಲಿಲ್ಲ. ಮಾರ್ಗದರ್ಶಿ ಶ್ರೀ ಸಾತಪ್ಪಯ್ಯನವರು ಲಿಂಗೈಕ್ಯರಾದ ಕಾರಣ ನೊಂದ ಬಾಲಕ ಅಲ್ಲಿಂದ ಸೊಲ್ಲಾಪುರಕ್ಕೆ ಬಂದನು. ಅಲ್ಲಿನ ಶ್ರೀ ವಾರದ ಮಲ್ಲಪ್ಪನವರ ಪಾಠಶಾಲೆಯಲ್ಲಿ ಸಂಸ್ಕೃತ ವಿದ್ಯಾರ್ಜನೆಯನ್ನು ಶ್ರೀ ಜಗದೀಶ ಶಾಸ್ತ್ರಿಗಳ ಶಿಷ್ಯರಾಗಿ ಪೂರೈಸುವರು. ಬಳಿಕ ಮಹಾರಾಷ್ಟ್ರದ 'ನಫೀನ ಘಾಟ'ದಲ್ಲಿ ತಪಗೈದು ಊರಿಗೆ ಮರಳಿದರು. ಇವರ ತಪಃಶಕ್ತಿಯ ಪ್ರಭಾವವು ಇವರನ್ನು ಅನೇಕ ಪೀಠಗಳು ಕೈ ಮಾಡಿ ಕರೆಯುವಂತೆ ಮಾಡಿತು. ಆದರೆ ಇವರು ಒಲಿದದ್ದು ಈ ಕಿರಸೂರು ಪೀಠಕ್ಕೆ. ಕ್ರಿ.ಶ. ೧೯೩೨ ರ ಹೊತ್ತಿಗೆ ಶ್ರೀ ಹುಟಗಿ ಶ್ರೀಗಳಿಂದ ಪಟ್ಟಾಭಿಷಕ್ತರಾಗಿ 'ಶ್ರೀ ಶಿವಸಿದ್ಧ ಮಲ್ಲಿಕಾರ್ಜುನ ಶ್ರೀ ಗೌರಿಶಂಕರ' ಎಂಬ ಅನ್ವರ್ಥಕ ನಾಮ ಪಡೆದಾಗ್ಯೂ ಖ್ಯಾತರಾದುದು 'ಶ್ರೀ ಗೌರಿ ಶಂಕರ' ಎಂಬ ಹೆಸರಿನಿಂದ. ಪೀಠಕ್ಕೆ ಬಂದ ನಂತರ ಮಠದಲ್ಲಿ ಉಳಿಯದೇ ಅನತಿ ಕಾಲದಲ್ಲಿ ಕಿರಸೂರು ಊರ ಹೊರಗೆ ಇರುವ ಪರ್ಣಕುಟೀರದಲ್ಲಿ ವಾಸಿಸಹತ್ತಿದರು. ಜಪ-ತಪ-ತತ್ವಾನುಷ್ಠಾನ ಕೈಗೊಂಡು ತಪಸ್ವರೂಪರಾದರೆಂದು ಕವಿ ರಾಮಣ್ಣನವರು ಹೀಗೆ ವರ್ಣಿಸುತ್ತಾರೆ

ತಪದ ರೂಪವೆ ಗೌರಿ ಶಂಕರ
ಜಪದ ರೂಪವೆ ಗೌರಿ ಶಂಕರ
ಅಪರಿಮಿತ ಆನಂದ ಬ್ರಹ್ಮವೇ ಗೌರಿಶಂಕರರು ॥

(ಶ್ರೀ ಗೌರಿಶಂಕರ ಚ.ಪು. ಪೀಠಿಕಾ ಪದ್ಯ : ೪).

ಹೀಗೆ ಜಪ-ತಪ-ತತ್ವಾನುಷ್ಠಾನದಿಂದ ಗಳಿಸಿದ ಶಕ್ತಿಯನ್ನು ತಮ್ಮ ಜೀವನದುದ್ದಕ್ಕೂ ಭಕ್ತ ಕೋಟಿಯ ದುಗುಡ-ದುಮ್ಮಾನಗಳನ್ನು ಕಳೆಯುತ್ತಾ ಧನ್ವಂತರಿಯಾಗಿ ಭಕ್ತರ ಸರ್ವರ ದಿವ್ಯೌಷಧಿಯಾಗಿದ್ದರು ಎಂಬ ಮಾತನ್ನು-

ತತ್ವವೇ ತಾನಾದ ಗುರುವರ
ಸತ್ಯವೇ ಶಿವನೆಂದ ಯತಿವರ
ಮತ್ತೆ ಧನ್ವಂತರಿಯು ಜೀವದ ಸರ್ವರುಜೆಗಳಿಗೆ ॥

(ಶ್ರೀ ಗೌರಿಶಂಕರ ಚ.ಪು. ಪೀಠಿಕಾ ಪದ್ಯ : ೩).

ಎಂದಾಗಿ ಹೇಳುವ ಕವಿಯು ಹೀಗೆ ತಪೋನಿಷ್ಠ ಸಾಧಕರಾಗಿ, ಮಾನವ ಕಲ್ಯಾಣದ ಗುರುತರ ಜವಾಬ್ದಾರಿಯನ್ನು ಹೊತ್ತ ಶ್ರೀ ಸ್ವಾಮಿಗಳು ನೆಲೆಸಿದ ಸ್ಥಳವೇ ಪುಣ್ಯಕ್ಷೇತ್ರವಾಯಿತೆನ್ನುವುದನ್ನು ಹೀಗೆ ವಿವರಿಸುತ್ತಾರೆ -

ಕಾಶಿ ರಾಮೇಶ್ವರಕೆ ಪೋಗಲು
ಆಸೆ ಹೋಗದು ಗುರುವೆ ಮನಸ್ಸಿನ
ದೋಷವರ ಕಳೆವಂತ ಕ್ಷೇತ್ರವ ಕಾಣೆನಾ ಜಗದೀ
ನಾಶವಾಯಿತು. ಮನದ ಆಸೆಯು
ನಿರಾಸೆ ವಸ್ತುವೇ ನಿನ್ನ ಕಾಣಲು ॥

(ಶ್ರೀ ಗೌರಿಶಂಕರ ಚ.ಪು. ಪೀಠಿಕಾ ಪದ್ಯ : ೯).

ಶ್ರೀ ಗೌರಿಶಂಕರರು ಕೇವಲ ತತ್ವಾನುಷ್ಠಾನ ಗೈಯ್ಯದೇ ಅನುಸಂಧಾನ ಮಾಡಿದವರು. ತಮ್ಮಂತೆ ಭಕ್ತರ ಬದುಕನ್ನು ಪಾವನಗೊಳಿಸಿದ ಪವಿತ್ರಾತ್ಮರು ಎಂಬುದನ್ನು ಈ ಕೃತಿಯು ತಿಳಿಸುವುದು. ಅಳಿದು ಹೋಗುವ ಸ್ಥಾವರ ಆಸ್ತಿಗೆ ಮನ ಎಳಸದೆ, ಲಿಂಗ ಪೂಜಾನುಷ್ಠಾನ ಪಾರಮಾರ್ಥಸಂಪದ ಗಳಿಸುವಲ್ಲಿ ಇಡೀ ಆಯುಷ್ಯವನ್ನು ವಿನಿಯೋಗಿಸಿ ಎಂದು ನಮ್ರತೆ ಮೆರೆದಿದ್ದಾರೆ. ಅದರ ಲಾಭವನ್ನು ಸ್ವಾರ್ಥಕ್ಕೆ ಬಳಸದೇ ಸಮಾಜಕ್ಕೆ, ನಂಬಿದ ಭಕ್ತರಿಗೆ ಧಾರೆಯೆರೆದು ಲೋಕಾರ್ಥರೆನಿಸಿದ್ದಾರೆ. ತಾವು ಗಳಿಸಿದ ಆಂತರಿಕ ಸಂಪತ್ತನ್ನು ತಮ್ಮ ಭಕ್ತರು ಸಂಪಾದಿಸಬೇಕೆಂಬ ಸದುದ್ದೇಶದಿಂದ ಹಗಲು-ರಾತ್ರಿ ಶ್ರಮಿಸಿ ಅವರು ತಮ್ಮ ಪಾಲಿನ ಶಿಷ್ಯೋದ್ಧಾರದ ಕರ್ತವ್ಯಕ್ಕೆ ಚ್ಯುತಿ ಬಾರದ ಹಾಗೆ ಪಾಲಿಸಿ ಪುಣ್ಯ ಶ್ಲೋಕಗಳಾಗಿರುವರು ಎಂದು ಕವಿ ಬಣ್ಣಿಸಿದ್ದಾರೆ.

ಇವರು ಪೀಠಾಧ್ಯಕ್ಷತೆ ವಹಿಸಿದ ಮಠದಲ್ಲಿ ಯಾವ ಸುಖಭೋಗದ ಆಡಂಬರವಿಲ್ಲದೆ ಸಹಜವಾಗಿ ಬದುಕುತ್ತ ಭಕ್ತರ ಮನದಲ್ಲಿ ಜೀವನ ಮೌಲ್ಯಗಳನ್ನು ಬಿಂಬಿಸಿದವರು. ಇವರ ಮಾತುಗಳೇ ಇವರ ವ್ಯಕ್ತಿತ್ವವನ್ನು ಪರಿಚಯಿಸುತ್ತದೆ. "ಯಾವ ಲೌಕಿಕ ವಸ್ತುಗಳನ್ನು ಸಂಗ್ರಹಿಸಬಾರದು, ಸಂಗ್ರಹ ಮಾಡಲು ಮನಸ್ಸು ಮಾಡಿದರೆ ಇನ್ನೂ ಸಂಗ್ರಹ ಮಾಡಬೇಕೆಂಬ ಬುದ್ಧಿ ಹೆಚ್ಚುತ್ತಲೆ ಹೋಗುತ್ತದೆ. ಮಠಕ್ಕೆ ಭಕ್ತರು ಏನಾದರೂ ಕೊಟ್ಟರೆ ನಮ್ಮ ಜಪ-ತಪಗಳನ್ನು ಬಿಟ್ಟು ಅವುಗಳನ್ನು ಕಾಯುತ್ತ ಕೂಡಲೆ" ಎಂದು ಹೇಳುವ ಮಾತುಗಳು ಅವರ ಹೃದಯ ವೈಶಾಲ್ಯತೆ ಮತ್ತು ವೈರಾಗ್ಯದ ಗಟ್ಟಿ ನಿಲುವಿಗೆ ಸಾಕ್ಷಿ ನುಡಿಯುತ್ತವೆ.

ಶರಣರು ಹೇಳುವ ಅನ್ನದಾಸೋಹದ ಮೂಲ ಮಂತ್ರ ಕಾಯಕ ತತ್ವಕ್ಕೆ ಮಹತ್ವ ನೀಡಿದ ಇವರು ಅನ್ನದಾನ ಶ್ರೇಷ್ಠದಾನ ನಿಜ. ಆದರೆ ಅನ್ನದಾಸೋಹದಿಂದ ಸೋಮಾರಿಗಳು ಹೆಚ್ಚುವರು ಕಾರಣ ಜನರನ್ನು ಸೋಮಾರಿಗಳಾಗಿ, ಪರಾವಲಂಬಿಗಳಾಗಿ ಮಾಡುವ ಬದಲು ಅನ್ನಗಳಿಸುವ ಮಾರ್ಗ ತೋರಿ ಸ್ವಾವಲಂಬಿಗಳನ್ನಾಗಿ ಮಾಡಿರಿ ಎಂದು ಶ್ರಮ ಸಂಸ್ಕೃತಿಯ ಪ್ರಾಧಾನ್ಯತೆಯನ್ನು ಬಿಂಬಿಸಿದರು.

೩.೨.೨. ಶ್ರೀ ಗುಡ್ಡಾಪುರ ದಾನಮ್ಮದೇವಿ ಪುರಾಣ

ಶ್ರೀ ರಾಮಣ್ಣ ಬ್ಯಾಟಿಯವರಿಂದ ಭಾಮಿನಿ ಷಟ್ಪದಿಯಲ್ಲಿ ರಚಿತವಾದ ದೀರ್ಘಕಾವ್ಯವಾಗಿದ್ದು, ಈ ಕಾವ್ಯವು ೨೪ ಅಧ್ಯಾಯಗಳು ಹಾಗೂ ೧೩೦೩ ಭಾಮಿನಿ ಷಟ್ಪದಿ ಪದ್ಯಗಳನ್ನು ಒಳಗೊಂಡಿದೆ.

ಶರಣ ಸ್ವರೂಪದಿಂದ ಪ್ರಾರಂಭವಾಗಿ ಆಧುನಿಕ ಪೂರ್ವಯುಗದವರೆಗೆ ಹರಿದು ಬರುವ ದಾನಮ್ಮನ ಚರಿತ್ರೆಯು ಸಹ ಸ್ಪಷ್ಟವಾದ ಚಾರಿತ್ರಿಕ ದಾಖಲೆಗಳು ದೊರೆಯದೆ ಅಂತೆ-ಕಂತೆಗಳ ಸಂತೆಯಾಗಿ ಕವಿಯ ಕಲ್ಪಿತ ಘಟನೆ ಹಾಗೂ ಪವಾಡಗಳ ಸುತ್ತ ಸುಳಿದು ಗ್ರಾಮ ಮಟ್ಟದ ದೇವತಾ ಸ್ವರೂಪ ಪಡೆದಿದೆ. ಇದಕ್ಕೆ ಸಂಬಂಧ ಪಟ್ಟಂತೆ ದಾಖಲೆಗಳನ್ನು ಕಲೆ ಹಾಕಲು ಪ್ರಯಾಸಪಟ್ಟ ಕವಿಗಳು ಅದನ್ನು ಕುರಿತಂತೆ 'ಹಲವಾರು ಗ್ರಂಥಗಳನ್ನು ಕಲೆ ಹಾಕಿಕೊಂಡು ಅವುಗಳನ್ನೆಲ್ಲ ಅವಲೋಕನ ಮಾಡಿದ್ದೇನೆ. ಅವುಗಳಲ್ಲಿಯ ಕೆಲವು ಪ್ರಸಂಗಗಳು ನನಗೆ ಎಡರು-ತೊಡರಾಗಿ ಕಾಡಿದವು. ಯಾವುದು ಚರಿತ್ರೆಯ ದೃಷ್ಟಿಯಿಂದ ಸಮಂಜಸವೊ ಅದನ್ನು ಮಾತ್ರ ಈ ಗ್ರಂಥದಲ್ಲಿ ಅಳವಡಿಸಿಕೊಂಡಿದ್ದೇನೆ' ಎಂದು ಹೇಳಿಕೊಂಡಿದ್ದಾರೆ.

ವಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ 'ಉಮರಾಣಿ' ಎಂಬ ಹಳ್ಳಿಯ ವಿಶ್ವಕರ್ಮ ಬ್ರಾಹ್ಮಣ (ಪಂಚಾಳ-ಪತ್ತಾರ) ಕುಲದ ಅಕ್ಕಸಾಲಿಗ 'ಶ್ರೀ ಅನಂತರಾಯ' ಮತ್ತು 'ಸಿರಸಮ್ಮ' ದಂಪತಿಗಳಿಗೆ ಶಿವಕಾರುಣ್ಯದಿಂದ ಜನಿಸಿದ ಲಿಂಗಮ್ಮನ ಅರ್ಥಾತ್ ದಾನಮ್ಮದೇವಿಯ ಹುಟ್ಟನ್ನು ಕುರಿತು ಹೀಗೆ ವರ್ಣಿಸಿದ್ದಾರೆ.

ಹರನ ಕರುಣೆಯ ಮುಡಿಯ ಮಲ್ಲಿಗೆ
ಧರಣಿಯೊಳವತರಿಸಿ ಸುಜನರ
ದುರಿತವ ಕಳೆಯಲು ಬಂದ ಶಿಶು ಲಿಂಗಮ್ಮ ॥

(ಶ್ರೀ ಗುಡ್ಡಾಪುರ ದಾನಮ್ಮದೇವಿ ಪುರಾಣ. ಪುಟ : ೩೨, ಪದ್ಯ : ೨೧)

ದಾನಮ್ಮ ಬೆಳೆಯುತ್ತಾ ಹೋದಂತೆ ಬಾಲ್ಯದಲ್ಲಿರಬೇಕಾದ ಮಾನವ ಸಹಜ ಮಕ್ಕಳ ಆಟಪಾಟಗಳ ಬಯಕೆಗೆ ಬದಲಾಗಿ ದೈವಿಕವಾದ ಚಿಂತನೆಯ ಸುಳುಹುದೋರುವ ಸೃಷ್ಟಿ-ಸ್ಥಿತಿ-ಲಯದ ಬಗೆಗೆ ತೀವ್ರ ಕುತೂಹಲವುಳ್ಳಾಗಿದ್ದಳು. ಗುರು 'ವೀರಯ್ಯ'ನವರಿಂದ 'ಓಂಕಾರ' ಮತ್ತು 'ಪಂಚಾಕ್ಷರಿ ಮಂತ್ರೋಪದೇಶ'ವನ್ನು ತಿಳಿದ ಲಿಂಗಮ್ಮನು ಮೌಲಿಕ ತತ್ವಗಳಾದ ಭೂಮಿ, ಅನ್ನದಾನಗಳ ಬಗೆಗೂ ತಿಳಿದವಳಾಗಿದ್ದಳು. ಶರಣ ಸಿದ್ಧರಾಮರನ್ನು ಭೆಟ್ಟಿಯಾಗಿ ಅವರಿಂದ ದಾರ್ಶನಿಕ ವಿಷಯಗಳನ್ನು ತಿಳಿದಳು. ಮದುವೆ ಪ್ರಸ್ತಾಪ ಬಂದಾಗ ದೈವೇಚ್ಛೆಯಂತೆ ಕಲ್ಯಾಣದತ್ತ ಹೊರಟು ದಾರಿಯಲ್ಲಿ ತುತ್ತು ಅನ್ನಕ್ಕೂ ಗತಿಯಿಲ್ಲದ ಮಾದೇವಿಯ ಉದ್ಧಾರ, ಪತಿಭಕ್ತಿ ಮಾಡುವ ಮೂಲಕ ಪತಿ ಬರುವನೆಂಬ ಭರವಸೆಯನ್ನು ಗೌರಮ್ಮನಲ್ಲಿ ಮೂಡಿಸಿ, ಮಗಳನ್ನೇ ವೇಶ್ಯೆ ಮಾಡಲು ಹೊರಟ ತಾಯಿ ದೇವದಾಸಿಯನ್ನು ಪರಿವರ್ತಿಸಿದಳು. ಹೀಗೆ

ನೊಂದ ಭಕ್ತರ ಸಮಸ್ಯೆಗಳನ್ನು ಪರಿಹರಿಸುತ್ತಾ ನಡೆದಳು. ಮುಂದೆ ಡಫಳೆ ಜತ್ತಸಂಸ್ಥಾನದ ಯಶೋಧಾಬಾಯಿಯ ಸ್ವಪ್ನದಲ್ಲಿ ಕಾಣಿಸಿಕೊಂಡು ಹೇಳಿದ ರೀತಿಯಲ್ಲಿ ಸೋಮನಾಥನೊಂದಿಗೆ ದಾನಮ್ಮನ ವಿವಾಹವಾಗುವದು. ಬಳಿಕ ದಂಪತಿಗಳು ಆದವಾನಿಯಲ್ಲಿ ಪೂಜೆಗೊಂಡು ಸಮೀಪದ ಹಾಲ್ವಿಯಲ್ಲಿ ಶಂಕ್ರಪ್ಪ ಗಂಗಮ್ಮರಿಗೆ ಸಂತಾನ ಭಾಗ್ಯ ನೀಡುವದು ಮತ್ತು ಮನಗೂಳಿಯಲ್ಲಿ ಸತ್ತ ಮಗುವಿಗೆ ಜೀವದಾನ ಹಾಗೂ ಅಲ್ಲಿಯ ಕಲ್ಲು ಬಸವನಿಗೆ ಕಬ್ಬು ತಿನಿಸುವದು ಮುಂತಾದ ಪವಾಡಗಳನ್ನು ಮೆರೆಯುವಳು. ಅಲ್ಲಮಪುರದ ವೀರನಾಚಯ್ಯನ ನಿವೇದನೆಯನ್ನು ಮನ್ನಿಸಿ "ಧರ್ಮ ರಕ್ಷಣೆಗಾಗಿ ಕರದಿ ಖಡ್ಗ ಹಿಡಿದು ಶೌರಿ ದಾನಮ್ಮ"ನಾಗಿ ವೈಷ್ಣವರಿಗೆ ಧರ್ಮದ ಅರಿವನ್ನು ಮೂಡಿಸುವಳು. ಕಂಚಿ ಪಟ್ಟಣದಲ್ಲಿ ವಿಷ್ಣುದರ್ಶನಕ್ಕೆಂದು ಹೋದಾಗ ಅನ್ಯಮತೀಯಳೆಂದು ಒಳಗೆ ಬಿಡದೆ ಅವಳನ್ನು ಬಂಧಿಸುವಂತೆ ಆಜ್ಞಾಪಿಸಿದ ಅರಸನ ರೋಗ ನಿವಾರಣೆ ಮಾಡಿ ದೇವರ ತಿಳುವಳಿಕೆ ಕೊಟ್ಟು, ಸಮಸ್ಯೆಗಳನ್ನು ಎದುರಿಸುತ್ತಿರುವ ನೊಂದ ಭಕ್ತರ ಕಣ್ಣೀರನ್ನೊರೆಸುತ್ತ, ಆನೇಕ ತೀರ್ಥ ಕ್ಷೇತ್ರಗಳ ದರ್ಶನ ಮಾಡುತ್ತ ಬಸವನ ಬಾಗೇವಾಡಿಗೆ ಬರುವಳು. ಬಸವನ ಬಾಗೇವಾಡಿಯ ಕಲ್ಲುಬಸವನಿಗೆ ಎಡೆ ತಿನಿಸುವದು, ಭಕ್ತ ಕೊಟ್ಟ ಕಡಲೆಗಳನ್ನು ದಾನಮ್ಮ ಉಳಿದವರಿಗೆ ಹಂಚಿದಾಗ ಬಂಗಾರವಾಗುವ ಪವಾಡಗಳು ನಡೆಯುತ್ತವೆ.

ಒಟ್ಟಾರೆ ಪರೋಪಕಾರ, ಆದರ್ಶ ಗೃಹಿಣಿ, ವೈರಾಗ್ಯನಿಧಿ, ಗುರು ಎಂಬ ಮೌಲ್ಯಗಳ ಹಿನ್ನೆಲೆಯಲ್ಲಿ ದಾನಮ್ಮನ ವ್ಯಕ್ತಿತ್ವವು ಕಾಣಿಸಿಕೊಂಡಿದೆ.

ಕವಿ ಪೀಠಿಕಾ ಗುರುಸ್ತುತಿಯಲ್ಲಿ ದಾನಮ್ಮನ ವ್ಯಕ್ತಿತ್ವವನ್ನು ಕುರಿತು–

ಮಂಗಳಾಂಗಿನಿ ಲಿಂಗರೂಪಿಣಿ
ಲಿಂಗಪರಿಭವ ಭಂಗ ಧೂರಿಣಿ
ಕಂಗಳಾಲಯದೊಳಗೆ ಕಂಗೊಳಿಸುವಳು ದಾನಮ್ಮಾ ।
ಸಂಗಮೇಶನ ಪೂಜಿಸಿದ ಫಲ
ಗಂಗೆಯಂದದಿ ಚರಿಸಿ ಧರೆಯೊಳು
ಭಂಗಪಟ್ಟವರನ್ನು ಉದ್ಧರಿಸುವೆ ॥ (ಪುಟ : ೨ ಪದ್ಯ : ೬)

ಎಂದು ಮಂಗಳಾಂಗಿನಿಯಂತೆ ಈ ಪದ್ಯದಲ್ಲಿ ಚಿತ್ರಿಸಿದ್ದಾರೆ. ದಾನಮ್ಮನನ್ನು ಜ್ಞಾನದ ಕಣ್ಣಾಗಿ ಕಂಡ ಕವಿ

ಹೆಣ್ಣು ತಾ ಹೆಣ್ಣಲ್ಲ ಜ್ಞಾನದ
ಕಣ್ಣು ಈ ಜಗಕ್ಕಾಗಿ ಬಂದಳು
ಇನ್ನು ಅಂಜುವಿರೇಕೆ ಪಾರ್ವತಿ ಪತಿಯು ಅವಳಿಂದೆ ॥

(ಪುಟ : ೧೩೬, ಪದ್ಯ : ೨೮)

ಎಂದಾಗಿ ವಿವರಿಸುತ್ತಾರೆ.

ಆದರೆ ಮುಂದೆ ದಾನಮ್ಮನು ಎಲ್ಲಿಗೆ ಹೋದಳೆಂಬ ವಿಚಾರಗಳು ಅಸ್ಪಷ್ಟವಾಗಿ ಕಂಡುಬರುತ್ತವೆ. ಸರ್ವವನ್ನು ದೈವಸ್ವರೂಪವಾಗಿ ಕಾಣುವ ಭಾವವು ಕಾವ್ಯದಲ್ಲಿ ಅಲ್ಲಲ್ಲಿ ಹೀಗೆ ವ್ಯಕ್ತವಾಗಿದೆ.

ಸಲ್ಲಲಿತ ಭಾರತೀಯ ಧರ್ಮದ
ಲೆಲ್ಲಡೆಗು ದೈವತ್ವ ಕಾಣುವ
ಕಲ್ಲು ಕಾಷ್ಟವು ಮರಳರಾಸಿಯು ತನುಮನಂಗಳಲಿ
ಮೆಲ್ಲನರಿಯುವ ಗೋವಿನಲಿ ಸಹ
ಮಲ್ಲಿನಾಥನೆ ತುಂಬಿಕೊಂಡಿದನೆಂದು ಪೂಜಿಪೆವು ॥

(ಪುಟ : ೧೮೪, ಪದ್ಯ : ೧೩)

ಸ್ವಭಾವೋಕ್ತಿ ಅಲಂಕಾರವನ್ನು ವ್ಯಕ್ತಪಡಿಸುವ ಸೂರ್ಯೋದಯ-ಸೂರ್ಯಾಸ್ತ, ಚಂದ್ರೋದಯದ ಉದಾಹರಣೆಗಳು ಕವಿ ಭಾವದ ಕಣ್ಣಿಂದ ಕಂಡಿರುವನೆಂಬ ಸಂಗತಿಯನ್ನು ಹೇಳುತ್ತವೆ. ಬಗೆಗಣ್ಣಿಂದ ಕಂಡ ಕವಿ ಅದನ್ನು ವರ್ಣಿಸುವುದು ಹೀಗೆ :

ಶಶಿಯು ಮೂಡುವ ಇರುಳಿನಂತರ
ಕುಸುಮ ಕೋಮಲ ಗೀತ ಕಿರಣದಿ
ಅಸಮ ಚೇತನವೀವ ಸಸ್ಯಾದಿಗಳು ತರುಲತೆಗೆ ॥

(ಪುಟ : ೪೨ ಪದ್ಯ : ೧೭)

ಹೀಗೆ ಶರಣರ, ಬಾಲಕಿ ಲಿಂಗಮ್ಮನ ಹಾಗೂ ಲಿಂಗಮ್ಮನಿಗೆ ಇಷ್ಟಲಿಂಗದ ಮೇಲಿರುವ ಪ್ರೀತಿಯನ್ನು ವರ್ಣಿಸುವ, ದೃಶ್ಯಗಳನ್ನು ಕಟ್ಟುವ ವಿಧಾನವು ಕಾವ್ಯದಲ್ಲಿ ಪೂರ್ಣ ಶಕ್ತಿಯನ್ನು ಪಡೆದುಕೊಂಡಿದೆ.

೩.೨.೩. ಶ್ರೀ ನೀಲಕಂಠೇಶ್ವರ ಪುರಾಣ

ಶ್ರೀ ನೀಲಕಂಠೇಶ್ವರ ಪುರಾಣವು ಶ್ರೀ ರಾಮಣ್ಣ ಬ್ಯಾಟಿಯವರು ರಚಿಸಿದ ನಾಲ್ಕನೆಯ ಷಟ್ಪದಿ ಕಾವ್ಯವಾಗಿದೆ. ಈ ಕೃತಿಯು ಸ್ವಾಮಿಗಳ, ಶರಣ-ಶರಣೆಯರ ಪವಾಡಗಳ ಸಂತೆಯಾಗದೆ ಶೈವ-ವೈಷ್ಣವ ಮೊದಲಾದ ಪೌರಾಣಿಕ ವಸ್ತುವನ್ನು ಕಥೆಯ ರೂಪದಲ್ಲಿ ಹೊಂದಿದ್ದು, ಪುರಾಣ ಕಾವ್ಯಗಳಿಗಿಂತ ವಿಶೇಷ ಸ್ವರೂಪವನ್ನು ಪಡೆದುಕೊಂಡಿದೆ. ೩೪ ಅಧ್ಯಾಯಗಳ ೧೦೯೬ ಪದ್ಯಗಳ ಹರವನ್ನು ಹೊಂದಿದೆ.

ಶೈವ ಪುರಾಣಗಳನ್ನು ಅನುಸರಿಸಿ ಬರೆದ ಈ ಕಾವ್ಯವು ಶಿವಪಾರಮ್ಯದ ಜೊತೆಗೆ ವಿಷ್ಣು, ಲಕ್ಷ್ಮೀ, ಗೌರಿ ಮೊದಲಾದವರ ಕಥೆಗಳನ್ನು ಪ್ರಾಸಂಗಿಕವಾಗಿ ಹೇಳುತ್ತ ಸಮುದ್ರ ಮಥನವಾದ ಸಂದರ್ಭದಲ್ಲಿ ಹೊರಟ ಕಾರ್ಕೋಟ(ಮಹಾವಿಷ)ವನ್ನು ಲೋಕಕಲ್ಯಾಣಕ್ಕಾಗಿ

ಕುಡಿದ ಪರಶಿವನು ನೀಲಕಂಠನಾದ ಭಾಗವೇ ಈ ಪುರಾಣದ ಹೃದಯಭಾಗವಾಗಿದೆ. ಈ ಕಾವ್ಯದ ಕೊನೆಯ ಅಧ್ಯಾಯದಲ್ಲಿ ಕುರುವಿನಶೆಟ್ಟಿ ಕುಲದವರ ಉದಯ, ಅವರ ಕಾಯಕ, ಅವರ ಗುರುಮಠ ಮತ್ತು ಗುರುಪರಂಪರೆಯ ಕುರಿತು ಸುಮಾರು ೬೬ ಪದ್ಯಗಳಲ್ಲಿ ಕಾವ್ಯಮಯವಾಗಿ ಹೇಳಲ್ಪಟ್ಟಿದ್ದು, ಒಟ್ಟಾರೆ ಕುರುವಿನಶೆಟ್ಟಿ ಕುಲ ಬಾಂಧವರ ಪ್ರಾರಂಭಿಕ ಇತಿಹಾಸವೇ ತೆರೆದುಕೊಳ್ಳುತ್ತದೆ.

ಈ ಕಾವ್ಯವು ಅಪ್ಪಟ ಪುರಾಣದ ಹಿನ್ನೆಲೆಯನ್ನು ಹೊಂದಿದ ವಸ್ತುವನ್ನು ಒಳಗೊಳ್ಳಲು ಹುಬ್ಬಳ್ಳಿಯ ನೀಲಕಂಠಮಠ ಮತ್ತು ಸ್ವಾಮಿಗಳ ಒತ್ತಾಸೆ, ಅಲ್ಲಿನ ವೀರ ಭಿಕ್ಷಾವರ್ತಿಮಠ ಮತ್ತು ಕುರುಹಿನ ಶೆಟ್ಟಿ ಸಮಾಜದ ಬಂಧುಗಳು ಕೃತಿಯ ಪ್ರಕಟಣೆಯ ಹಿಂದಿರುವ ಶಕ್ತಿಕಾರಣವಾಗಿದ್ದು, ಕವಿಯು ಕಾವ್ಯರಚನೆಗೆ ಪರಮ ಪ್ರೇರಕ ಶಕ್ತಿಯಾಗಿರುವ ಗದುಗಿನ ತೋಂಟದ ಸಿದ್ಧಲಿಂಗ ಶ್ರೀಗಳನ್ನು ಕಾವ್ಯದುದ್ದಕ್ಕೂ ನೆನೆಯುತ್ತಾ ಸಾಗಿದ್ದಾರೆ.

ನೀಲಕಂಠೇಶ್ವರ ಪುರಾಣ ಕಾವ್ಯವು ಕೇವಲ ಪುರಾಣ ಕೂಪವಾಗದೆ, ಪುರಾಣ ಪುಣ್ಯಜಲದಿಂದ ಕೂಡಿದ ಭಕ್ತಿಯ ಮಡುವಾಗಿದೆ. ಶಿವನು ನೀಲಕಂಠನಾಗಿ ಶ್ರೀ ಶೈಲ ನಿವಾಸಿಯಾದ ಕಾಲದಲ್ಲಿಯೇ ನೀಲಕಂಠ ಮಠವು ಇಲ್ಲಿಯೇ ನಿರ್ಮಾಣವಾದ್ದರಿಂದ ಶ್ರೀಶೈಲದ ವರ್ಣನೆಯೊಂದಿಗೆ ಈ ಕಾವ್ಯವು ಪ್ರಾರಂಭವಾಗುತ್ತದೆ. ಇಲ್ಲಿಯ ವೀರಭಿಕ್ಷಾವರ್ತಿಮಠದ ಆಧಿಪತಿಗಳೇ ಹುಬ್ಬಳ್ಳಿಯ ನೀಲಕಂಠ ಮಠದ ಮೂಲ ವ್ಯಕ್ತಿಗಳು. ಶ್ರೀಶೈಲಕ್ಷೇತ್ರವು ವೀರಶೈವ ಭಕ್ತರ ಆರಾಧನೆಯ ಕೇಂದ್ರವಾಗಿದೆ. "ಶ್ರೀಶೈಲ ಶಿಖರಂ ದೃಷ್ಟ್ವಾಪುನರ್‌ಜನ್ಮ ನವಿದ್ಯತೇ" ಎಂದಾಗಿ ಕವಿಯು ಶ್ರೀಶೈಲ ಕ್ಷೇತ್ರವನ್ನು ವರ್ಣಿಸುವರು. ಇಲ್ಲಿಯ ವೀರ ಭಿಕ್ಷಾವರ್ತಿಮಠದ ಗುರುಗಳು ತಮ್ಮ ಬಳಗದೊಂದಿಗೆ ಶ್ರೀ ಶೈಲದ ಪಾದಯಾತ್ರೆಗೆ ಸನ್ನದ್ಧರಾದಾಗ ಈರಪ್ಪನೆಂಬ ಪಾಪಿ, ವ್ಯಭಿಚಾರಿ ಕಳ್ಳನು ಪೂಜ್ಯರ ಸಾನಿಧ್ಯ ಪ್ರಭಾವದಿಂದ ಕಳ್ಳತನ ತೊರೆದು ಪಾದಯಾತ್ರೆಯುದ್ದಕ್ಕೂ ಏಕನಿಷ್ಠೆಯಿಂದ ಶಿವೋಪಾಸನೆ ಮಾಡಿ ಶಿವಸಾಯುಜ್ಯ ಪಡೆಯುವ ಕಥಾ ಭಾಗವು 'ಕಳ್ಳನಿಗೂ ಕೈವಲ್ಯ ಪ್ರಾಪ್ತಿ' ಎಂಬ ಅಧ್ಯಾಯದಲ್ಲಿ ಮನಮುಟ್ಟುವಂತೆ ಮೂಡಿ ಬಂದಿದೆ.

ಶ್ರೀ ಶೈಲ ಕ್ಷೇತ್ರದ ಚರಿತೆಯು ಈ ಕೃತಿಯಲ್ಲಿ ವಿಶೇಷವಾದ ಮಹತ್ವನ್ನು ಪಡೆದುಕೊಂಡಿದೆ. ಕೃತಯುಗದಲ್ಲಿ 'ಸಿಲಾಧ'ನು ಭೂಮಿ ಪಾಲಿಪ ಪುತ್ರರಿಗಾಗಿ ಶಿವನನ್ನು ಕುರಿತು ತಪಸ್ಸನ್ನು ಮಾಡಿದ ಪಾವನ ಕ್ಷೇತ್ರವಾಗಿದೆ. ಅವರೇ ಶ್ರೀಶೈಲಗಿರಿಯಾದ 'ಪರ್ವತ' ಹಾಗೂ ಶಿವನ ವಾಹನವಾದ 'ನಂದಿ'ಯರು. ಭ್ರಮರಾಂಭೆ ಕಥಾನಕ, ಕೈಲಾಸ ವರ್ಣನೆ ಮೊದಲ್ಗೊಂಡು ಕಥೆಯು ಮುಂದುವರಿಯುತ್ತದೆ.

ಮುಖ್ಯ ಕಥಾಭಾಗವಾದ ತಾರಕಾಸುರ, ದಕ್ಷ–ದಾಕ್ಷಾಯಣಿ–ಪಾರ್ವತಿ–ಷಣ್ಮುಖರ ಜನನ, ತಪಸ್ಸಿಗೆ ಕುಳಿತ ವಿರಹಿ ಶಿವನಲ್ಲಿ ದೇವತೆಗಳು ಲೋಕಕಂಟಕ ತಾರಕಾಸುರನನ್ನು ಸಂಹರಿಸುವಂತೆ ಅರಿಕೆ ಮಾಡುವದು, ಶಿವ–ಪಾರ್ವತಿಯರ ಸಮಾಗಮ, ಷಣ್ಮುಖನ ಜನನ ಹಾಗೂ ತಾರಕಾಸುರನ ಸಂಹಾರ, ಪಾರ್ವತಿಯ ಮೂಲಕ ವಿಭೂತಿಯ ಮಹಿಮೆಯನ್ನು ಜಗತ್ತಿಗೆ ತಿಳಿಸುವ ಭಾಗಗಳು ಅರ್ಥವತ್ತಾಗಿ ಚಿತ್ರಣಗೊಂಡಿವೆ.

ಶ್ರೀಶೈಲದ ಚರಿತ್ರೆ ಮತ್ತು ಮಲ್ಲಿಕಾರ್ಜುನ ಶಬ್ದದ ನಿಷ್ಪತ್ತಿಯನ್ನು ಹೇಳುವುದರ ಜೊತೆಗೆ ಚಂದ್ರಗುತ್ತಿ ಅರಸನು ಮಗಳ ಮೇಲೆ ಮೋಹಗೊಳ್ಳುವ ವಿಕೃತ ಕಾಮ (ಈಡಿಪಸ್ ಕಾಂಪ್ಲೆಕ್ಸ್)ವನ್ನು ಪ್ರತಿನಿಧಿಸುವ ಈ ಘಟನೆಯನ್ನು ಕವಿಯು ಪೌರಾಣಿಕ ಘಟನೆಗಳಿಗೆ ಹೋಲಿಸಿ ಅತ್ಯಂತ ಹೃದಯಂಗಮವಾಗಿ ಚಿತ್ರಿಸುತ್ತಾರೆ–

ಮಗಳ ಮೋಹಿಸಿ ಬ್ರಹ್ಮದೇವನು
ಜಗದ ಪೂಜ್ಯತೆ ಕಳೆದುಕೊಂಡನು
ಸುಗುಣವಂತನೆ ಕೇಳು ಧರ್ಮದ ದಾರಿ ತಪ್ಪಿದೊಡೆ
ಗಗನ ಬೆಳಗುವ ಚಂದ್ರದೇವನು
ಸೊಗಸಿನಿಂ ಶ್ರೀ ಲೋಲನಾಗುತ
ಬಗೆ ಬಗೆಯ ಭಾವದಲಿ ಗುರುಸತಿ ಮೋಹಿಸುತಿರಲು

(ಶ್ರೀ ನೀಲಕಂಠೇಶ್ವರ ಪುರಾಣ. ಪುಟ : ೪೩, ಪದ್ಯ : ೧೫)

ಎಂದು ಕವಿಯು ಈ ಘಟನೆಯನ್ನು ವಿವರಿಸುತ್ತಾರೆ. ಒಟ್ಟಾರೆ ಈ ಕೃತಿಯು ಕೇಳುವ ಸಹೃದಯರ ಮನೋಭಾವನೆಗೆ ತಕ್ಕಂತಿದೆ.

ಕಾವ್ಯದ ಕೊನೆಯ ಆಧ್ಯಾಯದಲ್ಲಿ ಹುಬ್ಬಳ್ಳಿಯ ಗುರುಪೀಠದ ವಿವರಗಳ ಜೊತೆಯಲ್ಲಿ ಬ್ರಿಟಿಷ್ ಅಧಿಕಾರಿ 'ಥ್ಯಾಕರೆಯ ಪ್ರಸಂಗ'ವು ಉಲ್ಲೇಖಗೊಂಡಿದೆ. ಥ್ಯಾಕರೆಯ ಮಡದಿಯ ರೋಗವನ್ನು ಹುಬ್ಬಳ್ಳಿಯ ಸ್ವಾಮಿಗಳು ಗುಣಪಡಿಸಿ, ಅವನ ಮನದ ಅನುಮಾನಗಳನ್ನು ಹೋಗಲಾಡಿಸಿ ಆತನ ಕಣ್ಣನ್ನು ತೆರೆಯಿಸಿದರು. ಸ್ವಾಮಿಗಳ ನಿಸ್ವಾರ್ಥ ಸೇವೆಯನ್ನು ಕಂಡ ಥ್ಯಾಕರೆ ಅವರಿಗೆ ಸಂಪತ್ತನ್ನು ನೀಡಲು ಹೋದಾಗ ನಿರಾಕರಿಸಿದರು. ಇಲ್ಲಿ ಸ್ವಾಮಿಗಳ ನಿಷ್ಕಾಮ ಭಾವದ ಜೊತೆಗೆ ಸಮಾಜಸೇವೆ, ಮಾನವಕಲ್ಯಾಣ ಗುಣಗಳು ವ್ಯಕ್ತಗೊಂಡಿವೆ. ಈ ಘಟನೆಯಿಂದಾಗಿ ಮಠದ ಇತಿಹಾಸ, ಸ್ವಾಮಿಗಳ ಚರಿತ್ರೆಯು ಉಜ್ವಲಗೊಂಡಿದ್ದು ಕಾವ್ಯಕ್ಕೆ ಒಂದು ವಿಶೇಷ ತಿರುವನ್ನು ತಂದುಕೊಟ್ಟಿದೆ. ಸ್ವಾಮಿಗಳು ಪ್ರತಿಯೊಬ್ಬ ಸಾಮಾನ್ಯ ವ್ಯಕ್ತಿಯು ದೈವಿ ಅನುಭೂತಿ ಹೊಂದಲು ಸಾಧ್ಯ ಎಂಬುದನ್ನು ಕವಿಗಳು ಹೀಗೆ ಹೇಳುತ್ತಾರೆ.

ಶಿವನ ನಾಮಾಮೃತವ ನೆನೆಯುತ
ಭವದೊಳಿಂದೆ ಆನಂದ ಶರಣರು
ಕವಿದ ಮನದಜ್ಞಾನ ಕಳೆಯುತ ಶಿವನೆ ತಾನಾಗಿ । (ಪುಟ : ೨೯೪, ಪದ್ಯ-೨೬.)

ಹೀಗೆ ಸಾಮಾನ್ಯರಲ್ಲಿಯೂ ಭಕ್ತಿ ಭಾವ ತುಂಬಿದೆ ಎಂದು ವಿವರಿಸುವರು. ಸ್ವಾಮಿಗಳು, ದಾರ್ಶನಿಕರು, ಕಾರಣಿಕ ವ್ಯಕ್ತಿಗಳು ಜನ್ಮ ಎತ್ತುವುದೇ ಲೋಕಕಲ್ಯಾಣಕ್ಕಾಗಿ ಎಂಬ ವಿಶೇಷ ಅಂಶವನ್ನು-

ಅವನಿಯೊಳ್ ಅವತಾರಿ ಪುರುಷರು
ನವನವೋನ್ನತ ಭಕ್ತಿ ಜ್ಞಾನವ
ತವಕದಿಂದ ನೆರೆ ನಂಬಿದೆ ಜನಕರುಹಿ ಮರೆಯಾಗಿ ॥

(ಪುಟ : ೧೭, ಪದ್ಯ-೧೦.)

ಎಂದು ವಿವರಿಸುತ್ತಾರೆ.

ಸ್ತ್ರೀ ಜೀವನದಲ್ಲಿ 'ಪತಿಯ ಮಹತ್ವ' ಕುರಿತು ಪತಿಯನ್ನು ಪಡೆದರೆ ಮಾತ್ರ ಹೆಣ್ಣು ಪೂಜ್ಯಳು ಎಂಬ ವಿಚಾರವನ್ನು –

ಪತಿಯ ಪಡೆಯದ ಹೆಣ್ಣು ತಾ ಶ್ರೀ
ಮತಿಯು ಎನಿಸದೇ ಪೂಜ್ಯಳಾಗಳು ॥ (ಪುಟ : ೩೭, ಪದ್ಯ : ೧೭.)

ಎಂದಾಗಿ ಹೇಳುವ ಮಾತುಗಳು ಹುರುಳಿಲ್ಲದಂತೆ ಭಾಸವಾಗುತ್ತದೆ.

ಒಟ್ಟಾರೆ ಶಿವನ ಇಪ್ಪತ್ತೈದು ಲೀಲೆಗಳಲ್ಲಿ ನೀಲಕಂಠ ಪ್ರಕರಣವು ಅತ್ಯಂತ ಮಹತ್ವದ್ದಾಗಿದೆ. ವ್ಯಷ್ಟಿಗಿಂತ ಸಮಷ್ಟಿಗತವಾದ ಹಿತವೇ ಮುಖ್ಯವೆಂಬ ವಿಚಾರವು ಶಿವನ ಕಾಳಜಿಯ ಮೂಲಕ ವ್ಯಕ್ತವಾಗಿದೆ. ಮಠ-ಸ್ವಾಮಿಗಳ ದಾರಿಯನ್ನು ಹಿಡಿಯದೆ ಅವರ ಚರಿತ್ರೆಯನ್ನು ಹೇಳುತ್ತಾ ಹೋದರೂ ಕಾವ್ಯ ವಸ್ತುವಿನ ವಿವೇಚನ ದೃಷ್ಟಿಯಿಂದ ಕಾವ್ಯವು ಉತ್ತಮವಾಗಿದೆ.

೩.೨.೪. ಶ್ರೀ ಇಟಗಿ ಭೀಮಾಂಬಿಕೆ ಪುರಾಣ

ಅವಧೂತ ಪರಂಪರೆಯ, ಶರಣರ ಸಮಕಾಲೀನಳಾದ ಭೀಮವ್ವನು ಗದಗ ಜಿಲ್ಲೆಯ ರೋಣ ತಾಲೂಕಿನ ಇಟಗಿ ಗ್ರಾಮದವಳು. ಇವಳಿಂದಾಗಿ ಇಟಗಿಯು ದೈವೀ ಕೇಂದ್ರವಾಗಿ ಇಂದೂ ಪ್ರಸಿದ್ಧವಾಗಿದೆ. ಈ ಶರಣೆಯ ಜೀವನವನ್ನು ಕುರಿತು ಅವಳ ಪರಮ ಭಕ್ತರು ಅರಹುಣಸಿ ಗ್ರಾಮದ ನಿವಾಸಿಗಳಾದ ಶ್ರೀ ಕಂಬಳಿ ಗುರುಗಳು 'ಶ್ರೀ ಇಟಗಿ ಭೀಮಾಂಬಿಕೆ ಚರಿತ್ರೆ'ಯನ್ನು ಈ ಮೊದಲೇ ಗದ್ಯದಲ್ಲಿ ಬರೆದಿದ್ದರು. ಶ್ರೀ ಕಂಬಳಿ ಗುರುಗಳು ಗದ್ಯದಲ್ಲಿ ಬರೆದ ಇವಳ ಚರಿತ್ರೆಯನ್ನಾಧರಿಸಿ ಬರೆದ ಶ್ರೀ ರಾಮಣ್ಣ ಬ್ಯಾಟಿಯವರು "ಇಂಥ ಮಹಾಶರಣೆಯ

ಬದುಕು ಲೋಕದ ಜೀವಿಗಳಿಗೆ ಆದರ್ಶಪ್ರಾಯವೆಂದು ಬಗೆದು ಅನೇಕ ಐತಿಹ್ಯ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ ಬರೆದಿರುವರು. ಅರಹುಣಸಿ ಗ್ರಾಮದ ಕಂಬಳಿ ಗುರುಗಳು ರಚಿಸಿದ ಇಟಗಿ ಭೀಮಾಂಬಿಕೆ ಚರಿತ್ರೆಯನ್ನು ಹಾಗೂ ಅನೇಕ ಭಕ್ತರ ನಾಲಗೆಯ ಮೇಲಿನ (ಮೌಖಿಕ) ಐತಿಹ್ಯಗಳನ್ನು ಅಳವಡಿಸಿಕೊಂಡಿರುವೆ" (ಶ್ರೀ ಇಟಗಿ ಭೀಮಾಂಬಿಕೆ ಪುರಾಣ ಪುಟ-iv) ಎಂದು ಕೃತಿಯ ರಚನೆಯ ಹಿನ್ನೆಲೆಯನ್ನು ಹೇಳುತ್ತಾರೆ.

೧೨೪೫ ಪದ್ಯಗಳು, ೩೨ ಅಧ್ಯಾಯಗಳಲ್ಲಿ ತೆರೆದುಕೊಳ್ಳುವ ಈ ಪುರಾಣಕಾವ್ಯವೂ ಸಹ ಸಾಂಪ್ರದಾಯಿಕ ಪುರಾಣಗಳ ಕಾವ್ಯ ಪರಂಪರೆಯಿಂದ ಹೊರತಾಗಿಲ್ಲ. ಅಲ್ಲಿಯಂತೆ ದೈವಸ್ತುತಿ ಪೂರ್ವದ ಕವಿಸ್ಮರಣೆ ಮಾಡಿದ ಕವಿಯು ನಾಯಕಿಯ ವರ್ಣನೆಯನ್ನು ಮಾಡುತ್ತ-

ನಾರಿ ರೂಪದಿ ಜನಿಸಿ ಜಗಲಿ
ಘೋರ ಪಾಪಿಗಳನ್ನು ತಿದ್ದುತ
ದಾರಿ ತೋರಿದೆ ಭಕ್ತಿ ಮುಕ್ತಿಯ ಶಕ್ತಿ ನೀನಾಗಿ ॥ (ಪುಟ : ೨, ಪದ್ಯ : ೬)

ಎನ್ನುವಲ್ಲಿ ದೈವೀಶಕ್ತಿಯ ಅವತಾರವೇ ಭೀಮಮ್ಮ, ನೊಂದ ಭಕ್ತರ ಕಣ್ಣೀರೊರೆಸಿ ದಾರಿ ತೋರಿದ ಭಕ್ತರ ಭಾಗ್ಯವೇ ಭೀಮಮ್ಮ ಎನ್ನುತ್ತಾರೆ ಕವಿಗಳು. ಹಿಂದಿನಿಂದಲೂ ನಡೆದು ಬಂದ ಪವಾಡ ಸದೃಶ ಪೌರಾಣಿಕ ಮಾದರಿಯ ಸಹಜ ಬದುಕಿಗಿಂತ ಕಾಲ್ಪನಿಕತೆಗೆ ಒತ್ತುಕೊಟ್ಟಿದೆ. ಇದರಿಂದ ವೈಜ್ಞಾನಿಕ ದೃಷ್ಟಿಕೋನ ಹಾಗೂ ವೈಚಾರಿಕ ಚಿಂತನೆಗೆ ಅವಕಾಶ ನೀಡದೆ, ಧರ್ಮವೆಂಬುದು ಪವಾಡಗಳ ಹ್ನಿನೆಲೆಯಲ್ಲಿ ಜನಕಲ್ಯಾಣ ಮಾಡುತ್ತಿದೆಯೆಂಬುದು ಕಂಡುಬಂದಿದೆ.

'ಧರ್ಮರ ಶಂಕ್ರಪ್ಪ' ಮತ್ತು 'ಭೀಮಾಂಬಿಕೆ' ದಂಪತಿಗಳು ಮಕ್ಕಳಿಲ್ಲದ್ದರಿಂದ 'ಸೋಮಣ್ಣ' ಎಂಬ ಬಾಲಕನನ್ನು ದತ್ತು ಪಡೆದು, ಮುಂದೆ ನಿಡಗುಂದಿಕೊಪ್ಪದ 'ಬಿಲ್ಲಾರ ಮನೆತನ'ದ 'ಹನುಮವ್ವ' ಎಂಬುವಳೊಂದಿಗೆ ವಿವಾಹ ಮಾಡಿದರು. ಈ ಧರ್ಮರ ಮನೆಯೇ ಧರ್ಮದ ಮಠವಾಗಿ 'ಸೋಮಣ್ಣ' ಮತ್ತು 'ಹನುಮಾಂಬೆ'ಯರೇ ಭೀಮಮ್ಮನ ಜನ್ಮಕ್ಕೆ ಕಾರಣರಾದ ತಾಯ್ತಂದೆಗಳು.

ಭೀಮಮ್ಮನ ತಾಯ್ತಂದೆಗಳವರೆಗೆ ಚಿತ್ರಿಸಿದ ಕವಿ ಹಠಾತ್ತನೆ ೫ ರಿಂದ ೯ನೇ ಅಧ್ಯಾಯದವರೆಗೆ ಸು. ೨೮೦ ಪದ್ಯಗಳಲ್ಲಿ ಬನಶಂಕರಿಯ ವರ್ಣನೆ ಮಾಡುತ್ತಾನೆ. ಸು. ೭೦ ಪುಟಗಳ ವ್ಯಾಪ್ತಿಯು ಒಂದು ಪುಟ್ಟ ಕಾವ್ಯವೇ ಆಗುತ್ತದೆ. ಪುನಃ ೧೦ನೇ ಅಧ್ಯಾಯದಿಂದ ಕವಿಯು ಮೂಲಕಥೆಗೆ ತಿರುಗುತ್ತಾನೆ. ಭೀಮಾಂಬೆಯ ಜನನ ಪೂರ್ವದಲ್ಲಿ 'ಹನುಮಾಂಬೆ' ತಾನು ಕಂಡ ಕನಸಿನ ವಿಚಾರವಾಗಿ ಹಾಲಕೆರೆ ಅನ್ನದಾನೀಶ ಶ್ರೀಗಳಿಂದ ಕೇಳಿ-ತಿಳಿದು ತಾನು ಲೋಕಕಲ್ಯಾಣಾರ್ಥ ಜನಿಸುವ ಮಗುವಿನ ತಾಯಿಯಾಗುವೆನೆಂದು ಸಂತೋಷ

ಪಡುವಳು. ಮುಂದೆ ಜನಿಸಿದ ಮಗು ಭೀಮಾಂಬೆಯು ತನ್ನ ವಯಸ್ಸಿಗೆ ಮೀರಿದ ಆಧ್ಯಾತ್ಮಿಕ ಚಿಂತನೆಯ ಪ್ರತೀಕವಾಗಿ ಕಾಣುತ್ತಾಳೆ.

ಲೋಕನಿಯಮದಂತೆ ನಿಡಗುಂದಿಕೊಪ್ಪದ ಬಿಲ್ಲಾರ ಮನೆತನದ 'ಒಗೆದಾಡಪ್ಪ'ನೊಂದಿಗೆ ವಿವಾಹವಾದರೂ, ಲೌಕಿಕ ಸಂಸಾರಕ್ಕೆ ಹೇಸಿದ ಭೀಮಾಂಬೆ, ಹಿರಿಯರ ಮಾತಿಗೆ ಗೌರವ ಕೊಟ್ಟು ಲೌಕಿಕ-ಆಧ್ಯಾತ್ಮಗಳೆರಡನ್ನು ನಿಭಾಯಿಸತೊಡಗುವಳು. ಈ ಸಮಯದಲ್ಲಿ ಭೀಮಮ್ಮನು 'ಬಾಲಮ್ಮ ', 'ಕಿರಿಯ ಬಾಲಮ್ಮ', ಮೃತ್ಯುವಶವಾದ 'ಬನಶಂಕರಿ' ಮತ್ತು ಮಗ 'ಕಾಳಿಂಗ'ನನ್ನು ಪಡೆಯುವಳು. ಮಾತು ಬಾರದ ಕಾಳಿಂಗನನ್ನು ಅಯ್ಯಪ್ಪ ಗುರುಗಳ ಬಳಿಯಲ್ಲಿ ವಿದ್ಯೆಗೆ ಕಳಿಸಿದ ಸಂದರ್ಭದಲ್ಲಿ ಗುರುವಿಗೆ ಗುರುಪದದ ಅರ್ಥ ವಿವರಿಸಿದ ಕಾಳಿಂಗನು ಹಿಂದಿನ ಜನ್ಮದಲ್ಲಿ ಶರಣನಾಗಿದ್ದನೆಂದು ತಿಳಿದು ಬರುತ್ತದೆ.

ಮುಂದೆ ಭೀಮಮ್ಮನು ತನ್ನ ಮಕ್ಕಳನ್ನು ಸಹೋದರರಾದ ಸಂಕಪ್ಪ ಮತ್ತು ಅರ್ಜುನರಿಗೆ ಕೊಟ್ಟು ಮದುವೆ ಮಾಡುವಳು. ತಂದೆ ಸೋಮಣ್ಣ, ಗಂಡ ಒಗೆದಾಡಪ್ಪ ಹಾಗೂ ಬಿಲ್ಲಾರ ಮೆನತನದ ಯಜಮಾನ ಬುಡ್ಡೆಪ್ಪನ ಮರಣ ಪ್ರಸಂಗಗಳನ್ನು ಅರಿವಿನ ಜ್ಞಾನದಿಂದ ಜಯಸಿ ಸ್ಥಿತಪ್ರಜ್ಞತೆ ಪಡೆದಳು.

ಕೊಪ್ಪದ ಹೆಣ್ಣು ಮಗಳ ದೇಹದಲ್ಲಿ ಪ್ರೇತವಾಗಿ ಸೇರಿದ ಪೂಜಾರಿ ಸೂರಪ್ಪನ ಪ್ರೇತದ ಉಚ್ಚಾಟನೆ, ಗುಡದೂರಿನಲ್ಲಿ ಹಬ್ಬಿದ ಮಾರಿಬೇನೆಯಿಂದ ಭಕ್ತರ ರಕ್ಷಣೆ, ಛಾಯಾಸಾಬನ ಬಡತನ ಹೋಗಲಾಡಿಸುವಿಕೆ, ಶಾಂತಗಿರಿಯ ಮಲ್ಲಸರ್ಜ ದೊರೆಯ ಹುಣ್ಣು ನಿವಾರಣೆ, ರಡ್ಡೇರ ಮಹಾಲಿಂಗಪ್ಪನಿಗೆ ದೃಷ್ಟಿದಾನ, ಧರ್ಮದ ಮಠದಲ್ಲಿ ಭಾವಿ ತೋಡಲು ಹೊರಟಾಗ ಅಲ್ಲಿನ ಭಕ್ತರ ಮತ್ತು ಸೇವಾಕರ್ತರ ದುಃಖಗಳನ್ನು ನಿವಾರಿಸಿದ್ದು, ಇವಳಲ್ಲಿ ಭಕ್ತರ ಬಗೆಗಿರುವ ಕಳಕಳಿ ಮತ್ತು ಲೋಕಕಲ್ಯಾಣದ ಕಾಳಜಿಯನ್ನು ಬಿಂಬಿಸುತ್ತವೆ. ಮುಸ್ಲಿಂ ಮತೀಯರಿಗೆ ಅವರದೇ ರೀತಿಯಲ್ಲಿ ಧಾರ್ಮಿಕ ವಿಧಿವಿಧಾನಗಳನ್ನು ತಿಳಿಸಿ ಮಠದಲ್ಲಿಯೇ ಮೊಹರಂ ಆಚರಿಸುವ ಮೂಲಕ ಧಾರ್ಮಿಕ ಸೌಹಾರ್ದತೆಯನ್ನು ಸ್ಥಾಪಿಸಿದಳು.

ಇವಳ ಕಾರ್ಯಕ್ಷಮತೆಯಿಂದ ಭಕ್ತರೂ ಹೆಚ್ಚಾದಂತೆ ವಿರೋಧಿಗಳು ಹೆಚ್ಚಿದರು. ತಾಪತ್ರಯ ಕಳೆದುಕೊಳ್ಳಲು ಎಲ್ಲ ಮತೀಯರು ಇಲ್ಲಿಗೆ ಬರತೊಡಗಿದರು. ಈ ಮಧ್ಯೆ ಮಗ 'ಕಾಳಿಂಗಪ್ಪ'ನಿಗೆ ಹಿರಿಯ ಬಾಲಮ್ಮನ ಮಗಳಾದ 'ಗಂಗಾ'ಳನ್ನು ತಂದು ಮದುವೆ ಮಾಡಿದಳು.

ಜನರು ಸದೃಢಚಿತ್ತರಾಗಿ ಸದಾಚಾರ ಸಂಪನ್ನರಾಗಿ ಸನ್ಮಾರ್ಗದಲ್ಲಿ ನಡೆದು ನೆಮ್ಮದಿ ಮತ್ತು ಭಕ್ತಿಯನ್ನು ಬೆಳೆಸಿಕೊಳ್ಳುವಂತೆ ಪರಿವರ್ತನೆ ಮಾಡಿದ ಭೀಮವ್ವ ಊರಿಗೆ ಮಾರಿಯಾಗಿ ಬಂದ ಮಾರಿ ರೋಗವನ್ನು ಎದುರಿಸಿ, ಆ ಮಾರಿಗೇ ಬಲಿಯಾಗಿ ಕ್ರಿ.ಶ. ೧೯೫೧ರಲ್ಲಿ ಪಂಚಭೂತಗಳಲ್ಲಿ ಲೀನವಾದಳು. ಸ್ವಾರ್ಥಕ್ಕಾಗಿ ಬದುಕದೆ, ನೊಂದವರ ಕಣ್ಣೀರನ್ನೊರೆಸುವ ಇವಳ ವ್ಯಕ್ತಿತ್ವವೇ ಇವಳನ್ನು ಧರ್ಮದ ದೇವತೆಯನ್ನಾಗಿಸಿದೆ.

ಮಹಾಶರಣೆಯಾಗಿ ಬದುಕಿ, ಲೋಕದ ಜೀವಿಗಳಿಗೆ ಆದರ್ಶಪ್ರಾಯವಾದ ಶರಣ ಬದುಕಿನ ಸಂಪತ್ತಾದ ಇವಳು 'ನುಡಿದ ಮಾತೆ ವೇದವು, ನಡೆದ ನೆಲವೇ ಪಾವನ ಕ್ಷೇತ್ರವು, ಮುಟ್ಟಿದ ನೀರೆ ಪಾವನತೀರ್ಥವಾಯಿತು.' (ಪುಟ : ೧೦೦, ಪದ್ಯ : ೧೯) ಎನ್ನುವ ಲೀಲಾಮಯ ವ್ಯಕ್ತಿತ್ವವು ಕಾವ್ಯದಲ್ಲಿ ಮೂಡಿಬಂದಿದೆ.

ಭೀಮಾಂಬಿಕೆಯ ಅಲೌಕಿಕ ವ್ಯಕ್ತಿತ್ವವನ್ನು ಕವಿ ಈ ರೀತಿಯಾಗಿ ಚಿತ್ರಿಸುತ್ತಾನೆ –

ವರವಿವೇಕ ವಿಚಾರಧಾರೆಯ
ಶರಣ ಜನರಾ ದರ್ಶನದ ಪಥ
ಹರಭಜನೆ ಗುರುಭಕ್ತಿಯಾ ಫಲ ವರಪುರಾಣದಲಿ ॥

(ಪುಟ : ೦೩, ಪದ್ಯ : ೦೯)

ಎಂದು ಹೇಳುವ ಮಾತುಗಳು ಪೌರಾಣಿಕ ಸ್ಪರ್ಶ ಪಡೆದ ದೈವೀವ್ಯಕ್ತಿತ್ವವನ್ನು ಪರಿಚಯಿಸಿದರೆ, ಹಾಲಕೆರೆ ಅನ್ನದಾನೀಶ ಶ್ರೀಗಳು ಮತ್ತು ನವಲಗುಂದದ ಅವಧೂತ ನಾಗಲಿಂಗಜ್ಜರ ಜೊತೆಯಲ್ಲಿ ನಡೆಸುವ ಆಧ್ಯಾತ್ಮಿಕ ಚಿಂತನೆಯಲ್ಲಿ ಒಬ್ಬ ತಾತ್ವಿಕ ದಾರ್ಶನಿಕಳಾಗಿ ಕಂಡು ಬರುವ ಮೂಲಕ ವಾಸ್ತವ ಸತ್ಯವನ್ನು ಪ್ರತಿಪಾದಿಸುತ್ತದೆ.

ಹೆಣ್ಣು ಆಸೆಯ ಮೂಲ ಎಂಬ ಪುರಾತನ ವಿಚಾರವನ್ನು ಅಲ್ಲಗಳೆದು ಆಕೆ ಪುಣ್ಯವಾಹಿನಿ, ಅನ್ನದಾತೆ, ಜನ್ಮದಾತೆ ಎಂದಾಗಿ ಕಾಣುವ ಭೀಮಮ್ಮ ಹೆಣ್ಣು ಮಕ್ಕಳಿಗೆ ಆದರ್ಶ ಗೃಹಿಣಿಯ ಇರುವಿಕೆಯ ಕಲ್ಪನೆ ಮಾಡಿ ಕೊಡುವ ರೀತಿ ಇಂತಿದೆ–

ಎಲ್ಲರಿಗು ಒಳಿತನ್ನು ಬಯಸುವ
ಮಲ್ಲಿಗೆಯು ನೀವಾಗಿ ಬಾಳಿರಿ
ಸಲ್ಲಲಿತ ನರಜನ್ಮ ಪಾವನ ನದಿಯು ಹರಿದಂತೆ ॥

(ಪುಟ : ೧೦೦, ಪದ್ಯ : ೧೮)

ಶಾಂತಿ ಶಮೆ ದಮೆ ಸತ್ಯ ಪ್ರೇಮ
ದಿಂತು ಪತಿ ಪ್ರೇಮಾನುರಾಗದಿ
ಅಂತು ಬಾಳಿರಿ ಧರ್ಮಪರಶಿವ ನಾಮ ಧ್ಯಾನದಲಿ ।
ಸಂತಸವು ಸುಖಭೋಗ ಭಾಗ್ಯವ
ನಂತು ನೀಡುತ ಲಕ್ಷ್ಮಿ ಆ ದಾನೆ
ಯಿಂತು ಬರುವಳು ಪುಣ್ಯ ಪತಿವೃತೆ ಪಾದವಿಟ್ಟೆ ॥

(ಪುಟ : ೧೦೦, ಪದ್ಯ : ೧೯)

ಎಂಬ ಮಾತುಗಳು ಭೀಮಾಂಬಿಕೆಯ ಸತಿ ಧರ್ಮದ ವ್ಯಕ್ತಿತ್ವವನ್ನು ಬಿಂಬಿಸುತ್ತದೆ.

ಮಾನವ ಸಹಜವಾದ ಲಿಂಗ, ವರ್ಗ, ವರ್ಣ ಬೇಧಗಳಿಂದ ಅತೀತವಾದ ಇವಳ ಶರಣವ್ಯಕ್ತಿತ್ವ ವಿಶ್ವ ವಿಖ್ಯಾತಿಗಳಿಸಿದ ವಿಭೂತಿ ವ್ಯಕ್ತಿತ್ವ ಪಡೆದಾಗಲೂ ವಿಶ್ವವೇ ಮಹಾಮನೆ ಎಂದು ಪರಿಭಾವಿಸಿದವಳು. ಹುಟ್ಟು-ಸಾವು-ನೋವುಗಳಿಗೆ ಅಂಜದವಳು. ಮಹಾಮಾರಿ ಮಾರಿಬೇನೆಯನ್ನು ದಿಟ್ಟತನದಿಂದ ಎದುರಿಸಿದವಳು.

ನವಲಗುಂದದ ಅವಧೂತ ನಾಗಲಿಂಗಜ್ಜನ ಸ್ವಾಗತವು ಮೇರುವನ್ನು ಮೇರು, ಸಾಗರ-ಸಾಗರ ಸೇರಿದಂತೆ ಸಂಗಮಗೊಂಡಿದೆ. ಅವರೊಂದಿಗೆ ನಡೆಸುವ ಭೀಮಮ್ಮನ ಅದ್ಭುತ ಧಾರ್ಮಿಕ ಚಿಂತನೆಗೆ ಅಚ್ಚರಿಗೊಂಡ ನಾಗಲಿಂಗಜ್ಜನು ಭೀಮಾಂಬಿಕೆಯನ್ನು ಹೊಗಳುವದು ಹೀಗೆ –

ಧರ್ಮ ಮನುಕುಲ ದಾರೀದೀಪವು
ಧರ್ಮ ಭೀಮಾಂಬಿಕೆಯ ರೂಪವು
ನಿರ್ಮಲಂತಃಕರಣದಿಂ ನೋಡಿದೊಡೆ ಶಿವಶಕ್ತಿ ।
ಕರ್ಮರಹಿತಳು ಆದ ಜನನಿಯ
ಮರ್ಮ ಅರಿತವ ಧನ್ಯ ಜಗದೊಳು
ಧರ್ಮ ದೇವತೆಯಾದ ಭೀಮಾಂಬಿಕೆಯ ॥

(ಪುಟ : ೧೬೭, ಪದ್ಯ : ೨೬)

ಹೀಗೆ ಇರ್ವರ ಚರ್ಚೆಯಿಂದ ಮೂಡಿ ಬರುವ ಸಹಜ ಸ್ವರೂಪದ ಧಾರ್ಮಿಕ ತಿಳುವಳಿಕೆಯನ್ನು ನೀಡುವ ಇಟಗಿಯ ಮಠವು ಇಂದಿಗೂ ಸರ್ವರ ಜ್ಞಾನಸಾಧನೆಯ ಸಿದ್ಧಿ ಕೇಂದ್ರವಾಗಿ ಪರಿಣಮಿಸಿದೆ. ಈ ಎಲ್ಲ ಕಾರಣಗಳಿಂದಾಗಿಯೇ ಬಹುಷಃ ಕವಿಯು ಕಾವ್ಯದ ಮಂಗಲ ಪದ್ಯಗಳಲ್ಲಿ ಭೀಮಾಂಬಿಕೆಯನ್ನು ಕಾಮಧೇನು ಕಲ್ಪವೃಕ್ಷ ಚಿಂತಾಮಣಿಯಾಗಿ ಜಗದಾದಿಶಕ್ತಿ ಸ್ವರೂಪದಲ್ಲಿ ವರ್ಣಿಸಿರುವಂತೆ ಕಾಣುತ್ತದೆ.

ಕವಿ ರಾಮಣ್ಣನವರು ಭೀಮಾಂಬಿಕೆಯ ವ್ಯಕ್ತಿತ್ವವನ್ನು ಪವಾಡ ಸದೃಶವಾಗಿ ಪರಿಚಯಿಸಿದೆ 'ಕಿರಿದರಲ್ಲಿ ಹಿರಿದರ್ಥ' ಎಂಬ ಉಕ್ತಿಗೆ ಸಾಕ್ಷಿಯೆಂಬಂತೆ ಅವಳು ಶರಣರ ಕಾಯಕತತ್ವದಿಂದ ಪ್ರಭಾವಿತಳಾಗಿದ್ದಾಳೆಂಬ ವಿಚಾರವನ್ನು ಅವಳ ಕಾಯಕ ವ್ಯಕ್ತಿತ್ವದ ಮೂಲಕ ಚಿತ್ರಿಸುತ್ತಾರೆ. ಗಾಂಧೀಜಿಯವರಿಗಿಂತ ಪೂರ್ವದಲ್ಲಿ ಚರಕಾ ಸಂಸ್ಕೃತಿಗೆ ನಾಂದಿ ಹಾಡಿದ ಭೀಮಮ್ಮ ನೂಲುವ ಚರಕ ಮತ್ತು ರಾಟಿಗಳನ್ನು ತಂದು ನೂಲುವ ಕಾಯಕವು ಸ್ವದೇಶಿತನ ಮತ್ತು ರಾಷ್ಟ್ರಭಕ್ತಿಯ ಸಂಕೇತವಾಗಿದೆ.

೩.೨.೫. ಶ್ರೀ ಸದ್ಗುರು ಶಿವಾನಂದ ಪುರಾಣ

ಕ್ರಿ.ಶ. ೨೦೦೯ರಲ್ಲಿ ಪ್ರಕಟಗೊಂಡ ಸದ್ಗುರು ಶ್ರೀ ಶಿವಾನಂದ ಪುರಾಣವು ಕವಿರಾಮಣ್ಣನವರ ೫ನೆಯ ಕೃತಿಯಾಗಿದೆ. ೧೭೭೧ ಭಾಮಿನಿ ಷಟ್ಪದಿ ಪದ್ಯಗಳಿರುವ, ೩೬ ಅಧ್ಯಾಯಗಳ ಹರವನ್ನು ಹೊಂದಿದೆ. ಬೆಳ್ಳೇರಿಯ ಶಿವಾನಂದ ಮಠದ ಶ್ರೀ ಸಚ್ಚಿದಾನಂದ ಸ್ವಾಮಿಗಳು ಈ ಕೃತಿಯನ್ನು ಪ್ರಕಟಿಸಿ ಕವಿಯ ಶ್ರಮವನ್ನು ಸಾರ್ಥಕಗೊಳಿಸಿದ್ದಾರೆ. ಕವಿಯು ಹೇಳುವ "ಶ್ರೀ ಶಿವಾನಂದರ ಜೀವನ, ಉಪದೇಶಿಸಿದ ತತ್ವಗಳನ್ನು ಪುರಾಣ ರೂಪದಲ್ಲಿ ಹೇಳಿದ್ದು ಒಂದು ಅವಿಸ್ಮರಣೀಯ" (ಶ್ರೀ ಸದ್ಗುರು ಶಿವಾನಂದ ಪುರಾಣ. ಪುಟ-xii) ಎಂಬ ಮಾತುಗಳು ಶಿವಾನಂದರ ಭವ್ಯ ವ್ಯಕ್ತಿತ್ವವನ್ನು ಪರಿಚಯಿಸುತ್ತದೆ. ವಿಶೇಷತಃ ನಿಜಗುಣರ ಜ್ಞಾನಾನುಸಂಧಾನಗಳು ಇಂದಿಗೂ ಗದುಗಿನ ಶಿವಾನಂದ ಮಠದಲ್ಲಿ ನಡೆಯುತ್ತಿರುವುದು ಅವರ ಆಧ್ಯಾತ್ಮಿಕ ಸಾಧನೆಯ ಮೇರುವಿಗೆ ಸಾಕ್ಷಿಯಾಗಿದೆ. ಈ ಮೂಲಕ ಅವರು ಜನಮನದಲ್ಲಿ ದೈವೀ ಪುರುಷರಾಗಿ ನೆಲೆಗೊಂಡಿರುವರು. 'ಹೇಸಿ ಮನದಜ್ಞಾನ, ಆಶಾ-ಪಾಶಗಳು ಅಳಿಯಲೋಸುಗ ಶಿವಾನಂದರ ನಾಮಸ್ಮರಣೆ ಅವಶ್ಯ'ವೆನ್ನುವ ಕವಿಯು-

ನಿನ್ನ ನಾಮವೆ ಈಶ ಮಂತ್ರವು
ನಿನ್ನ ನಾಮವೆ ಸುಖದ ತಂತ್ರವು
ನಿನ್ನ ನಾಮವೆ ಯಾಗಯಜ್ಞವು ನಿತ್ಯ ಜಪತಪವು ।
ನಿನ್ನ ನಾಮವೆ ಕಾಮಧೇನುವು
ನಿನ್ನ ನಾಮವೆ ಕಲ್ಪವೃಕ್ಷವು
ನಿನ್ನ ನಾಮಸ್ಮರಣೆ ಚಿಂತಾಮಣಿ ಶಿವಾನಂದ ॥ (ಪುಟ : ೩, ಪದ್ಯ : ೯)

ಎಂದಾಗಿ ವಿನೀತಭಾವದಿಂದ ನೆನೆಯುತ್ತಾರೆ.

ನಡೆ-ನುಡಿ ಸಾಮರಸ್ಯ ಸಾಧಿಸಿ, ಯಾವ ವರ್ಗ, ವರ್ಣ ಲಿಂಗಬೇಧವಿಲ್ಲದೆ ಆಧ್ಯಾತ್ಮ ಸಾಧನೆಯ ಉನ್ನತಿಯನ್ನು ಕಂಡ ಶಿವಾನಂದರ ತಾತ್ವಿಕ ಅನುಷ್ಠಾನವು ಸಮಾಜಮುಖಿಯಾಗಿ ಪೂರ್ಣಗೊಂಡಿದೆ. 'ಅರುಹಿನ ಬೆಳಕಿನಲ್ಲಿ ಎಲ್ಲರನ್ನು ನನ್ನವರೆಂದು ಭಾವಿಸಿದ ದಿವ್ಯಚೇತನ' ಶಿವಾನಂದರು. ಯಾವ ಐಹಿಕ ಆಮಿಷಗಳಿಗೆ ಬಲಿಯಾಗದೆ ತತ್ವಗಳನ್ನು ಜನರಿಗೆ ಮುಟ್ಟಿಸಿದವರು. ಶಿವಾನಂದರ ಇಂತಹ ಭವ್ಯ ವ್ಯಕ್ತಿತ್ವವನ್ನು ಕವಿಯು ಬಹುರಂಗಪಡಿಸಿರುವದು ಹೀಗೆ-

ವೀರ ವಿರತಿಯ ಜ್ಞಾನಚಂದಿರ
ಮಾರ ಮರ್ದನ ಹೇ ಕೃಪಾಕರ
ಆರು ಬಲ್ಲರು ನಿನ್ನ ಆ ಸುಜ್ಞಾನದೈಸಿರಿಯಾ ।
ಪಾರಮಾರ್ಥದ ಹೇ ಪ್ರಭಾಕರ

ಧೀರತನದಿ ಗೆಲಿದು ಮಾಯೆಯ
ಸಾರಸಜ್ಜನ ವಂದ್ಯ ಪಾಲಿಸು ಗುರುಶಿವಾನಂದಾ॥ (ಪುಟ : ೨, ಪದ್ಯ : ೫.)

ಶಿವಾನಂದರ ಶಿಷ್ಯರಾದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಬರೆದ ಶ್ರೀ ಶಿವಾನಂದ ಪುರಾಣ ಮತ್ತು ಶ್ರೀ ಶಿವಾನಂದರ ನೇರ ಒಡನಾಡಿಯಾದ ಕವಿಗಳ ತಂದೆ ದೊಡ್ಡಪ್ಪ ಬ್ಯಾಟಿಯವರು ಕವಿಗೆ ಬಾಲ್ಯದಲ್ಲಿ ಶ್ರೀ ಶಿವಾನಂದರನ್ನು ಕುರಿತು ಹೇಳಿದ ಮಹತ್ವದ ಲೀಲೆ, ಘಟನೆ ಪವಾಡಗಳನ್ನು ಆಧರಿಸಿ ಕೃತಿರಚನೆ ಮಾಡಿರುವುದಾಗಿ ಕವಿಯು ತಮ್ಮ ಈ ಕಾವ್ಯರಚನೆಗೆ ಪೂರಕವಾದ ವಿವರಗಳನ್ನು ಕೊಡುತ್ತಾರೆ.

ಶಿವಾನಂದರ ಚರಿತ್ರೆಯು ಬಾಲ್ಯದಿಂದಲೇ ಆಧ್ಯಾತ್ಮಿಕ ಪರಿಸರದಿಂದ ಪ್ರಾರಂಭಗೊಂಡು ಆಧ್ಯಾತ್ಮಿಕ ಆಗಸದಲ್ಲಿ ವಿರಮಿಸಿದೆ. ಬೆಳುವಲದ ಗಂಡುಮೆಟ್ಟಿನ ನೆಲವಾದ ರೋಣದ ವೀರಶೈವ 'ಪಾಕನಾಕರಡ್ಡಿ ಮನೆತನ'ದಲ್ಲಿ 'ತೋಟಗಂಟಿ ನಿಂಗನಗೌಡ' ಮತ್ತು 'ಬಸವಾಂಬೆ' ದಂಪತಿಗಳಿಗೆ ಅವಧೂತ ನಾಗಲಿಂಗಜ್ಜನ ಆಶೀರ್ವಾದದಿಂದ ಕ್ರಿ.ಶ. ೧೮೪೧ರಲ್ಲಿ ಹುಟ್ಟಿದವರೇ ಶಿವಾನಂದರು. ಇವರ ಮೂಲ ಹೆಸರು ವೀರನಗೌಡ. ಮಗು ಬೆಳೆಯಿತು ಆದರೆ, ಮಾತು ಮೂಕವಾಯಿತು. ಮುದೊಂದು ದಿನ ನಾಗಲಿಂಗಜ್ಜನು ಬಂದು ಮಾತನಾಡಿಸಲು ಮಾತುಗಳು ಬಂದವು. ವಿದ್ಯಾಭ್ಯಾಸದ ಹಂತದಲ್ಲಿ ಗುರುವಿಗೇ ಷಡಕ್ಷರಿಮಂತ್ರ (ಓಂ ನಮಃ ಶಿವಾಯ)ದ ಅರ್ಥವನ್ನು ತಿಳಿಸಿಕೊಟ್ಟ ಜ್ಞಾನಾನುಭವ ಇವರದು. ಒಂದು ದಿನ ತನ್ನ ಕಿವಿಯಾಭರಣ ಅರಿವೆಗಳನ್ನು ಭಿಕ್ಷುಕನಿಗೆ ಕೊಟ್ಟು ಮನೆಗೆ ಬಂದ ಇವರನ್ನು ಗದರಿದ ತಾಯಿಗೆ "ಹರನು ಕೊಟ್ಟ ಕಾಲಕ್ಕೆ ಕರೆದು ದಾನವ ಮಾಡು" ಎಂದು ಮಾನವೀಯ ಮೌಲ್ಯಗಳನ್ನು ಬಿಂಬಿಸಿದವರು. ತಾಯಿ ಒಮ್ಮೆ ಇವರನ್ನು ಹೊಲದಲ್ಲಿ ಬೆಳೆದ ಜಾಲಿ ಕಂಟಿಯನ್ನು ಕಡಿಯಲು ಕಳಿಸಿದರೆ, ಕಂಟಿಗಳನ್ನು ಕಡಿಯದೆ ಹಾಗೆ ತಿರುಗಿ ಬರುವರು. ತಾಯಿ ಕೇಳಿದರೆ–

ಹರನ ಸೃಷ್ಟಿಯಹರಣ ಮಾಡದೆ
ಮರಳಿ ಬಂದೆನು ಪಾಪಿಯಾಗದೆ
ಮರಳೆ ಎಂಥಾ ಬುದ್ಧಿಸೇರಿತು ಎನಲು ಬಸವಾಂಬೇ ।
ಸರನೆ ಮಾತೆಗೆ ವೀರ ಹೇಳಿದ
ಧರೆಗೆ ಬೆಳೆದಾ ಕಾಡಿಗಿಂತಲು
ಶರೀರದೊಳ್ ಬೆಳೆದಿರುವ ವಿಷಯಗಳೆಂಬ ಕಾಡುಕಡಿ ॥

(ಪುಟ : ೫೧, ಪದ್ಯ : ೫೫)

ಎಂದು ಹೇಳುವ ಮಾತುಗಳು ಸಕಲರಿಗೂ ಒಳಿತನ್ನೇ ಬಯಸುವ ಶರಣರ ಜೀವದಯೆಯು ಶಿವಾನಂದರಲ್ಲಿ ಎದ್ದುಕಾಣುತ್ತದೆ ಎಂಬುದಕ್ಕೆ ನಿದರ್ಶನವಾಗಿದೆ.

ಬಾಲ್ಯದಿಂದಲೇ ಬಾಲಕ ಶಿವಾನಂದರ ವ್ಯಕ್ತಿತ್ವವು ಅನುಭಾವ ಪರಿಸರದಲ್ಲಿ ಜನ್ಮತಾಳಿ ಅವಧೂತ ನಾಗಲಿಂಗಜ್ಜ ಮತ್ತು ಅಥಣಿಯ ಮುರುಘೇಂದ್ರ ಶಿವಯೋಗಿಗಳ ಅನುಗ್ರಹ ಪಡೆದು 'ಬೆಳೆಯುವ ಸಿರಿ ಮೊಳಕೆಯಲ್ಲಿ ಕಾಣು' ಎನ್ನುವಂತೆ ಉಜ್ವಲವಾಗುತ್ತ ಬಂದಿತು.

ಇವರ ಬದುಕಿನಲ್ಲಿ ನಡೆದ ಪವಾಡ ಸದೃಶ ಘಟನೆಗಳೇ ಇವರ ಕೀರ್ತಿಯನ್ನು ಹೆಚ್ಚಿಸಿದವು. ಹುಬ್ಬಳ್ಳಿಯ ಸಿದ್ಧಾರೂಢ ಸ್ವಾಮಿಗಳಿಂದ ಶಿವಾನಂದ ಸ್ವಾಮಿಗಳಾಗಿ ನಾಮಕರಣಗೊಂಡು ಬ್ರಹ್ಮೋಪದೇಶ ಪಡೆದ ಸಂದರ್ಭವು ಶಿವಾನಂದರ ಬದುಕಿನ ಬಹುದೊಡ್ಡ ಬದಲಾವಣೆಗೆ ಕಾರಣವಾಯಿತು. ಈ ವೇಳೆಯಲ್ಲಿಯೂ ಅವರಲ್ಲಿರುವ ಆಧ್ಯಾತ್ಮಿಕ ಅನುಭೂತಿಯ ಜಿಜ್ಞಾಸೆಯನ್ನು ಕುರಿತು ಕವಿ ಹೀಗೆ ವರ್ಣಿಸುತ್ತಾರೆ –

ವನದ ಕೋಗಿಲೆ ಮನೆಯೊಳಿದ್ದರು । ಮನದಿ ಆ ವನ ನೆನೆಯುವಂದದಿ ।
ಪ್ರಣವ ಸ್ವರೂಪಿ ಶರಣರೀ ಸಂಸಾರದೊಳಗಿರಲು ।
ಕ್ಷಣವು ವಿರತಿಯ ಮಾರ್ಗಬಿಟ್ಟು । ಎನಿತು ಈ ಸಂಸಾರಕೊಲಿವರೆ ?
ಜನರ ಗೊಡವೆಯ ಬಿಟ್ಟು ತನ್ನಯ ಗುರಿಯ ಆ ಸಾಧನಕೆ ॥

(ಪುಟ : ೨೦೨, ಪದ್ಯ : ೧೩)

ಅವಧೂತ–ಅನುಭಾವ–ಅನುಭೂತಿ ಹಾಗೂ ದಾರ್ಶನಿಕ ಮುಂತಾದ ತಾತ್ವಿಕ ಚಿಂತನೆಯ ಸಂಗಮವೇ ಆದ ಶಿವಾನಂದರು ಅನೇಕ ಶಿಷ್ಯಬಳಗವನ್ನು ನಾಡಿನ ಉದ್ದಗಲಕ್ಕೂ ಹೊಂದಿದ್ದರು. ಹಂಚಿನಾಳ ಮುದುಕಪ್ಪ ಹೆಬ್ಬಾಳ, ವಿರೂಪಾಕ್ಷಪ್ಪ ಹಂಪಣ್ಣವರು, ಬೆಳವಟಗಿ ಸಂಗಪ್ಪ, ಭೈರಿಕೊಪ್ಪದ ಕರಿಯಪ್ಪ ಮಾಸ್ತರು ಮುಂತಾದ ಭಕ್ತರ ಕೋರಿಕೆಯಂತೆ ಗದುಗಿನಲ್ಲಿ ಕ್ರಿ.ಶ. ೧೯೨೧ರಲ್ಲಿ ದುಂಡಿಬಸವನ ಹೊಲದಲ್ಲಿ ಶಿವಾನಂದ ಮಠವನ್ನು ಕಟ್ಟಿದರು. ದೃಷ್ಟಿಕಳೆದುಕೊಂಡ ವೀರಪ್ಪನವರು ಶಿವಾನಂದರ ಉಪಚಾರದಿಂದ ಮತ್ತೆ ದೃಷ್ಟಿ ಪಡೆದರು.

ಶಿವಾನಂದರ ಜನಪ್ರಿಯತೆ ಹೆಚ್ಚಿದಂತೆ ಜನರಲ್ಲಿ ಅಸೂಯೆಯು ಬೆಳೆಯಿತು. ಅಂಥವರಲ್ಲಿ 'ಫಕೀರ ಬಾರಕೇರ' ಎಂಬಾತ ಇವರನ್ನು ಕೊಲ್ಲಲು ಪ್ರಯತ್ನಿಸಿ ಪಶ್ಚಾತ್ತಾಪ ಪಟ್ಟನು. ರಾಮದುರ್ಗದಲ್ಲಿ ನ್ಯಾಯಾಧೀಶನಾಗಿದ್ದ ಕುರ್ತುಕೋಟಿಯ 'ಶಂಕರರಾಯ'ನು ಇವರ ಉಪದೇಶದಿಂದ ಪ್ರಭಾವಿತರಾಗಿ ತನ್ನ ಹುದ್ದೆಯನ್ನೇ ತ್ಯಜಿಸಿ ಇವರ ಶಿಷ್ಯನಾದನು. ಇವರ ಜಾತ್ರೋತ್ಸವ ಮಾಡಬೇಕೆಂಬ ಭಕ್ತರ ವಿಚಾರಕ್ಕೆ ವಿರುದ್ಧ ತೀಪು ಕೊಟ್ಟ ನ್ಯಾಯವಾದಿ ಅಂದಿನ ರಾತ್ರಿಯೇ ಮರಣ ಹೊಂದಿದನು. ಹೀಗೆ ಸತ್ಯ–ನ್ಯಾಯ–ಸೇವೆಗಳಲ್ಲಿ ತೊಡಗಲು ಸಹಾಯಕವಾಗುವಂತೆ ಜೀವನದರ್ಶನ ಬೋಧಿಸಿದರು. ಸ್ವತಃ ಕಾಯಕತತ್ವಕ್ಕೆ ಒಂದು ದೃಷ್ಟಾಂತವಾಗಿದ್ದ ಶಿವಾನಂದರನ್ನು ವಿಷಹಾಕಿಕೊಲ್ಲುವ ಪ್ರಯತ್ನವೂ ನಡೆಯಿತು, ಆದರೆ ಯಶಸ್ವಿಯಾಗಲಿಲ್ಲ. ಇಂತಹ ಅನೇಕ ಪವಾಡಗಳು ಕಾವ್ಯದಲ್ಲಿ ವರ್ಣಿತವಾಗಿರುವವು.

ಅವಧೂತ ಪರಂಪರೆಯ ಸಮಕಾಲೀನರಾಗಿ ಬಾಳಿ ಪ್ರವಚನದ ಮೂಲಕ ಶಿಷ್ಯರುದ್ಧಾರ ಮಾಡಿದ ಶಿವಾನಂದರು ೧೯೩೯ರಂದು ಲಿಂಗಾಂಗ ಸಾಮರಸ್ಯ ಪಡೆದರು. ಇವರ ನಂತರದಲ್ಲಿ ನಂದೀಶ್ವರ ಸ್ವಾಮಿಗಳು, ಸದಾಶಿವಾನಂದ ಸ್ವಾಮಿಗಳು, ಮಲ್ಲಿಕಾರ್ಜುನ ಸ್ವಾಮಿಗಳು ಈ ಪೀಠ ಪರಂಪರೆಯಲ್ಲಿ ಆಗಿ ಹೋಗಿರುವರು. ಹೀಗೆ ನಾಡಿನುದ್ದಕ್ಕೂ ಅನೇಕ ಮಠಗಳು ಸ್ವಾಮಿಗಳು ಮತ್ತು ಪೀಠ ಪರಂಪರೆ ಉಳಿದು ಬಂದಿವೆ.

೩.೨.೬. ಬಾದಾಮಿ ಶ್ರೀ ಬನಶಂಕರಿದೇವಿ ಮಹಾತ್ಮೆ ಪುರಾಣ

ಶ್ರೀ ಬನಶಂಕರಿ ದೇವಿಯ ಹಾಗೂ ಬದಾಮಿ ಕ್ಷೇತ್ರದ ಮಹಿಮೆಯನ್ನು ಕುರಿತು ೭೭೭ ಭಾಮಿನಿ ಷಟ್ಪದಿ ಪದ್ಯಗಳಲ್ಲಿ ಕಾವ್ಯವು ರಚನೆಗೊಂಡಿದೆ. ಕಾವ್ಯವನ್ನು ಬರೆಯಿಸುವವಳು ದೇವಿಯೇ ಎಂಬ ಸಮರ್ಪಣಾ ಭಾವವನ್ನು ಕಾವ್ಯದಾರಂಭದಲ್ಲಿಯೇ ಬಿಂಬಿಸುವ ಕವಿಯ ಮಾತುಗಳು ಹೀಗಿವೆ–

ವಾಣಿ ವೀಣೆಯ ಮೀಟದೊಡೆ ತಾ
ನೇನು ಹೇಳಲಿ ಸಪ್ತ ಸ್ವರಗಳು
ತಾನೆ ಮೊಳಗಿದೆ ತಾಳಸ್ವರಲಯ ಮಧುರ ಸಂಗೀತಾ ।
ಮಾನವೆನ್ನಯ ಹೃದಯ ಪೀಠದಿ
ಜಾಣೆ ಬನಶಂಕರಿಯು ವಾಸಿಸಿ
ಏನು ಹೇಳಲಿ ತನ್ನ ಮಹಿಮೆಯ ತಾನೆ ಬರೆಸಿಹ ॥

(ಪುಟ : ೦೨, ಪದ್ಯ : ೦೭)

ಎಂಬ ರೀತಿಯು ಕವಿಯ ವಿನಮ್ರಭಾವಕ್ಕೆ ಕನ್ನಡಿ ಹಿಡಿಯುತ್ತಾ ಚಾಮರಸ ಮತ್ತು ಕುಮಾರವ್ಯಾಸರ ಸಮರ್ಪಣಾ ಭಾವವನ್ನು ನೆನಪಿಸುತ್ತದೆ. ದೇವಿಯು ದುಷ್ಟದುರ್ಗಾಸುರನನ್ನು ಮರ್ಧಿಸಿ ದುರ್ಗಾಸುರ ಮರ್ಧಿನಿಯಾದ ಪೌರಾಣಿಕ ಕಥೆಯ ಸನ್ನಿವೇಶವನ್ನು ಕವಿ ಬಣ್ಣಿಸಿರುವುದು ಹೀಗೆ.

ದುಷ್ಟ ದುರ್ಗಾಸುರನ ಎದೆಯನು
ಮೆಟ್ಟಿ ರುಂಡವ ಕಡಿದು ಚಂಡಾಡಿರ್ದ ಮಹಾದುರ್ಗಿ
ಭಕ್ತರಾಕಷ್ಟವಂ ಪರಿಹರಿಸಲೋಸುಗ
ಸೃಷ್ಟಿಯೊಳ್ ಬನದಂಬೆ ಶಂಕರಿ ಎನಿಸಿಕೊಂಡಳು ॥

(ಪುಟ : ೦೩, ಪದ್ಯ : ೧೦)

ಎಂದು ಕವಿ 'ಬನಶಂಕರಿಯೇ ವನಶಂಕರಿ' ಎನ್ನುವನು. ಕಾವ್ಯಾರಂಭದಲ್ಲಿ ಬರುವ ಕುರುಡ ಭಕ್ತಬಾನನು ದೇವಿಯನ್ನು ಭಜಿಸಿ ದೃಷ್ಟಿ ಪಡೆದು ಅವಳನ್ನು ಸ್ತುತಿಸಿದ ರೀತಿಯನ್ನು ಕವಿಯು ಹೀಗೆ ಬಣ್ಣಿಸುತ್ತಾರೆ.

ನಿನ್ನ ಧ್ಯಾನವೇ ಯೋಗ ಯಜ್ಞವು । ನಿನ್ನ ಧ್ಯಾನವೇ ಜಪತಪಗಳು
ನಿನ್ನಿ ಧ್ಯಾನದಿ ಸಕಲ ತೀರ್ಥವು । ನಿನ್ನಿ ಧ್ಯಾನದಿ ಸಕಲ ಕ್ಷೇತ್ರವು ॥

(ಪುಟ : ೨೦, ಪದ್ಯ : ೦೬)

ಎಂಬ ಮೇಲಿನ ಪದ್ಯದ ವಿಚಾರಗಳು ದೇವಿಯ ಮಹಿಮೆಯನ್ನು ಎತ್ತಿ ಹಿಡಿಯುತ್ತವೆ.

ಕರ್ನಾಟಕದ ತುಂಬೆಲ್ಲಾ ಶಕ್ತಿ ಪೀಠಗಳು ತಲೆಯೆತ್ತಿದ ಸಂದರ್ಭದಲ್ಲಿ ಚಾಲುಕ್ಯರ ಆಧಿದೇವತೆಯೆಂದು ಬನಶಂಕರಿಯು ಪ್ರಖ್ಯಾತಳಾಗಿದ್ದಳು. ಅವಳನ್ನು ತ್ರಿಮೂರ್ತಿಗಳಿಗೆ ವರಪ್ರಧಾಯಿನಿ ಎಂದು ಮುಂತಾಗಿ ಹೇಳುವರು. ಈ ದೈವಿ ಭಾವವೇ ಕಾವ್ಯದಲ್ಲಿ ಬರುವ ಎಲ್ಲ ತತ್ವಗಳಿಗೆ ತಳಹದಿಯಾಗಿದ್ದು ದುರ್ಗಾಸುರನ ಪ್ರಸಂಗವು ಕಾವ್ಯದ ಮುಖ್ಯ ಭಾಗವಾಗಿ ಮೂಡಿ ಬಂದಿದೆ.

ಹಿರಣ್ಯಾಕ್ಷ ವಂಶದ ಸಂತತಿಯವರಾದ 'ರುರುವ ಚಕ್ರವರ್ತಿ'ಯ ಮಗನೇ 'ದುರ್ಗಾಸುರ'ನು. ತಂದೆಯ ಅನುಮತಿ ಪಡೆದ ಈತನು ೧೦೦ ವರ್ಷಗಳ ಕಾಲ ಬ್ರಹ್ಮನನ್ನು ಕುರಿತು ಅಗ್ನಿ, ನೀರು, ನದಿಗಳ ಮಧ್ಯೆ ಕುಳಿತು ಗಿಡಕ್ಕೆ ಜೋತುಬಿದ್ದು ಉಗ್ರ ತಪಗೈಯ್ಯುವನು. ತಪಸ್ಸಿಗೆ ಮೆಚ್ಚಿ ಬ್ರಹ್ಮನು ವರಕೊಡಲು ಪ್ರತ್ಯಕ್ಷನಾದಾಗ ದುರ್ಗಾಸುರನು ಕೇಳುವ ಪ್ರಶ್ನೆಯ ರೀತಿ ನಿಜಕ್ಕೂ ಆಶ್ಚರ್ಯ ಮೂಡಿಸುವಂಥದು. ಅದನ್ನು ಕವಿ ಹೀಗೆ ಬಣ್ಣಿಸುತ್ತಾರೆ :

ನಾನೆ ಬ್ರಾಹ್ಮಣ ನಾನೆ ಕ್ಷತ್ರಿಯ
ನಾನೆ ತಿಳಿ ರುದ್ರಾದಿ ಚೇತನ
ನಾನೆ ಲೋಕದ ಸರ್ವಶಕ್ತನು ಮಂತ್ರ ಮೂರುತಿಯು
ನೀನು ಈ ವರ ಕರುಣಿಸೆನ್ನಲು ॥ (ಪುಟ : ೫೫, ಪದ್ಯ : ೩೪)

ಈತ ಕೇಳಿದ ಸರ್ವಾಧಿಕಾರತ್ವದ ವರ ನೀಡಲು ಸಾಧ್ಯವಾಗದ ಬ್ರಹ್ಮನು ನಿರ್ಗಮಿಸುವನು. ಆದರೆ ದುರ್ಗಾಸುರನು ಮತ್ತೆ ಸೂಜಿಯ ಮೇಲೆ ತಲೆಯಿಟ್ಟು ಶಿರ್ಶಾಸನದ ಮೂಲಕ ಕಠೋರ ತಪಸ್ಸನ್ನಾಚರಿಸಲು ಬ್ರಹ್ಮನೇ ಮಣಿದು ವರ ಕರುಣಿಸಿದನು. ಹೀಗೆ ಬ್ರಹ್ಮನಿಂದ ವರ ಪಡೆದ ದುರ್ಗಾಸುರನು ಶುಕ್ರನೇ ಗುರುವಾಗಿ ಇಂದ್ರ-ವರುಣ ಅಗ್ನಿ ವಾಯು ಮೊದಲ್ಗೊಂಡು ಅಷ್ಟದಿಕ್ಪಾಲಕರು ಇವನಿಗೆ ಅಧೀನರಾಗಿ, ಲೋಕಗಳೆ ತಲ್ಲಣಗೊಂಡು, ಭಯಗ್ರಸ್ಥರಾದ ದೇವತೆಗಳು ಈತನ ಸಂಹಾರವೇ ಈ ಸಮಸ್ಯೆಗೆ ಪರಿಹಾರ ಎಂದು ಯೋಚಿಸಿ, ಜಗ್ಜನನಿ ದುರ್ಗಿಯನ್ನು ಸ್ತುತಿಸುವ ರೀತಿ ಕವಿಯ ಮಾತುಗಳಲ್ಲಿ ಹೀಗೆ ವರ್ಣಿತವಾಗುತ್ತದೆ.

ವಿಶ್ವಧಾರಳೆ ವಿಶ್ವಚೇಷ್ಠಿತೆ
ವಿಶ್ವ ಅಣು ತೃಣ ಕಾಷ್ಠ ಪೂರ್ಣತೆ
ವಿಶ್ವವ್ಯಾಪಕವಾದ ವಿಶ್ವೇಶ್ವರಿಯೆ ಜಗದಂಬಾ ॥ (ಪುಟ : ೬೯, ಪದ್ಯ : ೧೪.)

ಭಾರತದ ಪ್ರತಿ ಪ್ರಾಂತದಲ್ಲಿ ಕಂಡು ಬರುವ ಶಕ್ತಿದೇವತೆಯ ಪುರಾಣಗಳ ಮಾದರಿಗೆ ದುರ್ಗಾಸುರನ ಕಥೆ ಒಂದು ದೃಷ್ಟಾಂತವಾಗಿದೆ. ಕಾವ್ಯಾರಂಭದಲ್ಲಿ ದೇವಿಯ ಅನುಗ್ರಹ ತಿಳಿಸುವ ಕುರುಡ ಭಕ್ತಭಾನನ ಕಥೆಯನ್ನು ಹೇಳಿದರೆ ಕೊನೆಯಲ್ಲಿ ನೇಕಾರ ವೃತ್ತಿಯ ದೇವಾಂಗ ವಂಶಜನಾದ ಕವಿಯು ಕುಲದೈವ ಮತ್ತು ಮನೆ ದೈವವಾದ ಬನಶಂಕರಿಯನ್ನು ನೆನೆಯುವ ಹಿನ್ನೆಲೆಯಲ್ಲಿ ಬನಶಂಕರಿಯ ಭಕ್ತನಾದ ಜೇಡರ ಮಲ್ಲಪ್ಪನ ಕಥೆಯನ್ನು ಚಿತ್ರಿಸುತ್ತಾನೆ.

ಬನಶಂಕರಿ ಭಕ್ತ ಜೇಡರ ಮಲ್ಲಪ್ಪ ಸಾಮಾನ್ಯ ನೆಯ್ಗೆ ಕಾಯಕದವನು. ಸೋಮಶೇಖರನೆಂಬ ಕವಿ ಮಲ್ಲಪ್ಪನು ಬರೆದ ಬನಶಂಕರಿಯ ಜನಪದ ಹಾಡುಗಳನ್ನು ಕಂಡು ಸಹಿಸದಾದನು. ಅಷ್ಟಕ್ಕೇ ಬಿಡದೆ ಅರಸ ವಿರೂಪಾಕ್ಷನ ಮೂಲಕ ಇವನಿಗೆ ಒಂದೇ ದಿನದಲ್ಲಿ ಲಿಂಗ, ನಂದಿ ಮತ್ತು ಷಡಕ್ಷರ ಮಂತ್ರವನ್ನು ರೇಶ್ಮೆ ವಸ್ತ್ರದಲ್ಲಿ ನೆಯ್ಯುವಂತೆ ಆಜ್ಞಾಪಿಸುವನು. ದೇವಿಯನ್ನು ಸ್ಮರಿಸಿದ ಮಲ್ಲಪ್ಪನು ಕೇವಲ ಲಿಂಗ ಮತ್ತು ನಂದಿಯನ್ನು ನೆಯ್ಯುವಲ್ಲಿ ಮಾತ್ರ ಯಶಸ್ವಿಯಾದುದನ್ನು ಕಂಡು ಸಂಪ್ರೀತಗೊಂಡ ಅರಸ ವಿರೂಪಾಕ್ಷನು ಮಲ್ಲಪ್ಪನಿಗೆ ಶರಣಾಗತನಾಗುವನು.

ಇದರೊಂದಿಗೆ ಕವಿ ತಮ್ಮ ಆರಂಭದ ಕಾವ್ಯಕೃಷಿಯಲ್ಲಿ ಹೆಚ್ಚಾಗಿ ಅವಧೂತ ಪರಂಪರೆಯ ಶರಣರ, ಸಂತರ ಚರಿತ್ರೆಯನ್ನು ಗದ್ಯದಲ್ಲಿ ಬರೆದ ಪರಿಣಾಮವಾಗಿ ಅಂದರೆ ಕ್ರಿ.ಶ. ೧೭೫೦ರ ಹೊತ್ತಿಗೆ ಬರುವ ಸಮಕಾಲೀನ ಅನುಭಾವಿಗಳಾದ ಇಟಗಿ ಭೀಮಾಂಬಿಕೆ, ಕಳಸದ ಗೋವಿಂದ ಭಟ್ಟ, ಶಿಶುನಾಳ ಶರೀಫ, ಹೊಳೆಆಲೂರ ಯಚ್ಚರಸ್ವಾಮಿ, ನವಲಗುಂದದ ನಾಗಲಿಂಗಜ್ಜ, ಕಡಕೋಳ ಅಯ್ಯಪ್ಪಜ್ಜ, ಕುಲಗುರು ರುದ್ರಮುನಿ ಇವರನ್ನು ಸ್ತುತಿಸಿದ್ದಾರೆ.

ಭಕ್ತಭಾನನ ಮತ್ತು ಜೇಡರ ಮಲ್ಲಪ್ಪನ ಕಥೆ ಹಾಗೂ ದುರ್ಗಾಸುರನ ತಪಸ್ಸು ಮತ್ತು ಆತನ ವಧೆ ಇಲ್ಲಿನ ವಿನೂತನ ಅಂಶಗಳಾಗಿ ಹೊರಹೊಮ್ಮಿವೆ. ಇದೆಲ್ಲಕ್ಕೂ ಮೂಲ ಪ್ರೇರಣೆ ಕವಿಯ ದೈವೀ ಭಾವವೇ ಆಗಿದೆಯೆಂಬುದಂತೂ ಸುಸ್ಪಷ್ಟ.

೩.೨.೭. ಡಾ. ಬಾಬಾ ಸಾಹೇಬ ಅಂಬೇಡ್ಕರ ಪುರಾಣ

ಡಾ. ಬಾಬಾ ಸಾಹೇಬ ಅಂಬೇಡ್ಕರ್ ಪುರಾಣವು ತೋಂಟದಾರ್ಯ ಮಠ ಗದಗದಿಂದ ೨೦೧೦ರಲ್ಲಿ ಪ್ರಕಟಣೆಗೊಂಡ ಪುರಾಣ ಕಾವ್ಯ. ಈ ಪುರಾಣ ಕಾವ್ಯವು ೧೬೨೬ ಭಾಮಿನಿ ಷಟ್ಪದಿ ಪದ್ಯಗಳನ್ನು ಒಳಗೊಂಡಿದೆ. ಈ ಕಾವ್ಯದ ವಿಶೇಷವೆಂದರೆ ಒಂದು ಚಾರಿತ್ರಿಕ ವಸ್ತು ವಿಷಯವನ್ನು ವಾಸ್ತವಿಕ ನೆಲೆಗಟ್ಟಿನ ಮೇಲೆ ಪುರಾಣ ಕಾವ್ಯವನ್ನಾಗಿ ರಚಿಸಿರುವುದು. ಇಲ್ಲಿ ಯಾವುದೇ ರೀತಿಯ ಪವಾಡಗಳು ಇಲ್ಲ. ಪ್ರಸ್ತುತ ಕೃತಿಯು ಚಾರಿತ್ರಿಕ ದಾಖಲೆಯ ಕೃತಿಯಾಗಿ ಕಂಡು ಬರುತ್ತದೆ.

ಆಧುನಿಕ ಭಾರತದ ಧ್ರುವ ತಾರೆಯಾದ ಅಂಬೇಡ್ಕರ್‌ರವರ ಕುರಿತು ಕವಿ ರಾಮಣ್ಣ ಬ್ಯಾಟಿ ಅವರು ತೋಂಟದ ಸಿದ್ಧಲಿಂಗ ಯತಿಗಳ ಆಶೀರ್ವಾದದಿಂದ ಬರೆದಿರುವುದಾಗಿ ತಮ್ಮ ಪ್ರಸ್ತಾವನೆಯಲ್ಲಿ ಹೇಳಿಕೊಂಡಿದ್ದಾರೆ. ಭಾರತದ ಸಾಮಾಜಿಕ ಪರಿಸ್ಥಿತಿ ಹದಗೆಟ್ಟಿರುವ ಕಾಲದಲ್ಲಿ ದಲಿತ ಸೂರ್ಯನಾಗಿ, ಜಾತಿಯ ಸಮಸ್ಯೆಯನ್ನು ತೊಡೆದು ಹಾಕಲು ತಮ್ಮ ಜೀವನವನ್ನು ಮುಡುಪಾಗಿಟ್ಟವರು ಅಂಬೇಡ್ಕರರು. ಭಾರತದ ಪ್ರಜೆಗಳಿಗೆ ಒಂದೇ ವಿಧದ ಕಾನೂನು ಇರಬೇಕು ಎಂದು ಅರಿತುಕೊಂಡು ಭಾರತ ಸಂವಿಧಾನವನ್ನು ಸಿದ್ಧಪಡಿಸಿದವರು. ಆ ಮೂಲಕ 'ಸಂವಿಧಾನದ ಶಿಲ್ಪಿ' ಎಂಬ ಬಿರುದಿಗೆ ಪಾತ್ರರಾದವರು. ಪ್ರಸ್ತುತ ಕಾವ್ಯವನ್ನು ರಚಿಸಲು ಕವಿ ರಾಮಣ್ಣನವರು ಅಂಬೇಡ್ಕರ್‌ರನ್ನು ಕುರಿತು ಈವರೆಗೆ ರಚಿತವಾಗಿರುವ ಹಲವು ಕೃತಿಗಳನ್ನು ಅಧ್ಯಯನ ಮಾಡಿದ್ದಾರೆ.

ಕವಿ ಅಂಬೇಂಡ್ಕರ್‌ರನ್ನು ಕುರಿತು ಕಾವ್ಯವನ್ನು ಬರೆದ ಉದ್ದೇಶವನ್ನು ಹೀಗೆ ಹೇಳಿಕೊಂಡಿದ್ದಾರೆ.

ಭವ್ಯ ಭಾರತ ಸಂವಿಧಾನದ
ದಿವ್ಯ ಶಿಲ್ಪಿಯು ಎನಿಸಿ ದೇಶದ
ನವ್ಯ ನಾಗರಿಕತೆಗೆ ತಾ ರೂವಾರಿ ಎನಿಸಿಹನು ।
ಸದ್ವಿವೇಕದಿ ದೀನ ದಲಿತರ
ಸವ್ಯಸಾಚಿಯು ಎನಿಸಿದಾತನು
ದಿವ್ಯ ಮೂರುತಿ ಬಿ.ಆರ್. ಅಂಬೇಡ್ಕರ್‌ರ ಚರಿತವಿದು ॥

(ಪುಟ : ೦೧, ಪದ್ಯ : ೦೩)

ಅಂಬೇಡ್ಕರ್‌ರು 'ಭಾರತದ ದೀನ ದಲಿತರ ವಿಮೋಚನೆಗಾಗಿ ತಾವು ನಡೆಸಿದ ಹೋರಾಟವನ್ನು ದೇಶದ ಸ್ವಾತಂತ್ರ್ಯದ ಅಂಗವಾಗಿಯೇ ಸಂಘಟಿಸಿ ಅಸ್ಪೃಶ್ಯತಾ ನಿವಾರಣೆ, ಎಲ್ಲಾ ದುರ್ಬಲ ವರ್ಗಗಳ ವಿವೇಚನೆಯಾಗದ ಹೊರತು ದೇಶದ ಸ್ವಾತಂತ್ರ್ಯದ ಅರ್ಥಸಹಿತ ಎಂಬ ಮೂಲ ತತ್ವವನ್ನು ಪ್ರತಿಪಾದಿಸಿದ ಏಕೈಕ ನಾಯಕರಾಗಿದ್ದರು. ಅವರೇ ಕೇವಲ ಅಸ್ಪೃಶ್ಯ ನಾಯಕರಾಗಿರದೇ ಇಡೀ ಮಾನವ ಕುಲದ ಹಕ್ಕುಗಳು, ಸ್ವಾತಂತ್ರ್ಯ ಸಮಾನತೆ ಮತ್ತು ಭ್ರಾತೃತ್ವದ ಸ್ಥಾಪನೆಗಾಗಿ ಹೋರಾಡಿದ ಮಹಾನುಭಾವರಾಗಿದ್ದರು. ಅವರು ತಮ್ಮ ಇಡೀ ಜೀವನವನ್ನು ಈ ಗುರಿ ಸಾಧನೆಗಾಗಿ ಮುಡಿಪಾಗಿಟ್ಟರು. (ಡಾ. ಬಾಬಾ ಸಾಹೇಬ್ ಅಂಬೇಡ್ಕರರ ಬರಹಗಳು ಮತ್ತು ಭಾಷಣಗಳು ಪು. ೧೩) ಡಾ. ಅಂಬೇಡ್ಕರರು ಜಾತಿ–ಭೇದವನ್ನು ಅಳಿಸುವ ಕ್ರಾಂತಿಕಾರ್ಯವನ್ನೇ ಮಾಡಿದವರು. ಅವರನ್ನು ಕುರಿತು ಇಂತಹ ಒಂದು ಚಾರಿತ್ರಿಕ ಕಾವ್ಯವನ್ನು ಕವಿ ರಾಮಣ್ಣ ಬ್ಯಾಟಿಯವರು ಬರೆದು ಪೂರೈಸಿದ್ದಾರೆ. ಇಲ್ಲಿ ಯಾವುದೇ ವೈಭವೀಕರಣವಿಲ್ಲದೆ ವರ್ಣನೆಗಳಿಲ್ಲದೆ ಸಹಜ ವಾಸ್ತವ ನಿರೂಪಣೆಯು ಮುಖ್ಯವಾಗಿದೆ. ಈ ಕಾವ್ಯವು

ಜಾತಿಯೆಂಬ ಕರಾಳ ಕತ್ತಲೆ
ಭೂತ ಭಾರತೀಯರನು ಪಿಡಿದಿರೆ
ನೀತಿ ದಂಡವ ಪಿಡಿದ ಮಾಂತ್ರಿಕ ಬಂದ ಮಗುವಾಗಿ ॥

(ಪುಟ : ೧೪, ಪಲ್ಲವಿ ಪದ್ಯ)

ಅಂಬೇಡ್ಕರ್ ಪುರಾಣವು ಒಂದು ಕಾವ್ಯ ಹೊರತು ಪುರಾಣವಲ್ಲ. ಗ್ರಾಮೀಣ ಜನತೆಗೆ ಅಂಬೇಡ್ಕರರ ಜೀವನವನ್ನು ಪರಿಚಯಿಸುವ ಉದ್ದೇಶದಿಂದ ಇದನ್ನು ಪುರಾಣವೆಂದು ಕರೆಯಲಾಗಿದೆ.

ಆಧುನಿಕ ಭಾರತದ ರೂವಾರಿಗಳಲ್ಲಿ ಅಂಬೇಡ್ಕರರು ಪ್ರಮುಖರಾಗಿದ್ದಾರೆ. ಸಾಮಾಜಿಕ, ರಾಜಕೀಯ ಹಿನ್ನೆಲೆಯಲ್ಲಿ ಅವರ ನಿಲುವು-ಒಲವು, ನಿರ್ಧಾರಗಳು ಹೊಸ ಯುಗವನ್ನು ಸೃಷ್ಟಿ ಮಾಡಲಿಕ್ಕೆ ದೀನ-ದಲಿತರ ಧ್ವನಿಯಾಗಿ ಅವರು ಹೊರಹೊಮ್ಮಿದ್ದಾರೆ. ಅದಕ್ಕಾಗಿ ಕವಿ ರಾಮಣ್ಣ ಬ್ಯಾಟಿಯವರು

ಬರಿಯ ಮಾತಿನ ಬಂಡರಾಡುವ
ಹರಟೆಯ ಕಥೆಯಲ್ಲ ತಾನಿದು
ತರುಣ ತರುಣಿಯರೊಂದು ವಿರಹದ ಕಾವ್ಯವಿದುವಲ್ಲಾ ।
ನರರ ಜಾತ್ಯಾಂಧತೆಯ ಕತ್ತಲೆ
ಹರಿಸಿ ಸಮತೆಯ ಬೆಳಕು ಚೆಲ್ಲಲು
ಧರೆಗೆ ಮನು ಅವಧರಿಸಿದಂಬೇಡ್ಕರ ಪುರಾಣವಿದು ॥

(ಪುಟ : ೧೪, ಪದ್ಯ : ೦೩.)

ಹೀಗೆ ಹೇಳುವ ವಿಚಾರ ಕಾವ್ಯವು ಸಾಮಾನ್ಯವಾದುದಲ್ಲವೆಂದು ಹೇಳುವ ಮೂಲಕ ಚಾಮರಸನ ಕಾವ್ಯಮಾರ್ಗವನ್ನು ಅನುಸರಿಸಿದ ಬಗೆ ಇಲ್ಲಿ ವ್ಯಕ್ತವಾಗಿದೆ.

ಪ್ರಸ್ತುತ ಪುರಾಣದಲ್ಲಿ ಹೊಸ ಯುಗದ ನಿರ್ಮಾಪಕ ಜಾತಿಯಿಂದ ಶೂದ್ರನಾದ ಪರಿಣಾಮವೇ ಮೇಲ್ವರ್ಗದವರ ತಿರಸ್ಕಾರ, ಅವಮಾನ, ಅಪಮಾನ, ಅಸ್ಪೃಶ್ಯತೆಯ ಆಚರಣೆಯ ತುಡಿತ, ಹೊಡೆತ ಇವೆಲ್ಲವುಗಳನ್ನು ಅನುಭವಿಸುವ ನೋವು ಅಂಬೇಡ್ಕರರಿಗೆ ಬಂದಿತು. ಕೆಲವು ಘಟನೆಗಳು ಮನಸ್ಸು ಕಲಕುವಂತೆ ಈ ಕೃತಿಯಲ್ಲಿ ಮೂಡಿ ಬಂದಿವೆ.

ಅಂಬೇಡ್ಕರರ ಪುರಾಣದಲ್ಲಿ ಅನೇಕ ವಿಷಯಗಳು ಹದುಳವಾಗಿ ಬೆರೆತುಕೊಂಡಿದೆ. ಅವುಗಳಲ್ಲಿ ಮುಖ್ಯವಾಗಿ ಅವರು ಸಮಾಜದವರೊಂದಿಗೆ ನೊಂದ ವಿಷಯವನ್ನು ಕಾವ್ಯದಲ್ಲಿ ಹೀಗೆ ಹೇಳುತ್ತಾರೆ.

ಯಾವ ಕಾರಣಕ್ಕೆನ್ನ ಹುಟ್ಟಿಸಿ
ದೇವ ಗೋಳಾಡಿಸುತಲಿರುವೆಯೊ
ಪಾವನಾಂಗನೆ ಕರುಣೆಬಾರದೆ ಏತಕೊ ನಿನಗೆ ।
ಸಾವು ಬದುಕಿರುವಾಗಲೆನಗಿದು
ನೋವು ತನು ಮನ ದಹಿಸುತಿರ್ಪದು
ಜೀವ ತಳಮಳಿಸುತ್ತ ಕಂಬನಿ ಮಿಡಿದ ಸ್ವೇಷನದಿ ॥

(ಪುಟ : ೭೯, ಪದ್ಯ : ೫೧)

ಈ ರೀತಿಯಲ್ಲಿ ತಮ್ಮ ಮನದ ನೋವನ್ನು ಅಂಬೇಡ್ಕರವರ ಭಾವನೆಯ ಮೂಲಕ ಕವಿ ರಾಮಣ್ಣ ಬ್ಯಾಟಿಯವರು ಸ್ವಾರಸ್ಯ ಪೂರ್ಣವಾಗಿ ಸೆರೆ ಹಿಡಿದಿದ್ದಾರೆ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಅವರ ಒಂದು ಮುಖವಾದರೆ, ಇನ್ನೊಂದು ಅಸ್ಪೃಶ್ಯತೆಯ ವಿರುದ್ಧದ ಹೋರಾಟ ಮುಖ್ಯವಾದುದಾಗಿದೆ. ಜೊತೆಗೆ ಸಂಸಾರದ ತಾಪತ್ರಯ ಇವೆಲ್ಲವೂ ಅಂಬೇಡ್ಕರರನ್ನು ಭಿನ್ನವಾಗಿಸುತ್ತಿದ್ದವು.

ಒಟ್ಟಿನಲ್ಲಿ ಅಂಬೇಡ್ಕರರ ಬದುಕು ಕಡಲ ಕುದಿತದ ಎಣ್ಣೆ ಕೊಪ್ಪರಿಗೆಯಾಗಿದ್ದರ ಜೊತೆಗೆ ಎಲ್ಲಾ ಸವಾಲನ್ನು ಸಾಧ್ಯತೆಯನ್ನು ಮೆಟ್ಟಿ ನಿಂತು ಭಾರತಕ್ಕೆ ಸ್ವಾತಂತ್ರ್ಯ ತಂದಿದ್ದರು. ಕಾನೂನು ಮಂತ್ರಿಯಾಗಿ ಸಮಾನತೆಯ ಪ್ರಜಾಪ್ರಭುತ್ವದ ತಳಹದಿಯಲ್ಲಿ ಕಾನೂನಿನ ಮಸೂದೆಯನ್ನು ಸಿದ್ಧ ಪಡಿಸಿದವರು. ಮುಂದೆ ಅವರು ಸ್ವಾತಂತ್ರ್ಯದ ಬಳಿಕ ಅಸ್ಪೃಶ್ಯತೆಯ ಭೂತ ಹಾಗೆಯೇ ಮುಂದುವರಿದಿದ್ದರಿಂದ ಅಕ್ಟೋಬರ್ ೧೪ ೧೯೫೬ರಂದು ಬೌದ್ಧ ಧರ್ಮಕ್ಕೆ ಸೇರ್ಪಡೆಯಾದರು.

ಜನರ ಕಣ್ಣಿಗೆ ವಜ್ರದಂದದಿ
ಘನ ಕಠೋರಿಗಳಾಗಿ ಕಂಡರು
ಎನಿತು ಕೋಮಲ ಹೃದಯೀ ಕರುಣಾಮೂರ್ತಿಯಬೇಡ್ಕರ್ ॥

(ಪುಟ : ೪೦೭, ಪದ್ಯ : ೦೫)

ಇಂತಹ ಕೋಮಲ ಮೂರ್ತಿಯು ಕೊನೆಯವರೆಗೂ ಸತ್ಯ, ಸಮಾನತೆ, ಸ್ವಾತಂತ್ರ್ಯಕ್ಕಾಗಿ ಹೋರಾಡಿ ೧೯೫೬ ಡಿಸೆಂಬರ್ ೬ರಂದು ಪರಿನಿರ್ವಾಣಗೊಂಡರು.

ಒಟ್ಟಿನಲ್ಲಿ ಈ ಪುರಾಣ ಕಾವ್ಯವು ೩೬ ಅಧ್ಯಾಯಗಳಲ್ಲಿ ಒಡಮೂಡಿ ಅಂಬೇಡ್ಕರರ ಹೋರಾಟದ ಬದುಕಿನ ಘಟನೆಗಳನ್ನು ಹಾಗೂ ಅವರ ಶೋಷಣೆಯ ಚಿತ್ರಗಳನ್ನು ಈ ಕಾವ್ಯವು ಚಿತ್ರಿಸುತ್ತದೆ. ಒಬ್ಬ ಚರಿತ್ರೆಯ ನಾಯಕನನ್ನು ಪುರಾಣದ ನಾಯಕನನ್ನಾಗಿ ಮಾಡಿದ್ದು ಕವಿ ರಾಮಣ್ಣ ಬ್ಯಾಟಿಯವರ ಕಾವ್ಯ ಪ್ರತಿಭೆಗೆ ಹಿಡಿದ ಕೈಗನ್ನಡಿಯಾಗಿದೆ.

◆◆◆

೩.೩ ಪಂ. ಶ್ರೀ ರಾಜಗುರು ಗುರುಸ್ವಾಮಿ ಕಲಕೇರಿಯವರ ಪುರಾಣ ಕಾವ್ಯಗಳು

* ಕವಿ
* ಕೃತಿಗಳು

೧. ಸುಕ್ಷೇತ್ರ ಶಾಖಾಪುರ ಶ್ರೀ ಬಸವಾಂಬಾದೇವಿ ಪುರಾಣ

೨. ಸುಕ್ಷೇತ್ರ ಅಬ್ಬೆ ತುಮಕೂರು ಶ್ರೀ ವಿಶ್ವಾರಾಧ್ಯ ಲೀಲಾವಿಳಾಸ ಪುರಾಣ

೩. ಶ್ರೀಮದ್ ಉಜ್ಜಯನಿ ಸದ್ಗುರು ಶ್ರೀ ಸಿದ್ಧಲಿಂಗ ಭಗವತ್ಪಾದ ಪುರಾಣ

೪. ಸುಕ್ಷೇತ್ರ ಕಲಬುರ್ಗಿ ಪರುಷ ಮಠದ ಶ್ರೀ ಗುರು ಚನ್ನಮಲ್ಲೇಶ್ವರ ಪುರಾಣ

೫. ಸುಕ್ಷೇತ್ರ ವ್ಹಿ. ಕೆ. ಸಲಗರ ಶ್ರೀ ಸಾಂಬಶಿವಯೋಗಿ ಪುರಾಣ

೬. ಸುಕ್ಷೇತ್ರ ಇಟಗಾ ಶ್ರೀ ಶಿವಲಿಂಗೇಶ್ವರ ಪುರಾಣ.

೭. ಶ್ರೀಗುರುಶಾಂತ ಶಿವಯೋಗಿ ಪುರಾಣ.

೮. ಬಡದಾಳ ತೇರಿನ ಮಠದ ಶ್ರೀ ಚನ್ನಮಲ್ಲೇಶ್ವರ ಲೀಲಾಮೃತ.

ಕವಿ :

ಪಂ. ಶ್ರೀ ರಾಜಗುರು ಗುರುಸ್ವಾಮಿ ಕಲಕೇರಿಯವರು ಬಿಜಾಪುರ ಜಿಲ್ಲೆ ಸಿಂದಗಿ ತಾಲೂಕಿನ ಕಲಕೇರಿ ಗ್ರಾಮದವರು. 'ಕಾಸಯ್ಯ' ಮತ್ತು 'ಪರಮ್ಮ' ದಂಪತಿಗಳಿಗೆ ಎರಡನೆಯವರಾಗಿ ದಿನಾಂಕ ೦೩-೦೯-೧೯೪೦ರಂದು ಜನಿಸಿದರು. ತಮ್ಮ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಕಲಕೇರಿ ಹಾಗೂ ತಾಳಿಕೋಟೆಯಲ್ಲಿ ಪಡೆದರು. ಸಂಗೀತ ವಿದ್ಯಾಭ್ಯಾಸಕ್ಕೆಂದು ೧೯೫೮ರಲ್ಲಿ ಗದುಗಿನ ವೀರೇಶ್ವರ ಪುಣ್ಯಾಶ್ರಮಕ್ಕೆ ಬಂದು ಡಾ. ಪಂ. ಪುಟ್ಟರಾಜ ಕವಿಗವಾಯಿಗಳವರ ಶಿಷ್ಯತ್ವ ಪಡೆದು, ಸಂಗೀತ ಮತ್ತು ಸಾಹಿತ್ಯಗಳ ವಿದ್ಯಾಭ್ಯಾಸ ಮಾಡಿದರು.

ತ್ರಿಭಾಷಾ ಕವಿಗಳು ಹಾಗೂ ಇವರ ಗುರುಗಳಾದ ಪಂ. ಪುಟ್ಟರಾಜ ಕವಿಗವಾಯಿಗಳು ಪುರಾಣ ರಚನೆಯ ಜೊತೆಗೆ ಪುರಾಣ ಪ್ರವಚನವನ್ನು ಮಾಡುತ್ತಿದ್ದರು. ಪುರಾಣ ಪ್ರವಚನ

ಸಂದರ್ಭದಲ್ಲಿ ಕಲಕೇರಿಯವರು ಪುರಾಣ ಪಠಣ ಮಾಡುತ್ತಿದ್ದರು. ಪುರಾಣ ರಚಿಸುವ ವೇಳೆಯಲ್ಲಿ ಪಂ. ಪುಟ್ಟರಾಜರು ಇವರೊಂದಿಗೆ ಚರ್ಚಿಸುತ್ತಿದ್ದರು. ಹೀಗೆ ಪುರಾಣ ಪಠಣ ಹಾಗೂ ಪುರಾಣ ಬರೆಯುವಾಗಿನ ಚರ್ಚೆಯ ಫಲವಾಗಿ ಇವರಲ್ಲಿ ಪುರಾಣ ಕಾವ್ಯಗಳನ್ನು ಬರೆಯುವ ಅಭಿರುಚಿ ಬೆಳೆಯಿತು. ಶ್ರೀಯುತರ ಹುಟ್ಟೂರಾದ ಕಲಕೇರಿ ಮಠದ ಪುರಾಣ ಬರೆಯುವ ಪ್ರಸ್ತಾಪವು ಇವರ ಗುರುಗಳ ಬಳಿ ಬರಲು, ಪಂ. ಪುಟ್ಟರಾಜರು ನಾನು ಬರೆಯುತ್ತೇನೆ ನೀನು ಕೂಡಾ ಪುರಾಣ ಕಾವ್ಯ ಬರೆಯಬೇಕೆಂದು ಆಶೀರ್ವದಿಸಿದರು.

ಪಂ. ಪುಟ್ಟರಾಜರ ಆಶೀರ್ವಾದದಿಂದ ಪುರಾಣಕಾವ್ಯ ಬರೆಯಲು ಪ್ರಾರಂಭಿಸಿದ ಶ್ರೀಯುತರ ಸಾಹಿತ್ಯದ ಪರಿಚಯ ಇಂತಿದೆ. 'ಕಲಬುರ್ಗಿ ಚೆನ್ನಮಲ್ಲೇಶ್ವರ ಪುರಾಣ', 'ನೆಗಳೂರು ಗುರುಶಾಂತೇಶ್ವರ ಪುರಾಣ', 'ಇಟಗಾ ಶಿವಲಿಂಗೇಶ್ವರ ಪುರಾಣ', 'ಅಬ್ಬೆ ತುಮಕೂರು ವಿಶ್ವಾರಾಧ್ಯ ಲೀಲಾವಿಲಾಸ', 'ಶಾಖಾಪುರ ಬಸವಾಂಬಾದೇವಿ ಪುರಾಣ', 'ಉಜ್ಜಯಿನಿ ಸಿದ್ಧಲಿಂಗ ಭಗವತ್ಪಾದ ಪುರಾಣ', 'ಆಲೂರ ಕೆಂಚ. ಬಸವೇಶ್ವರ ಲೀಲಾವಿಲಾಸ', 'ಶ್ರೀ ವ್ಹಿ. ಕೆ. ಸಲಗರ ಸಾಂಬಶಿವಯೋಗಿ ಪುರಾಣ', 'ಕೊಂಚಿಗೇರಿ ತಾತನ ಪುರಾಣ', 'ಗಂವಾರ ಅಮೃತ ಲಿಂಗೇಶ್ವರ ಪುರಾಣ' ಹಾಗೂ ಬಡದಾಳ ಚೆನ್ನಮಲ್ಲೇಶ್ವರ ಲೀಲಾಮೃತ ಎಂಬ ಪುರಾಣಕಾವ್ಯಗಳನ್ನು ಬರೆದಿರುವರು. ಶ್ರೀಯುತರು 'ಮಂಕುತಿಮ್ಮನ ಕಗ್ಗ'ದ ಮಾದರಿಯಲ್ಲಿ 'ಕರ್ಮಜ್ಞನ ಕಗ್ಗ' ಎಂಬ ಕಾವ್ಯವನ್ನು ರಚಿಸಿದ್ದಾರೆ.

ಪಂ. ರಾಜಗುರು ಗುರುಸ್ವಾಮಿಯವರು ಸಂಗೀತವನ್ನು ಸಾಹಿತ್ಯದಷ್ಟೇ ಆರಾಧಿಸಿದರು. ಹಿಂದೂಸ್ತಾನಿ ಸಂಗೀತವನ್ನು ಅವರು ಉತ್ತಮವಾಗಿ ಕಲಿತವರು. ಇದರಿಂದ ಪ್ರವಚನವನ್ನು ಸಂಗೀತದ ತಳದೊಂದಿಗೆ ನಿರೂಪಿಸಿ ಜನಪ್ರಿಯರಾದರು. ಅಲ್ಲದೆ ಭಾವಗೀತೆಗಳನ್ನು ಬರೆದು ಸಂಗೀತವನ್ನು ಜೋಡಿಸಿ ಧ್ವನಿಮುದ್ರಿಕೆಗಳನ್ನು ಹೊರತಂದು ಒಂದು ವಿಕ್ರಮವನ್ನೇ ಸಾಧಿಸಿದರು.

ಪುರಾಣ ಕೃತಿಗಳಲ್ಲದೆ 'ಚಿನ್ಮಯ' ಕಾದಂಬರಿಯನ್ನು ಬರೆದಿರುವರು. ಪ್ರಕಟವಾಗಿದೆ. 'ಗಾನಯೋಗಿ ಪಂಚಾಕ್ಷರ ಗವಾಯಿಗಳು' ನಾಟಕ, ಚುಟುಕುಗಳು, ಭಾವಗೀತೆ, ಲೇಖನಗಳನ್ನು ಬರೆದಿರುವರು. ಇವರು ಬರೆದ ಲೇಖನಗಳು 'ಬಸವಪಥ' ಮುಂ. ಮಾಸಿಕ ದೈನಿಕ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು ಒಟ್ಟು ೩೦ ಗ್ರಂಥಗಳು ರಚನೆಯಾಗಿ ಪ್ರಕಾಶನ ಕಂಡಿವೆ. ಕಾವ್ಯರಚನೆ ನಿರಂತರವಾಗಿದೆ. ಇವರ ಸಾಧನೆಯನ್ನು ಮನಗಂಡು ಕರ್ನಾಟಕ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ.

೩.೩.೧. ಸುಕ್ಷೇತ್ರ ಶಾಖಾಪುರ ಶ್ರೀ ಬಸವಾಂಬಾದೇವಿ ಪುರಾಣ

ಸುಕ್ಷೇತ್ರ ಶಾಖಾಪುರ ಶ್ರೀ ಬಸವಾಂಬೆಯ ಪುರಾಣವನ್ನು ರಾಜ್ಯ ಪ್ರಶಸ್ತಿ ಪುರಸ್ಕೃತ, ಸಂಗೀತ ಕಲಾ ಪ್ರವೀಣರಾದ ಪಂ. ರಾಜಗುರು ಗುರುಸ್ವಾಮಿಯವರು ಭಾಮಿನಿ ಷಟ್ಪದಿಯಲ್ಲಿ ಉತ್ತಮ ಗೇಯತೆಯೊಂದಿಗೆ ಬರೆದಿದ್ದಾರೆ. ಪ್ರಸ್ತುತ ಕಾವ್ಯವನ್ನು ೧೮ ಸಂಧಿಗಳಲ್ಲಿ ೭೭೧ ಪದ್ಯದಲ್ಲಿ, ಜನಮಾನಸದ ಮನಸ್ಸಿನಲ್ಲಿ ಅಚ್ಚಳಿಯದಂತೆ ಅರ್ಥಪೂರ್ಣವಾಗಿ ನಿರೂಪಿಸಿದ್ದಾರೆ.

ಗುಲಬರ್ಗಾ ಜಿಲ್ಲೆ ಜೇವರ್ಗಿ ತಾಲೂಕಿನ ಒಂದು ಸಣ್ಣ ಹಳ್ಳಿ ಶಾಖಾಪುರದಲ್ಲಿ ಅಲ್ಲಿ ನೆಲೆ ನಿಂತ ಮಹಾನ್ ಶಕ್ತಿ ಶ್ರೀ ಬಸವಾಂಬಾದೇವಿ. ಆದಿಶಕ್ತಿ ಅಪರಾವತಾರಿ ಎಂದೇ ಖ್ಯಾತಿ ಇವಳದ್ದು. 'ಕೊಟ್ಟರೆ ವರ, ಇಟ್ಟರೆ ಶಾಪ' ಎಂಬಂತೆ ಬಸವಾಂಬಾದೇವಿ ದುಷ್ಟ ಶಕ್ತಿಯ ದಮನ ಮಾಡಿ, ಸಾತ್ವಿಕ ಶಕ್ತಿಯನ್ನು ಬೆಳೆಸಿದ ದಿವ್ಯ ಬದುಕು ಈ ತಾಯಿಯದು. ಹೇಮರಡ್ಡಿ ಮಲ್ಲಮ್ಮಳಂತೆ, ನೆಲ್ಲೂರ ನಂಬೆಕ್ಕಳಂತೆ, ಅಕ್ಕ ಮಹಾದೇವಿಯಂತೆ ಸ್ತ್ರೀಕುಲದ ಶಿರೋಮಣಿಯಾಗಿ ಪ್ರಭಾವ ಬೀರಿದ ಮಹಾಮಾತೆ ಈ ಬಸವಾಂಬೆ. ಇಂತಹ ಮಹಾಮಹಿಮಳ ಪುರಾಣದ ರಚನೆಯನ್ನು ಕುರಿತು ಶ್ರೀ ಕಲಕೇರಿಯವರು ಕಾವ್ಯದ ಪೀಠಿಕಾ ಆಧ್ಯಾಯದಲ್ಲಿ ಹೀಗೆ ಹೇಳಿದ್ದಾರೆ.

ಶಾಂಭವಿಯ ಪ್ರತಿಬಿಂಬೆ ಶ್ರೀಬಸ
ವಾಂಬೆ ಲೀಲೆಗಳೆಳೆಯ ಜೋಡಿಸಿ
ಕಂಬಳಿಯ ನೇಯ್ದಂತೆಯಾಳ್ದಾಳ್ ಕವಿ ಬರೆದ ಚರಿತೆ ।
ತುಂಬು ಮನದಿಂ ತೀಡ್ದ ಜೇಂಗೊಡ
ದಿಂಬು ಚರಿತದ ಗ್ರಂಥವದು ಬಸ
ವಾಂಬೆ ಪೌರಾಣಕ್ಕೆಯಾಕರ ವಿಷಯ ದಧಿ ಕ್ಷೀರ ॥

(ಪುಟ : ೦೭, ಪದ್ಯ: ೩೦,)

ಎಂದು ರಚಿಸಿದ ಬಗೆಯನ್ನು ಹೇಳಿದ್ದಾರೆ.

ಪುರಾಣದ ಚರಿತ್ರೆ ನಾಯಕಿ 'ಜೋಗುರ ಹಿರೇಮಠ'ದಲ್ಲಿ ಶಿವಶರಣೆ ಬಸವಾಂಬೆಯು ಗೃಹಿಣೀ, ಸದ್‌ಗೃಹಸ್ಥೆಯಾಗಿ ಸಂಸಾರದ ಜಂಜಾಟಗಳನ್ನು ಅಂಟಿಸಿಕೊಳ್ಳದೆ, ಎಲ್ಲರಂತೆ ಎಲ್ಲರ ಮಧ್ಯೆಯೇ ಜೀವಿಸುತ್ತಿದ್ದರು. ಸಾಕ್ಷತ್ ಪಾರ್ವತಿಯ ಅಂಶದವಳಾಗಿ ನೂರಾರು ಪವಾಡಗಳನ್ನು ತೋರುತ್ತಾ, ನಂಬಿದ ಭಕ್ತರ ಕಲ್ಯಾಣ ಮಾಡುತ್ತ ಜೊತೆಗೆ ಶಾಖಾಪುರಕ್ಕೆ ಬಂದು ಅಲ್ಲಿ ಲಿಂಗೈಕ್ಯಳಾಗುತ್ತಾಳೆ. ಲಿಂಗೈಕ್ಯಳಾದರೂ ಜನರ ಮನದಲ್ಲಿ ಶಾಶ್ವತವಾಗಿ ಉಳಿಯುತ್ತಾಳೆ. ಹೀಗೆ ನಮ್ಮ ಮಧ್ಯೆಯೇ ಜೀವಿಸಿದ ಮಹಾಸಾಧ್ವಿ, ಶಿರೋಮಣಿ, ಶಿವಶರಣೆ ಬಸವಾಂಬೆಯ ಜೀವನ ಚರಿತ್ರೆಯನ್ನು ಈ ಪುರಾಣ ಹೊಂದಿದೆ.

ಶ್ರೀ ಬಸವಾಂಬೆಯು ತನ್ನ ಜೀವಿತಾವಧಿಯಲ್ಲಿ ಮಾಡಿದ ಜನರ ಸೇವೆ, ಲೀಲೆಗಳು, ವೈಚಾರಿಕ ಚಿಂತನೆಯ ಮಾತುಗಳು ವಾಸ್ತವಿಕತೆಗೆ ಹಿಡಿದ ಕೈಗನ್ನಡಿಯಾಗಿದೆ. ಅದನ್ನು ಗುರುಸ್ವಾಮಿಯವರು ಹೀಗೆ ಹೇಳುತ್ತಾರೆ.

ನಾರಿಯೊಲಿದರೆ ಗೌರಿ ಮುನಿದರೆ
ಮಾರಿ ಹೆಮ್ಮಾರಿಯನು ತಿರ್ದಿದ
ಭೂರಿ ಲೀಲೆಯನಾಡಿದಳ್ ಬಸವಮ್ಮ ಗಂವ್ಹರದೆ ॥

(ಪುಟ : ೭೬, ಸೂಚನೆ ಪದ್ಯ)

ಎಂದು ಲೀಲೆಗಳನ್ನು ಕುರಿತು ಹೇಳುತ್ತಾರೆ.

ಕಲ್ಯಾಣದ ಸಗರನಾಡಿನಿಂದ ಉದಿಸಿ ಬಂದ ಶ್ರೀ ಗುರುಸ್ವಾಮಿಯವರ ಬರವಣಿಗೆಯ ಭಾಷೆಯಲ್ಲಿ ಸಹಜವಾಗಿ ಕಲಬುರ್ಗಿ ಕನ್ನಡದ ಕಂಪು ಸೇರಿಕೊಂಡಿದೆ. ಧಾರವಾಡ ಕನ್ನಡದ ಗಡುಸು ಭಾಷೆಯ ಸೊಗಡನ್ನು ಹೆಣೆದುಕೊಂಡು ಒಟ್ಟಾರೆ ಉತ್ತರ ಕರ್ನಾಟಕದ ಗಂಡು ಭಾಷೆಯಲ್ಲಿ ಪುರಾಣ ರಚನೆಯಾಗಿರುವುದು ವಿಶೇಷವಾಗಿದೆ.

ಶ್ರೀ ಬಸವಾಂಬೆಯು ಯೋಗಿ ಪುರುಷ ವಿಶ್ವಾರಾಧ್ಯರ ಧರ್ಮ ಪತ್ನಿಯಾಗಿರುವುದರಿಂದ ಅನೇಕ ಪವಾಡಗಳನ್ನು ಕೌಟುಂಬಿಕ ಜೀವನದಿಂದ ರೂಢಿಸಿಕೊಂಡು ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದದ ಮಹಿಮೆಯನ್ನು ಅರಿತುಕೊಂಡಿರುವುದರಿಂದ ತನ್ನ ಕಾರಣೀ ಪುರುಷನಾದ ಶ್ರೀ ವಿಶ್ವಾರ್ಯಾಧ್ಯ ಗುರುವರ್ಯರಿಂದ ರುದ್ರಾಕ್ಷಿ ಮಾಲೆಯನ್ನು ಪಡೆದು ದೀಕ್ಷೆ ಹೊಂದಿದ ಮಹಾಮಾತೆಯಾದುದನ್ನು ಕಂಡ ವಿಶ್ವಾರಾಧ್ಯರು "ನನ್ನ ಯೋಗ ಜೀವನಕ್ಕೆ ತಕ್ಕ ಸತಿಯಾದೆ' ಎಂದು ಸಂತೋಷ ಪಡುತ್ತಾರೆ. ಹೀಗೆ ಧಾರ್ಮಿಕ ಆಧ್ಯಾತ್ಮಿಕ ಬದುಕಿಗೆ ಹಿಡಿದ ಕೈಗನ್ನಡಿಯಾಗಿ ಇಂದು ಗುಲಬರ್ಗಾ ಜನರ ಮನೆ ದೇವತೆಯಾಗಿ ನೆಲೆ ನಿಂತಿದ್ದಾಳೆ.

ಒಟ್ಟಿನಲ್ಲಿ ಆಧುನಿಕ ಕಾಲಕ್ಕೆ ಬೇಕಾಗುವಂತಹ ಒಂದು ಅತ್ಯುತ್ತಮ ಪುರಾಣವನ್ನು ಹೊಸ ಶೈಲಿಯಲ್ಲಿ ಹೆಣೆದಿರುವಲ್ಲಿ ಕವಿಯ ಮತ್ತು ಪುರಾಣದ ಹೆಗ್ಗಳಿಕೆಯನ್ನು ಹೇಳಿದ್ದಾರೆ. ಪುರುಷ ಪ್ರಧಾನವಾದ ನಮ್ಮ ಸಮಾಜದಲ್ಲಿ ಶಕ್ತಿ ಸ್ವರೂಪಿಣಿಯಾಗಿ ಪ್ರತಿಯೊಬ್ಬ ಪುರುಷನನ್ನು ತಕ್ಕುದಾಗಿ ರೂಪಿಸುವಲ್ಲಿ ಮಹಿಳೆಯರನ್ನು ಕುರಿತು ಪುರಾಣ ರಚಿಸಿರುವುದು ಅತ್ಯಂತ ಕಡಿಮೆ ಎಂದು ಹೇಳಬಹುದು. ಪ್ರಸ್ತುತ ಕಾವ್ಯದಲ್ಲಿ ವರ್ಣನೆ, ರೂಪಕ, ಉಪಮೇಯ, ಛಂದಸ್ಸು ಮುಂತಾದವುಗಳು ತುಂಬಾ ಸರಳವಾಗಿಯೇ ಮೂಡಿ ಬಂದಿವೆ ಎಂದು ಹೇಳಬಹುದಾಗಿದೆ.

೩.೩.೨ ಸುಕ್ಷೇತ್ರ ಅಬ್ಬೆ ತುಮಕೂರು ಶ್ರೀ ವಿಶ್ವಾರಾಧ್ಯ ಲೀಲಾ ವಿಳಾಸ ಪುರಾಣ

ಪಂ. ರಾಜಗುರು ಗುರುಸ್ವಾಮಿ ಕಲಿಕೇರಿ ಗವಾಯಿಗಳು ಅಬ್ಬೆ ತುಮಕೂರಿನ 'ಶ್ರೀ ವಿಶ್ವಾರಾಧ್ಯ ಲೀಲಾ ವಿಳಾಸ' ಎಂಬ ಪುರಾಣ ಗ್ರಂಥವನ್ನು ಭಾಮಿನಿ ಷಟ್ಪದಿ ಛಂದಸ್ಸಿನಲ್ಲಿ ಬರೆದಿದ್ದಾರೆ. ಪ್ರಸ್ತುತ ಪುರಾಣವು ೧೮ ಸಂಧಿಗಳಿಂದ ಕೂಡಿದ್ದು, ಒಟ್ಟು ೯೪೦ ಪದ್ಯಗಳನ್ನು ಒಳಗೊಂಡಿದೆ. ಕಲಬುರ್ಗಿ ಜಿಲ್ಲೆಯ ಯಾದಗಿರಿ ತಾಲೂಕ (ಈಗಿನ ಯಾದಗಿರಿ ಜಿಲ್ಲೆ) ಅಬ್ಬೆ ತುಮಕೂರಿನ ಶ್ರೀ ವಿಶ್ವಾರಾಧ್ಯ ಮಠವು ಕಾಶಿ ಪೀಠದ ಶಾಖಾ ಮಠವಾಗಿರುತ್ತದೆ. ಶ್ರೀ ವಿಶ್ವಾರಾಧ್ಯರ ಪುರಾಣವು ಅನೇಕ ಲೀಲೆಗಳನ್ನು ಭಕ್ತರ ಉದ್ಧಾರಕ್ಕೆಂದೆ ಅದನ್ನು ಗುರುಸ್ವಾಮಿಯವರು ಬರೆದಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತದೆ.

ವಿಶ್ವಾರಾಧ್ಯರ ಪೂಜೆ, ತಪಸ್ಸು, ಯೋಗ ಸಿದ್ಧಿಯಲ್ಲಿ ಅಘಟಿತ ಘಟನೆಗಳು ನಡೆಯುವುದು ಸಹಜ. ಅವುಗಳನ್ನು ಲೀಲಾಜಾಲವಾಗಿ ವಿವರಿಸುವಂತಹ ಈ ಪುರಾಣವು ಭಕ್ತರ ಮನದಲ್ಲಿ ಪ್ರಭಾವ ಬೀರುವಂತಾಗಿದೆ. ಹಲವು ಪುರಾಣಾದಿ ಗ್ರಂಥಗಳನ್ನು ರಚಿಸಿದ ಅನುಭವ ಶ್ರೀ ಗುರುಸ್ವಾಮಿ ಕಲಿಕೇರಿಯವರಿಗಿದೆ.

ಪ್ರಸ್ತುತ ಪುರಾಣದ ನಾಯಕರಾದ ವಿಶ್ವಾರಾಧ್ಯರ ಮಠವು ಕಾಶಿಪೀಠದ ಶಾಖಾಮಠ-ವಾಗಿದ್ದು, ಅಲ್ಲಿಯ ಪೂಜ್ಯ ಮಲ್ಲಿಕಾರ್ಜುನರು ಕರ್ನಾಟಕದ ಗುಲ್ಬರ್ಗಾ ಜಿಲ್ಲೆಯ ಗಂವಾರ ಗ್ರಾಮದಲ್ಲಿ ತಪೋನಿರತರಾಗಿ ಪೂಜೆ, ಧ್ಯಾನ ಮುಂತಾದ ಕರ್ಮಗಳನ್ನು ಮಾಡುವುದರಿಂದ ಪುರಾಣ ಪ್ರಾರಂಭವಾಗುತ್ತದೆ. ನಂತರ ವಿಶ್ವಾರಾಧ್ಯರು ಈ ಪೀಠಕ್ಕೆ ಅಧಿಪತಿಯಾಗುತ್ತಾರೆ. ವೃಷಭಲಿಂಗ ಶಾಸ್ತ್ರಿಗಳ ಮಗನಾದ 'ಬನದಯ್ಯ' ಹಾಗೂ 'ನೀಲಾಂಬೆ'ಯರೆಂಬ ದಂಪತಿಗಳ ಪುಣ್ಯ ಗರ್ಭದಲ್ಲಿ ಜನಿಸಿದವರೆ ಕಥಾ ನಾಯಕ ಶ್ರೀ ವಿಶ್ವಾರಾಧ್ಯರು.

ನೀಲಾಂಬೆಯ ಗರ್ಭದಲ್ಲಿದ್ದಾಗಲೆ ಶ್ರೀ ವಿಶ್ವಾರಾಧ್ಯರನ್ನು ಕುರಿತು ಒಬ್ಬ ವೃದ್ಧ ಜಂಗಮನು ಈತ ಮುಂದೆ ದೊಡ್ಡ ಪರಬ್ರಹ್ಮನಾಗುತ್ತಾನೆ ಎಂದು ಭವಿಷ್ಯನುಡಿದದ್ದನ್ನು ಷಟ್ಪದಿ ಪದ್ಯವೊಂದರಲ್ಲಿ ಹೀಗೆ ಹೇಳುತ್ತಾರೆ.

ನಕ್ಕೀರೇತಕೆ ಚರರೆ ಮತ್ತಂ
ದುಃಖಿಸುವಿರೇಕೆಂದು ಕೇಳಲ್
ಭಕ್ತ ಜನಗಳ ನೋಡಿ ಮುದಿ ಚರನೆಂದನಿಂತೆಂದು ।
ಮಿಕ್ಕಿದಾ ಪ್ರರಬ್ರಹ್ಮ ಲೀಲೆಯೊ
ಳುಕ್ಕಿಯೀ ಗರ್ಭಸ್ಥನಾದುದ
ನೀಕ್ಷಿಸುತೆ ನಾನಕ್ಕೆ ಸಂತಸದಿಂದೆ ಬಲು ನಕ್ಕೆ ॥

(ಪುಟ : ೨೪, ಪದ್ಯ : ೨೦)

ಅಂದರೆ ನೀಲಾಂಬೆಯ ಗರ್ಭವನ್ನು ನೋಡಿ ಈ ಜಂಗಮ ನಗುತ್ತಾನೆ. ಯಾಕೆ ಎಂದು ಕೇಳಿದಾಗ 'ನಿರಾಕಾರ ಪರಬ್ರಹ್ಮ ಸಾಕಾರ ರೂಪದಲ್ಲಿ ಗರ್ಭಸ್ಥನಾದದು ಕಂಡು ನಕ್ಕೆ ಹಾಗೂ ಈತ ಹುಟ್ಟಿ ಈತನರೂಪ ನೋಡಲು ನಾನಿರುವುದಿಲ್ಲ' ಎಂದು ದುಃಖ ಪಟ್ಟೆ ಎಂದು ಹೇಳುತ್ತಾನೆ.

ಶ್ರೀ ವಿಶ್ವಾರಾಧ್ಯರು ಬಾಲ್ಯದಿಂದಲೂ ಒಳ್ಳೆಯ ಸಂಸ್ಕಾರ ಪಡೆದುಕೊಂಡು ಬೆಳೆದವರು. 'ರಾಚೋಟಿ' ಎಂಬ ವಿದ್ಯಾ ಗುರುಗಳ ಹತ್ತಿರ ವಿದ್ಯೆ ಕಲಿತು, ಉನ್ನತ ವ್ಯಾಸಂಗವನ್ನು ಕಾಶಿಯಲ್ಲಿ ಮುಗಿಸಿ 'ಬಸವಾಂಬೆ' ಎಂಬ ಕನ್ಯೆಯನ್ನು ಮದುವೆಯಾಗಿ, ಮದುವೆಯ ಮರುದಿನವೇ ಸತಿಪತಿಗಳಿಬ್ಬರು ವೈರಾಗ್ಯ ತಾಳುತ್ತಾರೆ.

ವಿಶ್ವಾರಾಧ್ಯರು ತಮ್ಮ ಜೀವನದಲ್ಲಿ ಕಷ್ಟ ನಷ್ಟಗಳನ್ನು ಅನುಭವಿಸಿ ಬದುಕನ್ನು ಸಾರ್ಥಕ ಪಡಿಸಿಕೊಂಡು ಮಹಾನ್ ಪುರುಷರಾಗಿ ಬೆಳೆದವರು. ತಮ್ಮ ತಪಸ್ಸಿನ ಮೂಲಕ ಅನೇಕ ಸಿದ್ಧಿಯನ್ನು ಪಡೆದ ಶರಣರಾಗಿದ್ದಾರೆ. ತಪಸ್ಸಿನ ಫಲವನ್ನು ನೊಂದ ಜೀವಿಗಳ ಉದ್ಧಾರಕ್ಕೆ ಬಳಸಿದ ಕರುಣಾಮಯಿ ಹೃದಯವುಳ್ಳವರು. ಇಂತಹ ಮಹಿಮರು ಬದುಕಿನಲ್ಲಿ ಅನೇಕ ಭಕ್ತರನ್ನು ಸಂಪಾದಿಸಿದ ಚಿನ್ಮಯಿಗಳಾಗಿದ್ದಾರೆ. ಶ್ರೀ ವಿಶ್ವಾರಾಧ್ಯರು ಅನೇಕ ಪವಾಡಗಳನ್ನು ಮಾಡಿ ಭಕ್ತರ ಹೃದಯದಲ್ಲಿ ಇಂದು ನೆಲೆ ನಿಂತಿದ್ದಾರೆ.

ಶ್ರೀ ವಿಶ್ವಾರಾಧ್ಯರ ಅನೇಕ ಪವಾಡಗಳಲ್ಲಿ ಮುಖ್ಯವಾದವುಗಳೆಂದರೆ, ಬಂಜೆಗೆ ಫಲ ನೀಡುವುದು, ಬರಗಾಲದಲ್ಲಿ ಮಳೆ ತರಿಸುವುದು, ರೈಲು ತನ್ನಷ್ಟಕ್ಕೆ ತಾನೆ ನಿಲ್ಲುವುದು, ನೆಲಗುದ್ದಿ ನೀರು ಬರಿಸುವುದು, ಸತ್ತವರನ್ನೆಬ್ಬಿಸಿದ್ದು, ಸಗರನಾಡಿನ ರಾಜನ ಅನುಚರರ ಕಣ್ಣು ತೆಗಿಸಿದ್ದು, ಪೂಜ್ಯರು ಮತ್ತೆ ಬಸ್ಮ ಲೇಪಿಸಿದಾಗ ಆ ಕಣ್ಣು ತೆರೆದು ಪುನಃ ದೃಷ್ಟಿ ಬರುವಂತೆ ಮಾಡಿದ್ದು, ಹಾಗೂ ಅಲೌಕಿಕ ಚರಿತನೂ, ಕಥಾನಾಯಕನಾದ ವಿಶ್ವಾರಾಧ್ಯರು ಪತ್ನಿ ಲಿಂಗ ಪೂಜೆಗಾಗಿ ನಿತ್ಯ ಪೀಡಿಸುತ್ತಾಳೆ ಎಂದು ಇಷ್ಟ ಲಿಂಗವನ್ನು ನುಂಗಿ ಬಿಡುವುದು. ಇವೆಲ್ಲವುಗಳು ಪವಾಡಗಳಾಗಿ ಕಂಡರೆ, ಇನ್ನು ಕೆಲವು ಸಾಮಾಜಿಕ ಪರ ಕೆಲಸ ಮಾಡಿರುವುದನ್ನು ಈ ಪುರಾಣ ಕಾವ್ಯದಲ್ಲಿ ಕಣ್ಣಿಗೆ ಕಟ್ಟುವಂತೆ ಗುರುಸ್ವಾಮಿಯವರು ಚಿತ್ರಿಸಿದ್ದಾರೆ.

ಪುರಾಣ ಕಾವ್ಯಗಳು ಜಾತಿ ಮತದ ಕಟ್ಟಳೆಗಳನ್ನು ಮೀರಿ ಸರ್ವಸಮಾನತೆ ತತ್ವವನ್ನು, ಪರಧರ್ಮ ಪ್ರೀತಿಯನ್ನು ಬಿತ್ತಿ ಬೆಳೆಯುತ್ತವೆ ಎಂಬುದಕ್ಕೆ ಶ್ರೀ ವಿಶ್ವಾರಾಧ್ಯರ ಲೀಲಾ ವಿಳಾಸದಲ್ಲಿ ಸಾಕಷ್ಟು ಸಾಕ್ಷಿಗಳಿವೆ. ಉದಾ : ವಿಶ್ವಾರಾಧ್ಯರಿಗೆ ಹಂಗರಗಿ ಗ್ರಾಮದ ಫಕೀರಸಾಬ್ ಶುಕ್ರವಾರದ ನಮಾಜು ಮುಗಿದ ಮೇಲೆ ಹಾಲನ್ನು ತಂದು ಆರೋಗಣೆಗೆ ನೀಡುತ್ತಾನೆ. ಭಕ್ತಿಕಂಪಿತ ವಿಶ್ವಾರಾಧ್ಯರು ಅದನ್ನು ಅಷ್ಟೇ ಪ್ರೀತಿಯಿಂದ ಸೇವಿಸುತ್ತಾರೆ. ಇದನ್ನು ಆಕ್ಷೇಪಿಸಿದಾಗ ವಿಶ್ವಾರಾಧ್ಯರು

ಅಲ್ಲಮಲ್ಲಾ ರಾಮ್ ರಹೀಮರು

ಶೂಲಿ ಶಿವರೂಹಿಗಳು ಭೇದವ

ದಿಲ್ಲ ಮುಸ್ಲಿಂ ಹಿಂದೂ ಭಾಯೀ ಭಾಯಿಯೆಂದೊರೆವಂ ॥

(ಪುಟ : ೧೬೨, ಪದ್ಯ : ೫)

ಎಂದು ಹೇಳುವುದು ಹಾಗೂ ಕುಂಬಾರ ಹೆಣ್ಣು ಮಗಳ ಮನೆಯಲ್ಲಿ ನಿತ್ಯ ವಿಶ್ವಾರಾಧ್ಯರು ಸೇವೆ ಸಲ್ಲಿಸಿ ಅಬ್ಬೆ ತುಮಕೂರು ಸುತ್ತಲು ಶ್ರೀಗಳು ತಮ್ಮ ಚಾಪನ್ನು ಮೂಡಿಸಿದ್ದಾರೆ.

ಶ್ರೀ ವಿಶ್ವಾರಾಧ್ಯರ ಅಲೌಕಿಕ ನಡೆ, ನುಡಿ ಜೊತೆಗೆ ಪ್ರಾಣಿದಯೆ, ಸರ್ವಧರ್ಮ ಪ್ರೀತಿ, ಸಮಾನ ರೀತಿಯಲ್ಲಿ ನೋಡಿಕೊಳ್ಳುವ ವಿಶ್ವಾರಾಧ್ಯರು ಪುರಾಣದಲ್ಲಿ ನೈಜವಾಗಿ ಚರಿತ್ರ ನಾಯಕರಾಗಿ ಹೊರ ಹೊಮ್ಮಿದ್ದಾರೆ.

ಶ್ರೀ ವಿಶ್ವಾರಾಧ್ಯರು ತಮ್ಮ ಮಾನವೀಯ ಮೌಲ್ಯಗಳಿಂದ ನಮಗೆ ಅತ್ಯಂತ ನಿಕಟವರ್ತಿ-ಗಳಾಗುತ್ತಾರೆ. ಅಂತಹ ಮಾನವೀಯ ಮೌಲ್ಯಗಳು ಈ ಪುರಾಣದಲ್ಲಿ ಮೂಡಿ ಬಂದಿರುವುದು ಗಮನಾರ್ಹವಾಗಿದೆ. ಅಂತಹ ಮೌಲ್ಯಗಳಲ್ಲಿ ಒಂದನ್ನು ಇಲ್ಲಿ ನೋಡಬಹುದಾಗಿದೆ.

ಮಾಲಿಗೌಡ ಶಿವಪ್ಪನ ಆಳು ಷಣ್ಮುಖಪ್ಪ ಮೂಕ ಪ್ರಾಣಿಯಾದ ಎತ್ತುಗಳನ್ನು ಬಾರಕೋಲಿನಿಂದ ಹೊಡೆದಾಗ ಕೋಪ ಬಂದು ವಿಶ್ವಾರಾಧ್ಯರು ಅದೇ ಬಾರಕೋಲಿನಿಂದ ಷಣ್ಮುಖಪ್ಪನಿಗೆ ಹೊಡೆದಾಗ ಆ ಮೂಕ ಪ್ರಾಣಿಗಾದ ಅನುಭವವನ್ನು ಕಾಣುತ್ತಾನೆ. ಹೀಗೆ ಪ್ರಾಣಿ ದಯೆಯನ್ನು ಎತ್ತಿ ಹಿಡಿಯುತ್ತಾರೆ. ವಿಶ್ವಾರಾಧ್ಯರು ತನ್ನ ಬಾಲ್ಯದ ಗೆಳೆಯನಿಗೆ ಬಟ್ಟೆ ಇಲ್ಲದ್ದನ್ನು ಕಂಡು ಭಕ್ತರು ನೀಡಿದ ಬಟ್ಟೆಯನ್ನೇ ತನ್ನ ಗೆಳೆಯನಿಗೆ ನೀಡಿ ಮಾನವೀಯತೆ ಮೆರೆಯುತ್ತಾರೆ.

ಖ್ಯಾತ ಸಂಗೀತ ವಿದ್ವಾನ ಶ್ರೀ ರಾಜಗುರು ಗುರುಸ್ವಾಮಿಯವರು ಪುರಾಣ ಬರೆಯುವಾಗ ಪ್ರತಿ ಅಧ್ಯಾಯದ ಕೊನೆಯಲ್ಲಿ ಈ ಕೆಳಗಿನ ಷಟ್ಪದಿಯನ್ನು ಬಳಸಿದ್ದಾರೆ.

ವರದ ಗುರು ಕಲಿದೇವ ಸ್ವಾಮಿಯ

ಪುರವೆಯದು ಕಲಿಕೇರಿ ಗದ್ದಿಗೆ

ಗುರುಮಠದ ರಾಜಗುರು ಸುಗುರುಸ್ವಾಮಿ ವಿರಚಿಸಿದ ।

ಪರಮ ವಿಶ್ವಾರಾಧ್ಯ ಲೀಲಾ

ಭರಿತ ಸುವಿಳಾಸದೊಳು ದೈವದ

ಹರಕೆ ಪಡೆದಿಹ ಸಂಧಿಯೆರಡಿದು ಶುಭದ ಸುಕರಡಿದು ॥

(ಪುಟ : ೧೯, ಪದ್ಯ: ೪೬)

ಎಂದು ಇದು ಅಂಕಿತ ವೆಂಬಂತೆ ಪ್ರತಿ ಅಧ್ಯಾಯದ ಕೊನೆಯಲ್ಲಿ ಬಳಕೆ ಮಾಡಿರುವುದು ವಿಶೇಷವಿದೆ.

೩.೨.೩. ಶ್ರೀಮದ್ ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗ ಭಗವತ್ಪಾದ ಪುರಾಣ

ಶ್ರೀಮದ್ ಉಜ್ಜಯಿನಿ ಶ್ರೀ ಸಿದ್ಧಲಿಂಗ ಭಗವತ್ಪಾದ ಪುರಾಣವು ಕವಿಯ ಭಕ್ತಿ ಪುಷ್ಪವಾಗಿ ರಚಿತವಾಗಿದ್ದು, ಸಾಹಿತ್ಯಾಸಕ್ತರ ಹೃದಯವನ್ನು ಸೂರೆಗೊಂಡಿದೆ. ರಾಜ್ಯ ಪ್ರಶಸ್ತಿ ಪುರಸ್ಕೃತರಾದ ಗಾಯಕ ಶ್ರೀ ರಾಜಗುರು ಗುರುಸ್ವಾಮಿ ಕಲಿಕೇರಿಯವರು ಈ ಕೃತಿಯ ಕರ್ತೃವಾಗಿದ್ದಾರೆ. ಉಜ್ಜಯಿನಿ ಸದ್ಧರ್ಮ ನಿಕಟವರ್ತಿಗಳಾದ ಈ ಕವಿಗಳು ಅತ್ಯಂತ ಶ್ರದ್ಧಾ ಭಕ್ತಿಯಿಂದ ತಮ್ಮೆಲ್ಲ ಕವಿತ್ವ ಶಕ್ತಿಯನ್ನು ಶ್ರೀ ಸಿದ್ಧಲಿಂಗರ ಪಾದಗಳಡಿಯಲ್ಲಿಟ್ಟು ಈ ಕಾವ್ಯ ರಚಿಸಿದ್ದಾರೆ.

ಪ್ರಸ್ತುತ ಪುರಾಣದ ಪೀಠಿಕಾ ಸಂಧಿಯಲ್ಲಿ ದೇವತಾ ಸ್ತುತಿ, ಗುರು, ಶಿವ, ಶಕ್ತಿ, ಪಂಚಾಚಾರ್ಯರ, ಶಿವಾಚಾರ್ಯರ ಸ್ತುತಿಯ ಜೊತೆಗೆ ಹಿರಿಯ ಕವಿಗಳ ಸ್ತುತಿಯನ್ನು ಈ ರೀತಿ ವರ್ಣಿಸಿದ್ದಾರೆ.

ಸೋಮ ಹರಿಹರ ಜನ್ನ ಪಂಪ ಜೈಮಿನಿ ರನ್ನ
ಭೀಮ ಪದ್ಮರಸ ಲಕ್ಷ್ಮೀಶ ಮಾರಿತೋಂಟೇಶ
ಚಾಮರಸ ನಿಜಗುಣ ಷಡಕ್ಷರ ವಿರುಪಾಕ್ಷ ಸರ್ವಜ್ಞ ಕೇಶಿರಾಜ ।
ಶ್ರೀಮುದ್ದಣಂ ರಾಘವಾಂಕ ಶ್ರೀಪತಿ ಶಾಂತ
ನಾಮಾಂಕಿತಾದಿ ಕವಿ ಕಾವ್ಯ ಗುಡಿ ಗೋಪುರಕೆ
ಶ್ರೀ ಮದ್ದುಜ್ಜಯಿನಿ ಗುರು ಕಥನಮಯ ರತುನ ತೋರಣ ಕಟ್ಟಿ ಕೈಮುಗಿಯುವೆ ॥

(ಪುಟ : ೦೪, ಪದ್ಯ : ೧೮)

ಎಂದು ಎಲ್ಲಾ ಕವಿಗಳನ್ನು ಸ್ಮರಿಸಿಕೊಳ್ಳುತ್ತಾ ಪುರಾಣವನ್ನು ಪ್ರಾರಂಭಿಸುತ್ತಾರೆ.

ಶ್ರೀ ಮದ್ದುಜ್ಜಯಿನಿ ಸದ್ಗುರು ಶ್ರೀ ಸಿದ್ಧಲಿಂಗ ಸದ್ಗುರುವಿನ ಬಂಗಾರನಾಯಕ ಹಳ್ಳಿಯ ವಿವರಣೆಯನ್ನು ನೀಡುತ್ತಾ 'ಚನ್ನಯ್ಯ' 'ಗುರುಸಿದ್ಧಮ್ಮ' ದಂಪತಿಗಳಿಗೆ ಶಿವನಿಚ್ಚೆಯಂತೆ ಕ್ರಿ.ಶ. ೧೮೮೦ರಲ್ಲಿ ವಿಕೃತಿನಾಮ ಸಂವತ್ಸರ, ಮಾಘಮಾಸ, ಕೃಷ್ಣ ಪಕ್ಷ, ಸಪ್ತಮಿ, ಭಾನುವಾರದಂದು ಜನಿಸುತ್ತಾನೆ. ತಾಯಿಯ ಸಂಸ್ಕಾರದಂತೆ ಪುತ್ರ ನಡೆ-ನುಡಿ ಕಲಿತು ಬಾಲಗಂಧರ್ವನಂತೆ ಶೋಭಿಸುತ್ತಾನೆ. ಸಿದ್ಧಲಿಂಗಯ್ಯನ ಅಜ್ಜ ಕೆಂಡಪುತಾತನ ಆಜ್ಞೆಯಂತೆ ಮುಂದೆ ಈತ ದೊಡ್ಡ ವ್ಯಕ್ತಿ ಆಗಲೆಂದು ಆಶೀರ್ವಚನ ನೀಡುತ್ತಾನೆ.

ಉಜ್ಜಯನಿಯ ಸಿದ್ಧಲಿಂಗಯ್ಯರು ಮುಂದೆ ಗುರು ಮಹಿಮೆ, ಲಿಂಗ ಮಹಿಮೆ, ವಿಭೂತಿ ಮಹಿಮೆ ಮಂತ್ರ ಮಹಿಮೆ, ರುದ್ರಾಕ್ಷಿ ಮಹಿಮೆ ಎಲ್ಲ ಮಹಿಮೆಗಳನ್ನು ಕಲಿಯುತ್ತಾರೆ. ಈ ಮಹಿಮೆಗಳನ್ನು ತಿಳಿಸುವಾಗ ಅನೇಕ ಕಥೆ ಉಪಕಥೆಗಳನ್ನು ತಿಳಿಸುತ್ತಾರೆ.

ಗುರುಲಿಂಗ ಜಂಗಮ ವಿಭೂತಿ ರುದ್ರಾಕ್ಷಿಮೇಣ್
ವರ ಮಂತ್ರ ಪಾದೋದಕವು ಸುಪ್ರಸಾದವಿವು
ಪರಮದಷ್ಟಾವರಣ ಮತ್ತೆ ಪಂಚಾಚಾರ ವರ ಷಟ್‌ಸ್ಥಲಗಳಿವೆಲೆ ।

(ಪುಟ : ೨೯, ಪದ್ಯ : ೦೬)

ಎಂದು ಮಹಿಮೆಯನ್ನು ಹೇಳುವಾಗ ಅನೇಕ ಕಥೆಗಳನ್ನು ತಿಳಿಸಿದ್ದಾರೆ. ವಿಭೂತಿ ಮಹಿಮೆಗೆ ಭಸ್ಮನಿಷ್ಠ ಕಶ್ಯಪನ ಕಥೆ. ರುದ್ರಾಕ್ಷಿ ಮಹಿಮೆಗೆ ಮಕರ ಪಟ್ಟಣದ ಶಾಂತೇಶನೆಂಬ ಬಾಲಕನಿಗೆ ಶಿವಯೋಗಿ ರುದ್ರಾಕ್ಷಿ ನೀಡುವ ಕಥೆ, ಮಂತ್ರ ಮಹಿಮೆಗೆ ರಾಮ ನಾಮ ಜಪಿಸಿ ಹನುಮಂತ ಸೇತುವೆ ಕಟ್ಟುವ ಕಥೆ ಹಾಗೂ ಏಕಲವ್ಯ ಗುರುಮಂತ್ರ ಉಪದೇಶ ಮಾಡಿ ಶಬ್ದವೇಧಿ ಬಾಣ ಬಿಡುವ ಕಥೆ ಹೀಗೆ ಒಂದೊಂದು ಮಹಿಮಗೆ ಒಂದೊಂದು ಕಥೆಗಳನ್ನು ಷಟ್ಪದಿಗಳಲ್ಲಿ ತಿಳಿಸಿದ್ದಾರೆ. ನಮಗೆ ಗೊತ್ತಿರುವಂತಹ ಕಥೆಗಳನ್ನೇ ಉದಾಹರಣೆಯಾಗಿ ನೀಡಿ, ಈ ಮಹಿಮೆಗಳನ್ನು ಅರ್ಥ ಮಾಡಿಸುತ್ತಾ ಶ್ರೀ ರಾಜಗುರು ಗುರುಸ್ವಾಮಿಯವರು ಶ್ರೀ ಮದ್ದುಜ್ಜಯನಿಯ ಸದ್ಗುರು ಸಿದ್ಧಲಿಂಗರ ಪುರಾಣವನ್ನು ರಚಿಸಿದ್ದಾರೆ.

ಪ್ರಸ್ತುತ ಪುರಾಣವು ೧೮ ಸಂಧಿಗಳನ್ನು ಒಳಗೊಂಡಿದ್ದು ಹಾಗೂ ೮೩೭ ಪದ್ಯಗಳನ್ನೊಳಗೊಂಡಿದೆ. ಪುರಾಣದ ಅನೇಕ ಘಟನೆಗಳನ್ನು ನಿರೂಪಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಶ್ರೀ ಸಿದ್ಧಲಿಂಗ ಭಗವತ್ಪಾದರ ಪುರಾಣದಲ್ಲಿ ಶ್ರೀ ರಾಜಗುರು ಗುರುಸ್ವಾಮಿಯವರು ಸುಮಾರು ೩೩ ಲೀಲೆಗಳನ್ನು ತಿಳಿಸಿರುವರು. ಈ ಲೀಲೆಗಳು ದೈವತ್ವದ ಕಲ್ಪನೆಯನ್ನು ಬಿಂಬಿಸುತ್ತವೆ. ಇತಿಹಾಸದ ಅನೇಕ ಘಟನೆಗಳನ್ನು ನೆನಪಿಸುತ್ತವೆ. ಮುಖ್ಯವಾಗಿ ರಾಮಾಯಣ ಮಹಾಭಾರತ, ಆಧುನಿಕ ಚಾರಿತ್ರಿಕ ಪುರುಷರನ್ನು ಇಟ್ಟುಕೊಂಡು ಲೀಲೆಗಳನ್ನು ವಿವರಿಸಿದ್ದಾರೆ. ಇಂತಹ ಲೀಲೆಗಳಲ್ಲಿ ಕೆಲವೊಂದನ್ನು ಮಾತ್ರ ಇಲ್ಲಿ ತಿಳಿಸಲಾಗಿದೆ. ಬಾಲಕ ಶ್ರೀ ಸಿದ್ಧಲಿಂಗರು ಹುಡುಗರೊಂದಿಗೆ ದನ ಕಾಯಲು ಹೋದಾಗ ಜೇನುಹುಳು ಕಡಿದರೂ ಏನು ಆಗುವದಿಲ್ಲ. ಕೊಲ್ಹಾಪುರ ಮಹಾರಾಣಿ ಮಾಯಾದೇವಿಗೆ ಪಾಠ ಕಲಿಸಿದ್ದು, ಕಂಟನೆಂಬ ರಾಕ್ಷಸನು ಶ್ರೀಗಳಿಗೆ ಕಲ್ಲು ಎಸೆದಾಗ, ಪುನಃ ಕ್ಷಮೆ ಕೇಳಿದ್ದು ಹಾಗೂ ದಾಸಾನಾದುದು. ಮರುಳಸಿದ್ಧರು ಮಠ ಕಟ್ಟುವಾಗ ಕಲ್ಲು ಬಂಡೆ ಅವಘಡ ಸಂಭವಿಸಿ ಬಂಡೆ ಮೇಲೆ ಬಿದ್ದಾಗ, ಆ ಬಂಡೆಯನ್ನು ಅಂತರ್ಲೆ ನಿಲ್ಲುವ ಹಾಗೆ ಮಾಡಿದ್ದು ! ಕತ್ತೆ ಬೆನ್ನೂರಿನ ಗೌರಮ್ಮಳಿಗೆ ವಿಭೂತಿ ಭಸ್ಮದಿಂದ ಹುಣ್ಣು ವಾಸಿ ಮಾಡಿದ್ದು. ರಂಭಾಪುರಿ ಪೀಠಾಧಿಪತಿಗಳಾಗಿ ದೇವಿಯ ವಿಶೇಷ ಪೂಜೆಗಳಿಂದ ದೇವಿಯನ್ನು ಒಲಿಸಿಕೊಂಡದ್ದು ಇವೆಲ್ಲ ಲೀಲೆಗಳಾಗಿ ಪ್ರಸ್ತುತ ಪುರಾಣದಲ್ಲಿ ವ್ಯಕ್ತವಾಗಿವೆ.

ಶ್ರೀ ಸಿದ್ಧಲಿಂಗ ಭಗವತ್ಪಾದರು ಕೇವಲ ಲೀಲೆಗಳನ್ನಷ್ಟೇ ಅಲ್ಲದೆ ಅನೇಕಾನೇಕ ಸಾಮಾಜಿಕ ಕಾರ್ಯಗಳನ್ನು ಮಾಡಿದ್ದಾರೆ ಹಾಗೂ ಧಾರ್ಮಿಕ ಕಾರ್ಯಗಳನ್ನು ಮಾಡುವಲ್ಲಿ ಸಾಫಲ್ಯತೆಯನ್ನು

ಕಂಡಿದ್ದಾರೆ. ಕೊಟ್ಟೂರು, ಕಂಪ್ಲಿ, ಹರಪನಹಳ್ಳಿ ಮುಂತಾದ ಸ್ಥಳಗಳಲ್ಲಿ ಪಾಠಶಾಲೆಗಳನ್ನು ನಿರ್ಮಿಸಿ, ಅಲ್ಲಿನ ಸಂಸ್ಥೆಗಳಿಗೆ ಪೋಷಕರಾಗಿದ್ದುದು ಹಾಗೂ ಅನೇಕ ಪ್ರಸಾದ ನಿಲಯಗಳನ್ನು ಅರವಟಿಗೆಗಳನ್ನು ಸ್ಥಾಪಿಸಿ ಜನಕಲ್ಯಾಣ ಒಳಿತಿಗಾಗಿ ದುಡಿದವರು. ಮತ್ತು ಬಳ್ಳಾರಿಯಲ್ಲಿ ಮುಸ್ಲಿಂ ಬಂಧುಗಳ ಮೊರೆ ಕೇಳಿ ಅಲ್ಲಿ ಮೊಹರಂ ಬಂದ್ ಮಾಡಿದ ಗೌಡನನ್ನು ಕರೆಸಿ ಹಿಂದೂ-ಮುಸ್ಲಿಂರನ್ನು ಒಂದು ಮಾಡಿ ಮೊಹರಂ ಹಬ್ಬವನ್ನು ಸುಗಮವಾಗಿ ನಡೆಯುವಂತೆ ಮಾಡಿದ್ದಾರೆ. ಇದು ಭಾವೈಕ್ಯತೆಗೆ ಹಿಡಿದ ಕೈಗನ್ನಡಿಯಾಗಿದೆ. ಕೃಷಿ ಮಾಡುವ ಪದ್ಧತಿಯನ್ನು ಹಾಗೂ ತಮ್ಮ ಕಾಯಕ ನಿಷ್ಠೆಯನ್ನು ಮೆರೆದಿದ್ದಾರೆ. ದುಡಿಯುವರಿಗೆ ಕೂಲಿ ಹೇಗಿರಬೇಕು ಎಂಬುದನ್ನು ಶ್ರೀ ರಾಜಗುರು ಕಲಕೇರಿಯವರು ಷಟ್ಪದಿ ಪದ್ಯವೊಂದರಲ್ಲಿ ಹೀಗೆ ಹೇಳಿದ್ದಾರೆ.

ದುಡಿವ ರೈತಾಳ್ಗಳ್ಗೆ ಕರೆದು ಕೂಲಿಯ ಕೊಡುವ
ದುಡಿಯದಿರ್ದಿರುವರಿಗೆಯರೆ ಕೂಲಿಯನೆ ಕೊಡುವ
ಬಡವಾದ ವೃದ್ಧ ವೃದ್ದೆಯರು ಬಂದರೆಯವರ ಕುಳ್ಳಿರಿಸಿ ಕೂಲಿ ಕೊಡವರ್ ।
ಕಡುಬಸಿರೆ ಬಂದಿರಲ್ಕೊಲಿದು ಗುರುವವಳ ಗಿಡ
ದಡಿಯಲ್ಲಿ ಕೂಡ್ರಿಸುತೆ ನಿನಗೆ ನಿನ್ ಬಸಿರಿಗೆಂ
ದೊಡನೆರಡು ಕೂಲಿ ಹಣ ಕೊಟ್ಟು ಕಳಿಸುವ ಕರುಣಿ ಶ್ರೀಸಿದ್ಧಲಿಂಗೇಶ್ವರ ॥

(ಪುಟ : ೧೦೪, ಪದ್ಯ : ೩೨)

ಶ್ರಮವಹಿಸಿ ದುಡಿಯುವವರಿಗೆ ಪೂರ್ಣಕೂಲಿ, ಮೈಯುಳಿಸಿ ದುಡಿಯುವರಿಗೆ ಅರೆ ಕೂಲಿ, ವೃದ್ಧರಿಗೆ ಕುಳ್ಳಿರಿಸಿ ಕೂಲಿ, ಬಸಿರ ಸ್ತ್ರೀಯರಿಗೆ ನಿನಗೊಂದು ನಿನ್ನ ಬಸಿರಿಗೊಂದು ಒಟ್ಟು ಎರಡು ಕೂಲಿ ಕೊಡಬೇಕು ಎಂದು ಹೇಳಿರುವ ಉಲ್ಲೇಖವನ್ನು ವಿವರಿಸಿದ್ದಾರೆ.

ಲೋಕಕಲ್ಯಾಣಕ್ಕಾಗಿ ಹೀಗೆ ಅನೇಕ ಶರಣರು ದುಡಿದಂತೆ ಸಿದ್ಧಲಿಂಗ ಭಗವತ್ಪಾದರು ತಮಗೆ ತಾವೇ ಸಾಟಿ ಎಂಬಂತೆ ಅನೇಕ ಕ್ಷೇತ್ರಗಳಲ್ಲಿ ಮಿಂಚಿ ೧೯೩೬ ಭಾನುವಾರದಂದು ಲಿಂಗೈಕ್ಯರಾಗುತ್ತಾರೆ. ಶ್ರೀ ರಾಜಗುರು ಗುರುಸ್ವಾಮಿ ಕಲಿಕೇರಿಯವರು ಅರ್ಥಪೂರ್ಣವಾಗಿ ಈ ಪುರಾಣವನ್ನು ರಚಿಸಿದ್ದಾರೆ. ಪುರಾಣ ಕೇಳಿದವರಿಗೆ, ಹೇಳಿದವರಿಗೆ, ಪಠಿಸಿದವರಿಗೆ ಸಿದ್ಧಲಿಂಗನ ಸೇವೆ ಸಲ್ಲಿಸಿದವರಿಗೆ ಸಕಲ ಸಿರಿ ಸಂಪತ್ತು ಭಾಗ್ಯಗಳನ್ನು ನೀಡುತ್ತಾನೆ ಎಂದು ಅಂತ್ಯ ಸಂಧಿ-೧೮ ರಲ್ಲಿ ತಿಳಿಸಿದ್ದಾರೆ.

೩.೨.೪. ಸುಕ್ಷೇತ್ರ ಕಲಬುರ್ಗಿ ಪರುಷ ಮಠದ ಶ್ರೀಗುರು ಚನ್ನಮಲ್ಲೇಶ್ವರ ಪುರಾಣ

ಕನ್ನಡ ನಾಡಿನಲ್ಲಿ ಅವತರಿಸಿದ ಅನೇಕ ಶರಣರು, ಸಂತರು, ಶಿವಯೋಗಿಗಳು ಈ ನಾಡನ್ನು ಬೆಳಗಿಸಿದ್ದಾರೆ. ಅಂಥವರಲ್ಲಿ ಕಲಬುರಗಿ ಪರುಷ ಮಠದ ಶ್ರೀಗುರು ಚನ್ನಮಲ್ಲೇಶ್ವರರು ಒಬ್ಬರಾಗಿದ್ದಾರೆ. ಶ್ರೀಯುತರು ಹುಟ್ಟಿದ್ದು ಬಿಜಾಪುರದಲ್ಲಾದರೂ, ಇವರ ಕಾರ್ಯಕ್ಷೇತ್ರ ಕಲಬುರಗಿ.

ಶ್ರೀ ಚನ್ನಮಲ್ಲರ ಸಾಧನೆ ಲೀಲೆ ಹಾಗೂ ಅನೇಕ ಮಹಿಮೆಯನ್ನು ನಿರೂಪಿಸುವಲ್ಲಿ ಗದುಗಿನ ಶ್ರೀ ರಾಜಗುರು ಗುರುಸ್ವಾಮಿ ಕಲಕೇರಿಯವರು ಯಶಸ್ವಿಯಾಗಿದ್ದಾರೆ.

ಪ್ರಸ್ತುತ ಪುರಾಣವನ್ನು ಅಗಷ್ಟ ತಿಂಗಳ ೨೦೦೦ ರಲ್ಲಿ ರಚಿಸಿದ್ದಾರೆ. ಕೃತಿಯು ೧೮ ಅಧ್ಯಾಯಗಳನ್ನು ಒಳಗೊಂಡಿದ್ದು, ೬೬೬ ಪದ್ಯಗಳನ್ನು ಹೊಂದಿದೆ. ಇದನ್ನು ಗುರುಸ್ವಾಮಿಯವರು ಅತ್ಯಂತ ಸರಳವಾಗಿ ಹೊಸಗನ್ನಡದೊಂದಿಗೆ ಸಮೀಕರಿಸಿಕೊಂಡು, ಭಾಮಿನಿ ಷಟ್ಪದಿಯನ್ನು ಪುರಾಣಕ್ಕೆ ತಳುಕು ಹಾಕಿ, ಶುದ್ಧ ದೇಸಿ ಛಂದಸ್ಸಿನಲ್ಲಿ ಸುಲಲಿತವಾಗಿ ಕಟ್ಟಿಕೊಟ್ಟಿದ್ದಾರೆ.

ಪುರಾಣದ ಸಂಪ್ರದಾಯದಂತೆ ಪೀಠಿಕಾ ಸಂಧಿಯಲ್ಲಿ ದೇವತಾ ಸ್ತುತಿಯನ್ನು ಮಾಡಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ ಸರಸ್ವತಿ, ಶಿವ–ಪಾರ್ವತಿ, ಗದುಗಿನ ಗಾನಯೋಗಿ ಪಂಚಾಕ್ಷರಿ ಗವಾಯಿಗಳ ಸ್ತೋತ್ರ, ಮಡಿವಾಳೇಶ್ವರ ಸ್ತುತಿ, ಕಲಬುರಗಿ ಶ್ರೀ ಶರಣ ಬಸವೇಶ್ವರ ಸ್ತುತಿ ಹಾಗೂ ಮುಂತಾದ ಗುರುವರ್ಯರ ಸ್ಮರಿಸುವುದನ್ನು ಗುರುಸ್ವಾಮಿಯವರು ಮರೆತಿಲ್ಲ . ಷಟ್ಪದಿಗಳ ಬ್ರಹ್ಮನೆಂದೆ ಪ್ರಖ್ಯಾತನಾದ ರಾಘವಾಂಕನನ್ನು ಸ್ಮರಿಸಿದ್ದಾರೆ.

ರಾಘವಾಂಕನ ಸೃಷ್ಟಿ ಷಟ್ಪದಿ ।
ಯಾಗ ಯೋಗದ ತೇರನೆಳೆದರು ।
ಮಾಗ ಪದ್ಮರಸಾದಿಗಳ್ ಮತ್ತೀಗ ಪಟ್ಟರಾಜರ್ ॥
ರಾಗದಿಂ ಪೌರಣದುತ್ಸವ ।
ಸಾಗಿಸಿದ ಪಲ ಕವಿಗಳೋಲ್ ನಾ ।
ನೀಗ ಪಾಲ್ಗೊಂಡಿರುವೆ ಭಾಮಿನಿ ಕಾವ್ಯ ತೀಡಿರುವೆ ॥

(ಪುಟ : ೦೯, ಪದ್ಯ : ೩೪)

ಎಂದು ಪದ್ಮರಸ, ಪುಟ್ಟರಾಜರ ನಂತರ ಪುನಃ ನಾನು ಭಾಮಿನಿ ಷಟ್ಪದಿಯಲ್ಲಿ ಈ ಕಾವ್ಯವನ್ನು ತಂದಿರುವೆ ಎಂದು ಅವರನ್ನು ಪ್ರಾರ್ಥಿಸುತ್ತಾ ಪುರಾಣವನ್ನು ಪ್ರಾರಂಭಿಸುತ್ತಾರೆ.

೧ನೇ ಸಂಧಿಯಲ್ಲಿ ಶ್ರೀಗುರು ಚನ್ನಮಲ್ಲೇಶ್ವರರ ಸ್ಥಳದ ಪರಿಚಯ, ಕನ್ನಡ ನಾಡಿನ ವರ್ಣನೆ, ಚನ್ನಮಲ್ಲೇಶ್ವರರ ಕುಟುಂಬದ ವರ್ಣನೆ ಹಾಗೂ ಬಿಜಾಪುರ ಮಾಹಿತಿಯನ್ನು ಮತ್ತು ಚರಿತ್ರೆ ನಾಯಕರ ಜನನ, ಬಾಲ್ಯ, ತೊಟ್ಟಿಲು, ವಿದ್ಯಾಭ್ಯಾಸ ಹಾಗೂ ಲೀಲೆಗಳನ್ನು ತಿಳಿಸಿದ್ದಾರೆ.

ಪಂ. ಶ್ರೀ ರಾಜಗುರು ಗುರುಸ್ವಾಮಿಯವರು ಉಜ್ಜಯಿನಿ ಸಿದ್ಧಲಿಂಗ ಭಗವತ್ಪಾದರ ಪುರಾಣದಂತೆ ಇಲ್ಲಿಯೂ ಕೂಡಾ ಲಿಂಗ, ಜಂಗಮ, ಭಸ್ಮ, ಪಂಚಾಚಾರ ಮಹಿಮೆ, ಹೀಗೆ ಮುಂತಾದ ಮಹಿಮೆಗಳು ಶ್ರೀ ಚನ್ನಮಲ್ಲೇಶ್ವರ ಪುರಾಣದಲ್ಲಿ ವ್ಯಕ್ತವಾಗಿವೆ. ಇಲ್ಲಿ ಅನೇಕ ಮಹಿಮೆಗಳನ್ನು ವಿವರಿಸುವ ಸಂದರ್ಭದಲ್ಲಿ ಕೊಂಡಕುಳಿ ಕೇಶಿರಾಜನ ಕಥೆ, ಅಲ್ಲಮ ಪ್ರಭುವಿನ ಕಥೆಯನ್ನು ವಿವರಿಸಿದ್ದಾರೆ. ರುದ್ರಾಕ್ಷಿ, ಭಸ್ಮ ಮಹಿಮೆಯ ಸಂದರ್ಭದಲ್ಲಿ ಕಶ್ಯಪ ಮತ್ತು ಶಾಂತೇಶ ಕಥೆಯನ್ನು ಮತ್ತು ಮಂತ್ರದ ಮಹಿಮೆಯನ್ನು, ಪಂಚಾಚಾರ, ಪಾದೋದಕ,

ಪ್ರಸಾದ, ಭಕ್ತ, ಪ್ರಾಣಲಿಂಗ, ಐಕ್ಯ, ಶರಣ, ಮಹೇಶ ಮುಂತಾದ ಮಹಿಮೆಗಳಿಗೆ ಕಲಿಗಣನಾಥನ ಕಥೆ, ಶಿವಶರಣೆ ಕಾರಿಕಾಲಮ್ಮೆಯರ ಕಥೆ. ಮರುಳ ಶಂಕರ ದೇವರ ಕಥೆ, ಮಡಿವಾಳ ಮಾಚಯ್ಯನ ಕಥೆ ಬಸವಣ್ಣನವರ ಭಕ್ತಿಯ ಕಥೆ ಮುಂತಾದ ಕಥೆಗಳನ್ನಿಟ್ಟುಕೊಂಡು ಮಹಿಮೆಗಳನ್ನು ವಿವರಿಸಿದ್ದಾರೆ.

ಚನ್ನಮಲ್ಲೇಶ್ವರರ ಲಿಂಗದೀಕ್ಷೆಯ ನಂತರದ ಅನಂತ ಲೀಲೆಗಳನ್ನು ಪ್ರಸ್ತುತ ಪುರಾಣ ಕಾವ್ಯದಲ್ಲಿ ವಿವರಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಕಲ್ಕೇರಿಯಲ್ಲಿ ಬರಡಾದ ಮರವನ್ನು ಚಿಗುರಿಸಿದ್ದು, ಬಿಜಾಪುರದಲ್ಲಿ ಬರಡು ಆಕಳಿನಿಂದ ಹಾಲು ಕರೆದದ್ದು, ಹಿರೇಗಬ್ಬೂರು ಮಾನಕಾರ ಮನೆತನಕ್ಕೆ ಪ್ರಸಾದ ಶಕ್ತಿಯಿಂದ ಫಲ ಸಂತಾನ ಕೊಟ್ಟದ್ದು, ಕುಂಭೋತ್ಸವ ಮಾಡಿ ಮಳೆಯನ್ನು ತರಿಸಿದ್ದು, ಶ್ರೀ ಚನ್ನಮಲ್ಲೇಶ್ವರರ ಪರುಷ ಮಠದಲ್ಲಿ ಆರು ತಿಂಗಳ ಪುರಾಣ ನಡೆಸಿ ಪರುಷ ಬಟ್ಟಲದಿಂದ ಒಂದು ಲಕ್ಷ್ಯ, ೯೬ ಸಾವಿರ ಜಂಗಮಾರಧನೆ ಮಾಡಿದ್ದು, ಓರ್ವ ಜಂಗಮನಿಗೆ ಶ್ರೀಶೈಲ ಮಲ್ಲಿಕಾರ್ಜುನನ ದರ್ಶನ ಮಾಡಿಸಿದ ಲೀಲೆ ಹೀಗೆ ಅನೇಕ ಪವಾಡ ಸದೃಶ್ಯವಾದ ಘಟನೆಗಳನ್ನು ಅಭಿವ್ಯಕ್ತಿಸಿದ್ದಾರೆ.

ಶ್ರೀ ಚನ್ನಮಲ್ಲೇಶ್ವರರು ಅನೇಕ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳನ್ನು ಮಾಡಿ ಕಲಬುರಗಿ ನಾಡಿನಲ್ಲಿ ಹೆಸರು ಮಾಡಿದವರಾಗಿದ್ದಾರೆ. ಅನೇಕ ಶಿಕ್ಷಣ ಸಂಸ್ಥೆಗಳನ್ನು ಹುಟ್ಟುಹಾಕಿ ಅಲ್ಲಿ ವಿದ್ಯಾದಾನ ಮಾಡಿ ವಿದ್ಯಾರ್ಥಿಗಳನ್ನು ಸಂಪಾದಿಸಿದ್ದಲ್ಲದೆ, ಸಂಸ್ಕೃತ ಪಾಠಶಾಲೆ, ವೈದಿಕ-ಜ್ಯೋತಿಷ್ಯ ಪಾಠಶಾಲೆ, ವ್ಯಾಯಾಮ ಶಾಲೆ ಹೀಗೆ ಹತ್ತಾರು ಶಿಕ್ಷಣ ಸಂಸ್ಥೆಗಳನ್ನು ನಿರ್ಮಿಸಿ ಉಚಿತ ಪ್ರಸಾದ ವ್ಯವಸ್ಥೆಯನ್ನು ವಿದ್ಯಾರ್ಥಿಗಳಿಗೆ ಕಲ್ಪಿಸಿ ಭಕ್ತರನ್ನಾಗಿಸಿಕೊಂಡರು. ಇದನ್ನು ಭಾಮಿನಿಷಟ್ಪದಿಯಲ್ಲಿ ತುಂಬಾ ಮಾರ್ಮಿಕವಾಗಿ ಹೇಳಿದ್ದಾರೆ.

ಶ್ರೀ ಚನ್ನಮಲ್ಲೇಶ್ವರ ಶಿವಾಚಾರ್ಯರು ಸಾಹಿತ್ಯ-ಸಂಗೀತ ಪ್ರೇಮಿಗಳು. ಹೀಗಾಗಿ ಅನೇಕ ಭಕ್ತರನ್ನು ಶ್ರೀಗಳು ಸಂಪಾದಿಸಿದ್ದಾರೆ. ಧರ್ಮಗ್ರಂಥಗಳು ಹೊರಬರುವುದರಿಂದ ಸಾಮಾಜಿಕವಾಗಿ ಸಾಹಿತ್ಯಿಕವಾಗಿ ಕೊಡುಗೆಯಾಗಿವೆ ಎಂಬುದರಲ್ಲಿ ಎರಡು ಮಾತಿಲ್ಲ. ಇಂತಹ ಪುರಾಣಗಳಲ್ಲಿ ವ್ಯಕ್ತವಾಗುವ ಅನೇಕ ಕಥೆಗಳು ನಗರ ಹಳ್ಳಿಗಳನ್ನು ತಲಪುವುದರಿಂದ ಜನರು ಜಾಗೃತವಾಗಿ ಸಾಮಾಜಿಕ ತಿಳುವಳಿಕೆಯನ್ನುಂಟು ಮಾಡುವಲ್ಲಿ ಇಂತಹ ಗ್ರಂಥಗಳು ಅತ್ಯಂತ ಪ್ರಯೋಜನಕಾರಿಯಾಗಿವೆ.

೩.೩.೫ ಸುಕ್ಷೇತ್ರ ವ್ಹಿ.ಕೆ. ಸಲಗರ ಶ್ರೀ ಸಾಂಬಶಿವಯೋಗಿ ಪುರಾಣ

ಸುಕ್ಷೇತ್ರ ವ್ಹಿ. ಕೆ. ಸಲಗರ ಶ್ರೀ ಸಾಂಬಶಿವಯೋಗಿ ಪುರಾಣವನ್ನು ಪಂ. ಶ್ರೀ ರಾಜಗುರು ಗುರುಸ್ವಾಮಿ ಕಲಿಕೇರಿಯವರು ಭಾಮಿನಿ ಷಟ್ಪದಿ ಛಂದಸ್ಸಿನಲ್ಲಿ ಬರೆದಿದ್ದಾರೆ. ಈ ಚಾರಿತ್ರಿಕ

ಪುರಾಣವನ್ನು ೨೨ ಸಂಧಿಗಳಲ್ಲಿ ಕಥೆಯನ್ನು ವಿವರಿಸಲಾಗಿದ್ದು, ಒಟ್ಟು ೭೩೩ ಪದ್ಯಗಳನ್ನೊಳಗೊಂಡ ಕೃತಿ ಇದಾಗಿದೆ. ಸುಂದರ, ಸರಳ ಹಾಗೂ ಛಂದೋಬದ್ಧವಾದ ನುಡಿಗಳನ್ನು ಈ ಗ್ರಂಥವು ಹೊಂದಿದೆ. ಈ ೨೨ ಸಂಧಿಗಳಲ್ಲಿ ಅನೇಕ ಧಾರ್ಮಿಕ, ವೈಚಾರಿಕ ದಾರ್ಶನಿಕ, ಚಾರಿತ್ರಿಕ, ಐತಿಹಾಸಿಕ ಮುಂತಾದ ವಿಷಯಗಳನ್ನು ಈ ಪುರಾಣ ಗ್ರಂಥ ಒಳಗೊಂಡಿದೆ.

ಶ್ರೀ ಸಾಂಬಶಿವಯೋಗಿ ಪುರಾಣದಲ್ಲಿ ವೀರಶೈವ ಧರ್ಮದ ಆಚರಣೆಗಳಾದ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ, ವೀರಶೈವ ಧರ್ಮದ ದರ್ಶನವನ್ನು ಶ್ರೀ ರಾಜಗುರು ಗುರುಸ್ವಾಮಿಯವರು ಮಾಡಿಸಿದ್ದಾರೆ. ಒಂದು ಪುರಾಣಗ್ರಂಥ ಒಳಗೊಂಡಿರುವ ಸಾಮಾನ್ಯ ಸಂಗತಿಗಳನ್ನೇ ಇಲ್ಲಿಯೂ ಕೂಡ ನೋಡಬಹುದು. ಪೀಠಾಕಾಧ್ಯಾಯದಲ್ಲಿ ಗುರು ಹಿರಿಯರನ್ನು, ಕುಲದೇವರನ್ನೂ ಸ್ಮರಿಸುವುದರೊಂದಿಗೆ ಶಿವ-ಪಾರ್ವತಿ, ಪುಟ್ಟರಾಜ ಗವಾಯಿಗಳು, ಮಡಿವಾಳೇಶ್ವರ, ಹಾಗೂ ವಿಘ್ನೇಶ್ವರನನ್ನು ಸ್ಮರಿಸುತ್ತಾರೆ. ನಂತರದಲ್ಲಿ ಬಾಲ್ಯ, ನಾಮಕರಣ, ವಿದ್ಯಾಭ್ಯಾಸ, ಹಾಗೂ ಲೀಲೆಗಳು ಮುಂತಾದ ಭಕ್ತಿ ಮಹಿಮೆ, ಪವಾಡಗಳನ್ನು ವರ್ಣಿಸಿದ್ದಾರೆ.

ಸಲಗರ ಶ್ರೀ ಸಾಂಬಶಿವಯೋಗಿ ಪುರಾಣದಲ್ಲಿ ಮಂತ್ರ, ವಿಭೂತಿ, ರುದ್ರಾಕ್ಷಿ ಮುಂತಾದವುಗಳ ಮಹತ್ವವನ್ನು ವಿವರಿಸುವಾಗ ಅನೇಕ ಕಥೆ, ಉಪಕಥೆಗಳನ್ನು ವಿವರಿಸಿದ್ದಾರೆ. ಉದಾಹರಣೆಗಾಗಿ, ರಾಮನಾಮ ಜಪಮಾಡಿದ ಬೇಡನು ವಾಲ್ಮೀಕಿಯಾದ ಪರಿಯನ್ನು ಕುರಿತು ಹೇಳಿದ ಕಥೆ, ಕಲಿಕೇರಿ ಕಲ್ಲಿನಾಥ ಖ್ಯಾತಯ್ಯಗಳ ಕಥೆ ನಿರೂಪಣೆ, ಶ್ರೀ ಸಿದ್ಧಲಿಂಗೇಶ್ವರ ಶಿವಯೋಗಿಗಳ ಸಮಾಧಿ ಸ್ಥಿತಿಯ ಬಣ್ಣನೆಯನ್ನು ಕುರಿತು ಹೇಳಿದ ಕಥಾ ನಿರೂಪಣಾ ಶೈಲಿ ಪ್ರಮುಖವಾದವುಗಳು. ಪುರಾಣದ ಚಾರಿತ್ರಿಕ ಪುರುಷರಾದ ಶ್ರೀ ಸಾಂಬಶಿವಯೋಗಿ ಶ್ರೀಗಳು ಮಾಡಿದಂತಹ ಅನೇಕ ಪವಾಡಗಳು ಸಂಧಿ ೧ ರಿಂದ ೨೨ ರವರೆಗೆ ಪ್ರತಿ ಸಂಧಿಯಲ್ಲಿ ತಪ್ಪದೇ ಸಾಲುಗಟ್ಟಿ ಮೂಡಿ ಬಂದಿದ್ದು ಓದುಗರಿಗೆ ಮನೋರಂಜನೆ ನೀಡ ಬಲ್ಲವುಗಳಾಗಿವೆ.

ಶ್ರೀ ಸಲಗರ ಸಾಂಬಶಿವಯೋಗಿಗಳು ಪ್ರಸಿದ್ಧಿ ಹೊಂದಿ ಜನ ಸಾಮಾನ್ಯರಲ್ಲಿ ಕಾಣಿಸಿಕೊಳ್ಳುವುದು ಇಂತಹ ಪವಾಡಗಳಿಂದಲೇ ಎಂಬುದನ್ನು ನಾವು ಕಡೆಗಣಿಸುವಂತಿಲ್ಲ. ಇಂಥಹ ಪವಾಡಗಳನ್ನು ಹೆಣೆಯುವುದು, ಹೇಳುವುದು ಪುರಾಣ ಕಾವ್ಯಗಳಲ್ಲಿ ಸಾಮಾನ್ಯವಾದ ಸಂಗತಿಗಳೇ ಆಗಿವೆ. ಎಂಬುದನ್ನು ನಾವು ನೀವು ಸ್ಮರಿಸಬಹುದಾಗಿದೆ. ಪುರಾಣಗಳಲ್ಲಿ ವ್ಯಕ್ತವಾದ ಪವಾಡಗಳಲ್ಲಿ ಜೀವನ ಮೌಲ್ಯಗಳು ಇರುತ್ತವೆ ಎಂಬುದನ್ನು ಅರ್ಥೈಸಿಕೊಳ್ಳಬೇಕು ಎಂಬುದು ತಿಳಿದವರ ಮಾತು.

ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ವ್ಹಿ. ಕೆ. ಸಲಗರ ಮಠದ ಪೀಠಪಟ್ಟಾಧ್ಯಕ್ಷರಾಗಿದ್ದ ಶ್ರೀ ಸಾಂಬಶಿವಯೋಗಿ ಶಿವಾಚಾರ್ಯರು ಲೀಲಾ ಪುರುಷರು ಅಂದ ಮಾತ್ರಕ್ಕೆ ಲೌಕಿಕ

ಪ್ರಪಂಚವನ್ನು ಹೀಗಳೆದವರಲ್ಲ. ಲೌಕಿಕ ಪ್ರಪಂಚದ ಜನರ ಬೇಕು-ಬೇಡಗಳನ್ನು ಪೂರೈಸಿದವರು ಹಾಗೂ ಅಲೌಕಿಕ ಪ್ರಪಂಚವನ್ನು ತೋರಿಸಿದ ಮಹಾನ ಪುರುಷರಾಗಿದ್ದಾರೆ.

ಲೋಕದಲ್ಲಿ ಕಂಡ ಸತ್ಯಗಳನ್ನು ದ್ವೇಷದಿಂದ ಅಲ್ಲ, ಪ್ರೀತಿಯಿಂದ ಗೆಲ್ಲಬಹುದೆಂಬ ಶಿವಯೋಗಿಗಳ ಮಾತನ್ನು ಈ ಷಟ್ಪದಿಯಲ್ಲಿ ನೋಡಬಹುದು.

ದ್ವೇಷಕೆ ದ್ವೇಷವಲ್ಲವುತ್ತರ । ದೋಷಕೆ ದೋಷಲ್ಲಕೇಳೈ ।
ನಾಶಕ್ಕೆ ನಾಶಲ್ಲ ಯೇಟಗೆ ಯೇಟು ಮದ್ದಲ್ಲ !
ದ್ವೇಷ ರೋಷದ ಜಿದ್ದು ಬೇಡೈ
ಲೇಸು ಲೇಸಲ್ಲಯ್ಯ ತಿಳಿಯೈ
ಸೈಸು ಸೈರಣೆ ತಾಳು ನಾರಾಯಣನೆ ನೀನಾಗು ॥

(ಪುಟ : ೧೪೨, ಪದ್ಯ : ೦೫)

ಇಂಥಹ ಅನೇಕ ಉದಾಹರಣೆಗಳನ್ನು ಪುರಾಣದಲ್ಲಿ ಅನೇಕ ಪದ್ಯಗಳಲ್ಲಿ ಕಾಣಬಹುದಾಗಿದೆ. ಇಂತಹ ಮಾತುಗಳಿಂದ ಜನರ ಮಾನಸಿಕ ಸ್ಥಿತಿಯನ್ನು ಬೌದ್ಧಿಕ ತಿಳುವಳಿಕೆಯ ಅಪನಂಬಿಕೆಗಳನ್ನು ತಿದ್ದಿ, ಅವರ ಮನಸ್ಸನ್ನು ಮುದಗೊಳಿಸಿ ತಿದ್ದಬಹುದು. ಜೊತೆಗೆ ಅವರ ಭಾವಗಳನ್ನು ಬದಲಿಸಬಹುದಾಗಿದೆ. ಈ ಪುರಾಣದಲ್ಲಿ ಸಮಾಜ ತಿದ್ದುವ ಕಾರ್ಯ ಕಥನಾಯಕನ ಪವಾಡಗಳನ್ನು ವಿಶ್ಲೇಷಿಸುವಾಗ ಅಲ್ಲಲ್ಲಿ ಅಭಿವ್ಯಕ್ತಗೊಂಡಿರುವುದನ್ನು ಇಲ್ಲಿ ಮನಗಾಣಬಹುದಾಗಿದೆ. ಸಾಂಬಶಿವಯೋಗಿಯು ತಪಸ್ಸು. ತ್ಯಾಗ ಮತ್ತು ಔದಾರ್ಯಗಳ ಮೂಲಕ ಆಧ್ಯಾತ್ಮಲೋಕಕ್ಕೆ ಕೊಟ್ಟು ಹೋದ ಚಿಂತನೆಗಳು, ಬಿಟ್ಟು ಹೋದ ತತ್ತ್ವಗಳು ಭಕ್ತರಿಗೆ ದಾರೀದೀಪವಾಗಿ ಪ್ರಕಾಶಿಸುತ್ತಿವೆ. ಶಿವಯೋಗಿಗಳು ಜಾತಿ-ಮತ-ಪಂಥ-ಗಡಿ ಮೀರಿ ಜನ ಸಮುದಾಯವನ್ನು ಉದ್ಧರಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಸರಳತೆ, ಸಾತ್ವಿಕ ಹೃದಯ ವೈಶಾಲ್ಯತೆ, ಭಕ್ತರ ಮೇಲಿಟ್ಟ ವಾತ್ಸಲ್ಯ ಸಾಮರಸ್ಯ ಬದುಕಿನ ಆದರ್ಶಗಳನ್ನು ಜನಮನ ಮುಟ್ಟುವಂತೆ ಶ್ರೀ ರಾಜಗುರು ಗುರುಸ್ವಾಮಿ ಕಲಿಕೇರಿಯವರು ಈ ಪುರಾಣದ ಕೊನೆಯಲ್ಲಿ ಗುರುಸ್ವಾಮಿಯವರ ಅಂಕಿತ ನಾಮವೆಂಬಂತೆ ಈ ರೀತಿಯಾಗಿ ಹೇಳುತ್ತಾರೆ.

ಪರಮಶ್ರೀ ಕಲಕೇರಿ ಪೀಠದ । ವರದ ಗುರು ಕಲ್ಲಯ್ಯ ದೇವರ ।
ಕುರುಹಿನಾ ನೆಲೆ ಕಲಬುರಗಿ ಕಲ್ಯಾಣ ಪ್ರಾಂತದಲಿ ।
ಮೆರೆವ ಸಲಗರ ಮಠದ ಶ್ರೀಗುರು
ವರನ ಪೌರಾಣದೊಳು ನಿಬಿಡದ
ಬರದ ತೊಡರಿದ ಸೊಗವ ಹರಡಿದ ಸಂಧಿಪನ್ನರೆಡು ॥

(ಪುಟ : ೮೧, ಪದ್ಯ : ೨೮)

೩.೩.೬ ಸುಕ್ಷೇತ್ರ ಇಟಗಾ ಶ್ರೀ ಶಿವಲಿಂಗೇಶ್ವರ ಪುರಾಣ

ಕರ್ನಾಟಕವು ಹಲವು ಸಂಸ್ಕೃತಿಗಳ ನಾಡು. ಹಲವು ಧರ್ಮ, ಸಂಸ್ಕೃತಿ ಪರಂಪರೆ, ಆಚಾರ-ವಿಚಾರಗಳನ್ನೊಳಗೊಂಡ ಪುಣ್ಯ ನಾಡಾಗಿದೆ. ಈ ನಾಡಿನಲ್ಲಿ ಅನೇಕ ಶರಣರು ಸಂತರು ಅವತರಿಸಿದ ಈ ಪುಣ್ಯ ಭೂಮಿಯಲ್ಲಿ ಗುಲಬರ್ಗಾ ಜಿಲ್ಲಾ ಸುಕ್ಷೇತ್ರ ಇಟಗಾದ ಶ್ರೀ ಶಿವಲಿಂಗೇಶ್ವರರು ಬಬಲೇಶ್ವರದ ಪಟ್ಟಾಧ್ಯಾಕ್ಷರಾಗಿ, ಆಚಾರ-ವಿಚಾರ ಸಂಪನ್ನರಾಗಿ ಬಾಳಿ ಬದುಕಿದವರಾಗಿದ್ದಾರೆ. ಶ್ರೀ ಶಿವಲಿಂಗೇಶ್ವರರು ವೀರಶೈವ ಆಚಾರ್ಯ ಪರಂಪರೆಯ ನಿಷ್ಠರಾಗಿ ಜೀವನದುದ್ದಕ್ಕೂ ಸಾತ್ವಿಕ ಬದುಕನ್ನು ನೆರವೇರಿಸುತ್ತಾ ಬಂದವರು. ಅವರ ಕ್ರಿಯಾಶೀಲತೆ ಬದುಕಿಗೆ ಹೊಸ ಮೌಲ್ಯವನ್ನು, ಸಮಾಜಕ್ಕೆ ಹೊಸ ಆಯಾಮವನ್ನು ಕಲ್ಪಿಸಿದೆ.

ಶ್ರೀ ಶಿವಲಿಂಗೇಶ್ವರ ಪುರಾಣವನ್ನು ಕವಿಗಳಾದ ಶ್ರೀ ರಾಜಗುರು ಗುರುಸ್ವಾಮಿ ಕಲಕೇರಿ ಇವರು ಭಾಮಿನಿ ಷಟ್ಪದಿಯಲ್ಲಿ ಸುಂದರವಾಗಿ ರಚಿಸಿ ಭಕ್ತರ ಕೈಗೆ ಈ ಕೃತಿಯನ್ನು ನೀಡಿದ್ದಾರೆ. ಹದಿನೆಂಟು ಸಂಧಿಗಳಿಂದ ಕೂಡಿದ ಪುರಾಣ ಒಟ್ಟು ೬೭೧ ಪದ್ಯಗಳಿಂದ ಕೂಡಿದೆ. ಪ್ರಸ್ತುತ ಈ ಪುರಾಣದುದ್ದಕ್ಕೂ ವೀರಶೈವ ಧರ್ಮ, ಆಚಾರ, ಪರಂಪರೆ ಹಾಗೂ ಶಿವಲಿಂಗೇಶ್ವರರ ಜೀವನಾದರ್ಶಗಳು ಮತ್ತು ಅವರು ತೋರಿದ ಲೀಲೆಗಳು ಪುರಾಣದಲ್ಲಿ ಅಡಕವಾಗಿವೆ. ಈ ಎಲ್ಲಾ ಮಾಹಿತಿಗಳನ್ನು ಶ್ರೀ ರಾಜಗುರು ಗುರುಸ್ವಾಮಿ ಕಲಕೇರಿಯವರು ತುಂಬಾ ಅರ್ಥಪೂರ್ಣವಾಗಿ ಪುರಾಣದಲ್ಲಿ ಹಿಡಿದಿಟ್ಟಿದ್ದಾರೆ.

ಬಬಲೇಶ್ವರದ ಶಿವಾಚಾರ್ಯರಿಂದ ಲಿಂಗದೀಕ್ಷೆ ಪಡೆದ ಮತ್ತು ಯರನಾಳ ಗ್ರಾಮದ ವಿರಕ್ತ ಮಠದ ಶ್ರೀಗಳಿಂದ ಅನುಗ್ರಹಿತರಾದ ಶಿವಲಿಂಗ ಶರಣರು ಗುರುಸ್ಥಲದ ಗುರುನಿಷ್ಠರು ಮತ್ತು ವಿರಕ್ತಸ್ಥಲ ನಿಷ್ಠರಾದ ಇವರು ನಿಜ ಶಿವಾದ್ವೈತರಾಗಿ ಬಾಳಿದ ಪುಣ್ಯ ಪುರುಷರು. ಸಮಾಜದಲ್ಲಿರುವ ದುಷ್ಟ ಜನರಿಗೆ ತಕ್ಕ ಪಾಠ ಕಲಿಸಿದಂತ ಶ್ರೀ ಶಿವಲಿಂಗೇಶ್ವರರು ಸಮಾಜದ ಡೊಂಕನ್ನು ತಿದ್ದಿ ಸಾತ್ವಿಕ ಗುಣಗಳನ್ನು ಬೆಳೆಸಿದವರು ಎಂಬುದನ್ನು ಪ್ರಸ್ತುತ ಈ ಪುರಾಣದುದ್ದಕ್ಕೂ ಷಟ್ಪದಿಯಲ್ಲಿ ತಿಳಿಸಿದ್ದಾರೆ.

ಶ್ರೀ ಶಿವಲಿಂಗೇಶ್ವರರು ಬಿಜಾಪೂರ ಜಿಲ್ಲೆಯ ಯರನಾಳ ಗ್ರಾಮದ ನೇಕಾರ ಮನೆತನದಲ್ಲಿ ಸದ್ಭಕ್ತ ದಂಪತಿಗಳಾದ 'ಸಿದ್ಧಲಿಂಗಪ್ಪ' 'ಗಿರೆಮ್ಮ'ನವರ ಮಗನಾಗಿ ಕ್ರಿ.ಶ. ೧೯೦೭ರಲ್ಲಿ ಜನಿಸಿದರು. ಅನಂತರ ಶಿವಲಿಂಗೇಶ್ವರರು ಕಲ್ಬುರ್ಗಿಗೆ ಸಮೀಪದಲ್ಲಿರುವ 'ಇಟಗಾ' ಎಂಬ ಗ್ರಾಮದಲ್ಲಿ ಬಂದು ನೆಲೆ ನಿಂತುಕೊಂಡು ಅಲ್ಲೆ ನೆಲೆಸಿದರು. ಗಾಂವಠಿ ಶಾಲೆಯಲ್ಲಿ ಭೌತಿಕ ಶಿಕ್ಷಣ ಹೊಂದಿದ ಇವರು ಮುಂದೆ ಆತ್ಮವಿದ್ಯೆಯನ್ನು ಕಲಿಯುವ ಸಲುವಾಗಿ ಬಬಲೇಶ್ವರದ ಹಿರೇಮಠದ ಗುರುಗಳಿಂದ ದೀಕ್ಷೆ ಸಿಕ್ಕಿತು.

ಶ್ರೀ ಶಿವಲಿಂಗೇಶ್ವರರು ಜೀವನದ ದಿನಗಳಲ್ಲಿ ಅಗಣಿತ ಘಟನೆಗಳನ್ನು ನಡೆಸಿದರು ಎನ್ನಬಹುದು. ಅಂತಹ ಅನೇಕ ಘಟನೆಗಳಲ್ಲಿ ಹಾವಿನ ಸಂಗ ಮಾಡಿದುದು ಒಂದಾಗಿದೆ. ಸರ್ಪವನ್ನು ಕೊರಳಿಗೆ ಹಾಕಿಕೊಂಡು ಮೆರೆದ ಶಿವಶರಣ ಎನ್ನಬಹುದು. ಇದನ್ನು ಪಂ. ರಾಜಗುರು ಗುರುಸ್ವಾಮಿ ಕಲಿಕೇರಿಯವರು ಈ ರೀತಿಯಾಗಿ ವಿವರಿಸುತ್ತಾರೆ. ಹುಡುಗರೊಂದಿಗೆ ದನ ಕಾಯಲು ಹೋಗಿದ್ದ ಶಿವಲಿಂಗರಿಗೆ ಹುತ್ತದಿಂದ ಹಾವೊಂದು ಬಂದು ಅವರನ್ನು ಸುತ್ತಿಕೊಳ್ಳುವುದನ್ನು ಆ ಊರಿನ ಸಿದ್ಧಪ್ಪನು ನೋಡಿ ಹೀಗೆ ಹೇಳುತ್ತಾನೆ.

ಹುಡುಗರೊದರಿದ ಮಾತ ಕೇಳುತ
ಗಡನೆಯೆಚ್ಚರಗೊಂಡು ಸಿದ್ಧಪ
ನೊಡನೆ ಸರ್ಪವ ನೋಡಿ ಹೌಹಾರದಲೆ ಋಷಿಯಿಂದೆ ॥
ಮೃಡನ ಕೊರಳಾಭರಣವೆನ್ನುತೆ
ದಿಡಿಗಿನಿಂದೇಳುತ್ತ ಸರ್ಪವ
ಪಿಡಿದು ಪುರದೆಡೆಗೋಡಿ ಬಂದಂ ನಗುತ ನೆಗೆಯುತ್ತೆ ॥

(ಪುಟ : ೩೫, ಪದ್ಯ: ೨೦)

ಶ್ರೀ ಶಿವಲಿಂಗೇಶ್ವರರು ಮೊದಲಿಗೆ ಸಾಮಾನ್ಯರಂತೆ ಕಂಡ ಇವರು ಕೊನೆಗೆ ಅಸಾಮಾನ್ಯ ಘಟನೆಗಳನ್ನು ಮಾಡುವುದರ ಮೂಲಕ ಪುರಾಣ ಕಾವ್ಯದ ಅಪ್ರತಿಮ ನಾಯಕನಾಗಿ ಓದುಗರ ಕಣ್ಣಿಗೆ ಕಾಣುತ್ತಾರೆ. ಶ್ರೀ ಶಿವಲಿಂಗರು ಪ್ರಪಂಚವಿಡಿದು ಪಾರಮಾರ್ಥದಲ್ಲಿ ಸಾಗುತ್ತಾರೆ. ಇಂತಹ ಅನೇಕ ಪ್ರಸಂಗಗಳನ್ನು ಈ ಪುರಾಣದಲ್ಲಿ ವ್ಯಕ್ತವಾಗಿರುವದನ್ನು ಕಾಣಲಾಗಿದೆ.

ಶ್ರೀ ಶಿವಲಿಂಗೇಶ್ವರರು ಲೌಖಿಕ ಹಾಗೂ ಅಲೌಕಿಕ ಎರಡು ಬದುಕನ್ನು ಸರಳವಾಗಿ ಅನುಸರಿಸಿಕೊಂಡು ಬಂದವರು. ವೀರಶೈವ ಧರ್ಮದಲ್ಲಿ ಅಪಾರವಾದ ನಂಬಿಕೆಯುಳ್ಳವರು. ಅಂತೆಯೇ ಅವರು ಕಾಯಕ ಸಿದ್ಧಾಂತದಲ್ಲಿ ನಂಬಿಕೆಯುಳ್ಳವರಾಗಿದ್ದರು. ಇವರು ಶ್ರದ್ಧೆಯಿಂದ ಕೃಷಿಕಾಯಕದಲ್ಲಿ ನಂಬಿಕೆ ಇಟ್ಟುಕೊಂಡವರಾಗಿದ್ದರು. ಶಿವಲಿಂಗರು ಅಕಸ್ಮಾತಾಗಿ ತಮ್ಮೂರಿನ ಗೌಡರನ್ನು ವಿರುದ್ಧವಾಗಿ ಕಟ್ಟಿಕೊಂಡು ಮುಂದೆ ಊರು ಬಿಟ್ಟು ಹೋಗಿ ಸತ್ಸಂಗ ಮಾಡುತ್ತ ಸಂಚರಿಸುತ್ತಾರೆ. ಲಚ್ಯಾಣ, ಕಕ್ಕಳಮೇಳ, ಸೋಲಾಪುರಗಳಲ್ಲಿ ಸಂಚರಿಸಿ ಮುಂದೆ ಕಲಬುರ್ಗಿಗೆ ಬಂದು ನೆಲೆಸುತ್ತಾರೆ.

ಶಿವಲಿಂಗೇಶ್ವರರ ಜೀವನದಲ್ಲಿ ಹತ್ತು-ಹಲವು ಪವಾಡಗಳು ಜನರ ಹಿತಾರ್ಥಕ್ಕಾಗಿ ಹಾಗೂ ಅವರ ಸಂಸ್ಕಾರಕ್ಕಾಗಿ ನಡೆದಿವೆ ಎಂದು ಹೇಳಬಹುದು. ಪುರಾಣ ಕಾವ್ಯವನ್ನು ರಚಿಸಿರುವ ಶ್ರೀ ಪಂ. ಗುರುಸ್ವಾಮಿ ಕಲಕೇರಿಯವರು ಅತ್ಯಂತ ಸುಂದರವಾಗಿ ಕಟ್ಟಿಕೊಟ್ಟಿದ್ದಾರೆ. ದೇಶಿಯ ಛಂದಸ್ಸಿನ ಮತ್ತು ಷಟ್ಪದಿ ಕಾವ್ಯಗಳನ್ನು ಸರಳವಾಗಿ ರಚಿಸುವ ಕವಿಯು ಇಲ್ಲಿಯೂ ಕೂಡ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಭಾಮಿನಿ ಷಟ್ಪದಿಯಲ್ಲಿ ಬರೆದ ಈ ಕಾವ್ಯವು

ಓದುಗರನ್ನು ಪರಿಣಾಮಕಾರಿಯಾಗಿ ಓದಿಸಿಕೊಂಡು ಹೋಗುತ್ತದೆ. ಇದರಲ್ಲಿ ಶಿವಲಿಂಗೇಶ್ವರರ ಜೀವನ ಚರಿತ್ರೆ, ಪವಾಡಗಳು, ಪರಿಣಾಮಕಾರಿಯಾಗಿ ಮೂಡಿ ಬಂದಿವೆ. ಜನರು ಇದನ್ನು ವಾಚಿಸಿದರೆ ಭಕ್ತಿ ಪರವಶರಾಗುವಂತೆ ಕೃತಿಯನ್ನು ರಚಿಸಿದ್ದಾರೆ.

೩.೩.೭. ಶ್ರೀ ಗುರುಶಾಂತ ಶಿವಯೋಗಿ ಪುರಾಣ

ಭಾಮಿನಿ ಷಟ್ಪದಿಯಲ್ಲಿ ರಚಿತವಾದ ಈ ಕಾವ್ಯದಲ್ಲಿ ಹದಿನೆಂಟು ಸಂಧಿಗಳು, ೭೩೧ ಪದ್ಯಗಳಿವೆ. ಪೂರ್ವಪುರಾಣಕವಿಗಳ ಪರಂಪರೆಯನ್ನು ಅನುಸರಿಸಿದ ಕವಿಗಳು ಕಾವ್ಯದ ಪೀಠಿಕಾಧ್ಯಾಯದಲ್ಲಿ ಶ್ರೀಗುರು ಪಂಚಾಚಾರ್ಯರು, ಶಿವ-ಪಾರ್ವತಿ, ವೀರಭದ್ರ, ಗಣೇಶ, ಕಲ್ಲಿನಾಥ, ವೀರಘಂಟೇಶ, ಮಡಿವಾಳೇಶ, ಬಸವಾದಿ ಶರಣರ ಸ್ತುತಿಯೊಂದಿಗೆ ತನ್ನನ್ನು ಕುರಿತು ಹಾಗೂ ಕೃತಿ ರಚನೆಯ ಉದ್ದೇಶ ಕುರಿತು ಹೇಳಿರುವರು.

ಈ ಪರಾಣಕಾವ್ಯವು ಕಥಾನಾಯಕನ ಜೀವನ ವೃತ್ತಾಂತವನ್ನು ತಿಳಿಸುವುದರೊಂದಿಗೆ ಪುರಾಣನಾಯಕನಿಗೆ ಲಿಂಗದೀಕ್ಷೆ, ಜಂಗಮದೀಕ್ಷೆ ಅನುಗೃಹ ಕೊಡಿಸುವ ಹಿನ್ನೆಲೆಯಲ್ಲಿ ವೀರಶೈವ ಸಿದ್ಧಾಂತವನ್ನೇ ಪ್ರತಿಪಾದಿಸುತ್ತದೆ. ಅದರಲ್ಲೂ ಅಷ್ಟಾವರಣಗಳ ಮಹಿಮೆಯನ್ನು ಎತ್ತಿ ಹೇಳುತ್ತ; ಗುರು-ಲಿಂಗ-ಜಂಗಮರಲ್ಲಿ ಬೇಧವನ್ನೆಣಿಸಬಾರದೆಂಬ ಸಮತಾಭಾವದ ಕಳಕಳಿ ಇಲ್ಲಿದೆ. ಈ ಹಿನ್ನೆಲೆಯಲ್ಲಿಯೇ ಬೆಳೆದುಬರುವ ಕಥಾನಾಯಕರು ಶ್ರೀ ಗುರುಶಾಂತರೇ ಎಂಬುದನ್ನು ಕವಿ ವಿನಮ್ರರಾಗಿ ಹೀಗೆ ಹೇಳುತ್ತಾರೆ.-

ಕೃತಿಗೊಡೆಯ ನೆಗಳೂರು ಮಠದಧಿ
ಪತಿಯು ಗುರು ಶಾಂತೇಶ ಮೇಣೀ
ಕೃತಿಯ ರಚಿಸಲ್ಕೊರೆದ ನೆಗಳೂರ್ ಮಠದ ಗುರುನಾಥ ॥
ಯತಿ ಶಿವಾನಂದಾರ್ಯ ಪಟ್ಟದ
ಗತಿಗಧೀಶ್ವರರಪ್ಪಣೆಯೊಳೀ
ಕೃತಿ ಸುಭಕ್ತಿಯಲಿಂದ ತೀಡುತ್ತೊಪ್ಪಿಸುವೆ ಮುದದೆ ॥

(ಪುಟ : ೦೫, ಪದ್ಯ : ೧೫)

ಶ್ರೀ ಗುರುಶಾಂತಶಿವಯೋಗಿಗಳೇ ಕಥಾನಾಯಕರೆಂದು ತಿಳಿಸುತ್ತ ಮುಂದಿನ ಅಧ್ಯಾಯಗಳಲ್ಲಿ ಶ್ರೀಗಳು ಶ್ರೀರಂಭಾಪುರಿ ಪೀಠದ ಜಗದ್ಗುರುಗಳ ಕೃಪಾಶೀರ್ವಾದದಿಂದ ಪಿರಿಮಠದ ಜಂಗಮ ಮನೆತನದಲ್ಲಿ ಕ್ರಿ.ಶ. ೧೧೨೨; ಯುಗಾದಿಯ ದಿನದಂದು, ಮುಂಜಾವಿನಲ್ಲಿ ಓಂಕಾರ ನಿನದದೊಂದಿಗೆ 'ಶಿವಲಿಂಗಯ್ಯ' ಮತ್ತು 'ಗಿರಿಜಾಂಬೆ' ದಂಪತಿಗಳ ಮಗನಾಗಿ ಜನಿಸುವದನ್ನು ಕವಿಗಳು ಈ ಕೆಳಕಂಡ ಪದ್ಯದಲ್ಲಿ ಸುಂದರವಾಗಿ ಚಿತ್ರಿಸಿದ್ದಾರೆ-

ಸಾಲುಶಕೆ ಹನ್ನೊಂದು ನೂರರ–
ಮೇಲೆಯಿಪ್ಪತ್ತೆರಡುಗಾದಿಯ
ಬೆಳ್ಗವಿಯುಮೂಡಿರ್ದವೇಳೆಗೆ ತಾಯಿ ಗಿರಿಜಮ್ಮ ॥
ಶೂಲಿಯೊಗೆದತ್ಯಂತ ಸಂತಸ
ಶಾಲಿಶಿಸುವವತರಿಸಿಯಳುತಿಹ
ಲೋಲ ದನಿಯೋಂಕಾರವಾಲಿಸಿ ತಣಿದು ದಣಿವಳಿದಳ್ ॥

(ಪುಟ : ೧೫, ಪದ್ಯ : ೨೪)

ಹೀಗೆ ಓಂಕಾರ ನಾದದೊಂದಿಗೆ ಜನಿಸಿದ ಶ್ರೀಗುರು ಶಾಂತರು ಬಾಲಚಂದ್ರನಂತೆ ಸೊಗಸ ನೀಡುತ್ತ ಬೆಳೆದು, ಮುಂದೆ ಶ್ರೀಗುರುವಿನಿಂದ ತ್ರಿವಿಧ ದೀಕ್ಷೆ ಪಡೆದು, ತಪವನ್ನಾಚರಿಸುತ್ತ ಪವಾಡಗಳನ್ನೆಸಗುತ್ತಾರೆ. ಹೊರನಾಡು, ಶೃಂಗೇರಿ, ಕಡೂರು, ಬೇರೂರು ಮುಂತಾದ ಕಡೆ ಸಂಚರಿಸಿ ಹೋದ ಹೋದಲ್ಲೆಲ್ಲ ವೀರಶೈವದ ಭಕ್ತರುದ್ಧಾರ ಗೈಯ್ಯುತ್ತ ಭಕ್ತರ ಭಕ್ತಿಗೊಲಿದು ಅವರ ಇಷ್ಟಾರ್ಥ ಪೂರೈಸಿ ತನ್ನ ತಪದ ಶಕ್ತಿಯನ್ನು ಮೆರೆಯುತ್ತಾರೆ.

ಹೀಗೆ ಲೋಕಸಂಚಾರ, ಲೋಕಾನುಭವ ಪಡೆದು ಮತ್ತೆ ಶ್ರೀಗುರು ಸಿದ್ಧರಾಮರಲ್ಲಿಗೆ ಬಂದು ಗುರುಸೇವೆಯಲ್ಲಿ ನಿರತರಾಗುತ್ತಾರೆ. ಶ್ರೀಗುರುಶಿಷ್ಯನ ಕೀರ್ತಿಯನ್ನು ನಾಡಿನ ಭಕ್ತರಿಂದ ಕೇಳಿ ಸಂತುಷ್ಟರಾದುದನ್ನು ಕವಿಯು ವರ್ಣಿಸಿದ ಬಗೆ ಮನೋಜ್ಞವಾಗಿದೆ.

ವಿದ್ಯೆಯಲಿ ಪಂಡಿತನು ವರ ಸಂ
ಸಿದ್ಧಿಯಲಿ ಗುರುಶಾಂತ ಬಲ್ಲಿದ
ನಿದ್ದುದರಿಯುತೆ ಜನರು ನೆಗಳೂರಿಂದ ಬಂದಿಹರು ॥
ಸಿದ್ಧರಾಮರಿಗೆರಗಿ ವಿನಯದೆ
ಶುದ್ಧ ಗುರುಸ್ಥಲ ಮಠವು ನೆಗಳೂರ್
ವೃದ್ಧಿಗೊಳಿಸುವ ಪಟ್ಟದಧಿಪನ ಮಾಡಿರೆಂದೊರೆದರ್ ॥

(ಪುಟ : ೭೪, ಪದ್ಯ : ೦೨)

ನೆಗಳೂರ ಭಕ್ತರ ಮೊರೆಯ ಕೇಳಿದ ಶ್ರೀಗುರು ಸಿದ್ಧರಾಮರು ವರಜಗದ್ಗುರುಗಳಿಗೆ ತಿಳಿಸಲ್ ಹರುಷದಿಂದೊಪ್ಪಿದರು ಪಟ್ಟದ ಕಾರ್ಯ ನಡೆಸಲ್ಕೆ; ಹೀಗೆ ನೆಗಳೂರು ಮಠದ ಅಧಿಪತಿಯಾಗಿ ಶ್ರೀಗುರುಶಾಂತ ಶಿವಾಚಾರ್ಯರು ಲೋಕೋದ್ಧಾರ ಕಾರ್ಯ ಕೈಕೊಂಡು ಭಕ್ತರ ಕಲ್ಪತರು ಆಗುತ್ತಾರೆ. ಭಕ್ತರ ಸರ್ವಸ್ವವಾಗುತ್ತಾರೆ. ಶ್ರೀಮಠ ಇವರ ಕಾಲದಲ್ಲಿ ಸಮೃದ್ಧಿಯಾಗಿ ಬೆಳದು ನಾಡಿನಲ್ಲಿ ಕೀರ್ತಿವೆತ್ತು ಬೆಳಗುತ್ತದೆ. ಅಲ್ಲದೆ ಶ್ರೀಗಳ ಪವಾಡ ಸದೃಶ ಲಿಂಗಜೀವನ ಕೃತಿಯುದ್ದಕ್ಕೂ ಸಾಗುತ್ತದೆ. ಅವುಗಳಲ್ಲಿ –

ಬಿರುಗಾಳಿಗೆ ಹಾರಿಹೋದ ಗುರುಗಳ ಬಟ್ಟೆಯನ್ನು ಮರಳಿ ತರಿಸಿದ್ದು, ಶೃಂಗೇರಿಯ ಹೊಳೆಯಲ್ಲಿ ಮುಳುಗಿ ಸಾಯುತ್ತಿದ್ದ ಕೂಸನ್ನು ವಿರಾಟ್ ಹಸ್ತದಿಂದೆತ್ತಿ ಬದುಕಿಸಿದುದು, ಗುತ್ತಲದ ಲಿಂಗಪ್ಪ ದೇಸಾಯಿಯ ಸತಿಯ ಕರಿತೊನ್ನು ರೋಗವನ್ನು ಸರ್ಪದಿಂದ ನೆಕ್ಕಿಸಿ ಕಳೆದದ್ದು, ಹೊಲ-ನೆಲ ಮಾನ್ಯ ಪಡೆದುದು, ಶ್ರೀ ಹಾವನೂರ ದೇವಿ ಸಾಕ್ಷಾತ್ಕಾರ, ಹಾವನೂರ ದೊರೆ ಹನುಮಂತಪ್ಪನ ಪ್ರಾಣರಕ್ಷಿಸಿ ವಟುರೂಪ ಕೊಟ್ಟು ರಕ್ಷಿಸಿದ್ದು, ನೇಗಿಲು ಹೂಡುವ ಬಹುರೂಪ ಲೀಲೆಯಾಡಿದ್ದು, ಭಕ್ತರಿಗೆ ತತ್ವಬೋಧೆ, ಕಂಬಳಿಹಾಸಿ ಕೂತು ಕೃಷ್ಣಾ ನದಿ ದಾಟಿದ್ದು ಪ್ರಮುಖವಾಗಿವೆ.

ಈ ರೀತಿಯಲ್ಲಿ ನೆಗಳೂರು ಹಿರೇಮಠದ ದಿವ್ಯ ಪರಂಪರೆ ಅಂದಿನಿಂದ ಇಂದಿನವರೆಗೂ ಚಾಚೂ ತಪ್ಪದೆ ನಡೆದುಕೊಂಡು ಬಂದುದನ್ನು ಪುರಾಣಕರ್ತರು, ಸಂಗೀತ ಸುಧಾಕರರೂ ಆದ ಪಂ. ರಾಜಗುರು ಗುರುಸ್ವಾಮಿ ಅವರು ಭಕ್ತರ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

ಭಕ್ತರನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಿ, ಮಾನವೀಯ ಮೌಲ್ಯಗಳನ್ನು ಮನುಕುಲದಲ್ಲಿ ಬಿಂಬಿಸಿ, ವೀರಶೈವ ದರ್ಶನಗಳನ್ನು ತಿಳಿಸಿದ ಶ್ರೀಗಳು ನೆಗಳೂರು ಮಠದಲ್ಲಿ ಶಿವಯೋಗ ಸಮಾಧಿ ಮಂದಿರ ರಚಿಸಿ ಮಾಘಶುದ್ಧ ಪ್ರತಿಪದೆ ಕ್ರಿ.ಶ. ೧೧೧೨ ರಂದು ಲಿಂಗೈಕ್ಯರಾದರು. ಈ ಕಾವ್ಯದ ಕೊನೆಯ ಸಂಧಿ-೧೮ ರಲ್ಲಿ ನೆಗಳೂರು ಮಠದ ಪೀಠ ಪರಂಪರೆಯಲ್ಲಿ ಆಗಿಹೋದ ಸ್ವಾಮಿಗಳನ್ನು ಹೆಸರಿಸಿದ್ದು ವಿಶೇಷವಾಗಿದೆ.

೩.೩.೮. ಬಡದಾಳ ತೇರಿನ ಮಠದ ಶ್ರೀ ಚೆನ್ನಮಲ್ಲೇಶ್ವರ ಲೀಲಾಮೃತ

ಪಂ. ರಾಜಗುರು ಗುರುಸ್ವಾಮಿ ಕಲಕೇರಿಯವರಿಂದ ರಚಿತವಾದ ಈ ಕೃತಿಯು ೧೮ ಅಧ್ಯಾಯಗಳು ಹಾಗೂ ೮೧೨ ಭಾಮಿನಿ ಷಟ್ಪದಿಯ ಪದ್ಯಗಳನ್ನು ಹಾಗೂ ಪ್ರತಿ ಅಧ್ಯಾಯದಾರಂಭದಲ್ಲಿ ಸೂಚನಾ ಪದ್ಯವನ್ನು ಒಳಗೊಂಡಿದೆ. ಸ್ವಾಮಿಗಳ ಚಾರಿತ್ರಿಕ ವಿವರಗಳನ್ನು ಅತ್ಯಂತ ಹೃದಯಂಗಮವಾಗಿ ಹೇಳುತ್ತಾರೆ. ಕೃತಿಯು-

ಚೆನ್ನಮಲ್ಲನ ಪೂರ್ಣದಾಕೃತಿ....
ಎನ್ನಶಿರದೊಳಿದ್ದ ಸಾಕ್ಷೀಶುಭದ ಕೃತಿ ರಚನೆ ॥

(ಪುಟ : ೪೦, ಪದ್ಯ : ೩೮)

ಎಂದು ಹೇಳಿ 'ಅನುಭವದ ಅರ್ಪಣಾಭಾವ'ವೇ ಕಾವ್ಯ ರಚನೆಗೆ ಮೂಲವಾಗಿದೆಂಬುದನ್ನು ಕವಿಗಳು ಈ ಪದ್ಯದಲ್ಲಿ ಹೀಗೆ ಹೇಳಿದ್ದಾರೆ.

ಧ್ಯಾನಿಪರ ಮನದಲ್ಲಿಯಿರ್ದಿಹ
ಮಾನಿಪರ ಮನೆಯಲ್ಲಿ ತೋರುವ
ಚೆನ್ನಮಲ್ಲೇಶೆನ್ನ ಕರದೋಳಿರ್ದು ರಚಿಸಲಿದಂ ॥

(ಪುಟ : ೪೦, ಪದ್ಯ : ೩೯)

ಹೀಗೆ ವ್ಯಷ್ಟಿಗಾಗಿ ಬದುಕದೆ ಸಮಷ್ಟಿಯ ಹಿತಕ್ಕಾಗಿ ಬದುಕಿದ ಶ್ರೀ ಗುರುಶಾಂತರ ಚರಿತ್ರೆಯೇ ಕಾವ್ಯವಸ್ತುವಾಗಿದ್ದು, ಅದನ್ನು ಕವಿಗಳು ಹೇಳುವ ರೀತಿ ವಿಶಿಷ್ಟವಾಗಿದೆ.

..................ಸಿದ್ಧಿ ತೋರುತ ಮಠದ ಜಾಗ್ರತ
ನಿದ್ದ ಗುರು ಚರಿತ್ರವಿದು ಸ
ಮೃದ್ಧ ಭಕ್ತರ ಬಾಳ್ ಪವಿತ್ರಂಗೊಳಿಪುದದು ಸತ್ಯಂ ॥

(ಪುಟ : ೪೨, ಪದ್ಯ : ೪೪)

ಎಂಬುದು ಕಾವ್ಯದ ಆಶಯವಾಗಿದೆ. ಹೀಗೆ ಹೆಚ್ಚು ಹೆಚ್ಚಾಗಿ ಸ್ವಾಮಿಗಳ ಅಂತಃಕರಣದ ಮೌಲ್ಯಗಳಾದ ಸತ್ಯ, ನಿಷ್ಠೆ, ಅನುಭಾವ, ಅರಿವು, ನ್ಯಾಯ ಮುಂತಾದ ಬದುಕಿನ ಘಟನೆಗಳನ್ನು ನಿರೂಪಿಸುವಲ್ಲಿ ಭಕ್ತರ ಅಂತರಂಗ-ಬಹಿರಂಗಗಳ ಶುದ್ಧಿಯೇ ಮುಖ್ಯ ಗುರಿಯಾಗಿರುವುದು ವೇದ್ಯವಾಗುತ್ತದೆ.

ಕಾವ್ಯದಾರಂಭವು ಸಾಗರದ ವರ್ಣನೆಯೊಂದಿಗೆ ಪ್ರಾರಂಭವಾಗುತ್ತದೆ. ಭಕ್ತೋದ್ಧಾರಕ್ಕಾಗಿ ಚೆನ್ನಮಲ್ಲೇಶ್ವರರ ಜನನ ಬಾಲ್ಯಗಳನ್ನು ನಿರೂಪಿಸುತ್ತ ಮುಂದುವರೆದಿದೆ. ಇವರ ಜನನವನ್ನು ಕುರಿತ ಒಂದು ಘಟನೆ ಶರಣರು ಸ್ವಾಮಿಗಳು ದೈವೀ ಅವತಾರವೆಂಬುದಕ್ಕೆ ನಿದರ್ಶನ ನುಡಿಯುತ್ತದೆ.

ಒಂದು ಬಾರಿ ಮಠದಲ್ಲಿ 'ನವರೇಣುಕ ರೂಪ' ರಂತಿರುವ 'ಸಿದ್ರಾಮ ಶಿವಾಚಾರ್ಯ'ರು ದರ್ಶನಕೆ ಬಂದಿದ್ದ 'ಮಾಡ್ಯಾಳಗ್ರಾಮ'ದ 'ಶಿವಯ್ಯ' ಮತ್ತು 'ರೇವಾಂಬೆ'ಯರನ್ನು ಆಶೀರ್ವದಿಸಿ 'ರೇವಮ್ಮಳ ಉಡಿಯಲ್ಲಿ ಮೂರು ತೆಂಗಿನಕಾಯಿ ಉಡಿತುಂಬಿ ಒಂದು ನಮ್ಮದು ಎರಡು ನಿಮ್ಮವು' (ಅ : ೨, ಪ : ೨೫), ಎಂದು ಹೇಳಿದಂತೆ 'ರೇವಮ್ಮ' ಮತ್ತು 'ಶಿವಯ್ಯ' ದಂಪತಿಗಳ ಎರಡನೆಯ ಮಗನಾದ 'ಮಲಕಯ್ಯ'ನೇ ಕಾವ್ಯನಾಯಕ 'ಶ್ರೀಗುರುಶಾಂತ ಶಿವಯೋಗಿ'ಗಳು; ಇವರು ಇನ್ನು ಗರ್ಭಸ್ಥ ಶಿಶುವಿರುವಾಗಲೇ 'ಬಟ್ಟರಕಿ ಬಾಬಾ' ಮಹಾತ್ಮರ ಮಗು ಆಶೀರ್ವಾದ ಪಡೆದವರು. ಮಗು 'ಬ್ರಹ್ಮನೇ ಮಗುವಾಗಿ ಬಂದಂ' ಆತನಿಗೆ 'ಹೃದವ ಹಾಸುವೆ ಹದಳ ಹೊದಿಸುವ' ಅದ್ಭುತ ಶೈಶವ ಕಳೆಯಿತು. ಮಠಾಧಿಪತಿಗಳಾದ ಮೇಲೆ ಪೂರ್ವಾಶ್ರಮದ ನಾಮ 'ಮಲಕಯ್ಯ'ನಿಗೆ ಬದಲಾಗಿ 'ಶ್ರೀಮಲ್ಲೇಶ'ರಾದರು.

ಬಾಲ್ಯದಲ್ಲಿ ತಂದೆಯೆ ಇವರಿಗೆ ಧಾರ್ಮಿಕ ಆಚರಣೆ ಸಂಸ್ಕಾರವನ್ನು ಕಲಿಸಿದರು. ಪುರಾಣ ಶರಣರ ಕಥೆಗಳನ್ನು ನಿರೂಪಿಸಿ ಅಧ್ಯಾತ್ಮದ ಅರಿವಿನ ಮಾರ್ಗವನ್ನು ಬೋಧಿಸಿದರು. ಶ್ರೀಗಳು ಮಲಕಯ್ಯನಾಗಿರುವಾಗಲೆ ಲಿಂಗಸಮರಸಗೊಂಡುದನ್ನು ಧಾರ್ಮಿಕ ಮದುವೆ ಎಂಬಂತೆ ಕವಿಗಳು ಚಿತ್ರಿಸಿದ್ದಾರೆ.

ಲಿಂಗಧಾರಣ ಕನ್ಯೆ ನಿಶ್ಚಯ
ಲಿಂಗದೀಕ್ಷೆಯು ಮದುವೆ ಮತ್ತಂ
ಲಿಂಗ ಸಮರಸದಂಗವದು ಸೋಭನದ ಕಾರ್ಯವದೈ ॥
ಲಿಂಗ ರತಿಮತಿ ಭಾವ ಸಮ್ಮತಿ
ಲಿಂಗ ಪರಗತಿ ಪಡೆವುದದು ನಿಜ
ಲಿಂಗವಂಗಾನಂದ ಸಮರತಿ ಬದ್ಧನೀ ಸಿದ್ಧ ॥

(ಪುಟ : ೯೨, ಪದ್ಯ : ೧೧)

ಹೀಗೆ ಲಿಂಗಮಾರ್ಗಿ ಮಲಕಯ್ಯನು–

ಕರ್ತೃವಿಚ್ಛಿತ ಸಿದ್ಧರಾಮ ಮ
ಹಾತ್ಮರಾಶಿಷ್ಯಮಲಕಯಂ ಸ
ದ್ಭಕ್ತರಾಶಯದಂತೆ ತೇರಿನ ಮಠಾಧಿಪನಾದ ॥ (ಪುಟ – ೯೯, ಸೂಚನಾ ಪದ್ಯ)

ಶ್ರೀ ಚೆನ್ನಮಲ್ಲೇಶ್ವರರು ಇಪ್ಪತ್ತನಾಲ್ಕನೆಯ ಮಠಾಧೀಶರಾಗಿ ಮಠವನ್ನು ಉದ್ಧರಿಸಿದರು. ಇವರು ಭಕ್ತೋದ್ಧಾರ ಪರಸಿರಿ ಲೀಲೆಯನ್ನಾಡುತ ಮೆರೆಯುತಿಹರು ಎಂದು ಬಣ್ಣಿಸಿದ್ದಾರೆ. (ಅ : ೭, ಸೂ.ಪ.) ಇವರು ಮಠಕ್ಕೆ ಬಂದುದನ್ನು–

ಪುರದ ಪುಣ್ಯದ ಮಠದ ಪುಣ್ಯದ
ಪುರಜನರೆಲ್ಲರ ಪುಣ್ಯತಾನೊಪ್ಪಿರಲ್ ॥ (ಪುಟ : ೦೭, ಪದ್ಯ : ೦೭)

ಎಂದಾಗಿ ಜನರ ಬಾಳಿಗೆ ಶುಭವಾಗಿ ಪರಿಣಮಿಸಿದರು. ಪವಾಡ ಸಿದ್ಧರಾದ ಇವರಿಗೆ ಒಮ್ಮೆ ಭಕ್ತರು ಕಾದ ಕಂಚಿನ ರಸವನ್ನು ಭಿಕ್ಷೆಗೆ ನೀಡಿದಾಗ ಅದನ್ನು ಕುಡಿದಂತ ಮಹಿಮರಾಗಿದ್ದಾರೆ. (ಅ:೨, ಪ:೧೮)

'ರೈತಾಪಿ ಜನರಿಂ ಹೊನ್ನಬೆಳೆಯ ರಾಶಿಯನು ಗೈಸಿ ಮಣ್ಣು ಚಿನ್ನವ ಗೈದ ಲೀಲಾ ಚೆನ್ನಿಗರು.' (ಅ:೨, ಪ:೨೪) ಹೀಗೆ ಪವಾಡ ಪುರುಷರಾದ ಇವರಲ್ಲಿ ಭಕ್ತರ ಬಗೆಗಿನ ಕಳಕಳಿಯನ್ನು ಕವಿಗಳು ಮೇಲಿನ ಉದಾಹರಣೆಗಳಲ್ಲಿ ಬಿಂಬಿಸಿರುವರು. ಶ್ರೀಗಳ ವಿಶೇಷತೆಯೆಂದರೆ ಅಂಬಾರಿ ಏರದ, ಸಿಂಹಾಸನಾರೂಢರಾಗದ ಜನಮಾನಸಾರೂಢರಾದರು. ಜನಹಿತ, ಜನಕ್ಕೆ ಸನ್ಮಾರ್ಗ ಬೋಧನೆ ಮಾಡಿ ಸತ್ಪಾತ್ರರನ್ನಾಗಿಸಿದರು. ಅಜ್ಞರಿಗೆ ಅರಿವನ್ನು ನೀಡಿದರು. ಅಳಿವಿನ

ಸ್ಥಿತಿಯಲ್ಲಿದ್ದ ಮಠವನ್ನು ನಿಲ್ಲಿಸಿ, ಬೆಳೆಸಿ ಜಲಮೂಲವನ್ನು ಸಾರಿ ಹೇಳುವ ಮದೋನ್ಮತ್ತರನ್ನು ಸರಿಯಾದ ದಾರಿಗೆ ತರುವ, ಸಮತಾಭಾವ ಸಾರುವ ಕ್ರಿಯಾ ಕಲಾಪವನ್ನು ಬೆಳೆಸಿದರು.

ಉಳ್ಳವರು ಧನಧಾನ್ಯಸಂಪದ
ವಿಲ್ಲದವರಿಗೆಯೀಯಬೇಕಂ
ದುಲ್ಲಸದೆ ಪೇಳುವನು ಗುರುಚೆನ್ನಮಲ್ಲೇಶ ॥

(ಪುಟ : ೧೨೭, ಪದ್ಯ : ೩೧)

ಎನ್ನುವ ತತ್ವವನ್ನು ಅಣುಷ್ಠಾನಗೊಳಿಸಿದವರು ಸಿರಿತನಕೆ ಔದಾರ್ಯದ ಅಗತ್ಯವಿದೆ ಎಂದರು. ಅದರಂತೆ ಸುತ್ತಲಿನ ಜನ ಭಕ್ತಮನದ ಅಜ್ಞಾನ ಕಳೆದರು.

ಪರಂಪರೆಯಂತೆ ಪುರಾಣಗಳಲ್ಲಿ ಕಂಡು ಬರುವ ಕವಿಸಮಯವೆಂದರೆ ಪವಾಡಗಳ ಜೋಡಣೆಯಾಗಿದೆ. ಇದು ಕವಿಯ ಸ್ವಅನುಭಾವವಾಗಿರದೆ ಜನಜನಿತವಾದ ದಂತಕಥೆಗಳನ್ನು ಆಧರಿಸಿ ಬರೆದಿರುವಂಥವು. ಈ ಕಾವ್ಯದಲ್ಲಿ ಅದು ಹಿತಮಿತವಾಗಿದೆ. ಭಕ್ತರ ಬಡತನ ನಿವಾರಣೆ, ರೋಗ-ರುಜಿನ ವಾಸಿಮಾಡುವಿಕೆ, ಅಪನಂಬಿಕೆ ಕಳೆದು ವಿಶ್ವಾಸ ಬೆಳೆಸುವಿಕೆ, ಬಂಗಾರದ ಮೋಹ ಕಳಚುವದು. ಹೀಗೆ ಭಕ್ತರ ಬಾಳಿನ ಬೆಳಕಾಗಬಲ್ಲ ಮೌಲ್ಯಗಳನ್ನು ಬಿಂಬಿಸುವ ಪವಾಡಗಳು ಪುರಾಣದುದ್ದಕ್ಕೂ ಸಾಲುಗಟ್ಟಿ ಬಂದರೂ, ಅವು ಪವಾಡದ ಆವರಣವನ್ನು ಕಳಚಿ ಲೀಲೆ ಎಂಬಂತೆ ನಿರೂಪಿತವಾಗಿವೆ. ಅವಾಸ್ತವಾದುದನ್ನು ಇಲ್ಲಿ ಹೇಳಿಲ್ಲ. ಬಾಳೆಹಣ್ಣು ಹೆಚ್ಚಾದ, ಕೆಸರಿನಲ್ಲಿ ಸಿಕ್ಕ ಚಕ್ಕಡಿ-ದನ-ಜನ ಪಾರಾದದ್ದು ಹೀಗೆ ಅನೇಕ ಲೀಲೆಗಳ ಚಿತ್ರಣ ಇಲ್ಲಿದೆ.

ಶ್ರೀಗಳ ಪರಿಪೂರ್ಣ ಬದುಕನ್ನು ಚಿತ್ರಿಸಿದ ಕವಿಗಳು ಹೇಳುವ ರೀತಿ ಅನನ್ಯವಾಗಿದೆ.

ಚೆನ್ನಮಲ್ಲಂ ಧರ್ಮಪಾಲಕ
ಚೆನ್ನಮಲ್ಲಂ ಕಲೆಯ ಪೋಷಕಂ
ಚೆನ್ನಮಲ್ಲಂ ಸಂಸ್ಕೃತಿ ಸಂಚಾಲಕಂ ಪ್ರೀತಂ ।
ಚೆನ್ನಮಲ್ಲಂ ಶೀಲರಕ್ಷಕ
ಚೆನ್ನಮಲ್ಲ ತತ್ವಧಾರಕ
ಚೆನ್ನಮಲ್ಲಂ ಲೌಕಿಕರ ಬಾಳ ಬೆಳಕ ಪರಿಪೂತಂ ॥

(ಪುಟ : ೧೫೭, ಪದ್ಯ : ೧೬)

ಶ್ರೀಗಳ ವ್ಯಕ್ತಿತ್ವದ ಪರಿಪೂರ್ಣತೆಯನ್ನು ಈ ಪದ್ಯದಲ್ಲಿ ಖಂಡರಿಸಿದ್ದಾರೆ.

ಕಾವ್ಯ ನಿರೂಪಣೆಗೆ ಪೂರಕವಾದ ವಚನಗಳ, ಸರ್ವಜ್ಞನ ಮತ್ತು ಮುಳಗುಂದ ಶ್ರೀಗಳ ಸೂಕ್ತಿಗಳನ್ನು ಹೇಳಿ ಆಯಾ ಕವಿಗಳ ಹೆಸರನ್ನು ಎತ್ತಿ ಹೇಳಿದ್ದು ಈ ರೀತಿ 'ಕವಿಯ ಘನತೆ'ಗೆ ದ್ಯೋತಕವಾಗಿದೆ. ಕೃತಿ ಚೋರರ ಇಂದಿನ ದಿನಗಳಲ್ಲಿ ಇದೊಂದು ಮಾದರಿಯಾಗಿದೆ.

ಶ್ರೀ ಚೆನ್ನಮಲ್ಲೇಶ್ವರರು ಜಾತ್ಯಾತೀತ ನಿಲುವಿಗೆ ಒಂದು ನಿದರ್ಶನವಾಗಿ ಅಂತರ್ಜಾತಿಯ ವಿವಾಹವನ್ನು ಮಾಡಿದರು. ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಮಹಾತ್ಮಿಕೆಗೆ ಇವರು ಒಂದು ದೃಷ್ಟಾಂತವಾಗಿದ್ದಾರೆ. 'ಕಸವು ಬೇಕು ರಸದ ವೃದ್ಧಿಗೆ' ಎಂಬ ವಿಶ್ವವಿಶಾಲ ತತ್ವ ಸ್ವಾಮಿಗಳದು.

'ಭಕ್ತರೆನ್ನಯ ಕರುಳಕುಡಿಗಳು ಭಕ್ತರೆನ್ನಯ ಹೃದಯ ಮಿಡಿಗಳು, ಭಕ್ತರೆನ್ನಯ ನಿಜ ಬಂಧು ಬಳಗ' (ಅಧ್ಯಾಯ : ೧೬. ಪದ್ಯ : ೧೫) ಎಂಬ ಭಕ್ತ ವಾತ್ಸಲ್ಯಭಾವವೇ ಶ್ರೀಗಳ ಮೂಲಸ್ಥಾಯಿ ಎಂದು ಕವಿಗಳು ಗುರ್ತಿಸಿದ್ದಾರೆ. ಸಾಂದರ್ಭಿಕವಾಗಿ ವೀರಶೈವ ಧರ್ಮದ ಪ್ರಸ್ಥಾನತ್ರಯಗಳಾದ 'ಷಟ್‌ಸ್ಥಲ-ಅಷ್ಟಾವರಣ-ಪಂಚಾಚಾರ'ಗಳ ಬಗೆಗೆ ತಿಳಿಸಿ, ಕಾವ್ಯವು ಪರಿಪೂರ್ಣಗೊಳ್ಳುವಂತೆ ಮಾಡಿ 'ಜ್ಞಾನಿ ಜಂಗಮನಾಗಬೇಕು, ಜ್ಞಾನಿ ಭಕ್ತರ ತಿದ್ದಬೇಕು' ಎಂಬ ಹಿರಿಯ ಆಶಯವು ಕಾವ್ಯರಚನೆಯ ಮೂಲ ನೆಲೆಯೂ ಆಗಿದೆಯೆಂಬುದನ್ನು ಅಭಿವ್ಯಕ್ತಿಸಿದ್ದಾರೆ. ಹೀಗೆ ಸಮಷ್ಠಿಯ ಹಿತಕ್ಕಾಗಿ, ಭಕ್ತರೋದ್ಧಾರಕ್ಕಾಗಿ, ಧರ್ಮದ ಏಳ್ಗೆಗಾಗಿ, ಮಠವನ್ನು ಸುಸ್ಥಿತಿಗೆ ತರುವಲ್ಲಿ ತಮ್ಮನ್ನೇ ಸಮರ್ಪಿಸಿದ ಶ್ರೀ ಚೆನ್ನಮಲ್ಲೇಶ್ವರರು ಮಾರ್ಗಶಿರ ಬಹುಳ ಪಂಚಮಿ ೧೯೮೪ನೇ ಜನವರಿ ೧೭ ಶನಿವಾರದಂದು ರಾತ್ರಿ ಲಿಂಗೈಕ್ಯರಾದರು.

◆◆◆

೩.೪. ಶ್ರೀ ಕರವೀರಪ್ಪ ಅಂಗಡಿಯವರ ಪುರಾಣ ಕಾವ್ಯಗಳು

* ಕವಿ
* ಕೃತಿಗಳು
    ೧. ಉರಗಾದ್ರಿ ಗವಿಮಠ ಶ್ರೀ ಗುರುಕರಿಬಸವ ಯೋಗಿ ಲೀಲೆ
    ೨. 'ಕಾಯಕಯೋಗಿ' ಶ್ರೀ ರುದ್ರಮುನಿ ಶಿವಯೋಗೀಶ ಚರಿತಾಮೃತ
    ೩. ಮುರಗೋಡ ಮಹಾಂತ ಶಿವಯೋಗೀಶ ಚರಿತಾಮೃತ
    ೪. ಮೃಡಗಿರಿ ಶ್ರೀ ಜಗದ್ಗುರು ಅನ್ನದಾನೀಶ್ವರ ಲೀಲಾಮೃತ

ಕವಿ :

ಶ್ರೀ ಕರವೀರಪ್ಪ ಅಂಗಡಿಯವರು ರೋಣ ತಾಲೂಕಿನ ಮೆಣಸಗಿಯ ವ್ಯಾಪಾರಿಗಳಾದ 'ಬಸಪ್ಪ' ಮತ್ತು 'ಬಸಮ್ಮ' ದಂಪತಿಗಳ ದ್ವಿತೀಯಪುತ್ರರಾಗಿ ೦೩-೦೬-೧೯೦೭ರಂದು ಜನಿಸಿದರು. ೧೯೧೨ರಲ್ಲಿ ಮುಲ್ಕೀ ಪರೀಕ್ಷೆಯನ್ನು ಪಾಸು ಮಾಡಿದ ಬಳಿಕ ಶಿವಯೋಗ ಮಂದಿರದಲ್ಲಿ ವಟುವಾಗಿ ಸೇರಿ ಸಂಸ್ಕೃತಾಭ್ಯಾಸ ಹಾಗೂ ವೀರಶೈವ ಧರ್ಮದ ಆಳವಾದ ಅಧ್ಯಯನ ಮಾಡಿದರು. ಶ್ರೀ ಹಾನಗಲ್ಲ ಕುಮಾರ ಶಿವಯೋಗಿಗಳು ಮತ್ತು ಹಾವೇರಿಯ ಹುಕ್ಕೇರಿಮಠದ ಶಿವಬಸವ ಸ್ವಾಮಿಗಳ ಅಭಿಪ್ರಾಯದಂತೆ ಶಿಕ್ಷಕನಾಗಲು ಬೇಕಾದ ಹೆಚ್ಚಿನ ವ್ಯಾಸಂಗವನ್ನು ರೋಣದ ಗುಲಗಂಜಿ ಮಠದಲ್ಲಿದ್ದು ಪೂರೈಸಿದರು. ಶ್ರೀಯುತರು ೧೯೨೦ರಲ್ಲಿ ನರೇಗಲ್‌ನ ಸರಕಾರಿ ಶಾಲೆಯಲ್ಲಿ ಶಿಕ್ಷಕ ಸೇವೆಯನ್ನು ಪ್ರಾರಂಭಿಸಿದರು. ನಂತರ ೧೯೨೧ರಲ್ಲಿ ಹಾನಗಲ್ ಕುಮಾರ ಶಿವಯೋಗಿಗಳ ಆಜ್ಞೆಗೆ ಬಾಗಿ ಗದುಗಿಗೆ ಬಂದು ಶಿಕ್ಷಕವೃತ್ತಿಯನ್ನು ಮುಂದುವರೆಸಿದರು. ಇವರಲ್ಲಿನ ಶಿಕ್ಷಣದಾಹವು ಧಾರವಾಡದ ಮುರುಘಾಮಠದ ಆಶ್ರಯ ಪಡೆದು ಕಾಲೇಜು ಶಿಕ್ಷಣ ಪಡೆಯುವಂತೆ ಪ್ರೋತ್ಸಾಹಿಸಿತು.

ಇವರು 'ಶ್ರೀಕುಮಾರೇಶ್ವರ ಸೇವಾ ಶಿಕ್ಷಣ ಸಂಘ', 'ಅಖಿಲಭಾರತ ವೀರಶೈವ ವಿದ್ಯಾಪೀಠ', 'ನಿತ್ಯಶಿವಾನುಭವ ಪ್ರವಚನ', 'ಗೊಡಚಿ ಸೇವಾ ಸಂಘ' ಸ್ಥಾಪಿಸುವ ಮೂಲಕ ಶರಣರ ಆಶಯಗಳನ್ನು ವೀರಶೈವ ಧರ್ಮ ಪ್ರಜ್ಞೆಯನ್ನು ಜನರಲ್ಲಿ ಬಿಂಬಿಸಿದರು. ಕೋಡಿಕೊಪ್ಪದ

ಶ್ರೀ ವೀರಪ್ಪಜ್ಜನವರ ದರ್ಶನದಿಂದ ಕವಿಗಳಾಗಿ ಬೆಳೆದ ಇವರು ಲಾವಣಿ, ಮಂಗಳಕರ ಪದ, ಬೈಲಾಟ, ಕೆಳದಿ ಚೆನ್ನಮ್ಮ, ಬೆಳವಡಿ ಮಲ್ಲಮ್ಮ ಕಿತ್ತೂರಕೇಸರಿ ಮೊದಲಾದ ವೀರ ಮಹಿಳೆಯರ ಕುರಿತ ನಾಟಕಗಳನ್ನು ಬರೆದರು. ಹೆಣ್ಣು ಮಕ್ಕಳ ಶಿಕ್ಷಣದ ಅವಶ್ಯಕತೆಯನ್ನು ತಿಳಿಸಿಕೊಟ್ಟರು. ಮೋತಿಲಾಲನೆಹರು, ಜವಾಹರಲಾಲನೆಹರು, ಜೈಹಿಂದ್, ಸುಭಾಸಚಂದ್ರಭೋಸ್‌ರಂತ ರಾಷ್ಟ್ರನಾಯಕರ ಜೀವನ ಚರಿತ್ರೆ ಬರೆದು ದೇಶಾಭಿಮಾನ, ದೇಶಭಕ್ತಿ ಭಾಷಾಭಿಮಾನ ಬೆಳೆಸುವಲ್ಲಿ ಕಾರಣರಾದರು. 'ಮುತ್ತೈದೆಯರೈವರು', 'ಗೊಡಚಿಕ್ಷೇತ್ರವಸ್ತು', 'ಮಡಿವಾಳಮಾಚಿ ತಂದೆ' ಎಂಬ ಸಂಶೋಧನಾರ್ಹ ಕೃತಿಗಳನ್ನು ಬರೆದಿರುವರು.

೧೯೫೭ ಜುಲೈ ೭ರಂದು ಸೇವಾನಿವೃತ್ತಿ ಹೊಂದಿದ ಇವರು ತಮ್ಮ ಸಾಹಿತ್ಯ ಕೃಷಿಯನ್ನು ಮುಂದುವರೆಸಿ 'ಉರಗಾದ್ರಿ ಕರಿಬಸವಯೋಗಿ ಲೀಲೆ', 'ಮುರಗೋಡ ಮಹಾಂತ ಶಿವಯೋಗೀಶ್ವರರ ಚರಿತಾಮೃತ', 'ಶರಣಬಸವೇಶ್ವರ ಚರಿತ್ರೆ', 'ಕಾಯಕ ಶಿವಯೋಗಿ ರುದ್ರಮುನಿ ಸ್ವಾಮಿ ಚರಿತ್ರೆ', 'ಜಗದ್ಗುರು ಅನ್ನದಾನೀಶ್ವರ ಲೀಲಾಮೃತ', 'ಕಲಬುರ್ಗಿ ಶರಣಬಸವೇಶ್ವರ ಚರಿತಾಮೃತ' ಎಂಬ ಪುರಾಣ ಕಾವ್ಯಗಳನ್ನು ಬರೆದಿರುವರು. ಅಲ್ಲದೆ ಬೈಲಾಟ, ನಾಟಕ, ಅಷ್ಟಕ, ಷಟ್ಕ, ಕಿರುಗ್ರಂಥಗಳು, ಪಠ್ಯಪುಸ್ತಕ ಪುರಾಣಗಳು ಹೀಗೆ ನೂರಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿರುವರು. ಶೈಕ್ಷಣಿಕವಾಗಿ ಸಾಮಾಜಿಕವಾಗಿ ಸೇವೆ ಸಲ್ಲಿಸಿದ ಶ್ರೀಯುತರು ೦೬-೦೭-೧೯೮೬ರಂದು ಲಿಂಗೈಕ್ಯರಾದರು.

೩.೪.೧. ಉರಗಾದ್ರಿ ಗವಿಮಠ ಶ್ರೀಗುರು ಕರಿಬಸವಯೋಗಿ ಲೀಲೆ

ಉರಗಾದ್ರಿ ಗವಿಮಠ ಶ್ರೀಗುರು ಕರಿಬಸವಯೋಗಿ ಲೀಲೆ ಪರಾಣ ಕಾವ್ಯವು ೨೫ ಸಂಧಿಯನ್ನು ಒಳಗೊಂಡ ೭೭೦ ಭಾಮಿನಿಷಟ್ಪದಿಯ ಪದ್ಯಗಳಲ್ಲಿ ರಚಿತವಾದ ಪುರಾಣಕಾವ್ಯ. ಈ ಕಾವ್ಯವು ಕರಿಬಸವ ಯೋಗಿಯ ಕೃಪೆಗೆ ಪಾತ್ರರಾದ ಶರಣೆ 'ಶಾಂತಮ್ಮ' ಅವರ ಚರಿತೆಯಾಗಿದೆ. ಅಂದಿನ 'ದೇವನಗರಿ' ಇಂದಿನ ದಾವಣಗೇರಿಯ ಪ್ರಸಿದ್ಧಕಲಾ ಸಾಧಕರಾದ ಚಿಂದೋಡಿ ವೀರಪ್ಪಣ್ಣ ಹಾಗೂ ಶಾಂತಮ್ಮ ಅವರ ಭಕ್ತಿಗೆ ಒಲಿದು ಬಂದು ಅಧ್ಯಾತ್ಮದ ಸುಧೆಯನ್ನು, ಭಕ್ತಿಯ ಅಂತರಂಗದ ಶುದ್ದಿಯನ್ನು ನೆಚ್ಚಿ, ಹಲವು ಮಹಾತ್ಮೆಗಳನ್ನು ತೋರಿಸಿ ಅಲ್ಲಿಯೇ ನೆಲೆ ನಿಂತು ದೇಹ ತ್ಯಾಗಮಾಡಿ ಆ ಭಕ್ತರ ಹೃದಯದಲ್ಲಿ ಸದಾ ಅಳಿಸಲಾರದ ಭಕ್ತಿಯ ಕಿಚ್ಚನ್ನು ಹಚ್ಚಿಸಿದ ಮಾನವತಾವಾದಿ ಕರಿಬಸವಯೋಗಿಗಳ ಜೀವನದ ಚಿತ್ರಾವಳಿಯನ್ನು ಸ್ಪಷ್ಟವಾಗಿ ಕವಿ ಅಂಗಡಿಯವರು ಈ ಕಾವ್ಯದಲ್ಲಿ ಉಲ್ಲೇಖಿಸಿದ್ದಾರೆ. ಈ ಮಹಾತ್ಮರ ಚರಿತ್ರೆಯ ಜೊತೆಯಲ್ಲಿ ಶರಣೆ ಶಾಂತಮ್ಮನ ಭಕ್ತಿಯನ್ನು ಕೊಂಡಾಡಿದ್ದಾರೆ.

ಕಾವ್ಯದ ಆರಂಭವು ರಮ್ಯವಾಗಿ ಗುರುಸ್ತುತಿಯಿಂದ ಬಿಚ್ಚಿಕೊಳ್ಳುತ್ತಾ ಸಾಗಿ ಹಲವು ಶಿವಶರಣ- ಶರಣೆಯರ ಸ್ತುತಿಯಿಂದ ಮುನ್ನಡೆದು ಶಿವಧರ್ಮತತ್ವದ ಘನತೆಯನ್ನು ವಿಸ್ತರಿಸುತ್ತಾ

ಸಾಗಿ ಪೀಠಿಕಾಭಾಗದ ಕೊನೆಯಲ್ಲಿ ಕವಿ ತನ್ನನ್ನು ಕುರಿತು ಪ್ರಸ್ತಾಪಿಸಿಕೊಂಡಿದ್ದಾರೆ. ವೀರಶೈವ ಪುರಾತನ ಮಠಗಳಲ್ಲಿ ಉರಗಾದ್ರಿ ಮಠವು ಒಂದಾಗಿದೆ. ಆ ಗ್ರಾಮಕ್ಕೆ ಈ ಹೆಸರು ಹೇಗೆ ಬಂದಿದೆ ಎನ್ನುವುದನ್ನು ಕವಿ ಅಂಗಡಿಯವರು ಈ ರೀತಿಯಲ್ಲಿ ಚಿತ್ರಿಸಿದ್ದಾರೆ.

"ಉರಗರೂಪದಿ ಬಂದು ತೋರುವೆ" (ಸಂಧಿ : ೧೩, ಪದ್ಯ : ೨೨, ಪುಟ : ೧೧೨) ಎಂದು ಹೇಳಿ ಕವಿ ಅಂಗಡಿಯವರು "ಶ್ರೀ ಕರಿಬಸವಯೋಗಿಯು ಸರ್ಪಭೂಷಣನ ಚಿದಂಶಿಕನೆ ತಾನಾಗಿ ಮೆರೆದ ಒಂದು ಲೀಲೆಯನ್ನು ಉಲ್ಲೇಖಿಸಿ ಅದಕ್ಕೆ ಶಿವಯೋಗಿಗಳಿಂದಲೇ 'ಉರಗಾದ್ರಿ' ಎಂಬ ಹೆಸರು ಬಂದಿತೆಂದು ವರ್ಣಿಸಿರುವುದು ಭಾವುಕ ಭಕ್ತರ ನಂಬಿಗೆಯನ್ನು ಹೆಚ್ಚಿಸುವಂತಿದೆ" (ಚೆನ್ನುಡಿ ಡಾ॥ ವಿ. ಶಿವಾನಂದ. ಪುಟ : ೮.)

ಕರ್ನಾಟಕ ಧಾರ್ಮಿಕಸ್ಥಿತಿ ಮತ್ತು ಸಾಮಾಜಿಕಸ್ಥಿತಿ ಅವನತಿಯತ್ತ ಸಾಗುತಿರಲು ಅದರ ಉದ್ಧಾರಕ್ಕಾಗಿ ಮತ್ತು ಸಮಾಜದ ಅಂಧಾನುಕರುಣೆಯನ್ನು ದೂರ ಮಾಡಲು ಚೆನ್ನಗಿರಿಯ ಬಂಕಾಪುರ ಅವರ ಮನೆಯಲ್ಲಿ ಶರಣ 'ಸಂಗಮ' ಶರಣೆ 'ಶಾಂತವೀರಮ್ಮ' ದಂಪತಿಗಳ ಉದರದಲ್ಲಿ ಮಹಾಶರಣೆ ಶಾಂತಮ್ಮನವರ ಜನನವಾಗುತ್ತದೆ. ಆ ಮನೆಯು ಶಿವಶರಣರ ತತ್ವವನ್ನು ಚಾಚುತಪ್ಪದೇ ಪಾಲಿಸುವ, ಮುನ್ನಡೆಸುವ ಮಹಾಮನೆಯಾಗಿತ್ತು. ಜಗತ್ತನ್ನು ಉದ್ಧರಿಸಲು ಜನಿಸಿದ ಅನೇಕ ಶಿವಶರಣೆಯ ಜೊತೆ ಶಾಂತಮ್ಮನವರನ್ನು ಹೋಲಿಸಿದ ರೀತಿ ಅಪ್ಯಾಯಮಾನವಾಗಿದೆ.

ವೀರ ವೈರಾಗ್ಯನಿಧಿ ಅಕ್ಕನು
ಧೀರ ನಾಯಕಿ ನಾಗಲಾಂಬೆಯು
ವೀರ ಶೈವಾಚಾರಪೂರ್ಣಳು ನೀಲಲೋಚನೆಯು ।
ನಾರಿ ವರ್ಗಕೆ ದಾರಿದೋರುವ
ವೀರತನವನು ಹೊತ್ತು ಸಂತತ
ವೀರಶೈವದ ದೀಪ ಬೆಳಗಿಸೆ ನಿಂತ ಮಹಿಳೆಯರು ॥

(ಪುಟ : ೨೫, ಪದ್ಯ : ೨೧)

ಹೀಗೆ ಅಕ್ಕಮಹಾದೇವಿ, ನಾಗಲಾಂಬೆ, ನೀಲಲೋಚನೆ ಮುಂತಾದ ಶ್ರೇಷ್ಠ ಶಿವಶರಣೆಯರ ಹಾಗೇ ಈ ಧರೆಗೆ ಅವತರಿಸಿದಳು ಶಾಂತಮ್ಮ ಎನ್ನುವುದು ಕವಿಯ ವಿಶಿಷ್ಟತೆಯಾಗಿದೆ.

ನಾಲ್ಕು ಮತ್ತು ಐದನೆಯ ಸಂಧಿಯಲ್ಲಿ ದಾವಣಗೇರಿಯ ಅಣ್ಣಿಗೇರೆಯ ಮನೆತನದಲ್ಲಿ ವೀರಣ್ಣನ ಜನನ. ವೀರಣ್ಣನ ಬಾಲ್ಯ, ಶಿಕ್ಷಣ ಮತ್ತು ಶಾಂತಮ್ಮ ಹಾಗೂ ವೀರಣ್ಣ ಅವರ ಮದುವೆ ಸಂದರ್ಭ, ನವದಂಪತಿಗಳಿಂದ ಶಿವಶರಣರ ಕ್ಷೇತ್ರದರ್ಶನ ಅಲ್ಲಿ ಗುಪ್ತರೂಪದ ಯೋಗಿಯಿಂದ ಆ ಕ್ಷೇತ್ರಗಳ ಮಹಿಮೆಯ ದರ್ಶನ ಮುಂತಾದವುಗಳನ್ನು ಕವಿ ಅಂಗಡಿಯವರು ಕಾವ್ಯದಲ್ಲಿ ಪ್ರಸ್ತಾಪಿಸಿದ್ದಾರೆ. ಜೊತೆಗೆ ಸಂಗೀತದ ವೈಭವದ ವಿವರಣೆ ಹಾಗೂ ಶಾಂತಮ್ಮನ

ಪ್ರಸಾದ ಲೀಲೆ ತುಂಬ ಮನೋಹರವಾಗಿ ಕಂಡು ಬಂದಿದೆ. ವೀರಣ್ಣನ ಗಾನನಾದವ ಕೇಳಿ ಸಹೃದಯರು ತಲೆಯಾಡಿಸುವ ರೀತಿಯನ್ನು ಕವಿ ಅಂಗಡಿಯವರು ಈ ರೀತಿಯಲ್ಲಿ ಬಣ್ಣಿಸಿದ್ದಾರೆ.

"ನಾದ ಬ್ರಹ್ಮನ ನಾದ ಸೃಷ್ಟಿಗ
ಗಾಢವೆನಿಸಿದ ರಾಗದಲೆಗಳಿ
ಗಾಢ ತೃಪ್ತರು ಅಹಹ, ಎನ್ನುತ ತಲೆಯ ತೂಗುತಿರೆ

(ಪುಟ : ೪೯, ಪದ್ಯ : ೧೫)

ಶರಣೆ ಶಾಂತಮ್ಮನ ನವವಿಧ ಭಕ್ತಿ, ವೀರಣ್ಣನಿಂದ ಶಾಂತಮ್ಮನಿಗೆ ಕಾಡಾಟ, ಕರಿಬಸವಯೋಗಿಯ ಆಜ್ಞೆಯಿಂದ ಬಂದ ಸಂಕಟದಲ್ಲಿ ದೂರವಾಗುವುದು ಹೀಗೆ ಕಥಾ ಹಂದರ ಮುಂದುವರೆಯುತ್ತದೆ. ವಿವಿಧ ಶಿವಶರಣೆಯರ ಜೊತೆ ಶಾಂತಮ್ಮನ ಹೋಲಿಕೆಯನ್ನು ತುಂಬ ಸ್ವಾರಸ್ಯಕರವಾಗಿ ಮಾಡಿದ್ದಾರೆ. ಕರಿಬಸವ ಯೋಗಿಯ ಕರುಣೆಯಿಂದ ಮೈಸೂರು ಅರಸನಾದ ಹೈದರ ಅಲಿಯ ತಾಯಿಯ ರೋಗ ನಿವಾರಣೆಯಾದ ಬಗೆಯು ಚಾರಿತ್ರಿಕವಾಗಿ ದಾಖಲಾಗಿದೆ. ಜೊತೆಗೆ ಚಿಂದೋಡಿಯವರ ಮನೆತನದ ಇತಿಹಾಸದ ಪರಿಚಯ ಮುಂತಾದ ಸಂಗತಿಗಳು ಸ್ಪಷ್ಟವಾಗಿ ಗೋಚರಿಸಿವೆ.

ಕರಿಬಸವಯೋಗಿಯ ಕರುಣೆಯಿಂದ ಶರಣೆ ಶಾಂತಮ್ಮನು ಧ್ಯಾನ, ಜಪ, ತಪ, ಪೂಜೆ ಗುರುವಿನ ಭಕ್ತಿ ಮುಂತಾದವುಗಳಿಂದ ಸಿದ್ಧಿ-ಸಾಧನವನ್ನು ಪಡೆದುಕೊಂಡು ಅನೇಕ ಲೀಲೆಗಳನ್ನು ಮಾಡಲಿಕ್ಕೆ ಪ್ರಾರಂಭಿಸುತ್ತಾಳೆ. ಇವೆಲ್ಲವು ಅಂದಿನ ಸಮಾಜದ ಬಹು ಬೇಡಿಕೆಯಾದ ಕಾರ್ಯಗಳಾಗಿದ್ದವು. ಅವುಗಳಲ್ಲಿ ಪ್ರಮುಖವಾದವುಗಳು ಈ ರೀತಿಯಲ್ಲಿವೆ.

೧. ಭಾವಿಯ ಸವುಳ ನೀರನ್ನು ಸಿಹಿ ನೀರಾಗಿ ಮಾಡಿದ್ದು.

೨. ಜಂಗಮನ ಮಗನಿಗೆ ಪ್ರಾಣದಾನ

೩. **"ಒಪ್ಪಿದಂತೆಯೆ ನಡೆಯ ಫಲವಿದೆ**
ತಪ್ಪಿ ನಡೆದರೆ ವಿಫಲ ತಾನದು
ತಪ್ಪದೆಂಬುವ ಪಾಠನಿತ್ತಳು ಶರಣೆ ಶಾಂತಮ್ಮ"

(ಸಂಧಿ : ೧೨, ಪುಟ : ೯೬, ಸೂಚನೆ ಪದ್ಯ.)

೪. ಗೋಕರ್ಣ ಕ್ಷೇತ್ರದಲ್ಲಿ ದಿವ್ಯ ಪ್ರಸಂಗ

೫. ಶಾರದಮ್ಮನ ಕ್ಷಯರೋಗ ವಾಸಿಮಾಡಿದ್ದು. ಮುಂತಾದವುಗಳು.

ಹೀಗೆ ಅನೇಕ ಲೀಲೆಗಳನ್ನು ಕವಿ ಅಂಗಡಿಯವರು ಕಾವ್ಯದಲ್ಲಿ ಹೆಣೆದಿದ್ದಾರೆ. ಕರಿಬಸವಯೋಗಿಯ ಕೃಪೆಯಿಂದ ಆ ಭಾಗದಲ್ಲಿ ಶರಣೆ ಶಾಂತಮ್ಮ ಅತ್ಯುನ್ನತವಾದ ಭಕ್ತಿಯ

ಸಾಧನದ ಶಿಖರವನ್ನು ಮುಟ್ಟಿದ್ದರು. ಈ ಶಿವಭಕ್ತ ದಂಪತಿಗಳು ಸಮಾಜದ ಕಾರ್ಯವನ್ನು ಶೃದ್ಧೆಯಿಂದ ಮಾಡುತ್ತಲಿದ್ದಾಗ, ಕಪಲಿಯಲ್ಲಿ ಪತಿ ವೀರಣ್ಣ ಮರಣ ಹೊಂದಲು ಶಾಂತಮ್ಮನಿಗೆ ಜೀವನದಲ್ಲಿ ಬಹುದೊಡ್ಡ ಹೊಡೆತ ಬೀಳುತ್ತದೆ. ಲೋಕಕಲ್ಯಾಣ ಮಾಡಿದ ಶಾಂತಮ್ಮ ಗಂಡನನ್ನು ಉಳಿಸಿ ಕೊಳ್ಳದೇ ಹೋದ ಘಟನೆ ತುಂಬಾ ಮಾರ್ಮಿಕವಾಗಿ ಚಿತ್ರಿತವಾಗಿದೆ.

ಪತಿಯು ಮೊದಲಿಗೆ ನುಡಿದ ಮಾತಿನ
ಮಥನಮನದೊಳು ನಡೆಯ ಹತ್ತಲು
ಸತಿಯು ತಿಳಿದಳು ಪತಿವಿಯೋಗದ ಸಮಯವೆಂಬುದನ

(ಪುಟ : ೧೬೧, ಪದ್ಯ : ೨೬)

ಎನ್ನುವಲ್ಲಿ ಪತಿಯ ಮರಣದ ಸಮಯ ಶರಣೆ ಶಾಂತಮ್ಮನಿಗೆ ಮಂಚಿತವಾಗಿಯೇ ತಿಳಿದ ವಿಷಯ ಸ್ಪಷ್ಟವಾಗಿ ವರ್ಣಿತವಾಗಿದೆ. ಮುಂದೆ ಶರಣೆ ಶಾಂತಮ್ಮ ಮಕ್ಕಳಿಂದ ಕಪಲಿಯಲ್ಲಿ ಮರಣ ಹೊಂದಿದ ಪತಿಯ ಕುರುಹನ್ನು ದೇವನಗರಿಗೆ ತರಿಸಿ ವಿಶೇಷವಾದ ಸಂಸ್ಕಾರಮಾಡಿದ ಬಗೆಯನ್ನು ಕವಿ ಅಂಗಡಿಯವರು ಕಾವ್ಯದಲ್ಲಿ ಕಣ್ಣಿಗೆ ಕಟ್ಟುವಂತೆಯೆ ಬಿಂಬಿಸಿದ್ದಾರೆ.

ಪುರಾಣ ಕಾವ್ಯದ ಕೊನೆಯ ಭಾಗದಲ್ಲಿ ಕರಿಬಸವಯೋಗಿಯ ಕೃಪೆಗೆ ಪಾತ್ರರಾಗಿ, ಆತ ನಡೆಸಿದಂತೆಯೇ ನಡೆದು ಸನ್ಮಾರ್ಗವನ್ನು ಸೃಷ್ಟಿಸಿ, ಜಗಕ್ಕೆ ತನ್ನಿಂದಾದ ಉಪಕಾರವನ್ನು ಮಾಡಿ ಇಹಲೋಕವನ್ನು ತ್ಯಜಿಸಿ ಲಿಂಗೈಕ್ಯರಾದರು. 'ಶರಣೆ ಶಾಂತಮ್ಮ' ಎನ್ನುವ ಭಾಗ ಅತಿಮಹತ್ವದಿಂದ ಕೂಡಿದೆ. ಮುಂದೆ ತಾಯಿ ಶಾಂತಮ್ಮ ಹೇಳಿದ ಹಾಗೇ ಎಲ್ಲ ಪೂಜೆ-ಪುನಸ್ಕಾರ, ವಿಧಿ-ವಿಧಾನ, ದಾಸೋಹವನ್ನು ತನ್ನ ಮಕ್ಕಳು ಮುಂದುವರೆಸಿಕೊಂಡು ಬರುತ್ತಿರುವುದು ಚಾರಿತ್ರಿಕ ದೃಷ್ಟಿಯಿಂದ ಮಹತ್ವದ್ದಾಗಿದೆ. ಜೊತೆಗೆ ಶರಣೆ ಶಾಂತಮ್ಮನ ಸಾಮಾಜಿಕ ಮತ್ತು ಧಾರ್ಮಿಕ ಪರಂಪರೆ ಮುಂದುವರೆಯುತ್ತಿರುವುದು ತುಂಬ ಸಂತೋಷವನ್ನುಂಟುಮಾಡುತ್ತದೆ.

ಒಟ್ಟಿನಲ್ಲಿ ಈ ಉರಗಾದ್ರಿ ಗವಿಮಠ ಶ್ರೀಗುರು ಕರಿಬಸವಯೋಗಿಲೀಲೆ ಪುರಾಣವು ಅನೇಕ ದೃಷ್ಟಿಯಿಂದ ಚಾರಿತ್ರಿಕ ಮತ್ತು ಐತಿಹಾಸಿಕ ಸಂಗತಿಯಿಂದ ಒಡಗೂಡಿದೆ. "ತೋರಿ ಗುಡ್ಡಾಪುರದ ದಾನಮ್ಮ, ಹೇಮರಡ್ಡಿ ಮಲ್ಲಮರಂಥ ಶಿವಶರಣೆಯರ ಪಂಕ್ತಿಯಲ್ಲಿ ಶರಣೆ ಶಾಂತಮ್ಮಳು ಸೇರಿರುವದನ್ನು ಕವಿಗಳಾದ ಶ್ರೀ ಅಂಗಡಿ ಅವರು ಬಹು ಸರಳವಾಗಿಯೂ, ಸುಂದರವಾಗಿಯೂ ಚಿತ್ರಿಸಿದ್ದಾರೆ. ಕರಿಬಸವರ ಲೀಲೆಗಳನ್ನು ಬಣ್ಣಿಸುವುದರ ಜೊತೆಗೆ ಅವರಿಂದ ಪಾವನಳಾದ ಶರಣೆ ಶಾಂತಮ್ಮಳ ಪುಣ್ಯ ಜೀವನ ಚರಿತ್ರೆಯನ್ನು ಜೊತೆ ಜೊತೆಯಾಗಿ ಹೆಣೆದಿರುವಲ್ಲಿ ಅವರು ತೋರಿದ ತೂಕದಬುದ್ಧಿ ನಿರೂಪಣೆಗೆ ಎಂಥವರೂ ತಲೆದೂಗಲೇಬೇಕು. ಕವಿಗಳು ಅಷ್ಟಾದಶವರ್ಣನೆಗಳ ಹಂಗಿಲ್ಲದೆ, ಪವಾಡಗಳ ಲೋಕದಲ್ಲಿ ಸುತ್ತದೆ, ವಾಸ್ತವಿಕ ಘಟನೆಗಳನ್ನಾಧರಿಸಿ ಕಾವ್ಯರಚನೆ ಮಾಡಿರುವದು ಅವರ ಆಧುನಿಕ ಪ್ರಜ್ಞೆಯ ದ್ಯೋತಕವಾಗಿದೆ.

ಭಾಮಿನಿಷಟ್ಪದಿಯ ಸುಲಲಿತ ಧಾಟಿ ಅವರ ನಿರರ್ಗಳ ವಾಚಾ ವಿಶ್ವಾಸಕ್ಕೆ ತಕ್ಕ ಮಾಧ್ಯಮವಾಗಿದೆ." (ಡಾ॥ ಫ಼ಿ. ಶಿವಾನಂದ. ಮುನ್ನುಡಿ ಪುಟ : ೧೦). ಹಲವು ಪುರಾಣ ಕೃತಿಗಳನ್ನು ತೂಗಿ ನೋಡಿದರೆ ಕವಿತ್ವದ ಮತ್ತು ಸರಳತೆಯ ಹಾಗೂ ಚಾರಿತ್ರಿಕ ಅಂಶಗಳ ದೃಷ್ಟಿಯಿಂದ ಈ ಕೃತಿಗೆ ಆದರದೇ ಆದ ಅನನ್ಯತೆ ಪ್ರಾಪ್ತವಾಗಿದೆ. ಜೊತೆಗೆ ವಿಶಿಷ್ಠ ಲಯಗಾರಿಕೆಯ ದೃಷ್ಟಿಯಿಂದ ಸಾಹಿತ್ಯ ಸೃಷ್ಟಿ ಇಲ್ಲಿ ಹರಿದು ಬಂದಿದೆ.

೩.೪.೨. ಕಾಯಕಯೋಗಿ ಶ್ರೀ ರುದ್ರಮುನಿ ಶಿವಯೋಗೀಶ ಚರಿತಾಮೃತ

ಈ ಪುರಾಣ ಕಾವ್ಯವು ಎರಡು ಸಂಪುಟದಲ್ಲಿ ರಚಿತವಾಗಿದೆ. ಮೊದಲನೆಯ ಸಂಪುಟವು ಪದ್ಯಭಾಗದಿಂದ ಕೂಡಿದ್ದು, ಎರಡನೆಯ ಸಂಪುಟವು ವಿವರಣೆಯಿಂದ ಕೂಡಿದ ಗದ್ಯ ಭಾಗವಾಗಿದೆ. ಈ ಕಾವ್ಯವು ಇಪ್ಪತ್ತು ಅಧ್ಯಾಯವನ್ನು ಒಳಗೊಂಡಿದೆ. ಕಾವ್ಯದ ಆರಂಭವು ಸಾಂಪ್ರದಾಯಿಕ ಪುರಾಣಗಳ ರಚನೆಯಿಂದ ಕೂಡಿದೆ. ಕವಿ ಆರಂಭದಲ್ಲಿ ವೀರಶೈವ ಗುರುಗಳ ಪರಂಪರೆಯನ್ನು ಸ್ತುತಿಮಾಡಿ ನಂತರ ಚರಿತ್ರೆಗೆ ಪೀಠಿಕೆಯನ್ನು ಹಾಕಿದ್ದಾರೆ. ವೀರಶೈವ ಧರ್ಮ ಹಾಗೂ ತತ್ವ ಬೋಧನೆಯಿಂದ ಕೃತಿಯ ಆರಂಭದಲ್ಲಿ ಆ ಭಾಗದಲ್ಲಿ ನಡೆದ ಶರಣರ ಚಾರಿತ್ರಿಕ ಅಂಶಗಳತ್ತ ಬೆಳಕನ್ನು ಚೆಲ್ಲಿದ್ದಾರೆ.

ವೀರಶೈವ ಧರ್ಮದ ಕೀರ್ತಿ ಕಡಿಮೆಯಾಗಲು ಶಿವ-ಪಾರ್ವತಿಯರು ಜಂಗಮ ರೂಪದಲ್ಲಿ ಧರೆಗಿಳಿದ ಪರಿಯನ್ನು ಕವಿಗಳು ಸ್ಪಷ್ಟವಾಗಿ ಸೂಚಿಸಿದ್ದಾರೆ. ಶಿವನ ಅಪ್ಪಣೆಯಂತೆ ನಂದಿಯು ಈ ಸುಕ್ಷೇತ್ರಗಳ ದರ್ಶನ ಮಾಡುವದು, ಆ ಬಳಿಕ ಅಲ್ಲಿಯ ಮಹತ್ವ ಹೀಗೆ ಅನೇಕ ವಿಷಯಗಳು ಈ ಮೂರನೆಯ ಅಧ್ಯಾಯದಲ್ಲಿ ಕಂಡು ಬರುತ್ತವೆ. ಮುಂದುವರೆದು ಅದೇ ಸಂದರ್ಭಕ್ಕೆ ಪರಮಾತ್ಮನ ಅನುಗ್ರಹದಿಂದ ವೀರಶೈವ ಧರ್ಮದ ಉದ್ಧಾರಕ್ಕಾಗಿ ಈ ಧರೆಗೆ ಶ್ರೀ ಹಾನಗಲ್ಲ ಕುಮಾರ ಶಿವಯೋಗಿಗಳು ಜನ್ಮವೆತ್ತಿದ ಬಗೆಯನ್ನು ಕವಿಗಳು ಸುಂದರವಾಗಿ ಬಣ್ಣಿಸಿದ್ದಾರೆ.

ಹಾನಗಲ್ಲದ ಕುಮಾರ ಶಿವಯೋಗಿಯ ಕೃಪಾಕಂದರು ಆದ ಶ್ರೀ ರುದ್ರಮುನಿ ಶಿವಯೋಗೀಶರು ಧಾರವಾಡ ಜಿಲ್ಲೆಯ ಹಿರೇಕೆರೂರ ತಾಲೂಕಿನ 'ಶೀತೆಕೊಂಡ' ಎಂಬ ಗ್ರಾಮದಲ್ಲಿ 'ಅಜ್ಜಯ್ಯ' ಮತ್ತು 'ಬಸವಾಂಬೆ' ದಂಪತಿಗಳ ಉದರದಲ್ಲಿ ಜನಿಸಿದ ಪರಿಯನ್ನು ಮಾರ್ಮಿಕವಾಗಿ ಕವಿ ಕಟ್ಟಿಕೊಟ್ಟಿದ್ದಾರೆ.

ರುದ್ರಮುನಿ ಶ್ರೀಗಳು ತಮ್ಮ ಬಾಲ್ಯಾಭ್ಯಾಸವನ್ನು ಇದ್ದೂರಿನಲ್ಲಿ ಪೂರೈಸಲಿಕ್ಕೆ ಪ್ರಾರಂಭಿಸಿದರು. ಆ ಸಂದರ್ಭದಲ್ಲಿ ಗುರುಪಾದ ಸ್ವಾಮಿಗಳಿಂದ ಸಂಸ್ಕೃತ ಭಾಷೆಯ ಪರಿಚಯವಾಯಿತು. ಮುಂದೆ ಶಿವಯೋಗ ಮಂದಿರದಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುನ್ನೆಡಿಸಿದರು. ಅದೇ

ಸಂದರ್ಭದಲ್ಲಿ ಹಾನಗಲ್ಲದ ಕುಮಾರೇಶ್ವರ ಶಿವಯೋಗಿಗಳು; ಈ ಭಾಗದಲ್ಲಿ ವೀರಶೈವ ಧರ್ಮ ಅವನತಿಯಿಂದ ಕೂಡಿದ್ದು, ಇದನ್ನು ಎತ್ತಿ ಹಿಡಿಯಲು ತನ್ನ ಶಿಷ್ಯ ಬಳಗಕ್ಕೆ ಸೂಚಿಸುತ್ತಾ ಕಾಡಿನಿಂದ ಕೂಡಿದ ಶಿವಯೋಗ ಮಂದಿರಕ್ಕೆ ಬಂದರು. ಆವಾಗ ಕ್ರೂರಪ್ರಾಣಿ ಬೇಟೆಗಾರರು, ಕಳ್ಳರು ಮುಂತಾದ ಅಡಗು ತಾಣದಿಂದ ಈ ಪ್ರದೇಶ ಮುಕ್ತವಾಗಲು ಶ್ರಮಿಸಿದರು. ನಂತರ ಶಿವಯೋಗಮಂದಿರ ಮಠಕ್ಕೆ ಭಕ್ತರ ಒತ್ತಾಸೆಯ ಮೇರೆಗೆ ಶ್ರೀ ರುದ್ರಮುನಿ ಸ್ವಾಮಿಯವರನ್ನು ಪೀಠಾಧಿಕಾರಿಯಾಗಿ ಮುಂದುವರೆಸಲು ಸೂಚಿಸಿ ಅಭಯ ಹಸ್ತವನ್ನು ನೀಡಿದರು.

ಹಾನಗಲ್ಲದ ಶಿವಯೋಗಿ ಕೃಪೆಯಿಂದ ಪೀಠಾಧಿಕಾರಿಯಾಗಿ ಶ್ರೀ ರುದ್ರಮುನಿಗಳು ಹಲವು ಪಾರಮಾರ್ಥಿಕ ತತ್ವಗಳನ್ನು ಲೋಕಕ್ಕೆ ಪರಿಚಯಿಸಲಿಕ್ಕೆ ಪ್ರಾರಂಭಿಸಿದರು. ಅದನ್ನು ಕವಿಗಳು ಈ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ.

ಬಂದು ಶಾಖಾ ಮಂದಿರದೊಳಗೆ
ಹೊಂದಿ ಭಕ್ತರ ಸಲಹೆಯೊಂದಿಗೆ
ನಿಂದು ಜಾಣರ ಪಥವ ತೋರಿದ ರುದ್ರಮುನಿವರರು॥

(ಪುಟ : ೪೩, ಸೂಚನೆ ಪದ್ಯ)

ಮುಂದುವರೆದು ಆ ಪ್ರದೇಶ ಕಾಡು ಕತ್ತಲೆಯಿಂದ ಮಾಯವಾಯಿತು. ಶಿವಶರಣರ ಸಂಗಮದ ಸ್ಥಳವಾಯಿತು. ಶ್ರೀಗುರುವಿನ ಕೃಪೆಯಿಂದ ಅದನ್ನೆ ಕವಿ ಅಂಗಡಿಯವರು ಈ ರೀತಿಯಲ್ಲಿ ಚಿತ್ರಿಸುತ್ತಾರೆ.

ಕಾನನದ ಕೊಳೆ ಕಳಚಿ ಪೋದುದು
ಕಾನನದ ಕತ್ತಲೆಯು ಜಾರಿತು
ಕಾನನವು ಲಿಂಗಾರ್ಚನೆಯ ಬೆಳಕಿಂದೆ ಬೆಳಕಿಡಲು
ಕಾನನವು ತಪಗೈವ ವಿರತರ
ತಾಣಮಾದುದು ರುದ್ರದೇಶಿಕ
ಭಾನುವಿನನುಷ್ಠಾನ ನಡೆಯಲು ತತ್ತ್ವಮಯವಾಗಿ

(ಪುಟ : ೪೫, ಪದ್ಯ : ೧೦)

ಹೀಗೆ ಆ ಪ್ರದೇಶ ಪ್ರಸಿದ್ಧಿಯನ್ನು ಪಡೆಯಲು ಪ್ರಾರಂಭಿಸಿತು.

ಮುಂದೆ ಶ್ರೀ ರುದ್ರಮುನಿ ಶಿವಯೋಗಿಗಳು ಲೋಕಕಲ್ಯಾಣಕ್ಕಾಗಿ ಪವಿತ್ರಕ್ಷೇತ್ರವನ್ನು ಸಂಚರಿಸಿ ಶಿಕಾರಿಪುರಕ್ಕೆ ಹೋದಾಗ ತಮಗಾದ ಅನುಭವವನ್ನು, ಆ ಪ್ರದೇಶದ ವಿಶಿಷ್ಟತೆಯನ್ನು ಹೇಳಿ ಆ ಪ್ರದೇಶದ ಮಹತ್ವವನ್ನು ತಿಳಿಸುತ್ತಾರೆ. ಜೊತೆಗೆ ನಿತ್ಯ ಧ್ಯಾನ-ಜಪ-ತಪ-ಪೂಜೆಯಲ್ಲಿ ತೊಡಗಿ ಲೋಕಕಲ್ಯಾಣದ ಮಾರ್ಗವನ್ನು ನಿರ್ಮಿಸಲು ಪ್ರಾರಂಭಿಸಿದರು. ಹೀಗಾಗಿ ಈ ಎಲ್ಲ

ಅಂಶಗಳನ್ನು ಗಮನಿಸಿದ ಕವಿಗಳು ಶ್ರೀ ರುದ್ರಮುನಿಗಳ ವ್ಯಕ್ತಿತ್ವವನ್ನು ಹಲವು ಶಿವಶರಣರ ಜೊತೆ ತೌಲನಿಕವಾಗಿ ಹೋಲಿಕೆಮಾಡಿ ಕೊಂಡಿದ್ದಾರೆ. ಅವರು ಪತ್ರಿಯನ್ನು ಸಂಗ್ರಹಿಸುವುದು, ಪುಷ್ಪವನ್ನು ತರುವುದು. ಆಕಳ ಹಾಲನ್ನು ಕರೆಯುವುದು ಮುಂತಾದ ಸಂದರ್ಭಗಳು ಹಲವು ಶಿವಶರಣರ ಜೀವನದ ಆದರ್ಶವನ್ನು ನೆನಪಿಸುತ್ತವೆ.

ಶ್ರೀ ರುದ್ರಮುನಿ ಶಿವಯೋಗಿಗಳು ಧ್ಯಾನದ ಬಲದಿಂದ ಹಲವು ರೀತಿಯಲ್ಲಿ ಬೆಳೆದು ನಿಂತು ಶಿವನ ಅಪ್ಪಣೆಯಂತೆ ಅನೇಕ ಲೀಲೆಯನ್ನು ಮಾಡಹತ್ತಿದ್ದರು. ಶ್ರೀಗಳ ಕಾರ್ಯಕ್ಕೆ ಭಕ್ತ ಹಾಲಪ್ಪ ಚೆನ್ನಪ್ಪ ಸಹಕಾರ ನೀಡುತ್ತಾ ಆ ಮಂದಿರವನ್ನು ಹೆಚ್ಚಿಗೆ ಬೆಳೆಸಲು ಕಾರಣಿಕರ್ತರಾದರು. ಹೀಗೆ ನಿತ್ಯ ಲಿಂಗಪೂಜೆಯನ್ನು ಮಾಡುತ್ತ ದಿವ್ಯಶಕ್ತಿಯನ್ನು ಒಲಿಸಿಕೊಳ್ಳುತ್ತಾ ಭಕ್ತ ಜನರಲ್ಲಿ ಪಾರಮಾರ್ಥಿಕತೆಯನ್ನು ಬೋಧಿಸುತ್ತ ಮುನ್ನಡೆದು ಶ್ರೀ ರುದ್ರಮುನಿ ಶಿವಯೋಗಿಗಳು ತಮ್ಮ ಕಾಯಕವಾದ ಗೋವುಗಳಿಗೆ ಹುಲ್ಲು ತರುವುದನ್ನು ಹಾಗೇ ಮುಂದುವರೆಸಿದರು. ಆಗ ಒಬ್ಬ ಶ್ರೀಮಂತ ನಿರ್ಬಂಧಿಸಲು ಸರಕಾರವೇ ಆ ಭೂಮಿಯನ್ನು ಇವರಿಗೆ ಕಾಣಿಕೆಯಾಗಿ ನೀಡಿತು. ಮುಂದೆ ತಮ್ಮ ಆಶ್ರಮದ ಜಾಗದಲ್ಲಿ ಸಂಜೀವರಡ್ಡಿ ಎಂಬ ವ್ಯಕ್ತಿ ದನಗಳನ್ನು ಮೇಯಿಸುತ್ತಿರುವಾಗ ಶ್ರೀಗಳಿಗೆ ಒರಟು ಮಾತನ್ನಾಡಿ ಸತ್ತು ಹೋದ ಪ್ರಸಂಗ, ಕಾಳೇನಹಳ್ಳಿಯ ಗೋಪಾಲನ ಪ್ರಸಂಗಗಳು ಮುಖ್ಯವಾಗಿದ್ದು , ಆ ಭಾಗದಲ್ಲಿ ಚಾರಿತ್ರಿಕವಾಗಿ ಹಾಗೂ ಐತಿಹ್ಯದ ತಳಹದಿಯ ಮೇಲೆ ಕವಿಗಳು ಬೆಳಕನ್ನು ಚೆಲ್ಲಿದ್ದಾರೆ.

ಮಾಟಗಾರನು ಅಲ್ಲ ಡಾಂಭಿಕ
ದಾಟಗಾರನು ಅಲ್ಲ ವಿಧವಿಧ
ಚಾಟಗಾರಿಕೆಯಿಂದ ಮೋಸವ ಮಾಡುವವನಲ್ಲ
ಮೇಟಿಯಾಗಿಹನೀತ ವಿರತರ
ಕೂಟದೊಳು ತಾ ಸಕಲ ವಿಧ ಶಿವ
ನಾಟವಾಡುತಲಿಹನು ಜನತೆಯಹಿತವಕೋರುತ್ತ

(ಪುಟ : ೭೪, ಪದ್ಯ : ೦೫)

ಶ್ರೀ ರುದ್ರ ಮುನಿಗಳು ಲೌಕಿಕ ಮತ್ತು ಪಾರಮಾರ್ಥಿಕ ಇವೆರಡನ್ನು ಸಮನ್ವಯಗೊಳಿಸಿ ರೋಗಿಗಳಿಗೆ ಮನೋವೈದ್ಯನಾಗಿ, ಕಾಯಕ ತತ್ವ ಸಿದ್ಧಾಂತವನ್ನು ತನ್ನ ಅಂತಃಸತ್ವಕ್ಕೆ ಹಚ್ಚಿಕೊಂಡು ಭಕ್ತರ ಹೃದಯದಲ್ಲಿ ಸ್ಫೂರ್ತಿಯನ್ನು ಮೂಡಿಸಿದ ಮಹಾನ್ ಯೋಗಿ ಶ್ರೀ ರುದ್ರಮುನಿ ಶಿವಯೋಗಿಗಳು. ಶಿವನ ಸಂಕಲ್ಪದಂತೆ ಶ್ರೀ ರುದ್ರಮುನಿಗಳು ಶಾಖಾ ಮಂದಿರವನ್ನು ಕಟ್ಟಿ ಅನೇಕ ಲೀಲೆಗಳನ್ನು ಮಾಡಹತ್ತಿದರು. ಅವುಗಳಲ್ಲಿ ಪ್ರಮುಖವಾದವುಗಳು.

೧. ಜಂಬೂರು ಗ್ರಾಮದ ಶ್ರೀಮಂತನೊಬ್ಬನ ಬ್ರಹ್ಮಪಿಶಾಚಿಕಾಟ ನಿವಾರಣೆ.

೨. ಶ್ರೀ ಕಂಠೇಶ್ವರ ಗ್ರಾಮದ ಮನೆಯಲ್ಲಿ ಬ್ರಹ್ಮರಾಕ್ಷಸನ ಬಿಡಿಸಿದ್ದು

೩. ಎತ್ತಿಗೆ ಮರುಜೀವ ನೀಡಿದ್ದು

ಮುಂತಾದವುಗಳು ಅವರ ಸಹಜವಾದ ಲೀಲೆಗಳಾಗಿವೆ. ಮುಂದೆ ಶಾಖಾಮಠದ ಶೂನ್ಯ ಪೀಠವನ್ನು ಅಲಂಕರಿಸಿ ಸಮಾಜದ ಉದ್ಧಾರಕ್ಕಾಗಿ ಹಂಬಲಿಸಲಿಕ್ಕೆ ಪ್ರಾರಂಭಿಸಿದರು. ಅರಿಷಡ್ವರ್ಗವನ್ನು ತಮ್ಮ ಬಿಗಿ ಹಿಡಿತದಲ್ಲಿಟ್ಟುಕೊಂಡು ಅನೇಕಾನೇಕ ಲೀಲೆಯನ್ನು ಮೆರೆದು ಭಕ್ತರ ಸಂಕಷ್ಟಗಳನ್ನು ದೂರಮಾಡಿ ಅವರ ಕಷ್ಟವನ್ನು ಅರಿತ ಮಹಾಯೋಗಿ ಶ್ರೀ ರುದ್ರಮುನಿಗಳು ಜಗತ್ ಪ್ರಸಿದ್ಧಿಯನ್ನು ಪಡೆದುಕೊಂಡರು. ಆ ಮೂಲಕ ಮಂದಿರದ ಹೆಸರನ್ನು ನಾಡಿನಲ್ಲಿ ಪ್ರಚಾರ ಮಾಡಿದರು. ವೀರಶೈವದ ತತ್ವ ಬೀಜವನ್ನು ಬಿತ್ತಿ ಬೆಳೆಸಿದರು.

೩.೪.೩. ಮುರಗೋಡ ಮಹಾಂತ ಶಿವಯೋಗೀಶ ಚರಿತಾಮೃತ

ಶ್ರೀ ಕರವೀರಪ್ಪ ಅಂಗಡಿ ಅವರು ಈ ಕೃತಿಯನ್ನು ಭಾಮಿನಿ ಷಟ್ಪದಿಯ ಮೂವತ್ತೊಂದು ಸಂಧಿಯಲ್ಲಿ ಕ್ರಿ.ಶ. ೧೯೭೩ರಲ್ಲಿ ರಚಿಸಿದ್ದಾರೆ. ಮುರುಗೋಡದ ಮಹಾಂತ ಶಿವಯೋಗಿಗಳು ಉತ್ತರ ಕರ್ನಾಟಕದಲ್ಲಿ ಮನೆಮಾತಾದ ಶಿವಶರಣರು. ಗೋಕಾಕ ತಾಲೂಕಿನ ಅರಭಾವಿ ಮಠದ ಉತ್ತರಾಧಿಕಾರಿಗಳಾಗಿ ಆ ಭಾಗದ ಜನರ ಆರಾಧ್ಯ ದೈವರಾಗಿ, ಹಲವು ವಿಧದಲ್ಲಿ ಭಕ್ತ ಜನರನ್ನು ಉದ್ಧರಿಸಿದವರು. ಅರಭಾವಿಯ ದುರದುಂಡೀಶ್ವರ ಮಠದ ಒಂಭತ್ತನೆಯ ಪೀಠಾಧಿಕಾರಿಗಳವರು. ದುರದಂಡೇಶ್ವರ ಮಠದಲ್ಲಿ ಇಲ್ಲಿಯವರೆಗೆ ಹನ್ನೊಂದು ಜನ ಸ್ವಾಮಿಗಳು ಉತ್ತರಾಧಿಕಾರಿಗಳಾಗಿದ್ದಾರೆ. ಅವರಲ್ಲಿ ಮಹಾಂತ ಶಿವಯೋಗಿಗಳು ಒಂಬತ್ತನೆಯವರಾಗಿ ಪ್ರಸಿದ್ಧಿಯನ್ನು ಪಡೆದವರು.

ಮಹಾಂತ ಶಿವಯೋಗಿಗಳು ಜನಿಸಿದ್ದು ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನ ಸಾಲ್ಹಳ್ಳಿ ಗ್ರಾಮ. ತಂದೆ 'ವೀರಸಂಗಪ್ಪ' ತಾಯಿ 'ರಾಚಮ್ಮ'ನವರ ನಾಲ್ಕನೆಯ ಸುಪುತ್ರನೇ ಮಹಾಂತಯ್ಯ. ಕವಿ ಅಂಗಡಿಯವರು ಪುರಾಣದ ಸಂಪ್ರದಾಯದಂತೆ ಪೀಠಿಕೆಯ ಭಾಗದಲ್ಲಿ ಶಿವನಸ್ತುತಿ ಹಾಗೂ ಬಸವಾದಿ ಪ್ರಮಥರ, ಶಿವಶರಣ-ಶರಣೆಯರನ್ನು ಪ್ರಾರ್ಥಿಸಿ ವೀರಶೈವ ಸಮಾಜದ ಮಹಾನುಭಾವಿಗಳನ್ನು ನೆನೆಯುತ್ತ ತನ್ನ ಪರಿಚಯದೊಂದಿಗೆ ಮಹಾಂತ ಶಿವಯೋಗಿಗಳ ಚರಿತೆಯನ್ನು ಪ್ರಾರಂಭಿಸಿದ್ದಾರೆ.

ಭರತ ಖಂಡದಲ್ಲಿ ಸಮಾಜ ಅಧೋಗತಿಗೆ ಹೋಗಲು ಯಾವುದೋ ಶಿವನ ಕೃಪೆಯಿಂದ ಒಬ್ಬ ಅವತಾರಿ ಪುರುಷ ಜನ್ಮತಾಳಿ ಈ ಭೂಮಿಗೆ ಬಂದಿದ್ದಾನೆ ಎಂಬುದು ಕೃತಿಯ ಆರಂಭದಲ್ಲಿ ಹಲವು ಆಶಯಗಳ, ಐತಿಹ್ಯಗಳ ಮೂಲಕ ಮಹಾಂತ ಶಿವಯೋಗಿ ಜನಿಸಿದುದ್ದನ್ನು ಸಂಧಿ ಎರಡರಲ್ಲಿ ಈ ಕವಿ ಚಿತ್ರಿಸಿದ್ದಾರೆ. ಮುಂದೆ ಬಾಲಮಹಾಂತನನ್ನು ತೊಟ್ಟಿಲದಲ್ಲಿ ಹಾಕಿ

ನಾಮಕರಣ ಮಾಡುವ, ಆತನ ದಿವ್ಯ ತೇಜಸ್ಸಿನ ಲಕ್ಷಣವನ್ನು ಮತ್ತು ಆತನ ಬಾಲಲೀಲೆಯನ್ನು ಸಂಧಿ ಮೂರು ಮತ್ತು ನಾಲ್ಕರಲ್ಲಿ ತುಂಬ ಸೊಗಸಾಗಿ ಚಿತ್ರಿಸಿದ್ದಾರೆ.

ಬಾಲ ಸೂರ್ಯನ ರಶ್ಮಿಸುತ್ತಲು
ಲೀಲೆಯೊಳು ತಾ ಹಟ್ಟಿ ಧರಣಿಯ
ಲೋಲಗೊಳ್ಳುತಲೆದ್ದು ಕಾಯಕಕಿಳಿದು ತಣಿವಂತೆ ॥
ಸಾಲಹಳ್ಳಿಯ ಹೃದಯ ರವಿ ಆ
ಬಾಲ ಯೋಗಿಯಬೆಳಕು ಹಬ್ಬಲು
ಲೀಲೆ ಹೊಂದಿತು ಜನತೆ ಭಕ್ತಿಯ ಕಾಯಕಕ್ಕಿಳಿದು ॥

(ಪುಟ : ೨೩, ಪದ್ಯ : ೨೧)

ಎನ್ನುವಲ್ಲಿ ಬಾಲ ಶಿವಯೋಗಿ ಮಹಾಂತನನ್ನು ಕೊಂಡಾಡಿದ್ದಾರೆ. ಇವನ ಜೊತೆಗೆ ಬಾಲ್ಯದಲ್ಲಿ ನಡೆದ ಒಂದೆರಡು ಪವಾಡ ಸದೃಶಗಳನ್ನು ಪರಿಚಯಿಸುವರು.

ಬಾಲಶಿವಯೋಗಿಯು ಶಾಲೆಯ ಆವರಣದ ಶಿಕ್ಷಣದಲ್ಲಿ ತಲ್ಲೀನರಾದಾಗ, ಅರಭಾವಿಯ ಮಠದ ಎಂಟನೆಯ ಪೀಠಾಧಿಕಾರಿಗಳಾದ ಶ್ರೀ ಶಿವಲಿಂಗೇಶ್ವರ ಸ್ವಾಮಿಗಳು ಸಾಲಹಳ್ಳಿಗೆ ಬರುವರು. ಈ ಬಾಲಕನನ್ನು ತಮ್ಮ ಅಂತರ್ ದೃಷ್ಟಿಯಿಂದ ನೋಡಿ ಬಾಲ ಶಿವಮೂರ್ತಿಯನ್ನು ತಮ್ಮ ಮಠಕ್ಕೆ ಕರೆದೊಯ್ಯಲು ತೀರ್ಮಾನಿಸುತ್ತಾರೆ. ಆದರೆ ಮಹಾಂತನು ಇದಕ್ಕೆ ಸಮ್ಮತಿಯನ್ನು ಕೊಡಲು ನಿರಾಕರಿಸಿದಾಗ, ಚಿತ್ರದುರ್ಗದ ಸ್ವಾಮಿಗಳು ಮಹಾಂತನಿಗೆ ಅರಭಾವಿಯ ಮಠದ ಪೀಠವನ್ನು ಸ್ವೀಕರಿಸಲು ತಿಳಿಹೇಳುತ್ತಾರೆ. ಅದಕ್ಕೆ ಮಹಾಂತ ಶಿವಯೋಗಿ ಒಪ್ಪಿಕೊಳ್ಳುತ್ತಾರೆ. ಆ ಸಂದರ್ಭವನ್ನು ಕವಿ ಅಂಗಡಿಯವರು ವಿಶಿಷ್ಟತೆಯಿಂದ ಚಿತ್ರಿಸಿದ್ದಾರೆ.

ತೆಳುವು ಕಾವಿಯ ಬಟ್ಟೆ ಧರಿಸಿದ
ತೊಳೆದ ಮುತ್ತಿನ ಛವಿಯ ದೇಹದ
ಎಳೆಯ ಮಲ್ಲಿಗೆ ಮೊಗ್ಗೆಯಂತಿಹ ಚೆಲುವನಾಂತಿರ್ದ ॥
ಇಳೆಯ ಬಾಳಿಗೆ ಕುಂದು ತಟ್ಟದ
ತಿಳಿನುಡಿಯನಿಡೆ ಗುರುವು ಬಂದಿಹ
ಹೊಳೆವ ದುರದುಂಡೀಶ ಪಟ್ಟಕೆ ಧರೆಯ ತಣಿಸಲ್ಕೆ ! ॥

(ಪುಟ : ४೧, ಪದ್ಯ : ೨೨)

ಎಂಬ ಪದ್ಯದಲ್ಲಿ ಮಹಾಂತ ಶಿವಯೋಗಿಯ ಪೀಠವನ್ನು ಅಲಂಕರಿಸಿದ ಬಗ್ಗೆ ಕೃತಿಯಲ್ಲಿ ಎದ್ದು ಕಾಣುತ್ತದೆ.

ಸತ್ಯ ಶುದ್ಧ ಕಾಯಕ ತತ್ವವನ್ನು ಕಾಯಾ, ವಾಚಾ, ಮನಸ್ಸನ್ನು ಅಧೀನದಲ್ಲಿಟ್ಟುಕೊಂಡು, ಲೋಕದ ಒಡೆಯ ಪರಮಾತ್ಮನ ದಿವ್ಯ ಸಂದೇಶವನ್ನು ಸಾರುತ್ತ ಹೆಣ್ಣು, ಹೊನ್ನು, ಮಣ್ಣುಗಳ

ಆಶೆಯನ್ನು ಕಿತ್ತೊಗೆದು ಭಕ್ತರ ಉದ್ಧಾರಕ್ಕೆ ಹಗಲಿರುಳು ಶ್ರಮಿಸಿದರು. ಲಿಂಗಪೂಜೆ, ತಪಸ್ಸು, ಕಾಯಕದ ಮೂಲಕ ಅರಭಾವಿ ಮಠದ ಕೀರ್ತಿಯನ್ನು ಹೆಚ್ಚಿಸಲಿಕ್ಕೆ ತೊಡಗಿದರು. ಪಾರಮಾರ್ಥಿಕದ ಅನುಭವವನ್ನು ಲೋಕಕ್ಕೆ ಬಿತ್ತರಿಸಲು ಪ್ರಾರಂಬಿಸಿದರು. ಕಾವ್ಯದಲ್ಲಿ ಈ ಭಾಗ ಪೀಠಾಧಿಕಾರಿಯಾದ ಮೊದಲಲ್ಲಿ ಅವರು ಕೈಗೊಂಡ ಲೋಕಕಲ್ಯಾಣ ಮಾರ್ಗವನ್ನು ಕವಿ ಅಂಗಡಿಯವರು ಚೆನ್ನಾಗಿ ಚಿತ್ರಿಸಿದ್ದಾರೆ.

ಮುಂದೆ ಕುರುಬೆಟ್ಟ ದೇಸಾಯಿಯ ಮಠಕ್ಕೆ ಕುದುರೆಯನ್ನು ನೀಡಿದ ಚಾರಿತ್ರಿಕವಾದ ಅಂಶ ಗೋಚರಿಸುತ್ತದೆ. ಲೌಕಿಕ ಜಗತ್ತಿನಲ್ಲಿರುವದಕ್ಕಿಂತಲೂ ಪಾರಮಾರ್ಥಿಕವಾದ ಅಲೌಕಿಕದ ಕಡೆಗೆ ಶ್ರೀಗಳು ಹೆಚ್ಚಿನ ಸಮಯವನ್ನು ತೊಡಗಿಸಿಕೊಂಡರು. ಮಠದ ಎಲ್ಲ ಭಾರವನ್ನು ಶ್ರೀ ಶಿವಾನಂದ ಶ್ರೀಗಳಿಗೆ ನೀಡಿ, ಹಳ್ಳದ ದಂಡೆಯಲ್ಲಿರುವ ಪ್ರಶಾಂತವಾದ ಸ್ಥಳದಲ್ಲಿ ಧ್ಯಾನ ಮಗ್ನರಾಗಿ ತಮ್ಮ ದಿವ್ಯ ಶಕ್ತಿಯನ್ನು ಪಡೆದುಕೊಂಡ ಬಗೆಯನ್ನು ಕವಿಗಳು ಒಂಭತ್ತರಿಂದ ಹನ್ನೆರಡನೆಯ ಸಂಧಿಗಳಲ್ಲಿ ವಿವರಿಸಿದ್ದಾರೆ.

ತದನಂತರ ಮುರಗೋಡದ ಭಕ್ತರ ಒತ್ತಾಸೆಯಂತೆ ಮುರಗೋಡ ಮಠಕ್ಕೆ ದಯಪಾಲಿಸಿ ಮುರಗೋಡ ಕೀರ್ತಿಯನ್ನು ಬೆಳಸಲಿಕ್ಕೆ ಪ್ರಾರಂಭಿಸಿದ್ದರು. ಆ ಸಂದರ್ಭದಲ್ಲಿ ಮುರಗೋಡ ಪುರವು ಎಲ್ಲ ಕ್ಷೇತ್ರದಲ್ಲಿ ಅವನತಿಯನ್ನು ಕಂಡಿತ್ತು. ಶ್ರೀಗಳ ಆಗಮನದಿಂದ ಸುಕ್ಷೇತ್ರವಾಗಿ ಬದಲಾಗ ತೊಡಗಿತು. ಮುಂದೆ ಮಹಾಂತ ಶಿವಯೋಗಿಯನ್ನು ಕಾಣಲು ನೂರಾರು ಭಕ್ತರು ಮುರಗೋಡದ ಮಠದ ಕಡೆಗೆ ಧಾವಿಸಲಿಕ್ಕೆ ಪ್ರಾರಂಭಿಸಿದರು. ಜೊತೆಗೆ 'ಏಣಿಗೆ'ಯ ಗ್ರಾಮದ 'ವೀರಸಂಗಯ್ಯ' ಎಂಬ ಶರಣನಿಗೆ ದೀಕ್ಷೆಯನ್ನು ನೀಡಿದರು. ವೀರಶೈವದ ಆಚಾರ-ವಿಚಾರವನ್ನು ತಪ್ಪದೆ ಪಾಲಿಸಲು ಭಕ್ತರಿಗೆ ಸೂಚಿಸಿದರು.

ಕಾವ್ಯ ಭಾಗದ ಹದಿನೆಂಟನೆಯ ಸಂಧಿಯಲ್ಲಿ ಕವಿ ಅಂಗಡಿಯವರು ಮುರಗೋಡ ಮಹಾಂತನ, ಅರಭಾವಿಯ ಮಠದ ಶಿವಯೋಗಿಯ ಚಾರಿತ್ರಿಕವಾದ ಅಂಶವನ್ನು ಬಿಚ್ಚಿಟ್ಟಿದ್ದಾರೆ. ಈ ಭಾಗ ಕೇವಲ ಐತಿಹ್ಯದಿಂದ ಕೂಡಿದ ಪವಾಡವಲ್ಲ. ಚಾರಿತ್ರಿಕವಾಗಿ ಈಗಲೂ ಸಹ ಆ ಪವಾಡವನ್ನು ನಾವು ಕಾಣುತ್ತೇವೆ. ಅದು ಅರಭಾವಿಯ ಸಮೀಪದಲ್ಲಿರುವ ಶ್ರೀ ಜಡೆಸಿದ್ಧನ ಊರು ಸುಣದೋಳಿ, ಆ ಊರಲ್ಲಿ ಪ್ಲೇಗ ರೋಗದಿಂದ ಜಾತ್ರೆಯಲ್ಲಿ ಜಡೆಯಪ್ಪನ ತೇರನ್ನು ಎಳೆಯಬಾರದೆಂದು ಬ್ರಿಟಿಷ ಅಧಿಕಾರಿಗಳು ತಾಕಿತು ಮಾಡಿ, ಆ ವರ್ಷ ಜಾತ್ರೆಯನ್ನು ಸಹ ನಡೆಸಬಾರದು ಎಂದು ಆದೇಶವಿತ್ತರು. ಆದರೆ ಪೂಜೆಯನ್ನು ಮಾತ್ರಮಾಡಲು ಅಪ್ಪಣೆಯನ್ನು ಕೊಟ್ಟರು. ಆ ಸಂದರ್ಭದಲ್ಲಿ ಮುಸ್ಲಿಂ ಸಮುದಾಯದ ಪೂಜಾರಿಯು ಈ ಮಠದ ಪೂಜೆಯನ್ನು ಮಾಡುತ್ತಿದ್ದರು. ಅವರು ಪೂಜೆಯನ್ನು ಸಲ್ಲಿಸಿ ಎಲ್ಲ ಜಡೆಯಪ್ಪನ ಇಚ್ಛೆ ಎಂದು ನಮಿಸಿದಾಗ ಮಹಾಂತ ಶಿವಯೋಗಿಯು ಅಲ್ಲಿಗೆ ಬಂದಕಾರಣ, ಅವರ ಹಸ್ತದಿಂದ ಗಾಡಿಯನ್ನು ನೂಕಿದಾಗ ತೇರು ಹಗ್ಗವಿಲ್ಲದೆ ಮುಂದಕ್ಕೆ ನಡೆದು ಮತ್ತೆ ತಾನಿದ್ದಲ್ಲಿಗೆ ಬಂದು ನಿಂತಿತು. ಅಂದಿನಿಂದ

ಇಂದಿನವರೆಗೂ ಸಹ ಆ ಗ್ರಾಮದಲ್ಲಿ ಹಗ್ಗವಿಲ್ಲದೆ ತೇರು ತಾನೇ ಚಲಿಸುತ್ತದೆ. ಇದು ಚಾರಿತ್ರಿಕವಾಗಿ ಅಷ್ಟೇ ಸತ್ಯ ಸಂಗತಿಯಾಗಿದೆ. ಅದೇ ರೀತಿ ಕಾರಿಮನಿ ಎಂಬ ಊರಲ್ಲಿಯೂ ನಡೆದ ತೇರಿನ ಚರಿತ್ರೆ ಈ ಕಾವ್ಯದಲ್ಲಿ ಹಾಸು ಹೊಕ್ಕಾಗಿದೆ. ಆ ಸಂದರ್ಭವನ್ನು ಕವಿ ಅಂಗಡಿಯವರು ಚೆನ್ನಾಗಿ ಗುರುತಿಸಿದ್ದಾರೆ. ಜೊತೆಗೆ ಕಾರಿಮನಿಯಲ್ಲಿರುವ ವೀರಮಡಿವಾಳನ ಸಮಾಧಿ ಸ್ಥಾನದ ಮಹೋನ್ನತಿಯನ್ನು ಅಲ್ಲಗಳೆಯುವಂತಿಲ್ಲ.

ಸಂಧಿ ಹದಿನೇಳರಿಂದ ಮೂವತ್ತನೆಯ ಸಂಧಿಯೊಳಗೆ ಮಹಾಂತ ಶಿವಯೋಗಿಗಳ ಪವಾಡ ಸದೃಶ್ಯಗಳು ಕಾವ್ಯ ಭಾಗದಲ್ಲಿ ಗೋಚರಿಸುತ್ತವೆ. ಮಹತ್ವದ ಪವಾಡವೊಂದು ಚಾರಿತ್ರಕವಾಗಿ ಇನ್ನು ತನ್ನ ಸತ್ವವನ್ನು ಉಳಿಸಿಕೊಂಡಿದೆ. ಮೂಲ ದುರದುಂಡೀಶನು ಕಲ್ಯಾಣದಿಂದ ತಂದ ದುಂಡು ಮಲ್ಲಿಗೆ (ದುರದುಂಡಿಯ ಜನರು ಅದಕ್ಕೆ ಈಗ ಅಮರ ಮಲ್ಲಿಗೆ ಎನ್ನುವರು) ದುರದುಂಡಿ ಗ್ರಾಮದಲ್ಲಿ ನಟ್ಟಿದ್ದು, ಅದು ಒಣಗಿರಲು ಅದಕ್ಕೆ ಪಾದೋದಕ ಹಾಕಿದಾಗ ಚಿಗುರಿದ ಪ್ರಸಂಗ ಸತ್ಯವಾಗಿ ಇಂದಿಗೂ ಸಹ ಆ ಮಲ್ಲಿಗೆ ಬಳ್ಳಿ ಹಚ್ಚ ಹಸುರಿನಿಂದ ನಿಂತಿದೆ. ಜೊತೆಗೆ ಮರಣ ಹೊಂದುವ ಸ್ಥಿತಿಯಲ್ಲಿದ್ದ ವ್ಯಕ್ತಿಯನ್ನು ಬದುಕಿಸಿದ್ದು. ಅನೇಕರಿಗೆ ರೋಗಮಾಯ ಮಾಡಿದ್ದು, ಎಡೆಯೂರು ಕ್ಷೇತ್ರದಲ್ಲಿ ಶ್ರೀಗಳ ಮೇಲೆ ಹೂ ಸುರಿದ ಪ್ರಸಂಗ ಹೀಗೆ ಅನೇಕ ಪವಾಡಗಳು ಈ ಕೃತಿಯಲ್ಲಿ ದಾಖಲಾಗಿವೆ. ಕಾವ್ಯದ ಕಥಾನಾಯಕ ಮಹಾಂತನಾಗಿ ಹಲವು ವಿವಿಧ ಲೋಕ ಕಲ್ಯಾಣದ ಪರಿಚಯವನ್ನು ಕಾವ್ಯಾತ್ಮವಾಗಿ ಸರಳ ಮತ್ತು ಸುಂದರ ವಾಕ್ಯಗಳಲ್ಲಿ ಕವಿ ಅಂಗಡಿಯವರು ವರ್ಣಿಸಿದ್ದಾರೆ.

ಧರ್ಮ, ಸಂಸ್ಕೃತಿ, ಕಾಯಕ, ಮುಂತಾದ ಉದಾತ್ತ ಗುಣಗಳ ಸಾಕಾರಮೂರ್ತಿಯಾದ ಮಹಾಂತ ಶಿವಯೋಗಿಯನ್ನು ನೋಡಲು ಅನೇಕ ಮಠಗಳ ಶ್ರೀಗಳು ಆಗಮಿಸಿ ತಮ್ಮ ಅನುಭವವನ್ನು ಹೆಚ್ಚಿಸಿಕೊಂಡು ಹೋದ ಪ್ರಸಂಗ ಹಾಗೂ ಇವರ ಶಿಷ್ಯರಾದ ಪ್ರಸಂಗ, ಭಕ್ತರು ಮಠದ ಕಾಯಕದಲ್ಲಿ ತೊಡಗಿ ಶ್ರೀಗಳ ಕೃಪೆಗೆ ಪಾತ್ರರಾದ ಪ್ರಸಂಗಗಳು ಹದವಾಗಿ ಕೃತಿಯಲ್ಲಿ ಬೆರೆತುಕೊಂಡಿವೆ.

ಜಗಕ್ಕೆ ಜ್ಯೋತಿಯಾದ ಗುರು ಮಹಾಂತ ಶಿವಯೋಗಿಯ ಕೊನೆಗಾಲವು ಸಮೀಪಿಸಿದಾಗ ಅವರ ದಿವ್ಯವಾಣಿ ತನ್ನ ಅಂತಃಸತ್ವವನ್ನು ಮೀರಿ ಬೆಳೆದಿತ್ತು . ಬಸವಣ್ಣನವರು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆದು, ಅರಭಾವಿ ಮತ್ತು ಮುರಗೋಡ ಮಠದ ಕೀರ್ತಿಯನ್ನು ನಾಡಿಗೆ ಹಬ್ಬಿಸಿ, ಸಹಸ್ರಾರು ಭಕ್ತರನ್ನು ತನ್ನ ಶಿಷ್ಯ ಬಳಗವನ್ನಾಗಿ ಮಾಡಿಕೊಂಡು, ಜಾತಿ-ಬೇಧವೆನ್ನದ ಜಗತ್ ಕಲ್ಯಾಣವನ್ನು ಮಾಡಿ ಕೊನೆಗೆ ದೇಹವನ್ನು ತ್ಯಾಗ ಮಾಡಿದ ಭಾಗವನ್ನು ಕವಿ ಅಂಗಡಿಯವರು ಅದ್ಭುತವಾಗಿ ಚಿತ್ರಿಸಿದ್ದಾರೆ.

ಹತ್ತು ಒಂಬತುನೂರು ಮೇಣೆ
ಪ್ಪತ್ತು ಮೇಲೊಂದಿಸ್ವಿ ಶುಭವಂ
ಪೆತ್ತ ಫಾಲ್ಗುಣ ಶುಕ್ಲ ಏಕಾದಶಿಯ ದಿನದಂದು ।
ಹೊತ್ತು ಮುಳಗಿರಲೆಂಟು ಗಂಟೆಗೆ
ಮತ್ತೆ ಮೇಲ್ಪದಿನೈದು ನಿಮಿಷಕೆ
ಮುತ್ತಿನಂತಹ ಗುರುಮಹಾಂತರು ಲಿಂಗದೊಳಗಾಗಿ ॥

(ಪುಟ : ೨೨೪, ಪದ್ಯ : ೧)

ಎನ್ನುವ ಈ ಪದ್ಯದಲ್ಲಿ ಗುರು ಮಹಾಂತ ಶಿವಯೋಗಿಯು ೧೯೭೧ ಫಾಲ್ಗುಣ ಶುಕ್ಲ ಏಕಾದಶಿ ದಿನದಂದು ರಾತ್ರಿ ಎಂಟು ಘಂಟೆ ಹದಿನೈದು ನಿಮಿಷಕ್ಕೆ ದೇಹತ್ಯಾಗ ಮಾಡಿದರು ಎನ್ನುವುದನ್ನು ದಾಖಲಾತಿ ಸಮೇತ ಕವಿಗಳು ಚಿತ್ರಿಸಿದ್ದಾರೆ.

ಒಟ್ಟಾರೆಯಾಗಿ ಈ ಕಾವ್ಯವು ಹಲವು ಚಾರಿತ್ರಿಕ ಘಟನೆಗಳನ್ನು ನೆನಪಿಸುತ್ತ ಶ್ರೀಗಳ ಬಾಲಲೀಲೆ ಹಾಗೂ ಬೆಳೆದ ಬಗೆಯನ್ನು ಸರಳವಾಗಿ ಭಾಮಿನಿ ಷಟ್ಪದಿಯ ರೂಪದಲ್ಲಿ ಓದುಗರಿಗೆ ನೀಡಿದ್ದಾರೆ. ಕಾವ್ಯ ಭಾಗದಲ್ಲಿ ಪುರಾಣವನ್ನು ಮುನ್ನಡೆಸಲು ಅಲ್ಲಲ್ಲಿ ಶರಣರ ಆದರ್ಶ, ಜೀವನ ವೃತ್ತಾಂತವನ್ನು ನೆನಪಿಸುತ್ತಾ ಅರಭಾವಿ ಮತ್ತು ಮುರಗೋಡ ಈ ಎರಡು ಗ್ರಾಮದಲ್ಲಿ ನಡೆದ ಶಿವಯೋಗಿ ಮಹಾಂತನ ಕಾರ್ಯಕ್ಷೇತ್ರವನ್ನು ಉತ್ತಮವಾಗಿ ಚಿತ್ರಿಸಿದ ಕೃತಿಯಾಗಿದೆ.

೩.೪.೪. ಮೃಡಗಿರಿ ಶ್ರೀ ಜಗದ್ಗುರು ಅನ್ನದಾನೀಶ್ವರ ಲೀಲಾಮೃತ

ಮೃಡಗಿರಿ ಶ್ರೀ ಜಗದ್ಗುರು ಅನ್ನದಾನೀಶ್ವರ ಲೀಲಾಮೃತ ಕಾವ್ಯವು ೨೫ ಸಂಧಿಗಳು ಹಾಗೂ ೧೨೭೫ ಪದ್ಯಗಳಿಂದ ಕೂಡಿದ್ದು, ಕವಿ ಅಂಗಡಿಯವರು ಭಾಮಿನಿ ಷಟ್ಪದಿಯಲ್ಲಿ ರಚಿಸಿದ್ದಾರೆ. ಪುರಾಣದ ಆರಂಭವು ಸಾಂಪ್ರದಾಯಿಕವಾಗಿ ಶಿವಶರಣರನ್ನು ಸ್ತುತಿ ಮಾಡಿ ವೀರಶೈವ ಮಹಾಪುರುಷರನ್ನು ಪ್ರಾರ್ಥಿಸಿ ಕವಿ ತನ್ನ ಕುರಿತು ಹೇಳಿಕೊಂಡು ಪುರಾಣಕಾವ್ಯಕ್ಕೆ ಪೀಠಿಕೆಯನ್ನು ಹಾಕಿದ್ದಾರೆ. ಮುಂದೆ ಈ ಭೂಮಂಡಲದಲ್ಲಿ ಅಧರ್ಮ, ಅಸತ್ಯ ತಾಂಡವವಾಡುತ್ತಿರುವ ಸಂದರ್ಭದಲ್ಲಿ, ವೀರಶೈವ ಧರ್ಮ ಕಳೆಗುಂದಿ ಹೋಗುತ್ತಿರಲು, ಆ ಧರ್ಮದ ಉದ್ಧಾರಕ್ಕಾಗಿ ಶಿವನ ಕೃಪೆಯಿಂದ ಒಬ್ಬ ಮಹಾನುಭಾವನು ಅವತರಿಸಿ ಅವಶ್ಯಕತೆಯನ್ನು ಸೂಚಿಸಿದ್ದಾರೆ.

ಸಮಾಜ ಅಧೋಗತಿಗೆ ಹೋಗಲು ಅದನ್ನು ಸರಿಪಡಿಸಲು ಧಾರವಾಡ ಜಿಲ್ಲೆಯ ವೆಂಕಟಾಪುರದ ಹಿರೇಮಠ ಮನೆತನದ 'ಪರಮ್ಮ' ಮತ್ತು 'ದಾನಯ್ಯ' ಎಂಬ ಶಿವಶರಣ ದಂಪತಿಗಳ ಉದರದಲ್ಲಿ ನಾಲ್ಕನೆಯ ಮಗುವಾಗಿ ಬಾಲಯೋಗಿ ಅನ್ನದಾನೀಶ್ವರರ

ಜನನವಾಗುತ್ತದೆ. ಆ ಬಾಲಯೋಗಿ ಮುಂದೆ ಬಾಗಲಕೋಟೆಯಲ್ಲಿ ತಮ್ಮ ಬಾಲ್ಯ ಶಿಕ್ಷಣದಲ್ಲಿ ತೊಡಗಲು, ಮೃಡಗಿರಿ ಪೀಠದ ಬಗ್ಗೆ ಅರಿವು ಉಂಟಾಗುತ್ತದೆ. ಶಿವಯೋಗ ಮಂದಿರದಲ್ಲಿ ಎಲ್ಲ ಬಾಲಕರ ಮಧ್ಯ ಅನ್ನದಾನೀಶ್ವರರು ವಿಶೇಷ ಪಾಂಡಿತ್ಯವನ್ನು ಪಡೆದು ಪೂಜ್ಯರ ಕೃಪೆಗೆ ಪಾತ್ರರಾಗುತ್ತಾರೆ. ಎಂಟನೆಯ ಅನ್ನದಾನೀಶ್ವರರು ತಮ್ಮ ಉತ್ತರಾಧಿಕಾರಿಯ ಹುಡುಕಾಟದಲ್ಲಿರುವಾಗ ಅಕಾಲಿಕ ಮರಣ ಸಂಭವಿಸುತ್ತದೆ. ಮಠದ ಭಾರವೆಲ್ಲ ಭಕ್ತರ ಮೇಲೆ ಬೀಳಲು ಶಿವಯೋಗ ಮಂದಿರದ ಕಡೆಗೆ ಭಕ್ತರು ಬಂದು, ಈ ಬಾಲಯೋಗಿ ಶ್ರೀ ಅನ್ನದಾನೀಶ್ವರ ಶಿವಯೋಗಿಯನ್ನು ಮೃಡಗಿರಿ ಪೀಠಕ್ಕೆ ಪಟ್ಟಾಭಿಷೇಕ ಮಾಡುತ್ತಾರೆ. ಈ ಪಟ್ಟಾಭಿಷೇಕವನ್ನು ಬಾಲಯೋಗಿ ಅತ್ಯಂತ ಜವಾಬ್ದಾರಿಯುತವಾಗಿ ಸ್ವೀಕರಿಸಿ ಅನೇಕಾನೇಕ ಧರ್ಮ ಬೋಧನೆಯಲ್ಲಿ ಆಸಕ್ತಿಯನ್ನು ಹೊಂದುತ್ತಾರೆ.

ಪುರಾಣಕಾವ್ಯದ ಚರಿತ್ರೆಯ ನಾಯಕರಾದ ಶ್ರೀ ಅನ್ನದಾನೀಶ್ವರ ಶಿವಯೋಗಿಗಳು ತಮ್ಮ ಅಪಾರ ಜ್ಞಾನ ಸಂಪತ್ತನ್ನು ಹಾಗೂ ಧಾರ್ಮಿಕ ತತ್ವಬೋಧನೆಯನ್ನು ಸಕಲ ಭಕ್ತರಿಗೆ ತಿಳಿಹೇಳುವ ಮೂಲಕ ಭಕ್ತರ ಹೃದಯದಲ್ಲಿ ಶ್ರೇಷ್ಠರಾಗಿ ಉಳಿಯುತ್ತಾರೆ. ಇವರು ಪೀಠವನ್ನು ಅಲಂಕರಿಸಿದ ಪರಿಯನ್ನು ಕವಿ ಚಾರಿತ್ರಿಕವಾಗಿ ಹೀಗೆ ದಾಖಲಿಸಿದ್ದಾರೆ.

ಇಸವಿ ಹತ್ತೊಂಬತ್ತು ನೂರುಂ
ಬೆಸುಗೆಗೊಳ್ಳುತಲಿಪ್ಪತಾರಂ
ಸುಸಮ ವತ್ಸರಮಾಗಿ ಮಾಸಾರಾರು ಅಂಕದಲಿ
ಸುಶುಭವಾರದಿ ಶೂನ್ಯ ಪೀಠದೊ
ಳಸಮ ಜಂಗಮವಾದ ಬೀಳ
ಲ್ಕೊಸೆದು ಪ್ರಾರ್ಥನೆಗೈವೆ ಜಯತು ಜಯವೆನುತೆ !

(ಪುಟ : ೫೫, ಪದ್ಯ : ೩೭.)

ಅಂದರೆ ಸನ್ ೧೯೨೬ನೆಯ ಜೂನ್ ತಿಂಗಳ ೬ನೆಯ ತಾರೀಖಿನ ಶುಭ ಮೂರ್ಹತದಲ್ಲಿ ಪೀಠವನ್ನು ಅಲಂಕರಿಸಿದ ಬಗೆಯನ್ನು ಕವಿ ಅತ್ಯಂತ ನಿಖರವಾಗಿ ಹೇಳಿದ್ದಾರೆ.

ಮುಂದೆ ತಮ್ಮ ಅನುಭಾವದ ಭಕ್ತಿಯ ಮಾರ್ಗದಿಂದ ಎಲ್ಲ ಭಕ್ತರ ಹೃದಯ ಸಿಂಹಾಸನವನ್ನು ಏರಿ ಭಕ್ತರೋದ್ಧಾರಕ್ಕಾಗಿ ಲೌಕಿಕ ಪಾರಮಾರ್ಥದ ಅರಿವನ್ನು ಮೂಡಿಸುತ್ತ, ತತ್ವ ಬೋಧೆಯನ್ನು ಪ್ರಾರಂಭಿಸುತ್ತ ಮುನ್ನಡೆಯುತ್ತದೆ. ಜೊತೆಗೆ ತಮ್ಮ ಅಗಾಧ ದೈವಶಕ್ತಿಯಿಂದ ಭಕ್ತರಿಗೆ ಬಂದ ಆಪತ್ತನ್ನು ನಿವಾರಿಸುತ್ತ ಮುನ್ನಡೆಯುತ್ತಾರೆ. ಅವುಗಳಲ್ಲಿ ಕೆಲವು ಶ್ರೀಗಳು ಮಾಡಿದ ಲೀಲೆ ಚಾರಿತ್ರಿಕವಾಗಿ ಅಷ್ಟೇ ಸತ್ಯವಾಗಿವೆ ಎಂಬುದನ್ನು ನಾವು ಮರೆಯುವಂತಿಲ್ಲ. ಶಾಪೂರ ನಿಂಬನಗೌಡನ ತೋಟದ ಕೆಡುವ ಬೆಲ್ಲದ ಪ್ರಸಂಗ, ಹಿಟ್ನಾಳದ ನಾರಾಯಣಪ್ಪನಿಗೆ ಪುತ್ರಫಲವನ್ನು ನೀಡಿದ್ದು, ಐಗಳಕೇರಿ ಭಕ್ತರಿಗೆ ಕಲ್ಯಾಣಕೋರಿದ್ದು ಇವೆಲ್ಲ ಪ್ರಮುಖವಾಗಿ ಅವರ ಅವತಾರದ ಬಹು ಮುಖಗಳಲ್ಲಿ ಕಾವ್ಯದಲ್ಲಿ ಚಾರಿತ್ರಿಕವಾಗಿ ದಾಖಲಾಗಿವೆ. ಶ್ರೀಗಳು

ಹೀಗೆ ತಮ್ಮ ಕಡೆಗೆ ಬಂದ ಭಕ್ತರ ಸಂದೇಹವನ್ನು ದೂರಮಾಡುತ್ತ ಪವಾಡವನ್ನು ಮಾಡಿದ ಪ್ರಸಂಗಗಳು ಮುಂದುವರೆಯುತ್ತವೆ. ಅವುಗಳಲ್ಲಿ ಪಾದೋದಕದಿಂದ ರೋಗ ನಿವಾರಣೆಯಾದದ್ದು, ಮೃತ್ಯುಮುಖದಿಂದ ತಿಪ್ಪಣ್ಣನನ್ನು ಬದುಕಿಸಿದ್ದು, ಉಳವಿ ಚನ್ನಬಸವೇಶ್ವರ ಕ್ಷೇತ್ರಕ್ಕೆ ಹೋಗಿ ಪ್ರಸಾದ ಮಹಿಮೆಯನ್ನು ತೋರಿಸಿದ ಪ್ರಸಂಗ ಹೀಗೆ ಲೆಕ್ಕಕ್ಕೆ ಸಿಗಲಾರದಷ್ಟು ಲೀಲೆಯನ್ನು ಮಾಡಿದ ಪರಿಯನ್ನು ಅದ್ಭುತವಾಗಿ ಕಾವ್ಯ ಕನ್ನಿಕೆಯಲ್ಲಿ ಕವಿ ಅಂಗಡಿಯವರು ಹೆಣೆದಿದ್ದಾರೆ. ಅನ್ನದಾನೀಶ್ವರ ಶ್ರೀಗಳು ಕೇವಲ ವ್ಯಕ್ತಿಯಾಗಿರದೇ, ಅವರೊಬ್ಬ ಶಿವನ ಅವತಾರವೆತ್ತ ಸಾಕ್ಷಾತ ಪರಶಿವನೆ ಆಗಿದ್ದರು ಎಂಬುದು ಕವಿಯ ಆಶಯವಾಗಿದೆ.

ಅನ್ನದಾನೀಶ್ವರರು ಕೇವಲ ಪವಾಡವನ್ನು ಮಾಡದೇ ಸಮಾಜದಲ್ಲಿ ನಡೆಯುತ್ತಿರುವ ಹಿಂಸೆಯ ಪ್ರತೀಕವಾದ ಬಲಿದಾನವನ್ನು ನಿಲ್ಲಿಸಿದ್ದು ಬಸವಣ್ಣನ ಅವತಾರವನ್ನು ನೆನಪಿಗೆ ತರುತ್ತದೆ. ಆ ಭಾಗದಲ್ಲಿ ಕವಿ ಅನೇಕ ನಿದರ್ಶನಗಳನ್ನು ಕೊಟ್ಟು ಶ್ರೀಗಳು ಅಹಿಂಸಾತತ್ವವನ್ನು ಪಾಲಿಸಿದ ಬಗೆಯನ್ನು ತುಂಬಾ ವಿಶಿಷ್ಟವಾಗಿ ಗುರುತಿಸುತ್ತಾರೆ. ಅವುಗಳಲ್ಲಿ ಪ್ರಮುಖವಾಗಿ ಸಿಂಗಟಾಲೂರಿನ ದೇವಿ ಜಾತ್ರೆಯಲ್ಲಿ ನಡೆಯುವ ಪ್ರಾಣಿ ಹಿಂಸೆಯನ್ನು ನಿಲ್ಲಿಸಿದ್ದು , ಮುಂದೆ ಸೋಮನಹಳ್ಳಿ ಹಾಗೂ ಕೋಳೂರಿನಲ್ಲಿ ನಿಲ್ಲಿಸಿದ್ದು ವೈಚಾರಿಕವಾಗಿ ಚಿತ್ರಿತವಾಗಿವೆ.

ಸತ್ತು ಚಿತ್ತಾನಂದರೂಪನೆ
ನಿತ್ಯ ನೀನಿಹಪರದ ಸವಿಸುಖ
ಬಿುತ್ತಿಯಂ ಹೊತ್ತಿರ್ದ ಬಸವನಗೂಡಿ ನಡೆದಿರಲು ।
ಕತ್ತಲೆಯ ಗೂಡಾದ ಬೇಡರ
ಮೊತ್ತ ಮುತ್ತಲು ಜ್ಞಾನದಡುಗೆಯ
ನಿತ್ತು ತಿದ್ದಿದ ಅನ್ನದಾನಿಯೆ ಶರಣು ಶರಣಯ್ಯ

(ಪುಟ : ೧೨೫, ಪದ್ಯ : ೦೧)

ಭಕ್ತರ ಭವತಾಪವನ್ನು ಪರಿಹರಿಸಿ ಅವರ ಅಜ್ಞಾನವನ್ನು ದೂರ ಮಾಡಿದ ರೀತಿಯನ್ನು ಕವಿ ತುಂಬಾ ಮನೋಹರವಾಗಿ ತಿಳಿಸಿದ್ದಾರೆ. ಅನ್ನದಾನೀಶ್ವರರ ನಂತರ ತಮ್ಮ ಮಠದ ಆಶ್ರಮದಲ್ಲಿ ಪ್ರಸಾದ ನಿಲಯ ಹಾಗೂ ವಿದ್ಯಾಮಂದಿರವನ್ನು ಕಟ್ಟಿಸುವುದರ ಜೊತೆಗೆ ಮಠದ ಕೀರ್ತಿಯನ್ನು ಬೆಳಗಲಿಕ್ಕೆ ಪ್ರಾರಂಭಿಸಿದರು. ಸರ್ವಧರ್ಮ ಸಮನ್ವಯದ ತತ್ವದಡಿ ಭಕ್ತರಲ್ಲಿ ಒಡಮೂಡಿದ ಜಾತಿವ್ಯವಸ್ಥೆಯನ್ನು ಕಿತ್ತೊಗೆಯಲು ಕಂಕಣ ಬದ್ಧರಾಗಿ ನಿಂತರು. ಈ ಮೂಲಕ ಜನರಲ್ಲಿ ಸಮಾನ ಭಾವನೆ ಮೂಡಿಸಲು ಪ್ರಯತ್ನಿಸಿದರು. ಅಂತಹ ಹಲವು ಉದಾಹರಣೆಗಳು ಇಲ್ಲಿ ಒಡಮೂಡಿ ಬಂದಿವೆ. ಭಕ್ತರಿಗೆ ಬಾರದ ಮಳೆತರಿಸಿ ಅವರ ಬಾಳ ಬೆಳಗಿದ ಮಹಾನ್ ತಪಸ್ವಿ ಶ್ರೀಗಳು ಮಾಡಿದ ಅನೇಕ ಲೀಲೆ, ಪವಾಡಗಳನ್ನು ಈ ಕಾವ್ಯ ಅದ್ಭುತವಾಗಿ ಚಿತ್ರಿಸುತ್ತದೆ.

ಭಕ್ತರ ಭಾಗ್ಯದ ಹೃದಯದಲ್ಲಿ ನಿಂತ ಶ್ರೀಗಳು ತಮ್ಮ ಕೊನೆಯ ದಿನದಲ್ಲಿ ಚಂದ್ರಶೇಖರ ದೇವರನ್ನು ಉತ್ತರಾಧಿಯನ್ನಾಗಿ ಮಾಡಿಕೊಂಡು ತಮ್ಮ ಗುರುಪರಂಪರೆಗೆ ಮಠದ ಇತಿಹಾಸ, ವೀರಶೈವ ತತ್ವಬೋಧೆಯನ್ನು ತಿಳಿಯಪಡಿಸಿ ನಿಶ್ಚಿಂತರಾದರು.

ಇಸವಿ ಹತ್ತೊಂಬತ್ತು ನೂರೊಳು
ಎಸೆವ ಅರವತ್ತೇಳು ಕೂಡಿದ
ಹಸನ ವತ್ಸರ ನಾಲ್ಕನೆಯ ತಿಂಗಳಿನ ದಿನಗಳಲಿ
ಸುಸಮ ದಿನವಿಪ್ಪತ್ತು ನಾಲ್ಕು
ಶಶಿವಿಭೂಷಣ ವಾರವಾಗಿರೆ
ಲಸಿತ ಷಟ್‌ಸ್ಥಲ ತತ್ವಮೂರ್ತಿಯ ಲಿಂಗದೊಳಗಾಗೆ ॥

(ಪುಟ : ೩೩೪, ಪದ್ಯ : ೧೭)

ಹೀಗೆ ಕವಿ ಅಂಗಡಿಯವರು ಶ್ರೀ ಅನ್ನದಾನೀಶ್ವರರ ಲೀಲಾಮೃತ ಪುರಾಣ ಕಾವ್ಯದಲ್ಲಿ ಅನೇಕ ಚಾರಿತ್ರಿಕ ದಾಖಲೆಯನ್ನು ನೀಡುವ ಮೂಲಕ ಅವರು ಮಾಡಿದ ಸಾಮಾಜಿಕ ಕಾರ್ಯ ಹಾಗೂ ಧಾರ್ಮಿಕ ನಂಬಿಕೆ ಮತ್ತು ನಂಬಿದ ತತ್ವವನ್ನು ವಿಶೇಷತೆಯಲ್ಲಿ ಗುರುತಿಸಿದ್ದಾರೆ.

◆◆◆

೩.೫ ಶ್ರೀ ವಾಸುದೇವ ಹೂಲಿಯವರ ಪುರಾಣ ಕಾವ್ಯಗಳು

* ಕವಿ
* ಕೃತಿಗಳು
  ೧. ಶ್ರೀ ಗುರು ಸಚ್ಚಿದಾನಂದ ಪುರಾಣ
  ೨. ಶ್ರೀ ಗುರು ರುದ್ರೇಶ ಲೀಲಾ ವಿಲಾಸಂ
  ೩. ಮಹಾಮಾಯಾ ಮಂಗಳಾದೇವಿ ಚರಿತಂ
  ೪. ಬೆಳದಡಿಯ ಬೆಳಕಿನಕಿರಣ ಶ್ರೀ ಬ್ರಹ್ಮಾನಂದ ಚರಿತಂ
  ೫. ಶ್ರೀ ಮೈಲಾರ ಲಿಂಗ ಮಹಿಮೆ

ಕವಿ :

ಶ್ರೀ ವಾಸುದೇವ ಹೂಲಿಯವರು ಕಣವಿ ಮೂಲದವರು. ೧೯೪೦ ಜೂನ ೨ರಂದು 'ಹುಚ್ಚರಾವ' ಮತ್ತು 'ಪದ್ಮಾವತಿ' ದಂಪತಿಗಳ ಮಗನಾಗಿ ಜನ್ಮಿಸಿದರು. ತಮ್ಮ ಪ್ರಾಥಮಿಕ ಹಾಗೂ ಏಳನೇ ಇಯತ್ತೆವರೆಗಿನ ಶಿಕ್ಷಣವನ್ನು ಕಣವಿಯಲ್ಲಿಯೇ ಪಡೆದರು. ೧೯೫೬ರಲ್ಲಿ ಅಂದಿನ ಮುಲ್ಕೀ ಪರೀಕ್ಷೆಯನ್ನು ಪಾಸು ಮಾಡಿದ ಶ್ರೀಯುತರು ಅಂದು ಪಡೆದ ಮೌಲಿಕ ಶಿಕ್ಷಣವೇ ತಮಗೆ ಆಧಾರವಾಗಿದೆಯೆನ್ನುತ್ತಾರೆ. ಕಲಿಯುವಾಗ ಹರಿಶ್ಚಂದ್ರ ಕಾವ್ಯದ 'ಮಾಯದಬಲೆಯ ಕಾಟ' ಭಾಗದಿಂದ ತುಂಬಾ ಪ್ರಭಾವಿತರಾದರು. ಷಟ್ಪದಿ ಛಂದಸ್ಸಿನ ನಿಯಮಗಳನ್ನು ಸದಾ ಮನನ ಮಾಡುವ ಹಾಗೂ ಗೆಳೆಯರೊಂದಿಗೆ ಚರ್ಚಿಸುವುದರಿಂದ ಕರಗತ ಮಾಡಿಕೊಂಡರು. ಕಣವಿಯಲ್ಲಿ ಕಲಿಯುವಾಗ ಲಕ್ಕುಂಡಿಯ ಕಣವಿಕರ ಮಾಸ್ತರರು ಹೇಳಿಕೊಟ್ಟ ಷಟ್ಪದಿ ಛಂದಸ್ಸಿನ ನಿಯಮಗಳು, ಸಾಹಿತ್ಯ ಜ್ಞಾನ ಹಾಗೂ ಭಾಮಿನಿ ಷಟ್ಪದಿಯ ನಿರಂತರವಾದ ಮನನವು ಇವರನ್ನು ಸಾಹಿತ್ಯ ರಚನೆಗೆ ಪ್ರೇರೇಪಿಸಿತು.

ಆರಂಭದಲ್ಲಿ ಮನಸ್ಸಿನ ನೋವನ್ನು ಮರೆಯಲು, ಸಂತೋಷ ವ್ಯಕ್ತಮಾಡಲು ಸಾಹಿತ್ಯ ರಚನೆಯನ್ನು ಪ್ರಾರಂಭಿಸಿದ ಹೂಲಿಯವರು ಭಾಮಿನಿಷಟ್ಪದಿಯಲ್ಲಿ ಕಾವ್ಯಗಳನ್ನು ಬರೆಯತೊಡಗಿದರು.

ಶ್ರೀಯುತರ ಸಾಹಿತ್ಯ ರಚನೆ ಹೀಗೆ ಇದೆ :

೧) ಬೆಳಧಡಿಯ ಬೆಳಕಿನ ಕಿರಣ ಬ್ರಹ್ಮಾನಂದ ಚರಿತಂ

೨) ಶ್ರೀ ಮರಕುಂಬಿ ರುದ್ರೇಶ ತಾತನ ಲೀಲಾವಿಲಾಸ

೩) ಶ್ರೀ ಮೈಲಾರಲಿಂಗ ಮಹಿಮೆ.

೪) ಮಂಗಳ ಗುಡ್ಡದ ಮಂಗಳಾಂಬೆ ಚರಿತೆ.

೫) ಶ್ರೀ ಗುರು ಸಚ್ಚಿದಾನಂದ ಮಹಾತ್ಮೆ.

ಎಂಬ ಪುರಾಣ ಕಾವ್ಯಗಳನ್ನು ಹಾಗೂ 'ನಾರಾಯಣ ಪೂಜೆ' ಎಂಬ ಖಂಡಕಾವ್ಯ, ಭಗವದ್ಗೀತೆಯ ೯ ಅಧ್ಯಾಯಗಳನ್ನು ಭಾಮಿನಿ ಷಟ್ಪದಿಗೆ ಅಳವಡಿಸಿದ್ದು, 'ದುಶ್ಯಂತ-ಶಕುಂತಲೆ'ಯರ ಚರಿತ್ರೆಯನ್ನು ಕುರಿತ 'ಮರಳಿಮಿಲನ', ಹಾಗೂ 'ಮುದ್ಗಲ್ ಪ್ರಭುಗಳ ಚರಿತ್ರೆ' ಎಂಬ ಕೃತಿಗಳು ವಿಶೇಷವಾಗಿವೆ. ಹಾಡಿನ ಮೂಲಕ ಮಕ್ಕಳಿಗೆ ಬಳ್ಳಿಗಳ ಜ್ಞಾನ ಮಾಡಿಕೊಡುವ ಹಾಡುಗಳನ್ನು ಭಾವಗೀತೆಗಳನ್ನು ಬರೆದಿರುವರು. ಇಂದಿಗೂ ಇವರ ಸಾಹಿತ್ಯ ಕೃಷಿ ನಿರಂತರವಾಗಿ ಮುಂದುವರಿದಿದೆ.

೩.೫.೧. ಶ್ರೀ ಗುರು ಸಚ್ಚಿದಾನಂದ ಪುರಾಣ

ಶ್ರೀ ವಾಸುದೇವ ಹೂಲಿ ಅವರು ರಚಿಸಿದ ಶ್ರೀ ಗುರು ಸಚ್ಚಿದಾನಂದ ಪುರಾಣ ಕಾವ್ಯವು ೨೨ ಸಂಧಿಗಳನ್ನು ಹಾಗೂ ೭೩೨ ಪದ್ಯಗಳನ್ನು ಒಳಗೊಂಡಿದ್ದು ಭಾಮಿನಿ ಷಟ್ಪದಿಯ ಪ್ರಕಾರದಲ್ಲಿ ಸಿದ್ಧಗೊಂಡ ಕೃತಿಯಾಗಿದೆ. ಸದ್ಗುರು ಸಚ್ಚಿದಾನಂದರು ಲೋಕದ ಮಾನವರ ದುಃಖವನ್ನು ದೂರ ಮಾಡಿದವರು. ತಮ್ಮ ತಪೋಬಲದಿಂದ ಅನೇಕ ಲೀಲೆಗಳನ್ನು ಮಾಡಿದವರು. ಕರ್ನಾಟಕದ ಉದ್ದಗಲಕ್ಕೂ ಸಂಚರಿಸುತ್ತಾ, ಆಧ್ಯಾತ್ಮದ ಪ್ರವಚನ ಗೈಯುತ್ತಾ, ಭಕ್ತ ಜನರ ಅಜ್ಞಾನವನ್ನು ಅಳಿಸಿ ಸುಜ್ಞಾನವನ್ನು ಬಿತ್ತಿದವರು. ಬ್ರಹ್ಮಜ್ಞಾನಿಗಳಾಗಿ ತಮ್ಮಲ್ಲಿ ಬಂದ ಭಕ್ತರಿಗೆ ದೀಕ್ಷೆಯನ್ನು ನೀಡಿ ಅವರನ್ನು ಉದ್ಧರಿಸಿದ ಮಹಾತ್ಮರು. ಇಂತಹ ಪವಾಡ ಪುರುಷರ ಜೀವನ, ಸಾಧನೆ-ಸಿದ್ಧಿ ಹಾಗೂ ತತ್ವಬೋಧೆಯನ್ನು ವಿನೂತನ ಮಾದರಿಯಲ್ಲಿ ಭಾಮಿನಿಯ ಲಯಗಾರಿಕೆಯಲ್ಲಿ ನಿರೂಪಿಸುವ ಕಾವ್ಯ ಪುರಾಣ ಇದಾಗಿದೆ.

ಕವಿ ಹೂಲಿ ಅವರು ಪೀಠಿಕಾ ಸಂಧಿಯ ಮೂಲಕ ಕಾವ್ಯಕ್ಕೆ ಆರಂಭವನ್ನು ನೀಡಿದ್ದಾರೆ. ಇಲ್ಲಿ ಗಜಾನನ, ಸರಸ್ವತಿ, ಶಿವ ಮುಂತಾದ ದೇವರುಗಳನ್ನು ಸ್ತುತಿಸಿದ್ದಾರೆ. ಜೊತೆಗೆ ಲೋಕ ಪ್ರಸಿದ್ಧರಾದ ಪ್ರಾಚೀನ ಕವಿಗಳನ್ನು ನೆನೆದಿದ್ದಾರೆ. ವ್ಯಾಸ, ಕಾಳಿದಾಸ ಮುಂತಾದವರನ್ನು

ಸ್ಮರಿಸುವ ಮೂಲಕ ತನ್ನ ವಿಚಾರ ಕುರಿತು ಚರ್ಚಿಸಿದ್ದಾರೆ. ಜೊತೆಗೆ ತಾನು ಈ ಕಾವ್ಯ ಪುರಾಣ ಬರೆಯಲು ಕನ್ನಡಾಂಬೆಯಲ್ಲಿ ಮೊರೆಹೋದದನ್ನು ಕೆಳಗಿನಂತೆ ಅಭಿವ್ಯಕ್ತಪಡಿಸಿದ್ದಾರೆ.

ಮಾತೆ ನಿಮ್ಮಯ ಕಂಠ ಸೊಬಗಿಗೆ ।
ಸ್ವಾತಿ ಮುತ್ತಿನ ಸರವ ತೊಡಿಸುತ
ಸಾತಿಶಯದಾ ರನ್ನ ಮುಕುಟವ ತೊಡಿಸಲಾಶಿಸುವೆ ॥
ಪ್ರೀತಿಯಿಂದಲಿ ಕಲಿತು ಬೆಳೆದಿಹ
ಮಾತಿನಿಂದಲೆ ಕಾವ್ಯ ರಚಿಸುವೆ
ಖ್ಯಾತಿ ಬೆಳೆಸಲು ಹರಸು ಕನ್ನಡ ತಾಯಿ ಅಧಿದೇವಿ ॥

(ಪುಟ : ೪, ಪದ್ಯ : ೧೦)

ಎಂದು ತಾವು ಬರೆದ ಪುರಾಣ ಕಾವ್ಯದ ಕೀರ್ತಿ ಬೆಳಗಲಿ ಎಂದು ಬೇಡಿಕೊಂಡಿದ್ದಾರೆ. ಎಲ್ಲ ಪುರಾಣಕಾವ್ಯಗಳಂತೆ ಈ ಭೂಮಿಯ ಮೇಲೆ ಧರ್ಮ ಅವನತಿಯತ್ತ ಸಾಗಲು, ಶಿವನು ತನ್ನ ಭಕ್ತನನ್ನು ನರನ ರೂಪದಿ ಭೂಮಿಗೆ ಕಳುಹಿಸಿ, ಧರ್ಮವನ್ನು ಉದ್ಧರಿಸಲು ಅವರಿಂದ ಅನೇಕ ಲೀಲೆಗಳನ್ನು ಮಾಡಿಸುವನು ಎನ್ನುವ ಮೂಲಕ ಶ್ರೀ ಸಚ್ಚಿದಾನಂದನ ಜನನವನ್ನು ಕವಿ ಬಣ್ಣಿಸಿದ್ದಾರೆ. ಆ ಕಾಲಘಟ್ಟದಲ್ಲಿ ನಡೆದ ದಲಿತರ ಮೇಲೆ ಆಗುತ್ತಿರುವ ಅನ್ಯಾಯ, ಅಧರ್ಮ, ಕ್ರೌರ್ಯ ಮುಂತಾದವುಗಳನ್ನು ಕವಿ ಉಲ್ಲೇಖಿಸಿದ್ದಾರೆ. ಅವುಗಳನ್ನು ಕಿತ್ತೊಗೆಯಲು ಈ ಧರೆಗೆ ಶಿವನ ರೂಪದಿ ಶ್ರೀಗಳು ಜನ್ಮವೆತ್ತಿದ ಬಗೆಯನ್ನು ವರ್ಣಿಸಿದ್ದಾರೆ.

ಗದಗ ಸಮೀಪವಿರುವ ಹುಲಕೋಟಿ ಗ್ರಾಮದಲ್ಲಿ ಶರಣ ಶ್ರೀ 'ಕರಿಯಪ್ಪ' ಮತ್ತು ಶರಣೆ 'ಚನ್ನಮ್ಮ' ದಂಪತಿಗಳಿಗೆ ಮಹಾನ್ ತಪಸ್ವಿಗಳು, ಸಿದ್ಧ ಸಾಧಕರು ಆದ ಶ್ರೀ ಗುರು ಸಚ್ಚಿದಾನಂದರು.

ಅಂದು ಶಕೆಪದಿನೆಂಟು ನೂರರ
ಮುಂದೆ ಹನ್ನೊಂದಿರಲು ಭುವಿಯಲಿ
ಕಂದು ಗೊರಲನ ತೇಜ ಬೆಳಗಿತು ಎನಿತು ಅಚ್ಚರಿಯು ।
ಅಂದು ಶಿಶುವಿನ ಅಂದ ನೋಡಲು
ಕೆಂದು ಕಿರಣವ ಚಾಚಿ ತೇಜದಿ
ಬಂದು ನಮಿಸಿದನೆಂಬ ತೆರದಲಿ ರವಿಯು ಉದಯಿಸಿದ ॥

(ಪುಟ : ೨೦, ಪದ್ಯ : ೨೩)

ಎಂದು ಕವಿಯು ಶ್ರೀಗಳು ಜನಿಸಿದ ಉಲ್ಲೇಖವನ್ನು ನೀಡಿ ಹುಟ್ಟ ಹೆಸರು 'ಹನುಮ' ಎಂಬುದನ್ನು ನೆನಪಿಸಿಕೊಟ್ಟಿದ್ದಾರೆ. ಮುಂದೆ ಶ್ರೀಗಳ ಬಾಲಲೀಲೆಗಳು ವರ್ಣಿತವಾಗಿವೆ. ಶಾಲೆಯನ್ನು ಕಲಿಯದೇ ತನ್ನದೆ ಮಾರ್ಗದಲ್ಲಿ ಲೋಕವನ್ನು ಗ್ರಹಿಸಲು, ತನ್ನ ಅದ್ಭುತವಾದ

ಜ್ಞಾನದ ಮೂಲಕ ಓದಿ ತಪದಲ್ಲಿ ಬೆರೆತು ಲೋಕೋದ್ಧಾರಕ್ಕೆ ಬದ್ಧರಾದರು ಎಂಬುದು ಕವಿಯ ಅಭಿಮತವಾಗಿದೆ.

ಶ್ರೀಗಳು ಶರಣರ ತತ್ವವನ್ನು ಅವನತಿಯತ್ತ ಸಾಗಿದ ಧರ್ಮಕ್ಕೆ ಬೋಧಿಸುತ್ತ, ಶಿವನು ಮತ್ತು ಶರಣ ಈ ಇಬ್ಬರು ಒಬ್ಬರೆ ಎಂದು ಭಕ್ತರಿಗೆ ತಿಳಿಹೇಳುತ್ತ, ತಾವು ಬಂದ ಕಾರ್ಯವನ್ನು ಪ್ರಾರಂಭಿಸುತ್ತಾರೆ. ಪುರಾಣ ಕಾವ್ಯದಲ್ಲಿ ಶಿವನ ಲೀಲೆಗಳು ಹದವಾಗಿ ಬೆರೆತುಕೊಂಡಿವೆ. ಇವುಗಳು ಕಾವ್ಯಪುರಾಣ ಮುಂದುವರೆಯಲು ಸಹಾಯಕವಾಗಿವೆ. ಗುರುವಿನ ಮಹತಿಯನ್ನು ಎತ್ತಿ ಹಿಡಿಯುವ ದೃಷ್ಟಿಯಿಂದ ಕವಿ ಕಾವ್ಯದಲ್ಲಿ ಅಲ್ಲಲ್ಲಿ ಇಂತಹ ಪ್ರಯೋಗವನ್ನು ಮಾಡಿದ್ದಾರೆ. ಮುಂದೆ ಅಡವಿ ತಾತನಿಂದ ಲಿಂಗದೀಕ್ಷೆ ಪಡೆದುಕೊಂಡು, ತಾನು ಮಾಡಬೇಕಾದ ಕಾರ್ಯಕ್ಕೆ ಸಿದ್ಧರಾದರು ಎಂದು ಹೇಳುವಲ್ಲಿ ಕವಿ ಈ ಭಾಗವನ್ನು ತುಂಬಾ ಸರಳವಾಗಿಯೂ ಹಾಗೂ ಬಾಲ ಹನುಮನ ಆಧ್ಯಾತ್ಮದ ಹಸಿವನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಲೋಕಸಂಚಾರ ಹೊರಟ ಶ್ರೀಗಳ ಮನದ ಇಂಗಿತ ಹಾಗೂ ಜನರಲ್ಲಿ ಜಾತಿ ವ್ಯವಸ್ಥೆ ಕೆಟ್ಟ ಪದ್ಧತಿಯನ್ನು ಅಲ್ಲಗಳೆಯುತ್ತ ಹೋದಾಗ ಆ ಗುರುವಿನ ನುಡಿಯನ್ನು ಕವಿ ಹೂಲಿ ಅವರು ಈ ರೀತಿಯಲ್ಲಿ ಚಿತ್ರಿಸಿದ್ದಾರೆ.

ಎಲವು ಮುಟ್ಟಲು ಯೋಗ್ಯ ವಲ್ಲವು
ಎಲಿವಿನಿಂದಲಿ ದಂತ ವಿರಚಿಸಿ
ಹೊಳೆವ ಬಾಯಲಿ ಇಟ್ಟು ಚರ್ಮದ ಹೊದಿಕೆ ಹೊದಿಸಿರುವ ॥
ತಿಳಿಯ ರಕ್ತವ ನಿಟ್ಟ ದೇಹದಿ
ಮಲವ ನಿಟ್ಟನು ಪಿಚ್ಚು ಕಣ್ಣಲಿ
ಉಳಿದನಾನು ಹೀನ ವಸ್ತುವ ನಿಟ್ಟು ಹೇಣೆದಿರುವ ॥

(ಪುಟ : ೩೭, ಪದ್ಯ : ೦೮)

ಹೀಗೆ ತನ್ನ ಮನದ ಇಂಗಿತದ ಮೂಲಕ ಜಾತಿಯನ್ನು ದೂರಮಾಡಿ ಹಂಪಿ, ಕಾಶಿ ಮುಂತಾದ ಪವಿತ್ರ ಕ್ಷೇತ್ರಗಳ ಸಂಚಾರ ಕೈಕೊಂಡು ಸುದೀರ್ಘವಾದ ತಪಸ್ಸನ್ನು ಆಚರಿಸಿ ದಿವ್ಯ ತ್ಯೇಜಸ್ಸನ್ನು ಪಡೆದುಕೊಂಡವರು. ಮುಂದೆ ಶ್ರೀಗಳು ಮಾಡಿದ ಅನೇಕ ಲೀಲೆಗಳು ಕಂಡುಬರುತ್ತವೆ.

ಅಳವಂಡಿಯ ಗ್ರಾಮದ ವೀರಪ್ಪನಿಗೆ ದೀಕ್ಷೆಯನ್ನು ನೀಡಿ ಉದ್ಧರಿಸಿ ಮುಕ್ತಿ ಬಗೆಗೆ ತಿಳಿಹೇಳಿದ ಪ್ರಸಂಗ, ಹಾವು ಕಚ್ಚಿ ಮರಣ ಹೊಂದಿದ ಸಂಗಪ್ಪನಿಗೆ ಜೀವದಾನ ಮಾಡಿದ ಸಂದರ್ಭ, ಹೀಗೆ ಜೀವನಕ್ಕೆ ಬೇಕಾದ ಶಾಂತಿಯ ಔಷಧಿಯನ್ನು ಕೊಡುತ್ತ, ಶಿವನ ನಾಮವನ್ನು ಸದಾ ಸ್ಮರಿಸುತ್ತಾ, ಭಕ್ತರ ರೋಗಗಳನ್ನು ದೂರಮಾಡಿದ ಮಹಾತ್ಮ ಶ್ರೀ ಸಚ್ಚಿದಾನಂದ ಗುರುಗಳು. ಹೀಗೆ ಬಹು ವಿಧದಲ್ಲಿ ತನ್ನ ಕಾಯಕವನ್ನು ಶಿವನ ಆಜ್ಞೆಯ ಮೇರೆಗೆ ಮಾಡುತ

ಲೋಕ ಪ್ರಸಿದ್ಧಿಯಾಗಿ ಭಕ್ತರಲ್ಲಿ ಎಂದು ಅಳಿಯಲಾದ ಜ್ಞಾನದ ಸುಧೆಯನ್ನು, ಆಧ್ಯಾತ್ಮದ ತುಡಿತವನ್ನು ತುಂಬಿದ ಶ್ರೀ ಸಚ್ಚಿದಾನಂದರು ತಾವು ಬಂದ ಕಾರ್ಯವನ್ನು ಮುಗಿಸಿ.

ಅಂದು ಶಕೆವದಿ ನೆಂಟುನೂರರ
ಮುಂದೆ ಎಪ್ಪತ್ತೆಂಟು ಇರುತಿರ
ಲಂದುಮಾಸವು ಭಾದ್ರಪದಿಯಾ ಬಹುಳ ಸಪ್ತಮಿಯು ॥
ಬಂದ ಶರಣರ ವೃಂದಕೆಲ್ಲಕು
ವಂದಿಸುತ ಶಿವನಲ್ಲಿ ಬೆರೆತರು
ವಂದಿಸಿದಗುರು ಹಸ್ತ ಮೇಲಕೆ ಎದ್ದು ಹರಿಸಿತ್ತು ॥

(ಪುಟ : ೧೪೨, ಪದ್ಯ : ೨೩)

ಎಂದು ಕವಿ ಹೂಲಿ ಅವರು ಶ್ರೀಗಳು ಲಿಂಗೈಕ್ಯರಾದ ಬಗೆಯನ್ನು ಸೂಚಿಸಿದ್ದಾರೆ.

೩.೫.೨. ಶ್ರೀಗುರು ರುದ್ರೇಶ ಲೀಲಾವಿಲಾಸಂ

'ಶ್ರೀ ಗುರು ರುದ್ರೇಶ ಲೀಲಾ ವಿಲಾಸಂ' ಪುರಾಣಕಾವ್ಯವನ್ನು ಭಾಮಿನಿ ಷಟ್ಪದಿಯಲ್ಲಿ ೩೦ ಸಂಧಿಯನ್ನು ಒಳಗೊಂಡು, ೧೧೨೫ ಪದ್ಯಗಳಲ್ಲಿ ಕವಿ ವಾಸುದೇವ ಹೂಲಿ ಅವರು ರಚಿಸಿದ್ದಾರೆ. ಈ ಕೃತಿಯು ಮರುಕುಂಬಿಯ ಶ್ರೀ ರುದ್ರೇಶ ತಾತನವರ ಜೀವನ-ಸಾಧನೆ, ಸಿದ್ಧಿ ಮತ್ತು ಪ್ರಸಿದ್ಧಿಯನ್ನು ಅಭಿವ್ಯಕ್ತಿಸುವ ಕೃತಿಯಾಗಿದೆ. ಎಲ್ಲ ಕಾವ್ಯಪುರಾಣಗಳಂತೆ ಕವಿ ಹೂಲಿ ಅವರು ಸಾಂಪ್ರದಾಯಿಕವಾಗಿ ಕಾವ್ಯವನ್ನು ಮುನ್ನಡೆಸಿದ್ದಾರೆ. ಜೊತೆಗೆ ವೀರಶೈವ ಧರ್ಮದ ತತ್ವಗಳನ್ನು ಸುಂದರವಾಗಿ ಓದುಗರಿಗೆ ನೀಡಿದ್ದಾರೆ. ಅಷ್ಟಾವರಣ, ಪಂಚಾಚಾರ, ಶಿವಯೋಗದ ಮೂಲಕ ದೃಷ್ಟಾಂತಗಳನ್ನು ಹೆಣೆದು ಕಥೆಗೆ ಪೂರಕವಾದ ವಿಷಯವನ್ನು ಕಾವ್ಯದಲ್ಲಿ ತಂದಿದ್ದಾರೆ.

ಕಾವ್ಯದ ಆರಂಭವು ಪೀಠಿಕಾ ಭಾಗದಿಂದ ಮುಂದುವರೆದಿದೆ. ಕವಿ ಮೊದಲಿಗೆ ಗಣಪತಿ, ಶಾರದೆ, ಅಲ್ಲಮ, ಬಸವಣ್ಣ, ಚನ್ನಬಸವಣ್ಣ ಮುಂತಾದ ಶಿವ-ಶರಣರನ್ನು ಪ್ರಾರ್ಥಿಸಿ, ಸಾಹಿತ್ಯ ಶ್ರೇಷ್ಠರಾದ ಮಹಾನ್ ಕವಿಗಳನ್ನು ಸ್ಮರಿಸಿದ್ದಾರೆ. ಕಾಳಿದಾಸ, ಪಂಪ, ರನ್ನ, ಜನ್ನ, ಕುಮಾರವ್ಯಾಸ, ಹರಿಹರ, ರಾಘವಾಂಕ ಕವಿಗಳನ್ನು ನೆನೆದು ಪೀಠಿಕಾ ಭಾಗವನ್ನು ಮುಗಿಸುವ ಕೊನೆಯಲ್ಲಿ, ಧರ್ಮ ಪತನಮುಖಿಯಾಗಲು ಶಿವನು ಕನಸ್ಸಿನ ಮೂಲಕ ರುದ್ರೇಶ ತಾತನಾಗಿ ಹುಟ್ಟಿ ಬರುವ ಸೂಚನೆಯನ್ನು ನೀಡಿದ್ದಾರೆ. ಜೊತೆಗೆ ಚಾಮರಸನ ಪದ್ಯದ ಮಾದರಿಯನ್ನು ತಮ್ಮದೇ ಆದ ಧಾಟಿಯಲ್ಲಿ ಬಳಸಿಕೊಂಡು ಕಾವ್ಯದ ಘನತೆಯನ್ನು ಎತ್ತಿ ಹಿಡಿದಿದ್ದಾರೆ.

ಸತ್ತವರ ಕಥೆಯಲ್ಲ ಮತ್ತಿದು
ಹೊತ್ತು ಹೋಗಲು ಕೇಳ್ವುದಲ್ಲವು
ಸತ್ಯ ಮೂರುತಿ ಗುರುವು ಶ್ರೀ ಮರಕುಂಬಿ ತಾತನದು ॥
ನಿತ್ಯನಾಗಿಹ ಆತ್ಮ ರೂಪನು
ಮೃತ್ಯುಪಾಶದಿ ಜನರ ಪೊರೆವನು
ಸತ್ಯಸತ್ಯವು ಮಿಥ್ಯವೆಂಬಗೆ ನರಕವಾಸೆಂದ ॥

(ಶ್ರೀಗುರು ರುದ್ರೇಶ ಲೀಲಾವಿಲಾಸಂ. ಪುಟ : ೦೬, ಪದ್ಯ : ೨೩)

ಮುಂದುವರೆದು ಈ ಕಾವ್ಯದ ಬಗೆಗೆ ಕನ್ನಡ ತಾಯಿಯಲ್ಲಿ ನಿವೇದಿಸಿಕೊಂಡಿದ್ದಾರೆ. ರುದ್ರೇಶ ತಾತನ ಜನನವು ವಿವಿಧ ಪುರಾಣ ಕಾವ್ಯಗಳಂತೆ ವೈಭವೀಕರಣದಿಂದ ಕೂಡಿದೆ. ಬಾಲ ರುದ್ರೇಶ ಅನಂತದಿವ್ಯದರ್ಶನ ವರ್ಣನೆಯಿಂದ ಅವರು ಹುಟ್ಟಿಬರಲು ಪರಶಿವನ ಅನುಗ್ರಹವೇ ಕಾರಣವೆಂಬುದನ್ನು ಕವಿ ಒತ್ತಿ ಹೇಳಿದ್ದಾರೆ. ಬಾಲರುದ್ರೇಶನ ಶಿಕ್ಷಣ, ಆಚಾರ ವಿಚಾರ ಮುಂತಾದವುಗಳು ವರ್ಣಿತವಾಗಿ ಕಾವ್ಯಕ್ಕೆ ಒಂದು ಮೆರಗನ್ನು ತಂದುಕೊಟ್ಟಿವೆ. ಒಬ್ಬ ಚಾರಿತ್ರಿಕ ವ್ಯಕ್ತಿ, ಶಿವಶರಣ ಲಿಂಗೈಕ್ಯರಾದ ಮೇಲೆ ಅವರನ್ನು ಕಥಾನಾಯಕನನ್ನಾಗಿ ಮಾಡಿ ಕಾವ್ಯ ರಚಿಸುವಲ್ಲಿ ಅವರು ಮಾಡಿದ ಸಾಧನೆ, ಸಿದ್ಧಿ, ಪವಾಡ ಮುಂತಾದವುಗಳು ಚಾರಿತ್ರಿಕ ದಾಖಲೆಯಲ್ಲಿ ಮೂಡಿರುತ್ತವೆ. ಅವುಗಳಿಗೆ ಹೊಸ ಮೆರಗನ್ನು ಕೊಟ್ಟು ಚಿತ್ರಿಸುವುದು ಇಲ್ಲಿ ವಿಶೇಷವಾಗಿದೆ.

ಬಾಲ ರುದ್ರೇಶನಿಗೆ ಏಳನೆಯ ಪ್ರಾಯದಲ್ಲಿ ಶ್ರೀಶೈಲದ ಗುರುಗಳು ಆ ಬಾಲಕನನ್ನು ಪಡೆಯುವ ಹಂಬಲ, ಅದಕ್ಕೆ ಒಪ್ಪದ ಪ್ರಸಂಗ, ಮುಂದೆ ಈ ಬಾಲ ರುದ್ರೇಶನ ದಿವ್ಯ ತೇಜಸ್ಸನ್ನು ನೋಡಿ ಆ ಗುರುಗಳು ಮುಂದೆ ಈತನ ಮಗನನ್ನು ಒಪ್ಪಿಸಲು ಭವಿಷ್ಯವನ್ನು ನುಡಿಯುತ್ತಾರೆ. ಅದಕ್ಕೆ ಪೂರಕವೆಂಬಂತೆ ಮುಂದೆ ರುದ್ರೇಶ ತಾತನ ಮಗು ಸಂನ್ಯಾಸತ್ವವನ್ನು ಸ್ವೀಕರಿಸಿ ಯೋಗಿಯಾಗಿರುವ ಚಿತ್ರಣ ಈ ಕಾವ್ಯದಲ್ಲಿ ಹದವಾಗಿ ಬೆರೆತುಕೊಂಡಿದೆ. ಹೀಗೆ ಕಾವ್ಯದಲ್ಲಿ ಅನೇಕ ಶಿವಯೋಗಿಗಳಿಂದ ರುದ್ರೇಶನ ಮಹಿಮೆಯನ್ನು ಕವಿ ಕೊಂಡಾಡಿದ್ದಾನೆ. ಮುಂದೆ ರುದ್ರೇಶನ ವಿವಾಹ, ಪುತ್ರ ಸಂತಾನ ಭಾಗ್ಯ ಇವುಗಳ ಜೊತೆಗೆ ಈ ಆಧ್ಯಾತ್ಮಿಕತೆಯ ಹಂಬಲ ಹೆಚ್ಚಾಗಿ ಅವರು ಸಂಸಾರಿಯಾಗಿ ಶಿವನನ್ನು ಒಲಿಸಿಕೊಳ್ಳುವ ಪರಿಯನ್ನು ಅದ್ಭುತವಾಗಿ ಈ ಕಾವ್ಯ ಚಿತ್ರಿಸುತ್ತದೆ.

ಶ್ರೀ ರುದ್ರೇಶ ತಾತನ ಕಾಯಕ ತತ್ವ, ಅಷ್ಟಾವರಣಗಳಲ್ಲೊಂದಾದ ಲಿಂಗಮಹಿಮೆ ಕಾವ್ಯದಲ್ಲಿ ಅತೀ ದೀರ್ಘವಾಗಿ ಕಂಡುಬಂದಿದೆ. ಕವಿ ಈ ಕಾವ್ಯದ ನಾಯಕನ ಜೊತೆ ವೀರಶೈವದ ತತ್ವ ಬೋಧನೆಯನ್ನು ವಿವರಿಸಿದ ರೀತಿ ಮನೋಜ್ಞವಾಗಿದೆ. ಅವುಗಳಲ್ಲಿ ರುದ್ರಾಕ್ಷಿ, ಮಂತ್ರ, ಪಾದೋದಕ, ಮತ್ತು ಪ್ರಸಾದಗಳ ಮಹಿಮೆ ಮುಂತಾದವುಗಳು ಸುಂದರವಾಗಿ

ನಿಯಂತ್ರಿತಗೊಂಡಿವೆ. ಈ ಎಲ್ಲ ಮಹಿಮೆಯಿಂದ ಮುಂದೆ ಶ್ರೀರುದ್ರೇಶ ತಾತನು ಹಲವು ಲೀಲೆಗಳನ್ನು ಕೈಗೊಂಡಿದ್ದ ಪರಿಯನ್ನು ಕವಿ ಹೂಲಿ ಅವರು ಸ್ವಾರಸ್ಯಕರವಾಗಿ ನಿರೂಪಿಸಿದ್ದಾರೆ. ಅವುಗಳಲ್ಲಿ :

೧. ಬೀಜವನ್ನು ಜಂಗಮನಿಗೆ ಕೊಟ್ಟು ಮುಷ್ಠಿ ಬೀಜದಿಂದ ಹೊಲಬಿತ್ತಿದ್ದು.

೨. ಭಸ್ಮದಿಂದ ರೋಗ ಕಳೆದದ್ದು.

೩. ಹಂಪೆ ಜಾತ್ರೆ ತೋರಿಸಿದ್ದು ಪ್ರಮುಖವಾಗಿವೆ.

ಕಾಯಕ ಯೋಗಿಯಾದ ಶ್ರೀರುದ್ರೇಶ ತಾತನು ಹಲವು ಮುಖದ ಪ್ರತಿಭೆಯನ್ನು ಪಡೆದುಕೊಂಡವರು. ಜೊತೆಗೆ ತನ್ನನ್ನು ನಂಬಿದ ಜನರಿಗೆ ದಾರಿತೋರಿಸಿದ ಮಹಾನ-ಶರಣರು. ನಾಡಿನ ನಾನಾ ಕಡೆ ಸಂಚಾರಗೈದು ಭಕ್ತರನ್ನು ಉದ್ಧರಿಸಿದ ಸಾಧಕರಿವರು. ದಾಸೋಹದ ಮೂಲಕ ಧರ್ಮವನ್ನು ಎತ್ತಿ ಹಿಡಿದವರು. ಅವರು ಮಾಡಿದ ಕಾಯಕ ಧರ್ಮವನ್ನು ಕವಿ ಹೂಲಿಯವರು ಈ ಕಾವ್ಯದಲ್ಲಿ ಅಚ್ಚುಕಟ್ಟಾಗಿ ಹೆಣೆದಿದ್ದಾರೆ. ಜೊತೆಗೆ ಕಾವ್ಯವನ್ನು ಮುಂದುವರೆಸಲು ಅಲ್ಲಲ್ಲಿ ವರ್ಣನೆಯನ್ನು ಮಾಡಿದ್ದಾರೆ. ಅವುಗಳಲ್ಲಿ ಸೂರ್ಯೋದಯದ ವರ್ಣನೆ ಈ ರೀತಿಯಲ್ಲಿದೆ.

ಪರಮ ಪತಿವ್ರತೆ ಹಣೆಯ ತಿಲಕವೊ
ಧರಣಿದೇವಿಯ ಕೆಂಪು ತಿಲಕವೊ
ಹರನ ಮೂರನೆ ನಯನ ಕಿಡಿಯದು ಸಿಡಿದುದೊನಭದಿ ।
ಮೆರಗು ವಸ್ತ್ರವನುಟ್ಟ ವನಿತೆಯು
ಸೆರಗ ಹೊದೆಯುತ ತಿಲಕ ತೀಡುತ
ಗುರುವಿಗೆರಗಲು ಬಂದ ತೆರದಲಿ ಸೂರ್ಯನುದಯಿಸಿದ ॥

(ಪುಟ : ೨೧೨, ಪದ್ಯ : ೧೫)

ಹೀಗೆ ಕವಿ ಹೂಲಿ ಅವರು ಕಾವ್ಯಕ್ಕೆ ಮುನ್ನಡೆಯನ್ನು ಇಂತಹ ಚಮತ್ಕಾರಿ ಪದ್ಯಗಳ ಮೂಲಕ, ದೃಷ್ಟಾಂತಗಳ ಮೂಲಕ ಹೇಳಿದ್ದಾರೆ.

ಒಟ್ಟಿನಲ್ಲಿ ಇಪ್ಪತ್ತನೆಯ ಶತಮಾನದಲ್ಲಿ ಆಗಿ ಹೋದ ಶ್ರೀ ರುದ್ರೇಶ ಮಹಾನುಭಾವನ ಜೀವನ-ಸಾಧನೆ, ಕೌಟುಂಬಿಕ ಸ್ಥಿತಿಗತಿ, ವೀರಶೈವ ತತ್ವಬೋಧೆ, ಶರಣ ಸಂಪ್ರದಾಯದ ಇಣುಕು ನೋಟ, ರುದ್ರೇಶ ತಾತನ ಉಪದೇಶ, ಭವಿಷ್ಯವಾಣಿ ಹಾಗೂ ಅವರು ಸಂಚರಿಸಿದ ಕ್ಷೇತ್ರದ ಪಾವಿತ್ರತೆ, ಜನರಲ್ಲಿ ಆ ತಾತನ ಬಗ್ಗೆ ಇರುವ ಭಕ್ತಿ, ಪ್ರೀತಿ ಮುಂತಾದವುಗಳನ್ನು ಅಧಿಕೃತವಾಗಿ ಈ ಕಾವ್ಯ ಪುರಾಣವು ಸರಳವಾಗಿ ಮತ್ತು ಸುಂದರವಾಗಿ ಸಹೃದಯರಿಗೆ ಪರಿಚಯಿಸುತ್ತದೆ.

ಒಟ್ಟಾರೆಯಾಗಿ ಕವಿ ಹೂಲಿ ಅವರು ಅನೇಕ ಸಾಹಿತ್ಯದ ಓದಿನ ಅನುಭವ ಪಡೆದು ಒಬ್ಬ ಚಾರಿತ್ರಿಕ ಮಹಾನುಭಾವನ ಜೀವನ ಚರಿತ್ರೆಯನ್ನು, ಆತನ ಲೀಲೆಯನ್ನು, ಅನೇಕ ಕಥೆಗಳು ಹಾಗೂ ಪವಾಡಗಳ ಮೂಲಕ ತೋರಿಸಿದ್ದಾರೆ. ಆದರೆ ಕೆಲವು ಕಡೇ ಅವರು ಶ್ರೀ ರುದ್ರೇಶ ತಾತನ ಮೇಲಿನ ಭಕ್ತಿಯಿಂದ ವೈಭವೀಕರಣಕ್ಕೆ ಹೋಗಿದ್ದಾರೆಂದು ತಿಳಿದುಬರುತ್ತದೆ. ಅದೇನೇ ಇದ್ದರೂ ಸಹ ಈ ಕಾವ್ಯ ಪುರಾಣವು ಆ ಶರಣ ಚೇತನರ ನೈಜ ಚಿತ್ರಣವನ್ನು ಬಿಂಬಿಸುತ್ತದೆ ಎಂದು ಹೇಳಬಹುದು.

೩.೫.೩. ಮಹಾಮಾಯಾ ಮಂಗಳಾದೇವಿ ಚರಿತಂ

ಪ್ರಸ್ತುತ ಪುರಾಣ ಕಾವ್ಯವು ೧೮ ಅಧ್ಯಾಯಗಳ ಹರವನ್ನು ಹೊಂದಿದ್ದು, ೫೯೨ ಪದ್ಯಗಳನ್ನೊಳಗೊಂಡಿದೆ. ಇದು ಮುಖ್ಯವಾಗಿ ಭಾಮಿನಿ ಷಟ್ಪದಿಯಲ್ಲಿ ಸರಳ ಹಾಗೂ ಛಂದೋಬದ್ಧವಾಗಿ ರಚನೆಗೊಂಡ ಸೃಜನಾತ್ಮಕ ಪುರಾಣ ಕಾವ್ಯವಾಗಿದೆ.

ಈ ಪುರಾಣದಲ್ಲಿ ವಾಸುದೇವ ಹೂಲಿಯವರು ವಾಡಿಕೆಯಂತೆ ಪೀಠಿಕಾಧ್ಯಾಯದಲ್ಲಿ ದೇವತಾಸ್ತುತಿ, ಶಾಂಭವಿ, ವಿನಾಯಕ, ಲಕ್ಷ್ಮಿದೇವಿಸ್ತುತಿಯೊಂದಿಗೆ ವಚನಕಾರು ಹಾಗೂ ಕನ್ನಡದ ಕವಿಗಳನ್ನು ಸ್ಮರಿಸಿಕೊಳ್ಳುತ್ತಾ ಪುರಾಣವನ್ನು ಪ್ರಾರಂಭಿಸುತ್ತಾರೆ. ಕನ್ನಡ ಭಾಷೆಯ ಮೇಲಿರುವ ಪ್ರೀತಿಯನ್ನು ಪೀಠಿಕಾ ಸಂಧಿಯಲ್ಲಿ ಈ ಕೆಳಗಿನಂತೆ ವ್ಯಕ್ತ ಮಾಡಿರುವರು.

ಕನ್ನಡದ ನುಡಿ ಕೇಳಲಂದವು ।
ಕನ್ನಡ ನುಡಿ ನುಡಿಯ ಲಂದವು
ಚಿನ್ನದಾಬೆಲೆಗಿಂತ ಕನ್ನಡ ಕಧಿಕ ಸಂಪದವು ।
ಕನ್ನಡವು ಮಹ ಪಂಚ ಭೂತದಿ
ಚೆನ್ನತನದಲಿ ಬೆರತು ಕೊಂಡಿದೆ
ಕನ್ನಡದ ನುಡಿ ನುಡಿಯದವನೇದನುಜನಂತಿಹನು ॥

(ಪುಟ : ೦೪, ಪದ್ಯ : ೧೯)

ಎಂದು ಕನ್ನಡ ಅಭಿಮಾನವನ್ನು ಪೀಠಿಕಾಧ್ಯಾಯದಲ್ಲಿ ತೋರಿಸಿದ್ದಾರೆ ಹಾಗೂ ಕನ್ನಡ ಕವಿಗಳಿಗೆ ನಮನವನ್ನು ಸಲ್ಲಿಸಿ ಕಾವ್ಯವನ್ನು ಪ್ರಾರಂಭಿಸಿದ್ದಾರೆ. ಪ್ರಸ್ತುತ ಮಹಾಮಾಯಾ ಮಂಗಳಾದೇವಿಯ ಚರಿತೆಯನ್ನು ನೋಡಿದಾಗ ಎಲ್ಲ ದೇವಿಯರ ಪುರಾಣದ ಸುರಾಸುರರ ಕಥೆಯಂತೆ ಇಲ್ಲಿಯು ಕೂಡಾ ಅನೇಕ ಕಥೆಗಳು ಸಾಮಾನ್ಯವಾಗಿಯೇ ಮೂಡಿ ಬಂದಿವೆ. ಈ ಪುರಾಣದಲ್ಲಿ ಅಗಸ್ತ್ಯ ಋಷಿಯನ್ನು ಮುಂದೆ ಮಾಡಿ ಶಾಂಭವಿಯು ಅನೇಕ ದೈತ್ಯರನ್ನು ಸಂಹಾರ ಮಾಡಿ ದೈತ್ಯ ರಾಕ್ಷಸರ ಹುಟ್ಟಡಗಿಸುವದು. ಈ ಪುರಾಣ ಕಾವ್ಯದಲ್ಲಿ ವಿಂದ್ಯನ

ಗರ್ವ ಹರಣ ಗೈಸಿದ್ದು, ಸಮುದ್ರ ಪಾನ ಮಾಡಿದ್ದು, ಇತರೆ ಅನೇಕ ವಿಷಯಗಳನ್ನು ಯುದ್ಧದ ಪ್ರಸಂಗವನ್ನು ವರ್ಣಿಸುವಂತೆ ಶ್ರೀ ವಾಸುದೇವ ಹೂಲಿಯವರು ವರ್ಣಿಸಿದ್ದಾರೆ.

ಶ್ರೀ ಮಂಗಳಾದೇವಿ ಪುರಾಣದಲ್ಲಿ ಅನೇಕ ಯುದ್ಧ ಪ್ರಸಂಗಗಳು ಬರುತ್ತವೆ. ಇಲ್ಲಿ ನಮುಚಿ, ಖಸ್ಯಮ, ಕಾಲನಭ ಎಂಬ ಅಸುರರು ತಮ್ಮ ತಪದ ಬಲದಿಂದ ಶ್ರೀ ಮಂಗಳಾ ದೇವಿಯ ಸಂಹಾರ ಮಾಡಲು ಬಂದಾಗ ನಡೆಯುವ ಸಂಭಾಷಣೆಗಳು ಮಹಾಭಾರತ ಯುದ್ಧದ ಸನ್ನಿವೇಶಗಳನ್ನು ನೆನಪಿಸಿಕೊಡುತ್ತವೆ. ಇಲ್ಲಿ ನಮುಚಿ, ಖಸ್ಯಮರೂ ದೇವಿಯನ್ನು ಹೀಯಾಳಿಸುತ್ತಾರೆ. ದೇವಿಯನ್ನು ಅವಹೇಳನ ಮಾಡುತ್ತಾರೆ "ನಿನ್ನ ಶೌರ್ಯ ಹಾಗೂ ಪರಾಕ್ರಮವನ್ನು ಹೋಳಿಗೆ ನೈವೇದ್ಯ ನೀಡುವ ನಿನ್ನ ಭಕ್ತರಿಗೆ ತೋರಿಸು; ಆದರೆ ಈ ಯುದ್ಧ ರಂಗದಲ್ಲಿ ನಮ್ಮನ್ನು ಸೋಲಿಸಲು ಯಾರಿಂದಲೂ ಸಾಧ್ಯವಿಲ್ಲ" ಎಂದು ಹೇಳುತ್ತಾ ಖಸ್ಯಮನು ತುಂಬಾ ಕಠೋರವಾಗಿ ಮಾತಾಡುತ್ತಾನೆ. ಹಾಗೆ ಮುಂದುವರೆದು "ನಾ ಬಿಟ್ಟ ಬಾಣಕೆ ಕಡಲಭಿತ್ತಿ ಹೋಗುವುದು, ಸೃಷ್ಟಿಕರ್ತ ಬ್ರಹ್ಮನೆ ದಿಕ್ಕಾಪಾಲಾಗುತ್ತಾನೆ. ಅಂಥಹದರಲ್ಲಿ ನೀನು ಯಾವ ಲೆಕ್ಕ ಜೀವದಾನ ಮಾಡುತ್ತೇನೆ ಹೋಗು" ಎಂದು ಗರ್ವದಿಂದ ಮಂಗಳಾದೇವಿಗೆ ಹೇಳುತ್ತಾನೆ. ದೇವಿಗೆ ಕಡುಕೋಪ ಬಂದು ಪ್ರಳಯಾಸ್ತ್ರವನು ಬಿಟ್ಟಾಗ ಆ ಸೈನ್ಯದಲ್ಲಿ ಉಂಟಾದ ಅಲ್ಲೋಲಕಲ್ಲೋಲಗಳನ್ನು ಶ್ರೀ ಹೂಲಿಯವರು ಹೀಗೆ ವರ್ಣಿಸುತ್ತಾರೆ.

ಕೆಲರು ಶೂಲದ ಹೊಡಿತದಿಂತಲೆ
ಯೊಳಗೆ ಗಾಯವ ಹೊಂದಿ ಮಡಿದರು
ಕೆಲರು ರುಧಿರವ ಕಾರಿ ಮಡಿದರು ಕೆಲರು ಭೀತಿಯಲಿ ॥
ಕೆಲರು ಶಿರಹೀನದಲಿ ಬಿದ್ದರು
ಕೆಲರು ಮುರಿದವಯವದಿ ಕೆಡೆದರು
ಕೆಲರು ನೀರಡಿಸುತ್ತ ಕುಡಿದರು ಕುದರೆ ಬೆವರನ್ನು ॥

(ಪುಟ : ೫೦, ಪದ್ಯ : ೨೪)

ಈ ರೀತಿಯಾಗಿ ಶ್ರೀ ಮಂಗಳಾದೇವಿಯು ಅವರನ್ನು ನಾಶ ಮಾಡುವ ಬಗೆಯನ್ನು ತಿಳಿಸಿದ್ದಾರೆ.

ಶ್ರೀ ಮಹಾಮಾಯಾ ಮಂಗಳಾದೇವಿ ಚರಿತ್ರೆ ಪುರಾಣಗಳ ಸಾಲಿನಲ್ಲಿ ಎದ್ದು ನಿಲ್ಲುವಂತಹ ಕೃತಿ. ಈ ಕೃತಿಯಲ್ಲಿ ಬರುವ ಮಂಗಳಗುಡ್ಡವು ಪಟ್ಟದಕಲ್ಲು ಐಹೊಳೆಯ ಮಾರ್ಗದಲ್ಲಿದೆ. ಇಲ್ಲಿ ಅಗಸ್ತ್ಯಮುನಿಗಳು ಶಿವನ ಅಪ್ಪಣೆ ಪಡೆದು ವಾತಾಪಿ ಇಲ್ವಲರನ್ನು ಸಂಹರಿಸಿ, ಶ್ರೀಬನಶಂಕರಿಯ ಸ್ಥಾಪನೆಗೈದ್ದು ಮಂಗಳಾಂಬೆಯನ್ನು ಆರಾಧಿಸಿ, ಆ ಜಗದಂಬೆಯ ಸೇವೆ ಮಾಡುತ್ತಾರೆ. ಆ ಅಂಬೆಯ ಕರುಣೆಯಿಂದ ನಮುಚಿ-ಖಸ್ಯಮ ಮುಂತಾದ ದೈತ್ಯರನ್ನು

ಸಂಹರಿಸಿ ಲೋಕ ಕಲ್ಯಾಣ ಮಾಡಿದರು. ಋಷಿಗಳಿಗೆ ಮೃತ್ಯವಾದ ಕಾಲೆಯ ರಕ್ಕಸರನ್ನು ಸಂಹಾರ ಮಾಡಿ ಲೋಕ ಕಲ್ಯಾಣ ಮಾಡಿದ ಕಥೆಯು ಮಂಗಳಾಂಬೆಯ ಕಥೆಯಾಗಿದೆ.

ಈ ಪುರಾಣದಲ್ಲಿ ದೇವಿಯು ಅಗ್ನಿಯಲ್ಲಿ ಲೋಪಾಮುದ್ರೆಯನ್ನು ಸೃಷ್ಟಿಸಿದ್ದು, ಅಗಸ್ತ್ಯರು ಗ್ರಹಸ್ಥ ಜೀವನ ನಡೆಸಿದ್ದು ಮಂಗಳಾಂಬೆಯ ಮಹಿಮೆಯಿಂದಲೆ. ಕೊನೆಗೆ ಮಂಗಳಾಂಬೆಯ ಭೂಮಿ ಪ್ರವೇಶವಾಗಿ ಉಳಿದ ಚರಿತ್ರೆಯನ್ನು ಕಥೆ ನಿರೂಪಿಸುತ್ತಾ ಸಾಗುತ್ತದೆ. ಸಾಮಾನ್ಯವಾಗಿ ಎಲ್ಲಾ ಪುರಾಣಗಳಂತೆ ಇದು ಕೂಡಾ ಭಾಮಿನಿ ಷಟ್ಪದಿಯಲ್ಲಿ ಸರಳ ಭಾಷೆಯಲ್ಲಿ ವ್ಯಕ್ತವಾಗಿರುವುದನ್ನು ಕಾಣಬಹುದು. ದೈತ್ಯರ ಯುದ್ಧ ವರ್ಣನೆಯು ರೋಚಕವಾಗಿ ಮೂಡಿಬಂದಿದ್ದು, ದೈತ್ಯ ರಾಕ್ಷಸರು ಶಿವನಿಂದೆ ಹಾಗೂ ಶ್ರೀದೇವಿಯ ನಿಂದೆಯನ್ನು ಮಾಡುವ ರೀತಿ ಅಷ್ಟೇ ಸೊಗಸಾಗಿದೆ.

ಪ್ರಸ್ತುತ ಪುರಾಣದಲ್ಲಿ ಶಿವ ನಿಂದೆಯನ್ನು ಮಾಡುವ ರೀತಿ ಅನನ್ಯವಾಗಿದೆ. ಅದು :

ಉಡಲು ಇಲ್ಲದ ಬಡವ ಧನಪತಿ
ಯೊಡನೆ ವೈರವ ಕಟ್ಟಿಕೊಂಬೊಲು
ಮೈಡೆಯು ಎನ್ನಲಿ ವೈರ ಕಟ್ಟುತೆ ಬದುಕಬಹುದೇನು ।
ಎತ್ತಣದ ಶಿವೆ ವೀರ ತಾನಿಹ
ನೆತ್ತ ಜೋಗಿಯ ಸತಿಗೆ ಹವಿಪದ
ತುತ್ತು ನುಂಗಿದ ಹೆಣ್ಣಿಗೀರಣ ಯುದ್ಧ ಸಾಹಸವೇ ॥

(ಶುಭನುಡಿ, ಶ್ರೀ ಮ.ನಿ.ಪ್ರ. ನಿಂಗಪ್ಪ ಶರಣರು, ಪುಟ : iv.)

ಹೀಗೆ ನಿಂದನೆಯನ್ನು ಮಾಡುವುದು ಕಾವ್ಯದಲ್ಲಿ ಸೊಗಸಾಗಿ ಮೂಡಿ ಬಂದಿದೆ. ಅಲ್ಲದೆ ಹಲವು ತಾತ್ವಿಕ ವಿಚಾರಗಳು ಕಾವ್ಯದಲ್ಲಿ ಹಾಸು ಹೊಕ್ಕಾಗಿವೆ. ಓದುಗರಿಗೆ ಕಾವ್ಯ ಬೇಸರವಿಲ್ಲದಂತೆ ಓದಿಸಿಕೊಂಡು ಹೋಗುತ್ತದೆ.

ಈ ಪುರಾಣದ ಪ್ರಾರಂಭದಲ್ಲಿ ಚರಿತೆಯ ಫಲಗಳನ್ನು ಕವಿಗಳು ನೀಡಿದ್ದಾರೆ. ಶ್ರೀದೇವಿಯ ಚರಿತೆಯನ್ನು ಓದಿದರೆ ವೇದ ಶಾಸ್ತ್ರ ಓದಿದ ಫಲ, ಆದಿ ನಾರಾಯಣನ ಯಜಿಸಿದ ಫಲ, ಬ್ರಹ್ಮನನ್ನು ಒಲಿಸಿದ ಫಲ, ಸಾಧು ಸಜ್ಜನರ ಸೇವೆಯ ಫಲ, ವಾಚಿಸಿದರೆ ದೇವಿ ಫಲ ನೀಡುವಳು ಎಂದು ಹೇಳುತ್ತಾರೆ. ಈ ಪುರಾಣವನ್ನು ಕೇಳುವವರಿಗೆ ರೋಗದಿಂದ ಮುಕ್ತಿ, ಯಜ್ಞ ಯಾಗಾದಿಗಳ ಫಲ, ಸುರನದಿಯಲ್ಲಿ ಮಿಂದು ಭಕ್ತಿಯಲ್ಲಿ ಸೇವೆ ಸಲ್ಲಿಸಿದ ಫಲ, ಗುರುಸೇವೆ ಮಾಡಿದ ಫಲ ಮುಂತಾದ ಭಕ್ತಿಯ ಫಲಗಳು ದೊರೆಯುತ್ತವೆ ಎಂದು ಹೇಳಿದ್ದಾರೆ. ಹಾಗೂ ಈ ಕಾವ್ಯವನ್ನು ವಿಕ್ರಮ ಸಂವತ್ಸರದಲ್ಲಿ ಪುಷ್ಯದ ಕೃಷ್ಣ ಪಕ್ಷದಲ್ಲಿ ಪಂಚಮಿ ಹುಬ್ಬ ಲಗ್ನದಲ್ಲಿ ಬರೆದು ಮುಗಿಸಿದ್ದೇನೆ ಎಂದು ಹೇಳಿಕೊಳ್ಳುತ್ತಾರೆ.

೩.೫.೪. ಬೆಳದಡಿಯ ಬೆಳಕಿನಕಿರಣ ಶ್ರೀ ಬ್ರಹ್ಮಾನಂದ ಚರಿತಂ

ಶ್ರೀ ವಾಸುದೇವ ಹೂಲಿ, ಸಾ॥ ಕಣವಿ, ಜಿಲ್ಲಾ ಗದಗ. ಇವರು ಭಾಮಿನಿ ಷಟ್ಪದಿಯಲ್ಲಿ ರಚಿಸಿದ 'ಶ್ರೀ ಬ್ರಹ್ಮಾನಂದ ಚರಿತಂ' ಕಾವ್ಯವು ೧೩೧೩ ಪದ್ಯಗಳನ್ನು ಒಳಗೊಂಡಿದ್ದು, ೨೬ ಅಧ್ಯಾಯಗಳ ವಿಸ್ತಾರವನ್ನು ಹೊಂದಿರುವ ಸಂಗತಿ ಈ ಕಾವ್ಯದ ವಿಶೇಷತೆಯಾಗಿದೆ. ಪರಮ ಪೂಜ್ಯರ ಕಥೆಯನ್ನು ಈ ಕಾವ್ಯದಲ್ಲಿ ಸರಳ ಭಾಷೆಯಲ್ಲಿ ಅರ್ಥವಾಗುವಂತೆ ವಿಷಯವನ್ನು ನಿರೂಪಿಸುವಲ್ಲಿ ಕವಿಗಳು ಯಶಸ್ವಿಯಾಗಿದ್ದಾರೆ. ಆಧುನಿಕ ಯುಗದಲ್ಲಿ ಪ್ರಾಚೀನ ಕಾವ್ಯ ಪರಂಪರೆಯನ್ನು ಉಳಿಸಕೊಂಡು ಬಂದಿರುವ ಈ ಷಟ್ಪದಿ ಕಾವ್ಯವು ಚಿರಸ್ಮರಣೀಯವಾದುದು.

ಶ್ರೀಯುತ ಹೂಲಿಯವರ ಮೇಲೆ ಕವಿ ಕುಮಾರವ್ಯಾಸ, ಮತ್ತು ಚಾಮರಸರ ಪ್ರಭಾವ ಗಾಢವಾಗಿದ್ದು ಎದ್ದು ಕಾಣುತ್ತದೆ. ಕುಮಾರವ್ಯಾಸ ಕವಿ ತನ್ನ ಕಾವ್ಯದಲ್ಲಿ ತನ್ನ ಆರಾಧ್ಯ ದೈವವನ್ನು ಸುತ್ತಿಮಾಡಿದಂತೆ ಇದರಲ್ಲಿ ತಿರುಮಲೇಶನ ಮತ್ತು ಶಿವನ ಸ್ತುತಿಗಳನ್ನು ಮಾಡಿದ್ದಾರೆ.

ಶರಣರೆಲ್ಲರು ಉದಿಸಿ ವಚನದಿ
ಧರೆಯ ಪೊರೆಯುತ ನನ್ನಿ ನುಡಿಯಲಿ
ಪರಮ ಸಾಹಿತ್ಯವನು ರಚಿಸಿದ ಶರಣ ಸಂತತಿಗೆ ॥
ಕರವ ಮುಗಿಯುತ ವರವ ಬೇಡುವೆ
ಮರುಳ ಶಂಕರ ಅಲ್ಲಮಪ್ರಭು
ಚರಣದಲ್ಲಿಯೆ ಲಕ್ಷ್ಯವಿರಿಸುತ ಕಾವ್ಯ ರಚಿಸುವೆನು ॥

(ಪುಟ : ೦೪, ಪದ್ಯ : ೧೯)

ಎಂದು ಶರಣರಿಗೆಲ್ಲರಿಗೂ ನಮಿಸುತ, ವಾಗ್ದೇವಿಯಾದ ಸರಸ್ವತಿ ಶ್ರೀ ಗಣನಾಥನ ಸುತ್ತಿಗಳು ಕೂಡಾ ಪ್ರಸ್ತುತವಾಗಿವೆ. ಈ ಲೋಕದಲ್ಲಿ ಮಾನವ ಸುಖವಾಗಿರಲು ಭಗವಂತನ ನಾಮ ಸ್ಮರಣೆ ಅತ್ಯಂತ ಪ್ರಮುಖವಾದದು. ಅದರಂತೆ ಈ ಪುರಾಣ ಕಾವ್ಯದಲ್ಲಿ ಶ್ರೀ ಬ್ರಹ್ಮಾನಂದರ ಸ್ಮರಣೆ ಮಾಡಿದರೆ ದುಃಖದಿಂದ ದೂರಾಗಬಹುದು ಎಂಬುದನ್ನು ತಿಳಿಸುವ ಬ್ರಹ್ಮಾನಂದರ ಜೀವನ, ತತ್ವ ಬೋಧನೆಯು ಕಥನ ಶೈಲಿಯ ಮೂಲಕ ಕಾವ್ಯದಲ್ಲಿ ಅದ್ಭುತವಾಗಿ ಮೂಡಿಬಂದಿದೆ.

ಶ್ರೀ ಬ್ರಹ್ಮಾನಂದ ಚರಿತೆಯ ಮತ್ತೊಂದು ವಿಶೇಷವೇನೆಂದರೆ ಈ ಪುರಾಣ ಕೃತಿಯು ೨೬ ಅಧ್ಯಾಯಗಳಿಂದ ಕೂಡಿದ ಬೃಹತ್ ಗ್ರಂಥವಾಗಿದೆ. ಒಟ್ಟು ೧೩೧೩ ಪದ್ಯಗಳನ್ನು ಒಳಗೊಂಡಿದೆ. ಸಾಮಾನ್ಯವಾಗಿ ಪುರಾಣ ಕಾವ್ಯಗಳು ೧೮ ಅಧ್ಯಾಯಗಳನ್ನೊಳಗೊಂಡಿರುತ್ತವೆ. ಆದರೆ ಈ ಪುರಾಣ ಭಿನ್ನವಾಗಿದೆ. ಪ್ರಸ್ತುತ ಅಧ್ಯಾಯಗಳ ಮೊದಲಲ್ಲಿ ಬ್ರಹ್ಮಾನಂದರ ಜನನದ ಮಹತ್ವವನ್ನು ಕುರಿತು ಕವಿ ಹೀಗೆ ಹೇಳಿದ್ದಾರೆ.

ಧರೆಯ ಧರ್ಮವ ಪೊರೆದು ಭಕ್ತಿಯ
ಹಿರಿಮೆ ಬೆಳಸಲು ಹರಿಯು ಜಗದಲಿ
ನರರ ರೂಪದಿ ಧರೆಗೆ ಬಂದನು ಚರಿತೆ ನಾಯಕನು ॥

(ಪುಟ : ೦೮, ಸೂಚನೆ ಪದ್ಯ)

ಎಂದು ಜನನದ ಕುರಿತು ೧ನೇ ಅಧ್ಯಾಯದ ಪ್ರಾರಂಭದಲ್ಲಿ ಹೇಳುತ್ತಾರೆ. ಇದರ ಜೊತೆಗೆ ಅವರ ಅವತಾರದ ಧಾರ್ಮಿಕ ಹಿನ್ನೆಲೆಯನ್ನು ಕುರಿತು ಸ್ಪಷ್ಟವಾದ ಮಾಹಿತಿಯನ್ನು ನೀಡಿದ್ದಾರೆ. ಎರಡನೆಯ ಅಧ್ಯಾಯದಲ್ಲಿ ವಿದ್ಯಾಭ್ಯಾಸ, ಉಪಯನ ಕುರಿತು ವರ್ಣನೆ ನೀಡಿದ್ದಾರೆ. ಮುಂದಿನ ಅಧ್ಯಾಯಗಳಲ್ಲಿ ಧಾರ್ಮಿಕ ಸಂಸ್ಕಾರ ಹಾಗೂ ಸಾಮಾಜಿಕ ನೀತಿ ನಿಯಮಗಳು, ಕಟ್ಟುಪಾಡುಗಳನ್ನು ಕುರಿತು ಷಟ್ಪದಿಯಲ್ಲಿ ವರ್ಣಿಸಿದ್ದಾರೆ. ಪುರಾಣದ ಕಾರ್ಯಕ್ಷೇತ್ರವಾದ ವೆಂಕಟಾಪುರಕ್ಕೆ ಬಂದ ನಂತರ ಅಲ್ಲಿನ ಇತಿಹಾಸವನ್ನು ಕುರಿತು ವಿವರಿಸಿದ್ದಾರೆ. ಬ್ರಹ್ಮಾನಂದರು ಕಪ್ಪತ ಗುಡ್ಡದಲ್ಲಿ ತಪಸ್ಸನ್ನಾಚರಿಸಿ ಶಿವನ ಕರುಣೆಗೆ ಪಾತ್ರರಾದ ಸನ್ನಿವೇಶಗಳನ್ನು ಉತ್ತಮವಾಗಿ ಚಿತ್ರಿಸಿದ್ದಾರೆ.

ಶ್ರೀ ಬ್ರಹ್ಮಾನಂದರು ಕರ್ನಾಟಕಕ್ಕೆ ಬಂದ ನಂತರ ಇಲ್ಲಿ ಮಾಡಿದ ಕಾರ್ಯಗಳು ಅಗಾಧವಾದವು. ಬೆಳಧಡಿ, ಅಶ್ವತ್ಥಪುರ, ವೆಂಕಟಾಪುರಗಳಲ್ಲಿ ರಾಮದೇವರನ್ನು ಸ್ಥಾಪನೆ ಮಾಡುತ್ತಾರೆ. ನಂತರ ಅನೇಕ ಭಕ್ತಾಧಿಗಳಿಗೆ ರಾಮ ನಾಮ ಬೋಧಿಸುತ್ತಾರೆ.

ಶ್ರೀ ಬ್ರಹ್ಮಾನಂದ ಚರಿತಂ ಕಾವ್ಯದಲ್ಲಿನ ಚರಿತ್ರೆನಾಯಕರ ಜೀವನವು ಬಹು ಮಾರ್ಮಿಕವಾದದ್ದು. ಅವರ ಜೀವನ ವಿಧಾನ ಜನ ಸಾಮಾನ್ಯರಂತೆ ಇರದೆ ವಿಲಕ್ಷಣವಾಗಿದ್ದವು. ಅವರ ಗುರುಸೇವೆ ವಿದ್ಯಾರ್ಜನೆಯ ಬುದ್ದಿ, ನಾಮದಲ್ಲಿ ಭಕ್ತಿ-ಪ್ರೀತಿ ಇವು ಸಾಧಕನಿಗೆ ಸುಲಭವೆಂದು ಹೇಳಿ ಅದನ್ನು ಕ್ರಿಯೆಯಲ್ಲಿ ತಂದವರು ಶ್ರೀಬ್ರಹ್ಮಾನಂದರು.

ಶ್ರೀ ಬ್ರಹ್ಮಾನಂದರ ಸಾಮಾಜಿಕ ಸೇವೆ ಅವಿಸ್ಮರಣೀಯವಾದುದು. ಇವರು ಕೆಳವರ್ಗದವರ ಮೇಲೆ ಇಟ್ಟಿರುವ ಪ್ರೀತಿ ಅಪಾರ. ದೀನ-ದಲಿತರನ್ನು ತನ್ನವರೆಂದು ಅಪ್ಪಿಕೊಂಡು ತಮ್ಮವರನ್ನಾಗಿಸಿಕೊಳ್ಳುತ್ತಿದ್ದರು. ದಲಿತರಲ್ಲಿಯೇ ದೇವರನ್ನು ಕಂಡವರು. ಹಸಿದವರಿಗೆ ಅನ್ನ ವಸ್ತ್ರ ನೀಡುವುದು ಇವರ ಮತ್ತೊಂದು ಕಾರ್ಯ. ಇದನ್ನು ವಾಸುದೇವ ಹೂಲಿಯವರು ಹೀಗೆ ವರ್ಣಿಸುತ್ತಾರೆ.

ತೊಟ್ಟು ಕೊಳ್ಳಲು ಅಂಗಿ ಹೊದೆಯಲು
ಕೊಟ್ಟರೈ ಕಂಬಳಿಯ ಮೈಮನ
ಮುಟ್ಟಿ ಮೈದಡವುತ್ತ ಸಾಂತ್ವನ ಪೇಳಿ ಹರಿಸಿದರು ॥

ಬೆಟ್ಟದಂತಹ ದುಃಖಬಂದರು

ನೆಟ್ಟನೆ ಶ್ರೀರಾಮನಾಮವ

ದಿಟ್ಟತನದಲಿ ನುಡಿಯಿರೆನ್ನುತ ಪೇಳ್ದ ಗುರುನಾಥ ॥

(ಪುಟ : ೧೪೫, ಪದ್ಯ : ೦೬)

ಎಂದು ಮೂಲಭೂತ ಸೌಲಭ್ಯಗಳನ್ನು ನೀಡಿ ವೈಜಾರಿಕತೆಯನ್ನು ಮೆರೆದವರು. ಶ್ರೀ ಬ್ರಹ್ಮಾನಂದರು ಅನೇಕ ರೋಗ-ರುಜಿನಗಳು ಬಂದಂತಹ ಸಂದರ್ಭದಲ್ಲಿ ಅವರನ್ನು ಸಂತೈಸುವುದು, ಪ್ಲೇಗು ಬೇನೆಯ ಸಂದರ್ಭದಲ್ಲಿ ಭಕ್ತರನ್ನು ಸಂತೈಸಿದ್ದು, ಇಡೀ ದೇಶದಲ್ಲಿ ಸಂಚರಿಸಿ ದಾಸತತ್ವದ ಗುಣಗಳನ್ನು ಭಕ್ತರಲ್ಲಿ ಬಿಂಬಿಸಿ ಅವರ ಮನದ ಕ್ಲೇಶವನ್ನು ಕಳೆದಂತವರು ಎಂದು ವಾಸುದೇವ ಹೂಲಿಯವರು ವರ್ಣಿಸುತ್ತಾರೆ.

ಶ್ರೀ ವಾಸುದೇವ ಹೂಲಿಯವರು ಪ್ರತಿಯೊಂದು ಅಧ್ಯಾಯದಲ್ಲಿ ರಾಮ ನಾಮವನ್ನು ನೆನೆದಿದ್ದಾರೆ. ಇಲ್ಲಿನ ಭಕ್ತರಿಗೆ 'ಶ್ರೀ ರಾಮನಾಮದ ಜಪ ಅಂದರೆ, ಶ್ರೀರಾಮ ತಾರಕ ಮಂತ್ರ'. ಅದನ್ನು ಜಪಿಸಿದ್ದಲ್ಲದೆ ಬ್ರಹ್ಮಾನಂದರು ತೇರಾಕೋಟಿ ರಾಮ ಜಪದ ಯಜ್ಞಗಳನ್ನು ನೆರವೇರಿಸಿದ ಮಹಾತ್ಮರು. ಶ್ರೀಯುತರು ಕಾವ್ಯದಲ್ಲಿ ಅನೇಕ ಉಪಮೇಯಗಳನ್ನು ನೀಡಿ ಗುರುವಿಗೆ ಶೋಭೆಯನ್ನು ಕಾವ್ಯದಲ್ಲಿ ನೀಡಿದ್ದಾರೆ. ಈ ಕಾವ್ಯದಲ್ಲಿ ಆದಿ ಪ್ರಾಸ ಹಾಗೂ ಅಂತ್ಯ ಪ್ರಾಸಗಳನ್ನು ಯಥೇಚ್ಛವಾಗಿ ಬಳಸಿದ್ದಾರೆ. ವಾಸುದೇವ ಹೂಲಿಯವರು ಶಬ್ದಗಳೊಂದಿಗೆ ಲಾಲಿತ್ಯವನ್ನು ಹಾಡಿದ್ದಾರೆ.

ಪ್ರಸ್ತುತ ಕಾವ್ಯದ ಕೊನೆಯಲ್ಲಿ ಪುರಾಣದ ಫಲ ಶೃತಿಯನ್ನು ಕವಿಗಳು ನೀಡಿದ್ದಾರೆ. ಪುರಾಣವನ್ನು ಕೇಳಿದವರಿಗೆ ಹಾಗೂ ಓದಿದವರಿಗೆ ಧರೆಯ ಪುಣ್ಯಫಲ, ಗುರುವಿನ ಆಶೀರ್ವಾದ, ಪರಮಾತ್ಮನ ಶ್ರೀರಕ್ಷೆ, ಸಾಧು ಸಂತರ ಸೇವೆಯ ಫಲ, ವೇದ-ಪುರಾಣದ ಫಲ ಇವುಗಳು ದೊರೆಯುತ್ತವೆ ಎಂದು ಹೀಗೆ ವರ್ಣಿಸುತ್ತಾರೆ.

ವೇದ ಪಾರಾಯಣದ ಫಲವಿದೆ

ಸಾಧು ಸಂತರ ಸೇವೆ ಫಲವಿದೆ

ಐದೆ ತನವಿದೆ ಸತಿಗೆ ಭಕ್ತಗೆ ಮೋಕ್ಷ ದೊರೆಯುವುದು ।

ಓದೆನಿಷ್ಕಾಮದಲಿ ತತ್ವದ

ಹಾದಿ ತೋರುವ ಬ್ರಹ್ಮಾನಂದರು

ಮೋದದಿಂದಲಿ ಎತ್ತಿ ಹರಸುವ ದಿದುವೆ ಸತ್ಯಂದ ॥

(ಪುಟ : ೨೮೦, ಪದ್ಯ : ೬೦)

ಎಂದು ಹೇಳಿ ಪುರಾಣ ವಾಚಕರಿಗೆ ಭಕ್ತಿ ಹಾಗೂ ಗೌರವವನ್ನು ಈ ಕಾವ್ಯದಲ್ಲಿ ತುಂಬಿದ್ದಾರೆ.

೩.೫.೫. ಶ್ರೀ ಮೈಲಾರ ಲಿಂಗ ಮಹಿಮೆ

ಪಂಡಿತ ವಾಸುದೇವ ಅವರು ಶ್ರೀ ಮೈಲಾರ ಲಿಂಗ ಮಹಿಮೆ ಎಂಬ ಭಕ್ತಿ ಕೃತಿಯನ್ನು ಭಾಮಿನಿ ಷಟ್ಪದಿಯಲ್ಲಿ ಬರೆದಿದ್ದಾರೆ. ಈ ಕಾವ್ಯಕೃತಿಯನ್ನು ಒಟ್ಟು ೧೮ ಅಧ್ಯಾಯಗಳಲ್ಲಿ ೫೩೦ ಪದ್ಯಗಳಲ್ಲಿ ರಚಿಸಿದ್ದಾರೆ. ಕಾವ್ಯ ಪರಂಪರೆಯ ಚೌಕಟ್ಟಿನಲ್ಲಿ ತಮ್ಮದೇ ಆದ ವಿಶಿಷ್ಟಪೂರ್ಣ ಶೈಲಿಯಲ್ಲಿ ಶ್ರೀ ಮೈಲಾರ ಲಿಂಗ ಮಹಿಮೆಯನ್ನು ವಿವರಿಸಿದ್ದಾರೆ.

ಶ್ರೀ ವಾಸುದೇವ ಹೂಲಿಯವರು ಈ ಕೃತಿಯಲ್ಲಿ ಅನೇಕ ಸಾಮಾಜಿಕ, ಧಾರ್ಮಿಕ ಹಾಗೂ ವಿವೇಚನ ಪರ ಮಾತುಗಳನ್ನು ಹೇಳಿದ್ದಾರೆ. ಜೊತೆಗೆ ಪೀಠಿಕಾಧ್ಯಾಯದಲ್ಲಿ ಕನ್ನಡ ಪ್ರೇಮವನ್ನು ಹೇಳಿ ಕನ್ನಡಕ್ಕೆ ಕೀರೀಟವನ್ನು ತೊಡಸಿದ್ದಾರೆ. ಶ್ರೀಯುತರು ಕನ್ನಡ ಪ್ರೇಮ ಮತ್ತು ಭಕ್ತಿಯನ್ನು ಕುರಿತು ಪೀಠಿಕಾಧ್ಯಾಯದಲ್ಲಿ ಹೀಗೆ ಹೇಳಿಕೊಂಡಿದ್ದಾರೆ.

ಕನ್ನಡವೇ ಮಮ ಜನನಿ ಜನಕರು
ಕನ್ನಡವೇ ಮಮ ದೇವ ದೇವತೆ
ಕನ್ನಡವೇ ಮಮ ರಾಜ್ಯ ಭಾಷೆಯ ಎನ್ನ ಪ್ರಾಣವದು ।
ಕನ್ನಡವೇ ಮಮ ಜನ್ಮ ಭೂಮಿಯು
ಕನ್ನಡವೇ ಮಮ ರಕ್ತ ಮಿಡಿತವು
ಕನ್ನಡದಿ ಕಿರಿ ಕಾವ್ಯ ರಚಿಸುವೆ ಹರಸು ಕನ್ನಡತಿ ॥

(ಪುಟ : ೦೫, ಪದ್ಯ : ೧೯)

ಎಂದು ಕನ್ನಡದ ಪ್ರೇಮವನ್ನು ಷಟ್ಪದಿಯಲ್ಲಿ ತೋರಿದ್ದಾರೆ. ಒಂದು ಪುರಾಣ ಕಾವ್ಯದಲ್ಲಿ ಇಂಥಹ ಕನ್ನಡ ಪ್ರೇಮವನ್ನಿಟ್ಟುಕೊಂಡಿರುವುದು ನಿಜಕ್ಕೂ ಶ್ಲಾಘನೀಯ.

'ಶ್ರೀ ಮೈಲಾರ ಲಿಂಗ ಮಹಿಮೆ'ಯು ಒಂದು ಭಕ್ತಿರಸವನ್ನು ಹೊರ ಸೂಸುವಂತ ಕಾವ್ಯ. 'ಮಣಿಕ' 'ಮಲ್ಲಾಸುರ'ರು ಎನ್ನುವ ರಾಕ್ಷಸರು ಸಹೋದರರಾಗಿದ್ದು, ಸಾವಿಲ್ಲದ ವರವನ್ನು ಕೇಳುವದಕ್ಕಾಗಿ ಬ್ರಹ್ಮನನ್ನು ಕುರಿತು ತಪವನ್ನು ಆಚರಿಸುತ್ತಾರೆ. ತಮ್ಮ ಸಂಕಲ್ಪ ಸಿದ್ಧಿಗಾಗಿ ಅವರು ಆಚರಿಸಿದ ತಪಸ್ಸಿನ ರೀತಿಯನ್ನು ಕವಿಗಳು ಅನೇಕ ವಿಧವಾಗಿ ವರ್ಣಿಸಿದ್ದಾರೆ. ರಾಕ್ಷಸರು ತಪಸ್ಸಿಗೆ ತೆರಳಿದ ಸಂದರ್ಭವನ್ನು ಪಂ. ವಾಸುದೇವ ಹೂಲಿಯವರು ತುಂಬ ಸ್ವಾರಸ್ಯಕರವಾಗಿ ವರ್ಣಿಸಿದ್ದಾರೆ.

ಪೊಡವಿ ನಡುಗಿತು ಗಗನ ಮಿಂಚಿತು
ಸಿಡಿಲು ಅಬ್ಬರಿಸಿತ್ತು ಗ್ರಹಗಳು
ಬಡಿದು ಭೂವಿಗೆ ಅಪ್ಪಳಿಸಿ ಬಿದ್ದವು ಪ್ರತಿಮ ಚಲಿಸಿದವು ।

ಕಡಲು ಉಕ್ಕಿತು ಗಿರಿಯು ಶಿಖರವು

ಹುಡಿಯ ತೆರದಲಿ ಹಾರತೊಡಗಿತು

ಮೃಡನು ಬೆಚ್ಚಿದ ಹರಿಯು ಅವಚಿಂದ ಲಕುಮಿ ಹೃದಯವನು ॥

(ಕೆ. ವಿ. ಬಾಳಿಕಾಯಿ, ಮುನ್ನುಡಿ ಪುಟ : iv)

ಎಂದು ಈ ಸಂದರ್ಭವನ್ನು ವಿವರಿಸಿದ್ದಾರೆ. ಶ್ರೀಯುತರು ಒಂದೊಂದು ಪ್ರಸಂಗವನ್ನು ಒಂದೊಂದು ರೀತಿಯಲ್ಲಿ ವರ್ಣಿಸಿ ಕಾವ್ಯಕ್ಕೆ ಶೋಭೆಯನ್ನು ತಂದಿದ್ದು, ವರ್ಣನೆಯಲ್ಲಿ ನಾವೀನ್ಯತೆಯನ್ನು ಮೆರೆದಿದ್ದಾರೆ.

ಶ್ರೀ ಮೈಲಾರಲಿಂಗ ಮಹಿಮೆಯಲ್ಲಿ ಖಡ್ಗದಂಷ್ಟ್ರ ಹಾಗೂ ಕುಮಾರಸ್ವಾಮಿಯವರ ಯುದ್ಧದ ವರ್ಣನೆಯು ಅತ್ಯಂತ ಹೃದಯಂಗಮವಾಗಿ ಚಿತ್ರಿತವಾಗಿದೆ. ಇಡೀ ಕಾವ್ಯದಲ್ಲಿ ಬರುವ ಪರಸ್ಪರ ಮೂದಲಿಕೆಯ ಮಾತುಗಳು ರೋಚಕವಾಗಿವೆ. ಈ ಪ್ರಸಂಗಗಳನ್ನು ಓದುವಾಗ ಕುಮಾರವ್ಯಾಸನ ಮಹಾಭಾರತ, ರಾಮಯಣ ಹಾಗೂ ದೇವಿ ಪುರಾಣದಲ್ಲಿ ಬರುವ ಯುದ್ಧದ ಸನ್ನಿವೇಶ ಹಾಗೂ ಅದರ ವರ್ಣನೆಗಳು ನೆನಪಾಗುತ್ತವೆ. ಪ್ರಸ್ತುತ ಕಾವ್ಯದಲ್ಲಿ ವೀರರಸ ಪ್ರಧಾನವಾಗಿದೆ. ಇಲ್ಲಿ ವೈಕುಂಠ. ಕೈಲಾಸದ ವರ್ಣನೆಗಳು ಹೊಚ್ಚ ಹೊಸ ರೀತಿಯಲ್ಲಿ ಮೂಡಿ ಬಂದಿವೆ. ಈ ಸನ್ನಿವೇಶಗಳು ಕಾವ್ಯಕ್ಕೆ ಸೊಗಸನ್ನುಂಟು ಮಾಡಿವೆ. ಈ ಪುರಾಣವು ಭಕ್ತಿ ಪಂಥದೆಡೆಗೆ ಕೊಂಡೊಯ್ಯುವಲ್ಲಿ ತುಂಬಾ ಹಿರಿಮೆ ಸಾಧಿಸಿದೆ. ಶ್ರೀ ವಾಸುದೇವ ಹೂಲಿಯವರು ಈ ಕಾವ್ಯದಲ್ಲಿ ದ್ವೈತ, ಅದ್ವೈತ ಹಾಗೂ ವಿಶಿಷ್ಠಾದ್ವೈತ ಸಿದ್ಧಾಂತಗಳನ್ನೆಲ್ಲ ಮೈಗೂಡಿಸಿಕೊಂಡು ಆಧ್ಯಾತ್ಮಿಕ ಹಿನ್ನೆಲೆಯಿಂದ ರಚಿಸಿದ ಕಾವ್ಯ ತುಂಬಾ ಅರ್ಥ ಪೂರ್ಣವಾಗಿ ಮೂಡಿ ಬಂದಿದೆ.

ಶ್ರೀಯುತರ ಈ ಕಾವ್ಯದ ಇನ್ನೊಂದು ವಿಶೇಷವೇನೆಂದರೆ ಓದುಗರಿಗೆ ಅನುಕೂಲವಾಗುವಂತೆ ಪ್ರತಿಯೊಂದು ಅಧ್ಯಾಯದಲ್ಲಿ ಹಾಗೂ ಪ್ರತಿಯೊಂದು ಪದ್ಯದಲ್ಲಿ ಬರುವ ಕ್ಲಿಷ್ಟ ಪದಗಳನ್ನು ಅರ್ಥ ಸಹಿತವಾಗಿ ನೀಡಿದ್ದಾರೆ. ಇದರಿಂದ ಸರಳವಾಗಿ ಕಾವ್ಯವನ್ನು ಓದಿ ಅರ್ಥ ಮಾಡಕೊಳ್ಳಬಹುದು.

ಪ್ರಸ್ತುತ ಪುರಾಣದಲ್ಲಿ ಅನೇಕ ಪ್ರಸಂಗಗಳನ್ನು ಕಣ್ಣಿಗೆ ಕಟ್ಟುವಂತೆ ಕವಿಗಳು ಹೆಣೆದಿದ್ದಾರೆ. ಯುದ್ಧ ರಂಗ ಭೂಮಿಯ ವರ್ಣನೆ, ದೇವಾನು-ದೇವತೆಗಳ ಜಯಕಾರ, ಬ್ರಹ್ಮ-ವಿಷ್ಣು-ಶಿವನ ಆಶೀರ್ವಾದದ ಜಯ ಜಯಕಾರ, ಸಪ್ತರ್ಷಿಗಳಯಾಗ ಹಾಗೂ ಋಷಿಗಳು ಹೇಳಿದ ಗೋಳಿನ ಕಥೆ, ದೈತ್ಯರಾಕ್ಷಸರು ಯುದ್ದ ಭೂಮಿಯಲ್ಲಿ ಹೋರಾಡಿ ಸೋತ ಸನ್ನಿವೇಶ, ಮಣಿಕ-ಮಲ್ಲಾಸುರರ ಯುದ್ಧದ ಪ್ರಸಂಗ ಹೀಗೆ ಹಲವು ಸನ್ನಿವೇಶಗಳು ಈ ಪುರಾಣದಲ್ಲಿ ಮೂಡಿಬಂದಿವೆ.

ಶ್ರೀ ಮೈಲಾರಲಿಂಗನ ಮಹಿಮೆಯೆನ್ನು ಈ ಪುರಾಣದಲ್ಲಿ ಸನತ್ಕುಮಾರ ಋಷಿಗಳು ಬಡತನದಿಂದ ಬವಣೆ ಪಡುವ ಋಷಿಗಳಿಗೆ ಪಾವನ ಮಾಡುವ, ಕಲಿ ದೋಷ ನಿವಾರಣೆ ಮಾಡುವ ಸಲುವಾಗಿ ಮೈಲಾರಲಿಂಗನ ಕಥೆಯನ್ನು ಹೇಳುತ್ತಾರೆ. ಇಲ್ಲಿ ಮೈಲಾರಲಿಂಗ ಎಂದರೆ ಸಾಕ್ಷತ್ ಶಿವನ ಸ್ವರೂಪವೇ ಆಗಿದ್ದಾನೆ. ಈ ಕಾವ್ಯದಲ್ಲಿ ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿ ವಾಸುದೇವ ಹೂಲಿಯವರು ತಮ್ಮ ಕಾವ್ಯನಾಮ ವೆಂಬಂತೆ ಈ ಕೆಳಗಿನಂತೆ ಬರೆಯುತ್ತಾರೆ.

ಇತಿಶ್ರೀ ಪರಮಹಂಸ ಪೂರ್ಣಪ್ರಜ್ಞ ಶ್ರೀಮದ್ ದ್ವೈತ
ಸಿಂಹಾಸನಾಧೀಶ್ವರ ಶ್ರೀಶ್ರೀ ಸತ್ಯಾತ್ಮ ತೀರ್ಥ
ಪದಾಬ್ಜ ಭೃಂಗ ವಾಸುದೇವಾಖ್ಯ
ವಿರಚಿತ ಶ್ರೀ ಮೈಲಾರಲಿಂಗ
ಚರಿತಂ ಕಾವ್ಯದಲ್ಲಿ
ಅಧ್ಯಾಯ ೧೮
ಪದಗಳು ೨೧ ಒಟ್ಟು ೫೩೦ಕ್ಕೆ ಮಂಗಳಂ ॥
ಶ್ರೀ ಶ್ರೀ ಶ್ರೀ ಶ್ರೀ ಶ್ರೀ

(ಪುಟ : ೧೪೧, ಪದ್ಯ : ೨೧)

◆◆◆

೩.೬ ಪಂ. ಸೋಮಶೇಖರ ಶಾಸ್ತ್ರಿಗಳು ಪುರಾಣಿಕಮಠ ಅವರ ಪುರಾಣ ಕಾವ್ಯಗಳು

* ಕವಿ
* ಕಾವ್ಯಗಳು
    ೧. ಶ್ರೀ ಸುಕ್ಷೇತ್ರ ಘತ್ತರಗಿಯ ಭಾಗ್ಯವಂತಿ ಪುರಾಣ.
    ೨. ಶ್ರೀ ಸದಾಶಿವ ಲೀಲೆ ಪುರಾಣಕಾವ್ಯಂ.

ಕವಿ :

ಪಂ. ಸೋಮಶೇಖರ ಶಾಸ್ತ್ರಿಗಳು ಪುರಾಣಿಕಮಠ ಇವರು ಬಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ 'ಹಿರೇರೂಗಿ' ಗ್ರಾಮದವರು. ಇವರದು ಪುರಾಣ ಪ್ರವಚನ ಮಾಡುವ ಹಾಗೂ ಸಾಹಿತ್ಯಿಕ ಪರಂಪರೆಯುಳ್ಳ ಮನೆತನ. ತಾತ ರುದ್ರಯ್ಯನವರು ಪುರಾಣಿಕರಾದ್ದರಿಂದ ಮನೆತನದ ಮೂಲ ಹೆಸರಾದ ಸ್ಥಾವರ ಮಠಕ್ಕೆ ಬದಲಾಗಿ ಪುರಾಣಿಕ ಮಠ ಎಂದೇ ರೂಢಿಯಾಗಿ ಅದೇ ಹಸರಿನಿಂದ ಗುರುತಿಸಲ್ಪಟ್ಟ ಶ್ರೀಯುತರು ದಿನಾಂಕ ೦೧-೦೬-೧೯೪೩ರಲ್ಲಿ 'ವೀರಭದ್ರಯ್ಯ' ಮತ್ತು 'ಕಲಾವತಿ' ದಂಪತಿಗಳ ಎರಡನೆ ಮಗನಾಗಿ ಜನಿಸಿದರು.

ತಂದೆ ವೀರಭದ್ರಯ್ಯನವರು ಶಿವಯೋಗ ಮಂದಿರದ ಆಶ್ರಮವು ಬಡವರಿಗೆ ಉಚಿತವಾಗಿ ಊಟ ವಸತಿ ಹಾಗೂ ವಿದ್ಯೆಯನ್ನು ಕಲಿಸುವ ಯೋಗ್ಯ ಆಶ್ರಮವೆಂದು ತಿಳಿದು ಇವರನ್ನು ವಟುವಾಗಿ ಸೇರಿಸಿದರು. ವಟುವಾಗಿ ಸೇರಿದ ಶಾಸ್ತ್ರಿಗಳು ೧೨ ವರ್ಷಗಳ ಕಾಲ ಆಶ್ರಮದಲ್ಲಿದ್ದು ಸಂಸ್ಕೃತ, ಮರಾಠಿ, ಹಿಂದಿ ಹಾಗೂ ಕನ್ನಡ ಭಾಷೆಗಳನ್ನು ಅಧ್ಯಯನ ಮಾಡಿದರು. ಹಾನಗಲ್ಲದ ಸದಾಶಿವ ಸ್ವಾಮಿಗಳು ಇವರ ವಿದ್ಯಾಗುರುಗಳಾಗಿದ್ದರು. ನಂತರ ನಾಲ್ಕು ವರ್ಷ ಕಾಶಿಯ ಬನಾರಸ ಹಿಂದೂ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗ ಮಾಡಿ ಸಂಸ್ಕೃತದಲ್ಲಿ ಎಂ.ಎ. ಪದವಿ ಪಡೆದರು.

ಸಂಸ್ಕೃತ ಕಾವ್ಯಗಳ ಓದು, ನಿರಂತರ ಅಧ್ಯಯನ ಕಾರಣವಾಗಿ ಪದ ಪದ್ಯಗಳನ್ನು ಬರೆದು ಹಾಡುತ್ತಿದ್ದ ಇವರು ಪುರಾಣ ಪ್ರವಚನ ಕಲೆಯನ್ನು ವೃತ್ತಿಯನ್ನಾಗಿ ಮಾಡಿಕೊಂಡವರು. ಆನುವಂಶಿಕವಾಗಿ ಬಂದ ಸಾಹಿತ್ಯಿಕ ಪರಂಪರೆಯ ಪ್ರಭಾವವು ಇವರನ್ನು ಕವಿಯನ್ನಾಗಿಸಿತು. ಕವಿ ಮನಸ್ಸನ್ನು ಹೊಂದಿದ ಇವರು 'ಹಾನಗಲ್ಲ ಶ್ರೀ ಸದಾಶಿವ ಲೀಲೆ ಪುರಾಣಕಾವ್ಯಂ' ಹಾಗೂ ಸುಕ್ಷೇತ್ರ 'ಘತ್ತರಗಿಯ ಶ್ರೀ ಭಾಗ್ಯವಂತಿ ಪುರಾಣ ಕಾವ್ಯ' ಎಂಬೆರಡು ಪುರಾಣ ಕಾವ್ಯಗಳನ್ನು ಬರೆದರು.

ಪುರಾಣ ಕಾವ್ಯಗಳಲ್ಲದೆ 'ಜಾನಪದ ತ್ರಿಪದಿಗಳು' ಎಂಬ ಕವನ ಸಂಕಲನವನ್ನು ಪ್ರಕಟ ಮಾಡಿದ್ದಾರೆ. ಅಧ್ಯಾತ್ಮಿಕ ವಿಷಯ ಕುರಿತಂತೆ ಬರೆದ ಹಲವಾರು ಲೇಖನಗಳು, ಹಾಸ್ಯ ಕಥೆಗಳು, ನೀತಿ ಕಥೆಗಳು, ಚುಟುಕುಗಳು ದೈನಿಕ, ಮಾಸಿಕ, ತ್ರೈಮಾಸಿಕ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ವೀರಶೈವ ಸಿದ್ಧಾಂತಗಳಿಗೆ ಸಂಬಂಧಿಸಿದಂತೆ. '೨೧೬ ಸಂಖ್ಯಾವಿಶಿಷ್ಠ ಪದ'ಗಳನ್ನು ಸಂಗ್ರಹಿಸಿದ್ದು, ಅಪ್ರಕಟಿತವಿದೆ. ಇಂದಿಗೂ ಬರವಣಿಗೆಯನ್ನು ಮುಂದುವರಿಸಿದ್ದಾರೆ.

೩.೬.೧. ಶ್ರೀ ಸುಕ್ಷೇತ್ರ ಘತ್ತರಗಿಯ ಭಾಗ್ಯವಂತಿ ಪುರಾಣ

ಪಂ. ಶ್ರೀ ಸೋಮಶೇಖರ ಶಾಸ್ತ್ರಿಗಳು ಪುರಾಣಿಕಮಠ ಇವರು 'ಸೋಮಭದ್ರ' ಎಂಬ ಕಾವ್ಯನಾಮದಿಂದ ಕಾವ್ಯವನ್ನು ರಚಿಸಿದ್ದಾರೆ. ಪ್ರಸ್ತುತ ಕಾವ್ಯವನ್ನು ಭಾಮಿನಿ ಷಟ್ಪದಿಯ ಛಂದಿಸ್ಸಿನಲ್ಲಿ ಸುಂದರವಾಗಿ ಹೆಣೆದಿದ್ದಾರೆ. ಪ್ರತಿಯೊಂದು ಅಧ್ಯಾಯಗಳಿಗೆ ಗತಿ ಎಂದು ಕರೆದಿದ್ದಾರೆ. ೨೫ ಗತಿಗಳಲ್ಲಿ ೧೧೧೧ ಪದ್ಯಗಳಲ್ಲಿ ಇದನ್ನು ಪೂರ್ಣಗೊಳಿಸಿರುವುದಾಗಿ ಗ್ರಂಥಕರ್ತರೆ ಹೇಳಿದ್ದಾರೆ.

ಶ್ರೀ ಭಾಗ್ಯವಂತಿಯ ಚರಿತ್ರೆಯನ್ನು ಅನೇಕ ಪ್ರಾಚೀನ ಪುರಾವೆಗಳ ಸಂಶೋಧನೆಯನ್ನು ಮಾಡಿ ಶಾಸ್ತ್ರಾಧಾರಗಳ ಮೂಲಕ ರಚಿಸಿದ್ದರಿಂದ, ಈ ಕಾವ್ಯವು ಘತ್ತರಗಿ ಕ್ಷೇತ್ರ ಒಡತಿಯಾದ ಶ್ರೀ ಭಾಗ್ಯವಂತಿಯ ಐತಿಹಾಸಿಕ ದಾಖಲೆಗಳನ್ನು ಕ್ರೋಢೀಕರಿಸಿದ ಒಂದು ಉತ್ತಮ ಪ್ರಾಮಾಣಿಕ ಪ್ರಯತ್ನವಾಗಿದ್ದು ಅವಿಸ್ಮರಣೀಯವಾಗಿದೆ.

ಪ್ರಾರಂಭದಲ್ಲಿ ಕಾವ್ಯ ರಚಿಸಲು ಶ್ರೀ ಭ್ಯಾವಂತಿಯೇ ನನಗೆ ಆಶೀರ್ವದಿಸಿದಳು ಎಂದು ಹೇಳಿಕೊಳ್ಳುತ್ತಾ, ತಮ್ಮ ಕುಲಗುರುಗಳನ್ನು ದೇವಾನುದೇವತೆಗಳನ್ನು ಪ್ರಾರಂಭಿಕ ಮಂಗಲಾಚರಣದ ಗತಿಯಲ್ಲಿ ನೆನೆದಿರುವರು. ಹಾಗೂ ಕನ್ನಡದ ಕವಿಗಳನ್ನು ಸ್ಮರಿಸುತ್ತಾ ಹೀಗೆ ಹೇಳುತ್ತಾರೆ –

ಚಾಮರಸ ಶ್ರೀ ಮಾಯಿ ದೇವರ
ಸೋಮಭೀಮರ ರಾಘವಾಂಕರ
ಪ್ರೇಮದಿಂ ವಿರುಪಾಕ್ಷ ಪಂಡಿತ ಹರಿಹರಾದಿಗಳ ।

ಆ ಮಹಾ ಕನ್ನಡದಿ ಅನುಪಮ
ಸೀಮೆಯಿಲ್ಲದೆ ರಚಿಸಿ ಕಾವ್ಯವ
ನೇಮದಿಂದಿದಿರಿಟ್ಟ ಕವಿಗಳ ನೆನೆವೆನಾದಿಯಲಿ ॥

(ಪುಟ : ೦೭, ಪದ್ಯ : ೨೮)

ಎಂದು ಷಟ್ಪದಿ ಕವಿಗಳನ್ನು ನೆನಪಿಸಿಕೊಂಡಿದ್ದಾರೆ.

ಪ್ರಸ್ತುತ ಕಾವ್ಯದಲ್ಲಿ ಕವಿ ತನ್ನನ್ನು ಸಣ್ಣವನೆಂದು ಹೇಳಿಕೊಂಡಿದ್ದಾರೆ. ನಾನು ಈ ಕಾವ್ಯವನ್ನು ಬರೆಯುವಾಗ ನಿಮ್ಮ ಮಗ, ಮೊಮ್ಮಗನೆಂದು ತಿಳಿದು ಮನ್ನಿಸಿರಿ ಎಂದು ಹೇಳುತ್ತಾ ಕೇಶಿರಾಜ ಹೇಳುವಂತೆ "ದೋಷವಿದರೊಳೇನಾದಡೆ ಇದ್ದರೆ ಪ್ರಿಯದಿಂ ತಿರ್ದುವುದು" ಎಂದು ಸೋಮಶೇಖರ ಕವಿಗಳು ಇದರಲ್ಲಿ ಏನಾದರೂ ಕಡಿಮೆ ಇದ್ದರೆ ಅದು ಉಪ್ಪು ಖಾರದಷ್ಟೇ ಎಂದು ಹೇಳಿ ಸುಧಾರಿಸಿಕೊಳ್ಳಿ ಎಂದು ಪೀಠಾಕಾಧ್ಯಾಯದಲ್ಲಿ ಹೇಳಿದ್ದಾರೆ.

ಶ್ರೀ ಭಾಗ್ಯವಂತಿಯ ಪುರಾಣದ ಮೊದಲನೆ ಗತಿಗಳಲ್ಲಿ ಭಾಗ್ಯಯವಂತಿಯ ಜನನ, ಬಾಲ್ಯ, ಆನೆಗೊಂದಿಯ ಇತಿಹಾಸ, ಪ್ರೌಢದೇವರಾಯನು ಆಳಿದ ವಿವರ, ಶ್ರೀದೇವಿಯು ಪ್ರೌಢದೇವರಾಯನ ಪದವಿ, ಅರಮನೆ ಬಿಡುವ ಪ್ರಸಂಗ ಮತ್ತು ನದಿಯಲ್ಲಿ ಹರಿದು ಬಂದು ಘತ್ತರಗಿಯಲ್ಲಿ ನೆಲೆ ನಿಂತ ಬಗೆ ಹೀಗೆ ಅನೇಕ ವೃತ್ತಾಂತಗಳನ್ನು ತರುತ್ತಾರೆ. ನಂತರದ ಗತಿಗಳಲ್ಲಿ ಪವಾಡಗಳು. ನಿಜ ಸಂಗತಿಗಳು, ನಡೆದ ಘಟನೆಗಳು ಕಥಾರೂಪದಲ್ಲಿ ವ್ಯಕ್ತವಾಗಿವೆ. ೧೧ನೇ ಗತಿಯಿಂದ ೨೦ನೇ ಗತಿಯವರೆಗೆ ಅನೇಕ ಪವಾಡಗಳು ಈ ಕೃತಿಯಲ್ಲಿ ತುಂಬಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ, ದೇವನೂರಿನ ಲಿಂಗಶೆಟ್ಟಿ ನೀಲಮ್ಮ ದಂಪತಿಗಳಿಗೆ ಸಂತಾನ ನೀಡಿದ್ದು, ಕಳ್ಳನು ಗರ್ಭಗುಡಿಯ ಬಂಗಾರ ಕದಿಯಲು ಬಂದಾಗ ಬಂಗಾರವು ಸರ್ಪವಾಗಿ ಪರಿಣಮಿಸಿದ್ದು, ಪಾಂಚಾಳ ಕುಲದ ಶಂಕರನ ತಂಗಿ ಭಾಗೀರಥಿಯ ಮದುವೆಯ ಪ್ರಸಂಗ ಬಸವಕಲ್ಯಾಣದ ಸಿದ್ದಣ್ಣ-ಶಿವಲಿಂಗಮ್ಮ ದಂಪತಿಗಳು ಮಕ್ಕಳಿಲ್ಲದೆ ಬರಡು ಜೀವನದಲ್ಲಿ ಸೊರಗಿಕೊಂಡಿರಲು ಸಂತಾನ ಫಲ ನೀಡಿದ್ದು, ಗಂಗಾಳ ಗಂಡನಾದ ಶಿವಣ್ಣನಿಗೆ ಮಲರೋಗ ಕಳೆಯುವಂತೆ ಮಾಡಿದ್ದು, ಅಫ್ಝಲಪುರದ ಬಂಡೆಪ್ಪನೆಂಬ ಸಾಹುಕಾರನ ಕುಷ್ಠರೋಗ ನಿವಾರಿಸಿದ್ದು ಹೀಗೆ ಅನೇಕ ಪವಾಡಗಳ ಮೂಲಕ ದೇವಿಯ ಇತಿಹಾಸ ಹಾಗೂ ದೈವೀ ಭಕ್ತಿಯನ್ನು ಕೃತಿಯ ಮೂಲಕ ಕವಿಗಳು ತೋರಿಸಿದ್ದಾರೆ.

ಈ ಕೃತಿಯ ವಿಶೇಷವೆಂದರೆ, ವಿಜಯನಗರದ ಪರಂಪರೆಯನ್ನು ವರ್ಣಿಸುವ ರೀತಿ ಆಕರ್ಷಣಾತ್ಮಕವಾಗಿದೆ. ಕಾವ್ಯದಲ್ಲಿ ಕಥೆಯ ನೈಜತೆ ಎದ್ದು ಕಾಣುವುದು. ಉತ್ಸುಕವಾದ ವಿಜಯ ನಗರದ ಮಾಹಿತಿಯನ್ನು ಹೇಳುವಾಗ ಇವು ಕಟ್ಟು ಕಥೆಗಳಲ್ಲ, ವಿಜಯನಗರದ ಚಾರಿತ್ರಿಕ ಇತಿಹಾಸ, ಐತಿಹಾಸಿಕ ಹಿನ್ನೆಲೆಯನ್ನು ಕುರಿತು ಹೇಳುತ್ತದೆ ಎಂಬ ಭಾವನೆ ಮೂಡುವದು. ಈ ಪರಂಪರೆಯನ್ನು ಹೇಳುವ ಬಗೆ ಸುಂದರವಾದದು –

ನೋಡ ಬನ್ನಿರಿ ಶಿಲ್ಪಕಲೆಗಳ
ನಾಡಗುಡಿ–ಗೋಪುರಗಳ್ವೈಭವ
ಕಾಡು ನಾಡಾಗಿಹುದು ಸಂಸ್ಕೃತಿ ಚಿಮ್ಮತಿಹದಿಲ್ಲಿ ।
ತೀಡಿ ತಿದ್ದಿದ ರಾಮಚರಿತೆಯ
ಮೂಡಿಸಿದ ಭಾರತವ ಶಿಲ್ಪದಿ
ಮೋಡಿ ಮಾಡುವ ಕೆತ್ತನೆಯ ಕಲೆ ನೋಡಿ ಕನ್ನಡದಿ ॥

(ಪುಟ : ೨೦, ಪದ್ಯ : ೭)

ಹೀಗೆ ಕವಿಗಳು ನಿಸರ್ಗಪ್ರಿಯರಾಗಿದ್ದು ವಿಜಯನಗರದ ಗತವೈಭವವನ್ನು ತಂದು ಎದುರಿಗೆ ನಿಲ್ಲಿಸಿದ್ದಾರೆ.

ಒಟ್ಟಾರೆ ಪ್ರಸ್ತುತ ಪುರಾಣವನ್ನು ಬಹುಸುಂದರವಾಗಿ ಹೆಣೆದಿದ್ದಾರೆ. ಪುರಾಣವು ರಸಿಕರಿಗೆ ವಾಚಿಸಲು ಸರಳವಾಗಿದೆ. ಕಾವ್ಯದಲ್ಲಿ ಪ್ರಯೋಗಗೊಂಡ ಛಂದಸ್ಸು, ಗಣ, ಯತಿ, ಅರ್ಥ, ಶಬ್ದ, ಯಾವುದನ್ನು ಕಿತ್ತು ಹಾಕುವಂತಿಲ್ಲ. ಕಾವ್ಯದ ಕೊನೆಗೆ ಸಹೃದಯಿನಿಗೆ ಪುರಾಣದ ಕಥಾಸಾರವನ್ನು ತಿಳಿಯಲು ಅನೂಕೂಲವಾಗುವಂತೆ ಕಥಾಸಾರದ ಜೊತೆಗೆ ಶಬ್ದಕೋಶವನ್ನು ನೀಡಿದ್ದಾರೆ.

೩.೬.೨. ಶ್ರೀ ಸದಾಶಿವ ಲೀಲೆ ಪುರಾಣಕಾವ್ಯಂ

ಶ್ರೀ ಸದಾಶಿವ ಲೀಲೆ ಪುರಾಣ ಕಾವ್ಯವು ೧೮ ಸಂಧಿಯಲ್ಲಿ ೭೭೦ ಭಾಮಿನಿ ಷಟ್ಪದಿಯ ಪದ್ಯಗಳನ್ನು ಒಳಗೊಂಡ ಚಾರಿತ್ರಿಕ ಪುರಾಣ ಕಾವ್ಯವಾಗಿದೆ. ಶಿವಯೋಗಮಂದಿರದ ಸಂಸ್ಥಾಪಕರಾದ ಶ್ರೀ ಹಾನಗಲ್ಲ ಮಹಾಸ್ವಾಮಿಗಳ ನಂತರ ಆರಂಭವು ಬ್ರಹ್ಮ, ವಿಷ್ಣು, ಮಹೇಶ್ವರ ಹಾಗೂ ದೇವಾನುದೇವತೆಗಳನ್ನು ಸ್ತುತಿ ಮಾಡುವುದರ ಮೂಲಕ ಕವಿ ತನ್ನ ಜನ್ಮಭೂಮಿ ಮನೆತನ ಹಿನ್ನೆಲೆ ಮತ್ತಿತರ ವಿವರಣೆಯನ್ನು ಕೊಟ್ಟು ಕಾವ್ಯದ ಆರಂಭವನ್ನು ನೀಡಿದ್ದಾರೆ.

ಚರಿತ್ರೆಯ ನಾಯಕನ ಜನನವನ್ನು ಕವಿ ಕಾವ್ಯದಲ್ಲಿ ವಿಶಿಷ್ಟವಾಗಿ ಸೆರೆಹಿಡಿದಿದ್ದಾನೆ :

ಶಾಲಿವಾಹನ ಶಕದ ಸಾವಿರ ।
ಮೇಲೆ ಸಂದಿರಲೆಂಟು ನೂರದು ।
ಮೇಲೆ ಇಪ್ಪತ್ತಾ ನ್ಲಲ್ಕು ಶುಭಕ್ರತುವೆಂಬ ವರುಷದಲಿ ॥
ಕಾಲ ಹತ್ತೊಂಬತ್ತುನೂರರ ।
ಮೇಲೆ ಎರಡದು ಕ್ರಿಸ್ತಶಕವಿರೆ ।
ಕಾಲ ಫರವರಿ ತಿಂಗಳಿಪ್ಪತ್ತೈದು ಸುದಿನಾಂಕ ॥ (ಪುಟ : ೨೨, ಪದ್ಯ : ೫೦)

ಅಂದರೆ ಕ್ರಿ.ಶ. ೧೯೦೨ನೇ ಫೆಬ್ರುವರಿ ೨೫ರಂದು 'ಗಂಗಯ್ಯ' ಮತ್ತು 'ರಾಚಮ್ಮ' ಅವರ ಉದರದಲ್ಲಿ ಹುಬ್ಬಳ್ಳಿ ತಾಲೂಕಿನ 'ಅರಳಿಕಟ್ಟಿ ಗ್ರಾಮ'ದಲ್ಲಿ ಬಾಲಸದಾಶಿವರು ಜನ್ಮತಾಳಿದರು. ಮುಂದೆ ಬಾಲ್ಯದ ಅಭ್ಯಾಸ ಅಲ್ಲಿಯೇ ನಡೆಯುತ್ತದೆ. ತದನಂತರ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಶಿವಯೋಗ ಮಂದಿರಕ್ಕೆ ಹೋಗಿ ಅಲ್ಲಿ ಉತ್ತಮ ವಿದ್ಯಾಭ್ಯಾಸವನ್ನು ಪಡೆದುಕೊಳ್ಳುತ್ತಿರುವಾಗ ಶ್ರೀಕುಮಾರ ಶಿವಯೋಗಿಗಳ ದರುಶನ ಲಭಿಸುತ್ತದೆ. ಹೀಗೆ ಆ ಗುರುವಿನ ಅನುಗ್ರಹ ಈ ಬಾಲ ಸದಾಶಿವನ ಮೇಲೆ ಉಂಟಾಗಿ ಮುಂದೆ ಶ್ರೀ ಕುಮಾರ ಶಿವಯೋಗಿಗಳ ಕಾಲವಾದ ನಂತರ ಹಾನಗಲ್ಲ ಹಾಗೂ ಶಿವಯೋಗ ಮಂದಿರದ ಧಾರ್ಮಿಕ ಅಧಿಕಾರಿಯಾಗಿ ತಮ್ಮ ಕ್ಷೇತ್ರವನ್ನು ವಿಸ್ತರಿಸಿಕೊಳ್ಳುತ್ತಾರೆ.

ಈ ಪುರಾಣ ಕಾವ್ಯವು ಎಲ್ಲ ಪುರಾಣ ಪುರುಷರಂತೆ ಕೇವಲ ವೈಭವೀಕರಣದಿಂದ ಕೂಡಿಲ್ಲ. ಇಲ್ಲಿ ಶ್ರೀಗಳ ದಿನನಿತ್ಯದ ಚಟುವಟಿಕೆ ಹಾಗೂ ಶ್ರೀಮಠದ ಕೀರ್ತಿಯನ್ನು ಹೆಚ್ಚಿಸುವುದು. ಜೊತೆಗೆ ಹೊಸಮಠಗಳ ಕಟ್ಟಡ ನಿಮಿತ್ಯ, ಪರ ಊರುಗಳಿಗೆ ಭಿಕ್ಷೆಗೆ ಹೋಗಿ ದವಸಧಾನ್ಯವನ್ನು ಮಠಕ್ಕೆ ತರುತ್ತಿರುವದರಿಂದ ಜನರಲ್ಲಿ ಶ್ರೀಗಳ ಬಗ್ಗೆ ಅಪಾರ ಅಭಿಮಾನ ಪ್ರೀತಿ ಮತ್ತು ಭಕ್ತಿಯಿತ್ತು .

ಶ್ರೀಗಳು ತಮ್ಮ ವಿದ್ಯಾಭ್ಯಾಸದಲ್ಲಿ ಪಡೆದುಕೊಂಡ ಆಧ್ಯಾತ್ಮದ ಅನುಭವ, ಲೌಕಿಕ-ಅಲೌಕಿಕ ಗ್ರಹಿಕೆ, ಗಂಭೀರ ಧಾರ್ಮಿಕ ನೀತಿ-ತತ್ವಗಳನ್ನು ಅಳವಡಿಸಿಕೊಂಡು ಭಕ್ತಜನರ ಕಷ್ಟಗಳಿಗೆ ಸ್ಪಂದಿಸುತ್ತ ಎಲ್ಲರ ಹೃದಯವನ್ನು ಗೆದ್ದವರಾಗಿದ್ದರು. ಸದಾಶಿವಸ್ವಾಮಿಗಳ ಕಾರ್ಯವೈಖರಿ ಹೇಗಿತ್ತೆಂದರೆ ಅವರ ಮುಂದಾಳತ್ವದಲ್ಲಿ ಹಮ್ಮಿಕೊಂಡ ೧೭ನೆಯ ಅಖಿಲ ಭಾರತ ವೀರಶೈವ ಮಹಾಸಭೆಯ ಸಮ್ಮೇಳನವನ್ನು ಅದ್ಧೂರಿಯಾಗಿ ಲಕ್ಷಾಂತರ ಹಣವನ್ನು ಖರ್ಚ ಮಾಡಿ, ನಾನಾ ಕಡೆಯ ಶ್ರೀಗಳನ್ನು ಆಹ್ವಾನಿಸಿ, ಹಲವಾರು ಗೋಷ್ಠಿಗಳನ್ನು ನಡೆಸುವುದರ ಮೂಲಕ ಶಿವಯೋಗ ಮಂದಿರದ ಕೀರ್ತಿಯನ್ನು ಎತ್ತಿಹಿಡಿದವರು. ಜೊತೆಗೆ ಶಿವಯೋಗ ಮಂದಿರದ ಸುವರ್ಣ ಮಹೋತ್ಸವದಲ್ಲಿ ಕೃಷಿಮೇಳ, ದನಗಳ ಜಾತ್ರೆ, ಮುಂತಾದ ಮಹತ್ವದ ಉತ್ಸವವನ್ನು ಮಾಡುತ್ತ, ನಾಡಿನ ನಾನಾ ಕಡೆ ಸಂಚರಿಸಿ, ಪ್ರವಚನ ಮಾಡುತ್ತ ಆಧ್ಯಾತ್ಮ ಸುಧೆಯನ್ನು ಭಕ್ತರಿಗೆ ಉಣಬಡಿಸಿದರು.

ಸದಾಶಿವ ಸ್ವಾಮಿಗಳೆದರು ಅನನ್ಯ ಗುರುಭಕ್ತಿ ಮತ್ತು ಕರ್ತೃತ್ವದ ಶಕ್ತಿಯನ್ನು ಯಾರು ಅಲ್ಲಗಳೆಯುವಂತಿಲ್ಲ. ತಮ್ಮ ಗುರುಗಳಾದ ಶ್ರೀಕುಮಾರ ಸ್ವಾಮಿಗಳ ಜನನಗ್ರಾಮ 'ಜೋಯಿಸರಹಳ್ಳಿ'ಯಲ್ಲಿ ಶ್ರೀಕುಮಾರ ಸ್ವಾಮಿಗಳು ಲಿಂಗೈಕ್ಯರಾದ ನಂತರ, ಅವರ ಹೆಸರಿನಲ್ಲಿ ಒಂದು ಮಠವನ್ನು ಕಟ್ಟಿಸಿ ಕೃತಾರ್ಥರಾದವರು. ಹೀಗೆ ಒಂದು ಕಡೆ ಹಾನಗಲ್ ಮಠದ ಪೀಠಾಧಿಕಾರಿಯಾಗಿ, ಇನ್ನೊಂದು ಕಡೆ ತಾವು ವಿದ್ಯಾಭ್ಯಾಸ ಮಾಡಿದ ಶಿವಯೋಗ ಮಂದಿರದ

ಸಂಚಾಲಕರಾಗಿ ಎಲ್ಲರ ಹೃದಯದಲ್ಲಿ ನೆಲೆ ನಿಂತರು. ಇವರ ಸರಳತೆಯ ವ್ಯಕ್ತಿತ್ವ ಹಾಗೂ ಸರಳತೆಯ ಬಟ್ಟೆಯನ್ನು ಧರಿಸಿದ ಬಗೆಯನ್ನು ಕವಿ ಕಾವ್ಯದಲ್ಲಿ ಈ ರೀತಿ ವ್ಯಕ್ತಪಡಿಸುತ್ತಾರೆ –

ಖಾದಿ ಕಪನಿಯತೊಟ್ಟು ಗುರುಗಳು ।
ಖಾದಿ ಪೇಟವನುತ್ತಮಾಂಗದಿ ।
ಖಾದಿ ವಸ್ತ್ರವ ಹೆಗಲಿಗಿರಿಸಿದದೇಶದಭಿಮಾನಿ ॥
ಖಾದಿಯಿಂದಾರೋಗ್ಯವೃದ್ಧಿಯು ।
ಖಾದಿ ದೇಶೋದ್ಧಾರ ಸೂತ್ರವು ।
ಖಾದಿ ನೀಡಿದ ಗಾಂಧಿತಾತನ ಸೂತ್ರ ಬಿಡಲಿಲ್ಲ ॥

(ಪುಟ : ೧೨೭, ಪದ್ಯ : ೦೪)

ಹೀಗೆ ಖಾದಿ ಬಟ್ಟೆಯನ್ನು ಸದಾ ಮೈಮೇಲೆ ಇಟ್ಟುಕೊಂಡು ಅಷ್ಟೇ ಮನದ ಶುಭ್ರತೆಯಿಂದ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದರು. ಇಡೀ ಭರತಖಂಡದ ಉದ್ಧಾರವನ್ನು ಹಾರೈಸಿದವರು.

ಪುರಾಣ ಕಾವ್ಯದಲ್ಲಿ ೧೩, ೧೪, ೧೫ನೆಯ ಸಂಧಿಗಳಲ್ಲಿ ಶ್ರೀಗಳು ಮಾಡಿದ ಲೋಕೋದ್ಧಾರದ ಲೀಲೆಗಳನ್ನು ಕವಿ ಬಣ್ಣಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ ಅವರು ಹಳ್ಳಿಗಳಿಗೆ ಭಿಕ್ಷೆಗೆ ಹೋದ ಸಂದರ್ಭದಲ್ಲಿ ನಡೆದ ಸಹಜ ಘಟನೆಗಳು ಲೀಲೆಯಾಗಿ ಪರಿಣಮಿಸಿವೆ. ಶ್ರೀಗಳು ಶುದ್ಧಮನದಿಂದ ಬಡಭಕ್ತರ ಉದ್ಧಾರಮಾಡಿದ್ದು, ತಮ್ಮ ನುಡಿಯಿಂದ ಹೊರ ಬಂದ ಮಾತು ಭಕ್ತರ ಬಾಳಿಗೆ ಸಂಜೀವಿನಿಯಾಗಿ ಪರಿಣಮಿಸಿದ್ದರ ಜೊತೆಗೆ ಅನೇಕ ಕುಟುಂಬಗಳು ಇವರ ಕೃಪೆಯಿಂದ ಶ್ರೇಷ್ಠ ಮಟ್ಟಕ್ಕೆ ತಲುಪಿದ ಘಟನೆಗಳನ್ನು ಇವರ ಪ್ರಮುಖಲೀಲೆಯಲ್ಲಿ ಕವಿಗಳು ಉದಾಹರಣೆ ಸಮೇತವಾಗಿ ಈ ಕಾವ್ಯದಲ್ಲಿ ನೀಡಿದ್ದಾರೆ.

ಇಷ್ಟೆಲ್ಲ ಕಾರ್ಯವೈಖರಿಯನ್ನು ಮಾಡಿದ ಶ್ರೀಗಳು ತಮ್ಮ ಕೊನೆಗಾಲದಲ್ಲಿ ಅನೇಕ ಸಮಾಜೋದ್ಧಾರ ಕಾರ್ಯಮಾಡಿ, ಕೊನೆಗೆ ಬಸವಣ್ಣನ ಕಾರ್ಯಕ್ಷೇತ್ರವಾದ ಬಾಗೇವಾಡಿಯಲ್ಲಿ ನಡೆದ ಬಸವಪುರಾಣ ಪ್ರವಚನದ ಮಂಗಲ ಮಹೋತ್ಸವದಲ್ಲಿ ಪಾಲ್ಗೊಂಡು ಅದೇ ವೇದಿಕೆಯಲ್ಲಿ ಲಿಂಗೈಕ್ಯರಾದರು. ಆ ಸನ್ನಿವೇಶವನ್ನು ಕವಿ ಈ ರೀತಿಯಲ್ಲಿ ಅಭಿವ್ಯಕ್ತಪಡಿಸಿದ್ದಾರೆ.

ಸಂದ ಹರುಷವ ತಾಳ್ದ ಭಕ್ತರು
ಅಂದು ಜಯ–ಜಯಕಾರ ಮಾಡಲು
ಮುಂದೆ ಕಲ್ಲಿನ ಮೇಲೆ ನಿಂತಿಹಯೋಗಿ ಬಾಗುತಲಿ ॥
ತಂದೆ ಬಸವನ ಶಿವಪ್ರಸಾದಕೆ
ಬಂದು ಹಸ್ತವನಿರಿಸಿ ಕುಸಿಯುತ–
ಲಂದು ಹಾನ್ಗಲ್ಲೇಶ ಮಹಲಿಂಗದೊಳು ಬಯಲಾದ ॥

(ಪುಟ : ೨೦೩, ಪದ್ಯ : ೪೮)

ಹೀಗೆ ಸದಾಶಿವ ಯೋಗಿಗಳು ತಮ್ಮ ಜೀವನ ಯಾತ್ರೆ ಮುಗಿಸಿ ಹೊರಟುಹೋದರು. ಅವರ ಇಚ್ಛೆಯಂತೆ ಅವರ ಸಮಾಧಿಯನ್ನು ಶಿವಯೋಗ ಮಂದಿರದಲ್ಲಿ ಸ್ಥಾಪಿಸಿದ್ದಾರೆ. ಮುಂದೆ ಅವರ ಮಾತಿನಂತೆ ಆಯ್ಕೆ ಮಾಡಿಕೊಂಡ ರೇಣುಕದೇವರಿಗೆ ಮಠದ ರಾಜಯೋಗದ ಪಟ್ಟಾಭಿಷೇಕ ನಡೆಯಿತು.

ಒಟ್ಟಿನಲ್ಲಿ ಈ ಕಾವ್ಯ ಪುರಾಣವು ಸರಳ ಭಾಷಿಕ ರೂಪದಲ್ಲಿ, ಹತ್ತು ಹಲವು ಚಾರಿತ್ರಿಕ ಘಟನೆಗಳಿಂದ ಸದಾಶಿವ ಸ್ವಾಮಿಗಳ ಜೀವನದ ಪಥ ಹಾಗೂ ಲೀಲೆಗಳನ್ನು ವಿಸ್ತಾರವಾಗಿ ವಿಶಿಷ್ಟ ಲಯಗಾರಿಕೆಯಿಂದ ಕವಿಗಳು ಈ ಪುರಾಣ ಕಾವ್ಯದಲ್ಲಿ ಹೆಣೆದಿದ್ದಾರೆ.

◆◆◆

೩.೭ ಪಂ. ಸದಾಶಿವ ಶಾಸ್ತ್ರಿಗಳ ಪುರಾಣ ಕಾವ್ಯಗಳು

* ಕವಿ
* ಕೃತಿಗಳು
  ೧. ಗುಡಿಸಾಗರ ಶ್ರೀಸಿದ್ಧ ಸಾಧುಗಳ ಪುರಾಣ
  ೨. ಸದಾಶಿವಾನಂದ ಸ್ವಾಮಿ ಪುರಾಣ
  ೩. ಉಣಕಲ್ಲ ಶ್ರೀ ಸದ್ಗುರು ಸಿದ್ಧೇಶ್ವರ ಪುರಾಣ

ಕವಿ :

ಪಂ. ಸದಾಶಿವ ಶಾಸ್ತ್ರಿಗಳು ವೇದಾಂತ ಆಚಾರ್ಯರಾಗಿ ಶಿವಾನಂದಮಠ, ರೋಣದಲ್ಲಿದ್ದು ತಮ್ಮ ಸಾಹಿತ್ಯ ಕೃತಿಗಳನ್ನು ಬರೆದರು. ೧೯೧೩ರಲ್ಲಿ ಜನಿಸಿದ ಕವಿಗಳು ಶಿವಾನಂದ ಸಂಪ್ರದಾಯದ ಕೃತಿಗಳನ್ನು ರಚಿಸಿದ್ದಾರೆ. ಒಟ್ಟು ಆರು ಪುರಾಣ ಕಾವ್ಯಗಳನ್ನು ಬರೆದ ಸದಾಶಿವಶಾಸ್ತ್ರಿಗಳ ಕಾರ್ಯಕ್ಷೇತ್ರ ಶಿವಾನಂದಮಠ, ರೋಣ. ಪ್ರಸ್ತುತ ಉಪಲಬ್ಧ ಮೂರು ಕೃತಿಗಳನ್ನು ಇಲ್ಲಿ ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗಿದೆ.

ಸದಾಶಿವಶಾಸ್ತ್ರಿಗಳು ಗುಡಿಸಾಗರದ 'ಸಿದ್ಧ-ಸಾಧುಗಳ ಪುರಾಣ', 'ಸದ್ಗುರು ಶ್ರೀ ಶಿವಾನಂದ ಮಹಾಸ್ವಾಮಿಗಳ ಪುರಾಣ', 'ಶ್ರೀ ಸದಾಶಿವಾನಂದ ಸ್ವಾಮಿಗಳ ಪುರಾಣ', 'ಬನಹಟ್ಟಿಯ ರುದ್ರದೇವರ ಪುರಾಣ', 'ಶಿಶುನಾಳ ಶರೀಫ ಶಿವಯೋಗಿಗಳ ಪುರಾಣ', 'ಉಣಕಲ್ಲ ಶ್ರೀ ಸದ್ಗುರು ಸಿದ್ಧೇಶ್ವರ ಪುರಾಣ' ಈ ಕೃತಿಗಳನ್ನು ರಚಿಸಿದ್ದಾರೆ.

ಪಂ. ಸದಾಶಿವಶಾಸ್ತ್ರಿಗಳು 'ಅಮೇರಿಕಾದ ಚಿಕ್ಯಾಗೋ ವಿಶ್ವವಿದ್ಯಾಲಯ'ದ ಪ್ರಸಿದ್ಧ ಸಾಹಿತಿ 'ಡಾ॥ ಮೆಕಾರ್ನಿಕ್' ಅವರಿಂದ ಪ್ರಶಸ್ತಿ ಪತ್ರ ಪಡೆದವರಾಗಿದ್ದರು. ಅವರು ಒಂದೇ ಒಂದು ತಿಂಗಳಲ್ಲಿ ಡಿಸೆಂಬರ ೧೯೭೧ ರಂದು 'ಉಣಕಲ್ಲ ಶ್ರೀ ಸಿದ್ಧೇಶ್ವರ ಪುರಾಣ'ವನ್ನು ಬರೆದಂತಹ ಪ್ರತಿಭೆಯುಳ್ಳವರು. ಒಟ್ಟು ೭೭೧ ಭಾಮಿನಿ ಷಟ್ಪದಿಯ ಪದ್ಯಗಳನ್ನು ಬರೆದಿರುವರು. ಅನೇಕ ಗದ್ಯ ಕೃತಿಗಳನ್ನು ಬರೆದು ಪ್ರಕಟಗೊಳಿಸಿದ ಇವರು ಉತ್ತಮವಾದ ಕಾವ್ಯ ಶಕ್ತಿಯುಳ್ಳವರು. ಶಿವಾನಂದ ಸಂಪ್ರದಾಯದ ಶಿವಾನಂದರ, ಸದಾಶಿವಾನಂದರ ಚರಿತ್ರೆಗಳನ್ನು ದಾಖಲಿಸುವ ಮಹತ್ವದ ಕಾರ್ಯವನ್ನು ಶ್ರೀಯುತರು ಪೂರೈಸಿದ್ದಾರೆ.

೩.೭.೧ ಗುಡಿಸಾಗರ ಶ್ರೀ ಸಿದ್ಧಸಾಧುಗಳ ಪುರಾಣ

ಗುಡಿಸಾಗರ ಶ್ರೀ ಸಿದ್ಧಸಾಧುಗಳ ಪುರಾಣ ಕಾವ್ಯವು ೭೬೧ ಭಾಮಿನಿ ಷಟ್ಪದಿಯ ಪದ್ಯಗಳಲ್ಲಿ ರಚನೆಯಾಗಿದ್ದು, ೨೫ ಅಧ್ಯಾಯವನ್ನು ಒಳಗೊಂಡ ಕೃತಿಯಾಗಿದೆ. ೧೯ ಮತ್ತು ೨೦ನೇ ಶತಮಾನದ ಮಧ್ಯದಲ್ಲಿ ಭಕ್ತಿಯ ಮಾರ್ಗದಿಂದ ತಮ್ಮ ಹೆಸರನ್ನು ಪ್ರಚುರಪಡಿಸಿಕೊಂಡ ಹಲವು ಮಹಾನ್ ಸಾಧಕರಲ್ಲಿ ಶ್ರೀ ಸಿದ್ಧ ಶಿವಯೋಗಿಗಳು ಒಬ್ಬರು. ಇವರು ಕ್ರಿ.ಶ. ೧೮೪೪ರಲ್ಲಿ ರಾಯಚೂರು ಜಲ್ಲೆಯ ಲಿಂಗಸೂರ ತಾಲೂಕಿನ 'ಭಾವಣಿ' ಎಂಬ ಗ್ರಾಮದಲ್ಲಿ ಜನಿಸಿದವರು. ಶ್ರೀಯುತರು ತಮ್ಮ ಜೀವಿತದ ಅವಧಿಯಲ್ಲಿ ಮಾಡಿದ ಸಾಧನೆಯ ವಿಚಾರವನ್ನು ಅಧಿಕೃತವಾಗಿ ಈ ಪುರಾಣ ಕಾವ್ಯವು ಚಿತ್ರಿಸುತ್ತದೆ.

ಎಲ್ಲ ಪುರಾಣಕಾವ್ಯದಂತೆ ಆರಂಭವು ವೈಭವೀಕರಣದಿಂದ ಕೂಡಿಲ್ಲ. ಬದಲಾಗಿ ವಾಸ್ತುವಿಕ ಅಂಶಗಳನ್ನು ಒಳಗೊಂಡು ಸರಳಯುತವಾಗಿ ಕೃತಿ ತನ್ನ ಆರಂಭವನ್ನು ಇಲ್ಲಿ ಪಡೆದುಕೊಂಡಿದೆ. ಸಿದ್ಧ ಶಿವಯೊಗಿಗಳ ಆಚಾರ-ವಿಚಾರ, ತತ್ವಜ್ಞಾನ, ಭಕ್ತಿಮಾರ್ಗ, ವಿವಿಧ ಸಿದ್ಧಸಾಧನವನ್ನು ತುಂಬಾ ವಿಶಿಷ್ಟತೆಯಿಂದ ಈ ಕೃತಿಯು ಕಟ್ಟಿಕೊಡುತ್ತದೆ. ಜ್ಞಾನದ ಹಸಿವನ್ನು ಅರಗಿಸಿಕೊಂಡು ಮುಕ್ತಿಗಾಗಿ ತನ್ನ ಗುರುವನ್ನು ಆಯ್ಕೆ ಮಾಡಿಕೊಂಡವರು. ಶ್ರೀ ಗುರು ರುದ್ರದೇವರು ಬನಹಟ್ಟಿ, ಅವರಲ್ಲಿ ನೆಲೆನಿಂತು ಭವದ ಭಾವನೆಗೆ ಇಹದ ಸುಖವನ್ನು ನೀಡಿದವರು. ಆ ಮೂಲಕ ಭಕ್ತರಲ್ಲಿ ಸಂಸಾರಿಯಾಗಿ ನಿಸ್ಸಾರತೆಯನ್ನೇ ಮೆಟ್ಟಿ ನಿಂತವರು ಶ್ರೀ ಸಿದ್ಧಶಿವಯೋಗಿಗಳು.

ಕವಿಗಳು ಪೀಠಿಕಾ ಭಾಗದಲ್ಲಿ ಪುರಾಣ ಕಾವ್ಯದಿಂದ ಸಹೃದಯರಿಗೆ ಆಗುವ ಆನಂದವನ್ನು ವಿಶಿಷ್ಟ ರೀತಿಯಿಂದ ಚಿತ್ರಿಸಿ ವಿವಿಧ ಶರಣರ ಚರಿತ್ರೆಯನ್ನು ಸ್ಮರಿಸಿದ್ದಾರೆ. ಜೊತೆಗೆ ತನ್ನ ಕುರಿತು ಹೇಳಿಕೊಂಡಿದ್ದಾರೆ. ಹೀಗೆ ಪುರಾಣ ಕಾವ್ಯವು ಆರಂಭಗೊಂಡು ಮುಂದೆ ಶ್ರೀ ಸಿದ್ಧಶಿವಯೋಗಿಗಳ ಜನನ ಹಾಗೂ ವಿವಾಹ ಸಂದರ್ಭವನ್ನು ಅರ್ಥಪೂರ್ಣವಾಗಿ ಚಿತ್ರಿಸಿದ ಆ ಸಂದರ್ಭವು ಈ ರೀತಿಯಲ್ಲಿ ಕಂಡುಬಂದಿದೆ –

ತಲೆಗೆಮಿಗೆ ಪದಿನಾರು ಮೊಳದಾ
ಬೆಲೆಯ ರೇಶಿಮಿ ಪಟಗಮಂ ಬಲು
ಹೊಳೆವ ಜರ ಮೇಲ್ಮಾಡಿ ಮುರಿಗೆಯ ಹೊಡೆದು ಸುತ್ತುತ್ತೆ ।
ಬಳಿಕಮುಟ್ಟಾ ತಿಳುವು ಧೋತರ
ವೆಳೆಯುತಿರ್ದೊಡು ನೆಲದಿ ಮೇಲಕ
ಮೆಳೆದು ಸಿರ್ಕಿಸಿಕೊಳ್ಳದಾ ಹಂಗಾಮದವನಲ್ಲ ॥

(ಪುಟ : ೨೨, ಪದ್ಯ : ೦೬)

ಮೈಗೆ ಪರಿಮಳ ಬೀರ್ವ ಸೋಪಂ
ಮೂಗಿಗಂ ಮಾಗಂಧಮಂ ಚಲು
ಕೈಗೆ ಭಂಗಾರಂಗುಲಿಯನುಂ ಧರಿಸಿ ನಗೆ ಮೊಗದಿಂ ।
ಬೇಗ ನಾಟಕ ವಾಟದೊಳಗಂ
ಸೋಗುಗಳನುಂ ಪಾಕುತಂ ನಿಜ
ವಾಗಿ ಪ್ರಾಯದ ಹಾಳ್ಗೆಡಿಪ ಬಲು ಹುಚ್ಚಿನವನಲ್ಲ ॥

(ಪುಟ : ೨೨, ಪದ್ಯ : ೦೭)

ಎಂಬಲ್ಲಿ ಶ್ರೀ ಸಿದ್ಧ ಶಿವಯೋಗಿಯ ವ್ಯಕ್ತಿತ್ವ ಅನಾವರಣವಾಗಿದೆ. ತಾನು ಮದುವೆ ಮಾಡಿಕೊಳ್ಳಲು ಕನ್ನೆಯನ್ನು ನೋಡಲು ಹೋಗುವಾಗ ಪ್ರಾಯದ ಯುವಕರು ಯಾವ ರೀತಿ ಸಿಂಗರಿಕೊಳ್ಳುತ್ತಾರೆ ಎಂಬುದನ್ನು ಕವಿ ಚಿತ್ರಿಸಿ ಇದಕ್ಕೆ ವಿರುದ್ಧವಾಗಿ ಸಾದಾಸೀದಾ ಬಟ್ಟೆಯನ್ನು ಉಟ್ಟು ವ್ಯಕ್ತಿತ್ವದ ಉನ್ನತಕ್ಕೇರಿದ ಶಿವಯೋಗಿಯನ್ನು ಈ ರೀತಿಯಲ್ಲಿ ಬಣ್ಣಿಸಿದ್ದಾರೆ.

'ಪ್ರಪಂಚಮಾಡಿ ಪ್ರರಮಾತ್ಮನನ್ನು ನೆನೆ' ಎಂಬ ಜನಪದರ ನುಡಿಯಂತೆ ಪ್ರಾಪಂಚಿಕದ ಸುಖವನುಂಡು ಆಲೌಕಿಕ ಸುಖದ ಬೆನ್ನು ಹತ್ತಿ, ಶ್ರೀ ಸಿದ್ಧಾರೂಢರನ್ನು ಕಂಡು ತನ್ನ ಆಧ್ಯಾತ್ಮದ ಯಾತ್ರೆಯನ್ನು ಮುಂದುವರಿಸಿ, ಗುರು ರುದ್ರದೇವರ ಅಭಿಮತದಂತೆ ಗುಡಿಸಾಗರದ ಸಾಧುವಾದರು. ಮುಂದೆ ಲೋಕ ಕಲ್ಯಾಣಾರ್ಥವಾಗಿ ವಿವಿಧ ಸ್ಥಳಗಳಿಗೆ ಸಂಚರಿಸುತ್ತ ತಮ್ಮ ಲೀಲೆಗಳನ್ನು ತೋರಿಸಲು ಪ್ರಾರಂಭಿಸಿದರು. ಕವಿಗಳು ಈ ಪುರಾಣ ಕಾವ್ಯ ಮುಂದುವರೆಯಲು ಅಲ್ಲಲ್ಲಿ ಸಹಸಂಬಂಧಯುತವಾದ ಚರಿತೆಯನ್ನು ಬಳಿಸಿಕೊಂಡಿದ್ದಾರೆ. ಅವುಗಳಲ್ಲಿ ಶ್ರೀ ರುದ್ರದೇವ ಅವರ ಚರಿತೆಯು ಸೇರಿಕೊಂಡಿದೆ. ಶ್ರೀ ಸಿದ್ಧ ಶಿವಯೋಗಿಗಳು ತಾವು ಈ ಲೋಕದಲ್ಲಿ ಏನು ಮಾಡಬೇಕೆಂದುಕೊಂಡರೋ ಅವುಗಳನ್ನು ಕಾಯಾ, ವಾಚಾ ಮನಸ್ಸನ್ನು ಶುದ್ಧವಾಗಿಟ್ಟುಕೊಂಡು ಮಾಡಲು ನಿರತರಾದರು.

ಶ್ರೀ ಸಿದ್ಧ ಶಿವಯೋಗಿಗಳು ಅನೇಕ ಜಪತಪವನ್ನು ಮಾಡುತ್ತ ಸಿದ್ಧಿಯ ಸಾಧನವನ್ನು ಒಲಿಸಿಕೊಂಡರು. ನರಗುಂದ ಗ್ರಾಮದಲ್ಲಿ ಆಘೋರವಾದ ತಪ್ಪಸ್ಸನ್ನು ಆಚರಿಸಿ ನಾಡಿನ ಉದ್ಧಾರಕ್ಕಾಗಿ ತಮ್ಮನ್ನು ತೊಡಗಿಸಿಕೊಂಡು. ಮಾಡಿದ ಲೀಲೆಗಳು ಆಪಾರವಾಗಿವೆ. ಅವುಗಳಲ್ಲಿ ಪ್ರಮುಖವಾಗಿ

೧. ನಿಂದಕನಿಗೆ ಮರಣ

೨. ಬೀರಪ್ಪನು ಹೆಳವನಾದದ್ದು.

೩. ಮಾದೇವ ಎಂಬ ವ್ಯಕ್ತಿಯ ರೋಗ ನಿವಾರಿಸಿದ್ದು.

ಮುಂತಾದವುಗಳು. ಇವುಗಳ ಜೊತೆಗೆ ಅನೇಕ ಸ್ಥಳಗಳ ಚರಿತ್ರೆಯನ್ನು ಈ ಕಾವ್ಯ ಪುರಾಣದಲ್ಲಿ ಕವಿಗಳು ಉಲ್ಲೇಖಿಸಿದ್ದಾರೆ. ಅವುಗಳಲ್ಲಿ ಹೊಳೆಮಣ್ಣೂರಿನ ದುರ್ಗಾಂಬೆ ಚರಿತೆ, ಬೆಳವಣಕಿ ವೀರಭದ್ರ ಮೂರ್ತಿಯ ಚರಿತೆ ಮುಂತಾದವು ಬೆರೆತುಕೊಂಡಿವೆ.

ಲೋಕಕಲ್ಯಾಣಾರ್ಥವಾಗಿ ತನ್ನ ಜೀವನವನ್ನು ಆಧ್ಯಾತ್ಮದೆಡೆಗೆ ಬದಲಿಸಿಕೊಂಡು ಹಲವು ಲೀಲೆಗಳನ್ನು ಮಾಡುತ್ತ, ಜನರಲ್ಲಿ ಮೂಡಿದ ಅಂಧಕಾರವನ್ನು ಅಳಿಸುತ್ತ, ಸಿದ್ಧ-ಸಾಧಕರ ತತ್ವವನ್ನು ಬೋಧಿಸುತ್ತಾ, ನಾಡಿನ ಅನೇಕ ಕ್ಷೇತ್ರಗಳನ್ನು ಸಂಚರಿಸಿ ಭಕ್ತರನ್ನು ಉದ್ಧರಿಸಿದ ಮಹಾತ್ಮರಿವರು. ಜನರ ಜಗಳಗಳನ್ನು ಬಗೆಹರಿಸಿ ಸಾಮರಸ್ಯದಿಂದ ಬಾಳಲು ಅವರನ್ನು ಭಕ್ತಿಯ ಮಾರ್ಗಕ್ಕೆ ಹಚ್ಚಿದ್ದು ಇವರ ವಿಶೇಷತೆಯಾಗಿದೆ. ಆ ಕಾಲದ ಸಮಾಜದಲ್ಲಿ ಬೇರೂರಿದ ಮೌಢ್ಯತೆಯನ್ನು ತಮ್ಮ ಅಪಾರ ಜ್ಞಾನ ತತ್ವದ ಮೂಲಕ ಹೋಗಲಾಡಿಸಿದ್ದು ಅಭೂತಪೂರ್ವ ಕಾಯಕವಾಗಿದೆ.

ದುಷ್ಟರಂ ಸಂಹರಿಸಿ ಕೇವಲ
ಶಿಷ್ಟರಂ ಪೊರೆಯುವದು ಸಂತತ
ದಿಟ್ಟ ಮೂರುಳ್ಳವನ ಕಾಯಕ ತಪ್ಪದಿದುಮೆಂದು ।
ದಿಟ್ಟ ರಾವಣ ಕೆಟ್ಟ ಕೌರವ
ಪೆಟ್ಟು ತಿಂದುಪಮೆಯನು ಕುಡುವುತೆ
ಭ್ರಷ್ಟರಿಗೆ ಸಲೆ ತಕ್ಕ ಪ್ರಾಯಶ್ಚಿತ್ತ ಲೇಸೆಂದ ॥

(ಪುಟ : ೧೭೧, ಪದ್ಯ : ೨೬)

ಎಂದು ಭಕ್ತರ ಭವರೋಗವನ್ನು ದೂರ ಮಾಡಿದವರು.

ಈ ಪುರಾಣ ಕಾವ್ಯದಲ್ಲಿ ಹಲವು ಲೌಖಿಕ ವಿಷಯುಗಳು ತುಂಬಿಕೊಂಡು ಮುಂದುವರೆದಿದ್ದು, ಅವುಗಳಲ್ಲಿ ಕಳ್ಳತನ ಹಾಗೂ ಗಂಡ-ಹೆಂಡತಿಯರ ನಡುವಿನ ವಿವಾದ, ದೇಸಾಯಿ ಮತ್ತು ಸಾಮಾನ್ಯ ವ್ಯಕ್ತಿಗಳ ಪ್ರಸಂಗ ಇವೆಲ್ಲವು ಕಾವ್ಯದಲ್ಲಿ ಪೂರಕವಿಷಯವಾಗಿ ಮುಂದುವರೆದಿದೆ. ಈ ಎಲ್ಲ ವಿವಾದ ಹಾಗೂ ತಕರಾರುಗಳನ್ನು ಬಗೆಹರಿಸಿ ಅವರನ್ನು ಭಕ್ತಿಯ ಮಾರ್ಗಕ್ಕೆ ಹಚ್ಚಿದ ನೇತಾರ ಶ್ರೀಸಿದ್ಧ ಶಿವಯೋಗಿಗಳು.

ಒಟ್ಟಿನಲ್ಲಿ ಈ ಪುರಾಣ ಕಾವ್ಯವು ಶ್ರೀಸಿದ್ಧ ಶಿವಯೋಗಿಗಳ ಜೀವನದ ಸಾಧನೆಯನ್ನು ಹಾಗೂ ಅವರು ಮಾಡಿದ ಕಾಯಕತತ್ವದ ಬೋಧೆಯನ್ನು, ಕೊನೆಗೆ ತಮ್ಮ ಧಾರ್ಮಿಕಕ್ಷೇತ್ರವನ್ನಾಗಿ ಮಾಡಿಕೊಂಡ ಸ್ಥಳದ ಮಹಿಮೆಯನ್ನು ಸರಳ ರೀತಿಯಲ್ಲಿ ಕಟ್ಟಿಕೊಡುವ ಮಹತ್ವ ಪೂರ್ಣ ಕೃತಿಯಾಗಿದೆ.

೩.೭.೨. ಶ್ರೀ ಸದಾಶಿವಾನಂದ ಸ್ವಾಮಿ ಪುರಾಣ

ಶ್ರೀ ಸದಾಶಿವಾನಂದ ಸ್ವಾಮಿ ಪುರಾಣವು ೨೫ ಅಧ್ಯಾಯಗಳಲ್ಲಿ ರಚಿತವಾಗಿದ್ದು, ೭೯೪ ಭಾಮಿನಿ ಷಟ್ಪದಿಯ ಪದ್ಯರೂಪದಲ್ಲಿ ಮೂಡಿದೆ. ಕನ್ನಡನಾಡು ಹಲವು ಮಹಾನ್ ಸಿದ್ಧ ಪುರುಷರಿಗೆ ಜನ್ಮವಿತ್ತನಾಡು. ಇಂತಹ ನಾಡಿನಲ್ಲಿ ಶಿವನ ಅವತಾರವೆತ್ತಿ, ನರವೇಷ ಧರಿಸಿ, ಭಕ್ತಿಯ ಜೊತೆಗೆ ನೀತಿ, ವೈರಾಗ್ಯ, ಜ್ಞಾನ ಮುಂತಾದವುಗಳಿಂದ ಶ್ರೇಷ್ಠ ಮಟ್ಟದ ಸಾಧನೆಯನ್ನು ಮಾಡಿದ ಮಹಿಮರಾದ ಶ್ರೀ ಸದಾಶಿವಾನಂದ ಸ್ವಾಮಿಗಳ ಜೀವನದ ವಿಚಾರವನ್ನು ಕುರಿತು ತಿಳಿಯಪಡಿಸುವ ಕೃತಿಯಾಗಿದೆ.

ಕಾವ್ಯದ ಆರಂಭವು ಮಂಗಳಾಚರಣದಿಂದ ಕೂಡಿದ್ದು, ಕವಿ ಶಿವಶರಣರನ್ನು ಸ್ತುತಿಸಿ ತನ್ನ ಕುರಿತು ಹೇಳಿಕೊಂಡಿದ್ದಾನೆ. ಜೊತೆಗೆ ಪುರಾಣ ಓದುವುದರಿಂದ ಸಿಗುವ ಫಲವನ್ನು ಸ್ಪಷ್ಟವಾಗಿ ಉಲ್ಲೇಖಿಸಿ ಕಾವ್ಯಕ್ಕೆ ಆರಂಭವನ್ನು ನೀಡಿದ್ದಾರೆ. ಜೋಡಳ್ಳಿಯ ಶರಣ ದಂಪತಿಗಳಾದ 'ಚೆನ್ನಪ್ಪ' ಮತ್ತು 'ಲಿಂಗಮಾಂಬೆ'ಯ ಉದರದಲ್ಲಿ

ಅಂದಿನಾ ತಾರೀಖು ಪನ್ನೆರ
ಡಂದಮಾದ ಸುಮಾಸ ಪನ್ನೆರ
ಡಂದಿಶಿವಿ ಪದಿನೆಂಟನೂರಾತೊಂಭತಾಆರು ।
ಪೊಂದಿವಿಂತಿರೆಯಾಗ ಬೇಗುದಿ
ಯಿಂದೆ ತಲ್ಲಣಗೊಳ್ವ ಜನಕಾ
ನಂದವಾಯ್ತೀ ಪೂಜ್ಯಪಾದರ ಜನನ ಬಲದಿಂದೆ ॥

(ಪುಟ : ೮, ಪದ್ಯ : ೧೩)

ಜನಿಸಿದ ಶ್ರೀ ಸದಾಶಿವಾನಂದ ಸ್ವಾಮಿಗಳು ಬಾಲ್ಯದಲ್ಲಿ ಅನೇಕ ಬಾಲಲೀಲೆಯನ್ನು ಮಾಡಿದವರು. ಗುರುದರ್ಶನ ವಿದ್ಯಾಭ್ಯಾಸವನ್ನು ಮುಂದುವರೆಸಿದವರು. ಬಾಲ್ಯದಲ್ಲಿ ವ್ಯಾಕರಣ, ಛಂದಸ್ಸು, ವೇದ, ಪುರಾಣ ಮುಂತಾದವುಗಳನ್ನು ಅಭ್ಯಸಿಸಿ ತಮ್ಮ ವಿದ್ಯೆಯನ್ನು ವಿಸ್ತರಿಸಿಕೊಂಡರು. ಮೊದಲು ಶಿಕ್ಷಕನಾಗಿ ಇರಬೇಕೆಂದು ನಿರ್ಧರಿಸಿದ ಇವರು, ಗುರುವಿನ ಅಪ್ಪಣೆಯ ಮೇರೆಗೆ ಸಂಸ್ಕೃತ ವಿಧ್ಯಾಭ್ಯಾಸವನ್ನು ಮಾಡಲು ಕಳುಹಿಸಿದ್ದು, ಶ್ರೀಗಳು ಅಧ್ಯಾತ್ಮದ ಕಡೆಗೆ ಬರಲು ಪ್ರಮುಖವಾಗಿ ಕಾರಣವಾಗಿದೆ.

ಮುಂದೆ ಅಖಂಡ ಅಧ್ಯಯನದ ಫಲವಾಗಿ ಕಾಶಿ ಪಂಡಿತರಾಗಿ ವಿದ್ಯಾ ಪರ್ವತವನ್ನೇ ಮೆಟ್ಟಿ ನಿಂತರು. ಇವರ ಅಧ್ಯಯನದ ಜ್ಞಾನವನ್ನು ನೋಡಿ ಇವರನ್ನು –

ಇತ್ತ ಹತ್ತೊಂಭತ್ತನೂರು
ಮತ್ತೆ ಮೂವತ್ತೊಂಭತರೊಳಂ
ಸತ್ತಮು ಶಿವಾನಂದರು ಪರಂಧಾಮಮಂ ಗೆಯ್ಯೆ ।
ಉತ್ತಮದ ದಾಯಿಗರುಮಾಗಳ್
ಸ್ತುತ್ಯ ಮಠ ನಿರ್ವಾಹದಧಿಕೃತಿ
ತೆತ್ತರು ಮಹೇಶ್ವರರಿಗಂ ಕಾಶ್ಮೀರದಿಂ ಕರಿಸಿ ॥ (ಪುಟ : ೨೫, ಪದ್ಯ : ೦೨)

ಅಧಿಕೃತವಾಗಿ ಇವರ ಹೆಸರನ್ನು ಬದಲಿಸಿ 'ಮಹೇಶ್ವರ' ಎಂಬುದನ್ನು 'ಸದಾಶಿವಾನಂದ' ಎಂದು ಕರೆದು ಶಿವಾನಂದ ಮಠದ ಪೀಠವನ್ನು ತುಂಬಿದರು.

ಇಲ್ಲಿಂದ ಮುಂದೆ ತಮ್ಮ ಅಗಾಧ ವಿದ್ವತ್ತಿನಿಂದ ಸಂಪಾದಿಸಿದ ಜ್ಞಾನದ ಬಲದಿಂದ ಅನೇಕ ಲೀಲೆಗಳನ್ನು ಗೈಯ್ಯುತ್ತ ಆ ಮಠದ ಕೀರ್ತಿಯನ್ನು ಹಬ್ಬಿಸಿದರು. ಭಕ್ತ ಜನರ ಕಷ್ಟವನ್ನು ಹೋಗಲಾಡಿಸಿ ಅವರನ್ನು ಭಕ್ತಿ ಮಾರ್ಗದ ಕಡೆಗೆ ವಾಲುವಂತೆ ಮಾಡಿ ಲೋಕಕಲ್ಯಾಣಕ್ಕಾಗಿ ಸಂಚಾರ ನಡೆಸಿದರು. ಹೀಗೆ ಅವರು ಸಂಚರಿಸುತ್ತ ಧಾರ್ಮಿಕತೆಯ ಮಹತಿಯನ್ನು ತಿಳಿಯ ಪಡಿಸುತ್ತಾ, ಆಯಾ ಕ್ಷೇತ್ರಗಳಲ್ಲಿ ತಮ್ಮ ಸಿದ್ಧಿ-ಸಾಧನೆಯನ್ನು ಮೆರೆದರು. ಕ್ಷುದ್ರ ದೇವತೆಯ ಹಿಂಸೆಯನ್ನು ನಿಲ್ಲಿಸುತ್ತಾ, ಬೆನಕನಹಳ್ಳಿ, ಗೌಡಗಟ್ಟಿ, ಮುಮ್ಮರಡ್ಡಿ ಕೊಪ್ಪ ಮುಂತಾದ ಸ್ಥಳಗಳಲ್ಲಿ ಭಕ್ತರಿಗೆ ಒಳ್ಳೆಯದಾಗಲೆಂದು ತಮ್ಮ ಲೀಲೆಯನ್ನು ಪ್ರದರ್ಶಿಸಿದ ಮಹಾನ್ ಸಿದ್ಧಸಾಧಕರು ಶ್ರೀ ಸದಾಶಿವಾನಂದ ಸ್ವಾಮಿಗಳು.

ಈ ಪುರಾಣ ಕಾವ್ಯವು ಶ್ರೀ ಸದಾಶಿವಾನಂದರ ಲೀಲೆಯನ್ನು ಅತಿ ಹೆಚ್ಚಾಗಿ ನೀಡಿದೆ. ಅವರ ಇನ್ನುಳಿದ ಆಧ್ಯಾತ್ಮಿಕ ಜೀವನದ ಚಿತ್ರಣವನ್ನು ಕಡಿಮೆಗೊಳಿಸಿದೆ. ಜೊತೆಗೆ ಕಾವ್ಯಕ್ಕೆ ಪೂರಕವಾಗಿ ಅಲ್ಲಲ್ಲಿ ಉಪಚರಿತೆಗಳು ಸೇರಿಕೊಂಡಿವೆ. ಸದಾಶಿವಾನಂದರು ತೋರಿಸಿದ ಮಹಿಮೆ ಇವತ್ತಿಗೂ ಸಹ ಆ ಭಾಗದ ಜನರಲ್ಲಿ ಭಕ್ತಿ ಭಾವೈಕ್ಯತೆಯ ರೂಪದಲ್ಲಿ ತಲೆಯೆತ್ತಿ ನಿಂತಿದೆ. ಅಲ್ಲಲ್ಲಿ ಕೆಲವು ಚಾರಿತ್ರಿಕ ಘಟನೆಗಳು ಕಂಡುಬರುತ್ತವೆ. ಜೊತೆಗೆ ಸಮಾಜ ಶ್ರೇಷ್ಠರು ಶ್ರೀಗಳ ಶಿಷ್ಯರಾಗಿ, ಅವರ ಮಾತಿನಂತೆ ನಡೆದು ಮಹತ್ವದ ಸ್ಥಾನಕ್ಕೇರಿದ ಸಂದರ್ಭಗಳನ್ನು ಅಲ್ಲಗಳೆಯುವಂತಿಲ್ಲ. ತಮ್ಮನ್ನು ನಂಬಿ ಬಂದ ಭಕ್ತರಿಗೆ ಹಲವು ವಿಧದಲ್ಲಿ ಆಧ್ಯಾತ್ಮಿಕತೆಯ ಔಷಧಿಯಿಂದ ಭವರೋಗವನ್ನು ಕಳೆದವರು. ಜನರ ಕಷ್ಟ-ಸುಖಕ್ಕೆ ತಾವು ಮುಂದಾಗಿ, ಅವರ ಒಳಿತಿಗಾಗಿ ಅನೇಕ ವಿಧದಲ್ಲಿ ತಮ್ಮ ಕಾಯಕತತ್ವವನ್ನು ಮೀಸಲಿರಿಸಿದವರು.

ಇಂತಹ ಸಿದ್ಧಸಾಧಕ ಗದಗ ನಗರದಲ್ಲಿ ಮಳೆ ತರಿಸಿ ತನ್ನ ದಿವ್ಯ ವ್ಯಕ್ತಿತ್ವವನ್ನು ಮೆರೆಸಿಕೊಂಡಿದ್ದಾರೆ. ಇಷ್ಟೆಲ್ಲಾ ಬಿಡುವಿಲ್ಲದ ಕಾರ್ಯವನ್ನು ಮಾಡಿ ಜನರನ್ನು ಉದ್ಧರಿಸಿದ ಮಹಾಮಹಿಮ ಸಾಧು ಶಿವಯೋಗಿ ಶ್ರೀಗಳು ೧೪-೦೨-೧೯೨೦ರಲ್ಲಿ ಲಿಂಗೈಕ್ಯರಾದ ಬಗೆಯನ್ನು ಕವಿಗಳು ಚಾರಿತ್ರಿಕವಾಗಿ ಪುರಾಣಕಾವ್ಯದಲ್ಲಿ ದಾಖಲಿಸಿದ್ದಾರೆ.

ಒಟ್ಟಿನಲ್ಲಿ ಈ ಪುರಾಣ ಕಾವ್ಯವು ಶ್ರೀ ಸದಾಶಿವಾನಂದ ಸ್ವಾಮಿಗಳ ಜೀವನಪಥವನ್ನು ಹಾಗೂ ಅವರು ಮಾಡಿದ ಲೀಲೆಯನ್ನು ಸರಳವಾಗಿ ಸಹೃದಯನ ಮುಂದೆ ಚಿತ್ರಿಸುವುದಾಗಿದೆ.

೩.೭.೩ ಶ್ರೀ ಸದ್ಗುರು ಸಿದ್ಧೇಶ್ವರ ಪುರಾಣ

ಶ್ರೀ ಸದ್ಗುರು ಸಿದ್ಧೇಶ್ವರ ಪುರಾಣ ಕಾವ್ಯವನ್ನು ಭಾಮಿನಿ ಷಟ್ಪದಿಯಲ್ಲಿ ೭೭೧ ಪದ್ಯಗಳಿಂದ ಕೂಡಿದ ಈ ಕಾವ್ಯವನ್ನು ೨೫ ಅಧ್ಯಾಯಗಳಲ್ಲಿ ಕವಿ ಸದಾಶಿವ ಶಾಸ್ತ್ರಿಯವರು ರಚಿಸಿದ್ದಾರೆ. ಈ ಪುರಾಣ ಕಾವ್ಯವು ಸಿದ್ಧೇಶ್ವರ ಶಿವಯೋಗಿ ಅವರ ಜೀವನ ವೃತ್ತಾಂತ, ಸಾಧನಾ ಸಿದ್ಧಿ, ಅನುಭವ ತತ್ವ ಮುಂತಾದವುಗಳನ್ನು ಸೋದಾಹರಣವಾಗಿ ಸರಳ ಶೈಲಿಯ ಅಭಿವ್ಯಕ್ತಿಯಲ್ಲಿ ಕಟ್ಟಿಕೊಡುವ ವಿಶಿಷ್ಟ ಕೃತಿಯಾಗಿದೆ. ಸಿದ್ಧೇಶ್ವರ ಶಿವಯೋಗಿ ಅವರು ಉಣಕಲ್ಲ ಗ್ರಾಮವನ್ನು ತಮ್ಮ ಸಿದ್ಧವಾಸ ಮಾಡಿಕೊಂಡು ಲೋಕಕಲ್ಯಾಣಾರ್ಥವಾಗಿ ವಿವಿಧ ಕ್ಷೇತ್ರಗಳ ಸಂಚಾರ ಮಾಡುತ್ತ, ಧರ್ಮ ಬೋಧೆಯನ್ನು ಬೋಧಿಸುತ್ತಾ, ಭಕ್ತರ ಕಷ್ಟಗಳನ್ನು ಕಳೆದವರು. ಅಂತಹ ಮಹಾನ್ ಶಿವಯೋಗಿಯ ಚರಿತೆಯನ್ನು ವಿನಮ್ರತೆಯಿಂದ ಈ ಕಾವ್ಯ ಪುರಾಣದಲ್ಲಿ ಕವಿ ಸದಾಶಿವಶಾಸ್ತ್ರಿಗಳು ಚಿತ್ರಿಸಿದ್ದಾರೆ.

ಕಾವ್ಯದ ಆರಂಭವು ಮಂಗಳಾಚರಣದಿಂದ ಕೂಡಿದ್ದು, ಕವಿ ಅಲ್ಲಿ ಶ್ರೇಷ್ಠ ಶಿವ-ಶರಣರನ್ನು ಸ್ತುತಿಸಿ ತನ್ನ ಕುರಿತು ಹೇಳಿಕೊಂಡಿದ್ದಾರೆ. ಈ ಕಾವ್ಯದಿಂದ ಆಗುವ ಪ್ರಯೋಜನ ಇತ್ಯಾದಿ ವಿಷಯವನ್ನು ಆ ಭಾಗದಲ್ಲಿ ಸ್ಪಷ್ಟಪಡಿಸಿದ್ದಾರೆ. ಮುಂದುವರೆದು ಶಿವನ ಅವತಾರದ ಪ್ರತೀಕವಾಗಿ ಬಾಲ ಸಿದ್ಧೇಶ್ವರನ ಜನನವನ್ನು ಕವಿ ಮನತುಂಬಿ ಕೊಂಡಾಡಿದ್ದಾರೆ. ಬಳ್ಳಾರಿ ಜಿಲ್ಲೆಯ ಸಿರಗುಪ್ಪಿಯ 'ಶಿವಪ್ಪ' ಮತ್ತು ತಾಯಿ 'ಪಾರ್ವತಿ'ಯ ಉದರದಲ್ಲಿ ಬಾಲಸಿದ್ಧೇಶ್ವರನು ೧೮೪೯ರಲ್ಲಿ ಜನಿಸಿ, ಅನೇಕ ಬಾಲಲೀಲೆಯನ್ನು ಮಾಡಿದ್ದು ಭಕ್ತರು ಇಂದಿಗೂ ಸಹ ಆ ಭಾಗದಲ್ಲಿ ನೆನೆಯುತ್ತಾರೆ. ಮುಂದೆ ಶಿಕ್ಷಣ ಮುಂತಾದ ವಿಚಾರಗಳು ಹದವಾಗಿ ಕಾವ್ಯದಲ್ಲಿ ಬೆರೆತುಕೊಂಡಿವೆ.

ಗದಗ, ನಾರಾಯಣಪುರ, ಅವರಾದಿ, ನರಗುಂದ, ಗೋಪನಕೊಪ್ಪದಲ್ಲಿ ತನ್ನ ಲೀಲೆಯನ್ನು ಮೆರೆದು ಉಣಕಲ್ಲ ಗ್ರಾಮವನ್ನು ತನ್ನ ವಾಸಸ್ಥಳವನ್ನಾಗಿ ಆಯ್ಕೆಮಾಡಿಕೊಂಡು ಆ ಕ್ಷೇತ್ರವನ್ನು ಪಾವನ ಮಾಡಿದ್ದಾರೆ.

ಮರವೆಯಿಂದಲಿ ಬಾಲನಾದವ ।
ನರುವಿನಿಂ ಮಿಗೆ ಪ್ರೌಢನಾದಡೆ ।
ಮರವೆ ಮಾತ್ರಕೆ ನಾಶವಲ್ಲದೆ ವಸ್ತುವಿಗೆಯಿಲ್ಲ ॥
ಪರ ಪದಾರ್ಥ ಮನಸ್ಸುಮಿದರಂ ।

ತಿರುತ ಭೇದ ಭ್ರಾಂತಿಯನಿತೇ ।
ಪರಿದು ಪೋಗುವದೆಂದು ತಿಳಿಪುವ ಸಿದ್ಧಗೆಣೆಯಾರು ॥

(ಪುಟ : ೬೫, ಪದ್ಯ : ೧೭)

ತನ್ನ ಪ್ರೌಢಿಮೆಯನ್ನು ವಿಸ್ತರಿಸುತ್ತಾ ತಾನು ಬೆಳೆಯಲಿಕ್ಕೆ ಪ್ರಾರಂಭಿಸಿದರು. ಮುಂದೆ

ನೈಷ್ಠಿಕ ಬ್ರಹ್ಮಚರ ಪರರಾ
ಗೋಷ್ಠಿಯಂ ನೀಕರಿಸಿ ಮನದೊಳು
ಶ್ರೇಷ್ಠವಾದಾ ತೂರ್ಯದಿಂ ನಿಷ್ಠಿಷ್ಟ ತನುವಾಗಿ ॥
ಓಷ್ಠ ಪುಷ್ಪಾದಿಗಳ ಧರಿಸುತ
ಸೌಷ್ಟವನು ಹೆಗ್ಗಳಿಸಿ ಕರದೊಳು
ಕಾಷ್ಠಮಂ ಪಿಡಿಯುತ್ತೆ ನೆಗೆದಾಡುವನು ಥೈಯೆಂದು ॥

(ಪುಟ : ೮೯, ಪದ್ಯ : ೧೬)

ಹೀಗೆ ತನ್ನ ಇರುವಿಕೆಯನ್ನು ಬದಲಿಸುತ್ತಾ, ಈ ಲೋಕದಲ್ಲಿಯ ಅಶಾಂತಿಯನ್ನು ಹೋಗಲಾಡಿಸುತ್ತಾ, ತನ್ನ ಕಾಯಕ ಸಿದ್ಧಾಂತ ತತ್ವವನ್ನು ಜನರಿಗೆ ಬೋಧಿಸುತ್ತಾ ಭಕ್ತ ಹೃದಯದಲ್ಲಿ ನೆಲೆನಿಂತರು.

ಶ್ರೀ ಸಿದ್ಧೇಶ್ವರ ಶಿವಯೋಗಿಗಳು ಕೇವಲ ತಾವು ನಿಂತ ನೆಲವನ್ನು ಪಾವನ ಮಾಡದೇ, ಹಲವು ಶಿವಯೋಗಿಗಳ ಕೃಪೆ ಪಡೆದು ಅನೇಕ ಸ್ಥಳಗಳನ್ನು ಸಂಚರಿಸಲಿಕ್ಕೆ ಪ್ರಾರಂಭಿಸಿದರು. ಹೋದ ಸ್ಥಳದಲ್ಲಿ ಆಯಾ ಭಕ್ತರ ದುಃಖವನ್ನು ದೂರ ಮಾಡುತ್ತಾ ಅವರಲ್ಲಿ ಭಕ್ತಿ ಸುಧೆಯನ್ನು ಹಚ್ಚಿಸಿದರು. ಕಿತ್ತೂರು, ಹಿರೇಕುಂಬಿ, ಇಬ್ರಾಹಿಂಪುರ, ಮುಂತಾದ ಗ್ರಾಮದಲ್ಲಿ ಶ್ರೀಗಳು ಮಾಡಿದ ಲೀಲೆ ಇಂದಿಗೂ ಪ್ರಸ್ತುತವಾಗಿ ಉಳಿದುಕೊಂಡಿವೆ. ಹಲವು ಮನೆತನಗಳು ಇವರ ಕೃಪೆಗೆ ಪಾತ್ರರಾಗಿ ಶ್ರೇಷ್ಠ ಮಟ್ಟದ ಜೀವನವನ್ನು ಸಾಗಿಸಿವೆ. ಅವೆಲ್ಲ ಇವರ ದಿವ್ಯ ಶಕ್ತಿಯ ಪ್ರತೀಕವೆಂಬತೆ ಕವಿ ಕಾವ್ಯದಲ್ಲಿ ತಂದಿದ್ದಾರೆ.

ಸಿದ್ಧ ನೀನೀ ಜಗದ ಬದ್ಧರ
ನುದ್ಧರಿಸ ಬಂದವನುಮಲ್ಲದೆ
ಸಿದ್ಧ ಪರಮಾನ್ನುಂಬುದಕಮ್ಮೈ ತಂದವನುಮಲ್ಲ ॥
ಇದ್ದ ಝುರ್ಝುರಿಯೊಳಗೆ ನಮ್ಮನು
ಬಿದ್ದುಕೊಳ್ಳುವ ವೋಲು ಮಾಡುತೆ
ತಿದ್ದಿ ಭವದಾ ಗಲ್ಲಣೆಯ ತಪ್ಪಿಸುವೆಯೆಂತೆಂದು ॥

(ಪುಟ : ೧೬೫, ಪದ್ಯ : ೧೬)

ಎಂಬ ಮಾತಿನಂತೆ ಜನರಿಗೆ ತಮ್ಮ ದಿವ್ಯ ದರ್ಶನವನ್ನು ನೀಡಿ ಅವರನ್ನು ಪುನೀತರನ್ನಾಗಿಸಿದ ಬಗೆಯನ್ನು ಕವಿ ಸೋದಾಹರಣವಾಗಿ ಚಿತ್ರಿಸಿದ್ದಾರೆ.

ಒಟ್ಟಿನಲ್ಲಿ ಈ ಪುರಾಣ ಕಾವ್ಯವು ಶ್ರೀ ಸಿದ್ಧೇಶ್ವರ ಶಿವಯೋಗಿಯ ವಿವಿಧ ವ್ಯಕ್ತಿತ್ವದ ದರುಶನವನ್ನು ಮಾಡಿಸುವದರ ಜೊತೆಗೆ ಅವರ ಜೀವನ ಹಾಗೂ ಸಾಧಿಸಿದ ಸಿದ್ಧಿ-ಸಾಧನ, ಮಾಡಿದ ಲೀಲೆಯನ್ನು ಸರಳವಾಗಿ ಭಾಮಿನಿಯ ಲಯದಲ್ಲಿ ಚಿತ್ರಿಸುವದರ ಜೊತೆಗೆ ಆ ದೇವತಾ ಮಾನವನ ಮಹಾಮಹಿಮೆಯನ್ನು ಸಹೃದಯರಿಗೆ ಪರಿಚಯಿಸುವ, ವಿವರಿಸುವ, ವಿಶ್ಲೇಷಿಸುವ ಕಾರ್ಯವನ್ನು ಈ ಕಾವ್ಯ ಮಾಡಿದೆ ಎಂದು ಹೇಳಬಹುದು.

◆◆◆

೩.೮ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ಪುರಾಣ ಕಾವ್ಯ

* ಕವಿ
* ಕೃತಿ

  ೧. ಶ್ರೀ ಶಿವಾನಂದ ಸ್ವಾಮಿ ಪುರಾಣ

ಕವಿ :

ಪಂ. ಮಲ್ಲಿಕಾರ್ಜುನ ಸ್ವಾಮಿಗಳು ಗದುಗಿನಲ್ಲಿ ಉಳಿದು 'ಶ್ರೀ ಶಿವಾನಂದ ಸ್ವಾಮಿ ಪುರಾಣ'ವನ್ನು ಬರೆದರು. 'ವೇದಾಂತ ಕೇಸರಿ', 'ಜಂಗಮ ಸಾಮ್ರಾಟ' ಎಂದು ಪ್ರಖ್ಯಾತರಾದ ಕವಿಗಳು ಶಿವಾನಂದರ ಪರಮ ಶಿಷ್ಯರಾಗಿದ್ದರು. ತಮಗೆ ಪ್ರತ್ಯಕ್ಷ ಪವಾಡಗಳು ಕಂಡ ಬಳಿಕವೇ ಈ ಕಾವ್ಯವನ್ನು ಬರೆದೆನು ಎಂದು ಕವಿಗಳು ತಿಳಿಸುತ್ತಾರೆ. ತಾವು 'ಸರ್ವತ್ರ ಸಮದರ್ಶಿ ಪಂಡಿತ' ಆಗಿದ್ದು, ಶಿವಾನಂದರ ಚರಿತ್ರೆಯನ್ನು ಶಿವಾನಂದರೇ ನುಡಿಯಿಸಿದ್ದಾರೆ ಎಂದು ಅರ್ಪಣಾ ಭಾವವನ್ನು ಪ್ರಕಟಗೊಳಿಸಿದ್ದಾರೆ.

೩.೮.೧. ಶ್ರೀ ಶಿವಾನಂದ ಸ್ವಾಮಿ ಪುರಾಣ

ಶ್ರೀ ಶಿವಾನಂದ ಸ್ವಾಮಿಪುರಾಣ ಕಾವ್ಯವು ವಾರ್ಧಕ ಷಟ್ಪದಿಯಲ್ಲಿ, ೨೮ ಸಂಧಿಗಳಲ್ಲಿ ರಚಿತವಾಗಿದ್ದು, ೭೭೮ ಪದ್ಯಗಳನ್ನು ಹೊಂದಿದೆ. ಈ ಕೃತಿಯು ಶಿವಾನಂದ ಸ್ವಾಮಿಯವರ ಜೀವನ-ಸಾಧನೆ, ವಿವೇಕ-ವಿಚಾರ, ತತ್ವ ಹಾಗೂ ಸಾಧನೆಯ ಸಿದ್ಧಿ-ಪ್ರಸಿದ್ಧಿಯನ್ನು ಅಧಿಕೃತವಾಗಿ ಪರಿಚಯಿಸುವ, ವಿಶ್ಲೇಷಿಸುವದರ ಜೊತೆಗೆ ಅವರ ಪರಮ ಬೋಧೆಯ ಅರಿವನ್ನು ನೆನಪಿಸುವುದರ ವಿಶಿಷ್ಟ ಕೃತಿಯಾಗಿದೆ.

ಕೃತಿಯ ಆರಂಭವು ರಮ್ಯವಾಗಿ ಶಿವಾನಂದ ಸ್ವಾಮಿಯ ೧೦೮ ನಾಮಾವಳಿಗಳಿಂದ ಪ್ರಾರಂಭಗೊಂಡು, ವಿವಿಧ ದೇವಾನುದೇವತೆಗಳ ಸ್ತುತಿಯಿಂದ ಪ್ರಾರಂಭಗೊಂಡಿದೆ. ಶಿವನ ಅನುಗ್ರಹದ ಬಲದಿಂದ ಈ ಧರೆಗೆ ಅವತರಿಸಿದ ಮಹಾನುಭಾವರೇ ಶಿವಾನಂದ ಸ್ವಾಮಿಗಳು ಎಂಬುದನ್ನು ಕವಿಗಳು ಸ್ವಾರಸ್ಯಕರವಾಗಿ ಪೌರಾಣಿಕ ಕಥೆಗಳ ಮೂಲಕ ಪರಿಚಯಿಸಿದ್ದಾರೆ. ರೋಣದ ತೋಟಗಂಟಿ ಮನೆತನದ 'ಲಿಂಗನಗೌಡ' ಮತ್ತು 'ಬಸಮ್ಮ' ಎಂಬ ಶರಣ

ದಂಪತಿಗಳ ಉದರದಲ್ಲಿ ಜನಿಸಿದ ಮಹಾನ್ ದಾರ್ಶನಿಕ ಗುರುವರರಾದ ವೀರನಗೌಡರು ಎಂಬ ಮೂಲ ಹೆಸರನ್ನು ಪಡೆದು, ನಾಗಲಿಂಗ ಶಿವಯೋಗಿಗಳಿಂದ ಆಶೀರ್ವಾದ ಪಡೆದು ಈ ಭೂಮಿಗೆ ಶಿವನ ಅವತಾರವಾಗಿ ಕಾಲಿಟ್ಟು ಸಿದ್ಧ ಸಾಧಕರಾದವರು ಶ್ರೀ ಶಿವಾನಂದ ಸ್ವಾಮಿಗಳು.

"ಜೀವನದಲ್ಲಿ ಗೃಹಸ್ಥರಾಗಿ, ಶಿಕ್ಷಕರಾಗಿ, ಮಣಿಹಾಳ ಗ್ರಾಮದ ಪಾಟೀಲರಾಗಿ, ಇಹದ ದಂದುಗದಲ್ಲಿಯೇ ಪರಮ ತತ್ವದ ಅನುಷ್ಠಾನ ಬಲಿಸಿ ಆದಿಶಕ್ತಿಯನ್ನು ಒಲಿಸಿ, ಲೋಕಕ್ಕೆ ಕಾಯಕನಿಷ್ಠ ಅರವಿನದಾರಿ ತೋರಿದ ಮಹಾಮಹಿಮರು. ಪರಮಗುರು ಬನಹಟ್ಟಿಯ ಶ್ರೀ ರುದ್ರಸ್ವಾಮಿಗಳವರ ಪರಮ ಶಿಷ್ಯರಾಗಿ ಶೈವಾನುರಾಗದ, ನಿಜಗುಣರ ನಿಜತತ್ವ ಬೋಧೆಯು ಕರಿಗೊಂಡು ಜೀವನ ಮರೆಸಿ ಭಾವನೆಯ ಅರಿವಿನ ಸ್ಥಿತಿ ತಿಳಿಸಿ ಮಾನವತೆಯನ್ನು ಮಹತತ್ವದತ್ತ ನಡೆಯಿಸಿದರು." (ಮುನ್ನುಡಿ ಪುಟ : ೬ ಶ್ರೀ ಜಗದ್ಗುರು ನಂದೀಶ್ವರ ಮಹಾಸ್ವಾಮಿಗಳು) ಮುಂದೆ ಗುರು ಶ್ರೀ ಸಿದ್ಧಾರೂಢರ ಕೃಪೆಗೆ ಪಾತ್ರರಾಗಿ 'ಶಿವಾನಂದ ಸ್ವಾಮಿ' ಎಂಬ ನಾಮಧರಿಸಿದವರು. 'ಕೃತಪುರ' (ಗದಗ) ಎಂಬ ಗ್ರಾಮವನ್ನು ಆಯ್ಕೆ ಮಾಡಿಕೊಂಡು ಅಲ್ಲಿಯೇ ನೆಲೆನಿಂತು ಲೋಕಕ್ಕೆ ಆಧ್ಯಾತ್ಮದ ಸುಧೆಯನ್ನು ಉಣಬಡಿಸಿದವರು ಶಿವಾನಂದ ಸ್ವಾಮಿಗಳು.

ಶಿವಾನಂದರು ಜನಿಸಿದ ಒಂಬತ್ತು ವರ್ಷಗಳವರೆಗೆ ಮೌನವಾಗಿದ್ದು ಎಲ್ಲ ಜನರು ಇವರನ್ನು ಮೂಕ ಎಂದು ಕರೆಯುತ್ತಿದ್ದರು. ಯುವಶಕ್ತಿಯ ಬಲದಿಂದ ಮೌನಮುರಿದು ಹೊರಬಂದು ಲೋಕಕ್ಕೆ ಅಂಟಿದ ಅಸತ್ಯದ ನಂಟನ್ನು ದೂರಮಾಡಲು ಬಂದಿರುವದನ್ನು ತಮ್ಮ ಬಾಲ್ಯದ ಲೀಲೆಯ ಮೂಲಕ ತೋರಿಸಿಕೊಟ್ಟರು. ಆ ಸಂದರ್ಭವನ್ನು ಕವಿಗಳು ಅರ್ಥಪೂರ್ಣವಾಗಿ ಕೃತಿಯಲ್ಲಿ ವಿಶ್ಲೇಷಿಸಿದ್ದಾರೆ.

ಹಿಂದೆ ಬಂದಪರೆನಗೆ ಗೌಡರಾಮೂಕನಿವ
ನೆಂದೆನ್ನ ಹೊರೆಹೊತ್ತು ಜನನಿ ಜನಕರೆಡೆಗೈ
ತಂದವರು ಮಾರ್ಗದೊಳು ಭಾರದಿಂ ನಿಂತ ನಿಮ್ಮಣುಗನಂ ಕರತಂದೆವು ।
ಇಂದಿನಿಂದೋರ್ವನಂ ಕಳುಹಬೇಡಿರಿ ಮೂಕ
ನೆಂದಾರು ಮಾತನಾಡಿಸರು ದನಕರುಗಳುಂ
ಬಂದರಿವ ದಾರಿಬಿಡ ದಡ್ಡ ಮಗನೆಂದುದಾಸಿಸಬೇಡಿರೆಂದೆಂದರು ॥

(ಪುಟ : ೧೯, ಪದ್ಯ : ೧೯)

ಎಂಬಲ್ಲಿ ಶಿವಾನಂದ ಸ್ವಾಮಿಗಳ ಬಾಲ್ಯದ ಮೌನ ಹಾಗೂ ಅಕ್ಕಪಕ್ಕದವರ ಕೊಂಕು ನುಡಿಗಳು ಎದ್ದು ಕಾಣುತ್ತವೆ.

ಬಾಲ್ಯದಲ್ಲಿ ಶಿವಾನಂದರು ಸ್ವಅಧ್ಯಯನ-ಅಧ್ಯಾಪನಗಳಿಂದ ಜ್ಞಾನದ ಹಸಿವನ್ನು ನೀಗಿ ನಾಡಿನ ಶ್ರೇಷ್ಠ ಶಿವಯೋಗಿಗಳ ದರ್ಶನ ಆಶೀರ್ವಾದವನ್ನು ಪಡೆಯುತ್ತ, ಹಲವು ಪುಣ್ಯಕ್ಷೇತ್ರಗಳಿಗೆ ಹೋಗಿ ತನ್ನ ಆಧ್ಯಾತ್ಮದ ಅಮೃತವನ್ನು ಸವಿಸಲಿಕ್ಕೆ ಪ್ರಾರಂಭಿಸಿದರು. ತಾನು ಶಿಕ್ಷಕನಾಗಿ

ನವಲಗುಂದದ ಹತ್ತಿರವಿರುವ 'ಸೊಟಕನಾಳ' ಗ್ರಾಮದಲ್ಲಿ ಇರಲು ಅಲ್ಲಿ ಬ್ರಿಟಿಷ ಅಧಿಕಾರಿಯ ಜೊತೆ ನಡೆದ ಘಟನೆ ಈ ಪುರಾಣ ಕಾವ್ಯದಲ್ಲಿ ಚಾರಿತ್ರಿಕವಾಗಿ ದಾಖಲಾಗಿದೆ. ಆ ಅಧಿಕಾರಿ ಇವರನ್ನು ಶಿಕ್ಷಕ ಹುದ್ದೆಯಿಂದ ತೆಗೆಯಲು ಮಾಡಿದ ಪ್ರಯತ್ನ ತುಂಬಾ ವಿಶಿಷ್ಠತೆಯಿಂದ ಕಂಡುಬಂದಿದೆ. ಸೂಕ್ಷ್ಮವಾಗಿ ಈ ಭಾಗವನ್ನು ನೋಡಿದರೆ ಆ ಒಂದು ಸಂದರ್ಭದಲ್ಲಿ ಶಿವಾನಂದ ಸ್ವಾಮಿಗಳು ಬ್ರಿಟಿಷರ ಆಡಳಿತವನ್ನು ಒಪ್ಪಿಕೊಳ್ಳದೇ ಸ್ವತಂತ್ರ ವಿಚಾರವಾದಿಗಳಾಗಿದ್ದರು ಎಂಬುದು ಕಂಡುಬರುತ್ತದೆ. ಆ ಒಂದು ಸಂದರ್ಭವನ್ನು ಕವಿಗಳು ಈ ರೀತಿಯಲ್ಲಿ ಚಿತ್ರಿಸಿದ್ದಾರೆ.

ಪೋದದಿನ ಮೇಲಿನವರಿಗೆ ನವಲಗುಂದ ಗಡಿ
ಯಾದಾ ಸೊಟಕನಾಳ ಗ್ರಾಮ ಸಾಲೆಯ ಪಂತ
ನಾದ ವೀರನಗೌಡನುದ್ಧಟನು ವಿದ್ಯೆ ಕಲಿಸನವ ಸರಕಾರಕೆ ಪ್ರತಿ ॥
ವಾದಿಯಾಗಿರ್ಪನವನಿಂದೆ ಫಲವಿಲ್ಲವಾ
ವಾದಿಯಂ ಕೆಲಸದಿಂ ತೆಗೆಯಬೇಕೆಂದು ದು
ರ್ವಾದಿಯೊಂದರ್ಜಿ ಕಳುಹಲದು ಮಂಜೂರಾಗದಲ್ಲಿಯೇ ತಾನಡಗಿತು॥

(ಪುಟ : ೬೨, ಪದ್ಯ : ೧೫)

ಶ್ರೀ ಶಿವಾನಂದ ಸ್ವಾಮಿಗಳು ತಮ್ಮ ಜೀವಿತಾವಧಿಯಲ್ಲಿ ಅನೇಕ ಘಟನೆಗಳನ್ನು ಎದುರಿಸಿದವರು. ತಾವು ಅನುಷ್ಠಾನಕ್ಕೆ ಕುಳಿತ ಸಂದರ್ಭದಲ್ಲಿ ರಾಮದುರ್ಗದ ಕಾರಭಾರಿಯು ಗುಂಡು ಹಾರಿಸಿದ್ದು, ಶ್ರೀ ರುದ್ರ ಸ್ವಾಮಿಗಳಿಂದ ದೀಕ್ಷೆಯನ್ನು ಪಡೆದಿದ್ದು ಮುಂತಾದವುಗಳು ಕಾವ್ಯದಲ್ಲಿ ಹದುಳವಾಗಿ ಸೇರಿಕೊಂಡಿವೆ. ಈ ಎಲ್ಲ ಘಟನೆಯ ನಂತರ ಶ್ರೀ ಶಿವಾನಂದ ಸ್ವಾಮಿಗಳು ತಮ್ಮ ಲೀಲೆಯನ್ನು ಲೋಕದಲ್ಲಿ ತೋರಿಸಿರುವ ಪ್ರಸಂಗಗಳು ಪ್ರಮುಖವಾಗಿ ಕಂಡು ಬರುತ್ತವೆ. ಅವುಗಳಲ್ಲಿ ಮುಖ್ಯವಾಗಿ

೧. ಶಬರಿಯನ್ನು ಒಲಿಸಿಕೊಂಡದ್ದು
೨. ಹುಲಿಗೆ ಸಾತ್ವಿಕತೆಯನ್ನು ಬೋಧಿಸಿದ್ದು
೩. ಎಲ್ಲಪ್ಪನನ್ನು ಮಲಪ್ರಭಾನದಿ ದಾಟಿಸಿದ್ದು

ಮುಂತಾದವುಗಳು ಪ್ರಮುಖವಾಗಿ ಈ ಕಾವ್ಯದಲ್ಲಿ ಕಂಡು ಬಂದಿವೆ.

ಒಟ್ಟಿನಲ್ಲಿ ಒಬ್ಬ ಸಮಾಜ ಸುಧಾರಕನಾಗಿ ಆ ಭಾಗದಲ್ಲಿ ಇಂದಿಗೂ ಸಹ ಭಕ್ತರ ಹೃದಯದಲ್ಲಿ ಉಳಿದಿರುವ ಶ್ರೀ ಶಿವಾನಂದ ಸ್ವಾಮಿಗಳು ಮಾಡಿದ ಲೋಕೋದ್ಧಾರದ ಕಾಯಕ ತತ್ವಗಳನ್ನು, ಅವರ ವಿಚಾರಶೀಲ ನುಡಿಗಳನ್ನು ಈ ಕೃತಿಯ ವಿವಿಧ ಸಹ ಸಂಬಂಧದ ಮೂಲಕ ವಿವರಿಸುವ ಉತ್ತಮ ಪುರಾಣ ಕಾವ್ಯವಾಗಿದೆ. ಶ್ರೀ ಶಿವಾನಂದರು ತಾವು ಮಾಡಿದ ಲೀಲೆಯನ್ನು ಭಕ್ತ ಜನರು ಪಡೆದುಕೊಂಡ ಆಧ್ಯಾತ್ಮದ ಸುಧೆಯನ್ನು ಕವಿಗಳು ತುಂಬಾ ಸ್ವಾರಸ್ಯಕರವಾಗಿ ಚಿತ್ರಿಸಿದ್ದಾರೆ. ಇಷ್ಟೆಲ್ಲಾ ಕಾಯಕ ಮಾಡಿದ ಶಿವಾನಂದ ಗುರುಗಳು ಕೃತಪುರದಲ್ಲಿ ತಮ್ಮ ದೇಹತ್ಯಾಗಮಾಡಿ ಆ ಕ್ಷೇತ್ರವನ್ನು ಸುಕ್ಷೇತ್ರವನ್ನಾಗಿ ಮಾಡಿದ್ದಾರೆ.

◆◆◆

೩.೯ ಶ್ರೀ ಪ್ರಭಣ್ಣ ಬೊಮ್ಮನಳ್ಳಿಯವರ ಪುರಾಣ ಕಾವ್ಯಗಳು

* ಕವಿ
* ಕೃತಿಗಳು

೧. ಶ್ರೀ ಗುರು ಸಿದ್ಧಾರೂಢ ಪುರಾಣ

೨. ಶಿಶುನಾಳ ಸಂತ ಶ್ರೀ ಗುರು ಶರೀಫರ ಪುರಾಣ

ಕವಿ :

ಶ್ರೀ ಬೊಮ್ಮನಹಳ್ಳಿಯವರು ಶಿರಹಟ್ಟಿ ತಾಲೂಕಿನ ಲಕ್ಷ್ಮೇಶ್ವರದ ಅಡರಕಟ್ಟಿ ಗ್ರಾಮದವರು. ದಿನಾಂಕ ೦೫-೦೨-೧೯೩೮ರಲ್ಲಿ 'ಬಸಪ್ಪ' ಮತ್ತು 'ಬಸವಣ್ಣೆವ್ವ' ದಂಪತಿಗಳಿಗೆ ಮಗನಾಗಿ ಜನಿಸಿದರು. ಧಾರವಾಡದ ಮೃತ್ಯುಂಜಯಪ್ಪಗಳ ಮಠದಲ್ಲಿ ಆಶ್ರಯ ಪಡೆದು ೧೯೬೦ರಲ್ಲಿ ಕರ್ನಾಟಕ ಕಾಲೇಜಿನಿಂದ ಸಂಸ್ಕೃತದಲ್ಲಿ ಬಿ.ಎ. ಪದವಿ ಪಡೆದರು. ೧೯೬೦ರಲ್ಲಿಯೇ ಬೆಳ್ಳಟ್ಟಿಯ ಎಸ್. ಎಫ್. ಹೈಸ್ಕೂಲಿನಲ್ಲಿ ಶಿಕ್ಷಕ ಸೇವೆಯನ್ನು ಪ್ರಾರಂಭಿಸಿದ ಇವರು ಗದುಗಿನ ಮಾಡೆಲ್ ಹೈಸ್ಕೂಲಿನಲ್ಲಿಯೂ ಸೇವೆಯನ್ನು ಸಲ್ಲಿಸಿರುವರು. ಬಳಿಕ ೧೯೬೪ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಸಂಸ್ಕೃತ ವಿಷಯದಲ್ಲಿ ಎಂ.ಎ. ಪದವಿ ಪಡೆದರು. ನಂತರ ೧೯೬೭-೬೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿಎಡ್ ಪದವಿಯನ್ನು ಪೂರೈಸಿದ ಇವರು ಅದೇ ವರ್ಷ ಜಮಖಂಡಿಯ ಸರಕಾರಿ ಬಿಎಡ್ ಕಾಲೇಜಿನಲ್ಲಿ ಸೇವೆ ಪ್ರಾರಂಭಿಸಿ, ನಂತರ ಲಕ್ಷ್ಮೇಶ್ವರದ ಮುನಸಿಫಲ್ ಹೈಸ್ಕೂಲಿನಲ್ಲಿ ಮುಖ್ಯಾಧ್ಯಾಪಕರಾಗಿ ವೃತ್ತಿಯಲ್ಲಿ ಮುಂದುವರಿದು ೧೯೯೬ರಲ್ಲಿ ನಿವೃತ್ತಿಹೊಂದಿದ್ದಾರೆ.

ಶ್ರೀಯುತರು ಮಾವ ಕರಿಯಪ್ಪನವರಿಂದ ಸಿದ್ಧಾರೂಢ ಸಂಸ್ಕೃತಿ, ಮುರುಘಾಮಠದ ಶರಣಸಂಸ್ಕೃತಿ ಹಾಗೂ ಲಕ್ಷ್ಮೇಶ್ವರದ ಪಂಚಾಚಾರ್ಯ ಸಂಸ್ಕೃತಿಗಳಿಂದ ಮುಪ್ಪುರಿಗೊಂಡ ಜ್ಞಾನಾನುಭವ, ಸಿದ್ಧಾರೂಢರ ಕುರಿತು ತಿಳಿದ ವಿಚಾರಗಳಿಂದ ಪ್ರಭಾವಿತರಾಗಿ ಅವರ ಜೀವನಚರಿತ್ರೆಯನ್ನು ಕುರಿತು ೧೯೯೪ರಲ್ಲಿ ಭಾಮಿನಿ ಷಟ್ಪದಿಯಲ್ಲಿ ಪುರಾಣಕಾವ್ಯ ಬರೆಯಲು ಪ್ರಾರಂಭಿಸಿ ೧೫೦ ಪದ್ಯಗಳನ್ನು ರಚಿಸಿದರು. ಆದರೆ ರಚನಾ ಸಂದರ್ಭದಲ್ಲಿ ಎದುರಾದ

ಅಡೆತಡೆಗಳಿಂದ ಅರ್ಧಕ್ಕೆ ನಿಂತ ಕಾವ್ಯವನ್ನು ಮುಂದೆ ೨೦೦೧ರಲ್ಲಿ ೧೨೪೫ ಭಾಮಿನಿ ಷಟ್ಪದಿ ಪದ್ಯಗಳಲ್ಲಿ ಬರೆದು ಪೂರ್ಣಗೊಳಿಸಿದರು. ಶಿಶುನಾಳಸಂತ ಶ್ರೀಗುರು ಶರೀಫರ ಪುರಾಣಕಾವ್ಯವನ್ನು ಬರೆದಿರುವರು. ಶರೀಫರ ಮತ್ತು ಶ್ರೀ ಸದ್ಗುರು ಸಿದ್ಧಾರೂಢರ ಪುರಾಣಕೃತಿಯಲ್ಲದೆ ಮಕ್ಕಳಿಗೆ ಉಪಯುಕ್ತವಾಗುವ 'Essays and Letters' ಹಾಗೂ ಶಿಕ್ಷಕರಿಗೆ ಮಾರ್ಗದರ್ಶನ ಮಾಡುವ 'ಕನ್ನಡ ಮಾತೃ ಭಾಷಾ ಬೋಧನೆ' ಗ್ರಂಥಗಳನ್ನು ಬರೆದಿದ್ದಾರೆ. 'ಸಿದ್ಧಾರೂಢರ ಪವಾಡಗಳು' ಭಾಗ-೧, ಭಾಗ-೨, ಆರೂಢರ ತತ್ವಚಿಂತನ, ಭಕ್ತಿ ಗೀತೆಗಳು, ಮುಂತಾದ ಸಾಹಿತ್ಯ ಸೇವೆ ಇವರಿಂದ ಸಂದಿದೆ. ೭-೮ ವರ್ಷಗಳಿಂದ ಲಕ್ಷ್ಮೇಶ್ವರದ ವಾಚೇಶ್ವರ ದೇವಸ್ಥಾನದಲ್ಲಿ ಪ್ರತಿನಿತ್ಯ ಸತ್ಸಂಗ ನಡೆಸುವ ಇವರು ಎರಡು ವರ್ಷಗಳಿಂದ ಪ್ರಭು ಪೂರ್ವ ಪ್ರಾಥಮಿಕ ಶಾಲೆಯನ್ನು ನಡೆಸುತ್ತಿದ್ದಾರೆ.

೩.೯.೧. ಶ್ರೀ ಗುರು ಸಿದ್ಧಾರೂಢ ಪುರಾಣ

ಶ್ರೀ ಗುರು ಸಿದ್ಧಾರೂಢ ಪುರಾಣವನ್ನು ಬೊಮ್ಮನಹಳ್ಳಿಯವರು ೧೨೪೫ ಭಾಮಿನಿ ಷಟ್ಪದಿ ಪದ್ಯಗಳಲ್ಲಿ, ೨೮ ಅಧ್ಯಾಯಗಳಲ್ಲಿ ರಚಿಸಿದ್ದಾರೆ. ಸಿದ್ಧಾರೂಢರ ಕಾರ್ಯಕ್ಷೇತ್ರ ಹುಬ್ಬಳ್ಳಿ. ಸಿದ್ಧನ ಆಗಮನದಿಂದ ಆ ಊರು ಹೂವಿನಬಳ್ಳಿಯ ಹಾಗೇ ತನ್ನ ಪ್ರಖ್ಯಾತಿಯನ್ನು ಪಡೆದುಕೊಂಡಿತು. ಸಿದ್ಧಾರೂಢರ ಹೆಸರು ಆ ಭಾಗದಲ್ಲಿ ಅಷ್ಟೇ ಅಲ್ಲ, ದೇಶದ ತುಂಬೆಲ್ಲ ಪ್ರತಿಯೊಬ್ಬ ಜನರಿಗೂ ಚಿರಪರಿಚಿತ. ಇಂತಹ ಶ್ರೇಷ್ಠ ಸಿದ್ಧ ಸಾಧಕರಾದ ಸಿದ್ಧಾರೂಢರು ಮಾಡಿದ ಕಾಯಕ ಹಾಗೂ ಜೀವನ ವೃತ್ತಾಂತದ ಜೊತೆಗೆ ಭಕ್ತರನ್ನು ಉದ್ಧರಿಸಿದ ಬಗೆಯನ್ನು ಸವಿವರವಾಗಿ ಚಿತ್ರಿಸುವ ಪುರಾಣ ಕಾವ್ಯವು ಬೊಮ್ಮನಹಳ್ಳಿಯವರಿಂದ ರಚಿತವಾಗಿದೆ.

ಸಿದ್ಧಾರೂಢರ ಕಥಾಕಾವ್ಯವು ಅನೇಕ ಉಪಮೆ, ರೂಪಕ ಹಾಗೂ ದೃಷ್ಟಾಂತಗಳ ಬಳಕೆಯಿಂದ ಸಹೃದಯರ ಗಮನವನ್ನು ಸೆಳೆಯುತ್ತದೆ. ಸಿದ್ಧಾರೂಢರು ಬಾಳಿ ಬದುಕಿದ ಬಗೆ, ಸಾಧನೆಯ ಸಿದ್ಧಿಯನ್ನು ಪಸರಿಸಿದ ಜ್ಞಾನಬೋಧೆ, ಭಕ್ತಿ ಭಾವದ ಪ್ರತೀಕವಾದ ಮಾತುಗಳು, ಚಾರಿತ್ರಿಕ ಘಟನೆಗಳು ಮುಂತಾದವುಗಳು ಈ ಕೃತಿಯಲ್ಲಿ ಹದುಳಗಟ್ಟಿ ನಿಂತುಕೊಂಡಿವೆ. ಆಧುನಿಕ ಪುರಾಣಕಾವ್ಯದಲ್ಲಿ ಅತೀ ಹೆಚ್ಚು ಸಹೃದಯರನ್ನು ಪಡೆದುಕೊಂಡ ಪುರಾಣ ಕಾವ್ಯ ಇದಾಗಿದೆ. ಸಿದ್ಧಾರೂಢನ ಭಕ್ತರ, ಪ್ರತಿಯೊಬ್ಬ ವ್ಯಕ್ತಿಯ ಮನೆಯಲ್ಲಿ ಈ ಪುರಾಣ ಕಾವ್ಯವು ದಿನನಿತ್ಯ ಪಠಣಕ್ಕೆ ತೊಡಗಿದೆಯೆಂದರೆ ಅದರ ಮಹತ್ವನ್ನು ಅರಿಯಬಹುದು.

ಕಾವ್ಯದ ಆರಂಭದಲ್ಲಿ ಗಣಪತಿ, ಸರಸ್ವತಿ, ಬ್ರಹ್ಮ, ವಿಷ್ಣು, ಮಹೇಶ್ವರ ಮುಂತಾದ ದೇವತೆಗಳನ್ನು ಸ್ತುತಿಮಾಡಿ ಕವಿ ಬೊಮ್ಮನಹಳ್ಳಿಯವರು ಕಾವ್ಯಕ್ಕೆ ಚಾಲನೆಯನ್ನು ಕೊಟ್ಟಿದ್ದಾರೆ. ಜೊತೆಗೆ ಕಾವ್ಯವನ್ನು ಅಹಮಿಕೆಯಿಂದ ಬರೆಯದೆ ಸಿದ್ಧಾರೂಢನ ಮೇಲಿನ ಭಕ್ತಿಯಿಂದ ಬರೆಯಲಾಗಿದೆ ಎಂದು ಕವಿ ನಿವೇದಿಸಿಕೊಂಡಿದ್ದಾನೆ. ಸಂಪ್ರದಾಯದಂತೆ ಧರ್ಮ-ನೀತಿಯು

ಅಧಃಪತನಕ್ಕೆ ಹೋಗುತ್ತಿರಲು ಶಿವನ ಕೃಪೆಯಂತೆ ಸಿದ್ಧಾರೂಢರು ಈ ಧರೆಗೆ ಬಂದಿದ್ದಾರೆ ಎಂದು ಹೇಳಿ ಅವರ ಜನನದ ಸಂದರ್ಭವನ್ನು ಅರ್ಥಪೂರ್ಣವಾಗಿ ವರ್ಣಿಸಿದ್ದಾರೆ.

ಬಿದಿರುಕೋಟೆಯ ಶರಣ ಸತಿಪತಿಯಾದ ತಾಯಿ 'ಮಲ್ಲಮ್ಮ' ತಂದೆ 'ಶಾಂತಪ್ಪ' ಅವರ ಉದರದಲ್ಲಿ

ಮೂರನೆಯ ಮಗನಾಗಿ ವರ ಶನಿ ।
ವಾರದಿನ ದುರ್ಮುಖೀ ಸಂವ
ತ್ಸರ ಹದಿನೆಂಟು ನೂರೈವತ್ತೆಂಟನೆ ಶಕೆಯಲಿ ॥
ಚಾರು ಚೈತ್ರದ ನವಮಿಯಲಿಯವ
ತಾರಿಸೈದನು ತಂದೆ ತಾಯಿಗ
ಪಾರ ಸುಖವನು ಕೊಡುತ ದೇವವತಾರಿಯಾಗುತಲಿ ॥

(ಪುಟ : ೯, ಪದ್ಯ : ೨೯)

ಎಂದರೆ ಕ್ರಿ.ಶ. ೧೮೩೭ರಲ್ಲಿ ಜನಿಸಿದ ಬಗೆಯನ್ನು ಚಾರಿತ್ರಿಕವಾಗಿ ದಾಖಲಿಸಿದ್ದಾರೆ. ಮುಂದೆ ಬಾಲ ಸಿದ್ಧನು ಬಾಲಕನಿದ್ದಾಗಲೆ ಹಲವು ಪವಾಡವನ್ನು ಮಾಡುತ್ತಾನೆ. ಆಧ್ಯಾತ್ಮ ಸಂಗವನ್ನು ಬಾಲ್ಯದಲ್ಲಿ ಅಂಟಿಸಿಕೊಂಡು ಜ್ಞಾನ, ಜಪ, ತಪ ಮಾಡುತ್ತ ದನಗಳನ್ನು ಕಾಯುತ್ತ ತನ್ನ ಗೆಳೆಯರ ಜೊತೆ ಯೋಗದಲ್ಲಿ ತಲ್ಲೀನನಾಗಿ ತನ್ನ ಲೀಲೆಯನ್ನು ವಿಸ್ತರಿಸುವ ಬಗೆ ಕಾವ್ಯದಲ್ಲಿ ಅದ್ಭುತವಾಗಿ ಚಿತ್ರಿತವಾಗಿದೆ.

ಬಾಲ ಸಿದ್ಧನು ತನ್ನ ಬಾಲ್ಯದಲ್ಲಿ ಗರಗದ ಮಡಿವಾಳಜ್ಜನ ಕೃಪೆಗೆ ಪಾತ್ರರಾಗಿ; ಅವರ ಅಚ್ಚುಮೆಚ್ಚಿನ ಶಿಷ್ಯರಾಗಿ, ಸದ್ಗುರುವಿನ ಬಯಕೆಯನ್ನು ನೀಗಿಸುವಲ್ಲಿ ಭವಕ್ಕೆ ವಿದಾಯ ಹೇಳಿ, ಜಂಗಮನಾಗಿ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡನು. ಮುಂದೆ ಜನರುದ್ಧಾರಕ್ಕಾಗಿ ತೀರ್ಥಯಾತ್ರೆಯನ್ನು ಕೈಕೊಂಡ ಪರಿಯನ್ನು ಕಾವ್ಯ ರಮಣೀಯವಾಗಿ ಕಟ್ಟಿಕೊಡುತ್ತದೆ. ಶ್ರೀಶೈಲ, ಹೇಮಕೂಟ, ಹಂಪಿ, ಉಳವಿ, ದ್ವಾರಕಾ ಮುಂತಾದ ಸಾವಿರಾರು ಶಿವಶರಣರ ಕ್ಷೇತ್ರಗಳ ದರುಶನವನ್ನು ಮಾಡುತ್ತ ತನ್ನ ದಿವ್ಯ ಜ್ಞಾನವನ್ನು ತುಂಬಿಕೊಳ್ಳಲಿಕ್ಕೆ ಪ್ರಾರಂಭಿಸಿದರು. ಆದರೆ ಎಲ್ಲ ಪುರಾಣ ಪುರುಷರಂತೆ ಸಿದ್ಧಾರೂಢರಲ್ಲ. ಏಕೆಂದರೆ ಸಿದ್ಧಾರೂಢರಿಗೆ ಬಂದ ಕಷ್ಟಗಳು, ಜನರು ಕೊಟ್ಟ ಕಷ್ಟಗಳು ಸಾಮಾನ್ಯವಾದುದಲ್ಲ. ಅವೆಲ್ಲವನ್ನು ಮೀರಿ ಆ ಸಾಧಕ ಯೋಗಿ ಬಾಳಿ ಬದುಕಿದುದು ನಿಜವಾಗಿಯೂ ಒಂದು ಪವಾಡವೇ ಸರಿ. ಜನರು ನೀಡಿದ ಕಷ್ಟವನ್ನು ದೇಹ ಪ್ರಾರಬ್ಧವೆಂದು ಬಗೆದು ಅಚಲನಿಷ್ಠೆಯಿಂದ ಮನದಲ್ಲಿ ಅವೆಲ್ಲವನ್ನು ಸ್ವೀಕರಿಸಿ, ತನ್ನ ಗುರುವಿನ ಮಾತಿನಂತೆ ನಡೆದು ಆರೂಢರಾಗಿ, ಜಗತ್ತಿನಲ್ಲಿ ತನ್ನ ಮಹಿಮೆಯನ್ನು ತಿಳಿಯಪಡಿಸಿದ ಸಿದ್ಧಿಸಾಧಕರಾದವರು ಸಿದ್ಧಾರೂಢರು.

ಶ್ರೀ ಸಿದ್ಧಾರೂಢರು ಅಷ್ಟ ಸಿದ್ಧಿಗಳನ್ನು ಸಂಪಾದಿಸಿದವರು. ಅವರ ಪ್ರತಿ ಹೆಜ್ಜೆಯು ಅಗಣಿತ ಲೀಲೆಯಿಂದ ಕೂಡಿವೆ. ಈ ಕಾವ್ಯ ಭಾಗದಲ್ಲಿ ಕೆಲವೊಂದಿಷ್ಟನ್ನು ಮಾತ್ರ ಕವಿಗಳು ಚಿತ್ರಿಸಿದ್ದಾರೆ. ಇನ್ನು ಅನೇಕ ಲೀಲೆಗಳು ಆ ಭಾಗದ ಜನರ ಮನದಲ್ಲಿ ಇಂದಿಗೂ ಉಳಿದಿವೆ. ಆ ಕಾಲದ ಸಮಕಾಲೀನ ತತ್ವಪದಕಾರರು ಸಿದ್ಧಿ ಸಾಧಕರಾದ ನವಲಗುಂದ ನಾಗಲಿಂಗ, ಶರೀಫ, ಮಡಿವಾಳಪ್ಪ ಮುಂತಾದವರ ಸ್ನೇಹ ಸಿದ್ಧಾರೂಢರಿಗೆ ದೊರೆತದ್ದರಿಂದ ಸಿದ್ಧಾರೂಢರು ಚಾರಿತ್ರಿಕ ದಾಖಲೆಯಲ್ಲಿ ಉಳಿದುಕೊಂಡಿದ್ದಾರೆ.

ಸಿದ್ಧಾರೂಢರಿಗೆ ಕೊನೆಗೂ ಕಷ್ಟಗಳು ಹೋಗಲಿಲ್ಲ. ಜನರ ಉದ್ಧಾರಕ್ಕಾಗಿ ಬೇಡಿದ ಜನರಿಗೆ ಬೇಡಿದ ಬಯಕೆಯನ್ನು ನೀಡಿದವನಿಗೆ ಕೊನೆಗೆ ಜನರು ಯಾವ ರೀತಿಯಲ್ಲಿ ಆ ಮಹಾತ್ಮಾನನ್ನು ನೋಡಿಕೊಂಡರು ಎಂಬುದು ತೀರ ಅಸಹ್ಯವನ್ನು ಹುಟ್ಟಿಸುತ್ತದೆ. ಪಾಶ್ಚಾತ್ಯ ದೇಶದಲ್ಲಿ ಶ್ರೇಷ್ಠ ತತ್ವಜ್ಞಾನಿಯಾದ ಸಾಕ್ರೇಟಿಸ್‌ನಿಗೆ ವಿಷವನ್ನು ಹಾಕಿದ ಜನರು ಸಿದ್ಧಿ ಸಾಧಕನಾದ ಸಿದ್ಧಾರೂಢರಿಗೂ ಅದೇ ವಿಷವನ್ನು ಕೊಟ್ಟು ಅವರು ದೇಹತ್ಯಾಗ ಮಾಡಲು ಕಾರಣರಾದರು.

ತಮ್ಮ ಜೀವಿತ ಅವಧಿಯಲ್ಲಿ ಹುಬ್ಬಳ್ಳಿಯನ್ನು ಕಾರ್ಯ ಕ್ಷೇತ್ರಮಾಡಿಕೊಂಡು ಆ ಪ್ರದೇಶವನ್ನು ಪ್ರಸಿದ್ಧಿಗೆ ತಂದ ಮಹಾನ್ ಯೋಗಿಯವರು. ಇಂತ ಪುರಾಣ ವ್ಯಕ್ತಿಗೆ ವಿಷವನ್ನು ಕೊಟ್ಟ ದುಷ್ಟ ಜನರ ಪರಿಯನ್ನು ಕಾವ್ಯದಲ್ಲಿ ಈ ರೀತಿ ಬಣ್ಣಿಸಿದ್ದಾರೆ.

ಕಡುಕು ವಿಷ ಕೊಂಡೊಯ್ದು ಸಿದ್ಧನ
ಬಡಕ ದೇಹವನೆಂದು ಮನದಲಿ
ಕೆಡಕು ಜನ ಹರ್ಷಿಸುತ ನಟನೆಯ ದುಃಖ ತೋರಿದರು ॥

(ಪುಟ : ೩೪೧, ಪದ್ಯ : ೧೨೬೮)

ಕೊನೆಗಳಿಗೆಯಲ್ಲಿ ಸಿದ್ಧಾರೂಢರು ದೇಹ ತ್ಯಾಗ ಮಾಡುವಾಗ, ತನ್ನ ಶಿಷ್ಯ ಆರೂಢರನ್ನು ಕರೆದು 'ಮೌನವಾಗಿರು ಈ ಜಗದೊಳಗೆ' ಎಂಬ ಮಾತನ್ನು ಹೇಳಿ ತಮ್ಮ ಉಸಿರನ್ನು ನಿಲ್ಲಿಸಿದರು.

ಒಟ್ಟಾರೆಯಾಗಿ ಈ ಪುರಾಣ ಕಾವ್ಯವು ಭಾಮಿನಿ ಷಟ್ಪದಿಯಲ್ಲಿ ಸರಳ ರೀತಿಯಲ್ಲಿ ರಚಿತವಾಗಿದೆ. ಸಿದ್ಧಾರೂಢರ ಬದುಕು ಸಾಧನೆ-ಸಿದ್ಧಿಗಳ ಚಿತ್ರಣ, ಜ್ಞಾನ ಬೋಧೆಯ ಹದವಾದ ಕಥನ ಬೆರೆತುಕೊಂಡಿವೆ. ಭಕ್ತಿಭಾವದ ನುಡಿಗಳು ಕವಿಗಳಿಂದ ವ್ಯಕ್ತವಾಗಿವೆ. ವೇದಾಂತ ಸಿದ್ಧಾಂತದ ಪರಿಕಲ್ಪನೆಯನ್ನು ಈ ಕೃತಿ ನೆನಪಿಸುತ್ತದೆ ಎಂದು ಹೇಳಬಹುದು.

೩.೯.೨. ಶಿಶುನಾಳ ಸಂತ ಶ್ರೀಗುರು ಶರೀಫರ ಪುರಾಣ

ಶ್ರೀಗುರು ಶರೀಫರ ಪುರಾಣ ಕರ್ತೃವಾದ ಬೊಮ್ಮನಹಳ್ಳಿಯವರು ಪ್ರಸ್ತುತ ಪುರಾಣಕ್ಕೆ ಒಂಭತ್ತು ಅಧ್ಯಾಯಗಳನ್ನು ಮಾಡಿಕೊಂಡು ಕೆಲವೊಂದು ಅಧ್ಯಾಯಗಳಿಗೆ ಉಪಅಧ್ಯಾಯಗಳನ್ನು ಮಾಡಿದ್ದಾರೆ. ಅಧ್ಯಾಯಗಳ ಕೊನೆಯಲ್ಲಿ ಹೊಸಗನ್ನಡದಲ್ಲಿ ಭಾವಾನುವಾದವನ್ನು ನೀಡಿದ್ದಾರೆ. ಈ ಪುರಾಣವನ್ನು ೨೭೭೮ ಪದ್ಯಗಳಲ್ಲಿ, ಭಾಮಿನಿ ಷಟ್ಪದಿಯ ಸರಳ ಶೈಲಿಯಲ್ಲಿ ರಚಿಸಿ ಓದುಗರಿಗೆ ಸುಲಭವಾಗಿ ಅರ್ಥವಾಗುವಂತೆ ಮಾಡಿದ್ದಾರೆ.

ಶಿಶುನಾಳ ಶರೀಫರು ಈ ನಾಡು ಕಂಡ ಒಬ್ಬ ಸಂತ ಶರಣರು, ಭಾವೈಕ್ಯದ ಹರಿಕಾರರು. ಸಮಾಜ ಸುಧಾರಕರು ಹಾಗೂ ವರಕವಿಗಳು. ಶರೀಫರಲ್ಲಿರುವ ಭಕ್ತಿ, ಶ್ರದ್ಧೆ ಅಪಾರವಾದುದು. ಇಂತಹ ಶರಣರ ಪುರಾಣವನ್ನು ಪ್ರಭು ಲಕ್ಷ್ಮೇಶ್ವರವರು ರಚಿಸಿ ಅವರ ಪವಾಡ, ಸಾಮಾಜಿಕ ಕಾರ್ಯಗಳನ್ನು ಎಲ್ಲರಿಗೂ ತಿಳಿಯುವಂತೆ ಮಾಡಿದ್ದಾರೆ.

ಪ್ರಾರಂಭದ ಅಧ್ಯಾಯಗಳಲ್ಲಿ ಶರೀಫರ ಬಾಲ್ಯ, ಶಿಕ್ಷಣ ಕುರಿತು ತಿಳಿಸಿದ್ದಾರೆ. ಬಾಲಕನಾಗಿದ್ದಾಗ ಶರೀಫರು ಸಂಗೀತ, ಆಧ್ಯಾತ್ಮ, ಮುಂತಾದ ಮನೋರಂಜನೆ ಮಾಡುತ್ತಾ ಆಸಕ್ತಿಯನ್ನು ಬೆಳಸಿಕೊಂಡು ದೊಡ್ಡವನಾದ ಮೇಲೆ ಗುರು ಗೋವಿಂದ ಭಟ್ಟರಲ್ಲಿ ವಿದ್ಯೆಯನ್ನು ಕಲಿಯುವರು. ಕಳಸದ ಗುರು ಗೋವಿಂದಭಟ್ಟರು ಅವನಿಗೆ ಇಡೀ ಆಧ್ಯಾತ್ಮ ಲೋಕವನ್ನು ಪರಿಚಯಿಸಿಕೊಟ್ಟ ರೀತಿಯನ್ನು ಪ್ರಭು ಲಕ್ಷ್ಮೇಶ್ವರರು ಹೀಗೆ ವರ್ಣಿಸುತ್ತಾರೆ.

ಸತ್ಯ ಪಥದಲಿ ಸಾಗಿ ಹೋದನು
ಸತ್ಯ ಗುರುವಿನ ಕೃಪೆಯ ಪಡೆದನು
ಮಿಥ್ಯ ಜಗದಾ ತಾಯಿ ತಂದೆಗೆ ಚಿಂತಿ ಆಯಿತಲೆ ।
ಮತ್ತೆ ಮುಪ್ಪಿನ ವಯದ ಕಾಲದಿ
ಕುತ್ತು ಬಂದರೆ ನೋಡಿಕೊಳ್ಳಲು
ನಿತ್ಯ ಮೊಮ್ಮಗ ಬೇಕು ಎನ್ನುತ ಆಸೆ ಮಾಡಿದರು ॥

(ಪುಟ : ೧೫, ಪದ್ಯ: ೫೪)

ಎಂದು ಗೋವಿಂದ ಭಟ್ಟರನ್ನು ಅರಸುತ್ತಾ ಕಳಸದ ಕಡೆ ಬಂದು ಶಿವಧ್ಯಾನದಲ್ಲಿ ಆಸಕ್ತಿಗೊಳ್ಳುತ್ತಾನೆ. ಪರಬ್ರಹ್ಮನನ್ನು ಪಡೆಯಲು ಆತ್ಮ ಜ್ಞಾನವನ್ನು ಪಡೆಯಲು, ಸಂಸಾರದ ಮನದ ಮೈಲಿಗೆಯನ್ನು ತೊಳೆದುಕೊಳ್ಳಲು ಗುರುಗಳಲ್ಲಿ ಬಂದಾಗ ಗುರುಗಳು ತಲೆಯ ಮೇಲೆ ಕೈ ಇಟ್ಟು ಸಮಸ್ಯೆಗಳನ್ನು ಆಲಿಸಿ ಪರಿಹಾರದ ಉಪದೇಶ ನೀಡುತ್ತಾರೆ.

ಪ್ರಭು ಬೊಮ್ಮನಹಳ್ಳಿಯವರ ಪ್ರಸ್ತುತ ಪುರಾಣದ ಮುಂದಿನ ಅಧ್ಯಾಯಗಳಲ್ಲಿ ಶರೀಫರ ಪವಾಡಗಳೇ ಅಧಿಕವಾಗಿ ತುಂಬಿ ಹೋಗಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಗುಡಗೇರಿ

ದ್ಯಾಮವ್ವದೇವಿ ಶ್ರೀ ಶರೀಫರಿಗೆ ನತ್ತು ಕೊಟ್ಟಿರುವ ಪವಾಡ, ಮನದ ಮೈಲಿಗೆಯನ್ನು ಕಳೆದುಕೊಂಡಿದ್ದು, ಲಕ್ಷ್ಮೇಶ್ವರದಲ್ಲಿ ಅಮವಾಸ್ಯೆಯನ್ನು ಹುಣ್ಣಿಮೆ ಮಾಡಿದ್ದು, ಲಕ್ಷ್ಮೇಶ್ವರದ ಕಲ್ಲು ಮಸೂತೆಯಲ್ಲಿ ಅಲ್ಲಾನ ಕಂಡಿದ್ದು. ಸೌದತ್ತಿ ಎಲ್ಲಮ್ಮನಿಂದ ಆಶೀರ್ವಾದ ಪಡೆದದ್ದು, ಶ್ರೀ ಸಿದ್ಧಾರೂಢರನ್ನು ಕಂಡಿದ್ದು, ಗೆಳೆಯನಿಗೆ ಶಾಪ ಕೊಟ್ಟಿದ್ದು, ಶಿಶುನಾಳದ ಕುಸ್ತಿಪಟು ಗಿಡ್ಡನನ್ನು ಸೋಲಿಸಿದ್ದು, ಹೀಗೆ ಅನೇಕ ಪವಾಡಗಳನ್ನು ಇಡೀ ಪುರಾಣದುದ್ದಕ್ಕೂ ವಿವರಿಸಿದ್ದಾರೆ.

ಶಿಶುನಾಳ ಶರೀಫರ ಪವಾಡಗಳನ್ನಷ್ಟೆ ಅಲ್ಲದೇ ಅನೇಕ ವೈಚಾರಿಕ ಸಂಗತಿಗಳನ್ನು ಪ್ರಭುರವರು ಇಲ್ಲಿ ಪ್ರಸ್ತಾಪಿಸಿದ್ದಾರೆ. ಸಂಸಾರ, ಪೂಜೆ, ಧ್ಯಾನ, ಆಸಕ್ತಿ, ಭಕ್ತಿ, ಹೇಗಿರಬೇಕು ಎಂಬುದನ್ನು ತಿಳಿಸಿದ್ದಾರೆ. ಅದನ್ನು ಕುರಿತು –

ಸೋರುತಿಹದೀ ಮನೆಯ ಮಾಳಗಿ
ಕೂರು ಮಾಳ್ಪರಿದನು ಶರೀರವ
ತೋರುತಿರುವವು ಮಾಯೆ ಮೋಹಗಳೆಲ್ಲವಿದರಲ್ಲಿ ।
ಸಾರಿದನು ತೊಲಿಯು ಹುಳುಕಂತಾ
ಯೇರಿ ಮೆಟ್ಟರು ಕಾಳು ಕತ್ತಲೆ
ಮಾರು ಹೋಗುತ ಮಾಯೆ ಮೋಹಗಳಿಗೆನುತ ನುಡಿದನು ॥

(ಪುಟ : ೬೫, ಪದ್ಯ : ೨೨೮)

ಈ ಸಂಸಾರದ ವ್ಯಾಮೋಹ ನಮ್ಮನ್ನು ದಾರಿ ತಪ್ಪಿಸುವ ರೀತಿ ಹಾಗೂ ನಮ್ಮಲ್ಲಿ ಇರುವ ದುರ್ಗುಣಗಳನ್ನು ನಾವು ಅರಿಯದೇ ಹೋದುದನ್ನು ಕಂಡು ಮರುಗುವಂತೆ ಮಾಡಿದ್ದಾರೆ. ಈ ನಶ್ವರವಾದ ದೇಹದ ಸುಖಕ್ಕಿಂತ ಭಕ್ತಿ ಮಾರ್ಗದಿಂದ ಗುರುವಿನ ಕರುಣೆಯಿಂದ ಸದ್ಭಾವನೆಯಿಂದ ಜೀವನ ಸಾಗಿಸಬೇಕೆಂಬುದು ಕವಿಯ ಆಶಯವಾಗಿದೆ.

ಶರೀಫರು ಮಾಡಿದಂತ ಅನೇಕ ಸಾಮಾಜಿಕಪರ ಕಾರ್ಯಗಳು ಪ್ರಸ್ತುತ ಪುರಾಣದಲ್ಲಿ ವ್ಯಕ್ತವಾಗಿರುವುದು ವಿಶೇಷವಾಗಿದೆ. ಇದರಲ್ಲಿ ಬಹಳ ಮುಖ್ಯವಾದದ್ದು ಎಂದರೆ ಹಿಂದೂ–ಮುಸ್ಲಿಂರನ್ನು ಒಂದೂ ಗೂಡಿಸಿ ಭಾವೈಕ್ಯತೆಯನ್ನು ಮೆರೆದದ್ದು. ಈ ವಿಷಯದಲ್ಲಿ ಶರೀಫರ ಏಳಿಗೆಯನ್ನು ಸಹಿಸದ ಕೆಲವರು ಅವರ ಚಿಲುಮೆಯಲ್ಲಿ ದತ್ತೂರಿ ಬೀಜವನ್ನು ಮಿಶ್ರಣ ಮಾಡಿ ಭತ್ತಿ ಸೇದಲು ನೀಡುತ್ತಾರೆ. ಆದರೆ ಶರೀಫರು ಗುರುವನ್ನು ನೆನೆದು ಸೇದಿದಾಗ ಅವರಿಗೆ ಏನೂ ಆಗುವುದಿಲ್ಲ. ಆದ್ದರಿಂದ ಇವರೊಬ್ಬ ಆಧುನಿಕ ಮಹಾಪುರಷರೆನ್ನಬಹುದು. ಶರೀಫರ ಆಹಾರ–ವಿಹಾರ, ಉಡುಗೆ–ತೊಡುಗೆ, ಆಚಾರ–ವಿಚಾರ–ನಡೆಯಲ್ಲಿ ಹೇಗೆ ನೋಡಿದರೂ ಅವರು ಸರಳ ಹಾಗೂ ಸಜ್ಜನಿಕೆಯ ದೇವಾಂಶ ಸಂಭೂತರಾಗಿ ನಮಗೆ ಕಾಣುತ್ತಾರೆ ಎಂಬುದನ್ನು ಕವಿ ಪ್ರಭುರವರು ವ್ಯಕ್ತಪಡಿಸುತ್ತಾರೆ.

'ಬೋಧ ಒಂದೇ ಬ್ರಹ್ಮನಾದ ಒಂದೇ ಸಾಧನೆ ಮಾಡುವ ಹಾದಿ ಒಂದೇ, ಜಾತಿ ಬಿಡಿರಿ ಅಲ್ಲಿಕೇರಿಗೆ ನಡಿರಿ' ಎಂದು ಎಚ್ಚರಿಸಿದ ಗುರುಗಳು ಶರೀಫರು. ಗುರುಗೋವಿಂದ ಭಟ್ಟರಿಂದ ಜನಿವಾರವನ್ನು ಹಾಕಿಸಿಕೊಂಡು ಜಾತಿಯ ಮೂಗ ಕೊಯ್ದರು ಎನ್ನಬಹುದು. ಇದು ಭಾವೈಕ್ಯತೆಗೆ ಸಜೀವ ಸಾಕ್ಷಿಯಾಗಿ ನಮ್ಮೆದುರಿಗೆ ನಿಲ್ಲುತ್ತದೆ ಎಂದು ಸಾರಿದವರು ಶರೀಫರು.

ಶ್ರೀ ಪ್ರಭು ಬೊಮ್ಮನಹಳ್ಳಿಯವರು ರಚಿಸಿದ ಗ್ರಂಥಗಳಲ್ಲಿ ಶರೀಫರ ಗ್ರಂಥವು ಶ್ರೇಷ್ಠವಾಗಿ ನಿಲ್ಲುತ್ತದೆ. ಸ್ಪಷ್ಟ ಸರಳ ಕನ್ನಡದಲ್ಲಿ ವಿಶ್ಲೇಷಣೆ, ವಿವರಣೆ, ಗದ್ಯಾನುವಾದ, ಸುಂದರ ವರ್ಣನೆಗಳು ಭಾಮಿನಿ ಷಟ್ಪದಿಯಲ್ಲಿ ಅಚ್ಚಾಗಿ ಉಳಿಯುವಂತೆ ಅನೇಕ ಘಟನಾವಳಿಗಳನ್ನು ಗದ್ಯದ ವಿವರಣೆಯಲ್ಲಿ ನೀಡಿದ್ದಾರೆ ಎನ್ನಬಹುದು.

◆◆◆

೩.೧೦ ಪಂ. ಬಾಲಚಂದ್ರ ಶಾಸ್ತ್ರಿ ಹಿರೇಮಠ ಅವರ ಪುರಾಣ ಕಾವ್ಯಗಳು

* ಕವಿ
* ಕೃತಿಗಳು

೧. ಬಿಲ್‌ಕೆರೂರ ಮೌನ ತಪಸ್ವಿ ಲಿಂ. ಶ್ರೀ ರುದ್ರಮುನಿ ಶಿವಾಚಾರ್ಯರ ಪುರಾಣ

೨. ಜಗದ್ಗುರು ಶ್ರೀ ವೀರಗಂಗಾಧರ ಪುರಾಣಂ.

೩. ಬೆಳವಣಿಕಿ ಗುರುಲಿಂಗಮ್ಮನವರ ಪುರಾಣ.

ಕವಿ :

ಪಂ. ಬಾಲಚಂದ್ರಶಾಸ್ತ್ರಿ ಹಿರೇಮಠ ಇವರು ಗದಗ ಜಿಲ್ಲೆ ರೋಣ ತಾಲೂಕಿನ ಚಿಕ್ಕಮಣ್ಣೂರಿನವರು. ಮೇ ೧೫, ೧೯೩೫ರಂದು ಜನಿಸಿದ ಇವರು 'ಸಿದ್ಧಯ್ಯ' ಮತ್ತು 'ಬಸಲಿಂಗಮ್ಮ'ನವರ ಪುತ್ರರು. ೧೯೫೦ರಲ್ಲಿ ಕನ್ನಡ ೭ನೇ ಇಯತ್ತೆ. ಮುಲ್ಕೀ ಪರೀಕ್ಷೆಯನ್ನು ಪಾಸು ಮಾಡಿದರು. ಇವರಲ್ಲಿ ಅನುವಂಶಿಕವಾಗಿ ಬಂದ ಸಂಗೀತದ ಒಲವನ್ನು ಗುರ್ತಿಸಿದ ಇವರ ತಂದೆ ಶಾಸ್ತ್ರಿಗಳನ್ನು ಗದುಗಿನ ವೀರೇಶ್ವರ ಪುಣ್ಯಾಶ್ರಮದಲ್ಲಿ ಪಂ. ಪುಟ್ಟರಾಜ ಕವಿ ಗವಾಯಿಗಳ ಬಳಿ ಸಂಗೀತ ವಿದ್ಯಾಭ್ಯಾಸ ಮಾಡಲು ಶಿಷ್ಯರನ್ನಾಗಿ ಸೇರಿಸಿದರು.

ಪಂ. ಪುಟ್ಟರಾಜ ಕವಿ ಗವಾಯಿಗಳಿಂದ ಸಂಗೀತ, ನಿಜಗುಣರಶಾಸ್ತ್ರ ಪುರಾಣ ರಚನೆಯ ಕಲೆ ಹಾಗೂ ಭಾಮಿನಿಷಟ್ಪದಿಯನ್ನು ಕರಗತ ಮಾಡಿಕೊಂಡ ಶಾಸ್ತ್ರಿಗಳು ೧೯೬೦ರಲ್ಲಿ ಕಾವ್ಯರಚನೆಗಾರಂಭಿಸಿ ಹಾವೇರಿಯ "ತೃಣಮಲ್ಲಿಕಾರ್ಜುನ ಶಿವಾಚಾರ್ಯರ ಪುರಾಣ"ವನ್ನು ಮೊದಲು ಬರೆದರು. ನಂತರ 'ಬಲ್‌ಕೆರೂರ ಹಿರೇಮಠದ ರುದ್ರಮನಿ ಶಿವಾಚಾರ್ಯರ ಪುರಾಣ', ಶ್ರೀ ಮದ್ರಂಭಾಪುರಿ ಪೀಠದ 'ಜಗದ್ಗುರು ವೀರಗಂಗಾಧರ ಶಿವಾಚಾರ್ಯರ ಪುರಾಣ', 'ಬೆಳವಣಕಿ ಗುರುಲಿಂಗಮ್ಮನವರ ಪುರಾಣ', ಹಾಗೂ 'ಬೆಳಗಾವಿ ನಾಗನೂರು ರುದ್ರಾಕ್ಷಿಮಠದ ಶಿವಬಸವ ಸ್ವಾಮಿಗಳ ಪುರಾಣ', ನೆಗಳೂರು 'ಶ್ರೀ ಗುರು ಶಾಂತೇಶ್ವರ ಪುರಾಣ' ಕೃತಿಗಳನ್ನು ನಾಟಕ,

ಕವನಸಂಕಲನ, ಕೀರ್ತನೆ, ಭಕ್ತಿಗೀತೆ, ಜನಪದಗೀತೆ, ಸುಪ್ರಭಾತ ಹಾಗೂ ನಾಮಾವಳಿಗಳು ಎಂಬ ಸಾಹಿತ್ಯವನ್ನು ರಚಿಸಿ ಪ್ರಕಟ ಮಾಡಿರುವರು. ಪುರಾಣ ಕೃತಿಗಳಲ್ಲದೆ 'ಚಿಕ್ಕಮಣ್ಣೂರೇಶ' ಕಾವ್ಯನಾಮದಿಂದ ಚಿಕ್ಕಮಣ್ಣೂರೇಶನ ಭಕ್ತಿಗೀತೆಗಳು, ಚಿಕ್ಕಮಣ್ಣೂರೇಶನ ಜನಪದಗೀತೆಗಳು, 'ಯೋಗದುಯ್ಯಾಲೆ' ಎಂಬ ಭಕ್ತಿ ಗೀತೆಗಳ ಸಂಕಲನ ಹಾಗೂ 'ಜೀವಾನುಭವ' ಎಂಬ ಕವನ ಸಂಕಲನ ರಚನೆಯಾಗಿವೆ. "ನವರಸಭರಿತ ನೂತನ ಶಿವಭಜನೆಗಳು ಹಾಗೂ ಮಂಗಳಾರತಿ ಪದಗಳು" ಪುಸ್ತಕ ಪ್ರಕಟವಾಗಿದೆ. ಹರಿಹರ, ಶರಣ-ಶರಣೆಯರ ಕೀರ್ತನೆಗಳು, ಸುಪ್ರಭಾತಗಳು ಭಕ್ತಿಗೀತೆಗಳು ಕ್ಯಾಸೆಟ್‌ಗಳಾಗಿವೆ.

೧೯೯೪ರಲ್ಲಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಬೆಂಗಳೂರು ಅವರಿಂದ 'ಕರ್ನಾಟಕ ಕಲಾ ತಿಲಕ' ಪ್ರಶಸ್ತಿ ಪಡೆದ ಇವರಿಗೆ 'ನಾಟ್ಯಕೋವಿದ', 'ಕೀರ್ತನ ಪುರಾಣ ಪ್ರವಚನ ಪ್ರವೀಣ', 'ಕೀರ್ತನ ಕಂಠೀರವ', 'ಕಾವ್ಯಾಕಾಶ ಕವಿಚಂದ್ರ' ಬಿರುದುಗಳು, ೨೦೦೨ರಲ್ಲಿ ಬಾಳೆಹೊನ್ನೂರಿನ ಜಗದ್ಗುರುಗಳು ನೀಡಿದ 'ಜಗದ್ಗುರು ರೇಣುಕಾಚಾರ್ಯ ಪ್ರಶಸ್ತಿ' ಹಾಗೂ ಶಿವಯೋಗ ಮಂದಿರದಿಂದ ಪಡೆದ 'ಪುರಾಣ ಕವಿ ನಾಟ್ಯಾಚಾರ್ಯ' ಬಿರುದುಗಳು ಇವರ ಪಾಂಡಿತ್ಯ ಹಾಗೂ ಕಲಾ ಪ್ರೌಢಿಮೆಗೆ ಗರಿ ಮೂಡಿಸಿವೆ.

೩.೧೦.೧. ಬಿಲ್‌ಕೆರೂರ ಮೌನತಪಸ್ವಿ ಲಿಂ. ಶ್ರೀ ರುದ್ರಮುನಿ ಶಿವಾಚಾರ್ಯರ ಪುರಾಣ

ಬಿಲ್‌ಕೆರೂರ ಬಾಗಕೋಟೆ ಜಿಲ್ಲೆಯ ಚಿಕ್ಕಗ್ರಾಮ. ಆ ಗ್ರಾಮದಲ್ಲಿಯ 'ಶ್ರೀರುದ್ರಮುನಿ ಶಿವಾಚಾರ್ಯರ ಪುರಾಣ ಕಾವ್ಯ'ವನ್ನು ಪಂಡಿತ ಬಾಲಚಂದ್ರ ಶಾಸ್ತ್ರಿಗಳು ಭಾಮಿನಿ ಷಟ್ಪದಿಯಲ್ಲಿ ೨೧ ಸಂಧಿಯಲ್ಲಿ ರಚಿಸಿದ್ದಾರೆ. ಪುರಾಣ ಕಾವ್ಯವು ಸಂಪ್ರದಾಯದಂತೆ ೨೧ ಭಾಗವನ್ನು ಹೊಂದಿದ್ದು, ೬೯೮ ಭಾಮಿನಿ ಷಟ್ಪದಿ ಪದ್ಯಗಳಿವೆ. ಆರಂಭದಲ್ಲಿ ಕವಿ ದೇವಾನುದೇವತೆಗಳ ಸ್ತೋತ್ರ ಪಠಿಸುವುದರ ಮೂಲಕ ತಾನು ಈ ಪುರಾಣ ಕಾವ್ಯವನ್ನು ಬರೆಯವ ಕಾರಣ ಹಾಗೂ ತನ್ನ ಸಂಕ್ಷಿಪ್ತ ಪರಿಚಯವನ್ನು ನೀಡಿ ಪುರಾಣಕ್ಕೆ ಚಾಲನೆಯನ್ನು ನೀಡಿದ್ದಾರೆ.

ಅವತಾರಿ ಪುರುಷರು ಧರ್ಮವನ್ನು ಉದ್ಧರಿಸಲು ಅವತರಿಸಿದಂತೆ ಶ್ರೀ ರುದ್ರಮುನಿ ಶಿವಾಚಾರ್ಯರು, ಬಲ್‌ಕೆರೂರು ಹಿರೇಮಠದ 'ಸಾತ್ವೀರಯ್ಯ' ಮತ್ತು 'ನೀಲಮ್ಮ' ಎಂಬ ಪುಣ್ಯ ದಂಪತಿಗಳ ಉದರದಲ್ಲಿ ತಾಯಿಯ ತವರು ಮನೆಯಾದ ನಿಡಗುಂದಿ ಗ್ರಾಮದಲ್ಲಿ -

ಶಾಲಿವಾಹನ ಶಕೆಯೊಳೊಪ್ಪುವ
ಕಾಲವದು ಪದಿನೆಂಟುನೂರರ
ಮೇಲೆ ಮೂವತ್ತೊಂದನೆಯ ವರಸೌಮ್ಯವತ್ಸರದೆ ॥

ಕೀಲಿಸಿದ ಗುರುವಾರ ದಿನದಲಿ
ನೀಲಮಾಂಬೆಯ ಗರ್ಭ ಕಡಲಲಿ
ಲೋಲ ಗುರುರವಿಯುದಿಸಿದನು ಬಿಲಕೇರಿ ಹಿರಿಮಠದ ॥

(ಪುಟ : ೨೬, ಪದ್ಯ : ೪೨)

ಜನಿಸಿದ ಬಾಲರುದ್ರೇಶ್ವರನಿಗೆ 'ಶ್ರೀಬಸವಲಿಂಗ ಶಿವಾಚಾರ್ಯರು' ವೀರಶೈವ ತತ್ವ ಬೋಧೆಯನ್ನು ಮಾಡುತ್ತಾರೆ. ಮುಂದೆ ಹುನಗುಂದ ದೊಡ್ಡಪ್ಪನವರ ಹತ್ತಿರ ಸಂಸ್ಕೃತ ಭಾಷೆಯನ್ನು ಅಭ್ಯಾಸಮಾಡುತ್ತಾರೆ. ತದನಂತರ ಹೆಚ್ಚಿನ ವಿದ್ಯಾಭ್ಯಾಸವನ್ನು ಕೋಟೆಕಲ್ಲು, ವಿಜಾಪುರ, ಸೊನ್ನಲಿಗೆ, ಬಳ್ಳಾರಿ, ಕೊಟ್ಟೂರು ಮುಂತಾದ ಕಡೆಗಳಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಪೂರೈಸುತ್ತಾರೆ.

ಶ್ರೀ ರುದ್ರಮುನಿ ಶಿವಾಚಾರ್ಯರ ಈ ಎಲ್ಲ ವಿದ್ಯಾಭ್ಯಾಸದಿಂದ ಆಧ್ಯಾತ್ಮದ ಕಡೆಗೆ ಅವರ ಮನಸ್ಸು ಹೊರಳಿ ಆ ಸೆಳೆತಕ್ಕೆ ಒಳಗಾಗುತ್ತಾರೆ. ತಮ್ಮ ಹಿಂದಿನ ಗುರುಗಳು ಮಾಡಿದ ತಪಸ್ಸಿನ ಸ್ಥಳವನ್ನು ಶೋಧ ಮಾಡಿ ಅಲ್ಲಿ ಗುಡಿಸಲು ನಿರ್ಮಿಸುತ್ತಾರೆ. ಹೊಳೆಯ ಅಡವೀಶ್ವರ ಶರಣರಲ್ಲಿ ಚರ್ಚಿಸಿ ಶಿವಯೋಗದ ರಹಸ್ಯವನ್ನು ಅರಿತುಕೊಳ್ಳುತ್ತಾರೆ. ಹೀಗೆ ಇವರ ವ್ಯಕ್ತಿತ್ವದ ಅಸಾಧಾರಣ ಲಕ್ಷಣಗಳು ಗೋಚರಿಸಲು ಪ್ರಾರಂಭಿಸುತ್ತವೆ. ಬಹು ವಿಶೇಷವಾದ ಒಂದು ಸಂಗತಿಯೆಂದರೆ ಬಿಲ್‌ಕೇರಿ ಗುಡ್ಡದ ಗವಿಯಲ್ಲಿ ಹನ್ನೆರಡು ವರ್ಷ ತಪಸ್ಸನ್ನು ಆಚರಿಸುತ್ತಾರೆ. ಜೊತೆಗೆ ಇದರಿಂದ ಆಧ್ಯಾತ್ಮದ ಸಿದ್ಧಿಯನ್ನು ಸಾಧಿಸುತ್ತಾರೆ. ಬಲ್‌ಕೆರೂರು ಹಿರೇಮಠದ ಎಂಟನೆಯ ಪಟ್ಟಾಧಿಕಾರಿಯಾಗಿ ಶಾಲಿವಾಹನ ಶಕೆ ೧೮೪೪ರಲ್ಲಿ ಗದ್ದುಗೆಯನ್ನು ಏರುತ್ತಾರೆ.

ತಮ್ಮ ಪಟ್ಟಾಧಿಕಾರ ಹಾಗೂ ಅನುಷ್ಠಾನ ಇವೆಲ್ಲವು ಮುಗಿದ ನಂತರ ಜನರ ಕಷ್ಟಸುಖಗಳನ್ನು ಗಮನಿಸಿ ಭಕ್ತರಿಗೆ ಒಳ್ಳೆಯದಾಗಲಿಯೆಂದು ಅನೇಕ ವಿಧದಲ್ಲಿ ತಮ್ಮ ಸಿದ್ಧಿ ಸಾಧನೆಯ ಲೀಲೆಯನ್ನು ಜಗತ್ತಿಗೆ ತೋರಿಸಲು ಪ್ರಾರಂಭಿಸುತ್ತಾರೆ. ಅವುಗಳಲ್ಲಿ :

೧. ಮುಸ್ಲಿಂ ಮಹಿಳೆ(ಮಾಸವ್ವ)ಯ ಕಷ್ಟ ನಿವಾರಣೆ.

೨. ಭಕ್ತರ ರೋಗ ವಾಸಿ ಮಾಡಿದ್ದು.

೩. ಪಾದೋದಕ, ಪ್ರಸಾದ ಮತ್ತು ಶ್ರೀ ರುದ್ರಾಕ್ಷಿ ಮಹಿಮೆ ತಿಳಿಸಿದ್ದು.

ಮುಂತಾದವುಗಳು ಅವರ ಲೀಲೆಯಲ್ಲಿ ಪ್ರಮುಖವಾದವುಗಳಾಗಿವೆ. ಒಬ್ಬ ವ್ಯಕ್ತಿ ತನ್ನ ಸಮಾಜದ ಒಳಿತಿಗಾಗಿ ಅನೇಕ ಕಾರ್ಯವನ್ನು ಹಾಕಿಕೊಳ್ಳುವಂತೆ, ಶ್ರೀಗಳು ಮಕ್ಕಳಿಗೆ ವಸತಿನಿಲಯ, ಶಾಲೆ ಮುಂತಾದವುಗಳನ್ನು ನಿರ್ಮಿಸಲು ತಮ್ಮ ಕಾಯಕವನ್ನು ಮುಂದುವರಿಸಿದ್ದರು. ಜೊತೆಗೆ ಅನೇಕ ಪವಾಡಗಳನ್ನು ಮಾಡುತ್ತಾ ತಮ್ಮ ಮಠದ ಕೀರ್ತಿಯನ್ನು ಉತ್ತುಂಗಕ್ಕೆ ಎತ್ತಿಹಿಡಿದರು.

ಭಕ್ತರಿಗಾಗಿ ನಾಡಿನ ನಾನಾ ಮೂಲೆಗಳಿಗೆ ಹೋಗಿ ತತ್ತ್ವ ಬೋಧೆಯನ್ನು ನೀಡುತ್ತಾ; ಸದ್ಗುಣ ಸದಾಚಾರಿಯಾಗಿರಲು, ಭಕ್ತರನ್ನು ಉದ್ಧರಿಸಲಿಕ್ಕೆ ಪ್ರಾರಂಭಿಸಿದರು. ಅಡವಿಹಾಳ ಗ್ರಾಮದಲ್ಲಿ ಶ್ರೀ ರುದ್ರಮುನಿ ಶಿವಾಚಾರ್ಯರು ಎಡೆಯೂರು ಶ್ರೀ ಸಿದ್ಧಲಿಂಗೇಶ್ವರ ಪುರಾಣ ಜರುಗಿಸಿದ್ದು, ಚಾರಿತ್ರಿಕವಾದ ಲೀಲೆಯಾಗಿದೆ. ರುದ್ರಮುನಿ ತಾಯಿಯಾದ 'ನೀಲಮ್ಮ'ನವರು ಸಂಗಮನಾಥ ದೇವಸ್ಥಾನದಲ್ಲಿ ಬಂದಾಗ, ಒಬ್ಬ ಶಿವಯೋಗಿಯು ಮಂಚದಲ್ಲಿಯ ತೆಂಗಿನಕಾಯಿ-ಯನ್ನು ನೀಲಮ್ಮನಿಗೆ ಆಶೀರ್ವದಿಸಿ ನಿನ್ನ ಗರ್ಭದಿಂದ ಮಹಾಗುರುವಿನ ಅವತಾರವಾಗುವದು. ಮುಂದೆ ಇದೇ ಮಂಚವು ಅವನಿದ್ದಲ್ಲಿ ಬರುತ್ತದೆ' ಎಂದು ಭವಿಷ್ಯವಾಣಿಯನ್ನು ಹೇಳಿದ್ದರು. ಅದೇ ರೀತಿ ಸಂಗಮದಲ್ಲಿದ್ದ ಆ ಮಂಚವನ್ನು ಭಕ್ತರು ಶ್ರೀ ರುದ್ರಮುನಿಗಳಿಗೆ ಕಾಣಿಕೆಯಾಗಿ ಕೊಟ್ಟಿದ್ದಾರೆ. ಆ ಮಂಚವನ್ನು ಶ್ರೀ ಜಾತವೇದ ಮುನಿಗಳು ಉಪಯೋಗಿಸುತ್ತಿದ್ದರು. ಈಗ ಆ ಮಂಚವು ಬಿಲಕೇರಿ ಮಠದಲ್ಲಿ ಇಂದಿಗೂ ಇದೆ.

ಹೀಗೆ ಒಬ್ಬ ಶಿವಾಚಾರಿ, ಸದ್ಗುಣಿ, ಶಿವಧರ್ಮದ ಏಳ್ಗೆಗೆ ಸದಾ ಸ್ಪಂದಿಸುತ್ತಾ, ಮಾನವರ ಕಲ್ಯಾಣಕ್ಕಾಗಿ ಹಗಲಿರುಳು ಜಪಿಸುತ್ತಾ , ಸುಖ ದುಃಖಗಳನ್ನು ಶಿವನಿಗೆ ಅರ್ಪಿಸುತ್ತಾ ೭೨ರ ವಯಸ್ಸಿನಲ್ಲಿ ಶ್ರೀ ರುದ್ರಮುನಿ ಶಿವಾಚಾರ್ಯರಿಗೆ ಪಟ್ಟಗಟ್ಟಿ ಕ್ರಿ.ಶ. ೧೯೮೧ ರಲ್ಲಿ ಲಿಂಗೈಕ್ಯರಾದ ವಿಷಯವನ್ನು ಕಾವ್ಯದಲ್ಲಿ ತಿಳಿಸಲಾಗಿದೆ.

೩.೧೦.೨. ಜಗದ್ಗುರು ಶ್ರೀ ವೀರಗಂಗಾಧರ ಪುರಾಣ

ಪ್ರಸ್ತುತ ಪುರಾಣದ ಕರ್ತೃ ಪಂ. ಬಾಲಚಂದ್ರ ಶಾಸ್ತ್ರಿಗಳು. ೨೧ ಸಂಧಿಗಳಿಂದ ಕೂಡಿದ ಒಟ್ಟು ೮೦೪ ಪದ್ಯಗಳಿರುವ ಈ ಕಾವ್ಯವನ್ನು ಭಾಮಿನಿ ಷಟ್ಪದಿಯ ಛಂದಸ್ಸಿನಲ್ಲಿ ರಚಿಸಿದ್ದಾರೆ. ಈ ಮಹಾಪುರಾಣವನ್ನು 'ಪಂಡಿತ ಪಾಮರರು ದುಂಬಿಯೋಪಾದಿಯಲ್ಲಿ ಸವಿದು ಸುಖಿಗಳಾಗಲಿ', 'ಲೋಕದ ಜನತೆಯ ಆನಂದಕ್ಕಾಗಿ ಸಾಹಿತ್ಯ ಗಂಗೆಯನ್ನು ಹರಿಸುವುದು ಒಂದು ಪುಣ್ಯ' – ಎಂಬಂತೆ ಕಾವ್ಯವು ಮೂಡಿಬಂದಿದೆ.

ಸಾಂಪ್ರದಾಯಿಕ ಪುರಾಣಕಾವ್ಯಗಳ ಪರಂಪರೆಯನ್ನೇ ಅನುಸರಿಸಿದ ಶ್ರೀ ಬಾಲಚಂದ್ರ ಶಾಸ್ತ್ರಿಗಳು ಪೀಠಿಕಾಸಂಧಿಯಲ್ಲಿ ಶಿವ-ಪಾರ್ವತಿ, ಗಣಪತಿ, ಷಣ್ಮುಖ ಹಾಗೂ ಪಂಚಾಚಾರ್ಯರನ್ನು ನೆನೆದಿರುವರು. ಕಾವ್ಯನಾಯಕರಾದ ಶ್ರೀಗಳ ಜನ್ಮನವನ್ನು ದೈವೀ ಅವತಾರವೆಂಬಂತೆ ಚಿತ್ರಿಸಿದ್ದಾರೆ. 'ಒಂದು ಬಾರಿ ಶ್ರೀಗಳ ತಾಯಿಯಾದ ಸಿದ್ದಮ್ಮನವರು ಗರ್ಭಿಣಿಯಾಗಿರುವಾಗ; ಶಿವಯೋಗಿಗಳೋರ್ವರು ಬಂದು ಅವರನ್ನು ನಮಸ್ಕರಿಸುವರು. ಆಗ ಶರಣೆ ಸಿದ್ದಮ್ಮನವರು ನಮಸ್ಕರಿಸಿದ್ದರ ಕಾರಣ ಕೇಳಲು, ಅವರಾಡುವ ಮಾತುಗಳು ದೈವೀ ಅವತಾರವಾಗಿ ಶ್ರೀಗಂಗಾಧರ ಶ್ರೀಗಳ ಜನನ'ವಾಗುತ್ತದೆ. ಎಂಬುಂದಕ್ಕೆ ಸಾಕ್ಷಿ ನುಡಿಯುತ್ತದೆ –

ಎನಲದಕೆ ಶಿವಯೋಗಿ ನುಡಿದನು
ನಿನಗೆಯಲ್ಲವು ನಿನ್ನ ಗರ್ಭದೆ
ಚಿನುಮಯನು ತಾನುದಿಸಿ ಬರುವನು ಧರ್ಮರಕ್ಷಿಸಲು ॥
ಜನನಿ ಕೇಳೌ ವಿಶ್ವಗುರುವರ
ನೆನಿಸುತಗಣಿತ ಲೀಲೆ ಮೆರೆಸುತ
ಮನುಜ ಕುಲವನು ಮುಕ್ತಿ ಮಂದಿರದತ್ತ ನಡೆಸುವನು ॥

(ಪುಟ : ೧೬, ಪದ್ಯ : ೨೫)

ದೈವಾಂಶ ಸಂಭೂತರಾಗಿ ಮಹಾತ್ಮರು ಶರಣರು ಧರ್ಮ ರಕ್ಷಣೆಗಾಗಿ ಜನ್ಮವೆತ್ತಿ ಬರುತ್ತಾರೆ ಎಂದು ಹೇಳುವ ರೀತಿಯಲ್ಲಿ ಶ್ರೀ ವೀರಗಂಗಾಧರ ಸ್ವಾಮಿಗಳು ಜನಿಸುತ್ತಾರೆ. ಇದನ್ನು ಕವಿಗಳು ಹೀಗೆ ಬಣ್ಣಿಸುತ್ತಾರೆ:

ಇಂತೆಸೆವ ಕನ್ನಡದ ಧರುವಡ
ಪ್ರಾಂತ ಹುಬ್ಬಳ್ಳಿ ಸನಿಹದೊಳಗಾ
ಶಾಂತರೊಸೆದಹುದೆಂದು ಬಣ್ಣಿಪ ಪಾಲಿಕೊಪ್ಪದೊಳು ॥

(ಪುಟ : ೧೩, ಪದ್ಯ : ೧೨)

ಹೀಗೆ ಧಾರವಾಡದ ಹುಬ್ಬಳ್ಳಿಗೆ ಸಮೀಪ ಶಾಂತಗುಣಕ್ಕೆ ಹೆಸರಾದ ಪಾಲಿಕೊಪ್ಪದಲ್ಲಿ ಶಿವಭಕ್ತರಾದ 'ಅಡಿವಯ್ಯ' ಹಾಗೂ 'ಸಿದ್ದಮ್ಮ' ದಂಪತಿಗಳ ಮಗನಾಗಿ ಜನಿಸಿದ ಶ್ರೀಗಳ ಪೂರ್ವಾಶ್ರಮದ ಹೆಸರು 'ಬಸವಯ್ಯ'.

ಕವಿಯ ಈ ಕೃತಿಯು ಕಾವ್ಯವಾಗಿದ್ದು , ಇದರಲ್ಲಿನ ಕಥಾವಸ್ತು, ಅಯೋಜಿತ ಸನ್ನಿವೇಶಗಳು ಇತ್ಯಾದಿ ಎಲ್ಲವೂ ಬಹುಮಟ್ಟಿಗೆ ಕಾವ್ಯಮಯವಾಗಿ ಇರಬೇಕಾದುದು ಸತ್ಯ. ಇದರಿಂದಾಗಿ ಅನೇಕ ಸನ್ನಿವೇಶಾದಿಗಳ ಕಲ್ಪನೆ ಅನಿವಾರ್ಯವಾಗಿ ವ್ಯಕ್ತಿತ್ವ ಚಿತ್ರಣವು ಸಹಜವಾಗಿಯೇ ಕೃತಕವಾಗಿ, ಕೃತಿಯು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತದೆ. ಆದರೆ ಈ ಮಾತಿಗೆ ಅಪವಾದ ರೂಪವಾಗಿರುವ ಶ್ರೀ ವೀರಗಂಗಾಧರ ಶ್ರೀಗಳ ಪುರಾಣವು ಹೆಸರಿಗೆ ಪುರಾಣವೆನಿಸಿದರೂ, ಇದೊಂದು ಸತ್ಯದ ವ್ಯಕ್ತಿತ್ವ ಚಿತ್ರಣವನ್ನುಳ್ಳ ಹೊತ್ತಿಗೆಯಾಗಿದೆ. ವ್ಯಕ್ತಿಯಳಿದರೂ; ಅವರ ಚರಿತ್ರೆ ಅಜರಾಮವೆನ್ನುವದಕ್ಕೆ ಈ ಕೃತಿಯೇ ಸಾಕ್ಷಿಯಾಗಿದೆ.

ಬಾಳೆಹೊನ್ನುರು ಶ್ರೀಮದ್ವೀರ ಸಿಂಹಾಸನದ ೧೧೯ನೇ ಜಗದ್ಗುರುಗಳಾದ ಶ್ರೀ ವೀರಗಂಗಾಧರ ಸ್ವಾಮಿಗಳ ದಿವ್ಯಚರಿತೆ ಲೋಕಪಾವನವಾದುದು. ಅವರ 'ಭಕ್ತಿ-ಜ್ಞಾನ-ವೈರಾಗ್ಯ' ಹಾಗೂ 'ನ ಭೂತ ನ ಭವಿಷ್ಯತಿ' – ಎಂಬಂತಿರುವ ಪೂಜಾವೈಭವಾದಿ'ಗಳು ಅವಿಸ್ಮರಣೀಯವಾದವುಗಳು. ಇವರು 'ಪೂರ್ಣ ಮನಸ್ಸಿನಿಂದ ಆಶೀರ್ವದಿಸಿದರೆ ಅನುಗ್ರಹ, ಸ್ವಲ್ಪ ಬೇಸರದಿಂದ ನುಡಿದರೆ ಅದೇ ಯಮಾನುಗ್ರಹ'. ಹೀಗೆ 'ಶಾಪಾನುಗ್ರಹ ಸಮರ್ಥ'ರಾದ ಶ್ರೀಗಳ ಈ ಚರಿತ್ರೆಯು

ಸರ್ವರಿಗೂ ದಾರಿದೀವಿಗೆಯಂತಿರುವದು. ಸರ್ವಧರ್ಮಸಮನ್ವಯ ಇವರ ಉಸಿರಾಗಿತ್ತು. ಮುಕ್ತಿ ಮಂದಿರದ ಸಂಸ್ಥಾಪಕರು. 'ಮಾನವ ಧರ್ಮಕ್ಕೆ ಜಯವಾಗಲಿ; ಧರ್ಮದಿಂದಲೇ ವಿಶ್ವಕ್ಕೆ ಶಾಂತಿ' ಎಂಬ ವೀರಘೋಷಣೆ ಶ್ರೀಗಳ ಹೃದಯ ವೈಶಾಲ್ಯತೆಗೆ ನಿದರ್ಶನ. ಇವರು ಗೈದ ಲೀಲೆಗಳು ಮಹಿಮೆಗಳು ಅಪಾರ. ಇವರ ಧರ್ಮ ಪ್ರಸಾರ, ಧೀರೋದಾತ್ತವಾದ ನಡತೆ, ಪಂಚಪೀಠಗಳ ಪ್ರಸಾರ, ಪ್ರಭಾವ ಮರೆಯಲಾರದಂತವು. 'ಸರ್ವಧರ್ಮ ಸಮನ್ವಯಾಚಾರ್ಯರಾಗಿ ವೈರಾಗ್ಯ ವೈಭವದ ತಿಂಥಿಣಿ' ಅವರಾಗಿದ್ದರು. ಯಾರೂ ಮಾಡದ ಮಹತ್ಕಾರ್ಯಗಳನ್ನು ಮಾಡಿ ಮಾನವರ ಮನದಲ್ಲಿ ಸದಾ ಹಸಿರಾಗಿ ಮೆರೆದವರು ಜಗದ್ಗುರು ಶ್ರೀವೀರಗಂಗಾಧರರು. 'ಅಧರ್ಮದ ಮೇಲೆ ಧರ್ಮದ ದಂಡಯಾತ್ರೆ ಗೈದು ಭಕ್ತರ ಹೃದ್ಭೂಮಿಯನ್ನು ಕೃಷಿಗೈದು ಉದ್ಧರಿಸಿದ ಸ್ವಾಮಿಗಳ ಜೀವನವೆಲ್ಲ ಲೀಲಾಮಯ. ಅವರು ಕಣ್ಣಿಗೆ ಕಾಣದಿದ್ದರೂ ಅವರ ಅಂತರಾತ್ಮ ದಿವ್ಯಸಂದೇಶವು ಮುಗ್ಗರಿಸುತ್ತಿರುವ ಮಾನವರನ್ನು ಎಚ್ಚರಿಸುತ್ತದೆ'.

ಕಾವ್ಯದ ಕಥಾನಾಯಕರಾದ ಶ್ರೀಗಳು 'ಯದ್ಭಾವಂ ತದ್ಭವತಿ,' 'ಮನಸ್ಸಿನಂತೆ ಮಾದೇವ' ಎಂಬ ಉಕ್ತಿಗಳಿಗೆ ನಿದರ್ಶನರಾಗಿ ಭಕ್ತರ ಭಾವನೆಗನುಗುಣವಾಗಿ ಗೋಚರಿಸಿದ ಬಗೆಯನ್ನು ಬಣ್ಣಿಸುವ ಕವಿಗಳ ರೀತಿ ವಿಶಿಷ್ಟವಾಗಿದೆ. ಅದನ್ನು ಪದ್ಯವೊಂದರಲ್ಲಿ ಹೀಗೆ ಖಂಡರಿಸಿದ್ದಾರೆ –

ಕೆಲವರಿಗೆ ಶಿವನಾಗಿ ತೋರಿದ
ಕೆಲವರಿಗೆ ಗುರುವಾಗಿ ತೋರಿದ
ಕೆಲವರಿಗೆ ತಾಯಾಗಿ ಬಳಿಕಾ ತಂದೆಯಾಗಿರ್ದು ॥
ಕೆಲವರಿಗೆ ಹುಚ್ಚಾಗಿ ತೋರಿದ
ಕೆಲವರಿಗೆ ಮುನಿಯಾಗಿ ತೋರಿದ
ಹಲವುಮಾತೇನವರು ಭಾವಿಸಿದಂತೆ ತೋರಿದನು ॥

(ಪುಟ : ೮, ಪದ್ಯ : ೨೮)

ಹೀಗೆ ಅವರ ವ್ಯಕ್ತಿತ್ವ ಸಾಧನೆಯ ಹಲವು ಮುಖಗಳನ್ನು ಪರಿಚಯಿಸಿದ ಶ್ರೀಗಳ ಕಾರ್ಯವೈಖರಿಯನ್ನು ಬಣ್ಣಿಸುವ ಬಗೆ ಸಹಜತೆಯಿಂದ ಕೂಡಿದ್ದು, ಶರಣರ ಕಾಯಕ ತತ್ವಕ್ಕೆ ಒಂದು ದೃಷ್ಟಾಂತವಾಗಿದ್ದಾರೆ. ಅದನ್ನು ಸಹೃದಯರಿಗೆ ತಲುಪಿಸಿದ್ದು ಹೀಗೆ –

ಕುಟ್ಟಿದನು ಬೀಸಿದನು ಹೊಲದಲಿ
ನೆಟ್ಟು ಕಡೆದನು ಮುಕ್ತಿಮಂದಿರ
ಕಟ್ಟಿದನು ಹಸುಗಳನ್ನು ಸಾಕಿ ವಿಭೂತಿ ಮಾಡಿದನು ॥
ಗಟ್ಟಿ ಮನಸ್ಸಿನ ಪೂಜೆಯಿಂದ ಶಿವ
ಜಟ್ಟಿಯಾದನು ಬಟ್ಟೆದೋರಲು
ದಿಟ್ಟ ಕಾಯಕಯೋಗಿಯೆನಿಸಿದ ಲೋಕ ಮಧ್ಯದೊಳು ॥

(ಪುಟ : ೮, ಪದ್ಯ : ೨)

ಈ ರೀತಿ 'ಕಾಯಕ ಸಿದ್ಧಾಂತ'ದ ಪ್ರತಿರೂಪವಾಗಿರುವ ಶ್ರೀಗಳು 'ಶಿವಲೀಲೆಗಳನ್ನು ಬೋಧಿಸುತ. ಧರ್ಮ ತತ್ವಗಳನ್ನು ತಿಳಿಸುತ್ತ, ಧರ್ಮವನ್ನು ಎತ್ತಿ ಹಿಡಿದು ಧರ್ಮಕ್ಕಾಗಿ ಬಾಳಿರಿ' ಎಂಬ ದಿವ್ಯ ಸಂದೇಶವನ್ನು ಸಾರಿದವರು. ಧರ್ಮ ಪ್ರಸಾರವೇ ಮುಖ್ಯ ಗುರಿಯಾಗಿಟ್ಟುಕೊಂಡು ಶ್ರೀಗಳು ಧರ್ಮಕ್ಕಾಗಿ ಬಾಳಿ ಭಕ್ತರನ್ನು ಧರ್ಮಮಾರ್ಗದಲ್ಲಿ ನಡೆಯುವಂತೆ ಮಾಡಿ –

ಕಾಲ ಹತ್ತೊಂಬತ್ತನೂರರ
ಮೇಲೆ ನಾಲ್ಕನೆ ದುಂದುಭಿಯ ವರ
ಶಾಲಿವಾಹನ ಶಕೆಯ ಅಶ್ವಿನ ಕೃಷ್ಣ ಪಕ್ಷದಲಿ ॥
ಲೋಲ ಬಿದಿಗೆಯ ಮಂಗ್ಳವಾರವು
ಕೀಲಿಸಿರಲಾ ದಿನದ ರಾತ್ರಿಯೆ
ಬಾಳೆಹಳ್ಳಿಯ ಶ್ರೀ ಜಗದ್ಗುರು ಲಿಂಗದೊಳಗಾದಂ ॥

(ಪುಟ : ೨೨೧, ಪದ್ಯ : ೪೦)

ಹೀಗೆ ೧೯೪೦ನೇ ದುಂದುಭಿಶಕೆ, ಅಶ್ವಿನ ಕೃಷ್ಣ ಪಕ್ಷ ಮಂಗಳವಾರದಂದು ರಾತ್ರಿ ಲಿಂಗೈಕ್ಯರಾದರು.

೩.೧೦.೩. ಬೆಳವಣಕಿ ಶ್ರೀ ಗುರುಲಿಂಗಮ್ಮನವರ ಪುರಾಣ

ಈ ಕೃತಿಯು ೨೧ ಸಂಧಿಯನ್ನು ೬೧೪ ಭಾಮಿನಿ ಷಟ್ಪದಿ ಪದ್ಯಗಳನ್ನು ಒಳಗೊಂಡಿದೆ. ಈ ಕೃತಿಯುನ್ನು ಕವಿ ಬಾಲಚಂದ್ರ ಶಾಸ್ತ್ರಿಗಳು ರಚಿಸಿದ್ದಾರೆ. ಬಾಲವಿಧವೆಯಾಗಿ ಮರಳಿಭೋಗ ಬಯಸದೇ ಶರಣಸತಿ–ಲಿಂಗಪತಿ ಮಾರ್ಗದಲ್ಲಿ ಸರ್ವ ಸಂಪತ್ತನ್ನು ತ್ಯಾಗಮಾಡಿದ ಶಿವಶರಣೆ ಲಿಂಗಮ್ಮನವರ ಜೀವನ ಚಿತ್ರಣವನ್ನು ಕಟ್ಟಿಕೊಡುವ ಪುರಾಣ ಕಾವ್ಯ ಇದಾಗಿದೆ. ಪುರಾಣದ ಆರಂಭವು ಸಾಂಪ್ರದಾಯಿಕವಾಗಿ ಪೀಠಿಕಾ ಸಂಧಿಯಿಂದ ಪ್ರಾರಂಭಗೊಳ್ಳುತ್ತದೆ. ಈ ಪೀಠಿಕಾ ಭಾಗದಲ್ಲಿ ರೇವಣಸಿದ್ಧರು, ಶಿವ–ಪಾರ್ವತಿ, ಗಣಪತಿ ಹೀಗೆ ಇವರೆಲ್ಲರ ಜೊತೆಗೆ ಗುರುಲಿಂಗಮ್ಮನವರು ಸ್ಥಾಪಿಸಿರುವ ಮಠಗಳು ಹಾಗೂ ತಾನು ಪುರಾಣವನ್ನು ರಚಿಸಿದ ಬಗೆ ಮುಂತಾದ ವಿಷಯಗಳನ್ನು ಚರ್ಚಿಸುವುದರ ಮೂಲಕ ಕಥಾ ಹಂದರವನ್ನು ಪ್ರವೇಶಮಾಡುತ್ತಾರೆ.

ಸಂಧಿ ಎರಡರಿಂದ ಕಥಾಹಂದರ ಬೆಳವಣಿಗೆಯನ್ನು ಪಡೆಯುತ್ತಾ ಸಾಗುತ್ತದೆ. ಆರಂಭದಲ್ಲಿ ಭಾರತದೇಶ ಮತ್ತು ಕರ್ನಾಟಕದ ವರ್ಣನೆಯ ಮೂಲಕ ಈ ಕಾವ್ಯದ ಕಥಾನಾಯಕಿಯಾದ ಗುರುಲಿಂಗಮ್ಮನವರ ಜನ್ಮಭೂಮಿಯಾದ ಬೆಳವಣಿಕೆಯ ವರ್ಣನೆ ಬರುತ್ತದೆ. ಆ ವರ್ಣನೆಯನ್ನು ಕವಿ ತುಂಬ ಸುಂದರವಾಗಿ ವರ್ಣಿಸಿದ್ದಾರೆ.

ಜ್ಞಾನದಲಿ ಬೆಳವಣಿಗೆ ಯಿಂದಲಿ
ಮಾನದಲಿ ಬೆಳವಣಿಗೆ ಯಿಂದಲಿ
ದಾನದಲಿ ಬೆಳವಣಿಗೆಯಿಂದಲಿ ಪುರವುರಂಜಿಪುದು ॥
ಹೀನಕಾರ್ಯವ ಮಾಡದಲೆಬಹು
ದೀನ ದಲಿತರ ಸಲಹುತಿರ್ಪರು
ಗಾನ ನರ್ತನ ನಾಟ್ಯ ಕಲೆಗಳ ತಾಣವೆನಿಸಹುದು ॥

(ಪುಟ : ೧೧, ಪದ್ಯ : ೧೫)

ಎಂಬಲ್ಲಿ ಕವಿ ಆ ಊರಿನ ಮಹತ್ವವನ್ನು ಮನದುಂಬಿ ಕೊಂಡಾಡಿದ್ದಾನೆ.

ಗುರುಲಿಂಗಮ್ಮನವರು ಕ್ರಿ.ಶ. ೧೮೪೧ರಲ್ಲಿ ವೇದಮೂರ್ತಿ 'ಅಯ್ಯಪ್ಪಯ್ಯ' ಹಾಗೂ 'ರಾಚಮಾಂಬೆ' ಎಂಬ ದಂಪತಿಗಳ ಉದರದಲ್ಲಿ ಶ್ರೀ ನವಲಗುಂದ ನಾಗಲಿಂಗ ಶಿವಯೋಗಿಗಳ ಆರ್ಶೀವಾದದಿಂದ ಬೆಳವಣಿಕೆಯಲ್ಲಿ ಜನಿಸಿದಳು. ಹಲವು ಶಿವಶರಣೆಯರಂತೆ ಬಾಲ್ಯದಲ್ಲಿ ಲೀಲಾಮೂರ್ತಿಯಾಗಿ ಬೆಳೆದವಳು. ಅಷ್ಟರಲ್ಲಿ ಆಗಿನ ಸಂಪ್ರದಾಯದಂತೆ ಬಾಲ್ಯವಿವಾಹಕ್ಕೆ ಒಳಗಾದಳು. ಭೋಪಲಾಪುರದ ಹಿರೇಮಠದ ಸಂಗನಬಸಯ್ಯನೊಂದಿಗೆ ವಿವಾಹವಾಗಿ ಕೆಲವೇ ದಿನದಲ್ಲಿ ಪತಿಯನ್ನು ಕಳೆದುಕೊಂಡವಳು. ಅಷ್ಟರಲ್ಲಿಯೇ ಲಿಂಗಮ್ಮನವರು ಹಲವು ಬಾಲ್ಯದ ಲೀಲೆಯನ್ನು ತನ್ನ ಬಾಲ್ಯಶಿಕ್ಷಣದ ಜೊತೆಗೆ ತನ್ನ ಸಂಗಡಿಗರಿಗೆ ತೋರಿಸಿರುವಳು.

ತಾನು ಇನ್ನು ಬಾಲೆಯಾದ ಕಾರಣ ಗುರುಲಿಂಗಮ್ಮನ ಗಂಡ ಸಂಗನಬಸಯ್ಯ ಮತ್ತೊಂದು ಮದುವೆಯಾಗಿ ಎರಡು ಮಕ್ಕಳನ್ನು ಪಡೆದರೂ ಸಹ ಅವರೆಲ್ಲರು ಶಿವೈಕ್ಯರಾಗುತ್ತಾರೆ. ಹೀಗಾಗಿ ಬಾಲ್ಯದಲ್ಲಿ ವಿಧವೆಯೆಂಬ ಪಟ್ಟಕ್ಕೆ ಗುರುಲಿಂಗಮ್ಮ ಸೇರುತ್ತಾಳೆ. ಮುಂದೆ ಲಿಂಗಮ್ಮ ಬೇರೆ ಮದುವೆಯಾಗದೇ ಹಾಗೆಯೇ ಉಳಿದು ಬಿಡುತ್ತಾಳೆ. ಮುಂದೆ ತನ್ನ ಪತಿಯ ಊರಿಗೆ ಹೋಗಿ ಶಿವದಾಸೋಹ ಅನುಷ್ಠಾನ ಮಾಡಿಸಿ ಹಂಪೆಯ ವಿರುಪಾಕ್ಷನ ಕೃಪೆಗೆ ಪಾತ್ರಳಾಗಿ ವಿರುಪಾಕ್ಷನನ್ನು ಒಲಿಸಿ ಕೊಳ್ಳುತ್ತಾಳೆ. ಆ ಕಾವ್ಯ ಭಾಗವನ್ನು ಕವಿ ಅತ್ಯಂತ ಸೊಗಸಾಗಿ ವರ್ಣಿಸಿದ್ದಾನೆ.

ಕವಿ ಇಲ್ಲಿ ಗುರುಲಿಂಗಮ್ಮನ ಕಥೆಗೆ ಪೂರಕವಾಗಿ ಹಂಪೆಯ ವಿರುಪಾಕ್ಷ ಸ್ವಾಮಿಯಿಂದ ಲಿಂಗಮ್ಮನಿಗೆ ಬೋಧಿಸಿದ ೧೦೧ ಅಷ್ಟಾವರಣಾದಿಗಳೊಂದಿಗೆ ಷಟ್‌ಸ್ಥಲವನ್ನು ಪರಿಚಯಿಸಿದ್ದಾರೆ. ಇದು ವೀರಶೈವ ಧರ್ಮದ ಮಹೋನ್ನತಿಗೋಸ್ಕರ ವಿರುಪಾಕ್ಷನು ಗುರುಲಿಂಗಮ್ಮನಿಗೆ ನೀಡಿದ ಕಾಯಕ ಚಟುವಟಿಕೆಯ ಮುನ್ನೋಟವೆಂದು ತಿಳಿಯಬಹುದು. ಮುಂದೆ ಗುರುಲಿಂಗಮ್ಮನು ಕಾವಿಬಟ್ಟೆ ಧರಿಸಿ, ಲಿಂಗ, ರುದ್ರಾಕ್ಷಿ, ಭಸ್ಮ, ಅವುಗೆ, ಜೋಳಿಗೆ-ಯೋಗದಂಡ, ಬೆತ್ತ ಧರಿಸಿ ಲೋಕ ಕಲ್ಯಾಣಾರ್ಥ ಹಲವು ಊರುಗಳ ಸಂಚಾರವನ್ನು ಮಾಡುತ್ತಾ ಹೋದಲ್ಲಿ, ಅಲ್ಲಿಯ ಭಕ್ತರ ಕಷ್ಟವನ್ನು ಪರಿಹರಿಸುತ್ತಾ, ಪವಾಡ ಮಾಡುತ್ತಾ ಮುನ್ನಡೆಯುತ್ತಾಳೆ.

ಗುರುಲಿಂಗಮ್ಮ ತಾನು ಶಿವನಿಗೆ ಮಾತುಕೊಟ್ಟಂತೆ ಧರ್ಮದ ಜಾಗೃತಿಗಾಗಿ ಶ್ರಮಿಸುತ್ತಾಳೆ. ಸ್ವತಂತ್ರ ಹೋರಾಟಗಾರರನ್ನು ರಕ್ಷಿಸುತ್ತಾಳೆ. ಸ್ತ್ರೀ ಬಳಗಕ್ಕೆ ಭಜನೆಯನ್ನು ಕಲಿಸುತ್ತಾ ಹಲವು ವಾದ್ಯಗಳಲ್ಲಿ ತಾನು ಪರಿಣಿತಳಾಗುತ್ತಾಳೆ. ಮುಂದೆ ಬೆಳವಣಿಕೆಯಲ್ಲಿ ಹಲವು ಪವಾಡಗಳನ್ನು ಮಾಡುತ್ತಾಳೆ. ಜೊತೆಗೆ ಹೊಳೆ ಆಲೂರ, ಹೆಬ್ಬಾಳ ಗುಡ್ಡದ ಶ್ರೀ ರಾಮಲಿಂಗನ ಸನ್ನಿಧಿಯಲ್ಲಿ ಬೃಹದಾಕಾರದ ಗವಿಯಲ್ಲಿ ೧೨ ವರ್ಷ ಅನುಷ್ಠಾನ ಮಾಡುತ್ತಾಳೆ. ಅಲ್ಲಿ ಅನುಷ್ಠಾನ ಮಾಡವಾಗ ಬ್ರಹ್ಮರಾಕ್ಷಸ ತಾವಾಗಿಯೇ ಬಂದು ಆರತಿಯನ್ನು ಬೆಳಗುತ್ತಿದ್ದವಂತೆ. ಹೀಗೆ ತನ್ನ ಅಮೋಘ ಸಿದ್ಧಿಯ ಪ್ರತೀಕವಾಗಿ ನಾಡಿನ ನಾನಾ ಕಡೆ ಸಂಚಾರಮಾಡಿ ಮಠಗಳಿಗೆ ಭೇಟಿ ನೀಡುತ್ತಾ, ಮಠವನ್ನು ಕಟ್ಟಿಸುತ್ತಾ ಅಲ್ಲಿಯ ಜನರ ಕಷ್ಟಗಳನ್ನು ಪರಿಹರಿಸಿದ ಶಿವಶರಣೆ ಗುರುಲಿಂಗಮ್ಮನವರು.

ಗುರುಲಿಂಗಮ್ಮನವರಿಂದಾಗಿ ಇಂದು ಭೋಪಲಾಪುರ-ಬೆಳವಣಿಕೆ-ಸುಳ್ಳ-ಮೆಣಸಗಿ ಮಠಗಳು ಪ್ರಸಿದ್ಧಿಯನ್ನು ಪಡೆದುಕೊಂಡಿವೆ. ಅನೇಕ ದತ್ತು ಪುತ್ರರು ಆ ಮಠಕ್ಕೆ ಉತ್ತರಾಧಿಕಾರಿಯಾಗಿದ್ದಾರೆ. ಇವುಗಳ ಜೊತೆಗೆ ಗುರುಲಿಂಗಮ್ಮನವರು ಜನರಿಗೆ ಬಂದ ರೋಗ ನಿವಾರಿಸುತ್ತಾರೆ. ಬಾರದ ಮಳೆಯನ್ನು ತರಿಸುತ್ತಾರೆ. ತಾನು ಬಂದ ಕೆಲಸವನ್ನು ನೆರವೇರಿಸಿ ಆಧ್ಯಾತ್ಮಿಕ ಅನುಭವವನ್ನು ತನ್ನ ಭಕ್ತರಿಗೆ ನೀಡಿದ ಗುರುಲಿಂಗಮ್ಮನು ತಾನು ಕ್ರಿ. ಶ. ೧೯೨೧ರಲ್ಲಿ ಶಿವೈಕ್ಯಳಾದ ವಿವರಗಳನ್ನು ಕಾವ್ಯವು ನೀಡುವುದು.

◆◆◆

೩.೧೧ ಪಂ. ಶಿವದೇವ ಶಾಸ್ತ್ರಿಗಳ ಪುರಾಣ ಕಾವ್ಯ

* ಕವಿ

* ಜಕ್ಕಲಿಯ ಶ್ರೀ ಅಣ್ಣಯ್ಯ-ತಮ್ಮಯ್ಯನವರ ಪುರಾಣ ಕಾವ್ಯ

ಕವಿ :

ಪಂ. ಶಿವದೇವ ಶಾಸ್ತ್ರಿಗಳು ಹೊಳೆಆಲೂರಿನಲ್ಲಿ ಉಳಿದು ಅನೇಕ ಕಾವ್ಯ-ಕೃತಿಗಳನ್ನು ಬರೆದರು. ಅವುಗಳಲ್ಲಿ ಒಂದು ಜಕ್ಕಲಿಯ ಶ್ರೀ ಅಣ್ಣಯ್ಯ-ತಮ್ಮಯ್ಯನವರ ಪುರಾಣವಾಗಿದೆ. ಇವರ ಜನ್ಮಸ್ಥಳವು ರೋಣ ತಾಲೂಕಿನ ಅಬ್ಬಿಗೇರಿಯಾಗಿದೆ. ಸಂಸ್ಕೃತ ಅಧ್ಯಯನ ಮಾಡಿದ ಅವರು ಪಂ. ಚಂದ್ರಶೇಖರ ಶಾಸ್ತ್ರಿಗಳ ಮಾರ್ಗದರ್ಶನದಂತೆ ಅನೇಕ ಸಂಸ್ಕೃತ ಪದವಿಗಳನ್ನು ಸಂಪಾದಿಸಿದರು. ಹಿಂದಿ ಭಾಷೆಯಲ್ಲಿ ಅವರು ಪಾಂಡಿತ್ಯವನ್ನು ಸಂಪಾದಿಸಿದ್ದರು. ಅವರು 'ಶಿವದೇವ ಗ್ರಂಥಮಾಲೆ'ಯನ್ನು ಪ್ರಾರಂಭಿಸಿ ಅನೇಕ ಕೃತಿಗಳನ್ನು ರಚಿಸಿದರು. ೧೯೫೭ರಲ್ಲಿ ಅಣ್ಣಯ್ಯ-ತಮ್ಮಯ್ಯನವರ ಪುರಾಣ ಕೃತಿಯನ್ನು ಬರೆದು ಪ್ರಕಟಿಸಿದ್ದಾರೆ. ಇನ್ನೆರಡು ಪುರಾಣ ಕೃತಿಗಳನ್ನು ಇವರು ಬರೆದಿದ್ದು, ಅವು ಅಪ್ರಕಟಿತವಾಗಿಯೇ ಉಳಿದಿವೆ. 'ಕೋಡಿಕೊಪ್ಪದ ವೀರಪ್ಪಜ್ಜನವರ ಪುರಾಣ' ಹಾಗೂ 'ಚಿಕ್ಕಬೆನಕಲ್ಲು ಶಿವಶರಣಲಿಂಗೇಶ್ವರ ಪುರಾಣ' ಇವೆರಡೂ ಪ್ರಕಟವಾಗಬೇಕಿವೆ. ಅಪಾರ ಜ್ಞಾನವನ್ನು ಸಂಪಾದಿಸಿದ ಅವರು ಸಂಗೀತ ಸಾಹಿತ್ಯ ಎರಡರಲ್ಲೂ ಅಪಾರ ಪಾಂಡಿತ್ಯವನ್ನು ಹೊಂದಿ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ, ನೂರಾರು ಊರುಗಳಲ್ಲಿ ಪ್ರವಚನಗಳನ್ನು, ಪುರಾಣ ಪ್ರವಚನಗಳನ್ನು ನೆರವೇರಿಸಿದ್ದಾರೆ. ಜಕ್ಕಲಿಯ ಅಣ್ಣಯ್ಯ-ತಮ್ಮಯ್ಯನವರ ಪುರಾಣವನ್ನು ಜಕ್ಕಲಿಯಲ್ಲಿಯೇ ಪ್ರವಚನ ಗೈದ ಕೀರ್ತಿ ಇವರಿಗೆ ಸಲ್ಲುತ್ತದೆ. ಕವಿಗಳು ಒಂದು ಸಂಸ್ಕೃತ ಪಾಠಶಾಲೆ (ಶ್ರೀ ಉಮಾಮಹೇಶ್ವರ ಸಂಸ್ಕೃತ ಪಾಠಶಾಲೆ, ಹೊಳೇ ಆಲೂರು)ಯನ್ನು ನಡೆಸಿಕೊಂಡು ಬಂದಿದ್ದರು. ಶರಣರೇ ಬಂದು ತನ್ನ ಮನದಲ್ಲಿ ನಿಂತು ಈ ಕಾವ್ಯವನ್ನು ಬರೆಯಿಸಿದ್ದಾರೆಂಬ ಕವಿಯ ಅರ್ಪಣಾ ಮನೋಭಾವವು ಕಾವ್ಯದಲ್ಲಿ ಪ್ರಕಟಗೊಂಡಿದೆ.

ಜಕ್ಕಲಿಯ ಶ್ರೀ ಅಣ್ಣಯ್ಯ-ತಮ್ಮಯ್ಯನವರ ಪುರಾಣ ಕಾವ್ಯ

ಮಹಾಶಿವಶರಣರಾದ ಶ್ರೀ ಅಣ್ಣಯ್ಯ-ತಮ್ಮಯ್ಯನವರ ಪುರಾಣ ಕಾವ್ಯವು ೨೫ ಸಂಧಿಯನ್ನು ಒಳಗೊಂಡು, ೫೧೧ ಭಾಮಿನಿ ಷಟ್ಪದಿಯ ಪದ್ಯಗಳಲ್ಲಿ ರಚಿತವಾದ ಕೃತಿಯಾಗಿದೆ. ಎಲ್ಲ

ಪುರಾಣದಲ್ಲಿ ವಿಶೇಷವಾಗಿ ಕಥೆಯ ನಾಯಕನು ಒಬ್ಬನೇ ಇರುವುದು ಹೆಚ್ಚು. ಆದರೆ ಈ ಪುರಾಣ ಕಾವ್ಯದಲ್ಲಿ ಇಬ್ಬರು ಕಥಾನಾಯಕರು. ಅವರು ಮಾಡಿದ ಕಾಯಕ, ಲೀಲೆ, ಪವಾಡ ಮುಂತಾದವುಗಳನ್ನು ಒಂದು ಹದವಾದ ರೀತಿಯಲ್ಲಿ ಕವಿ ಶಿವದೇವ ಶಾಸ್ತ್ರಿಗಳು ಇಲ್ಲಿ ಬಣ್ಣಿಸಿದ್ದಾರೆ.

ಮಂಗಳಾಚರಣದ ಮೂಲಕ ಹಲವು ಶಿವಯೋಗಿಗಳನ್ನು, ಶಿವಶರಣರನ್ನು ಸ್ತುತಿಸುವ ಮೂಲಕ ಕಾವ್ಯಕ್ಕೆ ಆರಂಭವನ್ನು ನೀಡಿ ಪುರಾಣದ ಸಂಪ್ರದಾಯದಂತೆ ಶಿವನ ಅಪ್ಪಣೆಯ ಪ್ರಕಾರ ಭೂಲೋಕದಲ್ಲಿ ಶಿವನ ಭಕ್ತರನ್ನು ಉದ್ಧರಿಸಲು ಇಂತಹ ಮಹಾಶಿವಶರಣರು ಅವತಾರ ಪಡೆದರು ಎಂದು ತಿಳಿಸುತ್ತಾರೆ. ಜಕ್ಕಲಿಯ ಶ್ರೀ ಅಣ್ಣಯ್ಯ-ತಮ್ಮಯ್ಯನವರು ಶಿವಭಕ್ತರಾದ 'ದೊಡ್ಡಮನಿ ಶೆಟ್ಟರ ದೊಡ್ಡ ಬಶೆಟ್ಟೆಪ್ಪ' ಮತ್ತು ಅವರ ಧರ್ಮಪತ್ನಿ 'ಚನ್ನಮ್ಮ'ನವರ ಉದರದಲ್ಲಿ ಶ್ರಾವಣ ಸೋಮವಾರಂದು ಚಂದ್ರ ಬ್ರಾಹ್ಮೀ ಮುಹೂರ್ತದಲ್ಲಿ ಜನಿಸಿದರು. ಆದರೆ ಈ ಪುರಾಣ ಕಾವ್ಯದಲ್ಲಿ ಚಾರಿತ್ರಿಕವಾಗಿ ಈ ಮಹಾಶಿವಶರಣರು ಜನಿಸಿದ ಇಸ್ವಿಗಳ ಉಲ್ಲೇಖವಿಲ್ಲ. ಹೀಗಾಗಿ ಈ ಪುರಾಣ ಕಾವ್ಯವನ್ನು ಕವಿಗಳು ಮೌಖಿಕ ಆಕರ ಸಾಮಗ್ರಿಯ ಮೂಲಕ ರಚಿಸಿದ್ದಾರೆ. ಕೆಲವು ಸಮಯದಲ್ಲಿ ಕೆಲ ಚಾರಿತ್ರಿಕ ಅಂಶಗಳನ್ನು ಬಿತ್ತರಿಸಿದ್ದರೂ ಸಹ ಪ್ರಮುಖವಾಗಿ ಪುರಾಣ ಕಾವ್ಯವು ಮೌಖಿಕ ಸಂಪ್ರದಾಯದಿಂದಲೇ ರಚಿತವಾದುದೆಂದು ತಿಳಿಯಬೇಕಾಗಿದೆ.

ಮುಂದೆ ಬಾಲ್ಯದಲ್ಲಿ ಪಡೆದುಕೊಂಡ ವಿದ್ಯಾಭ್ಯಾಸ, ಓಂಕಾರ ಶಬ್ದದ ಮಹಿಮೆಯನ್ನು ಕವಿ ಸುಂದರವಾಗಿ ಕಾವ್ಯದಲ್ಲಿ ಹೆಣೆದಿದ್ದಾರೆ.

ತರುಳ ಬಸವನು ವಿದ್ಯೆ ಕಲಿಯಲು
ಗುರುವಿನುರು ಸನ್ನಿಧಿಗೆ ಪೋಗುತ
ಮೆರೆಯಿಸಿದನೈ ತನ್ನ ಮಹಿಮೆಯನೊಂದು ಲೀಲೆಯಲಿ ॥

(ಪುಟ : ೧೭, ಸೂಚನಾ ಪದ್ಯ)

ಎಂದು ಹೇಳುತ್ತಾ ಬಾಲಲೀಲೆಯನ್ನು ಬಣ್ಣಿಸಿದ್ದಾರೆ. ಮುಂದೆ ಬಾಲ ಶಿವಶರಣರಿಗೆ ಗುರುಗಳಿಂದ ದೀಕ್ಷೆ ಮತ್ತು ಮಂತ್ರೋಪದೇಶವಾಗುತ್ತದೆ. ಜೊತೆಗೆ ಅಷ್ಟಾವರಣದ ಮಹಿಮೆ, ಲಿಂಗಮಹಿಮೆ ಹಾಗೂ ಶಿವಶರಣರ ಕಥೆಗಳನ್ನು ಆಸಕ್ತಿಯಿಂದ ತಿಳಿಯಲು ಆಧ್ಯಾತ್ಮದ ಅರಮನೆಯಲ್ಲಿ ಅವರು ಸಂಪೂರ್ಣವಾಗಿ ಪ್ರವೇಶಪಡೆಯುತ್ತಾರೆ. ಮಹಾಶರಣರು ಗುರುವಿನ ಆಜ್ಞೆಯಂತೆ ಅವರ ಕೃಪೆಯಿಂದ ವಿವಾಹ ಮಾಡಿಕೊಳ್ಳುತ್ತಾರೆ. ಆ ಭಾಗವನ್ನು ಕವಿ ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಪಂಚವದನ ಸ್ವರೂಪ ನಿನ್ನುದ
ರಂಚಿನೊಳು ತಾಳ್ದಿಲ್ಲ ವಿಶ್ವಪ್ರ
ಪಂಚವನು ಕಾಯುತ್ತ ವಿಶ್ವಂಭರನು ಮೆಂದೆನಿಸೀ ॥

ಪಂಚ ಪಂಚಾತತ್ವದಿಂದಲಿ
ಪಂಚ ವಿಂಶತೀಲೀಲೆಯಾಳ್ದ ಪ್ರ
ಪಂಚಿಕನೆ ಪಾಲಿಸುಗೆ ಕರುಣದಿ ಪ್ರಪಂಚವೆಲ್ಲವನು ॥

(ಪುಟ : ೪೯, ಪದ್ಯ : ೦೧.)

"ಪ್ರಪಂಚದಲ್ಲಿದ್ದು ಪರಮಾತ್ಮನನ್ನು ನೆನೆ' ಎನ್ನುವ ಜನವಾಣಿಯ ಮಾತು ಈ ಮಹಾಶಿವಶರಣರಲ್ಲಿ ಅದಮ್ಯವಾಗಿ ನೆಲೆಯೂರುತ್ತದೆ. ದಾಸೋಹ, ಧರ್ಮ ಪ್ರಚಾರ, ಕಟ್ಟಿಗೆಯ ಬಸವನಿಂದ ಕಳ್ಳರನ್ನು ಹಿಡಿಸಿದ ಲೀಲೆ, ಅದೇ ಕಟ್ಟಿಗೆಯ ಬಸವಣ್ಣನಿಂದ 'ಓಂಕಾರ ಶಬ್ದ'ವನ್ನು ನುಡಿಸಿದ ಬಗೆ ಮುಂತಾಗಿ ಆರಂಭದ ಬಾಲಲೀಲೆಯ ಜೊತೆಗೆ ಸಚ್ಚಾರಿತ್ರವಂತರಾಗಿ ಬಾಳಿ ಬದುಕಿದರು. ಶ್ರೀ ಅಣ್ಣಯ್ಯ-ತಮ್ಮಯ್ಯನವರ ಧರ್ಮದ ತತ್ವಬೋಧೆಯನ್ನು ನೀಡುತ್ತಾ ಹಲವು ಪವಾಡಗಳನ್ನು ಮಾಡಲಿಕ್ಕೆ ಪ್ರಾರಂಭಿಸುತ್ತಾರೆ. ಅವುಗಳಲ್ಲಿ ಕೆಲವು ಈ ರೀತಿಯಲ್ಲಿವೆ.

೧. ಅತಿಯಾಗಿ ಉಂಡು ಸತ್ತ ಜಂಗಮನಿಗೆ ಪ್ರಾಣದಾನ ಮಾಡಿದುದು.

೨. ಭೀಕರವಾದ ಬರಗಾಲದಲ್ಲಿ ಒಂದೇ ಬಣವಿಯಿಂದ ನೂರಾರು ಪಶುಗಳಿಗೆ ಮೇವು ಒದಗಿಸಿದ್ದು.

೩. ಕೂಡಲಸಂಗಮೇಶ್ವರನಿಂದಲೇ ಮುಚ್ಚಿದ ಬಾಗಿಲನ್ನು ತೆರೆಸಿದ್ದು.

೪. ಹಂಪೆಯಲ್ಲಿಯ ಶ್ರೀ ವಿರೂಪಾಕ್ಷನ ಗುಡಿಯಲ್ಲಿ ಸರ್ಪದ ರತ್ನದಿಂದ ಬೆಳಕನ್ನು ತರಿಸಿದ್ದು

ಮುಂತಾದವು ಅವರು ಮಾಡಿದ ಲೀಲೆಗಳಾಗಿ ಈವತ್ತಿಗೂ ಆ ಭಾಗದ ಜನರಲ್ಲಿ ಉಳಿದುಕೊಂಡಿವೆ. ಉಳಿದ ಶಿವಯೋಗಿಗಳಂತೆ ಬ್ರಹ್ಮಚರ್ಯ ವ್ರತವನ್ನು ಹಿಡಿದು ಸಾಧನೆಯನ್ನು ಮೆರೆಯದೆ, ಪ್ರಾಪಂಚಿಕ ಅನುಭವವನ್ನು ಪಡೆದು ಪರಶಿವನ ಮೆಚ್ಚುಗೆಯನ್ನು ಪಡೆದ ಮಹಾಶಿವಶರಣರು ಇವರು.

ಸತ್ಯ, ಸದಾಚಾರ, ಗುರುಭಕ್ತಿ , ದಾಸೋಹ, ಬಡಭಕ್ತರ ಉದ್ಧಾರಕ್ಕೆ ಹಲವು ರೀತಿಯಲ್ಲಿ ತಮ್ಮ ಜೀವನವನ್ನು ಸವೆಸಿದರು. ತಪ್ಪು ಮಾಡಿದ ಜನರಿಗೆ ಶಿಕ್ಷೆಯನ್ನು ನೀಡುತ್ತಾ, ಮತ್ತೆ ಅವರು ಎಂದೂ ತಪ್ಪು ಮಾಡದ ಹಾಗೇ ನೋಡಿಕೊಂಡರು. ಅರವತ್ತುಮೂರು ಪುರಾತನ ಶರಣರು ಮಾಡಿದ ಶಿವಭಕ್ತಿಯನ್ನು ಮನದುಂಬಿ ಪೂಜಿಸಿ ಪರಮ ಶಿವನಲ್ಲಿ ತಾವು ಲೀನವಾದರು.

ಒಟ್ಟಾರೆಯಾಗಿ ಈ ಕಾವ್ಯವು ಪ್ರಾಪಂಚಿಕ ಜೀವನದಲ್ಲಿದ್ದು, ಶಿವಶರಣರು ಮಾಡಿದ ಕಾಯಕ ಶುದ್ಧ ತತ್ವ, ಲೀಲೆ ಮುಂತಾದವುಗಳನ್ನು ಸರಳ ಮಾತಿನ ಮೂಲಕ ಹಲವು ಮಗ್ಗಲುಗಳನ್ನು ಒಂದು ಸುಂದರವಾದ ಚೌಕಟ್ಟಿನಲ್ಲಿ ಕವಿ ಶಿವದೇವ ಶಾಸ್ತ್ರಿಯವರು ಚಿತ್ರಿಸಿದ್ದಾರೆ.

◆◆◆

೩.೧೨ ಶ್ರೀ ಬಸವಂತಾಚಾರ್ಯ ಕಾಳಾಚಾರ್ಯ ಮನ್ವಾಚಾರ್ಯರ ಪುರಾಣ ಕಾವ್ಯ

* ಕವಿ
* ಸಂಭಾಪುರದ ಶರಣ ಶ್ರೀಗುರು ಮಲ್ಲಜ್ಜನ ಪುರಾಣ

ಕವಿ :

ಶ್ರೀ ಬಸವಂತಾಚಾರ್ಯ ಕಾಳಾಚಾರ್ಯ ಮನ್ವಾಚಾರ್ಯರು, ಗದಗ–ಬೆಟಗೇರಿಯಲ್ಲಿ ವಾಸವಾಗಿ–ದ್ದಾರೆ. ಇವರು ತಮ್ಮ ಗುರುಗಳಾದ ಶ್ರೀ ಚಂದ್ರಶೇಖರವರ ಹತ್ತಿರ ವಿದ್ಯೆ ಕಲಿತು 'ಶ್ರೀ ಸಂಭಾಪುರದ ಶರಣ ಶ್ರೀ ಮಲ್ಲಜ್ಜನ ಪುರಾಣ'ವನ್ನು ರಚಿಸಿದ್ದಾರೆ. ಅವರು 'ಶ್ರೋತ್ರೀಯ ಬ್ರಹ್ಮನಿಷ್ಠ'ರೆಂದು ಅಧ್ಯಾತ್ಮದಲ್ಲಿ ಹೆಸರು ಮಾಡಿದವರು. ಪುರಾಣ ರಚನೆ, ಪ್ರವಚನಗಳನ್ನು ಬಲ್ಲವರಾದಂತೆ ಸಂಗೀತ ಸಾಧನೆಯನ್ನು ಮಾಡಿದ್ದಾರೆ. ಅವರು ಮೂಲತಃ ನರಗುಂದ ತಾಲೂಕಿನ ಕೊಣ್ಣೂರಿನವರು. ಸಂಭಾಪುರದ ಕುರಹಟ್ಟಿ ಶಾಸ್ತ್ರಿಗಳು ಬರೆದ ಹಸ್ತಪ್ರತಿಯನ್ನು ನೋಡಿ ಶ್ರೀಯುತರು ಪುರಾಣ ಕಾವ್ಯವನ್ನು ಬರೆದಿರುವರು. 'ಮಹಾಂತರಿಗೆಲ್ಲಿ ಕುಲ ?' 'ಮಾನವ ಜಾತಿ ತಾನೊಂದೆ ವಲಂ' ಎಂದು ತಿಳಿದು ಜನತೆಯನ್ನು ಆ ಕಡೆಗೆ ಕರೆದೊಯ್ದು ಮಲ್ಲಜ್ಜನ ಪುರಾಣವನ್ನು ಶ್ರೀಯತರು ನಿಷ್ಠೆಯಿಂದ ಆರಾಧನೆ ಎಂಬಂತೆ ಬರೆದಿರುವರು.

ಸಂಭಾಪುರದ ಶರಣ ಶ್ರೀಗುರು ಮಲ್ಲಜ್ಜನ ಪುರಾಣ

ಬೆಟಗೇರಿಯ ಶ್ರೀ ಬಸವಂತಾಚಾರ್ಯ ಕಾಳಾಚಾರ್ಯ ಮನ್ವಾಚಾರ್ಯರು ಗದಗ ಜಿಲ್ಲೆಯ ನರಗುಂದ ತಾಲೂಕಿನ ಕೊಣ್ಣೂರಿನವರು. ಇವರು ತಮ್ಮ ಗುರುಗಳಾದ ಶ್ರೀ ಚಂದ್ರಶೇಖರವರ ಹತ್ತಿರ ವಿದ್ಯೆ ಕಲಿತು 'ಶ್ರೀ ಸಂಭಾಪುರದ ಶರಣ ಶ್ರೀ ಮಲ್ಲಜ್ಜನ ಪುರಾಣ'ವನ್ನು ರಚಿಸಿದ್ದಾರೆ.

ಪ್ರಸ್ತುತ ಪುರಾಣವು ಭಾಮಿನಿ ಷಟ್ಪದಿಯ ೧೮ ಅಧ್ಯಾಯಗಳ ಹರವನ್ನು ಹೊಂದಿ ೭೧೬ ಪದ್ಯಗಳಲ್ಲಿ ತುಂಬಾ ಸ್ವಾರಸ್ಯಕರವಾಗಿ ಮೂಡಿ ಬಂದಿದೆ. ಸಂಭಾಪುರದ ಕುರಹಟ್ಟಿ ಶಾಸ್ತ್ರಿಗಳು ಬರೆದ ಹಸ್ತಪ್ರತಿಗಳನ್ನಿಟ್ಟುಕೊಂಡು ದುರ್ಗಾ ಮಾತೆಯ ಕೃಪೆಯಿಂದ ಈ ಪುರಾಣವನ್ನು

ಬರೆದೆ ಎಂದು ಹೇಳಿಕೊಂಡಿದ್ದಾರೆ. ಈ ಪುರಾಣವು ಒಟ್ಟು ಹದಿನೆಂಟು ಅಧ್ಯಾಯಗಳಲ್ಲಿ ರಚಿಸಲ್ಪಟ್ಟಿದೆ. ಭಾಮಿನಿ ಷಟ್ಪದಿಯನ್ನು ಜೋಡಿಸುವಾಗ ಅಲ್ಲಲ್ಲಿ ತಪ್ಪುಗಳು ಕಂಡು ಬಂದರೂ ಪಟದೀಪ ರಾಗ, ದೀಪ ಚೆಂದ ತಾಳದ ಲಯದಲ್ಲಿ ದೋಷಗಳು ಮರೆಮಾಚುವಂತೆ ಮಾಡಿದ್ದಾರೆ.

ಕನ್ನಡ ನಾಡಿನಲ್ಲಿ ಅನೇಕ ಅವತಾರ ಪುರುಷರು ಜನ್ಮತಾಳಿ ಸರ್ವ ಜನಾಂಗದ ಒಳಿತಿಗಾಗಿ ಈ ನಾಡನ್ನು ಬೆಳಗಿಸಿದವರಲ್ಲಿ ಶ್ರೀಗುರು ಮಲ್ಲಜ್ಜನವರೂ ಒಬ್ಬರು. ಇವರು ೨೦ನೇ ಶತಮಾನದ ಪ್ರಾರಂಭದಲ್ಲಿ ಗದಗ ತಾಲೂಕಿನ 'ಸಾಸ್ವಿಹಳ್ಳಿ'ಯ ಗ್ರಾಮದಲ್ಲಿ 'ಹರಿಜನಕೇರಿ ಚೆನ್ನಮ್ಮ' ಎಂಬ ದೇವದಾಸಿ ಮಹಿಳೆಯ ಗರ್ಭದಲ್ಲಿ ಜನಿಸಿ ಶಿವಯೋಗಿಯಾದರು.

ಪೀಠಿಕಾಧ್ಯಾಯದಲ್ಲಿ ಸಂಪ್ರದಾಯದಂತೆ ಬಸವಂತಾಚಾರ್ಯರು ದೇವತಾಸ್ತುತಿಯನ್ನು ಮಾಡಿದ್ದಾರೆ. ಅದರಲ್ಲಿ ಮುಖ್ಯವಾಗಿ ಗಣೇಶ, ಶಾರದೆ, ಕಾಳಿಕಾ, ದುರ್ಗಾ, ಮೌನೇಶ, ತಂದೆ-ತಾಯಿ-ಗುರುಗಳ ಸ್ತುತಿಯನ್ನು ಮಾಡುತ್ತ ಹಾಗೂ ಹಿಂದಿನ ಕವಿಗಳ ಆಶೀರ್ವಾದ ನನ್ನ ಮೇಲಿದೆ ಎಂದು ಹೇಳಿಕೊಳ್ಳುತ್ತಾನೆ. ಹಾಗೂ ಗುರು ಮಲ್ಲಜ್ಜನ ಕೃಪೆಯು ತನ್ನ ಮೇಲಿರುವ ಕಾರಣದಿಂದಲೇ ಈ ಪುರಾಣವನ್ನು ಬರೆದುದಾಗಿ ಹೇಳಿ ಕಾವ್ಯದ ಪ್ರಾರಂಭಿಕ ಪದ್ಯದಲ್ಲಿ ಹೀಗೆ ಹೇಳುತ್ತಾನೆ -

ಅರಿಯದ ನನ್ನನು ಕರೆಯಿಸಿತಾ
ಅರಿವು ಕೊಟ್ಟ ನನ್ನ ಲೇಖನಿಗೆ ಬಲ
ಮೆರೆದ ವರ ಲೀಲೆಗಳ ಪವಾಡಗಳನು ತಪ್ಪದೆ ।
ನರಿದು ಬರೆಯಿಸಿ ತಾನು ನಿತ್ಯವು
ನಿರುತ ಕೊಟ್ಟು ನಿಜದಿ ತನ್ನ ಚರಿತೆಯ ಬರೆಸಿ
ದುರಿತಗಳನು ನಿವಾರಿಸಿ ಬಸವನ ಮಸ್ತಕಕೆ ಜ್ಞಾನವ ॥

(ಪುಟ : ೦೫, ಪದ್ಯ : ೧೭)

ಕವಿ ಕುಮಾರವ್ಯಾಸ ಹೇಳಿಕೊಳ್ಳುವಂತೆ ಬಸವಂತಾಚಾರ್ಯ ಕವಿಗಳು ಮಲ್ಲಜ್ಜನೇ ಆಶೀರ್ವದಿಸಿ ಆತನೇ ನನಗೆ ಲೇಖನಿ ಕೊಟ್ಟು ಲೀಲೆಗಳನ್ನು ಬರೆಸಿದ ಎಂದು ಹೇಳುತ್ತಾರೆ.

ಮುಂದಿನ ಅಧ್ಯಾಯಗಳಲ್ಲಿ ಮಲ್ಲಜ್ಜನ ಜನನದ ಕುರಿತು ಮಾಹಿತಿ ನೀಡುತ್ತಾರೆ. ಜಾತಿಯಿಂದ ದಲಿತಳಾದ ಚೆನ್ನಮ್ಮನಿಗೆ ಹಳ್ಳಿಯ ಜನ ಆಕೆಗೆ ತಿನ್ನಲು ಏನು ನೀಡುವುದಿಲ್ಲ. ಕೆಲವರು ಹೊಲೆಯಳು ಎಂದು ಜರಿಯುತ್ತಾರೆ. ಆ ಸನ್ನಿವೇಶವನ್ನು ಕುರಿತು ನಿರೂಪಣೆ ಹೀಗಿದೆ.

ಕೇರಿಯವಳು ಎಂದು ಕೆಲವರು
ಏರಿ ಕೋಪದ ನುಡಿಗಳ ನುಡಿದು

ದೂರ ಸರಿದು ನಿನ್ನ ಮಗನನ್ನು ಕಟ್ಟಿಕೊಂಡು ಹೋಗು ।
ಕರೆದು ಬೈಗುಳ ಮಳೆಯ ಸುರಿಸಿ
ಸಿರಿವಂತರು ದಲಿತರ ಮೊರೆಯ ಕೇಳರು
ಊರಿದು ಉರೂ ಬಿಟ್ಟು ಏಣಿಸುವ ಕಟ್ಟಿಕೊಂಡು ತಾನು ॥

(ಪುಟ : ೦೯, ಪದ್ಯ : ೧೫)

ಹೀಗೆ ನಿಂದನೆಗೆ ಒಳಗಾಗಿದ್ದರಿಂದ ಊರು ಬಿಟ್ಟು ಸಂಭಾಪುರದಲ್ಲಿ ವಾಸ ಮಾಡುತ್ತಾಳೆ. ಕೂಲಿ ಮಾಡಿ ಮಲ್ಲಜ್ಜನನ್ನು ಸಾಕುತ್ತಾಳೆ. 'ಶಿವಲಿಂಗಯ್ಯ' ಮತ್ತು 'ಮಹಾಲಿಂಗಯ್ಯ' ಎಂಬ ಯತಿಗಳ ಆಶೀರ್ವಾದದಿಂದ ಮಲ್ಲಜ್ಜನು ಶಾಂಭವಿಯನ್ನು ಒಲಿಸಿಕೊಂಡು ಅನೇಕ ಪವಾಡಗಳನ್ನು ಮಾಡುತ್ತಾನೆ. ಮಲ್ಲಜ್ಜರು ಸಂಭಾಪುರದ ಶಿವಯೋಗಿಯಾಗಿ ದೇವಿಯ ಸನ್ನಿದಿಯಲ್ಲಿಯೇ ಇದ್ದು, ಜನರ ವಿಶ್ವಾಸ ನಂಬಿಕೆಯೊಂದಿಗೆ ಅನೇಕ ಸಮಸ್ಯೆಗಳನ್ನು ಬಗೆಹರಿಸುತ್ತಾ ಕಾಲ ಕಳೆಯುತ್ತಾನೆ. ಶ್ರೀ ಮಲ್ಲಜ್ಜರನ್ನು ಶಿವ ಶಂಭುಶಂಕರನೆಂದು ನಂಬಿದ್ದರು. ಮಲ್ಲಜ್ಜರು ಮೇಲು-ಕೀಳು ಎಂಬ ಅಸಮಾನತೆ ತೋರದೆ ಎಲ್ಲ ಸಮುದಾಯದವರಿಗೆ ಸಾಮಾಜಿಕ ಕೆಲಸಗಳಲ್ಲಿ ಭಾಗಿಯಾಗುತ್ತ ಅನೇಕ ಪವಾಡಗಳನ್ನು ಮಾಡುತ್ತಾರೆ. ಅಂತಹ ಪವಾಡಗಳಲ್ಲಿ ಮುಖ್ಯವಾದವು-ಗಳೆಂದರೆ, ಸಂಸಾರದ ತಾಪತ್ರಯಗಳನ್ನು ಹೋಗಲಾಡಿಸಿದ ಹುಲ್ಲಪ್ಪನ ದಿಟ ಭಕ್ತಿಯಾಗಿರಬಹುದು. ಗ್ವಾಡಿ ಗಂಗವ್ವನನ್ನು ತನ್ನ ಭಕ್ತೆಯಾಗಿಸಿಕೊಂಡದ್ದು .

ಮುಂದಿನ ಅಧ್ಯಾಯಗಳಲ್ಲಿ ಅನೇಕ ಪವಾಡಗಳೆ ತುಂಬಿವೆ. ಹೀಗಾಗಿ ಅನೇಕ ಭಕ್ತರು ಮಲ್ಲಜ್ಜನ ಭಕ್ತರಾಗುತ್ತಾರೆ. ಮುಖ್ಯವಾಗಿ ಹಿರೇಕೊಪ್ಪ, ಚಿಕ್ಕೊಪ್ಪ, ಬೆಟಗೇರಿ ಜನ ಮಲ್ಲಜ್ಜರನ್ನು ಆರಾಧಿಸುತ್ತಾರೆ. ಸೊರಟೂರಿನಲ್ಲಿ ಭಕ್ತರು ತಮ್ಮ ಸೇವೆಯಿಂದ ಮಲ್ಲಜ್ಜನ ಮಠವನ್ನು ಕಟ್ಟುತ್ತಾರೆ –

ಕೀಳು ಕುಲ ಮೇಲುಕುಲವೆಂದು ತಾವು
ತಾಳುತ ಬೇಧವನ್ನು ಮನದಲ್ಲಿ ನಿತ್ಯ
ಬಾಳುತ ಹೊಟ್ಟೆ ಬಟ್ಟೆಗ ಸತಿ ಸುತರಿಗೆ ಎಂದ ತಾ ।
ಗೋಳು ನೆನೆದು ಬದುಕಿದವಳು ತಾ
ಹಾಳು ಮಾಡುತ ತಮ್ಮ ಜೀವನವನ್ನು
ತಿಳಿದು ಸತ್ಸಂಗದಲ್ಲಿ ತಾವು ಶ್ರೋತಿಯ ಬ್ರಹ್ಮ ನಿಷ್ಠನಾದ ಗುರು ॥

(ಪುಟ : ೨೫, ಪದ್ಯ : ४೫)

ಹೀಗೆ ಗುರುವಾಗಿ ಪ್ರತಿಯೊಬ್ಬರಿಗೂ ದೇವರ ಸ್ವರೂಪವಾಗಿ ಗುರು ಮಲ್ಲಜ್ಜರು ವರ ನೀಡುತ್ತಾ ಲೋಕ ಕಲ್ಯಾಣಕ್ಕಾಗಿ ಜನರ ಸೇವೆ ಮಾಡುತ್ತಾನೆ.

ಶ್ರೀ ಮಲ್ಲಜ್ಜರ ಸಾಮಾಜಿಕ ಕೆಲಸಗಳನ್ನು ಸಹಿಸಲಾರದ ಕೆಲ ಜನರು ಆತನನ್ನು ಹೀಯಾಳಿಸುತ್ತಿದ್ದರು. ಅಂತಹ ವ್ಯಕ್ತಿಗಳಲ್ಲಿ ನಾಗಾವಿಯ ನಿಂಗಪ್ಪನು ಮಲ್ಲಜ್ಜನನ್ನು ಪೀಡಿಸುತ್ತಿದ್ದನು.

ಕೊನೆಗೆ ನಿಂಗಪ್ಪನು ಕುಷ್ಠರೋಗ ಪೀಡಿತನಾಗಿ ಮರಣ ಹೊಂದುತ್ತಾನೆ. ಮತ್ತು ಸೊರಟೂರಿನ ಭಕ್ತನಾದ ಎಲ್ಲಪ್ಪನಿಗೆ ಹಾವು ಕಚ್ಚಿದಾಗ, ಮಲ್ಲಜ್ಜನ ಸೇವೆ ಮಾಡಿ ದೇವಿಯ ಕೃಪಾಶೀರ್ವಾದದಿಂದ ಗುಣಮುಖನಾಗುತ್ತಾನೆ. ಹಾಗೂ ಅಬ್ಬಿಗೇರಿಯ ಶಿಡ್ಲಪ್ಪ ಮತ್ತು ನೀಲಪ್ಪ ಎಂಬುವವರು ಶರಣನನ್ನು ನಿಂದಿಸಿ, ಜಾತಿ ವಧೆ ಮಾಡಿ, ಒದೆಯುತ್ತಾರೆ, ತುಚ್ಛವಾಗಿ ಮಾತಾಡಿದ್ದಕ್ಕೆ ಶಿಡ್ಲಪ್ಪ ಮತ್ತು ನೀಲಪ್ಪ ಯಾವ ಬೇನೆ ಬೇಸರಿಕೆ ಇಲ್ಲದೆ ಮರಣ ಹೊಂದುತ್ತಾರೆ. ಇವೆಲ್ಲ ಪುರಾಣದಲ್ಲಿ ಪವಾಡಗಳಾಗಿವೆ.

ಮಲ್ಲಜ್ಜನು ಪುರಾಣದಲ್ಲಿ ಅನೇಕ ಪವಾಡಗಳನ್ನು ಮಾಡುತ್ತ, ಭಕ್ತಾಧಿಗಳನ್ನು ಸಂಪಾದಿಸುತ್ತಾ ಮುಂದೆ ಜಾತ್ರೆ ಉತ್ಸವಗಳು ಜರುಗುತ್ತವೆ. ಇಂದಿಗೂ ಆ ಪದ್ಧತಿಯು ನಡೆದುಕೊಂಡು ಬಂದಿದೆ. ಕೊನೆಗೆ ಮಲ್ಲಜ್ಜರು ಆಷಾಡ ಮಾಸ, ಏಕಾದಸಿ ತಿಥಿಗೆ ಆಸೆಗಳನ್ನು ಅಳಿಯುತ ತನ್ನ ದೇಹವನ್ನು ಅರ್ಪಿಸುತ ದೇವಿಯಲ್ಲಿ ಲೀನವಾಗುತ್ತಾನೆ.

ಶ್ರೀ ಗುರು ಮಲ್ಲಜ್ಜನು ಅಸ್ತಿರದ ದೇಹವ
ಶ್ರೀ ದೇವಿ ಪಾದಕ್ಕೆ ಅರ್ಪಣೆ ಮಾಡಿ
ಶ್ರೀ ಗಂಧದ ಪೆಟ್ಟಿಗೆಯೊಳು ದೇಹವನು ಇಟ್ಟು ಭಕ್ತರು
ಶ್ರೀ ಚರಣವ ಪೂಜೆ ಮಾಡುತ
ಶ್ರೀ ಶನ ನಾಮವ ಪಾಡುತ ಅಜ್ಜನ
ಶ್ರೀ ಪಾದ ಸೇವೆಯ ಮಾಡಿ ಭಕ್ತತತಿ ಕೂಡಿ ವೈಭವದಿ. ॥

(ಪುಟ : ೧೪೨, ಪದ್ಯ : ೦೧)

ಎಂದು ಪ್ರತಿ ವರ್ಷ ಭಕ್ತರೆಲ್ಲರು ಕೂಡಿ ಮಲ್ಲಜ್ಜನ ನಾಮಸ್ಮರಣೆ ಮಾಡುತ್ತಾರೆ. ಭಕ್ತೆಯಾದ ಗಂಗಮ್ಮನು ಶ್ರೀಗುರುವಿನ ಮೂರ್ತಿ ಮಾಡಿ ಪ್ರತಿ ವರ್ಷ ಪೂಜಾರಾಧನೆ ಮಾಡಿ ತಮ್ಮ ಭಕ್ತಿಯನ್ನು ತೋರಿಸುತ್ತಾರೆ.

◆◆◆

೩.೧೩ ಶ್ರೀ ನೀಲಕಂಠ ಜಾಡಗೌಡರ ಅವರ ಪುರಾಣ ಕಾವ್ಯ

* ಕವಿ

೧. ಶ್ರೀ ನೀಲಕಂಠೇಶ್ವರ ಪುರಾಣ

ಕವಿ :

ಶ್ರೀ ನೀಲಕಂಠಪ್ಪ ಗದಿಗೆಪ್ಪ ಜಾಡಗೌಡರ ಸಾ. ಬೆಟಗೇರಿ (೧೯೧೬-೨೦೧೦)

ಶ್ರೀ ನೀಲಕಂಠ ಜಾಡಗೌಡರ ಅವರು ಬಿಜಾಪೂರ ಜಿಲ್ಲೆಯ ಬಾಗಲಕೋಟ ತಾಲೂಕಿನ ಕಲಾದಗಿ ಗ್ರಾಮದಲ್ಲಿ 'ಗದಿಗೆಪ್ಪ' ಮತ್ತು 'ಪರಮ್ಮ' ದಂಪತಿಗಳ ಉದರದಲ್ಲಿ ೧೯೧೬ರಂದು ನಳನಾಮ ಸಂವತ್ಸರದಲ್ಲಿ ಜನಿಸಿದರು. ಎಂಟು ತಿಂಗಳ ಶಿಶುವಿರುವಾಗಲೇ ತಾಯಿಯ ಸಾವನ್ನು ಕಂಡವರು. ನಂತರ ಅಜ್ಜಿ ಚೆನ್ನಮ್ಮ (ಚಿಮನಮ್ಮ) ನವರ ಆರೈಕೆಯಲ್ಲಿ ಬೆಳೆದ ಇವರ ಪ್ರಾಥಮಿಕ ಶಿಕ್ಷಣ ಗಿರಿಸಾಗರದಲ್ಲಿಯೇ ಸಾಗಿತು. ನಾಲ್ಕನೇ ವರ್ಗದಲ್ಲಿದ್ದಾಗ ಗದಗ-ಬೆಟಗೇರಿಗೆ ಬಂದು ಬೆಟಗೇರಿಯ ಶ್ರೀ ನೀಲಕಂಠ ಮಠದಲ್ಲಿದ್ದುಕೊಂಡೇ ಪ್ರಾಥಮಿಕ ಶಿಕ್ಷಣ ಮುಗಿಸಿದರು. ಶಿಕ್ಷಣಾಭ್ಯಾಸ ಮಾಡುತ್ತಿರುವಾಗಲೇ ೧೯೩೭ರಲ್ಲಿ ಶಿಕ್ಷಕವೃತ್ತಿಗೆ ಸೇರಿದರು. ಮುಂದೆ ೧೯೪೪ರಲ್ಲಿ ಧಾರವಾಡದ ಟ್ರೈನಿಂಗ್ ಕಾಲೇಜಿನಲ್ಲಿ ೧೯೪೬ರ ವರೆಗೆ ಅಭ್ಯಾಸ ಮಾಡಿ ಮತ್ತೆ ಬೆಟಗೇರಿಗೆ ಬಂದು ತಮ್ಮ ಶಿಕ್ಷಣ ಕಾರ್ಯ ಮುಂದುವರೆಸಿದಾಗ, ಪುನಃ ೧೯೫೨ರಲ್ಲಿ ಶಾರೀರಿಕ ಶಿಕ್ಷಣ ತರಬೇತಿಗೆ ಆಯ್ಕೆಯಾಗಿ ಧಾರವಾಡಕ್ಕೆ ತೆರಳುವರು. ಎರಡು ತಿಂಗಳ ತರಬೇತಿಯ ಬಳಿಕ ಆಗಿನ ಜಿಲ್ಲಾ ಶಿಕ್ಷಣಾಧಿಕಾರಿಗಳ ನೇತೃತ್ವದಲ್ಲಿ 'ಶಿರಸಾಸನ ಪ್ರಚೋದಕ' ಎಂಬ ಪ್ರಶಸ್ತಿಯೊಂದಿಗೆ ಗದಗ-ಬೆಟಗೇರಿಗೆ ಮರಳಿ ಬಂದರು.

ಶಿಕ್ಷಣ ಪ್ರೇಮಿಗಳಾದ ಇವರು ೧೯೫೪ರಲ್ಲಿ ಮ್ಯಾಟ್ರಿಕ್ಯುಲೇಷನ್ ಪರೀಕ್ಷೆ ಪಾಸಾದರು. ಬಿಡುವಿನ ವೇಳೆಯಲ್ಲಿ ಪ್ರವೃತ್ತಿಯಿಂದ ಸಾಹಿತಿಗಳಾದ ಇವರು ಸಾಹಿತ್ಯ ಸೇವೆ ಕೈಕೊಂಡು ಸಂಗೀತ, ನಾಟಕ, ಏಕಾಂಕ, ಪ್ರಹಸನ, ಕಾದಂಬರಿ, ಜೀವನಚರಿತ್ರೆ, ವಿಮಾರ್ಶಾತ್ಮಕಗ್ರಂಥ, ಕನ್ನಡ-ಇಂಗ್ಲೀಷ್‌ಗ್ರಾಮರ, ಸಂಗೀತಶಿಕ್ಷಣ, ಸಾಮಾಜಿಕ-ಐತಿಹಾಸಿಕ-ಧಾರ್ಮಿಕ ವಿಷಯಗಳಲ್ಲಿ ಸುಮಾರು ನಲ್ವತ್ತು ಗ್ರಂಥಗಳನ್ನು ರಚಿಸಿದರು. ಇದಲ್ಲದೆ ನೂರಾರು ಕವನ, ೨೦೦ ವಿಚಾರಸಂಕೀರಣ ರಚನೆ ಮಾಡಿದ್ದಾರೆ. ಇವರ ಲೇಖನಗಳು 'ಕಲ್ಯಾಣಕಿರಣ', 'ಗಜೇಂದ್ರ

ಪ್ರಭಾ', 'ಸಮರಸ', 'ಸ್ಫೂರ್ತಿ', ನವೋದಯ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇವರ ಎಲ್ಲ ಸಾಹಿತ್ಯ ರಚನೆಯಲ್ಲಿ ಈ ಪುರಾಣ ಕೃತಿಯೇ ಮೇರುಕೃತಿಯಾಗಿದೆ.

ಇವರ ಒಟ್ಟು ಸಾಹಿತ್ಯದ ಮಾಹಿತಿ ಹೀಗಿದೆ.

ಅ) ಐತಿಹಾಸಿಕ, ಸಾಮಾಜಿಕ ಹಾಗೂ ಪೌರಾಣಿಕ ವಿಷಯಗಳನ್ನು ಒಳಗೊಂಡ ೧೮ ನಾಟಕಗಳು.

ಆ) ಧಾರ್ಮಿಕ, ಸಾಮಾಜಿಕ ವಿಷಯ ಕುರಿತಾದ ಆರು ಕಾದಂಬರಿಗಳು, ೧೩ ಧಾರ್ಮಿಕ ಕೃತಿಗಳು, ಸಮಾಜಕ್ಕೆ ಉಪಯೋಗವಾಗುವ ವಿಷಯಗಳನ್ನು ಒಳಗೊಂಡ ಇತರೆ ನಾಲ್ಕು ಕೃತಿಗಳನ್ನು ರಚಿಸಿದ್ದಾರೆ. ಒಟ್ಟು ಸಾಹಿತ್ಯ ರಚನೆಯಲ್ಲಿ ಪ್ರಸ್ತುತ ಪುರಾಣ ಕಾವ್ಯವೇ ಪ್ರಧಾನವಾಗಿದೆ.

೧೯೮೦ರಲ್ಲಿ ರಚಿತವಾದ 'ಶರಣ ಸಾಮ್ರಾಟ' ಧಾರ್ಮಿಕ ಕಾದಂಬರಿಯು 'ಸಮರಸ' ಮಾಸ ಪತ್ರಿಕೆಯಲ್ಲಿ ಮೂರು ವರ್ಷಗಳ ಕಾಲ ಧಾರವಾಹಿಯ ಕಂತುಗಳಲ್ಲಿ ಪ್ರಕಟವಾಗಿ ಅಪಾರವಾದ ಕೀರ್ತಿಯನ್ನು ತಂದುಕೊಟ್ಟಿದೆ. 'ಮುಕ್ತಿಧರ್ಮಪ್ರದಾಯಕ ಶ್ರೀ ನೀಲಕಂಠೇಶ್ವರ ಪುರಾಣ'ವನ್ನು ೧೯೮೮ರಲ್ಲಿ ಅಖಿಲ ಭಾರತ ಕುರುಹಿನಶೆಟ್ಟಿ ಸಮಾಜದ ಪಟ್ಟಾಭಿಷೇಕ ಮಹೋತ್ಸವ ಸಮಿತಿಯು ಪ್ರಕಟಮಾಡಿದೆ. ಇವರನ್ನು ಕನ್ನಡ ಸಾಹಿತ್ಯ ಪರಿಷತ್ತು, ಗದಗ. ೨೦೦೬ರಲ್ಲಿ ಜರುಗಿದ ತಾಲ್ಲೂಕಾ ಘಟಕದ ಪ್ರಥಮ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿತ್ತು. ೨೦೧೦ರಲ್ಲಿ ಲಿಂಗೈಕ್ಯರಾಗಿದ್ದಾರೆ.

೩.೧೩.೧. ಶ್ರೀ ನೀಲಕಂಠೇಶ್ವರ ಪುರಾಣ

ಈ ಕಾವ್ಯವು ಎಲ್ಲ ಪುರಾಣ ಕಾವ್ಯಕ್ಕಿಂತ ಭಿನ್ನವಾದ ವಸ್ತುವನ್ನು ಇಟ್ಟುಕೊಂಡು ರಚಿತವಾದ ಕಾವ್ಯ. ಪುರಾಣ ಕಾವ್ಯದಲ್ಲಿ ಕಥಾನಾಯಕನ ವೈಭವೀಕರಣಕ್ಕೆ ಪವಾಡಗಳು ಬರುತ್ತವೆ. ಆದರೆ ಈ ಪುರಾಣ ಕಾವ್ಯದಲ್ಲಿ ಒಂದು ಧರ್ಮಸಾರ ಹಾಗೂ ತತ್ವ ಮತ್ತು ಆ ಸಮುದಾಯದ ಪ್ರಾಚೀನ ಗುರುಪರಂಪರೆ ಮುಂತಾದವುಗಳನ್ನು ಚಿತ್ರಿಸುವ ವಿಶಿಷ್ಠ ಲಯಗಾರಿಕೆಯ ಕೃತಿ ಇದಾಗಿದೆ.

ಕುರುಹಿನಶೆಟ್ಟಿ ಎಂಬ ಧರ್ಮದ ಸುತ್ತ ಹೆಣೆದ ಕಥನ ಇಲ್ಲಿದೆ. ಪರಮೇಶ್ವರನು ಅರವತ್ತಾರು ಕೋಟಿ ದಾನವ ಸೈನವನ್ನು ಸಂಹರಿಸಲು ೬೬ ಜನ ರುದ್ರರಿಗೆ ವೃಷಭರೂಪವನ್ನು ನೀಡಿ ಅವರಿಂದ ಲೋಕಕಲ್ಯಾಣವನ್ನುಂಟು ಮಾಡಿದ ಪೌರಾಣಿಕ ಕಥಾ ಪ್ರಸಂಗಗಳನ್ನಾಧರಿಸಿ ಶ್ರೀ ನೀಲಕಂಠ ಪುರಾಣವು ಮೂಡಿಬಂದಿದೆ. ಈ ೬೬ ಜನ ರುದ್ರರಲ್ಲಿ ನೀಲಕಂಠನ

ವಿಶೇಷತೆಯನ್ನು ಆತನ ಕಾರ್ಯ ವೈಖರಿಯನ್ನು ಈ ಕೃತಿಯು ಪರಿಚಯಸುತ್ತದೆ. ೧೮ ಅಧ್ಯಾಯಗಳ ಹರವುಳ್ಳ ಈ ಕೃತಿಯು ೧೧೯೩ ಭಾಮಿನಿ ಷಟ್ಪದಿ ಪದ್ಯಗಳಲ್ಲಿ ರಚಿತವಾಗಿದೆ.

ಅರವತ್ತಾರು ಗೋತ್ರಗಳಿಗೆ ಸಂಬಂಧಿಸಿದಂತೆ ಕುರುಹಿನ ಶೆಟ್ಟಿಗಳ ಮೂಲದ ಬಗೆಗೆ ಅವರ ಉಗಮದ ಉತ್ಪತ್ತಿಯನ್ನು ಶ್ರೀ ನೀಲಕಂಠ ಪುರಾಣವು ನಿರೂಪಿಸುತ್ತದೆ. ಶ್ರೀನೀಲಕಂಠ ಮಲ್ಲಿಕಾರ್ಜುನನೇ ಕುರುಹಿನ ಶೆಟ್ಟಿ ಸಮುದಾಯದ ಮೂಲ ಗುರುವೆಂದು ಈ ಕಾವ್ಯದಲ್ಲಿ ಹೇಳಲ್ಪಟ್ಟಿದೆ. ಈ ಸಮುದಾಯದ ಹಿನ್ನೆಲೆಯನ್ನು ಕವಿ ನೀಲಕಂಠ ಅವರು ಕಾವ್ಯದಲ್ಲಿ ಹೀಗೆ ಅಭಿವ್ಯಕ್ತ ಪಡಿಸಿದ್ದಾರೆ.

ಕುರುಹಿನಶೆಟ್ಟಿ ಧರ್ಮದ ಮೂಲ
ಕುರುಹಿನಶೆಟ್ಟಿ ಧರ್ಮದ ಸಮಯ
ಕುರುಹಿನಶೆಟ್ಟಿ ಧರ್ಮದ ಹಿರಿಮೆ ಬೋಧಿಸಿಹರವರು ।
ಗುರು ಪರಂಪರೆಯುಳ್ಳ ಹೊತ್ತಿಗೆ
ವರಶ್ರೀ ನೀಲಕಂಠವೆಂಬ
ಪರಿಕಲ್ಪಿತ ಪುರಾಣದಾಧಾರವನು ಕೊಡುತಿಹರು ॥

(ಪುಟ : ೧೪೧, ಪದ್ಯ : ೫೩೨)

ಎಂದು ಹೇಳುವಲ್ಲಿ ಶ್ರೀ ನೀಲಕಂಠನ ಮಹಿಮೆಯಲ್ಲಿ ಕುರುಹಿನಶೆಟ್ಟಿ ಸಮುದಾಯ ಬೆಳೆದು ಬಂದ ಬಗೆಯನ್ನು ಕವಿಗಳು ಗುರುತಿಸಿದ್ದಾರೆ. ಬಹುಮುಖ್ಯವಾಗಿ ಈ ಕುರುಹಿನಶೆಟ್ಟಿ ಸಮುದಾಯದ ಒಳ ಪಂಗಡಗಳನ್ನು ಕವಿಗಳು ಗುರುತಿಸಿದ್ದಾರೆ. ಅವುಗಳು ಯಾವ ಯಾವ ಸಾಮಾಜಿಕ ಏಣಿಶ್ರೇಣಿಯಲ್ಲಿ ನಿಂತಿವೆ ಎನ್ನುವುದನ್ನು ಅರ್ಥೈಸಿಕೊಳ್ಳಬೇಕಾಗಿದೆ.

ಬಿಳಿಮಗ್ಗ, ಕುರುಹಿನ, ನೇವರ ಮೇಣ್
ಪೊಳೆವ ನೇಗಿ, ಬಿಳಿಜಾಡರವರ
ಇಳಲ್ಲೊಡಿದ ಹಿರೇಕುರ್ನಿ, ಚಿಕ್ಕುರ್ನಿಗಳು ಮೇಣ್॥
ನಳಿ ಕೋಷ್ಠಿ ವರ ಪಾಂಡ್ಯಾಕೋಷ್ಠಿ
ಬೆಳಗುತ್ತಿರುವ ಕುರುಹಿನಶೆಟ್ಟಿ
ಇಳೆಯೊಳೀ ಕೋಮುಗಳು ಕುರುಹಿನಶೆಟ್ಟಿ ಧರ್ಮದವು.

(ಪುಟ : ೧೩೮, ಪದ್ಯ : ೫೧೭)

ಹೀಗೆ ಅನೇಕ ರೀತಿಯಲ್ಲಿ ಕುರುಹಿನಶೆಟ್ಟಿ ಧರ್ಮದ ಒಳಪದರುಗಳ ರಚನೆಯ ವಿನ್ಯಾಸವನ್ನು ವಿಶಿಷ್ಟತೆಯಿಂದ ಗುರುತಿಸಿದ್ದಾರೆ. ಇಂತಹ ಧರ್ಮದ ಉದ್ಧಾರಕ್ಕಾಗಿ ಜನಿಸಿದ ಮಹಾಪುರುಷನ ಕಥನ ಈ ಚರಿತ್ರೆಯಲ್ಲಿ ಅಡಗಿದೆ. ಭಾಮಿನಿ ಷಟ್ಪದಿಯಲ್ಲಿ ರಚಿತವಾದ ಈ ಕಾವ್ಯವು ಸರಳವಾಗಿ ಎಲ್ಲರನ್ನು ಬೆರಗುಗೊಳಿಸುತ್ತದೆ.

ಸ್ವಧರ್ಮದ ಅಭಿಮಾನ, ಪರಧರ್ಮಗಳ ಸಹಿಷ್ಣತೆಯನ್ನು ಇಟ್ಟುಕೊಂಡು ಎಲ್ಲರು ಒಂದು ಎನ್ನುವ ಭಾವೈಕ್ಯತೆ ಶ್ರೀಗಳದು. ಹೀಗೆ ಪರಂಪರೆಯಿಂದ ಸಾಗುತ್ತ ಮುನ್ನಡೆದು ಅದೆಷ್ಟೋ ತಲೆಮಾರುಗಳ ನಂತರ ಶ್ರೀ ನೀಲಕಂಠ ರುದ್ರನು ಶ್ರೀಶೈಲದಲ್ಲಿ ಶ್ರೀಮಲ್ಲಿಕಾರ್ಜುನ ದೇವರ ಸನ್ನಿಧಿಯ ಮಠದಲ್ಲಿ ವಾಸ ಮಾಡಿಕೊಂಡು ಬಂದಿದ್ದರು. ಅಲ್ಲಿ ಅವರಿಗೆ ಉಳಿದುಕೊಳ್ಳಲು ಮನಸ್ಸು ಬಾರದೇ ಅವರು ತಮ್ಮ ಪ್ರಯಾಣವನ್ನು ಕರ್ನಾಟಕದ ಕಡೆಗೆ ಬೆಳೆಸಿದರು. ಹೀಗೆ ಶ್ರೀಶೈಲವನ್ನು ತ್ಯಜಿಸಿ ಭಕ್ತರೋದ್ಧಾರಕ್ಕಾಗಿ ಮತ್ತು ಧರ್ಮಜಾಗ್ರತಿಯನ್ನು ಮಾಡಲು ಅವರು ಸಂಚಾರ ಪ್ರಾರಂಭಿಸಿ ಕೊನೆಗೆ ಗದಗ-ಬೆಟಗೇರಿ ಗ್ರಾಮಕ್ಕೆ ಬಂದು ಅಲ್ಲಿಯೇ ವಾಸಮಾಡಲಿಕ್ಕೆ ಪ್ರಾರಂಭಿಸುತ್ತಾರೆ.

ತದನಂತರ ಅವರು ಬೆಟಗೇರಿಯಲ್ಲಿ ಕುರುಹಿನಶೆಟ್ಟಿ ಸಮುದಾಯದ ಗುರು ಪೀಠವನ್ನು ತೆರೆಯುತ್ತಾರೆ. ಅವತ್ತಿನಿಂದ ಅಂದರೆ ಸುಮಾರು ೨೦೦ ವರ್ಷಗಳಿಂದ ಆ ಗ್ರಾಮವು ಈ ಸಮುದಾಯದ ಭಾವೈಕ್ಯತೆಯ ಕೇಂದ್ರವಾಗಿದೆ. ಅಷ್ಟರಲ್ಲಿಯೇ ಶ್ರೀಗಳಿಗೆ ಮುಪ್ಪು ಆವರಿಸುತ್ತದೆ. ಇದನ್ನು ಗಮನಿಸಿದ ಜನರು ಅವರಿಗೆ ಮುದಿಸ್ವಾಮಿಗಳೆಂದು ಕರೆಯುತ್ತಾರೆ. ಹೀಗೆ ಆ ಮುದಿಸ್ವಾಮಿಗಳು ಸಂಚರಿಸುತ್ತಿರುವಾಗ ಸಕಲ ಭಕ್ತರಿಗೆ ಧರ್ಮಜಾಗ್ರತಿಯ ಮಂತ್ರವನ್ನು ಬೋಧಿಸುತ್ತ ಕೊನೆಗೆ ಕ್ರಿ.ಶ. ೧೮೪೪ರಲ್ಲಿ ಬೆಟಗೇರಿಯಲ್ಲಿ ಲಿಂಗೈಕ್ಯರಾಗುತ್ತಾರೆ. ಈ ಪ್ರಸಂಗವನ್ನು ಕವಿ ನೀಲಕಂಠ ಅವರು ಸೊಗಸಾಗಿ ಬಣ್ಣಿಸಿದ್ದಾರೆ.

ವಿಶ್ವಧರ್ಮದ ಮರ್ಮವನ್ನುರೆ
ಶಾಶ್ವತವಾಗಿ ನೆಲೆಸುವಂತಹ
ವಿಶ್ವ ಬಾಂಧವ್ಯದ ತತ್ವವ ವ್ಯಕ್ತಗೊಳಿಸಿಹರು ।
ವಿಶ್ವತಃ ಗೌರವನು ಪಡೆದಿಹ
ವಿಶ್ವನಾಥ ಸ್ವರೂಪನಂಥ
ವಿಶ್ವಸನೀಯ ಸಚ್ಚರಿತ ಪರಮಗುರುದೇವರಿವರು ॥

(ಪುಟ : ೨೬೨, ಪದ್ಯ : ೧೦೭೩)

ಎಂದು ಶ್ರೀ ನೀಲಕಂಠನ ವ್ಯಕ್ತಿತ್ವದ ಅಸಾಧಾರಣ ಲಕ್ಷಣವನ್ನು ಕವಿ ಹೇಳಿ ಈ ಪುರಾಣವನ್ನು ಹೇಗೆ ಸ್ವೀಕರಿಸಬೇಕೆಂದು ಕೊನೆಗೆ ತಿಳಿಸುತ್ತಾನೆ. ಜೊತೆಗೆ ಈ ಪುರಾಣ ಪ್ರಾಮುಖ್ಯತೆಯನ್ನು ವಿಶಿಷ್ಟ ರೂಪದಲ್ಲಿ ಕವಿ ನೀಲಕಂಠ ಅವರು ಹೆಣೆದಿದ್ದಾರೆ.

"ನೀಲಕಂಠ ಪುರಾಣವೆಂಬುದು ।
ಮೂಲಭೂತ ಕುರುಹಿನಶೆಟ್ಟಿಯ
ಮೂಲತಃ ಧರ್ಮಗ್ರಂಥವಾಗಿದೆ ಸತ್ಯಸಿದ್ಧವು ॥

ಕಾಲಕಂಠನ ಕೃಪೆಯ ಬಲದಿಂ ।

ಮೂಲ ಗುರುಗಳಿವರು ಖಂಡಿತವು ।

ಕಾಲತ್ರಯದಲಿ ಭಕ್ತಿಯಂ ಸೇವಿಸಲು ಬೇಕಯ್ಯ ॥

(ಪುಟ : ೨೦೮, ಪದ್ಯ : ೮೩೯)

ಎಂದು ಆ ಸಮುದಾಯದ ಭಕ್ತರಿಗೆ ತಮ್ಮ ಪರಂಪರೆಯ ಹಿನ್ನೆಲೆಯನ್ನು ತಿಳಿಸುತ್ತಾರೆ.

ಒಟ್ಟಾರೆಯಾಗಿ ಈ ಪುರಾಣ ಕಾವ್ಯವು ಒಬ್ಬ ಪವಾಡ ಪುರುಷನ ಚರಿತೆಯಾಗದೆ, ಒಂದು ಸಮುದಾಯದ ರೀತಿ-ನೀತಿ, ಹಾಗೂ ಆ ಸಮುದಾಯದ ಚಾರಿತ್ರಿಕ ದಾಖಲೆಯನ್ನು ನೆನಪಿಸುವುದರ ಜೊತೆಗೆ ಅವರ ಪರಂಪರೆಯನ್ನು ಕಟ್ಟಿಕೊಡುವ ವಿನೂತನ ವಿಶಿಷ್ಟ ಪುರಾಣ ಕಾವ್ಯವಾಗಿದೆ.

◆◆◆

ಅಧ್ಯಾಯ – ೪

ಪುರಾಣ ಕಾವ್ಯಗಳ ಮೌಲ್ಯ ವಿವೇಚನೆ

೪.೧. ಪುರಾಣ ಕಾವ್ಯ : ವಸ್ತು ವಿನ್ಯಾಸ.

೪.೨. ಪುರಾಣ ಕಾವ್ಯ : ಧಾರ್ಮಿಕ ವಿನ್ಯಾಸ.

೪.೩. ಪುರಾಣ ಕಾವ್ಯ : ಕಾವ್ಯ ಕಲೆ.

೪.೪. ಪುರಾಣ ಕಾವ್ಯ : ಪಾತ್ರ ವಿವೇಚನೆ.

೪.೫. ಪುರಾಣ ಕಾವ್ಯ : ಸಾಮಾಜಿಕ ಸಂವಹನ.

೪

ಪುರಾಣ ಕಾವ್ಯಗಳ ಮೌಲ್ಯ ವಿವೇಚನೆ

೪.೧. ಪುರಾಣ ಕಾವ್ಯ : ವಸ್ತು ವಿನ್ಯಾಸ

ಕಾವ್ಯವನ್ನು ಅರ್ಥಮಾಡಿಕೊಳ್ಳುವಾಗ, ಅದರ ಅಂಗಗಳಲ್ಲಿ ಕಥಾವಸ್ತು ಮಹತ್ವದ್ದೆನಿಸುವದು. ವಸ್ತು ಕಥೆಯನ್ನು, ಕಥೆ ಘಟನೆಗಳನ್ನು ಅನುಸರಿಸುತ್ತದೆ. ಪುರಾಣ ಕಾವ್ಯಗಳು ಪೌರಾಣಿಕ ವಸ್ತುವನ್ನು ಹೊಂದಿರಬೇಕೆಂಬ ಪ್ರಾಚೀನ ತಿಳುವಳಿಕೆಯನ್ನು ಕಾಳಿದಾಸನಂತಹ ಮಹಾಕವಿಗಳು – 'ಪುರಾಣಂ ಇತ್ಯೇವ ನಚಸಾಧು ಸರ್ವಂ' ಎಂದುಹೇಳುವ ಮೂಲಕ ವಸ್ತು ನಾವೀನ್ಯತೆಗೆ ಅವಕಾಶ ಕಲ್ಪಿಸಿದ್ದಾರೆ. ಆದಿಕವಿ ಪಂಪ – 'ಬಗೆ ಪೊಸದಪ್ಪುದಾಗಿ'– ಎಂದು ಹೇಳಿದ್ದು, ವಸ್ತು ಹೊಸದಿರಬೇಕೆಂಬ ಮಹತ್ವದ ವಿಷಯವನ್ನೇ ವಿವೇಚಿಸುವದು. ಕನ್ನಡದ ಸಾಹಿತ್ಯ ಸಂದರ್ಭದಲ್ಲಿ ಕವಿಗಳು ವಸ್ತುವಿನ ಹೊಸತನದಿಂದ ತಮ್ಮ ಕಾವ್ಯದ ಅಸ್ತಿತ್ವವನ್ನು ಗುರುತಿಸಿಕೊಂಡರು. ಪಂಪನಲ್ಲಿ ಕಥೆ ಹಳೆಯದಾದರೂ ವಸ್ತು ಹೊಸದಾಯಿತು. ವಚನಕಾರರು 'ವಸ್ತು'ವನ್ನು ಭಕ್ತಿಯನ್ನಾಗಿ ಮಾಡಿಕೊಂಡು ಹೊಸ ಮಾರ್ಗವನ್ನು ನಿರ್ಮಿಸಿದರು. ಮುಂಬರುವ ವೀರಶೈವ ಕವಿಗಳಿಗೆ ಶರಣರ ಜೀವನವೇ ಕಥಾವಸ್ತುವಾಯಿತು. ಇದು ಒಂದು ಹೆದ್ದಾರಿಂಯೇ ಆಯಿತು. ೧೫ನೆಯ ಶತಮಾನದ ತೋಂಟದ ಸಿದ್ಧಲಿಂಗಯತಿಗಳಿಂದ ಕರ್ನಾಟಕದ ಸಾಹಿತ್ಯ–ಆಧ್ಯಾತ್ಮಿಕಲೋಕದಲ್ಲಿ ಇನ್ನೊಂದು ಹೊಸಮಾರ್ಗವು ನಿರ್ಮಾಣವಾಯಿತು. ಅಲ್ಲಿಂದ ಮುಂದೆ ಮಠದ ಸ್ವಾಮಿ ಪರಂಪರೆ ಅವರ ಜೀವನಗಳು ಕಾವ್ಯಕ್ಕೆ ವಸ್ತುವಾದವು. ಇದೇ ಹಂತದಲ್ಲಿ ಅವರ ಜೀವನವನ್ನು ಉದಾತ್ತಗೊಳಿಸುವ, ಭವ್ಯತೆಗೆ ಹೊಂದಿಸುವ ಪ್ರಯತ್ನಗಳು ನಡೆದವು. ಅವರ ಜೀವನದ ತಾತ್ವಿಕ, ಸಾಧನಾ–ಸಿದ್ಧಿಗಳು ಭವ್ಯವಾಗಿದ್ದರೂ ಅವರ ಜೀವನವನ್ನು ಅಲೌಕಿಕ ಅಸಾಮಾನ್ಯಗೊಳಿಸುವ ಪ್ರಯತ್ನಗಳ ಫಲವಾಗಿ ಲೀಲೆಗಳು ಹುಟ್ಟಿಕೊಂಡವು. ಮುಂದೆ ವ್ಯಕ್ತಿತ್ವವನ್ನು ಇನ್ನೂ ಎತ್ತರಕ್ಕೇರಿಸುವತ್ತ ಪವಾಡಗಳು ಹುಟ್ಟಿಕೊಂಡವು. ಮೊದಮೊದಲು ಕಡಿಮೆ ಇದ್ದು ಈ ರೀತಿ ಬರುಬರುತ್ತಾ ವ್ಯಾಪಕಗೊಂಡಿತು. ಆಧುನಿಕ ಕಾಲದಲ್ಲಿ ಪವಾಡಗಳಿಗಾಗಿಯೆ ಪುರಾಣ ಕಾವ್ಯಗಳು ಹುಟ್ಟಿಕೊಳ್ಳುತ್ತವೆ. ಪಂ. ಪುಟ್ಟರಾಜ ಕವಿಗಳು 'ಶುದ್ಧಕಾವ್ಯ'ವನ್ನು ಬರೆದಂತೆ ಪವಾಡಗಳಿಂದ ತುಂಬಿದ ಕಾವ್ಯಗಳನ್ನು ಬರೆದರು. ಅವರ ಅಂತಃ ಪ್ರೇರಣೆಯಿಂದ ಬರೆದ ಕಾವ್ಯಗಳು ಹೆಚ್ಚು ಕಾವ್ಯಗುಣಗಳನ್ನು,

ವಸ್ತು ನಿಷ್ಠತೆಯನ್ನು ಹೊಂದಿದಂತೆ; ಪರಪ್ರೇರಣೆಯಿಂದ ಹುಟ್ಟಿದವು ಕಾವ್ಯ ಸ್ವಾತಂತ್ರವನ್ನು ಕಳೆದುಕೊಂಡು ಲೀಲಾವಿಲಾಸಗಳಾಗಿರುವವು.

ಪಂಡಿತ ಪುಟ್ಟರಾಜರ ಸಾಹಿತ್ಯ ಸೃಷ್ಟಿಯ ಹಿಂದೆ ಧರ್ಮ ಆಧ್ಯಾತ್ಮಗಳು ಪ್ರಧಾನವಾಗಿವೆ. ಒಟ್ಟು ಸಾಹಿತ್ಯ ಸೃಷ್ಟಿಯು ಶರಣತತ್ವ – ವೀರಶೈವ ಧರ್ಮಗಳ ವಿವೇಚನೆಯೆ ಪ್ರಧಾನ ವಿಧಾನ–ವಾಗಿದೆ. ಪುರಾಣ ಕಾವ್ಯಗಳು ಶಿವಭಕ್ತಿ, ಶರಣತತ್ವ, ವೀರಶೈವತ್ವ, ಸ್ವಾಮಿ ಚರಿತ್ರೆಗಳನ್ನು ವಿವೇಚಿಸುವತ್ತ ಮುಖಮಾಡಿವೆ. ಅದರಲ್ಲಿ ಕಥಾವಸ್ತು ವಿಧಾನವು ಚಾರಿತ್ರಿಕ ನಿರೂಪಣೆಯತ್ತಲೆ ಸಾಗಿದೆ. ಮುಖ್ಯವಾಗಿ ಮಠದ ಭಕ್ತರು ಸ್ವಾಮಿಪೀಠ ಪರಂಪರೆಯ ವಾರಸುದಾರರೂ ಹೇಳಿ–ಬರೆಯಿಸಿದ ಕಾವ್ಯದ ವಸ್ತು. ಜನರಲ್ಲಿಯ ವದಂತಿರೂಪದ, ಪವಾಡ – ಲೀಲಾರೂಪಗಳ ವೈಭವೀಕರಣದತ್ತಲೆ ಸಾಗುತ್ತದೆ. ಸ್ವಾಮಿಗಳು ಬದುಕಿದ ರೀತಿಯೆ ಭವ್ಯವಾದರೂ ಪಾಮರ ಮಾರ್ಗವಾದ ಲೀಲೆಗಳ ನಿರೂಪಣೆ ಇಲ್ಲಿ ಮುಖ್ಯವಾಗಿ ಕಾಣಿಸಿದೆ. ಇದರಿಂದ ವ್ಯಕ್ತಿ ಸಾಧನೆಗಳಿಗಿಂತ ಅಲೌಕಿಕ ಶಕ್ತಿ ನಿರೂಪಣೆ ಮುಖ್ಯ ಮಾರ್ಗವಾಯಿತು.

ಪಂಡಿತ ಪುಟ್ಟರಾಜರು ಪುರಾಣ ಕಾವ್ಯಗಳನ್ನು ಬರೆದದ್ದು ಹೆಚ್ಚಾಗಿ ಮಠದ ಸ್ವಾಮಿಗಳ ಚರಿತ್ರೆಗಳನ್ನೇ. ಅಲ್ಲಿ ಪ್ರಧಾನವಾಗಿರುವದು ಲಿಂಗಾಯತ ಧರ್ಮ ತತ್ವ ನಿರೂಪಣೆ. ಇಲ್ಲಿ ಭಕ್ತಿಯು ಭವ್ಯತೆಯತ್ತ ಹೊರಟು ತಮಿಳುನಾಡಿನ ತ್ರಿಷಷ್ಠಿ ಪುರಾತನರ ಚರಿತ್ರೆಯನ್ನು; ತೆಲುಗು ಪ್ರದೇಶದ ಹೇಮರಡ್ಡಿ ಮಲ್ಲಮ್ಮನ ಚರಿತ್ರೆಯನ್ನು ವಿವರಿಸಿದ್ದಾರೆ. ಇವು ಶೈವ ಪರಂಪರೆಯ ನಿರೂಪಣೆಗಳು. ಉಳಿದಂತೆ ಕನ್ನಡನಾಡಿನ ಕಲ್ಯಾಣದ ಶರಣರ ಚರಿತ್ರೆಯ ನಿರೂಪಣೆಯಾಗಿ ಅಕ್ಕಮಹಾದೇವಿಯ ಚರಿತೆಯೂ, ಗುಡ್ಡಾಪೂರ ದಾನಮ್ಮನ ಚರಿತ್ರೆಗಳು ನಿರೂಪಿತವಾಗಿವೆ. ಉತ್ತರ ಕಾಲದ ಶರಣ ಶ್ರೇಷ್ಠರಾದ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಅಧುನಿಕ ಪೂರ್ವಕಾಲದ ಕಲಬುರ್ಗಿ ಶರಣ ಬಸವೇಶ್ವರ, ಅಂಕಲಗಿ ಅಡವಿಸಿದ್ದೇಶ್ವರ, ನಾಲತ್ತವಾಡ ವೀರೇಶ ಶರಣರ ಚರಿತ್ರೆಗಳು ಕಾವ್ಯದ ವಸ್ತುವಾಗಿವೆ. ಇವುಗಳಲ್ಲಿ ಸಾಧನೆ–ಸಿದ್ಧಿಗಳೆ ಪ್ರಧಾನವಾಗಿ ನಿರೂಪಣೆಗೊಂಡಿವೆ. ಉಳಿದಂತೆ ಹದಿಮೂರು ಪುರಾಣ ಕಾವ್ಯಗಳು ಮಠದ ಸ್ವಾಮಿಗಳ ಲೀಲಾ ನಿರೂಪಣೆಯಾಗಿರುವವು. ಇವುಗಳನ್ನೆಲ್ಲ ಹೇಳಿ ಬರೆಯಿಸಿದ ಕಾರಣ ಕವಿಯ ನಿರೂಪಣಾ ವಿಧಾನಕ್ಕೂ ಚ್ಯುತಿಬಂದಿದೆ. ಒಂದರ ಬಿಂಬ ಇನ್ನೊಂದು ಎಂಬ ಚಿತ್ರಣ ಇಲ್ಲಿದೆ.

ಪಾಲ್ಕುರಿಕೆ ಸೋಮನಾಥನಿಂದ ಪವಾಡಗಳನ್ನು ತುಂಬಿ ಶರಣರ ಚರಿತ್ರೆಗಳನ್ನು ಹೇಳುವ ಪದ್ಧತಿಯು ಕನ್ನಡದಲ್ಲಿ ಭೀಮ ಕವಿಯಿಂದ ಮುಂದುವರೆಯಿತು. ೧೫ನೆಯ ಶತಮಾನದಲ್ಲಿ ಕಾವ್ಯಗಳನ್ನು ವಸ್ತುಕೋಶಗಳೆನ್ನುವಂತೆ ಆಧ್ಯಾತ್ಮಿಕ ತತ್ವನಿರೂಪಣೆಗೆ ಇಂಬುಕೊಟ್ಟು ನಿರೂಪಿಸಲಾಯಿತು. ಅದು ಲಕ್ಕಣ್ಣ ದಂಡೇಶನ ಶಿವತತ್ವಚಿಂತಾಮಣಿಯಲ್ಲಿ ಪರಿಪೂರ್ಣತೆಯನ್ನು ಪಡೆಯಿತು. ಆಧುನಿಕ ಕಾಲದಲ್ಲಿ ದ್ಯಾಂಪೂರ ಚನ್ನಕವಿಗಳೇ ಮೊದಲಾದವರು ಸಾಂದರ್ಭಿಕವಾಗಿ

ತಾತ್ವಿಕ ನಿರೂಪಣೆ ಮಾಡಿ ಕಾವ್ಯಗಳನ್ನು ಬರೆದರು. ಪಂಡಿತ ಪುಟ್ಟರಾಜರ ಕಾವ್ಯದಲ್ಲಿ ಮುಖ್ಯ ಕಥಾನಾಯಕನ ಚರಿತ್ರೆಗೆ ಪೂರಕವಾಗುವಂತೆ ತತ್ವ ವಿವೇಚನೆಯೂ. ತತ್ವನಿವೇದನೆಗಾಗಿ ಶರಣರ ಬದುಕಿನ ಘಟನಾವಳಿಗಳ ನಿರೂಪಣೆಗಳು ಒಂದು ಪರಂಪರೆಯ ರೂಪದಲ್ಲಿವೆ. ಹಲವಾರು ಕೃತಿಗಳಲ್ಲಿ ನೇರವಾಗಿ ವಚನಗಳ ರೂಪಕ್ಕೆ ತಿರುಗಿಸುವದನ್ನು ಹಲವೆಡೆ ವಚನಗಳ ಛಾಯೆಯನ್ನು ತಾಳಿದ ಪದ್ಯಗಳನ್ನು ಕಾಣುವೆವು. ಇವೆಲ್ಲವು ತತ್ವ ನಿರೂಪಣೆಗಾಗಿ ಇವೆ.

ವೀರಶೈವ ಲಿಂಗಾಯತ ತತ್ವಜ್ಞಾನವು ಲಿಂಗ-ಅಂಗ-ಸಾಮರಸ್ಯವನ್ನು ಹೊಂದಿದಂತೆ ತತ್ವತ್ರಯಗಳಾದ ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರಗಳನ್ನು, ಕಾಯಕ-ದಾಸೋಹ ಗಳನ್ನು ಕ್ರಿಯಾಜ್ಞಾನ ಸಾಮರಸ್ಯವನ್ನು ನಿರೂಪಿಸುವದು ಇಲ್ಲಿ ಸಾಮಾನ್ಯ ಅಂಶವಾಗಿದೆ. ಷಟ್‌ಸ್ಥಲ ಅಷ್ಟಾವರಣ ಪಂಚಾಚಾರಗಳ ನಿರೂಪಣೆ ಇಲ್ಲಿ ಪ್ರತಿಯೊಂದು ಕಾವ್ಯದ ಮುಖ್ಯಭಾಗವು ಆಗಿದೆ. ಇದರಿಂತೆ ಪೀಠಿಕಾಭಾಗದಲ್ಲಿ ರಾಷ್ಟ್ರ ರಾಜ್ಯಗಳ ಸ್ತುತಿಯು ಕವಿಗಳ ರಾಷ್ಟ್ರಭಕ್ತಿಯನ್ನು ಎತ್ತಿ ಹೇಳುವದು. ವೀರಶೈವ ತತ್ವ ನಿರೂಪಣೆಯೊಂದಿಗೆ ಶೈವ ಆಚರಣೆಗಳನ್ನು ಇಲ್ಲಿ ನಿರೂಪಿಸಲಾಗಿದೆ.

ಭಕ್ತಿ-ಜ್ಞಾನ-ವೈರಾಗ್ಯಗಳ ಮುಪ್ಪುರಿಯಾಗಿರುವಂತೆ ಭಕ್ತರ-ಸ್ವಾಮಿಗಳ ಚರಿತ್ರೆಗಳು ಇಲ್ಲಿ ಮೂಡಿ ಬಂದಿವೆ. ಇದರೊಂದಿಗೆ ಸಮಾಜಸೇವಾ ಗುಣವು ಸ್ವಾಮಿಗಳ ಚರಿತ್ರೆಯನ್ನು ಎತ್ತರಕ್ಕೆ ನಿಲ್ಲುವಂತೆ ಮಾಡಿದೆ. ಅದು ದಾಸೋಹ ಪ್ರಣೀತ ಸೇವಾಗುಣವಾಗಿದೆ. ಕರ್ನಾಟಕದ ಉದ್ದಗಲಕ್ಕೆ ಇರುವ ವಿರಕ್ತಮಠದ ಸ್ವಾಮಿಗಳು ಸಾಮಾಜಿಕ ಸೇವಾಗುಣ, ದಾಸೋಹಕ್ಕೆ ಅನುಗುಣವಾಗಿ ನಾಡಿನ ಸಮಸ್ತರ ಮನೋವಲಯವನ್ನು ತಿದ್ದುವ ನೇರ್ಪುಗೊಳಿಸುವ ಶಿವಾನುಭವ ಪ್ರವಚನಗಳನ್ನು ಏರ್ಪಡಿಸಿದ್ದು ಮಹತ್ವದ ವಿಷಯವಾಗಿದೆ. ಅದರಿಂದ ಶರಣ ತತ್ವನಿರೂಪಣೆಯು ನಿರಂತರವಾಗಿ ನೆಲೆಗೊಂಡಿತು. ಭಕ್ತಿಯು ಸ್ವಯಂ ಆತ್ಮ ವಿಷಯವಾಗಿದ್ದು, ಜ್ಞಾನಾನುಸಂಧಾನವು ಸಾಮಾಜಿಕ ಬೆಳವಣಿಗೆಗೆ ಸಂಬಂಧಿಸಿದೆ. ಅಲ್ಲದೆ ವೈರಾಗ್ಯವು ನಿಸ್ವಾರ್ಥದ ಬದುಕನ್ನು ಮುಖ್ಯವಾಗಿ ಸ್ವಾಮಿಗಳ ನಿರಾಲಂಬ ಗುಣವನ್ನು ವ್ಯಕ್ತಪಡಿಸುವದು. ಇದನ್ನು ಗುರು-ಲಿಂಗ-ಜಂಗಮದೊಂದಿಗೆ ಹೊಂದಿಸಿ ಹೇಳಲಾಗುವದು. ಗುರು ವೈರಾಗ್ಯಕ್ಕೂ, ಲಿಂಗ ಭಕ್ತಿಗೂ, ಜಂಗಮ ಜ್ಞಾನಕ್ಕೂ ಹೊಂದಿಸಿ ಆ ಮೂಲಕ ತತ್ವಗಳನ್ನು ಅಭಿವ್ಯಕ್ತಿಸುವದು ಇಲ್ಲಿ ಮುಖ್ಯವಾಗಿದೆ.

ಪುರಾಣ ಪ್ರಸಿದ್ಧ ದಕ್ಷಬ್ರಹ್ಮನ ಯಜ್ಞ ಹಾಳುಮಾಡಿದ ವೀರಭದ್ರನ ವಿಚಾರವು ಅನೇಕ ಸಂಸ್ಕೃತ ಕಾವ್ಯಗಳಲ್ಲಿ ವ್ಯಕ್ತವಾಗಿದೆ. ಆಗಮ ಶೈವಪುರಾಣಗಳಲ್ಲಿ ಕಂಡುಬರುವ ಈ ವೀರಭದ್ರನ ವಿಚಾರವು ಆಂಧ್ರ ಮತ್ತು ಕರ್ನಾಟಕದಲ್ಲಿ ಆರಾಧನಾ ಪರಂಪರೆ ಆಗಿದೆ. ವೀರಭದ್ರನ ಬಗೆಗೆ ಇರುವ ಕಾವ್ಯವನ್ನು ಹಿಂದೆ ರಾಘವಾಂಕನು (ಕ್ರಿ.ಶ. ೧೨೫೦) ಬರೆದಿದ್ದು, ಇದು ಆರ್ಯ-ದ್ರಾವಿಡರ ಸಂಘರ್ಷದ ವಸ್ತುವನ್ನು ಹೊಂದಿದೆ.

ಭಕ್ತರ ಚರಿತ್ರೆಗಳಲ್ಲಿ ಅಕ್ಕಮಹಾದೇವಿಯ ಚರಿತ್ರೆ ಮುಖ್ಯವಾಗಿದೆ. ತಮ್ಮ ಪುರಾಣ ಕಾವ್ಯಗಳಲ್ಲಿ ಅಕ್ಕಮಹಾದೇವಿ ಕಾವ್ಯವೇ ಪ್ರಿಯವಾದುದೆಂದು ಪಂಡಿತ ಪುಟ್ಟರಾಜರು ಹೇಳಿದ್ದಾರೆ. (ಜ್ಞಾನ ದೇಗುಲ ಸಂ.ವಿ.ಬಿ.ಹಿರೇಮಠ ಪುಟ : ೧೩೦) ಇದರಲ್ಲಿ ಕಾವ್ಯಧರ್ಮಕ್ಕೆ ಇಂಬು ದೊರೆತಿದೆ. ಅಲ್ಲಿ ಕಾಮ, ಪ್ರೇಮ, ಭಕ್ತಿಗಳ ಚರ್ಚೆಗೆ ಪ್ರಾಧಾನ್ಯತೆ ದೊರೆಕಿದೆ. ಗುಡ್ಡಾಪೂರ ದಾನಮ್ಮ ದೇವಿಯ ಚರಿತ್ರೆಯಲ್ಲಿ ಮುಖ್ಯವಾದದ್ದು ಭಕ್ತಿ ಮತ್ತು ಸೇವೆಯಾಗಿದೆ. ಎಲ್ಲೋ ಒಂದೊಂದು ಹಂತದಲ್ಲಿ ಪವಾಡಗಳ ನಿರೂಪಣೆ ಇದ್ದರೂ ದಾನಮ್ಮಳ ಸೇವೆಗೆ ಮಹತ್ವ ಸಂದಿದೆ. ಅದೇ ರೀತಿ ಶರಣ ಪರಂಪರೆಯ ನಾಲತ್ತವಾಡ ವೀರೇಶ ಶರಣರ, ಅಂಕಲಗಿ ಅಡವಿಸಿದ್ದೇಶ್ವರ ಚರಿತ್ರೆಗಳು ಶರಣ ಚರಿತ್ರಾಮೃತವೆನಿಸಿವೆ. ಕಲಬುರ್ಗಿ ಶರಣ ಬಸವೇಶ್ವರರು ದಾಸೋಹದ ಪ್ರಸ್ಥಾನವನ್ನು ನಿರ್ಮಿಸಿದ್ದರು. ಎಡೆಯೂರ ಸಿದ್ಧಲಿಂಗೇಶ್ವರರು ಶರಣ ತತ್ವದ ಕಳಸದಂತೆ; ವೀರಶೈವ ಧರ್ಮ ಪ್ರಸಾರದಲ್ಲಿ ಹಿರಿದಾದ ಹೆಸರನ್ನು ಪಡೆದಿರುವರು. ಅವರ ಬಗೆಗೆ ಕಾವ್ಯಗಳು ಭವ್ಯತೆಯ ಚರಿತ್ರೆಯನ್ನು ನಿರ್ಮಿಸಿವೆ.

ಪುರಾಣಕಾವ್ಯಗಳು ಜನರ ನಂಬಿಕೆಗಳನ್ನು ವ್ಯವಸ್ಥಿತಗೊಳಿಸುವಲ್ಲಿ ಪ್ರಮುಖವಾದ ಪಾತ್ರವಹಿಸುತ್ತವೆ. ನಂಬಿಕೆ ಮತ್ತು ವ್ಯವಸ್ಥೆ ಇವೆರಡನ್ನು ಪುರಾಣ ಕಾವ್ಯಗಳು ಒಳಗೊಂಡಿರುತ್ತವೆ. ನಿಷ್ಠೆಯಿಂದ ಪುರಾಣ ದೇವರನ್ನು ನೆನೆದರೆ ಆ ದೇವರು ಸಹಾಯಕ್ಕೆ ಬರುತ್ತಾನೆಂಬುದು ಜನರ ನಂಬಿಕೆ. ಹೀಗಾಗಿ ಜನರ ಮನಸ್ಸಿನ ಮೇಲೆ ಪರಿಣಾಮವನ್ನು ಬೀರಲು ಕೆಲವು ತತ್ವಗಳು, ಬೋಧನೆಗಳು ರೂಢಿಯಾಗಿ ಪುರಾಣವನ್ನು ಅವಲಂಬಿಸಲು ಕಾರಣಗಳಾಗಿವೆ. ಪುರಾಣ ಕಾವ್ಯಗಳ ಮುಖ್ಯ ಉದ್ದೇಶ ಹೊಸ ನಂಬಿಕೆಯನ್ನು ಸೃಷ್ಟಿಸುವದಲ್ಲ. ಅದರ ಬದಲಾಗಿ ಈ ಹಿಂದಿರುವ ಸಾಂಪ್ರದಾಯಿಕ ನಂಬಿಕೆಯ ನಡುವಳಿಕೆಯನ್ನು, ನೈತಿಕ ಮೌಲ್ಯಗಳನ್ನೂ ಬೆಂಬಲಿಸಿ, ವ್ಯವಸ್ಥಿತಗೊಳಿಸುವ ಜೊತೆಗೆ ಆ ಮೂಲಕ ಅವುಗಳಿಗೆ ತನ್ನದೇ ಆದ ಮಹತ್ವದ ಬೆಲೆಯನ್ನು ತಂದುಕೊಡುವುದು. ಪುರಾಣ ಕಾವ್ಯಗಳು ಕಳೆದುಹೋದ ಮೌಲ್ಯವನ್ನು ಪುನಃ ವ್ಯವಸ್ಥಿತವಾಗಿ ಕಟ್ಟಿಕೊಡುವ ಮೂಲಕ ಜನರಲ್ಲಿ ಅದು ರುಚಿಸುವಂತೆ ಮಾಡುತ್ತವೆ. ಜನರ ನಡುವಳಿಕೆಯ ರೀತಿ–ನೀತಿಗಳಿಗೆ ಒಂದು ಮಾರ್ಗವನ್ನು ಸೂಚಿಸುತ್ತದೆ. ಈ ಮುಂತಾದ ಅಂಶಗಳಿಂದಲೇ ಜನರಲ್ಲಿ ನೀತಿಪ್ರಜ್ಞೆ, ನಂಬಿಕೆ, ಆಚರಣೆ, ದೈವ, ಮತ ಮುಂತಾದವುಗಳು ಪುರಾಣ ಕಾವ್ಯದಲ್ಲಿ ಪ್ರಮುಖವಾದ ಅಂಶಗಳಾಗಿವೆ. ಈ ರೀತಿಯಲ್ಲಿ ಪುರಾಣ ಕಾವ್ಯಗಳಲ್ಲಿ ಕವಿ ತಾನು ತನ್ನ ಪುರಾಣ ಕಾವ್ಯಕ್ಕೆ ಆಯ್ಕೆ ಮಾಡಿಕೊಂಡ ವಸ್ತು ವಿನ್ಯಾಸಕ್ಕೆ ಹೆಚ್ಚಿನ ಮಹತ್ವವನ್ನು ನೀಡಿರುತ್ತಾನೆ. ಕವಿಯು ತನ್ನ ಕೃತಿಯಲ್ಲಿ ಸಾಮಾನ್ಯವಾಗಿ ಸಮಾಜದಲ್ಲಿ ಆಗಿಹೋದ ಸಮಾಜ ಸುಧಾರಕನನ್ನು, ಸೇವಕನನ್ನು, ಬೋಧಕನನ್ನು, ಶರಣ, ಧರ್ಮದ ಮುಖ್ಯವಸ್ತುವಾಗಿ ಕವಿ ಕಾವ್ಯದಲ್ಲಿ ಬಿಂಬಿಸಿರುತ್ತಾನೆ. ಆ ರೀತಿಯಲ್ಲಿ ಇಲ್ಲಿಯ ಅನೇಕ ಕವಿಗಳು ತಮ್ಮ ಪುರಾಣ ಕಾವ್ಯಗಳಲ್ಲಿ ಇಂತಹ ಶರಣರನ್ನು, ದೈವವನ್ನು ವಸ್ತುವಾಗಿ ಇಟ್ಟುಕೊಂಡು ಪುರಾಣ ರಚಿಸಿದ್ದನ್ನು ಮುಂದಿನಂತೆ ನೋಡಲಾಗಿದೆ.

ಪುರಾಣ ಕಾವ್ಯಗಳು ತಮ್ಮದೇ ಆಗಿರುವಂತಹ ವಸ್ತುವನ್ನು ಉದ್ದೇಶವಾಗಿಟ್ಟುಕೊಂಡು ಕವಿ ಕಾವ್ಯಗಳನ್ನು ರಚಿಸಿದ್ದಾನೆ. ಪುರಾಣ ಕಾವ್ಯಗಳ ವಸ್ತುವು ಇಂತಹದ್ದೆ ಇರಬೇಕೆಂದೇನು ನಿಯಮವಿಲ್ಲ. ಕವಿಗಳ ವೈಯಕ್ತಿಕ ಹಿನ್ನೆಲೆಯಿರಬಹುದು ಅಥವಾ ಸಾಮಾಜಿಕ ಜವಾಬ್ದಾರಿ ಇರಬಹುದು. ಈ ಎಲ್ಲ ಒತ್ತಡಗಳಿಂದ ಕವಿ ತನ್ನದೇ ಆದ ರೀತಿಯಲ್ಲಿ ಪುರಾಣ ಕಾವ್ಯಗಳ ವಸ್ತುವನ್ನು ಆಯ್ಕೆ ಮಾಡಿಕೊಂಡು ರಚನೆಗೆ ತೊಡಗುತ್ತಾರೆ.

ವೀರಶೈವ ಧರ್ಮಾಧಾರಿತ ಬಹುತೇಕ ಪುರಾಣಗಳಲ್ಲಿ ಮುಖ್ಯವಾಗಿ ಕಾವ್ಯದ ನಾಯಕ ಪುರಾಣ ಪುರುಷನಾಗಿರುತ್ತಾನೆ ಅಥವಾ ಶಿವಶರಣರ ಲೀಲೆಗಳನ್ನಿಟ್ಟುಕೊಂಡು ಪುರಾಣವನ್ನು ರಚಿಸುತ್ತಾರೆ. ಕಾವ್ಯಕ್ಕೆ ಶಿವನ ಲೀಲೆಗಳೇ ವಸ್ತುವಾಗಬೇಕೆಂದು ಸೋಮನಾಥ ಕವಿ ಚಾಮರಸರು, ಬೊಮ್ಮರಸ, ಮಲ್ಲಣಾರ್ಯ, ಭೀಮಕವಿ ಮುಂತಾದವರು ಇದೇ ಉದ್ದೇಶವಿಟ್ಟುಕೊಂಡು ಕಾವ್ಯ ರಚಿಸಿದರು.

ಪುರಾಣ ಕಾವ್ಯಗಳು ನಿರ್ಧಿಷ್ಟವಾದ ಚರಿತ್ರೆ, ಲೀಲೆ, ಪವಾಡ ಇತ್ಯಾದಿ ವಿಶಿಷ್ಟ ಲಕ್ಷಣಗಳನ್ನಿಟ್ಟುಕೊಂಡು ಪುರಾಣವನ್ನು ಅಧ್ಯಯನಕ್ಕೆ ಎತ್ತಿಕೊಳ್ಳುತ್ತಾರೆ. ಕೆಲವು ಸಲ ಜೀವನ ಚರಿತ್ರೆಗಳನ್ನು ಬರೆಯುವ ಸಾಧ್ಯತೆಯು ಇದೆ. ಪುರಾಣಗಳಲ್ಲಿ ಪುರಾತನರ ಚರಿತ್ರೆಗಳು, ಲಿಂಗಾಂಗ ಸಾಮರಸ್ಯ, ವಿಭೂತಿ, ಪ್ರಸಾದಾದಿ ಮಹಿಮೆಗಳೂ ತುಂಬಿರುತ್ತವೆ. ಇನ್ನು ಕೆಲ ವಸ್ತುಗಳು ಬ್ರಹ್ಮಾಂಡ ಸೃಷ್ಟಿ ವಿಷಯಗಳು ಧರ್ಮಾಧರ್ಮ ಸ್ವರೂಪಗಳು ಕೂಡಾ ಕಂಡು ಬರುತ್ತವೆ. ಪುರಾಣಗಳ ವಸ್ತುಗಳು ಕೆಲವು ಗ್ರಂಥಗಳಲ್ಲಿ ಇತಿಹಾಸದ ವಸ್ತುವಿಟ್ಟುಕೊಂಡು ಕಾವ್ಯ ರಚನೆಗೆ ತೊಡಗುತ್ತಾರೆ. ಪುರಾಣಗಳಲ್ಲಿ ಧರ್ಮ, ನೀತಿ, ವಿಚಾರಗಳು ಮುಂತಾದ ಚರ್ಚೆಗಳನ್ನಿಟ್ಟು ಪುರಾಣಗಳನ್ನು ಕವಿಗಳು ರಚಿಸಿದ್ದಾರೆ. ಮಾನವರ ಇಹ ಪರ ಸಾಧನೆಗಳನ್ನು ಇದರ ಮೂಲಕ ಸಮಾಜದ ಒಳಿತಿಗಾಗಿ ಪುರಾಣಗಳ ವಸ್ತುವನ್ನು ನಿರ್ಧರಿಸಲಾಗುತ್ತದೆ.

ಶಿವಭಕ್ತರ ಚರಿತ್ರೆಯನ್ನು ನಿರೂಪಿಸುವಲ್ಲಿ ತೆಲುಗು ಪ್ರದೇಶದ ಹೇಮರಡ್ಡಿ ಮಲ್ಲಮ್ಮನ ಚರಿತ್ರೆಯು ಸ್ತ್ರೀ ಸಹನೆಯ ಉನ್ನತ ಮೌಲ್ಯಗಳನ್ನು ಪ್ರತಿಪಾದಿಸುವದು. ತಾಳ್ಮೆ ಸಹನೆಗಳನ್ನು ಹೊಂದಿದ ಮಲ್ಲಮ್ಮ ಒಬ್ಬ ಆದರ್ಶ ಮಹಿಳೆಯಾಗಿ ಗೋಚರಿಸುವಳು. ಆಕೆಯು ಜನಪದ ಸಾಹಿತ್ಯದಲ್ಲಿ ಆಕರ್ಷಕವಾದ ಚಿತ್ರಣವಿರುವಂತೆ ಇಲ್ಲಿದೆ.

ವೀರಶೈವ ಪರಂಪರೆಯ ಗುರುಪೀಠದ ಸ್ವಾಮಿಗಳನ್ನು ಕುರಿತು ಕೆಲವು ಕಾವ್ಯಗಳು ಅವರ ಚರಿತ್ರೆಯನ್ನು ಒಳಗೊಂಡಿವೆ. ಉಳಿದಂತೆ ಹಲವಾರು ವಿರಕ್ತಮಠದ ಸ್ವಾಮಿಗಳನ್ನು ಕುರಿತಂತಿವೆ. ಈ ವಿರಕ್ತಮಠ ಪರಂಪರೆಯಲ್ಲಿ ಕುಮಾರ, ಚಿಲಾಳ, ಮುರಘ, ಸಂಪಾದನೆ ಈ ಸಂಪ್ರದಾಯಗಳಿವೆ. ಕ್ರಿ.ಶ. ೧೫೦೦ ರಿಂದೀಚೆ ಈ ನಾಲ್ಕು ಸಂಪ್ರದಾಯಗಳು ಬೆಳೆದು ಬಂದಂತೆ ನಾಡಿನ ನಾಲ್ದೆಸೆಗೆ ಮಠಗಳನ್ನು ಬೆಳೆಸಿದರು. ಪಂ. ಪುಟ್ಟರಾಜರು ಹಾವೇರಿಯ

ಹುಕ್ಕೇರಿಮಠದ ಶಿವಲಿಂಗೇಶ್ವರ ಪುರಾಣ, ಹುಬ್ಬಳ್ಳಿಯ ಜಗದ್ಗುರು ಗುರುಸಿದ್ದೇಶ್ವರ ಪುರಾಣ, ಕಂಚಕಲ್ಲ ಬಿದರಿಯ ಶ್ರೀ ಯೋಗಿರಾಜ ಪುರಾಣ, ಶ್ರೀ ಗಂಜಿಗಟ್ಟಿ ಚರಮೂರ್ತೀಶ್ವರ ಪುರಾಣ, ಮುಂಡರಗಿ ಅನ್ನದಾನೀಶ್ವರ ಪುರಾಣ, ಚಿಕೇನಕೊಪ್ಪದ ಶ್ರೀ ಚನ್ನವೀರ ಶರಣರ ಪುರಾಣ, ಗಂಗಾವತಿಯ ಚನ್ನಬಸವೇಶ್ವರ ಪುರಾಣ, ಕಲಿಕೇರಿ ಗುರುಮಹಿಮಾ ಪುರಾಣ, ಶಿರೂರ ಸಿದ್ಧಲಿಂಗೇಶ್ವರ ಪುರಾಣ, ಶಿವಯೋಗಿ ಬಕ್ಕೇಶ್ವರರ ಪುರಾಣ ಇವೆಲ್ಲವು ವಿರಕ್ತ ತತ್ವ ತಳಹದಿಯ ಶರಣ ತತ್ವ ನಿರೂಪಣೆಗಾಗಿ ಹುಟ್ಟಿಕೊಂಡಿವೆ. ಇದರಲ್ಲಿ ಕುಮಾರ ಮೊದಲಾದ ಸಮಯ ಸಂಪ್ರದಾಯವಲ್ಲದ ಗೂಳ್ಯದ ಗಾದಿಲಿಂಗೇಶ್ವರ ಪುರಾಣ ಮೊದಲಾದವು ಇವೆ.

ಪಂ. ಪುಟ್ಟರಾಜರ ಕಾವ್ಯವಸ್ತುವೆಂದರೆ ಅದು ತತ್ವ ವಿವೇಚನೆಯಾಗಿದೆ. ಚರಿತ್ರೆಯ ನಾಯಕರು ತತ್ವಗಳಿಂದಲೆ ಬದುಕನ್ನು ರೂಪಿಸಿಕೊಂಡು ಇತರರ ಬದುಕನ್ನು ನಿರೂಪಿಸಿದರು. ಅವರ ಬದುಕಿನಲ್ಲಿ ತತ್ವಗಳು ಒಳಹೊಗುವದಲ್ಲದೆ ಅವರ ಜೀವನ ಉದಾತ್ತಗೊಳ್ಳುವದು ಅದೆ ತತ್ವಗಳಿಂದ. ಲೀಲೆಗಳ ಅನಿವಾರ್ಯತೆಯೊಂದು ವ್ಯರ್ಥ ಸಾಹಸ ಎನಿಸುವದು. ಆದರೂ ಸಾಮಾನ್ಯ ಜನರು ನಂಬಿದ ಮಾರ್ಗ ಲೀಲಾವಿಲಾಸವೇ ಆಗಿದೆ. ಅದನ್ನು ಕವಿ ಒಪ್ಪುವುದೆ ಆಗಿದೆ. ಪುಟ್ಟರಾಜರು ಶರಣ ತತ್ವಗಳನ್ನು ಒಡವೆರೆದ ಮಹಾಂತರ ಚರಿತ್ರೆಗಳನ್ನು ಶರಣ ತಾತ್ವಿಕ ವಿವೇಚನೆಯ ರೂಪದಲ್ಲಿ ಹೇಳಿದ್ದಾರೆ. ಅದೇ ರೀತಿ ಗುರು ಪರಂಪರೆಯ ಒಂದೆರಡು ಕಾವ್ಯಗಳನ್ನು ಹೇಳಿದ್ದಾರೆ. ಶೈವಭಕ್ತಿ, ಆಗಮಿಕ ಶೈವಕಥಾನಕಗಳು ಇಲ್ಲಿವೆ. ಇವರ ಕಾವ್ಯದ ಮೂಲ ವಸ್ತು ಭಕ್ತಿಯಾಗಿದೆ. ಇವೆಲ್ಲ ಪುರಾಣಕಾವ್ಯಗಳು ಪವಾಡಗಳ ಆವರಣದಲ್ಲಿ ಬೆಳೆಯುತ್ತ ಹೋಗಿವೆ. ಬರುಬರುತ್ತ ತತ್ವಗಳಿಗಿಂತ ಪವಾಡ ನಿರೂಪಣೆಗೆ ಆದ್ಯತೆ ಬಂದಿತು.

"ಕುರಿಹಿಕ್ಕಿ ಲಿಂಗಮಾದುದು ಭಕ್ತಿ ಬಲದಿಂದೆ
ನೆರೆಪಾವು ಲಿಂಗಮಾದುದು ಭಕ್ತಿ ಬಲದಿಂದ"

(ಶ್ರೀ ಅಂಕಲಗಿ ಅಡವೀಶ್ವರ ಪುರಾಣವು ಪುಟ ೮೩- ಪದ್ಯ ೨೩)

ಈ ರೀತಿಯ ನಂಬಿಕೆಯು ಪುರಾಣಕಾವ್ಯಗಳಲ್ಲಿ ಯಥೇಚ್ಛವಾಗಿರುವದು. ತತ್ವಗಳ ನಿರೂಪಣೆಯ ಜತೆ-ಜತೆಯಲ್ಲಿ ಲೀಲಾ ನಿರೂಪಣೆಯಿಂದ ಭಕ್ತಿಯ ನಿರೂಪಣೆಗೆ ಭಂಗವೇ ಉಂಟಾಗುವದು. ಅಕ್ಕ ಮಹಾದೇವಿಯ ಪುರಾಣದಲ್ಲಿ ಮೂಡಿದ ಕಾವ್ಯಪ್ರಜ್ಞೆ ಉಳಿದವುಗಳಲ್ಲಿ ಮೂಡದೆ ಹೋಗಿದೆ.

ಕವಿ ಬ್ಯಾಟಿ ರಾಮಣ್ಣನವರ ಕಾವ್ಯಗಳ ವಸ್ತು ವೈವಿಧ್ಯಮಯವಾಗಿದೆ. ಅವುಗಳನ್ನು ೧) ಶರಣೆಯರ ಚಾರಿತ್ರವಸ್ತು ೨) ದೇವ ದೇವಿ ಲೀಲಾವಸ್ತು ೩) ಸ್ವಾಮಿಗಳ ಚರಿತ್ರೆಯ ವಸ್ತು ೪) ಲೋಕನಾಯಕರ ಚಾರಿತ್ರಿಕ ವಸ್ತು ಎಂದು ೪ ಭಾಗವಾಗಿ ಏಳು ಕಾವ್ಯಗಳ ವಸ್ತುವನ್ನು ವಿಶ್ಲೇಷಿಸಿ ವಿಂಗಡಿಸಿಕೊಳ್ಳಬಹುದು.

ಶ್ರೀ ಬ್ಯಾಟ ರಾಮಣ್ಣನವರು ನೀಲಕಂಠೇಶ್ವರ ಪುರಾಣದಲ್ಲಿ ಶಿವನ ಲೀಲೆಗಳನ್ನು, ಬಾದಾಮಿ ಬನಶಂಕರಿ ಪುರಾಣದಲ್ಲಿ ಶಕ್ತಿದೇವಿಯ ಲೀಲೆಗಳನ್ನು ವರ್ಣಿಸುತ್ತಾರೆ. ಈ ವಸ್ತುಗಳಿಗೆ ಮೂಲವಾಗಿ ಶೈವ ಪುರಾಣ ಕಥೆಗಳು, ಶಾಕ್ತ ಆಗಮಗಳು, ಶಿವಾಗಮಗಳಲ್ಲಿ ಜನಜನಿತವಾದ ಐತಿಹ್ಯಗಳನ್ನು ಅನುಸರಿಸಿದ್ದಾರೆ. ನೀಲಕಂಠೇಶ್ವರ ಪುರಾಣದ ಪೂರ್ವಾರ್ಧದಲ್ಲಿ ಶಿವಲೀಲೆಗಳ ವರ್ಣನೆ ಇದ್ದರೆ, ಉತ್ತರಾರ್ಧದ ಕೊನೆಭಾಗದಲ್ಲಿ ಹುಬ್ಬಳ್ಳಿಯ ನೀಲಕಂಠ ಮಠದ ಸ್ವಾಮಿಗಳ ಚರಿತ್ರೆ ಇದೆ. ಅದೇ ರೀತಿ ಇಟಗಿ ಭೀಮಾಂಬಿಕಾ ಪುರಾಣದಲ್ಲಿ ಬಾದಾಮಿ ಬನಶಂಕರಿಯ ಚರಿತ್ರೆ ಇದೆ. ಬಾದಾಮಿ ಬನಶಂಕರಿಯ ಲೀಲೆಗಳ ವರ್ಣನೆ ಇದೆ. ಇವೆಲ್ಲವುಗಳ ಮಧ್ಯೆ ಭಕ್ತಿಭಾವದ ತೊರೆಗಳನ್ನು ಹರಿಸಲಾಗಿದೆ. ಇವೆಲ್ಲವುಗಳ ಮೂಲಸ್ಥಾಯಿಯೆ ಭಕ್ತಿ. ದೇವದೇವತೆಗಳ ವಿಷಯಕ್ಕಿಂತ ಭಕ್ತರ ಚರಿತ್ರೆಗಳಿಗೆ ಶಕ್ತಿಯುತ ನಿರೂಪಣೆ ಇಲ್ಲಿದೆ. ಉಳಿದಂತೆ ಶ್ರೀಶೈಲ ಬಾದಾಮಿ ಮೊದಲಾದವುಗಳ ಪ್ರಾಸಂಗಿಕ ವರ್ಣನೆಗಳು ಇವೆ.

ಶರಣರ ಜೀವನ ನಿರೂಪಿಸುವಲ್ಲಿ ಮಧ್ಯಕಾಲೀನ ಶರಣೆ ಗುಡ್ಡಾಪೂರದ ದಾನಮ್ಮನ ಮತ್ತು ಆಧುನಿಕ ಕಾಲದ ಇಟಗಿ ಭೀಮಾಂಬಿಕೆಯರ ಚರಿತ್ರೆಗಳನ್ನು ಕಾವ್ಯಗಳಲ್ಲಿ ವಿವರಿಸಲಾಗಿದೆ. ದಾನಮ್ಮ ದೇವಿಯ ಚರಿತ್ರೆಗೆ ಐತಿಹ್ಯಗಳೇ ಬೆನ್ನೆಲುಬು ಆಗಿದ್ದು, ೧೨ನೆಯ ಶತಮಾನದ ಶರಣೆಯ ಚರಿತ್ರೆ ಆಧುನಿಕ ಪೂರ್ವಕಾಲದವರೆಗೆ ಹರಿದು ಬಂದಿದೆ. ಇಲ್ಲೆಲ್ಲ ಪವಾಡಗಳ ವಿವರಣೆ ದಾನಮ್ಮನ ಭಕ್ತಿ–ಶರಣತ್ವಗಳನ್ನು ಮರೆಮಾಚಿವೆ. ಆಧುನಿಕ ಶರಣೆ ಇಟಗಿ ಭೀಮಾಂಬಿಕೆಯ ಕಾಲದ ದೃಷ್ಟಿಯಿಂದ ಯಾವ ಆಭಾಸವನ್ನುಂಟು ಮಾಡದಿದ್ದರೂ ಪವಾಡಗಳ ಭಾರದಿಂದ ನಲುಗಿದೆ.

ಸ್ವಾಮಿಗಳ ಚರಿತ್ರೆಯಲ್ಲಿ ಗೌರಿಶಂಕರ ಸ್ವಾಮಿಗಳ ಚರಿತ್ರೆ ಮತ್ತು ಶಿವಾನಂದರ ಚರಿತ್ರೆಗಳು ಮಠದ ಸ್ವಾಮಿಜಿಗಳ ವ್ಯಕ್ತಿತ್ವದ ಸಾಧನೆಗಳನ್ನೇ ತಿಳಿಸುವ ವಸ್ತುಗಳನ್ನು ಒಳಗೊಂಡಿವೆ. ಗೌರಿಶಂಕರರ ಜೀವನ ಸಧನೆಗಳು ಪವಾಡಗಳ ಅತಿ ಭಾರವಿಲ್ಲದೆ ಉತ್ತಮ ರೀತಿಯಲ್ಲಿ ಮೂಡಿಬಂದಿವೆ. ಅಲ್ಲಿ ಸ್ವಾಮಿಗಳ ಸಾಮಾಜಿಕ ಸೇವೆಯು ತುಂಬ ಮಹತ್ವದ ರೀತಿಯಲ್ಲಿ ಕಾವ್ಯದಲ್ಲಿ ಒಡಮೂಡಿದೆ ಕವಿ ಹೇಳುವಂತೆ–

'ತಾನು ಉರಿದು ಜ್ಯೋತಿ ಮನೆಗಳ ಬೆಳಗುವಂದದಿ' ಸ್ವಾಮಿಗಳ ಬದುಕು ಇಲ್ಲಿ ಮೂಡಿನಿಂತಿದೆ. ಒಂದು ಅರ್ಥದಲ್ಲಿ ಗೌರಿಶಂಕರ, ಶಿವಾನಂದರ ಚರಿತ್ರೆಗಳಲ್ಲಿ ಅತಿಶಯೋಕ್ತಿ ಕಾಣದೆ ಇದ್ದುದು ತುಂಬಾ ಹೃದ್ಯವಾದ ವಸ್ತು ವಿವೇಚನೆ ಇಲ್ಲಿದೆ.

ವಸ್ತುವಿನ ದೃಷ್ಟಿಯಿಂದ, ಹೊಸತನದ ನಿರೂಪಣೆಯಿಂದ, ನವೀನ ನೂತನವಾದ ವಿಧಾನವು ಶ್ರೀ ಅಂಬೇಡ್ಕರ ಪುರಾಣ ಕಾವ್ಯದಲ್ಲಿದೆ. ಸತ್ಯ ಶುದ್ಧತೆ, ಜಾಣ್ಮೆ ಕಠೋರ

ಹೋರಾಟಗಳಿಂದ ಅಂಬೇಡ್ಕರ ಅವರು ಜೀವನವನ್ನು ಬದುಕಿದ ರೀತಿಯೇ ಮಹೋನ್ನತವಾದುದು. ಹಿಂದೂ ಧರ್ಮದ ವಿಕಾರ ವ್ಯವಸ್ಥೆಗಳ ಮಧ್ಯೆ ಬೆಂಕಿಯಲ್ಲಿ ಅರಳಿದ ಹೂವಂತೆ ಅವರ ಜೀವನ ಪುಟವಿಕ್ಕಿದ ಚಿನ್ನವಾಯಿತು. ಈ ಎಲ್ಲ ವಿವರಗಳು ಅಂಬೇಡ್ಕರ ಜೀವನವನ್ನು ಉದಾತ್ತದ ನೆಲೆಗೆ ತಂದವು. ಬ್ಯಾಟಿ ರಾಮಣ್ಣನ ಕಾವ್ಯಗಳಲ್ಲಿ ಏಕೆ ಗದಗ ಜಿಲ್ಲೆಯ ಪುರಾಣ ಕಾವ್ಯಗಳಲ್ಲಿ ಇದಕ್ಕೊಂದು ಮಹತ್ವದ ಸ್ಥಾನ ಸಿಕ್ಕಿದ್ದು ವಸ್ತು ಮಹತಿಯಿಂದ ಕರವೀರಪ್ಪ ಅಂಗಡಿ ಅವರ ಪುರಾಣ ಕಾವ್ಯಗಳ ವಸ್ತುವಿನ್ಯಾಸವನ್ನು ಗಮನಿಸಿ ಅವರ ಕಾವ್ಯಗಳನ್ನು ವಿವೇಚಿಸಬಹುದು.

ಅವರ 'ಉರಗಾದ್ರಿ ಗವಿಮಠ ಶ್ರೀ ಗುರು ಕರಿಬಸವಯೋಗಿ ಲೀಲೆ' ಎಂಬ ಪುರಾಣವು 'ಕರಿಬಸವಯೋಗಿ'ಯ ಕೃಪೆಗೆ ಪಾತ್ರರಾದ 'ಶರಣೆಶಾಂತಮ್ಮ' ಅವರ ಜೀವನ ಪಥವನ್ನು ವಸ್ತುವಾಗಿಟ್ಟುಕೊಂಡು ರಚಿತವಾದ ಕೃತಿ. ಇದರಲ್ಲಿ ಶಾಂತಮ್ಮನ ಭಕ್ತಿಯ ವಿಧ, ಆಧ್ಯಾತ್ಮದ ಸಿದ್ಧಿ ಸಾಧನವನ್ನು ತೋರಿಸುವುದರ ಜೊತೆಗೆ ಅವರ ಲೀಲೆಗಳನ್ನು ಪ್ರಮುಖವಾಗಿ ಬಿಂಬಿಸುವ ಆಶಯವನ್ನು ಹೊತ್ತುಕೊಂಡು ರಚಿತವಾದ ಪುರಾಣಕಾವ್ಯವಾಗಿದೆ. ಜೊತೆಗೆ ಮಹಾಸತಿಯರಾದ ಗುಡ್ಡಾಪೂರದ ದಾನಮ್ಮ, ಹೇಮರಡ್ಡಿ ಮಲ್ಲಮ್ಮರಂಥ ಉದಾತ್ತಕೇರಿಸುವ ವಸ್ತು ವಿಷಯವನ್ನು ಈ ಕೃತಿ ಹೊಂದಿದೆ.

'ಕಾಯಕಯೋಗಿ ಶ್ರೀ ರುದ್ರಮುನಿ ಸ್ವಾಮಿ ಶಿವಯೋಗೀಶ ಕಾವ್ಯಂ' ಕೃತಿಯು ವೀರಶೈವ ಧರ್ಮದ ಹಿರಿಮೆ ಕಡಿಮೆಯಾಗಲು ಅದರ ಜಾಗೃತಿಗಾಗಿ ಅವತರಿಸಿದ ಹಾನಗಲ್ಲದ ಶ್ರೀ ಕುಮಾರಯೋಗಿಯ ಅನುಗ್ರಹಕ್ಕೆ ಪಾತ್ರರಾದ ಶ್ರೀ ರುದ್ರಮುನಿ ಶಿವಯೋಗೀಶ್ವರರ ಧಾರ್ಮಿಕ ನೋಟವನ್ನು ವಿಸ್ತರಿಸುವ ದೃಷ್ಟಿಕೋನವನ್ನು ಇಟ್ಟುಕೊಂಡ ವಸ್ತುವಿನ್ಯಾಸವನ್ನು ಕಾವ್ಯದಲ್ಲಿ ಪ್ರಮುಖವಾಗಿ ಬಳಸಿಕೊಂಡಿದ್ದಾರೆ. ಕವಿ ಇವುಗಳ ಜೊತೆಗೆ ರುದ್ರಮುನಿ ಶಿವಯೋಗಿಯ ವ್ಯಕ್ತಿತ್ವದ ಅನಾವರಣವನ್ನು ಅಥವಾ ಮಹತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕಾವ್ಯಕ್ಕೆ ಈ ಕಥಾವಸ್ತುವಿನ ವಿನ್ಯಾಸವನ್ನು ಬಳಸಿಕೊಂಡಿದ್ದಾನೆ.

'ಮುರಗೋಡ ಮಹಾಂತ ಶಿವಯೋಗೀಶ ಚರಿತಾಮೃತಂ' ಪುರಾಣ ಕಾವ್ಯದಲ್ಲಿ ಕವಿ ಅಂಗಡಿಯವರು ಮುರಗೋಡದ ಮಹಾಂತ ಶಿವಯೋಗಿಗಳ ಚಾರಿತ್ರಿಕ ಘಟನೆಯನ್ನು ಹಾಗೂ ಬಾಲ್ಯದ ಲೀಲೆಗಳನ್ನು ಜೊತೆಗೆ ಅವರ ಮಠದ ಭವ್ಯಪರಂಪರೆಯನ್ನು ಬಿಂಬಿಸುವ ಮೂಲಕ ಭಕ್ತರಿಗೆ ಮಹಾಂತ ಶಿವಯೋಗಿಯವರು ನೀಡಿದ ಸಂದೇಶವನ್ನು ಒಳಗೊಂಡ ವಸ್ತುವನ್ನು ಪಡೆದುಕೊಂಡ ಕೃತಿಯಾಗಿದೆ. ಧರ್ಮ, ಸಂಸ್ಕೃತಿ, ಕಾಯಕ ಮುಂತಾದ ಬೋಧೆಯನ್ನು ಈ ಕೃತಿ ಒಳಗೊಂಡಿದೆ.

'ಮೃಡಗಿರಿ ಶ್ರೀ ಜಗದ್ಗುರು ಅನ್ನದಾನೀಶ್ವರ ಲೀಲಾಮೃತ' ಪುರಾಣಕಾವ್ಯವು ಶ್ರೀ ಅನ್ನದಾನೀಶ್ವರ ಸ್ವಾಮಿಗಳ ಸಮಾಜದ ಕಳಕಳಿಯನ್ನು ಮುಖ್ಯವಾಗಿಟ್ಟುಕೊಂಡು ಅವರು

ಕೈಗೊಂಡ ಜ್ಞಾನದ ಮಾರ್ಗವನ್ನು, ಅವರು ನಿಲ್ಲಿಸಿದ ಹಿಂಸೆಯ ಪ್ರಸಂಗಗಳನ್ನು ಒಂದು ಹಿರಿದಾದ ಚೌಕಟ್ಟಿನಲ್ಲಿ ವಸ್ತುವನ್ನಾಗಿ ಇಟ್ಟುಕೊಂಡು ಈ ಕಾವ್ಯಪುರಾಣ ರಚಿತವಾಗಿದೆ.

'ಶ್ರೀ ಸದಾಶಿವ ಲೀಲೆ ಪುರಾಣ ಕಾವ್ಯಂ' ಎಂಬ ಕೃತಿಯು ಶ್ರೀ ಸದಾಶಿವ ಯೋಗಿಗಳ ಕಾಯಕದ ಮಹತ್ವವನ್ನು ತಿಳಿಯಪಡಿಸುವ ಕೃತಿಯಾಗಿದೆ. ಈ ಕೃತಿಯ ಪ್ರಮುಖ ವಸ್ತು ಶ್ರೀಗಳು ತಮ್ಮ ಮಠಕ್ಕಾಗಿ ಸಲ್ಲಿಸಿದ ಸೇವೆಯನ್ನು ಸ್ಮರಿಸುವುದಾಗಿದೆ. ಆ ಮೂಲಕ ಅವರ ಲೋಕದ ಜನರಿಂದ ಸಂಗ್ರಹಿಸಿದ ಹಣವನ್ನು ಪರೋಪಕಾರಕ್ಕೆ ಬಳಸುವ ಪರಿಯನ್ನು ಈ ಪುರಾಣಕಾವ್ಯ ಒಳಗೊಂಡಿದೆ.

ಘತ್ತರಗಿಯ ಶ್ರೀ ಭಾಗ್ಯವಂತಿ ದೇವಿಯ ಪುರಾಣವನ್ನು ಪಂ. ಶ್ರೀ ಸೋಮಶೇಖರ ಶಾಸ್ತ್ರಿಗಳು ಪುರಾಣಿಕಮಠರವರು ವಿಶಿಷ್ಟವಾಗಿ ರಚನೆ ಮಾಡಿದ್ದಾರೆ. ಈ ಪುರಾಣದ ವಸ್ತು ವಿಜಯನಗರ ಅರಸರ ಗತ ವೈಭವವನ್ನು ನೆನಪಿಸಿ ಕೊಡುವ ಐತಿಹಾಸಿಕ ದಾಖಲೆಗಳ ಮೂಲಕ ಆ ಕ್ಷೇತ್ರದ ದೇವತೆಯಾದ ಭಾಗ್ಯವಂತಿಯ ಮಹಿಮೆಯನ್ನು ವಿವರಿಸಿದ್ದಾರೆ. ವಿಜಯನಗರದ ಆರಾಧ್ಯ ದೇವತೆಯಂತೆ ಕಾಣುವ ಭಾಗ್ಯವಂತಿ ಪ್ರಸ್ತುತ ಪುರಾಣದ ವಸ್ತುವಾಗಿದ್ದಾಳೆ. ಪ್ರೌಢರಾಯನ ಕಾಲದಲ್ಲಿ ನಡೆದ ಅನೇಕ ಘಟನೆಗಳು, ಶ್ರೀದೇವಿಯು ಅವನಿಗೆ ಒಲಿದ ರೀತಿ, ಮುಂತಾದ ವಿಷಯಗಳನ್ನು ದೇವಿಯ ಪವಾಡಗಳ ಮೂಲಕ ಇತಿಹಾಸವನ್ನು ವಿವರಿಸುವ ವಸ್ತು ವಿಷಯವು ಸುಂದರವಾಗಿ ಮೂಡಿಬಂದಿದೆ. ಇಲ್ಲಿ ಛಂದಸ್ಸು, ಲಯ, ಗತಿ ಯಾವುದನ್ನು ತೆಗೆದುಹಾಕದ ಹಾಗೆ ಇದರ ವಿನ್ಯಾಸವು ಮೂಡಿ ಬಂದಿದೆ.

ಪ್ರಭಣ್ಣ ಬೊಮ್ಮನಹಳ್ಳಿ ಕವಿ ರಚಿಸಿರುವ 'ಶ್ರೀ ಗುರು ಸಿದ್ಧಾರೂಢ ಪುರಾಣ' ಕಾವ್ಯವು ಹುಬ್ಬಳ್ಳಿಯ ನಗರದ ಆರಾಧ್ಯ ಗುರುವಾದ ಶ್ರೀ ಸಿದ್ಧಾರೂಢರು ಮಾಡಿದ ಕಾಯಕ, ಭಕ್ತರನ್ನು ಅನುಭಾವದ ದಾರಿಗೆ ತಂದ ರೀತಿ ಹಾಗೂ ಅವರು ಎದುರಿಸಿದ ಕಷ್ಟಗಳು ಇವೆಲ್ಲವುಗಳ ಜೊತೆಗೆ ಅವರ ಅಪಾರ ತಾಳ್ಮೆಯ ಗುಣವನ್ನು ಆ ಭಾಗದ ಪರಿಸದರದ ಹಿನ್ನೆಲೆಯಲ್ಲಿ ವಸ್ತುವಾಗಿ ಈ ಕಾವ್ಯಪುರಾಣ ಬಳಸಿಕೊಂಡಿದೆ.

ಶ್ರೀ ಗುರು ಶರೀಫರ ಪುರಾಣವನ್ನು ಪ್ರಭು ಬೊಮ್ಮನಹಳ್ಳಿ, ಲಕ್ಷ್ಮೇಶ್ವರ ಅವರು ರಚಿಸಿದ್ದಾರೆ. ಶಿಶುನಾಳ ಶರೀಫರು ಈ ನಾಡಿನ ಒಬ್ಬ ಆಧ್ಯಾತ್ಮವಾದಿ ಸಂತರಾಗಿದ್ದಾರೆ. ಇಂತಹ ಸಂತರ ಮಹಾಪುರಾಣವನ್ನು ಕವಿಗಳು ಸರಳವಾಗಿ ಭಾಮಿನಿ ಷಟ್ಪದಿಯಲ್ಲಿ ಹೆಣೆದಿದ್ದಾರೆ. ಶರೀಫರೇ ಈ ಪುರಾಣ ಕಾವ್ಯದ ಮುಖ್ಯ ವಸ್ತುವಾಗಿದ್ದಾರೆ. ಒಬ್ಬ ಮುಸ್ಲಿಂ ಸಮುದಾಯದಿಂದ ಬಂದ ಶರೀಫರಿಗೆ ಹಿಂದೂ ಧರ್ಮದ ಅನುಯಾಯಿಗಳಾದ ಗುರುಗೋವಿಂದ ಭಟ್ಟರು ಶರೀಫರಿಗೆ ಗುರುವಾಗಿದ್ದಾರೆ. ಈ ಪುರಾಣವು ಭಾವೈಕ್ಯತೆಯನ್ನು ಎತ್ತಿ ಹಿಡಿದ ಕೃತಿಯಾಗಿದೆ.

ಇದರಲ್ಲಿ ಕೂಡ ಅನೇಕ ಪವಾಡಗಳು ಪುರಾಣದ ಕೇಂದ್ರ ಬಿಂದುಗಳಾಗಿವೆ. ಈ ಕಾವ್ಯವು ಗುರು-ಶಿಷ್ಯರ ಸಂಬಂಧ ಮತ್ತು ಗ್ರಾಮೀಣ ಜನ ಜೀವನದಲ್ಲಿ ನಡೆಯುವ ಅನೇಕ ಘಟನೆಗಳನ್ನು ಮುಖ್ಯವಾಗಿಟ್ಟುಕೊಂಡು ರಚಿಸಲಾಗಿದೆ.

'ಶ್ರೀ ರುದ್ರಮುನಿ ಶಿವಾಚಾರ್ಯರ ಪುರಾಣ' ಕಾವ್ಯವು ಶ್ರೀ ರುದ್ರಮುನಿ ಶಿವಯೋಗಿಯ ಸದ್ಗುಣ ವ್ಯಕ್ತಿತ್ವ, ಶಿವಧರ್ಮ ತತ್ವಚಿಂತನೆ, ಭಕ್ತರ ಕಲ್ಯಾಣಕ್ಕಾಗಿ ಸ್ಪಂದಿಸುವ ಅವರ ಜೀವನ ಚಿತ್ರಣವೇ ಕಾವ್ಯದ ಪ್ರಮುಖ ವಸ್ತುವಾಗಿದೆ. ಅದರ ಮೂಲಕ ಅವರು ಮಾಡಿದ ಕಾರ್ಯವನ್ನು ಸಹೃದಯರಿಗೆ ಪರಿಚಯಿಸುವ, ಅವರ ಕಾಯಕ ಸಿದ್ಧಾಂತವನ್ನು ವಿವರಿಸುವ ಹಾಗೂ ಅವರನ್ನು ಕುರಿತಾದ ಚಾರಿತ್ರಿಕ ಅಂಶಗಳನ್ನು ವಿವರಿಸುವ ಕೃತಿಯಾಗಿದೆ.

'ಶ್ರೀ ಗುರುಲಿಂಗಮ್ಮನವರ ಪುರಾಣ' ಕಾವ್ಯವು ಬಾಲಚಂದ್ರ ಶಾಸ್ತ್ರಿಗಳೇ ರಚಿಸಿದ್ದು, ಈ ಪುರಾಣಕಾವ್ಯವು ಬಾಲವಿಧವೆಯಾಗಿ ಮರಳಿ ಭೋಗ ಬಯಸದೇ, 'ಶರಣಸತಿ-ಲಿಂಗಪತಿ' ಮಾರ್ಗದಲ್ಲಿ ಸರ್ವ ಸಂಪತ್ತನ್ನು ತ್ಯಾಗ ಮಾಡಿ, ವಿರಾಗಿಯಾಗಿ ಅಕ್ಕಮಹಾದೇವಿಯ ಹಾಗೇ ಧರ್ಮ ಕಾರ್ಯವನ್ನು ಮಾಡುತ್ತಾ, ಜನರ ಮನಸ್ಸಿನಲ್ಲಿ ಉಳಿದ ಮಹಾಶಿವಶರಣೆ ಅಮ್ಮನವರ ಜೀವನ ವೃತ್ತಾಂತವನ್ನು ವಸ್ತುವಾಗಿಟ್ಟುಕೊಂಡು ರಚಿತವಾದ ಕೃತಿಯಾಗಿದೆ.

ಇಲ್ಲಿ ವಸ್ತು ಎಂದೊಡನೆ ಸಾಮಾನ್ಯ ಅರ್ಥಮಾಡಿಕೊಳ್ಳುವುದು ಅವರ ಕಥೆ ಎಂದು. ಆದರೆ ಆ ಕಥೆಯ ಹಿನ್ನೆಲೆ, ಘಟನೆಗಳ ಸರಣಿಯಾಗಿ, ಆಯಾ ಸನ್ನಿವೇಶಗಳ ಜೋಡಣೆಗಾಗಿ ಹಲವು ಚಾರಿತ್ರಿಕ ದಾಖಲೆಗಳು ಕಂಡು ಬರುತ್ತವೆ. ಪುರಾಣ ಕೃತಿಯ ನಾಯಕರು ಹಲವು ಸಮುದಾಯಗಳ ಸಾಂಸ್ಕೃತಿಕ ಮತ್ತು ಧಾರ್ಮಿಕ ಗುರುಗಳಾಗಿದ್ದು, ಒಂದು ನಿರ್ಧಿಷ್ಟವಾದ ಪ್ರದೇಶ ಅಥವಾ ಸಮುದಾಯಕ್ಕೆ ಸಂಬಂಧಿಸಿದರೂ ಸಹ ಅವರನ್ನು ಸರ್ವ ಸಮುದಾಯದ ಗಮನ ಸೆಳೆಯುವ ತಂತ್ರವನ್ನು ಕವಿಗಳು ಪುರಾಣ ಕಾವ್ಯದಲ್ಲಿ ಮಾಡಿರುತ್ತಾರೆ. ಆ ನಿಟ್ಟಿನಲ್ಲಿ ಇನ್ನೂ ಅನೇಕ ಪುರಾಣ ಕಾವ್ಯಗಳಲ್ಲಿ ಅಂತಹ ವಿಷಯವನ್ನು ಗುರುತಿಸಲಾಗಿದೆ.

ಶ್ರೀ ಶಿವದೇವ ಶಾಸ್ತ್ರಿಗಳ 'ಜಕ್ಕಲಿಯ ಶ್ರೀ ಅಣ್ಣಯ್ಯ-ತಮ್ಮಯ್ಯನವರ ಪುರಾಣ' ಕಾವ್ಯವು ಒಂದು ವಿಶೇಷತೆಯನ್ನು ಇಟ್ಟುಕೊಂಡ ಕೃತಿ. ಸಾಮಾನ್ಯವಾಗಿ ಎಲ್ಲ ಪುರಾಣ ಕಾವ್ಯದಲ್ಲಿ ಒಬ್ಬನನ್ನು ಕಥಾನಾಯಕನನ್ನಾಗಿ ಮಾಡಿಕೊಂಡು ಕೃತಿರಚಿಸಿರುತ್ತಾರೆ. ಆದರೆ, ಇಲ್ಲಿ ಇಬ್ಬರು ಧಾರ್ಮಿಕ ಯೋಗಿಗಳ ಕಾಯಕ, ಲೀಲೆ, ಅವರು ಸಮಾಜಕ್ಕೆ ಮಾಡಿದ ಪರೋಪಕಾರ ಕೆಲಸವನ್ನು ಈ ಕೃತಿಯು ಪರಿಚಯಿಸುವ ವಸ್ತುವನ್ನು ಒಳಗೊಂಡಿದೆ. ಅಣ್ಣಯ್ಯ ಮತ್ತು ತಮ್ಮಯ್ಯನವರು ಮಾಡಿದ ಧಾರ್ಮಿಕ, ಸಾಮಾಜಿಕ ಸೇವೆಯನ್ನು ಕವಿ ಇಲ್ಲಿ ಸುಂದರವಾಗಿ ಬಳಸಿಕೊಂಡು ಪುರಾಣ ಕಾವ್ಯವನ್ನು ರಚಿಸಿದ್ದಾರೆ. ನೀಲಕಂಠ ಕವಿಯ 'ಶ್ರೀ ನೀಲಕಂಠೇಶ್ವರ ಪುರಾಣ' ಕಾವ್ಯವು ಹಲವು ವಿಶೇಷತೆಯನ್ನು ಇಟ್ಟುಕೊಂಡು ರಚಿತವಾದ ಕೃತಿಯಾಗಿದೆ. ಎಲ್ಲ

ಪುರಾಣ ಕಾವ್ಯದಲ್ಲಿ ಕೆಲವು ವೈಭವೀಕರಣದ ಪವಾಡಗಳು ಬರುತ್ತವೆ. ಆದರೆ ಇಲ್ಲಿ ಒಂದು ಧರ್ಮದ ಸಾರ ಹಾಗೂ ತತ್ವ ಇವುಗಳ ಜೊತೆಗೆ ಆ ಸಮುದಾಯದ ಪ್ರಾಚೀನತೆ, ಗುರು ಪರಂಪರೆ ಮುಂತಾದವುಗಳು ಕಂಡುಬರುತ್ತವೆ. ಕುರುಹಿನ ಶೆಟ್ಟಿ ಎಂಬ ಸಮುದಾಯದ ಸುತ್ತ ಹೆಣೆದ ಕಥನ ಇಲ್ಲಿದೆ. ಪರಮೇಶ್ವರನ ಅವತಾರವನ್ನು ವಿಸ್ತರಿಸುವ ಹಾಗೂ ಪೌರಾಣಿಕ ಕಥೆಗಳನ್ನು ನೆನಪಿಸುವ ವಿಶಿಷ್ಟ ವಸ್ತುವನ್ನು ಬಳಸಿಕೊಂಡ ಕೃತಿಯಾಗಿದೆ. ಒಬ್ಬ ಪವಾಡ ಪುರುಷನ ಕಥೆಯಾಗದೆ, ಕುರುಹಿನ ಶೆಟ್ಟಿ ಸಮುದಾಯದ ರೀತಿ ನೀತಿಯನ್ನು ಹಾಗೂ ಆ ಸಮುದಾಯದ ಪ್ರಾಚೀನ ಪರಂಪರೆಯನ್ನು ಒಳಗೊಂಡ ಪುರಾಣ ಕಾವ್ಯವಾಗಿದೆ.

'ಶ್ರೀ ಸಚ್ಚಿದಾನಂದ ಪುರಾಣ' ಕಾವ್ಯವು ಸಚ್ಚಿದಾನಂದ ಶಿವಯೋಗಿಯ ಚರಿತೆಯನ್ನು ವಸ್ತುವಾಗಿರಿಸಿಕೊಂಡ ಕೃತಿಯಾಗಿದೆ. ಸಚ್ಚಿದಾನಂದ ಶಿವಯೋಗಿಗಳ ಸಿದ್ಧಿ-ಪ್ರಸಿದ್ಧಿಯನ್ನು, ಅವರ ಆಧ್ಯಾತ್ಮಿಕ ತತ್ವದ ಬೋಧೆಯನ್ನು ವಿವರಿಸುವ ಕೃತಿಯಾಗಿದೆ. 'ಶ್ರೀ ಗುರು ರುದ್ರೇಶ ಲೀಲಾವಿಲಾಸ' ಕೃತಿಯು ಸಹ ರುದ್ರೇಶ ಶಿವಯೋಗಿಯ ಲೀಲೆಯನ್ನು ಹೇಳುತ್ತಾ ವೀರಶೈವ ಧರ್ಮದ ತತ್ವಗಳನ್ನು ಪೂರಕವಾಗಿ ಹೆಣೆದು ದೃಷ್ಟಾಂತದ ಮೂಲಕ ಓದುಗರಿಗೆ ಕೊಟ್ಟಿದ್ದಾರೆ ಕವಿ ವಾಸುದೇವ ಹೂಲಿ ಅವರು.

ಪಂಡಿತ ವಾಸುದೇವ ಹೂಲಿ ಅವರು ಶ್ರೀ ಮೈಲಾರಲಿಂಗ ಮಹಿಮೆ ಎಂಬ ಪುರಾಣವನ್ನು ರಚಿಸಿದ್ದಾರೆ. ಇದರಲ್ಲಿ ಶಿವನ ಲೀಲೆಗಳ ಮೂಲಕ ಜನರ ಉದ್ಧಾರವನ್ನು ಮಾಡಿದ್ದಾರೆ ಪ್ರಸ್ತುತ ಪುರಾಣದ ವಸ್ತು, ಹೆಸರೇ ಸೂಚಿಸುವಂತೆ ಮೈಲಾರಲಿಂಗನ ಪ್ರಮುಖ ಲೀಲೆ ಮಹಿಮೆಗಳ ಮೂಲಕ ಜಗದುದ್ಧಾರವನ್ನು ಮಾಡುವುದು. ಇಲ್ಲಿ ಪುರಾತನ ಕಾವ್ಯಗಳ ನೆನಪನ್ನು ತರುವ ಅನೇಕ ಮಹಿಮೆಗಳು ಇಲ್ಲಿ ಜರುಗುತ್ತವೆ. ದೇವಾನುದೇವತೆಗಳು ಮತ್ತು ರಾಕ್ಷಸರು ಮುಂತಾದವರು ಈ ಕೃತಿಯಲ್ಲಿ ಮುಖ್ಯವಾಗಿ ಕಾಣಿಸಿಕೊಳ್ಳುತ್ತಾರೆ. ಈ ಪುರಾಣವು ಒಂದು ಭಕ್ತಿ ರಸವಾಗಿರುವ ಬೃಹತ್ ಕಾವ್ಯವಾಗಿದೆ. ಕೈಲಾಸದಲ್ಲಿ ಶಿವ ಹಾಗೂ ಬ್ರಹ್ಮನನ್ನು ರಾಕ್ಷಸರು ವರ ಬೇಡುವ ಪ್ರಸಂಗವನ್ನು ಇಟ್ಟುಕೊಂಡು ಈ ಕಾವ್ಯ ರಚನೆಯಾಗಿದೆ, ಯುದ್ಧದ ವರ್ಣನೆಗಳು ಮಹಾಭಾರತವನ್ನು ನೆನೆಪಿಸಿಕೊಡುತ್ತವೆ.

ಮಹಾಮಾಯಾ ಮಂಗಳಾದೇವಿ ಚರಿತ ಎಂಬ ಕಾವ್ಯವನ್ನು ಕಣವಿಯ ವಾಸುದೇವ ಹೂಲಿಯವರು ೧೮ ಅಧ್ಯಾಯಗಳಲ್ಲಿ ರಚಿಸಿದ್ದಾರೆ. ದೈವೀ ಭಕ್ತಿಯು ಕಥೆಯ ರೂಪದಲ್ಲಿ ಅದ್ಭುತವಾಗಿ ಮೂಡಿ ಬಂದಿದೆ. ಈ ಪುರಾಣದಲ್ಲಿ ಸುರ-ಅಸುರರ ನಡುವೆ ನೆಡೆದ ಅನೇಕ ಯುದ್ಧದ ಸನ್ನಿವೇಶಗಳು ಮಹಾಭಾರತದ ಪಾತ್ರಗಳನ್ನು ನೆನಪಿಸುವ ದೃಶ್ಯಗಳು ಕಥೆಗೆ ಪುಷ್ಟಿ ನೀಡುತ್ತವೆ. ಇಲ್ಲಿ ದೇವರ ಭಕ್ತಿಯ ನಿರೂಪಣೆ ಮುಖ್ಯವಾಗಿದೆ.

ಕವಿ ಮಲ್ಲಿಕಾರ್ಜುನ ಸ್ವಾಮಿಯವರು ರಚಿಸಿರುವ 'ಶಿವಾನಂದ ಸ್ವಾಮಿ ಪುರಾಣ'ವು ಗೃಹಸ್ಥರಾಗಿ, ಶಿಕ್ಷಕರಾಗಿ, ಒಂದು ಊರಿನ ಗೌಡರಾಗಿ ಇಂತಹ ಕಾಯಕದ ಮಧ್ಯ ಪರಮ

ತತ್ವಕ್ಕೆ ಮನಸೋತು ತನ್ನ ಜೀವನದ ಗುರಿಯನ್ನು ಬದಲಾಯಿಸಿಕೊಂಡು, ಆದಿಶಕ್ತಿಯನ್ನು ಒಲಿಸಿಕೊಂಡು ಶಿವಾನಂದ ಸ್ವಾಮಿ ಎಂಬ ಹೆಸರನ್ನು ಪಡೆದ ಯೋಗಿಯ ಚರಿತೆಯಿದು. ಇಲ್ಲಿಯ ಪ್ರಮುಖ ವಸ್ತು ಶಿವಾನಂದರ ಜೀವನ-ಸಾಧನೆ, ವಿವೇಕ, ವಿಚಾರ, ಸಿದ್ಧಿ-ಪ್ರಸಿದ್ಧಿಯನ್ನು ಅಧಿಕೃತವಾಗಿ ಕವಿ ಮಲ್ಲಿಕಾರ್ಜುನರು ಈ ಪುರಾಣ ಕಾವ್ಯದಲ್ಲಿ ಹೆಣೆದಿದ್ದಾರೆ.

ಸದಾಶಿವಶಾಸ್ತ್ರಿ ಅವರ 'ಗುಡಿಸಾಗರ ಶ್ರೀ ಸಿದ್ಧ ಸಾಧುಗಳ ಪುರಾಣ' ಕಾವ್ಯವು ಎಲ್ಲ ಕಾವ್ಯ ಪುರಾಣದಂತೆ ವೈಭವೀಕರಣದಿಂದ ಕೂಡದೇ ವಾಸ್ತವಿಕ ಅಂಶಗಳಿಗೆ ಹೆಚ್ಚಿನ ಮಹತ್ವನ್ನು ಕವಿಗಳು ಈ ಕೃತಿಯಲ್ಲಿ ನೀಡಿದ್ದಾರೆ. ಸಿದ್ಧಶಿವಯೋಗಿಗಳ ಆಚಾರ-ವಿಚಾರ, ತತ್ವಬೋಧೆ, ಭಕ್ತಿಮಾರ್ಗ ಮುಂತಾದವುಗಳನ್ನು ವಸ್ತುವಾಗಿಸಿಕೊಂಡು ರಚಿತವಾದ ಪುರಾಣಕಾವ್ಯವಾಗಿದೆ. ಇದೇ ಕವಿಯ ಇನ್ನೊಂದು ಪುರಾಣ ಕಾವ್ಯ 'ಸದಾಶಿವಾನಂದ ಸ್ವಾಮಿ ಪುರಾಣ'ವು ಎಲ್ಲ ಪುರಾಣ ಕಾವ್ಯಗಳ ವಸ್ತುವಿನಂತೆ ಸದಾಶಿವ ಸ್ವಾಮಿಗಳ ಜೀವನ ಚಿತ್ರಣವನ್ನು ಒಳಗೊಂಡ ಕೃತಿ.

ಸದಾಶಿವ ಶಾಸ್ತ್ರಿಗಳ ಮತ್ತೊಂದು ಕೃತಿ. 'ಶ್ರೀ ಸದ್ಗುರು ಸಿದ್ಧೇಶ್ವರ ಪುರಾಣ' ಕಾವ್ಯವು ಸಹ ಸಿದ್ಧೇಶ್ವರ ಶಿವಯೋಗಿಯ ಜೀವನ ವೃತ್ತಾಂತ, ಸಾಧನ ಸಿದ್ಧಿ, ಅನುಭವ ತತ್ವ ಮುಂತಾದವುಗಳನ್ನು ಕಥಾ ಗರ್ಭದಲ್ಲಿ ಅರಳಿಸುವ ವಸ್ತುವನ್ನು ಇಟ್ಟುಕೊಂಡು ರಚಿತವಾದ ಕೃತಿಯಾಗಿದೆ. ಒಬ್ಬ ಧಾರ್ಮಿಕ ಪುರುಷ ದೇವತಾಮಾನವನಾಗಿ ತನ್ನ ಮಹಿಮೆಯನ್ನು ತೋರಿಸಿದ ಪರಿಯನ್ನು ಈ ಪುರಾಣ ಕಾವ್ಯದಲ್ಲಿ ಚಿತ್ರಿಸಿದ್ದಾರೆ.

ಒಟ್ಟಿನಲ್ಲಿ ಪುರಾಣ ಕಾವ್ಯದಲ್ಲಿ ಕವಿಗಳು ಹೆಚ್ಚಾಗಿ ಒಂದು ಧರ್ಮದ ಕೇಂದ್ರೀಕೃತವಾದ ವ್ಯಕ್ತಿಯನ್ನು ಪರಿಚಯಿಸುತ್ತಾ, ಆ ಸಮುದಾಯದ ತತ್ವವನ್ನು ಸಾರ್ವತ್ರಿಕವನ್ನಾಗಿ ಮಾಡುವ ನಿಟ್ಟಿನಲ್ಲಿ ಅವರ ಪವಾಡ, ಬಾಲಲೀಲೆ, ಅವರ ಕಾಯಕ ತತ್ವ, ಮಠದ ಕೀರ್ತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಇಂತಹ ವಸ್ತುವಿನ್ಯಾಸವನ್ನು ಇಟ್ಟುಕೊಂಡು ರಚಿಸಿರುತ್ತಾರೆ. ಇಲ್ಲಿಯ ಪುರಾಣ ಕಾವ್ಯದಲ್ಲಿ ಒಂದು ಧಾರ್ಮಿಕ ಗುರು, ನಾಯಕನ ಜೀವನ ಕಥೆಯೇ ಇಲ್ಲಿಯ ವಸ್ತುವಾಗಿರುತ್ತದೆ. ಆ ಗುರುವಿನ ಪರಿಸರಕ್ಕೆ ಸೇರಿದ ಸ್ಥಳೀಯ ಐತಿಹ್ಯಗಳು ಆ ಪ್ರದೇಶಗಳಲ್ಲಿ ಲಭ್ಯವಿರುತ್ತವೆ. ಹೀಗೆ ಪುರಾಣ ಕಾವ್ಯವು ಹೆಚ್ಚಾಗಿ ಪ್ರಾದೇಶಿಕ ಕಥೆಯ ಚೌಕಟ್ಟಿನಲ್ಲಿ ಆಯಾ ಸಮುದಾಯದ ಕಥಾನಾಯಕನ ಪ್ರಭಾವಕ್ಕೆ ಒಳಗಾಗಿರುತ್ತವೆ.

ಶ್ರೀರಾಜಗುರು ಗುರುಸ್ವಾಮಿ ಕಲಕೇರಿಯವರು ರಚಿಸಿದ ಶ್ರೀಮದ್ ಉಜ್ಜಯಿನಿ ಸದ್ಗುರು ಶ್ರೀ ಸಿದ್ಧಲಿಂಗ ಭಗವತ್ಪಾದ ಪುರಾಣವು ಶ್ರೀ ಸಿದ್ಧಲಿಂಗರ ಜೀವನ-ಸಾಧನೆಗಳನ್ನು ವಿವರಿಸುವ ಹಾಗೂ ವೀರಶೈವ ಧರ್ಮವನ್ನು ಪ್ರತಿಪಾದಿಸುವ ವಸ್ತುವನ್ನು ಒಳಗೊಂಡಿದೆ. ಈ ಕಾವ್ಯದಲ್ಲಿ ಸುಮಾರು ೩೩ ಲೀಲೆಗಳನ್ನು ವ್ಯಕ್ತಪಡಿಸಲಾಗಿದೆ. ಹಾಗೂ ಈ ಪುರಾಣದ ಕಥಾನಾಯಕರು

ಶ್ರೀ ಸಿದ್ಧಲಿಂಗ ಭಗವತ್ಪಾದರೆ ಆಗಿದ್ದಾರೆ. ಹಾಗೂ ಪವಾಡಗಳ ಮೂಲಕ ಶ್ರೀ ಸ್ವಾಮಿಗಳು ಸಾಮಾಜಿಕ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದ್ದು, ಶ್ರೀ ಸಿದ್ಧಲಿಂಗ ಭಗವತ್ಪಾದ ಲೋಕಕಲ್ಯಾಣಕ್ಕಾಗಿ ಮಾಡಿದ ಸಾಧನೆಗಳೇ ಈ ಪುರಾಣದ ವಸ್ತುವಾಗಿವೆ.

'ಶ್ರೀ ಗುರು ಚನ್ನಮಲ್ಲೇಶ್ವರ ಪುರಾಣ'ವು 'ಶ್ರೀ ಗುರುಸ್ವಾಮಿ ಕಲಕೇರಿ'ಯವರ ಇನ್ನೊಂದು ಪುರಾಣ ಕಾವ್ಯವಾಗಿದ್ದು, ಇದರಲ್ಲಿ ವೀರಶೈವ ಧರ್ಮದ ಸಿದ್ಧಾಂತಗಳನ್ನು ಹಾಗೂ ಧರ್ಮದಲ್ಲಿ ಬರುವ ಅಷ್ಟಾವರಣಗಳನ್ನು ತಿಳಿಸುವುದೇ ಇಲ್ಲಿನ ಮುಖ್ಯ ವಸ್ತುವಾಗಿದೆ. ಇಲ್ಲಿ ಯೂ ಸಹ ಅನೇಕ ಪ್ರಸಂಗಳನ್ನು ಪವಾಡಗಳ ಮೂಲಕ ತಿಳಿಸಿರುವುದನ್ನು ಪುರಾಣವು ಅಭಿವ್ಯಕ್ತಿಸುತ್ತದೆ.

ಬೆಟಗೇರಿಯ ಶ್ರೀ ಮನ್ವಾಚಾರ್ಯರು 'ಸಂಭಾಪುರದ ಶರಣ ಗುರುಮಲ್ಲಜ್ಜನ ಪುರಾಣ'ವನ್ನು ರಚಿಸಿದ್ದಾರೆ. ಇದು ವೀರಶೈವ ಪರಂಪರೆಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಪುರಾಣವಾಗಿದೆ. ಇಲ್ಲಿ ಪುರಾಣದ ಕಥಾವಸ್ತು ಮತ್ತು ಪವಾಡಗಳ ಮೂಲಕ ಸಮಾಜದಲ್ಲಿರುವ ಅಂಕುಡೊಂಕನ್ನು ತಿದ್ದುವ ಕಾರ್ಯ ಮಾಡಲಾಗಿದೆ. ಅನೇಕ ಸಮಾಜಿಕ ಹಾಗೂ ಧಾರ್ಮಿಕ ಸಂಗತಿಗಳು ಇಲ್ಲಿನ ವಸ್ತುವಾಗಿ ರೂಪಗೊಂಡಿದೆ. ಒಟ್ಟು ಹದಿನೆಂಟು ಅಧ್ಯಾಯಗಳಲ್ಲಿ ಇದು ರಚನೆಗೊಂಡಿದ್ದು, ಛಂದೋಬದ್ಧ ರೀತಿಯಲ್ಲಿ ಸರಳ ಷಟ್ಪದಿಯಲ್ಲಿ ರೂಪಿಸಲಾಗಿದೆ. ಮಲ್ಲಜ್ಜ ಒಬ್ಬ ಧಾರ್ಮಿಕ ಪುರುಷ ಎಂಬುದುನ್ನು ಈ ಕಥೆಯ ಮೂಲಕ ತಿಳಿಸಿದ್ದಾರೆ.

ಶಾಖಾಪುರದ 'ಶ್ರೀ ಬಸವಾಂಭದೇವಿ ಪುರಾಣ', 'ಸುಕ್ಷೇತ್ರ ಅಬ್ಬೆ ತುಮಕೂರಿನ ಶ್ರೀ ವಿಶ್ವಾರಾಧ್ಯ ಪುರಾಣ', 'ಸುಕ್ಷೇತ್ರ ಫ್ಹಿ. ಕೆ. ಸಲಗರ ಶ್ರೀ ಸಾಂಬಶಿವಯೋಗಿ ಪುರಾಣ' ಮುಂತಾದ ಎಲ್ಲ ಪುರಾಣಗಳು ವೀರಶೈವ ಧರ್ಮ ಪ್ರಚಾರ ಹಾಗೂ ಆ ಪುರಾಣದ ಪವಾಡ ಪುರುಷನನ್ನೇ ಕಾವ್ಯದ ವಸ್ತುವನ್ನಾಗಿಸಿ ಪುರಾಣ ಗ್ರಂಥಕರ್ತರು ಎಲ್ಲವನ್ನು ಭಾಮಿನಿ ಷಟ್ಪದಿಯಲ್ಲಿ ಜನಸಾಮಾನ್ಯರಿಗೆ ವಾಚಿಸಲು, ಹಾಗೂ ಅರ್ಥೈಸಿಕೊಳ್ಳಲು ಅನೂಕೂಲವಾಗುವಂತೆ ಕಾವ್ಯಗಳನ್ನು ರಚಿಸಿದ್ದಾರೆ. ಹಾಗೂ ಇವು ಆಯಾ ಕವಿಯ ಮನೋಧರ್ಮಕ್ಕೆ ಅನುಗುಣವಾಗಿ ಒಂದು ಪ್ರದೇಶದ ಆರಾಧ್ಯ ದೇವರನ್ನು ದೃಷ್ಟಿಯಲ್ಲಿಟ್ಟುಕೊಂಡು ಕಾವ್ಯ ರಚಿಸಿರುವುದು ವಿಶೇಷವಾಗಿದೆ. ಇಲ್ಲಿ ಕಥೆಗಳನ್ನು ವಿಶ್ಲೇಷಿಸುವಲ್ಲಿ ಕವಿಗಳು ತಮ್ಮ ಜಾಣತನವನ್ನು ಹೃದಯಂಗಮವಾಗಿ ಪ್ರಕಟಮಾಡಿದ್ದಾರೆ. ಕಥಾನಾಯಕನನ್ನು ಇಟ್ಟುಕೊಂಡು ಸಮಾಜವನ್ನು ತಿದ್ದುವದು ಈ ಪುರಾಣ ಕಾವ್ಯಗಳ ಮುಖ್ಯ ಉದ್ದೇಶವಾಗಿದೆ. ಜನಲ್ಲಿರುವ ಬೌದ್ಧಿಕ ಶಕ್ತಿಗೆ ನಿಲುಕುವಂತೆ ಕಾವ್ಯಗಳನ್ನು ಅನೇಕ ಪದ್ಯ, ಸಂಧಿಗಳಲ್ಲಿ ವಿವರಿಸಲಾಗಿದೆ. ಈ ಎಲ್ಲ ಪುರಾಣ ಕಾವ್ಯಗಳಲ್ಲಿ ಪವಾಡಗಳು ಸರ್ವೇ ಸಾಮಾನ್ಯವಾಗಿರುವುದು ಗಮನಿಸಬೇಕಾದ ಅಂಶವಾಗಿದೆ.

◆◆◆

೪.೨. ಪುರಾಣ ಕಾವ್ಯ : ಧಾರ್ಮಿಕ ವಿವೇಚನೆ

ಪುರಾಣಕಾವ್ಯಗಳು ಹುಟ್ಟಿ ಬಂದಿರುವ ಉದ್ದೇಶವೇ ಧಾರ್ಮಿಕ ಹಿನ್ನೆಲೆಯಾಗಿದೆ. ಹೀಗಾಗಿ ಪುರಾಣ ಕಾವ್ಯಗಳ ಪ್ರಾಧ್ಯಾನತೆಯು ಅದರಲ್ಲಿ ಸ್ಥಾನಪಡೆದಿರುವ ದೈವಗಳ ಸುತ್ತ ಕೇಂದ್ರೀಕೃತವಾಗಿದೆ. ಸಾಂಸ್ಕೃತಿಕ ವ್ಯಕ್ತಿಯ ಆಶಯ ಅಥವಾ ಧಾರ್ಮಿಕ ದೈವದ, ಗುರುಗಳ ಪ್ರಾಮುಖ್ಯತೆ ಈ ಪುರಾಣ ಕಾವ್ಯಗಳಲ್ಲಿ ಒಂದು ವೇಳೆ ಇಲ್ಲದಿದ್ದರೆ ಅವುಗಳು ಪುರಾಣಗಳು ಎಂದು ಎನಿಸಿಕೊಳ್ಳುವದಿಲ್ಲ. ಆದ್ದರಿಂದ ಸಾಂಕೇತಿಕವಾಗಿ ಹಿಂದಿನ ಪುರಾಣದಲ್ಲಿ ಕಂಡುಬಂದಂತಹ ಅಂಶವನ್ನು ಮುಂದುವರೆಸಿಕೊಂಡು ಹೋಗುವಲ್ಲಿ ಆಧುನಿಕ ಪುರಾಣಗಳು ಹೊರತಾಗಿಲ್ಲ. ಈ ಆಧುನಿಕ ಕಾಲದಲ್ಲಿಯೂ ಸಹ ಪುರಾಣ ಕಾವ್ಯಗಳು ಭಾಮಿನಿ ಲಯವನ್ನು ಉದ್ದೇಶ ಪೂರ್ವಕವಾಗಿ ಇಟ್ಟುಕೊಂಡು, ಈ ಹಿಂದಿನ ಪುರಾಣಗಳು ಹಾಕಿಕೊಟ್ಟ ಮಾರ್ಗವು ಸಹ ಇಲ್ಲಿ ಮುಂದುವರೆದಿದೆ. ಆದಕಾರಣ ಇಲ್ಲಿಯ ಧಾರ್ಮಿಕ ವಿವೇಚನೆಯು ಮುಖ್ಯವಾಗಿ ನಮಗೆ ಅಧ್ಯಯನದ ದೃಷ್ಟಿಯಿಂದ ಮಹತ್ವದ್ದಾಗಿದೆ.

"ಮನಃಶಾಸ್ತ್ರದ ದೃಷ್ಟಿಯಿಂದ ನೋಡುವುದಾದರೆ 'ಪುರಾಣ'ಗಳು ಒಂದು ದೇಶದ ಜನ ಮನಸ್ಸಿನ ವಿಶ್ವಕೋಶಗಳು : ಈ ದೇಶದ ಶತ ಶತಮಾನಗಳ ಕಲ್ಪನೆಗಳು, ಕನಸುಗಳು, ದಂತಕತೆಗಳು, ಸಂಗತಿಗಳು ಹಾಗೂ ಆಲೋಚನೆಗಳು, ವಿಲಕ್ಷಣವಾದ ಪುರಾಣ ಸೃಷ್ಟಿಯ ಮೂಲಕ ಅಭಿವ್ಯಕ್ತಿಗಳನ್ನು ಪಡೆದು ಪ್ರವಹಿಸುತ್ತ ಬಂದಿವೆ." (ಕನ್ನಡ ಸಾಹಿತ್ಯದಲ್ಲಿ ಪುರಾಣ ಪ್ರಜ್ಞೆ, ಡಾ. ಕೆ.ಎಲ್. ಗೋಪಾಲಕೃಷ್ಣಯ್ಯ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಪ್ರಕಟಣೆ ೧೯೮೭ ಬೆನ್ನುಡಿ ಪುಟ: ೭೧೧) ಹೀಗಾಗಿ ಈ ಆಧುನಿಕ ಕಾಲದಲ್ಲಿ ಅವುಗಳು ಮುಂದುವರೆದು ತಮ್ಮ ವಿಷಯದಲ್ಲಿ ಸ್ವಲ್ಪ ಬದಲಾವಣೆಯನ್ನು ಪಡೆದುಕೊಂಡು ಧಾರ್ಮಿಕ ನೋಟಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟಿರುವುದನ್ನು ಗುರುತಿಸಲಾಗಿದೆ. ಅವುಗಳನ್ನು ಈ ಮುಂದಿನಂತೆ ವಿಸ್ತರಿಸಲಾಗಿದೆ.

ಪುಟ್ಟರಾಜರು ಸೃಷ್ಟಿಸಿದ ಎಲ್ಲ ಸಾಹಿತ್ಯವು 'ಧರ್ಮ'ವನ್ನೇ ಪ್ರಧಾನವಾಗಿ ವಿವೇಚಿಸುವದು. ಅದರಲ್ಲಿಯೂ ಒಡಲಲ್ಲಿ ಲಿಂಗವಂತ ಧರ್ಮವನ್ನು ಹೊತ್ತು ಶೈವದ, ಕೈಲಾಸ, ಶಿವ-ಶಿವಗಣಗಳ ನಿರೂಪಣೆ ಇದೆ. ಒಟ್ಟು ಒಂದು ಅರ್ಥದಲ್ಲಿ ಶೈವ ಸಮರಸವನ್ನು ಪಂಡಿತ ಪುಟ್ಟರಾಜರು ಒಪ್ಪಿದ್ದಾರೆ. ಒಂದೆಡೆ ವಚನಗಳನ್ನು ಒಪ್ಪಿ, ಇನ್ನೊಂದೆಡೆ ಪಾಮರ ನಂಬಿಕೆಯ ನೆಲೆವೀಡಾದ ಲೀಲೆ ಪವಾಡಗಳನ್ನು ನಿರೂಪಿಸುವಲ್ಲಿ ತಾತ್ವಿಕ ದ್ವಂದ್ವವು ತಲೆದೋರಿದೆ. ಎಲ್ಲ ಕೃತಿಗಳಲ್ಲಿ ಭಕ್ತಿಯ ನಿರೂಪಣೆ ಸಮರ್ಪಕವಾಗಿರುವದು.

'ವೀರಶೈವ'ವೆಂದು ಕರೆಯುವ ಧರ್ಮವಿಧಾನವು ಇಲ್ಲಿಯ ಎಲ್ಲ ಕಾವ್ಯಗಳ ಜೀವಾಳವಾಗಿದೆ. ಹೊಸ ಕಾವ್ಯಧರ್ಮವನ್ನು ಅನುಸರಿಸಿದ ಅವಿಷ್ಕಾರಗೊಳಿಸಿದ ಶರಣಧರ್ಮವೆಂದರೆ ವಿಶ್ವಮಾನವಧರ್ಮ ಮತ್ತು ವೀರಶೈವ ತಾತ್ವಿಕ ಧರ್ಮಗಳೆರಡರ ಸಂಗಮವಾಗಿದೆ. ಆಧುನಿಕ ಪುರಾಣ ಕಾವ್ಯಗಳು ಅಭಿವ್ಯಕ್ತಿಸುವ ಆದರ್ಶಭಕ್ತ ಶರಣರು ಸ್ವಾಮಿಗಳಲ್ಲಿ ಆಚರಣೆ ಪ್ರಧಾನವಾದ ದರ್ಶನಯುಕ್ತ ಲಿಂಗಾಯತ ತತ್ವಗಳು ಹೀಗೆ ಎರಡರ ಸಂಗಮವನ್ನು ಕಾಣಬಹುದು. ಈ ತತ್ವ ತಳಹದಿಯು ಮೊದಲನೆಯ ವಿಶ್ವಮಾನವೀಯ ಧರ್ಮವು ಸತ್ಯ, ನ್ಯಾಯ, ಕರುಣೆ, ದಯೆ, ನಿಸ್ವಾರ್ಥ, ಶಾಂತಿ, ಸಮಾಧಾನ, ಪರೋಪಕಾರ ಮೊದಲಾದ ವಿಶ್ವ ತ್ರಿಕಾಲಾಬಾಧಿತ ತತ್ವಗಳಿವೆ. ಜೈನರ ಪಂಚಾಣು ವ್ರತಗಳು, ಯಹೂದ್ಯರ ಹತ್ತು ಮಹಾವಾಕ್ಯಗಳು, ಬೌದ್ಧರ ಶಾಂತಿ ತತ್ವ, ಹಿಂದೂಗಳ ಸತ್ಯ ತತ್ವ, ಕ್ರೈಸ್ತರ ಕರುಣಾ ತತ್ವಗಳಂತೆ ಲಿಂಗಾಯತರ ಸಪ್ತ ಮೌಲ್ಯ ತತ್ವಗಳನ್ನು ಪಾಲಿಸಿದ ಶರಣರು ಒಂದು ಪರಂಪರೆಯನ್ನು ಉಂಟುಮಾಡಿದರು. ಇದು ಆಧುನಿಕಪೂರ್ವ, ಮಧ್ಯಕಾಲೀನ, ಶರಣ ಸ್ವಾಮಿಗಳಲ್ಲಿ ಗಟ್ಟಿಯಾಗಿತ್ತು. ಅದಕ್ಕೆ ಉದಾಹರಣೆಯಾಗಿ ತೋಂಟದ ಸಿದ್ಧಲಿಂಗಯತಿಗಳು, ನಾಲತ್ತವಾಡ ವೀರೇಶ ಶರಣರು, ಅಂಕಲಗಿ ಅಡವೀಶ್ವರರು, ಕಲಬುರ್ಗಿ ಶರಣ ಬಸವೇಶ್ವರರ ಜೀವನವನ್ನು ಅರಿಯಬಹುದು. ಅವರು ಆ ಕಾಲಘಟ್ಟದ ಎಲ್ಲ ಶರಣರು ಸತ್ಯ, ದಯೆ, ತ್ಯಾಗ, ಕರುಣೆ, ನ್ಯಾಯ, ನಿಸ್ವಾರ್ಥ ನಿರಹಂಕಾರ, ಶಾಂತಿ, ಸಹನೆಗಳ ಸಾಕಾರ ಮೂರ್ತಿಗಳಾಗಿದ್ದರು. ಇವರೆಲ್ಲರ ಗುರಿ 'ಸರ್ವೋದಯ', 'ಸರ್ವಸಮತೆ', 'ಸರ್ವರೇಕತೆ', 'ಸಮಾನತೆಯೆ' ಆಗಿತ್ತು. ಅವರು ಜಂಗಮವೆಂದು ಇಡೀ ಸಮಾಜದ ಹರಹಿಗೆ, ಅಂಗವೆಂದು ವೈಯಕ್ತಿಕ ಹರಹಿಗೆ ಈ ತತ್ವಗಳ ಅನುಷ್ಠಾನವನ್ನು ನೆರವೇರಿಸಿದರು. ವಾಸ್ತವವಾಗಿ ಶುದ್ಧ ಧರ್ಮ ಈ ತತ್ವಾಚರಣೆ ಆಗಿದೆ. ಮತಾಚರಣೆ ಅನೇಕ ಭಿನ್ನ ಭಿನ್ನ ವ್ರತಾಚರಣೆಗಳು ನಂತರ ಧರ್ಮದ ಹೆಸರಿನಲ್ಲಿ ಬಂದವುಗಳಾಗಿವೆ. ಇವನ್ನೇ ಪ್ರಧಾನವಾಗಿಸಿ ಮೂಲ ಶುದ್ಧಧರ್ಮವನ್ನು ಬಿಟ್ಟದ್ದನ್ನು ನಾವು ಕಾಣುತ್ತೇವೆ. ಪಂ. ಪುಟ್ಟರಾಜರ ವಿವೇಚನೆಯಲ್ಲಿ ಈ ಶುದ್ಧ ಧರ್ಮವು ಭಕ್ತರ, ಶರಣರ, ಶರಣ ಸ್ವಾಮಿಗಳ ಚರಿತ್ರೆಯಲ್ಲಿ ಒಡಮೂಡಿದೆ. ಇದರೊಂದಿಗೆ ಪ್ರಕೃತಿ ಧರ್ಮವಾದ ಮಳೆ ಬೆಳೆ ಇಳೆಗಳೆಲ್ಲವು ದೇವರ ದಯೆ (ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ- ಜೇಡರದಾಸಿಮಯ್ಯನ ವಚನೋಕ್ತಿ) ಎಂಬ ಶರಣ ತತ್ವವು ಇಲ್ಲಿ ಸಾಕಾರಗೊಂಡಿದೆ. 'ಕಳಬೇಡ ಕೊಲಬೇಡ' ಎಂಬ ಬಸವಣ್ಣನವರ ಸಪ್ತ ತತ್ವಗಳು ಸಾಕಾರಗೊಂಡಿವೆ.

ಇನ್ನು ಆಚರಣೆಯ ಮತ ಸಿದ್ಧಾಂತದ ವಿಷಯವಾಗಿ ಧರ್ಮದ ಅಭಿವ್ಯಕ್ತಿಯು ಮುಖ್ಯವಾಗಿ ಲಿಂಗಾಯತ ಧರ್ಮ ಪ್ರಸ್ಥಾನತ್ರಯಿಗಳಾದ ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರಗಳು ಒಂದಿಲ್ಲ ಒಂದು ರೀತಿ ಎಲ್ಲ ಪುರಾಣಕಾವ್ಯಗಳಲ್ಲಿ ಪ್ರತಿಪಾದಿತವಾಗಿವೆ. ಷಟ್‌ಸ್ಥಲಗಳೆಂದರೆ ಶರಣ-ಭಕ್ತ ಹೊಂದಿರಬೇಕಾದ ಆರು ತಾತ್ವಿಕ ದಾರ್ಶನಿಕ ಸ್ಥಲಗಳೇ

ಆಗಿವೆ. ಸ್ವಾಮಿಗಳಾದರೂ ಅವರು ಭಕ್ತ, ಪ್ರಸಾದಿ, ಪ್ರಾಣಲಿಂಗಿ, ಮಹೇಶ, ಶರಣ, ಐಕ್ಯನಾಗಿರಬೇಕೆಂದು ಪ್ರತಿಯೊಂದು ಕಾವ್ಯಗಳಲ್ಲಿ ವಿವರಣೆ ಇರುವದು. ಅದೇ ರೀತಿ ಭಕ್ತನು ಹೊಂದಿರಬೇಕಾದ ಆಧ್ಯಾತ್ಮಿಕ ಆವರಣಗಳು, ಅಷ್ಟಾವರಗಳು ಅವು ಗುರು-ಲಿಂಗ-ಜಂಗಮ, ಪಾದೋದಕ, ಪ್ರಸಾದ ವಿಭೂತಿ, ರುದ್ರಾಕ್ಷಿ ಮಂತ್ರ ಇವುಗಳಲ್ಲಿ ಕೊನೆಯದು ಮುಖ್ಯವಾದ ಮೂರು ಮಂತ್ರಗಳನ್ನು ಒಳಗೊಳ್ಳುವದು. 'ಓಂ' ಎಂಬ ಏಕಾಕ್ಷರಮಂತ್ರ, 'ನಮಃ ಶಿವಾಯ' ಪಂಚಾಕ್ಷರಿ ಮಂತ್ರ ಇವೆರಡು ಕೂಡಿದ 'ಓಂ ನಮಃ ಶಿವಾಯ' ಎಂಬ ಷಡಕ್ಷರಿ ಮಂತ್ರಗಳ ಜತೆಗೆ ಬಸವೋತ್ತರ ಕಾಲದಲ್ಲಿ 'ಬಸವಂ' ಎಂಬ ತ್ರೈಯಕ್ಷರಿ ಮಂತ್ರವು ಕೂಡ ರೂಢಿಗೆ ಬಂತು. ಇದರ ಜೊತೆಗೆ 'ಓಂ ಬಸವ ಲಿಂಗಾಯ ನಮಃ' ಎಂಬ ಮಂತ್ರವಾಕ್ಯವು ಸಿದ್ಧವಾಯಿತು. ಇದನ್ನು ಆಧುನಿಕ ಪೂರ್ವ ವೀರಶೈವ ಕವಿಗಳು ಕಾವ್ಯಾರಂಭದ ಶಿರೋಮಂತ್ರವಾಗಿ ಬಳಸಿದ್ದಾರೆ. ಈ ಎಲ್ಲ ಅಷ್ಟಾವರಣಗಳನ್ನು ಭಕ್ತರು ಸ್ವಾಮಿಗಳು ಹೊಂದಿರಲೇಬೇಕೆಂದು ಎಲ್ಲ ಕಾವ್ಯಗಳಲ್ಲಿ ಬಂದಿದೆ.

ಪಂ. ಪುಟ್ಟರಾಜ ಕವಿಗಳು ವ್ಯಾಪಕವಾದ ದಾರ್ಶನಿಕ ಓದಿನ ಬಲದಿಂದ ಕಾವ್ಯಗಳನ್ನು ರಚಿಸಿದ್ದಾರೆ. ಮೂಲಭೂತವಾಗಿ ಸ್ವಯಂ ಅವರೆ ಶರಣ ತತ್ವಗಳನ್ನು ಬಳಿವಿಡಿದು ಅಳವಡಿಸಿಕೊಂಡವರು. ಅವರು ಧರ್ಮ ವಿವೇಚನೆಯನ್ನು ಪಾತ್ರ ಮುಖೇನ ಮಾಡಿಸುವರು.

ಇದುವೆ ಸದ್ಗುರು ಭಕ್ತಿಸುಜನರೆ
ಯಿದುವೆ ಪ್ರಾಣಿ ದಯಾಪರತೆನೀ
ವದನೆ ಸಾಧಿಸಿ ಸುಖವಪಡೆಯುವದದೆಂದೊರೆದು ಮಹಿಮಂ ।
ಒದವಿದಾನಂದವೆ ಶಿವಾನುಭ
ವದಸುಖದೊಳೆಲ್ಲರ್ಗೆ ಬೋಧಿಸಿ
ಸದಮಲರ್ಗೊರೆದಂತಾನುಮಾಶಿವಪದಪಡೆವ ॥

(ಶ್ರೀ ಗಾದಿಲಿಂಗೇಶ್ವರ ಪುರಾಣ ಪುಟ: ೧೯೫, ಪದ್ಯ : ೩೭)

ಇಲ್ಲಿ ಕಾಣುವ ವಿವೇಚನೆ ಪಾತ್ರ ಮತ್ತು ಕವಿಯ ಒಂದೇ ಮನದ ಪ್ರತೀಕವಾಗಿದೆ. ಗುರುವಿನಿಂದ ಅರಿವು ಗುರುವಿನಿಂದ ಮುಕ್ತಿ ಎಂಬ ರೀತಿಯಲ್ಲಿ ವಿವರಣೆ ಇಲ್ಲಿದೆ. ಇಲ್ಲಿ ಬರತಕ್ಕ ಲಿಂಗ ತತ್ವ ಅದು 'ಜಗದಗಲ, ಮಿಗೆಯಗಲ, ಮುಗಿಲಗಲ' ಸ್ವರೂಪ. ಅದು ಅಪ್ರಮಾಣ, ಅಪ್ರತಿಮ, ಅನುಪಮ, ಅಮಲ, ಅನಾಲಂಬ, ಅದ್ವಿತೀಯ, ಅನಾದಿ, ಅನಂತ್ಯ, ಅಕಾಲ, ನಿರಂಜನ, ನಿಷ್ಕಳಂಕ, ಸಕಲ, ನಿಷ್ಕಲ ಬ್ರಹ್ಮ ತತ್ವವಾಗಿದ್ದು, ನಾದ ಬಿಂದು ಕಳಾತೀತ, ನಾಮಕ್ರಿಯಾ ರೂಪಗಳಿಲ್ಲದ, ಅಖಂಡ ತತ್ವ ಬ್ರಹ್ಮಾಂಡದಿಂದತ್ತ ವ್ಯಾಪ್ತಿಗೊಂಡುದು. ಅರಿವಿಗೆ ಬಂದರೂ ಇಂದ್ರಿಯಕ್ಕೆ ಅಗೋಚರ. ಇಂತಹ ಲಿಂಗತತ್ವ 'ಚುಳುಕಾಗಿ' ಕರಸ್ಥಳಕ್ಕೆ ಬಂದುದನ್ನು ಲಿಂಗವಂತಧರ್ಮ ತಿಳಿಸುವುದು. 'ಕುರುಹು' ಎಂಬ ತಾತ್ವಿಕ ನಿಲುವಿನಲ್ಲಿ

ಗುರುವಿನ ಮೂಲಕ ಲಿಂಗಜ್ಞಾನವು - ಅಮಲಜ್ಞಾನವೆನಿಸುವದನ್ನು ಎಲ್ಲ ಕಾವ್ಯಗಳು ನಿರೂಪಿಸಿವೆ. ಲಿಂಗದಂತೆಯೆ ಜಂಗಮ ಅಂಗತತ್ವವು 'ಹೋರಾಟವಿಕ್ಕಿಸಲು ಬೇರಾದ ರೂಪ' (ಮುಪ್ಪಿನ ಷಡಕ್ಷರಿಗಳ ಸ್ವರವಚನ) ಅಂಗ-ಲಿಂಗ ಸಮರಸವಾಗುವ ಬಗೆಯೆ ಬಯಲು, ಶೂನ್ಯ. ಅದರ ವ್ಯಾಪಕತೆ ಅಗತ್ಯತೆ ವಿವರಣೆ ಸಾಂದರ್ಭಿಕವಾಗಿ ಇದೆ.

ಪಾದೋದಕ ಪ್ರಸಾದಗಳು ಕ್ರಮವಾಗಿ ಅಮಲ ಜಲಶಕ್ತಿ ಅಗತ್ಯವನ್ನು, ಪ್ರಾಣ್ಯ ಅನ್ನ ತತ್ವಗಳನ್ನು ಸೂಚಿಸುತ್ತವೆ. ಇವಿಲ್ಲದೆ ಚೇತನವಿಲ್ಲ, ಚಲನವಿಲ್ಲ, ಜೀವನವಿಲ್ಲ. ಇವುಗಳ ಅಗತ್ಯತೆಗೆ ತಾತ್ವಿಕ ನೆಲೆ ನೀಡಲಾಗಿದೆ. ಇನ್ನು ವಿಭೂತಿ ರುದ್ರಾಕ್ಷಿಗಳು ದೈಹಿಕವಾಗಿ ರಕ್ಷಣಾ ಸಾಧನವಾಗಿವೆ ಎಂದು ವಿಜ್ಞಾನದ ಪ್ರಯೋಗಗಳು ತಿಳಿಸುತ್ತವೆ. ಇವುಗಳನ್ನು ಅಷ್ಟಾವರಣದಲ್ಲಿ ತಿಳಿಸುತ್ತಾರೆ. 'ಮಂತ್ರ' ಮಾನಸಿಕ ಆನಂದ ಐಕ್ಯತೆಗಳನ್ನು ಮಾತ್ರವಲ್ಲದೆ ಒತ್ತಡಗಳನ್ನು ಕಳೆದು ಶಾಂತಿ ಸಮಾಧಾನಗಳನ್ನು ಒದಗಿಸುವದು. ಇದನ್ನು ಆಧುನಿಕ ವೈಜ್ಞಾನಿಕ ಅಗತ್ಯವಿಧಾನವೆಂದು ತಿಳಿಯಲಾಗಿದೆ. ಈ ಎಲ್ಲ ಅಷ್ಟಾವರಣೆಗಳನ್ನು ವಿವೇಚನೆಗೆ ಸಮತೆಗಾಗಿ ಶರಣರ ಜೀವನ ಘಟನೆ/ಕಥೆಯನ್ನು ಪಂ. ಪುಟ್ಟರಾಜರು ಕೊಟ್ಟೇ ಕೊಡುತ್ತಾರೆ. ಈ ರೀತಿ ಧರ್ಮ ತತ್ವಗಳನ್ನು ಜನಮನಕೆ ತುಂಬುವ ಮಹಾಕಾರ್ಯ ಇಲ್ಲಿದೆ.

ಪಂಚಾಚಾರಗಳು ಸದಾಚಾರ, ಲಿಂಗಾಚಾರ, ಶಿವಾಚಾರ, ಭೃತ್ಯಾಚಾರ, ಗಣಾಚಾರ ಇವುಗಳು ಭಕ್ತರು ಆಚರಿಸುವ ಸಾಮಾಜಿಕವಾದ ಧಾರ್ಮಿಕ ಕಟ್ಟಳೆಗಳಾಗಿವೆ. ಇವುಗಳ ಆಚರಣೆಯನ್ನು ಕಾವ್ಯಗಳಲ್ಲಿ ಹೇಳಲಾಗಿದೆ. ಪಂಚ ಆಚಾರಗಳು ಸುಲಭ ಸಾಧ್ಯವಲ್ಲ . ಸತ್ಯದ ಆಚರಣೆಯೆ ಸದಾಚಾರ, ಶಾಂತನಾಗಿರುವದೆ ಶಿವಾಚಾರ, ತನಗಾಗಿ ಎಲ್ಲರೂ ಎಂದಿರದೆ ಎಲ್ಲರ ಸೇವೆಗಾಗಿ ತಾನಿರುವದೆ ಭೃತ್ಯಾಚಾರ, ಶರಣಸಂಗದಲ್ಲಿರುವದೆ ಗಣಾಚಾರ, ಇವುಗಳಲ್ಲಿ ದೇವರ ಅರಿವು ಲಿಂಗಾಚಾರ. ಹೀಗೆ ಈ ಐದರಲ್ಲಿ ಒಂದು ಕೊರತೆಯಾದರೂ ಭಕ್ತ-ಶರಣನಾಗಲಾರ.

ಲಿಂಗವಂತ ದರ್ಶನ ಅನುಷ್ಠಾನದ ಮುಖ್ಯತತ್ವ 'ಕಾಯಕ' ಮತ್ತು 'ದಾಸೋಹ'. ಇವು ಶ್ರಮ ಸಂಸ್ಕೃತಿ, ಸಮಸಂಸ್ಕೃತಿಯ ಅತ್ಯುನ್ನತ ಅರ್ಥಹೊಂದಿವೆ. ಪಂ. ಪುಟ್ಟರಾಜರು ಶರಣ, ಸ್ವಾಮಿ ಚರಿತ್ರೆಗಳಲ್ಲಿ ಇವನ್ನು ಎತ್ತಿ ಹೇಳಿದ್ದಾರೆ. ಉಳಿದೆಲ್ಲವುಗಳಿಗಿಂತ ಇವು ಮಿಗಿಲೆಂದು ತಿಳಿಸಲಾಗಿದೆ. ಇದೆಲ್ಲವು ಧರ್ಮಕ್ಕೆ ಮಾರ್ಗವನ್ನು ನಿರ್ಮಿಸುವಂತೆ ಇಲ್ಲಿ ಕಂಡಿದೆ.

ಬ್ಯಾಟಿ ರಾಮಣ್ಣ ಅವರ ಕಾವ್ಯಗಳಲ್ಲಿ ಧರ್ಮ ವಿವೇಚನೆಯು ವೈವಿಧ್ಯಮಯವಾಗಿದೆ. ಅವಧೂತ ಪರಂಪರೆಯ ತಾತ್ವಿಕ ವಿವೇಚನೆಗಳು, ವೀರಶೈವ, ಶೈವ ಪರಂಪರೆಯ ತಾತ್ವಿಕತೆಗಳು, ಶರಣ ದರ್ಶನದ ಪರಂಪರೆಯ ತಾತ್ವಿಕತೆ, ಶಿವಾನಂದ ಪರಂಪರೆಗಳು ಇವರಲ್ಲಿ ಮೇಳವಿಸಿವೆ. ಇವಲ್ಲದೆ ಜನಪದದ ದೇಶಿ ಧಾರ್ಮಿಕ ಆಲೋಚನೆಗಳು ಇವರಲ್ಲಿ ಮೂರ್ತಿಕರಿಸಿವೆ.

ಸ್ವಾಮಿಗಳ ಚರಿತ್ರೆಯಲ್ಲಿ ವೀರಶೈವ ಧರ್ಮ ತತ್ವಗಳ ವಿವೇಚನೆಯು ಕಂಡು ಬಂದಿದೆ. ಮೊದಲ ಪುರಾಣಕಾವ್ಯ 'ಗೌರಿಶಂಕರ ಚರಿತಾಮೃತ'-ಇಲ್ಲಿ ಗೌರಿಶಂಕರರು ವೇದಾಂತ ಜ್ಞಾನವನ್ನು ಹೊಂದಿ ಶಿವಾನಂದ ಪಂಪರೆಯ ತತ್ವವೇತ್ತರಾಗಿ ಪಾವನಗೊಳಿಸುವ ಧರ್ಮ ಕಾರ್ಯವನ್ನು ಮಾಡಿದರು. ಅದೇ ರೀತಿ ಶಿವಾನಂದ ಸ್ವಾಮಿಗಳು ಹೊಸದಾದ ಒಂದು ಧಾರ್ಮಿಕ ಪರಂಪರೆಗೆ ನಾಂದಿ ಹಾಡಿದರು. ಅವರ ವ್ಯಕ್ತಿತ್ವವು ಲೌಕಿಕದಲ್ಲಿ ಪ್ರಾರಂಭವಾಗಿ ಆಧ್ಯಾತ್ಮಿಕವಾಗಿ ಮುಂದುವರೆದು ಆನಂದದಲ್ಲಿ ಪರಿಪೂರ್ಣತೆಯನ್ನು ಪಡೆಯಿತು. ಶಿವಾನಂದ ಪರಂಪರೆಯ ಮಠಗಳಲ್ಲಿ ಧಾರ್ಮಿಕ ತತ್ವಾನುಸಂಧಾನ ಸತತವಾಗಿ ಇಂದಿಗೂ ನಡೆಯುತ್ತಿವೆ.

ಬ್ಯಾಟಿ ರಾಮಣ್ಣನವರು ಶೈವ ಪದ್ಧತಿಯ ಧಾರ್ಮಿಕ ವಿವೇಚನೆಯನ್ನು ಗುಡ್ಡಾಪುರ ದಾನಮ್ಮ ದೇವಿ, ಇಟಗಿ ಭೀಮಾಂಭಿಕೆ ಪುರಾಣದಲ್ಲಿ, ನೀಲಕಂಠೇಶ್ವರ ಪುರಾಣದಲ್ಲಿ , ಬಾದಾಮಿ ಬನಶಂಕರಿ ಪುರಾಣದಲ್ಲಿ ಶಿವನಲೀಲೆಗಳನ್ನು, ಶಕ್ತಿ ಸ್ವರೂಪಿಣಿ ಲೀಲೆಗಳನ್ನು ವರ್ಣಿಸಿದ್ದಾರೆ. ಆ ಮೂಲಕವಾಗಿ ಶಿವ ಪಾರಮ್ಯದ ಅನೇಕ ವಿಷಯಗಳನ್ನು ಎತ್ತಿ ಹೇಳಿದ್ದಾರೆ. ಶಿವನು, ಆತನ ಲೀಲೆಗಳು ಶೈವ ಪುರಾಣಗಳಲ್ಲಿ, ಆಗಮಗಳಲ್ಲಿ ಉಕ್ತಗೊಂಡಿವೆ. ಆ ಎಲ್ಲ ತತ್ವ ಪರಂಪರೆಗಳನ್ನು ಬ್ಯಾಟಿ ರಾಮಣ್ಣನವರು ತಿಳಿಸುತ್ತಾರೆ. ಶಿವನನ್ನು-

ಶಿವನ ನಾಮಾಮೃತವ ನೆನೆಯುತ
ಭವದೊಳಿಂದೆ ಅನಂತ ಶರಣರು
ಕವಿದ ಮನದಜ್ಞಾನ ಕಳೆಯುತ ಶಿವನೆ ತಾನಾಗಿ ॥

(ನೀಲಕಂಠೇಶ್ವರ ಪುರಾಣ ಪುಟ ೨೯೪)

ಎಂದು ಶಿವನ ಶರಣರ ಸ್ತುತಿಯನ್ನು ಎತ್ತಿ ಹೇಳಲಾಗಿದೆ. ಹಾಗೆಯೇ ಶಕ್ತಿ ರೂಪವನ್ನು ಶಾಕ್ತ ಆಗಮಗಳ ಹಿನ್ನೆಲೆಯಲ್ಲಿ ಇಟಗಿ ಭೀಮಾಂಬಿಕಾ ಪುರಾಣ ಮತ್ತು ಬನಶಂಕರಿ ಪುರಾಣವನ್ನು ವರ್ಣಿಸಲಾಗಿದೆ. ಶಕ್ತಿಯನ್ನು -

ಆದಿರೂಪಳು ನೀನೆ ಸಗುಣದ
ನಾದರೂಪಳು ನೀನೆ ನಿರ್ಗುಣ
ವೇದರೂಪಳು ನೀನೆ ಜಗದಿ ಸರ್ವ ವ್ಯಾಪಕಳೂ ।
ವೇದದಿಂದೀ ಜಗವ ಪಾಲಿಪ
ಆದಿ ಕಾರಣ ವಿಶ್ವ ಶಕ್ತಿಯೆ
ಸಾಧು ಮುನಿಜನ ಹೃದಯವಾಸಳೆ ಅಂಬೆ ಜಗದಂಬೇ ॥

(ಇಟಗಿ ಭೀಮಾಂಬಿಕಾ ಪುರಾಣ ಪುಟ : iv)

ಈ ರೀತಿಯಾದ ಶಕ್ತಿತತ್ವ-ಶಿವತತ್ವಗಳನ್ನು ಶೈವ ತಾತ್ವಿಕತೆಯ ಹಿನ್ನಲೆಯಲ್ಲಿ ವಿವರಿಸಲಾಗಿದೆ. ಹಾಗೆಯೇ ಧರ್ಮವನ್ನು ದಾರಿ ದೀಪವೆಂದು ತಿಳಿದು ವಿವರಿಸುವ ರಾಮಣ್ಣನವರು ಅತಿಯಾದ ತಾತ್ವಿಕ ವಿವೇಚನೆಗೆ ನಿಲ್ಲದೆ, ಅಗತ್ಯ ಮಾತ್ರದ ತಾತ್ವಿಕ ವಿವೇಚನೆಯನ್ನು ಮಾಡಿದ್ದಾರೆ.

ಅಂತರಂಗದ ಪರಿಶುದ್ಧತೆ ಪರಮಾತ್ಮನ ಕರುಣೆಯೆಂದು ತಿಳಿಯುವ ಈ ಕವಿಗಳು ನೈತಿಕ ಮೌಲ್ಯಗಳಿಗೂ ಧಾರ್ಮಿಕ ಪ್ರವೇಶವನ್ನು ನೀಡಿದ್ದಾರೆ.

ಕಾಶಿ ರಾಮೇಶ್ವರಕೆ ಪೋಗಲು
ಆಸೆ ಹೋಗದು ಗುರುವೆ ಮನಸ್ಸಿನ
ದೋಷವರ ಕಳೆವಂತ ಕ್ಷೇತ್ರವ ಕಾಣೆನಾ ಜಗದೀ
ನಾಶವಾಯಿತು ಮನದ ಆಸೆಯು
ನಿರಾಸೆ ವಸ್ತುವೇ ನಿನ್ನ ಕಾಣಲು ॥

(ಗೌರಿ ಶಂಕರ ಚರಿತಾಮೃತ ಪೀಠಿಕೆ)

ಈ ರೀತಿಯಾಗಿ ಅಂತರಂಗ ಪರಿಶುದ್ಧಿಯೇ ಧರ್ಮದ ಮುಖ್ಯ ವಿಧಾನವೆಂದು ತಿಳಿಸುತ್ತಾ ಧರ್ಮ ತತ್ವಗಳ ವ್ಯಕ್ತಿಗತ ಪರಿಶುದ್ಧಿಯನ್ನು ವಿವರಿಸಿದ್ದಾರೆ. 'ಧೃ' ಎಂದರೆ 'ಧರಿಸು' ಎಂಬ ಧರ್ಮದ ಮೂಲ ಅಂಶವನ್ನು ಇಲ್ಲಿ ತಿಳಿಸಲಾಗಿದೆ. ಬ್ಯಾಟಿ ರಾಮಣ್ಣನವರು ಆಧ್ಯಾತ್ಮಿಕ ಪರಿಸರದಲ್ಲಿದ್ದುದರಿಂದ ಆಧ್ಯಾತ್ಮಿಕವಾದ ತತ್ವಗಳಿಗೆ ಬದ್ಧವಾದ ಕಾವ್ಯಗಳನ್ನು ಬರೆದರು. ಅವರ ಅಂಬೇಡ್ಕರ ಪುರಾಣವು ವಿಶ್ವ ವಿಭೂತಿಯ ಚರಿತ್ರೆಯಾಗಿ ವಿಶ್ವ ಮಾನವೀಯ ಧರ್ಮವನ್ನು ಪ್ರಕಟಿಸುವುದು.

ಗದಗ ಜಿಲ್ಲೆಯ ಆಧುನಿಕ ಪುರಾಣ ಕಾವ್ಯಗಳಲ್ಲಿ ಸಿದ್ಧಪುರುಷನ ಮೂಲಕ ಒಂದು ಸಮುದಾಯದ ನಂಬಿಕೆ, ಆಚಾರ-ವಿಚಾರ ಮುಂತಾದವುಗಳು ಗೋಚರಿಸುತ್ತವೆ. ಈ ನಿಟ್ಟಿನಲ್ಲಿ ಹಲವು ಕಾವ್ಯಗಳಲ್ಲಿ ಈ ಬಗೆಯ ಧಾರ್ಮಿಕ ನಂಬಿಕೆಗಳು ಕಂಡುಬರುತ್ತವೆ. ವಿಶೇಷವಾಗಿ ವೀರಶೈವ ಧರ್ಮದ ವಿವಿಧ ಛಾಯೆಗಳು ಹೆಚ್ಚಾಗಿ ಈ ಪುರಾಣ ಕಾವ್ಯದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ. ಉದಾ: ಶ್ರೀ ವಾಸುದೇವ ಹೂಲಿ ಅವರು ಬರೆದಿರುವ 'ಶ್ರೀ ಗುರು ರುದ್ರೇಶ ಲೀಲಾ ವಿಲಾಸಂ' ಪುರಾಣ ಕಾವ್ಯದಲ್ಲಿ ವೀರಶೈವ ಧರ್ಮದ ತತ್ವಗಳು ಕಥೆಗೆ ಪೂರಕವಾಗಿ ಬಂದು ಆ ಧರ್ಮದ ತಿರುಳನ್ನು ಹೇಳುತ್ತವೆ. ಇಲ್ಲಿ 'ರುದ್ರೇಶ ತಾತ'ನವರು ಆಧ್ಯಾತ್ಮಿಕ ಭಕ್ತಿಯನ್ನು ಹೇಳುವ ಸಂದರ್ಭದಲ್ಲಿ ಅವರು ಅಷ್ಟಾವರಣದ ಲಿಂಗಮಹಿಮೆಯನ್ನು ಹೇಳಿ ಅಷ್ಟಾವರಣದಲ್ಲಿ ಜಂಗಮ ಮಹಿಮೆ, ಭಸ್ಮ ಮಹಿಮೆ, ರುದ್ರಾಕ್ಷಿ ಮಹಿಮೆ, ಮಂತ್ರ ಮಹಿಮೆ, ಪಾದೋದಕ ಮಹಿಮೆ, ಪ್ರಸಾದ ಮಹಿಮೆ, ಮುಂತಾದವುಗಳ ಮೂಲಕ ವೀರಶೈವ ಧರ್ಮದ ಸಾರವನ್ನು ಪುರಾಣದ ಮೂಲಕ ಈ ಕೃತಿಯು ಬೋಧಿಸುತ್ತದೆ.

ಹಸುಳೆ ಕೇಳೈ ಭಸ್ಮ ಮಹಿಮೆಯ
ನುಸುರುತಿಹನೈ ಅರಿತು ನಡೆಯಲು
ಶಶಿಯಧರನಿಜ ಮೆಚ್ಚಿ ತನ್ನಲ್ಲಿ ಕರೆದುಕೊಳ್ಳುವನು ॥
ವಸನ ದೇಹದ ರಕ್ಷೆ ಗೈವೊಲು

ಭಸಿತ ಭಕ್ತನ ರಕ್ಷೆ ಗೈಯುತ
ವ್ಯಸನ ಕಳುವುದು ದೇವನೊಲುಮೆಗೆ ದಿವ್ಯ ಸಾಧನವು ॥

(ಶ್ರೀ ಗುರು ರು. ಲೀ.ವಿ. ಪುಟ : ೭೮, ಪದ್ಯ : ೭)

ಎಂದು ಹೇಳವಲ್ಲಿ ಕವಿಯು ಪುರಾಣದಲ್ಲಿ ಭಸ್ಮದ ಮಹಿಮೆಯನ್ನು ಹೇಳಿದ್ದಾನೆ. ಅದೇ ರೀತಿಯಾಗಿ ಪ್ರಸಾದಿ, ಭಕ್ತ, ಮಹೇಶ, ಪ್ರಾಣಲಿಂಗ, ಐಕ್ಯ, ಶರಣ ಮುಂತಾದ ವಿಷಯಗಳ ಕುರಿತು ಚರ್ಚಿಸಿದ್ದಾರೆ. ಹೀಗೆ ಗದಗ ಜಿಲ್ಲೆಯ ಆಧುನಿಕ ಪುರಾಣಗಳಲ್ಲಿ ಹೆಚ್ಚಿನ ಪುರಾಣಗಳು ಈ ವೀರಶೈವ ಧರ್ಮದ ತಿರುಳನ್ನು ಕಥಾಸಾರದಲ್ಲಿ ಸಾಂದರ್ಭಿಕವಾಗಿ ತರುವುದರ ಮೂಲಕ ಆ ಧರ್ಮದ ಮಹತ್ವವನ್ನು ಸಾರ್ವತ್ರಿಕಗೊಳಿಸಲು ಪ್ರಯತ್ನಿಸುತ್ತವೆ.

ಹರಿಹರ, ರಾಘವಾಂಕ, ಚಾಮರಸ ಹಾಕಿಕೊಟ್ಟ ಮಾರ್ಗದಲ್ಲಿ ಹಲವು ಕವಿಗಳು ಸಾಗಿದ್ದಾರೆ. ಜೊತೆಗೆ ಅವರ ಪದ್ಯದ ತುಣುಕುಗಳನ್ನು ತಮ್ಮ ಪದ್ಯದಲ್ಲಿ ಬೆರೆಸಿಕೊಂಡಿದ್ದಾರೆ. ಉದಾ : ಚಾಮರಸನ ಪ್ರಭುಲಿಂಗ ಲೀಲೆಯಲ್ಲಿರುವ ಪದ್ಯವನ್ನು ಕವಿ ಶ್ರೀ ವಾಸುದೇವ ಹೂಲಿ ಅವರು ಸ್ವೀಕರಿಸಿ ತಮ್ಮದೇ ಆದ ಧಾಟಿಯಲ್ಲಿ ಅದನ್ನು ಬದಲಾಯಿಸಿ ಹೇಳಿದ್ದಾರೆ.

ಸತ್ತವರ ಕಥೆಯಲ್ಲ ಮತ್ತಿದು
ಹೊತ್ತು ಹೋಗಲು ಕೇಳ್ವುದಲ್ಲವು
ಸತ್ಯ ಮೂರುತಿ ಗುರುವು ಶ್ರೀ ಮರುಕಂಬಿ ತಾತನದು ॥

(ಶ್ರೀ ಗು.ರು.ಲೀ.ವಿ. ಪುಟ: ೬, ಪದ್ಯ : ೨೩)

ಎಂಬಲ್ಲಿ ಚಾರಿತ್ರಿಕವಾದ ಮತದ ಸಂಘರ್ಷವು ರೂಪತಾಳುತ್ತದೆ. 'ಸತ್ತವರ ಕಥೆಯಲ್ಲ' ಎನ್ನುವಲ್ಲಿ ಜೈನಧರ್ಮದವರಲ್ಲಿ ಭವಾವಳಿಗಳ ಬಗ್ಗೆ ಇರುವ ನಂಬಿಕೆಯನ್ನು ಎತ್ತಿ ತೋರಿಸಿ, ಇದು ಅಂತಹ ಕಥೆಯಲ್ಲ ಎಂದು ಹೇಳುವಲ್ಲಿ ಮತ್ತು ಮನರಂಜನೆಗೆ ಅಥವಾ ಸಂತೋಷಕ್ಕೆ ಕೇಳುವಂತಹ ಕಥೆಯಲ್ಲ. ಇದು ಸತ್ಯಮೂರ್ತಿಯಾದ ನಿಜ ಶರಣನ ಕಾಯಕ ತತ್ವವನ್ನು ಬೋಧಿಸುವ ವೀರಶೈವ ಕೃತಿಯೆನ್ನುವುದನ್ನು ಸೂಚ್ಯವಾಗಿ ಕವಿ ಇಂತಹ ಕಡೆ ತಂದಿದ್ದಾರೆ.

ಪ್ರಾಚೀನ ಕನ್ನಡ ಕಾವ್ಯಕ್ಕೆ ಮತಧರ್ಮವೇ ಕೇಂದ್ರವಾಗಿತ್ತು. ಅದನ್ನು ಆಧುನಿಕ ಪುರಾಣ ಕಾವ್ಯಗಳು ಮುಂದುವರಿಸಿಕೊಂಡು ಬಂದಿವೆ. ಕವಿಗಳು ಹಲವು ಮತಗಳಿಗೆ ಸೇರಿದ್ದರು. ಅವರು ತಮ್ಮ ತಮ್ಮ ಧರ್ಮಗೋಸ್ಕರ ಕಾವ್ಯ ರಚಿಸಿದ್ದರು. ಅದುವೇ ಅವರ ಧಾರ್ಮಿಕ ಕಾವ್ಯವಾಗಿವೆ. ಉದಾ: ಜೈನ ಧರ್ಮದ ಮಾರ್ಗಹಿಡಿದು ಪಂಪ-ರನ್ನರು ಅಲೌಕಿಕ ಕಾವ್ಯಗಳುನ್ನು ರಚಿಸಿದರು. ಅದೇ ರೀತಿ ವೀರಶೈವರಲ್ಲಿ ಹರಿಹರ, ರಾಘವಾಂಕ, ಷಡಕ್ಷರ ಆ ಮಾರ್ಗ ಮೂಲಕ ವೀರಶೈವ ಧರ್ಮವನ್ನು ಎತ್ತಿಹಿಡಿಯಲು ಧರ್ಮ ಕಾವ್ಯಗಳನ್ನು ರಚಿಸಿದ್ದರು. ಹಾಗೆಯೇ ಈ ಆಧುನಿಕ ಕಾಲದಲ್ಲಿಯೂ ಸಹ ಪುರಾಣಕಾವ್ಯದಲ್ಲಿ ಆ ಮಾರ್ಗ ಮುಂದುವರೆದುಕೊಂಡು ಬಂದಿದೆ. ವಚನ ಚಳುವಳಿಯ ಮೂಲಕ ಅಥವಾ ಅದರ ಫಲವಾಗಿ

ವೀರಶೈವ ಧರ್ಮ ಮತನಿಷ್ಠೆಯಲ್ಲಿ ಇತರ ಧರ್ಮಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿದೆ. ಯಾಕೆಂದರೆ ಈ ಆಧುನಿಕ ಪುರಾಣ ಕಾವ್ಯದಲ್ಲಿ ಬರುವ ಹಲವಾರು ಕಥಾನಾಯಕರು ವೀರಶೈವ ಧರ್ಮದವರೆ ಆಗಿದ್ದಾರೆ. ಜೊತೆಗೆ ಅವರು ಸ್ವಾಮಿಗಳಾಗಲು ಅವರಿಗೆ ತರಬೇತಿಯನ್ನು ನೀಡುವ ಸಂಸ್ಥೆ ಶಿವಯೋಗ ಮಂದಿರದಲ್ಲಿದೆ. ಹೀಗಾಗಿ ಅವರು ವೀರಶೈವ ಧರ್ಮದ ಜಾಗ್ರತಿಗಾಗಿ ಜನ್ಮವೆತ್ತಿದವರು ಎಂದು ಇಲ್ಲಿ ಆಧುನಿಕ ಪುರಾಣಗಳು ಒತ್ತಿ ಹೇಳುತ್ತಿವೆ. ಕೆಲವು ಪುರಾಣಗಳು ಮಾತ್ರ ಚಾರಿತ್ರಿಕವಾದ ವ್ಯಕ್ತಿಯನ್ನು ಹಾಗೂ ಬೇರೆ ಸಮುದಾಯಕ್ಕೆ ಸೇರಿದ ಸಂತ ಮಹಾಂತರನ್ನು ಕುರಿತು ಹೇಳಿವೆ.

ಹೀಗಾಗಿ ವಚನ ಚಳುವಳಿಯ ನಂತರ ಅದರ ಪುನರುತ್ಥಾನಕ್ಕಾಗಿ ವೀರಶೈವ ಧರ್ಮ ಜಾಗೃತಿಯಾಗಿರುವ ಪರಿಯನ್ನು ಇಲ್ಲಿ ನಾವು ಗ್ರಹಿಸಬಹುದಾಗಿದೆ. ಷಟ್‌ಸ್ಥಲಗಳಲ್ಲಿ ಮಾಹೇಶ್ವರವೆಂಬ ಸ್ಥಲವೊಂದನ್ನು ಕಲ್ಪಿಸುವ ಮೂಲಕ ವೀರಶೈವ ತಾತ್ತ್ವಿಕತೆಗೆ ಭದ್ರಬುನಾದಿಯನ್ನು ಹಾಕಲಾಗಿದೆ. ಈ ನಿಟ್ಟಿನಲ್ಲಿ ಕರವೀರಪ್ಪ ಅಂಗಡಿ ಅವರ 'ಶ್ರೀ ಗುರು ಕರಿಬಸವಯೋಗಿ ಲೀಲೆ', 'ಕಾಯಕಯೋಗಿ ಶ್ರೀ ರುದ್ರಮುನಿ ಶಿವಯೋಗೀಶ ಲೀಲಾಮೃತ', 'ಮುರಗೋಡ ಮಹಾಂತ ಶಿವಯೋಗೀಶ ಚರಿತಾಮೃತಂ' ಮುಂತಾದ ಪುರಾಣ ಕಾವ್ಯಗಳಲ್ಲಿ ಮತ ಆರಂಭಗೊಳ್ಳುತ್ತದೆ. ಸಾಮಾನ್ಯವಾಗಿ ಪುರಾಣ ಪುರುಷನ ಹುಟ್ಟಿಗೆ ಇದು ಕಾರಣವಾಗುತ್ತದೆ. 'ಭರತಖಂಡದಲ್ಲಿ ವೀರಶೈವ ಧರ್ಮದ ಕೀರ್ತಿ ಕಡಿಮೆಯಾಗಲು ಶಿವನ ಇಚ್ಛೆಯಂತೆ ಧರ್ಮದ ಉದ್ಧಾರಕ್ಕೆ ಜನಿಸಿ ಬಂದರು' ಎಂಬುವುದು. ಇದು ಆ ಧರ್ಮದ ಪ್ರಚಾರಕ್ಕಾಗಿ ಅಥವಾ ಆ ಧರ್ಮದ ಮಹಿತಿಯನ್ನು ಎತ್ತಿ ಹೇಳುವುದಕ್ಕಾಗಿ ಪುರಾಣ ಕಾವ್ಯಗಳಲ್ಲಿ ಈ ರೀತಿ ಕಾಣಿಸುತ್ತದೆ. ಮುಂದುವರೆದು ಪುರಾಣ ಪುರುಷರು ಹುಟ್ಟಿ ಬರಲು ಆಗಿನ ಕಾಲದ ಸ್ಥಿತಿಗತಿಯನ್ನು ಹೇಳುವ ಮೂಲಕ ತಮ್ಮ ಧರ್ಮ ಸ್ಥಿತಿಯನ್ನು ಪರಿಚಯಿಸುತ್ತಾರೆ.

ವೀರಶೈವಸುತತ್ತ್ವ ಸುಧೆಯನು
ಹೀರಿಕೊಳ್ಳದೆ ವೇಷಮಂತ್ರದಿ
ವೀರಗುರುವರರಂತೆ ನಟಿಸುತ ಶಿಷ್ಯ ಸಂತತಿಗೆ ॥
ತೋರಿ ಗಾರುಡಿತನವನವರಿಂ
ಹೀರಿ ಹಣವನು ತಮ್ಮ ಭೋಗಕೆ
ಸೂರಿಗೊಳ್ಳುವರಯ್ಯ ಗುರು ಜನರಿಂದು ನಾಡಿನೊಳು ॥

(ಮುರುಗೋಡ ಮಹಾಂತ ಶಿವಯೋಗಿ ಚರಿತ್ರೆ ಪುಟ : ೧೨, ಪದ್ಯ : ೧೭)

ಹೀಗೆ ಸಮಾಜದ ಸ್ಥಿತಿಯನ್ನು ಹೇಳುವ ಮೂಲಕ ಪುರಾಣದಲ್ಲಿ ಧಾರ್ಮಿಕತೆ ನುಸುಳುತ್ತದೆ.

ಆಧುನಿಕ ಪುರಾಣ ಕಾವ್ಯಗಳಲ್ಲಿ ಈ ಅಂಶವು ಇನ್ನೂ ಹೆಚ್ಚಾಗಿ ಗೋಚರಿಸುತ್ತದೆ. ವೀರಶೈವ ಧರ್ಮದ ಒಳಪಂಗಡವಾದ ಕುರುಹಿನ ಶೆಟ್ಟಿ ಸಮುದಾಯದ ಪ್ರಾಚೀನತೆಯನ್ನು

ಹಾಗೂ ಗುರುಪರಂಪರೆ ಮುಂತಾದ ಅಂಶವನ್ನು ನೀಲಕಂಠ ಕವಿಯು ಬರೆದಿರುವ 'ಶ್ರೀ ನೀಲಕಂಠೇಶ್ವರ ಪುರಾಣ'ದಲ್ಲಿ ಕಾಣುತ್ತೇವೆ. ಕುರುಹಿನ ಶೆಟ್ಟಿ ಸಮುದಾಯದ ಸುತ್ತಲೇ ಇಲ್ಲಿಯ ಕಥೆ ಅನಾವರಣಗೊಳ್ಳುತ್ತದೆ. ಪರಮೇಶ್ವರನು ೬೬ ಕೋಟಿ ರಾಕ್ಷಸ ಸೈನ್ಯ ನಾಶಮಾಡಿದ ೬೬ ಜನ ರುದ್ರರಿಗೆ, ವೃಷಭ ರೂಪವನ್ನು ನೀಡಿ ಅವರಿಂದ ಲೋಕಕಲ್ಯಾಣವನ್ನುಂಟು ಮಾಡಲು ಹೇಳಿದ ಕಥೆಯೇ ಇಲ್ಲಿನ ಪ್ರಮುಖ ಹಂದರ. ಹೀಗಾಗಿ ಕವಿ ಇಲ್ಲಿ ಆ ಧರ್ಮದ ತತ್ವವನ್ನು, ಪ್ರಚಾರವನ್ನು ಸೂಕ್ಷ್ಮವಾಗಿ ಕತೆಯ ಜೊತೆ ಬೆರೆಸಿ ತನ್ನ ಧಾರ್ಮಿಕ ನಂಬಿಕೆಯನ್ನು ವ್ಯಕ್ತಪಡಿಸಿದ್ದಾನೆ.

ಕುರುಹಿನಶೆಟ್ಟಿ ಧರ್ಮದ ಮೂಲ
ಕುರುಹಿನಶೆಟ್ಟಿ ಧರ್ಮದ ಸಮಯ
ಕುರುಹಿನಶೆಟ್ಟಿ ಧರ್ಮದ ಹಿರಿಮೆಬೋಧಿಸಿ ಹಲವರು ॥
ಗುರು ಪರಂಪರೆಯುಳ್ಳ ಹೊತ್ತಿಗೆ
ವರ ಶ್ರೀ ನೀಲಕಂಠವೆಂಬ
ಪರಿಕಲ್ಪಿತ ಪುರಾಣದಾಧಾರವನು ಕೊಡುತಿಹರು ॥

(ಶ್ರೀ ನಿ.ಪು. ಪದ್ಯ : ೫೩೨, ಪುಟ : ೧೪೧.)

ಎಂದು ಕವಿ ಹೇಳುವಲ್ಲಿ ಕುರುಹಿನಶೆಟ್ಟಿ ಧರ್ಮದ ವಿವಿಧ ಛಾಯೆಗಳು ಗೋಚರಿಸುತ್ತವೆ.

ಒಟ್ಟಿನಲ್ಲಿ ಪ್ರಾಚೀನ ಕನ್ನಡ ಕಾವ್ಯದಿಂದ ಇಲ್ಲಿಯರೆಗಿನ ಹಲವು ಪುರಾಣ ಕಾವ್ಯಗಳಲ್ಲಿ ಸೂಕ್ಷ್ಮವಾಗಿ ವಿಶ್ಲೇಷಿಸಿದರೆ ಮತಪ್ರಚಾರ ಹಾಗೂ ಮತಧರ್ಮಗಳ ಸಂಘರ್ಷ ಕಂಡು ಬರುತ್ತವೆ. ಆದುದರಿಂದ ಆಧುನಿಕ ಪುರಾಣಗಳಲ್ಲಿಯೂ ಸಹ ಧಾರ್ಮಿಕ ನೋಟವು ತನ್ನ ಲಯವನ್ನು ಬದಲಿಸಿಕೊಂಡು, ಆ ಧರ್ಮ ಸಾರ್ವತ್ರಿಕವಾಗಕೇಂಬ ಆಶೆಯವನ್ನು ಇಟ್ಟುಕೊಂಡು ಈ ರೀತಿಯಲ್ಲಿ ಮೂಡಿಬಂದಿದೆ.

೧೨ನೆಯ ಶತಮಾನದಲ್ಲಿ ಹಲವು ಧರ್ಮಗಳು ತಮ್ಮ ತತ್ವಗಳನ್ನು ಬೋಧಿಸಲು ಕರ್ನಾಟಕದಲ್ಲಿ ತುದಿಗಾಲ ಮೇಲೆ ನಿಂತಿದ್ದವು. ಬೌದ್ಧ, ಜೈನ, ಶೈವ ಮೊದಲಾದ ಧಾರ್ಮಿಕ ಮನೋಭಾವನೆಯ ಹಿನ್ನೆಲೆಯಲ್ಲಿ ತಮ್ಮ ಛಾಪನ್ನು ಮೂಡಿಸಿದವು. ಇದೇ ಸಂದರ್ಭದಲ್ಲಿ ವೀರಶೈವ ಧರ್ಮವು ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡಿತು. ಇದಕ್ಕೆ ಪೂರಕವಾಗಿ ವೀರಶೈವ ಪುರಾಣಗಳು ಹುಟ್ಟಿಕೊಂಡವು.

ಒಟ್ಟಿನಲ್ಲಿ ೧೨ನೆಯ ಶತಮಾನದಲ್ಲಿ ಕರ್ನಾಟಕವು ಹಲವು ಬಗೆಯ ಮತಗಳ ಹೋರಾಟದ ಕಣವಾಗಿತ್ತು. ವೀರಶೈವ ಪುರಾಣಗಳ ಹುಟ್ಟು ವೈದಿಕ ಹಾಗೂ ಜೈನ ಧರ್ಮಗಳ ಪ್ರಾಬಲ್ಯಗಳಿಂದ ಆಗಿದೆಯೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ವೀರಶೈವ ಧರ್ಮ ೧೨ನೇ ಶತಮಾನದಲ್ಲಿ ಆಗ ಪ್ರಬಲವಾಗಿದ್ದ ವೈದಿಕ ಹಾಗೂ ಜೈನಧರ್ಮಗಳೊಡನೆ ಸ್ಪರ್ಧಿಸಿಯೇ ಮೇಲೆದ್ದು

[illegible]

ಕಾಣಿಸಿಕೊಂಡಿತು. ವೀರಶೈವ ಧರ್ಮದ ಉದ್ಧಾರಕ್ಕಾಗಿ, ಅದರ ಉದಾತ್ತ ತತ್ವಗಳ ಪ್ರಚಾರಕ್ಕಾಗಿ ವೀರಶೈವ ಪುರಾಣಗಳು ಹೊರಬಂದವು. ಪರಧರ್ಮಗಳೊಡನೆ ಸ್ಪರ್ಧೆ ಅನಿವಾರ್ಯವಾದಾಗ; ಸ್ವಧರ್ಮ ರಕ್ಷಣೆಗಾಗಿ, ಪರಧರ್ಮ ಖಂಡನೆ, ಸ್ವಧರ್ಮ ಮಂಡನೆಯಲ್ಲಿ ಎಲ್ಲಾ ಧರ್ಮದವರು ಪ್ರವೃತ್ತರಾದರು. ವೀರಶೈವರು ಇದಕ್ಕೆ ಹೊರತೇನಲ್ಲ.

ವೈದಿಕ ಜೈನ ಪುರಾಣಗಳಂತೆ ವೀರಶೈವ ಪುರಾಣಗಳು ಗಣನೀಯ ಸಂಖ್ಯೆಯಲ್ಲಿವೆ. ಸಂಸ್ಕೃತ, ತೆಲಗು, ತಮಿಳು ಮೊದಲಾದ ಭಾಷೆಗಳಲ್ಲೂ ಇವು ತಲೆದೋರುತಿವೆಯಾದರೂ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಇವುಗಳ ಕೃಷಿ ಉತ್ತಮವಾಗಿದೆ. ಪುರಾಣಗಳ ಅಧ್ಯಯನದಲ್ಲಿ ಹುಡುಕುತ್ತಾ ಹೋದರೆ ಮತ್ತಷ್ಟು ಪುರಾಣಗಳು ಸಿಗುತ್ತವೆ. ಇವುಗಳನ್ನು ಏಕವ್ಯಕ್ತಿ ಪ್ರಧಾನ ಪುರಾಣಗಳು, ಬಹುವ್ಯಕ್ತಿ ಪ್ರಧಾನ ಪುರಾಣಗಳು ಮತ್ತು ತತ್ವಪ್ರಧಾನ ಪುರಾಣಗಳು ಎಂದು ಮೂರು ಗುಂಪುಗಳಾಗಿ ವರ್ಗೀಕರಿಸಬಹುದಾಗಿದೆ.

ಏಕವ್ಯಕ್ತಿ ಪ್ರಧಾನ ಪುರಾಣಗಳನ್ನು ಬಸವಯುಗದ ಮಹಾಶರಣರ ಪುರಾಣಗಳು, ವಿಜಯನಗರದ ಅರಸರ ಸುವರ್ಣಯುಗದ ಪುರಾಣಗಳು ಮತ್ತು ನೂತನ ಶರಣರ ಪುರಾಣಗಳು ಎಂದು ಮೂರು ಭಾಗ ಮಾಡಬಹುದಾಗಿದೆ.

ವೀರಶೈವ ಸಿದ್ಧಾಂತದ ಪ್ರತಿಪಾದನೆಯನ್ನು ಯಥೇಚ್ಛವಾಗಿ ಮಾಡಿವೆ. ಗುರು, ಲಿಂಗ, ಜಂಗಮ, ಪಾದೋದಕ ಪ್ರಸಾದ ಹಾಗೂ ವಿಭೂತಿ ಮಹಿಮೆಗಳು ಸಂಪೂರ್ಣವಾಗಿ ಹಾಸು ಹೊಕ್ಕಾಗಿವೆ. ಹಾಗೂ ಅಲ್ಲಲ್ಲಿ ವೈಷ್ಣವ, ಶೈವ, ಅದ್ವೈತ ಮತ ಸಿದ್ಧಾಂತಗಳು ಕೂಡಾ ಈ ಕಾವ್ಯಗಳಲ್ಲಿ ಮೂಡಿ ಬಂದಿವೆ.

ಪಂಡಿತ ವಾಸುದೇವ ಹೂಲಿಯವರು ಬರೆದಿರುವ ಮೈಲಾರಲಿಂಗನ ಮಹಿಮೆ ಇದು ಶಿವನ ಲೀಲೆಗಳನ್ನು ಕುರಿತು ಅಭಿಪ್ರಾಯವನ್ನು ತಿಳಿಸುತ್ತದೆ. ಮೈಲಾರ ಲಿಂಗನ ಕಥೆಯನ್ನು ಸಾಕ್ಷಾತ್ ಋಷಿಗಳೇ ಇಲ್ಲಿ ಶಿವನ ಕಥೆಯನ್ನು ವಿವರಿಸುತ್ತಾರೆ. ಪ್ರಸ್ತುತ ಈ ಪುರಾಣ ಕಾವ್ಯವು ದ್ವೈತ, ಅದ್ವೈತ ಹಾಗೂ ವಿಶಿಷ್ಟಾದ್ವೈತ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡಿದೆ. ಹಾಗೂ ಆಧ್ಯಾತ್ಮದ ಹಿನ್ನೆಲೆಯಿಂದ ರಚಿಸಿದ ಇವರ ಪುರಾಣಗಳು ತುಂಬಾ ಅರ್ಥಪೂರ್ಣವಾಗಿ ಧಾರ್ಮಿಕ ಸ್ವರೂಪವನ್ನು ಪಡೆದುಕೊಂಡಿವೆ.

ಶ್ರೀಮದ್ ಉಜ್ಜಯಿನಿ ಸದ್ಗುರು ಶ್ರೀ ಸಿದ್ಧಲಿಂಗ ಭಗವತ್ಪಾದ ಪುರಾಣವನ್ನು ರಾಜ್ಯ ಪ್ರಶಸ್ತಿ ಪುರಸ್ಕೃತ ಪಂ. ರಾಜಗುರು ಶ್ರೀ ಗುರುಸ್ವಾಮಿ ಕಲಕೇರಿಯವರು ರಚಿಸಿದ್ದಾರೆ. ಇವರ ಪುರಾಣಗಳು ಮುಖ್ಯವಾಗಿ ವೀರಶೈವ ಧರ್ಮದ ಸಿದ್ಧಾಂತದ ಹಿನ್ನೆಲೆಯಲ್ಲಿ ರಚಿತವಾಗಿವೆ. ತಮ್ಮ ಪುರಾಣ ಕಾವ್ಯಗಳಲ್ಲಿ ವೀರಶೈವ ಗುರುಗಳ, ಆರಾಧ್ಯದೈವದ ದೇವತಾ ಸ್ತುತಿ, ಗುರು, ಶಿವ-ಶಕ್ತಿ, ಪಂಚಾಚಾರ್ಯ, ಶಿವಾಚಾರ್ಯ ಮುಂತಾದ ವೀರಶೈವ ಧರ್ಮದ ಸಿದ್ಧಾಂತಗಳನ್ನು

ಪ್ರತಿಪಾದಿಸಿದ್ದಾರೆ. ಈ ಪುರಾಣ ಕಾವ್ಯದಲ್ಲಿ ಗುರು, ಲಿಂಗ, ಜಂಗಮ ವಿಭೂತಿ, ಮಂತ್ರ ರುದ್ರಾಕ್ಷಿ ಮಹಿಮೆಯನ್ನು ತಿಳಿಸುವಾಗ ಕತೆಗಳನ್ನು ತುಂಬಾ ಸ್ವಾರಸ್ಯಕರವಾಗಿ ತಿಳಿಸಿದ್ದಾರೆ.

ಕಲಬುರ್ಗಿ ಪುರುಷ ಮಠದ ಶ್ರೀಗುರು ಚನ್ನಮಲ್ಲೇಶ್ವರರ ಪುರಾಣದಲ್ಲಿ ವೀರಶೈವಾಚರಣೆಗಳಾದ ಪಂಚಾಚಾರ, ಪಾದೋದಕ, ಪ್ರಸಾದ, ಭಕ್ತ, ಪ್ರಾಣಲಿಂಗ, ಐಕ್ಯ, ಶರಣ, ಮಹೇಶ ಮುಂತಾದ ಮಹಿಮೆಗಳಿಗೆ ಕಲಿಗಣನಾಥನ ಕಥೆ, ಶಿವಶರಣೆ ಕಾರಿಕಾಲಮ್ಮೆಯರ ಕಥೆ. ಮರುಳ ಶಂಕರದೇವರ ಕಥೆ, ಮಡಿವಾಳ ಮಾಚಯ್ಯನ ಕಥೆ, ಬಸವಣ್ಣನವರ ಭಕ್ತಿಯ ಕಥೆ ಮುಂತಾದ ಕಥೆಗಳನ್ನಿಟ್ಟುಕೊಂಡು ವಿವರಿಸುವುದು ಧಾರ್ಮಿಕ ಸಂವಹನಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಮತ್ತು ಪವಾಡಗಳಲ್ಲಿ ಕೂಡ ಧಾರ್ಮಿಕ ಮನೋಭಾವನೆಯನ್ನು ಕಾಣಬಹುದು. ೯೬ ಸಾವಿರ ಜಂಗಮರಾರಾಧನೆ ಮಾಡಿದ್ದು. ಜಂಗಮನಿಗೆ ಶ್ರೀ ಶೈಲ ಮಲ್ಲಿಕಾರ್ಜುನನ ದರ್ಶನ ಮಾಡಿಸಿದ ಪವಾಡದಲ್ಲಿ ಧಾರ್ಮಿಕ ಸ್ಥಿತಿಯನ್ನು ಕಂಡುಕೊಳ್ಳಬಹುದು.

ಪಂ. ರಾಜಗುರು ಗುರುಸ್ವಾಮಿಯವರೇ ಬರೆದಿರುವ ಸುಕ್ಷೇತ್ರ ಶಾಖಾಪೂರ ಬಸವಾಂಬಾದೇವಿ ಪುರಾಣ ಕಾವ್ಯದಲ್ಲಿಯೂ ಕೂಡಾ ಬಸವಾಂಬೆಯೂ ಶ್ರೀ ವಿಶ್ವಾರಾಧ್ಯ ಗುರುಗಳಿಂದ ರುದ್ರಾಕ್ಷಿ ಮಾಲೆ ಪಡೆದು ದೀಕ್ಷೆ ಪಡೆಯುತ್ತಾಳೆ. ಇಲ್ಲಿಯೂ ಕೂಡಾ ವೀರಶೈವ ಧರ್ಮ ಸಿದ್ಧಾಂತಗಳು ಪ್ರತಿಪಾದನೆಯಾಗಿವೆ.

ಆಧುನಿಕ ವೀರಶೈವ ಸಂಸ್ಕೃತಿಯನ್ನು ನಿರ್ಮಿಸಿದ ಬಹುಪಾಲು ಶ್ರೇಯಸ್ಸು ಆರಂಭದಲ್ಲಿ ವೀರಶೈವ ಮಹಾಸಭೆ ಮತ್ತು ಶಿವಯೋಗ ಮಂದಿರ ಇವುಗಳಿಗೆ ಸಲ್ಲುತ್ತದೆ. ಹಾನಗಲ್ಲ ಕುಮಾರ ಸ್ವಾಮಿಗಳ ದೂರಗಾಮಿ ತಾತ್ವಿಕ ವಿವೇಚನೆಯನ್ನು ಸಮರ್ಥವಾಗಿ ಮುನ್ನೆಡಸಿದ ಶ್ರೇಯಸ್ಸು ಶ್ರೀ ಸದಾಶಿವ ಶಾಸ್ತ್ರಿಗಳಿಗೆ ಸಲ್ಲುತ್ತದೆ. ಅವರ ಜೀವನವೇ ಒಂದು ಲೀಲೆಯಂತೆ ತಾತ್ವಿಕ ಸ್ವರೂಪದ್ದಾಗಿತ್ತೆಂದು ಶ್ರೀ ಪಂಡಿತ ಸೋಮಶೇಖರಶಾಸ್ತ್ರಿ ಪುರಾಣಿಕಮಠ ಅವರು ಚಿತ್ರಿಸಿದ್ದಾರೆ. ಸ್ವತಃ ಸದಾಶಿವಶಾಸ್ತ್ರಿಗಳು ಸದಾಶಿವಾನಂದ ಸ್ವಾಮಿ ಪುರಾಣ ಮೊದಲಾಗಿ ಅನೇಕ ಪುರಾಣಗಳನ್ನು ರಚಿಸಿದರು. ಅಲ್ಲಿ ಅದ್ವೈತ ಶಿವಾದ್ವೈತ ತತ್ತ್ವಗಳ ಸಂಗಮವನ್ನು ಕಾಣಬಹುದಾಗಿದೆ

ತತ್ತ್ವಜ್ಞಾನ ಪರಿಸರದಲ್ಲಿ 'ಶಿವಾನಂದ ಪರಂಪರೆ' ಒಂದು ಪ್ರಮುಖ ಘಟ್ಟವೆನಿಸಿದೆ. ಅದ್ವೈತದ ತಾತ್ತ್ವಿಕ ನಿರೂಪಣೆಯೊಂದಿಗೆ ಶಿವಾದ್ವೈತ ತತ್ವಗಳನ್ನು ಕೂಡಿಸಿ ತಮ್ಮದೇ ಆದ ಒಂದು ದರ್ಶನ ಪರಂಪರೆಯನ್ನು ಶಿವಾನಂದರು ನಿರ್ಮಿಸಿದರು. ಅವರ ಜೀವನವು ಅನೇಕ ಪುರಾಣಗಳ ವಸ್ತುವಾಗಿದೆ. ಅವರ ಪರಂಪರೆಯ ಅನುಯಾಯಿಗಳಾದ ಸದಾಶಿವಾನಂದರ ಜೀವನವು ಪುರಾಣ ಕಾವ್ಯವಾಗಿದೆ.

ಅದ್ವೈತ, ಶಿವಾದ್ವೈತ ಮತ್ತು 'ಆರೂಢ' ಪರಂಪರೆಯನ್ನು ಮೇಳೈಸಿಕೊಂಡ ಸಿದ್ಧಾರೂಢ ಪರಂಪರೆಯು ಕರ್ನಾಟಕದ ತತ್ತ್ವಜ್ಞಾನ ಕ್ಷೇತ್ರದಲ್ಲಿ ಅವಿಸ್ಮರಣೀಯ ದರ್ಶನವನ್ನು ಉಂಟುಮಾಡಿದೆ. ಆ ಕಾಲದಲ್ಲಿ ಸಿದ್ಧಾರೂಢರ ಪರಂಪರೆಯು ಅನೇಕ ದಾರ್ಶನಿಕರನ್ನು, ತಾತ್ತ್ವಿಕರನ್ನು ಹುಬ್ಬಳ್ಳಿಯಲ್ಲಿ ಸೇರುವಂತೆ ಮಾಡಿತು. ಶಿಶುನಾಳ ಶರೀಫರು, ಗೋವಿಂದ ರಾನಡೆ, ತಿಲಕರಂತಹ ತತ್ತ್ವವೇತ್ತರು ಸಿದ್ಧಾರೂಢರ ತಾತ್ತ್ವಿಕ ಪರಿಸರದಲ್ಲಿ ಇದ್ದವರೆ. ಇವರ ಜೀವನವನ್ನು ಕುರಿತು ಪ್ರಭಣ್ಣ ಬೊಮ್ಮನಹಳ್ಳಿಯವರು ಪುರಾಣ ಕಾವ್ಯವನ್ನು ಬರೆದಿರುವರು.

'ಅವಧೂತ ಪರಂಪರೆ' ತಾತ್ತ್ವಿಕವಾಗಿ ಇಡೀ ಭಾರತದಲ್ಲಿಯೇ ವಿಶಿಷ್ಟವಾಗಿರುವುದು ಕರ್ನಾಟಕದಲ್ಲಿ ಮಾತ್ರ. ಇಲ್ಲಿ ಅವಧೂತ ಪರಂಪರೆಗೆ ತಾತ್ತ್ವಿಕ ಮತ್ತು ದಾರ್ಶನಿಕ ಮೆರಗು ಬಂದಿದೆ. ಅಲ್ಲದೇ ಶಿಶುನಾಳ ಶರೀಫರಂತಹ ದಾರ್ಶನಿಕರು ಅದಕ್ಕೆ ಅನುಪಮವಾದ ಸಾಹಿತ್ಯಿಕ ಸ್ಪರ್ಶ ನೀಡಿರುವರು. ಪರಿಣಾಮವಾಗಿ ಅವಧೂತ ಅನುಭಾವ ಕಾವ್ಯ ಮಹೋನ್ನತವಾಗಿ ಕನ್ನಡ ಸಾಹಿತ್ಯದಲ್ಲಿ ನಿರ್ಮಾಣವಾಯಿತು. ಈ ಪರಂಪರೆಯ ಅತ್ಯಂತ ವಿಶಿಷ್ಟ ಮಹಾಕವಿ ಶಿಶುನಾಳ ಶರೀಫರ ಜೀವನವು ಇಲ್ಲಿ ಪುರಾಣ ಕಾವ್ಯವಾಗಿದೆ. ಈ ಎಲ್ಲ ಕಾವ್ಯಗಳಲ್ಲಿ ಅದ್ವೈತ, ಶಿವಾದ್ವೈತ, ಲಿಂಗಾಯತ, ಅವಧೂತ ಅನುಭಾವ ಈ ಎಲ್ಲವುಗಳ ವಿವೇಚನೆಯು ಧಾರ್ಮಿಕ ವಿವೇಚನೆಯ ಅಡಿಯಲ್ಲಿ ಪ್ರಮುಖವಾಗಿ ಕಾಣಿಸಿಕೊಳ್ಳುತ್ತವೆ.

◆◆◆

೪.೩. ಪುರಾಣ ಕಾವ್ಯ : ಕಾವ್ಯಕಲೆ

ಕಾವ್ಯವು ಲಲಿತಕಲೆಗಳಲ್ಲಿ ಒಂದಾಗಿದ್ದು ಬಹಳ ಹಿಂದಿನ ಕಾಲದಿಂದಲೂ ಅದು ಆನಂದ-ಅನುಭವ-ಅನುಭೂತಿಗಳ ಅಭಿವ್ಯಕ್ತಿಯ ಮಾರ್ಗವಾಗಿತ್ತು. ಆನಂದವು ಕಾವ್ಯ ಒದಗಿಸುವ ಅಂತಿಮ ಗುರಿಯಾಗಿತ್ತು. ಕಾವ್ಯವು ಶುದ್ಧ ಕಲಾ ಅಭಿವ್ಯಕ್ತಿಯನ್ನು ಹೊಂದಿದೆ. ಕಲೆಯು ಹಿಂದಿನಿಂದಲೆ ಬೇರೆ ಬೇರೆ ವಿಷಯ ವಸ್ತುಗಳಿಗೆ ಮಾಧ್ಯಮವಾಯಿತು. ಧರ್ಮವು ಕಾವ್ಯವನ್ನು ಬಹಳ ಹಿಂದಿನಿಂದಲೆ ಒಳಹೊಕ್ಕಿತು. ಪುರಾಣ ಕಾವ್ಯಗಳ ವಿಷಯದಲ್ಲಿಯೂ 'ಧರ್ಮ'ವೆ ಕಾವ್ಯಕಲೆಗಿಂತ ಮಿಗಿಲಾದ ಸ್ಥಾನವನ್ನು ಪಡೆದಿರುವದೆಂಬುದು ಅನುಭವಗಮ್ಯ ವಿಚಾರ ಪೂರ್ಣ ವಿಷಯವಾಗಿದೆ. ಪುರಾಣಕಾವ್ಯಗಳು ಎಷ್ಟೋಬಾರಿ ಘಟನೆಗಳನ್ನು ಚಾರಿತ್ರಾತ್ಮಕವಾಗಿ ನಿರೂಪಿಸುವ ಮತ್ತು ವ್ಯಕ್ತಿಯ ವ್ಯಕ್ತಿತ್ವಕ್ಕೆ ಅಲೌಕಿಕ ಮೆರಗನ್ನು ನೀಡಲು ಪವಾಡಗಳನ್ನು ನಿರೂಪಿಸುತ್ತಾ ಹೋಗುತ್ತವೆ. ಇದರಿಂದ ಕಾವ್ಯಕಲೆಯ ಅಂಶಗಳು ಹಿಂದೆ ಬೀಳುತ್ತವೆ. ಅಲ್ಲಲ್ಲಿ ವರ್ಣನೆಗಳು ಅಲಂಕಾರಗಳು ಗಮನ ಸೆಳೆಯುತ್ತವೆ. ಅದೇ ರೀತಿ ಛಂದೋ ಸ್ವರೂಪವು ಮಹತ್ವದ್ದು.

ಕಾವ್ಯದ ಹೊರ ಮೈ ಎನಿಸಿದರೂ ಲಯದ ಬಲದಿಂದ ಛಂದೋ ರೂಪವು ಕಾವ್ಯಕ್ಕೆ ಚಾಲಕ ಶಕ್ತಿಯೆನಿಸಿದೆ. ಅದೇ ರೀತಿ ನೆನಪಿನಲ್ಲಿಡಲು ಛಂದೋರೂಪವೇ ಅನುಕೂಲವಾಗಿದೆ. ಪುರಾಣ ಕವಿಗಳಲ್ಲಿ ಬಹುಪಾಲು ಜನ ಭಾಮಿನಿ ಷಟ್ಪದಿಯಲ್ಲಿ ಕಾವ್ಯಗಳನ್ನು ರಚಿಸಿದ್ದಾರೆ. ಭಾಮಿನಿ ಗಮಕ ಕಲೆಗೂ ಪ್ರವಚನದ ಲಯಬದ್ಧತೆಗೂ ಸಹಜ ಮಾರ್ಗವೆನಿಸಿದೆ. ಮೂಲತಃ ಷಟ್ಪದಿ ಹಾಡುಗಬ್ಬವಾಗಿದೆ. ಜನಪದ ಮೂಲದಿಂದ ಬಂದು, ಅದು ಹಾಡುವ ಲಯಕ್ಕೆ ಬದ್ಧವಾದುದು ಸಹಜ. ಆರಂಭದ ನಾಲ್ಕು ಶರ, ಕುಸುಮ, ಭೋಗ, ಭಾಮಿನಿಗಳು ಹಾಡಲು ಬರುವಂತಹ ಲಯಬದ್ಧತೆ ಇವುಗಳ ಜೀವಾಳವಾಗಿದೆ. ಮುಂದೆ ಬರುವ ಪರಿವರ್ಧಿನಿ ವಾರ್ಧಕಗಳು ಶಿಷ್ಟಮಾರ್ಗದ ಕೃತಿಗಳಾಗಿರುವವು. ಅವುಗಳಲ್ಲಿ ಸಂಸ್ಕೃತ ಭೂಯಿಷ್ಠತೆ ; ಶಿಷ್ಟ ಮಾರ್ಗಶೈಲಿಯ ಭಾಷೆ ಬಳಕೆಯಾಗುವದು. ಅದರಲ್ಲಿ ಲಯವಿರದ ಕಾರಣ ಅವು ಗಮಕಕ್ಕೆ ಹೊಂದಿಕೊಳ್ಳಲಾರವು. ಈ ಎರಡು ಮಾರ್ಗಗಳಲ್ಲಿ ಲೀಲಾಜಾಲವಾಗಿ ಬರೆಯಬಲ್ಲವರು ಪಂ. ಪುಟ್ಟರಾಜ ಕವಿಗಳು, ಅವರ ಬಳಿವಿಡಿದವರು ಪಂ. ರಾಜಗುರು ಗುರುಸ್ವಾಮಿಯವರು.

ಪಂ. ಪುಟ್ಟರಾಜ ಕವಿಗಳ ಕಾವ್ಯದಲ್ಲಿ ಆರಂಭದ ಪದ್ಯ ಕಾವ್ಯನೀತಿಯನ್ನು, ಧರ್ಮವನ್ನೊ ಎತ್ತಿ ಹೇಳುತ್ತ ಕಾವ್ಯಕಲೆಯ ದೃಷ್ಟಿಯಿಂದ ಗಮನ ಸೆಳೆಯುತ್ತವೆ. ಪ್ರತಿ ಅಧ್ಯಾಯದ ಆರಂಭದ

ಪದ್ಯವು ಹೀಗೆ ಮಹತ್ವದ ವಿಚಾರವನ್ನು ವ್ಯಕ್ತಪಡಿಸುವದನ್ನು ನಾವು ಕಾಣುತ್ತೇವೆ. ಹಲವಾರು ಮಹತ್ವದ ಪದ್ಯಗಳನ್ನು ಗಮನಿಸಬಹುದು.

ಕುಸುಮದೊಳ್ ಗಂಧ ಮಧುಚಂದ್ರಿಕೆ
ಶಶಿಯೊಳೆಂತಿಹುದಂತೆ ಯಮ್ಮಯ
ಲಸಿತ ಹೃದಯದೆ ಶಿವನಡಂಗಿಹನಿದುದೆ ಸತ್ಯಮಿರೆ ॥

(ಶ್ರೀ ಎ.ಸಿ.ವಿ.ಮ.,ಪುಟ : ೪೫)

ಬೀಸುವ ಕಲ್ಲೋಳ್ ಬೀಳ್ದಧಾನ್ಯಂಗಳೋಳ್ ಕೆಲವು
ಸೂಸಿದಾ ಕಾಳುಗಳ್ ಪಿಟ್ಟಾಗುತಿಹವರಿಯೆ
ಸೂಸದಲೆ ತಳಗೂಟಮಂ ಪಿಡಿದ ಕೆಲಕಾಳ್ಗಳಳಿಯುತಿಹವರಿದೆನಲ್ಕೆ ॥
ಗಾಸಿಯಪ್ಪರ್ ನಿನ್ನ ಹೊಂದದೆ ಕೆಲರ್‌ಜನರ್
ಭಾಸುರತೆಯಿಂದ ನಿನ್ನ ಭಕ್ತರಾಗಿಹ ಕೆಲಬ
ರೋಸರಿಸದುಳಿಯುವರ್ ಭವ ಚಕ್ರದೋಳ್ ಪತಿತರೋಳ ಶಿವನೆ ॥

(ಶ್ರೀ ಅ.ಅ.ಪು., ಪುಟ : ೧೯೮)

ಮೇಲಿನ ಪದ್ಯಗಳಲ್ಲಿ ಕಂಡುಬರುವ ವರ್ಣನೆಗಳು ಅಲಂಕಾರಗಳು ಅವರ ಕಾವ್ಯದ ಸ್ವರೂಪವನ್ನು ಎತ್ತಿಹೇಳುತ್ತವೆ. ಪಂ. ಪುಟ್ಟರಾಜರು ವ್ಯಾಪಕವಾದ ಅಧ್ಯಯನವನ್ನು ಮಾಡಿದವರು. ಅವರು ಸಂಸ್ಕೃತ, ಹಳಗನ್ನಡ ಮತ್ತು ಕಾವ್ಯವನ್ನು ಆಳವಾಗಿ ಅಧ್ಯಯನ ಮಾಡಿದ್ದಾರೆ. ಹೀಗಾಗಿ ಛಂದೋರಚನೆ ಮತ್ತು ಕಾವ್ಯಕಲೆ ಎರಡರಲ್ಲಿಯೂ ಶಿಷ್ಟತೆ ಮತ್ತು ಕಲಾಪೂರ್ಣತೆಯ ಕಾವ್ಯ ಪದ್ಧತಿಗಳು ಮೇಳವಿಸಿವೆ. ಮೇಲಿನ ಪದ್ಯಗಳು ಕ್ರಮವಾಗಿ ಸ್ವಭಾವೋಕ್ತಿ ಅಲಂಕಾರ ಮತ್ತು ದೀಪಕ ಅಲಂಕಾರದ ಉತ್ತಮ ಉದಾಹರಣೆಯಾಗಿವೆ. ರೂಪಕಲಂಕಾರದ ಒಂದು ಮಾದರಿ ಇಲ್ಲಿದೆ.

ಶಾಂತಿ ಸಹನೆಯದರ ಕೋಟೆಯು
ಕಾಂತಿಯೋಜಂ ಕಂದಕಮದಕೆ
ಸಂತಸಂ ಕೊತ್ತಳಮೆನಿಸಿರಲ್ ಆ ಸತ್ಯದಗಸಿಯಿದೆ ।
ಸಂತತಂ ಸಮತೆಯುಮನೆಯೆನಿಸೆ
ಭ್ರಾಂತಿ ವಿರಚಿತ ನಯಮುಪವನಂ
ಕ್ರಾಂತಿದೇವಾಲಯ ಮೆಸೆಯುತಿರೆ ಪುರಿಯುರಂಜಿಸಿತು ॥

(ತಿ.ಪು.ಪು. ಪುಟ : ೯)

ನೀತಿ ಪರವಾದ ಹಲ ಕೆಲವು ವರ್ಣನೆಗಳು ಸುಭಗವಾಗಿವೆ.

ಪಕ್ಕಮಿರ್ದಡೆ ಪಕ್ಷಿ ಚೆಂದಂ
ಪೊಕ್ಕಲಿರ್ದಡೆ ನಾಡಿನಂದಂ

ರೊಕ್ಕಮಿರ್ದಡೆ ಮನೆಗೆ ಚಂದಂ ಪೊಲಕೆ ಬೆಳೆಯಂದಂ ॥
ಅಕ್ಕರತೆಯಿರಲೂರ್ಗೆ ಚಂದಂ
ಸಕ್ಕದ ನುಡಿಯು ವಾಣಿಗಂದಂ
ಮಕ್ಕಳಿರೆ ವಂಶಕ್ಕೆ ಚಂದಂ ॥ (ತ್ರಿ.ಪು.ಪು. ಪುಟ : ೦೯)

ಪರಳಿಯೆರಗದ ಕಮಲವಿಲ್ಲಂ
ನೆರೆಜಲಮಿರದ ಸರಸಿಯಿಲ್ಲಂ
ಪರಿಜಲಮಿರದ ಗದ್ದೆಯಿಲ್ಲ ಬೆಳೆಯಿರದಿಳೆಯಿಲ್ಲಂ
ಉರುದಯಮಿರದ ಜನತೆಯಿಲ್ಲಂ
ಗುರುಭಜನೆಯಿರದ ಗೃಹಮಿಲ್ಲಂ
ಸಿರಿಯಿರದ ನೆಲೆಯಿಲ್ಲಮಾ ಚೋಳದೇಶದೊಳು ॥

(ತ್ರಿ.ಪು.ಪು. ಪುಟ : ೩೦)

ನೀತಿ ವಿಧಾನವು ವರ್ಣನೆಗೆ ಬದ್ಧವಾಗಿ ಮೂಡಿದೆ. ಮೊದಲ ಪದ್ಯದಲ್ಲಿ ಹೃದ್ಯವಾಗಿ ಮೂಡಿದೆ. ಅದೇ ರೀತಿ ಎರಡು ವಿರೋಧದ ನಡುವೆ ಸರೋದ ವ್ಯಕ್ತಪಡಿಸುವ ಎರಡನೆ ಪದ್ಯದಲ್ಲಿಯ ವರ್ಣನೆ ಹರಿಹರನ ವರ್ಣನೆಗಳನ್ನು ನೆನಪಿಸುವದು. ಗುಣಗಳನ್ನು ಸಂಬಂಧಗಳನ್ನು ಹೊಂದಿಸಿದ ನವೀನ ಕಲ್ಪನೆಯು ಇಂತಿದೆ.

ಧೈರ್ಯಮದು ತಂದೆಯು ಕ್ಷಮೆ ಜನನ
ಭಾರ್ಯೆ ಶಾಂತಿಯು ಮಗನೆ ಸತ್ಯಂ
ಧುರ್ಯ ಕರುಣೆಯು ಭಗಿನಿಯು ಮನೋನಿಗ್ರಹಮಭ್ರಾಂತಂ ॥
ಶೌರ್ಯದಿಂದೀ ಬಂಧುಜನಕೌ
ದಾರ್ಯದಿಂದಾಶ್ರಯ ಮನಿತ್ತಿಹ
ವೀರ್ಯವಂತನೆ ಯೋಗಿರಾಜಂಗಾರ್ ಸಮರ್ ಜಗದೆ ॥

(ಶ್ರೀ ಯೊ.ಪು. ಪುಟ : ೧೩೬.)

ಅತ್ಯುತ್ತಮವಾದ ವರ್ಣನೆಗಳು ಸಹಜವಾಗಿಯೆ ಮೂಡಿಬರುವದು. ಅವರ ಕಾವ್ಯದ ಶೈಲಿ ವಿಶೇಷವಾಗಿದೆ. ಬಹುಶ್ರುತ ಅಧ್ಯಯನದ ಫಲವೇ ಈ ರೀತಿಯ ಪಕ್ವವಾದ ಕಾವ್ಯವಾಗಿದೆ. ಹೂವು–ಜೇನು, ದುಂಬಿಗಳ ಕೋಮಲತೆ, ಮೃಧು–ಮಧುರತೆ, ಮಾದಕತೆಗಳ ವರ್ಣನೆ –

ಭ್ರಮರಂಗಳೆಮ್ಮಯ ಪರಿಮಳವ
ಭ್ರಮಿಸುತ್ತೈದುತಲೊಯ್ದು ತುಪ್ಪವ
ಶ್ರಮದಿಂದೆ ಗಯ್ಯುತ್ತೆ ಸಂತರೀಗಿಯವವು ಸತತಂ

ಸಮಿಸುತ್ತಲೀ ವಿಷಯದ ಜನಕೆ
ಸುಮಲತೆಗಳೊರೆಯುವವೊಯನುವವೋ
ಲಮಿತ ಕುಸುಮಗಳಿಂದು ಬಾಗಿರಿ ತೋರ್ಪವಾಬನದೆ ॥

(ಶ್ರೀ ಗ. ಚ. ಪು., ಪುಟ : ೧೫)

ದಾನಗುಣವನ್ನು ವಿವಿಧ ದಾನಗಳನ್ನು ಅನುಪ್ರಾಸ ಅಲಂಕಾರದ ಮೂಲಕ ವ್ಯಕ್ತಪಡಿಸಿದ ರೀತಿ ಇಲ್ಲಿದೆ.

ಅನ್ನದಾನಿಯು ಜ್ಞಾನದಾನಿಯು
ಮಣ್ಣನೆಯ ಶಿವತತ್ವದಾನಿಯು
ಚಿನ್ನಿಧಿಯು ಸದ್ಭಕ್ತಿದಾನಿಯು ಗುರುವು ಗುಣದಾನಿ ।
ಸನ್ನಿಧಿಯು ಸ್ವಾತಾರದಾನಿಯು
ಬಿನ್ನಯಿಪರಿಗೆ ಭಾಗ್ಯದಾನಿಯುಂ
ಮುನ್ನಿಸುವವರಿಗೆ ಮೋಕ್ಷದಾನಿಯು ಶಾಂತಿ ಸುವಿದಾನಿ ॥

(ಮು.ಜ.ಶ್ರೀ ಅ.ಪು., ಪುಟ : ೧೩೧)

ಪಂ. ಪುಟ್ಟರಾಜರಿಗೆ ಶರಣರ ಶರಣ ಸಾಹಿತ್ಯದ ವ್ಯಾಪಕ ಓದಿರುವಂತೆ ಬಲವಾದ ಪ್ರಭಾವವಿದೆ. ಅಕ್ಕಮಹಾದೇವಿ ಪುರಾಣದಲ್ಲಿ ಅವಳದೆ ವಚನಗಳನ್ನು ಷಟ್ಪದಿ ರೂಪದಲ್ಲಿ ಮಾರ್ಪಡಿಸಿದ್ದಾರೆ. ಅದೇ ರೀತಿ ವಚನಗಳನ್ನು ಷಟ್ಪದಿಯಲ್ಲಿ ಮಾರ್ಪಡಿಸಿ ಅನೇಕ ಪುರಾಣಗಳಲ್ಲಿ ಇಟ್ಟಿದ್ದಾರೆ. ಕೆಲವು ವಚನಗಳನ್ನು ಏನೂ ಮಾರ್ಪಡಿಸಿದೆ ಹಾಗೆ ಸಾಂದರ್ಭಿಕವಾಗಿ ಛಂದೋರೂಪದಲ್ಲಿ ಉಳಿಸಿಕೊಂಡಿದ್ದಾರೆ.

ಅಕ್ಕನ ವಚನ–ಷಟ್ಪದಿ–

- ತನುಕರಗದವರಲ್ಲಿ ಪುಷ್ಪಮಜ್ಜನವನೊಲ್ಲೆಯೆ ॥

(ಉಡುತಡಿಯ ಅಕ್ಕಮಹಾದೇವಿ ಪುರಾಣ ಪು ೮೮)

- ಕಾಮನಂ ಗೆಲೆದೆ ಬಸವಾ ನಿಮ್ಮ ದಯದಿಂದ ॥

(ಉ. ಅ. ಪು. ಪುಟ ೧೦೩)

- ಒಡಲ ಕಳವಳಕ್ಕಾಗಿ ಅಡವಿಯಂ ಪೊಕ್ಕೆನೈ ॥

(ಉ.ಅ.ಪು. ಪುಟ ೧೩೭)

- ಸಾಗರದೊಳಿಹ ಪ್ರಾಣಿಗಳಿಗದೆ ॥

(ತ್ರಿ.ಪು.ಪು. ಪುಟ ೧೯೭)

- ನಿನ್ನನೆನಹಾದಾಗದು ಮುಕುತಿ ॥

(ತ್ರಿ ಪು ಪು ಪುಟ ೪೫೭)

- **ಬಾಳೆಯ ಗಿಡಕೆ ಫಲಮದಂತ್ಯಂ ॥**

(ಶ್ರೀ ಎಡೆಯೂರು ಸಿದ್ಧಲಿಂಗ ವಿಜಯ ಮಹಾಪುರಾಣ ಪು. ೨೧೦)

- **ಹಾವಿನ ಹೆಡೆಯಕೊಂಡು ಕೆನ್ನೆಯಂ ॥**

(ಶ್ರೀ ಕಲಿಕೇರಿ ಗುರುಮಹಿಮಾಪುರಾಣಂ ಪುಟ ೧೭೫)

- **ಎನ್ನ ಕಾಯುವ ದಂಡಿಗೆಯ ಮಾಡಿ ॥**

(ಶ್ರೀ ಅಂಕಲಗಿ ಅಡವೀಶ್ವರ ಪುರಾಣವು ಪುಟ ೭೭)

ಕಾವ್ಯಗಳಲ್ಲಿ ವಚನಗಳನ್ನು ಇದ್ದಕ್ಕಿಂದ್ದಂತೆ ಸಾಂದರ್ಭಿಕವಾಗಿ ಉಪಯೋಗಿಸಿರುವದನ್ನು ಗುರುತಿಸಬಹುದು.

ಪಂ. ಪುಟ್ಟರಾಜ ಕವಿಗಳ ಕಾವ್ಯ ವಿಶೇಷತೆಯೆಂದರೆ ಅವರು ನಿಯತವಾಗಿ ಭಾರತ, ಕರ್ನಾಟಕಗಳ ವರ್ಣನೆಯನ್ನು ಪೀಠಿಕಾಭಾಗದಲ್ಲಿ ಮಾಡಿ ಮುಂದುವರೆಯುವರು.

ಭಾರತ : ಕನಕರಜತ ಪ್ರಖ್ಯಲೋಹ ತಾಮ್ರಗಳಿಕ್ಕೆ
ಯನಘತೈಲಿಗಳೊತ್ತು ರಸದಸಸಿಗಳಗೊತ್ತು
ಜನಿತ ಜೀವರ ಜನನಿ ರಾಷ್ಟ್ರದಖಿಲದ ಭಗಿನಿ ಜಲದ ಜ್ಯೋತಿಯು ಭೂತಿಯು ॥
ಅನಿತುನೆಲಗಳ ನೆಲೆಯುಬಲ್ಲಮಲ್ಲರ ಕಲೆಯು
ಬಿನದದನಲಸದಿರವು ಸೊಗದಸೊಬಗಿನ ಸರವು
ಜನನ ಮರಣದ ಮರವು ಸಾಂತದಾಂತಿಯಭರವು ಭಾರತ ಕ್ಷಿತಿಯಕ್ಷಯಂ ॥

(ಶ್ರೀ ಅಂಕಲಗಿ ಅಡವೀಶ್ವರ ಪುರಾಣ ಪುಟ : ೧೪)

ಕರ್ನಾಟಕ : ಕೀರ್ತಿವೆತ್ತಿಹ ವೀರರನಾಡು
ಸ್ಫೂರ್ತಿಸುತ್ತಿಹ ಸತಿಯರಬೀಡು
ಮೂರ್ತಿ ಕೆತ್ತಿಹ ಶಿಲ್ಪರನಾಡು ಕನ್ನಡ ನಾಡಿದು ॥
ಪೂರ್ತಿ ಬಿತ್ತದೆ ಬೆಳೆಯುವ ಕಾಡು
ವಾರ್ತೆ ಬತ್ತದ ಶೀಲರಗೂಡು
ಕೂರ್ತು ಸತ್ಯಮರುದಯಿಪ ನೀಡು ಸಾಹಿತಿಗಳನಾಡು ॥

(ಗಂಗಾವತಿಯ ಶ್ರೀ ಚನ್ನಬಸವ ಪುರಾಣಂ ಪುಟ:೧೪)

ಪಂ. ಪುಟ್ಟರಾಜರಲ್ಲಿ ವಾರ್ಧಕ ಷಟ್ಪದಿಯು ಮಾರ್ಗಶೈಲಿಯಲ್ಲಿ, ಭಾಮಿನಿಯು ದೇಶಿ ಶೈಲಿಯಲ್ಲಿ ಮೂಡಿ ಬಂದಿವೆ. ಅವರು ಭಾಮಿನಿಗೆ ಮಾರ್ಗದ ದೀಕ್ಷೆ ಕೊಡುವರು ಭಾಮಿನಿಯಲ್ಲಿಯೆ ಬಹುಪಾಲು ಕಾವ್ಯಗಳು ಮೂಡಿವೆ. ವಾರ್ಧಕದಲ್ಲಿಯೂ ಕೆಲವು ಕಾವ್ಯಗಳು ಮೂಡಿವೆ.

ಭಾಮಿನಿ ಮಾರ್ಗಶೈಲಿ : ಶಿವನನೆನೆಯುತಲೊಂದುಪವನವ
ನವಿರಳಾನಂದದೊಳೆ ನೋಡಿದ
ನವನೊಡನೆ ಭಕ್ತಜನರಿರ್ದರ್ ಸಂತಸದೊಳಾಗ
ತವೆಯೆಸೆಯುತಿಹ ನಾರಿಕೇಳಾಂ
ಮ್ರವರ ಕದಳಿ ದ್ರಾಕ್ಷನಾರಂ
ಗವಿಲ ಸತ್ ಖರ್ಜೂರ ವೃಕ್ಷಸುಫಲತರುಗಳೆಸೆಯೆ ॥

(ಶ್ರೀ ಎಡೆಯೂರು ಸಿದ್ಧಲಿಂಗವಿಜಯ ಪುರಾಣ ಪುಟ : ೧೦೧)

ಭಾಮಿನಿ ದೇಶಿ : ಓವಲಿಂಗಂ ಮೂರೆನಿಸುವುದು
ಭಾವಲಿಂಗಂ ಪ್ರಾಣಲಿಂಗಂ
ದೇವಗುರುಕೃಪೆಯಿಂದಲೊದಗಿರುವಿಷ್ಟ ಲಿಂಗಮಿದು
ಸಾವದಾನದೊಳಿಷ್ಟ ಲಿಂಗವ
ತೀವಿದಾನಂದದೊಳೆ ಪೂಜಿಸಿ
ನೀವು ಧ್ಯಾನಿಸಿ ಪ್ರಾಣಲಿಂಗವ ಭಾವಲಿಂಗವನು ॥

(ಶಿವಶರಣೆ ಶ್ರೀ ಗುಡ್ಡಾಪುರದ ದಾನಮ್ಮ ದೇವಿಯ ಪುರಾಣ ಪುಟ : ೧೦೨)

ವಾರ್ಧಕ : ಪಂಚಾಕ್ಷರಾರ್ಯ ಕೃಪೆಯಿಂದಲೆ ತ್ರಿಭಾಷೆಯೊಳ್
ಕಿಂಚಿತ್‌ಸುಕೃತಮೊದಗೆ ಗ್ರಂಥಗಳ ರಚಿಸಿದೇಂ
ಪ್ರಾಂಚದ್ವಿರಾಟಪುರ ಚರವರ ಕುಮಾರ ಶಿವಯೋಗಿಯಾಶೀರ್ವಾದದೆ ॥
ಪಂಚಾನನನ ಕರುಣೆಯಿಂದೆ ಪ್ರವಚನಕಲೆಯೊ
ಳೌಚಿತ್ಯ ಸಿದ್ಧಿಯ ಪಡೆಯುತೆ ಸಮಾಜದುರೆ
ಕೊಂಚಂಸು ಸೇವೆಯಂಗೈಯ್ವೆಂ ಗುರೂಕ್ತ ವಿದ್ಯಾದಾನ ಸುವ್ರತದೊಳೇ ॥

(ಶ್ರೀ ಅಂಕಲಗಿ ಅಡವೀಶ್ವರ ಪುರಾಣ ಪುಟ : ೫)

ಅವರ ಕಾವ್ಯಗಳಲ್ಲಿ ಪಂಡಿತ ಮಾರ್ಗ ಶೈಲಿಯೆ ಪ್ರಧಾನವಾಗಿದೆ. ಭಾಷೆ ಮತ್ತು ಭಾವಗಳ ಬಳಕೆ ಪಂಪಮಾರ್ಗದಂತೆ 'ಹಿತಮಿತ ವಚನ ರಚನೆ' ಇಲ್ಲಿದೆ. ಅಚ್ಚರಿ ಎಂದರೆ ಪಂ.ಪುಟ್ಟರಾಜರಿಗೆ ಬಹಿರ್ ಚಕ್ಷುವಿಲ್ಲ ! ಹೊರ ಅಂಧಕಾರವನ್ನು ಒಳ ಬೆಳಕಿಂದ ಹೊಡೆದಟ್ಟಿದಂತೆ ಅವರು ಕಾವ್ಯ ರಚಿಸಿದ್ದಾರೆ. ಮಾತನಾಡಿದಂತೆ ಅವರ ರಸನೆಯ ಮೇಲೆ ರಸಸಾಹಿತ್ಯ ಮೂಡಿ ಬರುವದು. ಮನೋಜಿತ್ತಿಯಲ್ಲಿಯೆ ಕಾವ್ಯ ಛಂದೋ ನಿಖರವಾಗಿ ಮೂಡಿ ಅದನ್ನು ಕಣ್ಣಿದ್ದವರಿಗೆ ಹೇಳಿ ಬರೆಸಿದ್ದಾರೆ. ಅದುವೇ ಶ್ರೇಷ್ಠ ಸಾಹಿತ್ಯವಾಗಿದೆ.

ಶ್ರೀ ಬ್ಯಾಟ ರಾಮಣ್ಣನವರು ಭಾಮಿನಿಯಲ್ಲಿ ಕಾವ್ಯಗಳನ್ನು ರಚಿಸಿದ್ದಾರೆ. ಅವರಿಗೆ ಆರಂಭದಲ್ಲಿ ಓದಿನ ಹಿನ್ನೆಲೆ ಇರಲಿಲ್ಲ. ಆಧ್ಯಾತ್ಮ ಹಿನ್ನೆಲೆಯ ಪರಿಸರವು ಅವರಲ್ಲಿ ಆಧ್ಯಾತ್ಮಿಕ ನೆಲೆಯ ಭಾವ ಸಂಪತ್ತನ್ನು; ಬರೆಯುವ ಲಯ ಸಂಪತ್ತನ್ನು ಒದಗಿಸಿತು. ಫಲವಾಗಿ

ಹೃದ್ಯವಾದ ಪದಗಳನ್ನು ಅವರು ರಚಿಸಿದರು. ವಿನಮ್ರವಾಗಿಯೆ ಕವಿಗಳು ಇದನ್ನು ತಿಳಿಸುತ್ತಾರೆ. ಇವರ ಕಾವ್ಯಕ್ಕೆ ಪ್ರೇರಣಾ ಬಲವಾಗಿ ನಿಂತವರು, ಬರೆಯ ಹಚ್ಚಿದವರು ಕನ್ನಡ ಜಗದ್ಗುರುಗಳೆಂದೆ ಖ್ಯಾತರಾದ ಡಾ. ತೋಂಟದ ಸಿದ್ಧಲಿಂಗಯತಿಗಳು. ಅವರ ಆಶೀರ್ವಚನವೆಂದರೆ ಸೃಜನಶೀಲ ಪ್ರತಿಭೆಗಳನ್ನು ಗುರುತಿಸಿ ಬೆಳಕಿಗೆ ತರುವದಾಗಿದೆ. ಅವರ ಈ ವರೆಗಿನ ಪುರಾಣ ಕಾವ್ಯಗಳೆಲ್ಲವು ಭಾಮಿನಿಷಟ್ಪದಿಯಲ್ಲಿ ಮೂಡಿಬಂದಿವೆ. ಸಹಜ ಲಯವೇ ಅವರ ಕಾವ್ಯ ಜೀವಾಳವಾಗಿದೆ. ವ್ಯಕ್ತಿ ಚರಿತ್ರೆಯಲ್ಲಿ ಕಣ್ಣಿಗೆ ಕಟ್ಟುವ ರೀತಿಯ ವರ್ಣನೆ ಅವರ ಕಾವ್ಯದ ಹಿರಿಮೆಯಾಗಿದೆ. ವಿಚಾರ-ಭಾವ-ಲಯಗಳು ಭಾಷೆಯೊಡನೆ ಸಹಜವಾಗಿ ಕೂಡಿಕೊಳ್ಳುವವು.

'ಷಟ್ಪದಿ'ಯು ಪುರಾಣ ಕಾವ್ಯದ ಒಂದು 'ರಾಜಮಾರ್ಗ'ವೆಂದು ಬರೆದಂತೆ ಖಂಡ ಕಾವ್ಯಗಳನ್ನು ಅವರು ಬರೆದಿರುವರು. ಅವು ಶತಕಗಳಾಗಿರುವದು ವಿಶೇಷವಾಗಿದೆ. ಗದ್ಯ ಕೃತಿಗಳನ್ನು ಸಾಮಾನ್ಯ ಜನರ ಅರಿವಿಗೆ ಬರುವಂತೆ ಅವರು ರಚಿಸಿದ್ದಾರೆ. ಭಾಮಿನಿ ಷಟ್ಪದಿಯು ಅವರಿಗೆ ನೀರು ಕುಡಿದಷ್ಟೇ ಸರಳ ಸುಲಭವಾಗಿದೆ.

ತಪದ ರೂಪವೇ ಗೌರಿ ಶಂಕರ
ಜಪದ ರೂಪವೇ ಗೌರಿ ಶಂಕರ
ಅಪರಿಮಿತ ಆನಂದ ಬ್ರಹ್ಮವೇ ಗೌರಿಶಂಕರರು ॥

(ಶ್ರೀ ಗೌರಿ ಶಂಕರ ಚರಿತಾಮೃತ ಪೀಠಿಕಾಪದ್ಯ ಪುಟ : ೧)

ಸೀಮಿತವಾದ ವರ್ಣನೆಗಳು ಅಲಂಕಾರಗಳು ಇವರ ಕಾವ್ಯದಲ್ಲಿವೆ. ಕಥಾ ನಿರೂಪಣೆಯೆ ಇವರ ಕಾವ್ಯದ ಮುಖ್ಯ ಅಂಶವಾಗಿದೆ. ದೀಪಕ ಅಲಂಕಾರದ ಛಾಯೆಯಾಗಿರುವ ಈ ಪದ್ಯವನ್ನು ಇಲ್ಲಿ ನೋಡಬಹುದು.

ತಾನು ಉರಿದರು ಜ್ಯೋತಿ, ಮನೆಗಳ
ಏನು ಹೇಳಲಿ ಬೆಳಗುವಂದದಿ
ಸಾನುರಾಗದಿ ಯೋಗಿ ತಪಗೈದಿಹನು ಜಗದ್ಧಿತಕೆ ॥
ಜ್ಞಾನ ಭಕ್ತಿ ಕ್ರಿಯೆಯೊಂದಿಗೆ
ಸ್ವಾನುಭವದ ಸುಖದ ಸುಗ್ಗಿಯು
ಕಾಣಬಹುದೈ ಗೌರಿಶಂಕರ ಯೋಗಿಯಾಟದಲಿ ॥

(ಶ್ರೀ ಗೌರಿಶಂಕರ ಪುರಾಣ ಪುಟ : ೮೨)

ರೂಪಕಗಳ ಬಳಕೆಯು ಇವರಲ್ಲಿ ಸಹಜವಾಗಿದೆ –

ಹರನ ಕರುಣೆಯ ಮುಡಿಯಮಲ್ಲಿಗೆ
ಧರಣಿಯೊಳವತರಿಸಿ ಸುಜನರ
ದುರಿತವ ಕಳೆಯಲು ಬಂದ ಶಿಶುಲಿಂಗಮ್ಮ ॥

(ಶ್ರೀ ಗುಡ್ಡಾಪುರ ದಾನಮ್ಮದೇವಿ ಪುರಾಣ ಪುಟ : ೩೨)

ದೀಪಕಾಲಂಕಾರದ ಒಂದು ಉದಾಹರಣೆ –

ಅರುಣ ಬರುವನು ಕಾಡುಲತೆಗಳ
ಲರಳಿ ಮೊಗ್ಗುಗಳೆಲ್ಲ ಗಮಗಮ
ನಿರುತ ಸ್ವಾಗತ ಗೈವುದೆಲ್ಲವು ವಿಶ್ವದಾನಿಯಮ
ಶರಣ ಬರುವನ ಕಂಡು ಭಕ್ತರು
ಭರದಿ ಸ್ವಾಗತ ಗೈಯುತೆಲ್ಲವು
ಧರೆಯ ಮನುಕುಲ ನಿಯಮವೇ ತಾನಲ್ಲವೇನಪ್ಪ ! ॥

(ಶ್ರೀ ಇಟಗಿಭೀಮಾಂಬಿಕಾ ಪುರಾಣ ಪುಟ : ೧೬೩)

ಸರಳ ಸಹಜ ವರ್ಣನೆಗಳಲ್ಲಿ ಭವ್ಯತೆಯನ್ನುಂಟುಮಾಡುವದು ಶ್ರೀ ಬ್ಯಾಟ ರಾಮಣ್ಣನ ಕಾವ್ಯಕಲೆಯೆನಿಸಿದೆ. ಶಿವಾನಂದ ಸ್ವಾಮಿಗಳ ವ್ಯಕ್ತಿತ್ವದ ವರ್ಣನೆ ಹೀಗಿದೆ –

ವೀರ ವಿರತಿಯ ಜ್ಞಾನಚರಧಿರ
ಮಾರ ಮರ್ದನ ಹೇಕೃಪಾಕರ
ಆರುಬಲ್ಲರು ನಿನ್ನ ಆ ಸುಜ್ಞಾನದೈಸಿರಿಯಾ ।
ಪಾರಮಾರ್ಥದ ಹೇಪ್ರಭಾಕರ
ಧೀರತನದಲಿ ಗೆಲಿದು ಮಾಯೆಯ
ಸಾರ ಸಜ್ಜನವಂದ್ಯ ಪಾಲಿಸುಗುರು ಶಿವಾನಂದ ॥

(ಶ್ರೀ ಶಿವಾನಂದ ಪುರಾಣ ಪುಟ : XVII)

ವರ್ಣನೆಯೊಂದಿಗೆ ಭಾವ–ಲಯಗಳ ಮಿಲನವು ಹಾಲು ಸಕ್ಕರೆಗಳು ಬೆರತಂತೆ ಇರುವ ಕವಿಯ ಶೈಲಿ ವಿಶೇಷವಾಗಿದೆ.

ವಾಣಿ ವೀಣೆಯ ಮೀಟದೊಡೆ ತಾ
ನೇನು ಹೇಳಲಿ ಸಪ್ತಸ್ವರಗಳು
ತಾನೆ ಮೊಳಗಿವೆ ತಾಳಸ್ವರಲಯ ಮಧುರ ಸಂಗೀತ ।
ಮಾನವೆನ್ನಯ ಹೃದಯಪೀಠದಿ
ಜಾಣೆ ಬನಶಂಕರಿಯುವಾಸಿಸಿ
ಏನು ಹೇಳಲಿ ತನ್ನ ಮಹಿಮೆಯ ತಾನೆ ಬರೆಸಿಹಳು ॥

(ಬಾದಾಮಿ ಶ್ರೀ ಬನಶಂಕರಿ ದೇವಿ ಮಹಾತ್ಮೆ ಪುರಾಣ ಪು : ೨)

ಡಾ. ಬಾಬಾಸಾಹೇಬ ಅಂಬೇಡ್ಕರ ಪುರಾಣವು ಶ್ರೀ ಬ್ಯಾಟ ರಾಮಣ್ಣನವರ ಅದ್ವಿತೀಯ ಕಾವ್ಯ ಕೃತಿಯಾಗಿದೆ. ಸರಳ ಶೈಲಿಯಲ್ಲಿ ಮನವನ್ನು ನೇರವಾಗಿ ಮುಟ್ಟುವ ಕಲಾಪ್ರಜ್ಞೆ ಅಲ್ಲಿದೆ.

ಅಂಬೇಡ್ಕರರ ಬದುಕನ್ನು ಉತ್ತಮವಾಗಿ ಚಿತ್ರಿಸುವ ಹಂತದಲ್ಲಿ ಅವರ ಬದುಕಿನ ಅನೇಕ ಘಟನೆಗಳು ಮನಸ್ಸಿನ ಕದಗಳನ್ನು ತೆರೆದು ಸಂವೇದಿಸುವ ಭಾವ-ಭಾಷೆಗಳಲ್ಲಿ ಕಾವ್ಯ ಒಡಮೂಡಿದೆ. ಒಂದು ಸಂದರ್ಭದಲ್ಲಿನ ಅಂಬೇಡ್ಕರರ ವ್ಯಥೆಯನ್ನು ಕವಿ ಹೀಗೆ ಶಬ್ದಗಳಲ್ಲಿ ಹಿಡಿದಿಟ್ಟಿದ್ದಾರೆ -

ಯಾವ ಕಾರಣಕ್ಕೆನ್ನ ಹುಟ್ಟಿಸಿ
ದೇವ ಗೋಳಾಡಿಸುತಲಿರುವೆಯೊ
ಪಾವನಾಂಗನೆಣ ಕರುಣಬಾರದೆ ಏತಕೊ ನಿನಗೆ ।
ಸಾವು ಬದುಕಿರುವಾಗಲೆನಗಿದು
ನೋವು ತನು ಮನ ದಹಿಸುತಿರ್ಪುದು
ಜೀವತಳಮಳಿಸುತ್ತ ಕಂಬನಿ ಮಿಡಿದ ಸ್ವೇಷನದಿ ॥

(ಡಾ. ಬಾಬಾಸಾಹೇಬ ಅಂಬೇಡ್ಕರ ಪುರಾಣ, ಪುಟ : ೭೯)

ಕತೆಯ ನಿರೂಪಣೆಯೆ ಪ್ರಧಾನ ಅಂಶವಾದ ಕಾರಣ ಶ್ರೀ ಬ್ಯಾಟಿ ರಾಮಣ್ಣನಲ್ಲಿ ವರ್ಣನೆ ಅಲಂಕಾರಗಳ ಅತಿಶಯ ಬಳಕೆ ಇಲ್ಲ. ಅಲ್ಲಲ್ಲಿ ಅವುಗಳನ್ನು ಕಾಣಬಹುದು. ರೂಪಕದ ಬಳಕೆಯನ್ನು ಇಲ್ಲಿ ನೋಡಬಹುದು.

ಕೇಳು ಎನ್ನಯಗುರಿಯ ಸಾಧನೆ
ಬಾಳಬಳ್ಳಿಯಲರಳು ಮೊಗ್ಗಿವು
ಹಾಳುಗೊಳ್ಳದೆ ನಾಡನುಡಿ ಸೌಗಂಧ ತರಲೆಂದು ।
ಕೇಳಿ ಲೌಕಿಕ ಪಾರಮಾರ್ಥವ
ತಾಳುವಂದದಿ ರೀತಿ ನೀತಿಯ
ನಾಳೆ ನಾಡನು ಬೆಳಗು ನಂದಾದೀಪವೆಂದರಿದು ॥

(ಶ್ರೀ ಸದ್ಗುರು ಶಿವಾನಂದ ಪುರಾಣ ಪುಟ : ೮೭)

ದೇವ-ದೇವತೆಗಳಾದರೂ ನೈತಿಕತೆಯ ಅರಿವು ಅಳವಡಿಕೆ ಅವಶ್ಯವೆನ್ನುವದನ್ನು ಕವಿ ದೇಶಿ ವಿಧಾನದಲ್ಲಿ ಹೀಗೆ ವರ್ಣಿಸಿದ್ದಾನೆ.

ಮಗಳ ಮೋಹಿಸಿ ಬ್ರಹ್ಮದೇವನು
ಜಗದ ಪೂಜ್ಯತೆ ಕಳೆದುಕೊಂಡನು
ಸುಗುಣವಂತನೆ ಕೇಳುಧರ್ಮದದಾರಿ ತಪ್ಪಿದೊಡೆ ।
ಗಗನ ಬೆಳಗುವ ಚಂದ್ರದೇವನು
ಸೊಗಸಿನಿಂ ಶ್ರೀ ಲೋಲನಾಗುತ
ಬಗೆ ಬಗೆಯ ಭಾವದಲಿ ಗುರುಸತಿ ಮೋಹಿಸುತಿರಲು ॥

(ಶ್ರೀ ನೀಲಕಂಠೇಶ್ವರ ಪುರಾಣ ಪುಟ : ೪೩)

ಕಾವ್ಯಕಲೆಯು ಕಥನಕಲೆಯಲ್ಲಿ ಬೆಳೆದಿರುವದು ಈ ಕವಿಯ ವಿಶೇಷ ಅಂಶವಾಗಿದೆ.

ಸಂಗೀತ ಮತ್ತು ಸಾಹಿತ್ಯಗಳೆರಡರಲ್ಲಿ ಅದ್ವಿತೀಯ ಸಾಧನೆ ಮಾಡಿದ ಕೀರ್ತಿ ಪಂ. ಶ್ರೀ ರಾಜಗುರು ಗುರುಸ್ವಾಮಿ ಕಲಿಕೆರಿಯವರಿಗೆ ಸಲ್ಲುವದು. ಅವರು ಸಂಗೀತದಂತೆ ಸಾಹಿತ್ಯವನ್ನು ಒಂದು ಆರಾಧನಾಕಲೆ ಎಂದು ತಿಳಿದು ಅನುಸರಿಸಿದವರು. ಲಯ-ರಾಗ-ತಾಳಗಳ ಮೇಳವಿಕೆಯಿಂದ ಕಾವ್ಯವನ್ನು ಸ್ವರಲೋಕವನ್ನು ಉಭಯ ಕಲಾರವಿಯಂತೆ ಒಂದೇ ಬಾರಿ ಹೊಂದಿ ನಡೆಯುವವರಾಗಿದ್ದಾರೆ.

ಶ್ರೀ ಪಂ. ರಾಜಗುರು ಅವರ ಕಾವ್ಯದ ವರ್ಣನೆ ಇತ್ಯಾದಿಗಳು ಕಥೆಯೊಂದಿಗೆ ಸಂಲಗ್ನಗೊಂಡು ಬರುತಿವೆ. ಒಂದು ವರ್ಣನೆ –

ಶಾಂಭವಿಯ ಪ್ರತಿಬಿಂಬೆ ಶ್ರೀ ಬಸ
ವಾಂಬೆ ಲೀಲೆಗಳೆಳೆಯ ಜೋಡಿಸಿ
ಕಂಬಳಿಯ ನೇಯ್ದಂತೆಯಾಳ್ದಾಳ್ ಕವಿ ಬರೆದ ಚರಿತೆ ।
ತುಂಬುಮನದಿ ತೀಡ್ದ ಜೇಂಗೊಡ
ದಿಂಬು ಚರಿತದ ಗ್ರಂಥವಿದು ಬಸ
ವಾಂಬೆ ಪೌರಾಣಕ್ಕೆಯಾಕರ ವಿಷಯ ದಧಿ ಕ್ಷೀರ ॥

(ಸುಕ್ಷೇತ್ರ ಶಾಖಾಪುರ ಬಸವಾಂಬಾದೇವಿ ಪುರಾಣ ಪುಟ : ೩೦)

'ವಿಷಯದಧಿಕ್ಷೀರ' 'ಜೇಂಗೊಡಚರಿತೆ' ಎಂಬ ಹೋಲಿಕೆಗಳಲ್ಲಿ ಉಪಮೆ ರೂಪಕಗಳು ಎಲ್ಲ ಕಾವ್ಯಗಳಲ್ಲಿ ಇರುವಂತೆ ಕಾಣಿಸಿಕೊಂಡು ರಮ್ಯತೆಯನ್ನು ಒದಗಿಸಿವೆ.

ಕಾವ್ಯ ರಚನೆಯ ಹಿಂದೆ ವ್ಯಾಪಕವಾದ ಓದು ಜ್ಞಾನದ ಅನುಸಂಧಾನಗಳನ್ನು ಹೊಂದಿರಬೇಕಾದ ಅನಿವಾರ್ಯತೆ ಇದೆ. ಕವಿಗೆ ಜ್ಞಾನದ ಅರಿವು ಅವಶ್ಯಕವಾಗಿವೆ. ಸರ್ವಧರ್ಮ ಸಮತಾ ಮೌಲ್ಯ ಮತ್ತು ಏಕತೆಗಳನ್ನು ಕವಿ ಹೀಗೆ ಪ್ರತಿಪಾದಿಸಿ ಒಂದು ಹಾದಿ ಹಾಕಿದ್ದಾರೆ–

ಅಲ್ಲಮಲ್ಲಾ ರಾಮ್‌ರಹಿಮರು
ಶೂಲಿ ಶಿವರೂಹಿಗಳು ಭೇದವ
ದಿಲ್ಲ ಮುಸ್ಲಿಂ ಹಿಂದು ಭಾಯೀ ಭಾಯಿಯೆಂದೊರೆವಂ ॥

(ಸುಕ್ಷೇತ್ರ ಅಬ್ಬೆ ತುಮಕೂರು ವಿಶ್ವಾರಾಧ್ಯ ಲೀಲಾವಿಳಾಸ, ಪುಟ : ೧೩೨)

ವಿಶ್ವವಿಶಾಲತೆಯು ಮೌಲ್ಯಗಳೊಂದಿಗೆ ಅಂತರಂಗದ ಅರಳುವಿಕೆಯಾಗಿ ಹೀಗೆ ಮೂಡಿ ಬಂದಿದೆ.

ದ್ವೇಷಕೇದ್ವೇಷಲ್ಲವುತ್ತರ
ರೋಷಕೇರೋಷಲ್ಲಕೇಳ್ಳೆ
ನಾಶಕೇನಾಶಲ್ಲಯೇಟಿಗೆಯೇಟು ಮದ್ದಲ್ಲ ।

ದ್ವೇಷ ರೋಷದ ಜಿದ್ದು ಬೇಡೈ
ಲೇಸು ಲೇಸಲ್ಲಯ್ಯ ತಿಳಿಯೈ
ಸೈಸು ಸೈರಣೆ ತಾಳು ನಾರಾಯಣನೆ ನೀನಾಗು ॥

(ಸುಕ್ಷೇತ್ರ ಸಲಗರ ಶ್ರೀ ಸಾಂಬ ಶಿವಯೋಗಿ ಪುರಾಣ, ಪುಟ : ೧೪೨)

ಪಂ. ರಾಜಗುರು ಗುರುಸ್ವಾಮಿ ಕಲಿಕೇರಿ ಅವರ ವರ್ಣನೆಗಳು ಚಿಕ್ಕವಾದರೂ ಚೊಕ್ಕ ಪರಿಣಾಮ ಬೀರುವಂತಿವೆ. ಹಿಮಾಲಯದ ವರ್ಣನೆ ಹೀಗಿದೆ.

ಸುಪ್ರಭಾತಕೆ ಹೆಪ್ಪನಿಟ್ಟೋಲೊಪ್ಪಿದುದು ರಜತಾದ್ರಿ
ಅರಿವು ಬೆಳಕಿನದಿರವು ಹಿಮಗಿರಿಹರವು. ॥

(ಶ್ರೀ ಚನ್ನಮಲ್ಲೇಶ್ವರ ಲೀಲಾಮೃತ, ಪುಟ : ೪೪)

ಬೆಳಕಿನ ರಮಣೀಯತೆಯನ್ನು ಶಬ್ದಾರ್ಥದಲ್ಲಿ ಹಿಡಿದಿಡುವ ರೀತಿ ಇದು. ವ್ಯಕ್ತಿಯನ್ನು ತತ್ವದಲ್ಲಿ ಘನೀಕರಿಸಿ ಹೇಳುವ ವರ್ಣನೆ ಇಲ್ಲಿದೆ –

ಪುರದ ಪುಣ್ಯದ ಮಠದಪುಣ್ಯದ
ಪುರಜನರೆಲ್ಲರ ಪುಣ್ಯತಾನೊಟ್ಟರಿಸಿದೋಲ್ ॥

(ಶ್ರೀ ಚೆನ್ನಮಲ್ಲೇಶ್ವರ ಲೀಲಾಮೃತ ಪುಟ:೧೧೦)

ಪಂ. ರಾಜಗುರು ಅವರ ಶೈಲಿ ಸುಲಲಿತ ಸಲಿಲವು ಹರಿದಂತೆ. ಬದುಕು ಭವ್ಯವಾಗುವದನ್ನು ವಿವರಿಸಿದ್ದು ಹೀಗೆ –

ಕಿರಿದು ಬದುಕಿನ ಗುಣ ಬಿಡಿಸಿ ಘನ
ದರಿವಿನುರು ಬದುಕನ್ನು ರೂಢಿಪ
ಪರಮ ಕ್ರಿಯೆಯದು ದೀಕ್ಷೆ ಗುರು ಗೈಯ್ಯುವನು ಶಿಷ್ಯಂಗೆ ॥
ಮರವೆಯಳಿಸುವದರಿವನಿರಿಸುವ
ಹಿರಿಯ ಭಾವವ ಬೆರೆಸಿ ಭವಭಯ
ಪರಿಪರಿಯ ಬಾಧೆಯನು ತೊಲಗಿಪ ದೀಕ್ಷೆಯೀಯುವನು ॥

(ಶ್ರೀ ಚನ್ನಮಲ್ಲೇಶ್ವರ ಲೀಲಾಮೃತ ಪುಟ : ೭೨)

ಇದ್ದ ವಿಷಯವನ್ನು ಹೃದ್ಯವಾಗಿ ನಿರೂಪಿಸುವದು ಪಂ. ರಾಜಗುರು ಕಲಕೇರಿಯವರ ವಿಶೇಷತೆ. ಸಹಜವಾದ ನಿರೂಪಣೆ ಕಥಾ ವಿವರಗಳು ಗಟ್ಟಿಗೊಳ್ಳುತ್ತ ಸಾಗುವವು. ಶಬ್ದಗಳಿಂದ ದೃಶ್ಯವನ್ನು ನಿರ್ಮಿಸುವ ರೀತಿ ಇದರಲ್ಲಿದೆ.

ಕೊಡುವ ತ್ಯಾಗದ ಗುಣವು ಚಿನ್ನವು
ಮೃಡನ ಧರ್ಮದ ಚೆನ್ನಚೇತನ
ಕಡವರಕ್ಕೆ ಮಿಗಿಲಯ್ಯಾ ನೀ ನೀಡಿರುವ ಭಿಕ್ಷೆಯಿದು ॥

ಬಡವಭಕ್ತಿಯು ಬಂಡಿಗಾಲಿಯು
ಕಡು ಹೃದಯಿ ನೀನೀಗ ಹಿಡಿ ಹಿಡಿ
ಯಡಿಯನೊಡ್ಡೈಯೆನುತ ಗುರುಶಾಂತೇಶ್ವರನು ನಗುತ ॥

(ಶ್ರೀ ಗುರುಶಾಂತ ಶಿವಯೋಗಿ ಪುರಾಣ ಪುಟ : ೧೫೦)

ಭಾವ ಮತ್ತು ಭಾಷೆಗಳ ಮಿಲನವು ಇಲ್ಲಿದೆ. ಕಲ್ಪನೆಯು ಇಲ್ಲಿ ಮುಖ್ಯವಾಗಿಲ್ಲ. ಭಾವ–ವಿಚಾರಗಳು ಕಥೆ ಘಟನೆಗಳನ್ನು ಬಿಂಬಿಸುತ್ತ ಸಾಗುತ್ತವೆ.

ಪ್ರತಿಯೊಂದು ಪುರಾಣವು ಕಾವ್ಯಕಲೆಯನ್ನು ಒಳಗೊಂಡಿರುತ್ತದೆ. ಕಾವ್ಯಕಲೆಯ ಚೌಕಟ್ಟಿನಲ್ಲಿ ಪುರಾಣಗಳು ರಚನೆಯಾದರೆ ಕಾವ್ಯ ಸೌಂದರ್ಯ ಮತ್ತಷ್ಟು ಸೊಗಸಾಗಿ ಮೂಡಿಬರುತ್ತದೆ. ಕಾವ್ಯದಲ್ಲಿ ಪ್ರತಿಮೆ, ಅಲಂಕಾರ, ರಸಾನುಭವ ಇವು ಪ್ರಮುಖವಾಗಿ ಬಂದು ಕಥನ ಕಲೆಗೆ ಒಂದು ಮೆರಗನ್ನು ಉಂಟುಮಾಡುತ್ತವೆ. ಶ್ರೀ ರುದ್ರಮುನಿ ಶಿವಾಚಾರ್ಯ ಪುರಾಣದಲ್ಲಿ –

ಕಲಿಯದಲಿ ಕವಿತೆಯನು ರಚಿಸುವ
ಕಲೆಯು ಬರುವುದು ಕನ್ನಡಾಂಬೆಯ
ನೆಲದ ನೀರ್ ಬಲವೆಂದು ಪಂಪನು ಮುನ್ನ ಪೇಳಿಹನು ।
ಕಲಿತವನು ನಾನಲ್ಲ ಕನ್ನಡ
ಸುಲಲಿತಕ್ಕರವೋದಿ ಬರೆಯುವೆ
ನೆಲದೊಳೆನ್ನಯ ಜನುಮ ಸಫಲತೆಗಾಗಿ ಚರಿತೆಯನು ॥

(ಶ್ರೀ ರುದ್ರಮುನಿ ಶಿವಾಚಾರ್ಯ ಪುರಾಣ, ಪುಟ : ೧೫)

ಎಂದು ಹೇಳುವಲ್ಲಿ ಕಾವ್ಯಕಲೆಯು ತನ್ನ ರೂಪವನ್ನು ಬಿಚ್ಚಿಕೊಳ್ಳುತ್ತದೆ.

ಪುರಾಣಗಳು ಜನಸಾಮಾನ್ಯರ ಮನದಾಳದಲ್ಲಿ ಅಚ್ಚಳಿಯದಂತೆ ಉಳಿಯ ಬೇಕಾದರೆ ಪುರಾಣಗಳಲ್ಲಿ ಕಾವ್ಯಕಲೆಯು ಸರಳವಾಗಿ ಅರ್ಥವಾಗುವಂತೆಯಿರಬೇಕಾಗುತ್ತದೆ. ಅಂತಹ ಸನ್ನಿವೇಶ ತಂದಿರುವ ಇಲ್ಲಿಯ ಆಧುನಿಕ ಪುರಾಣಗಳು ಮಹತ್ವವನ್ನು ಪಡೆದುಕೊಂಡಿವೆ. ಕಾವ್ಯದ ಸಾಮಾಗ್ರಿಗಳ ಮಾತು, ಸಂಭಾಷಣೆ, ಸನ್ನಿವೇಶಕ್ಕೆ ತಕ್ಕಂತೆ ಪಾತ್ರಗಳು ಮನೋಹರವಾಗಿ ಮೂಡಿಬಂದು ಇಲ್ಲಿಯ ಪುರಾಣ ಕಾವ್ಯದಲ್ಲಿಯ ಕಲೆಯನ್ನು ಎತ್ತಿ ತೋರಿಸುತ್ತವೆ. ಕಾವ್ಯಕ್ಕೊಂದು ಧ್ವನಿ, ಆ ಧ್ವನಿಯ ಮೂಲಕ ಸಹೃದಯನಲ್ಲಿ ರಸಾನಂದ ಉಂಟುಮಾಡುವ ಮೂಲಕ ಆ ಪುರಾಣ ಜನರ ಹತ್ತಿರ ಬರುವುದು ಇಲ್ಲಿಯ ವಿಶೇಷತೆಯಾಗಿದೆ.

ಹೀಗೆ ಆಧುನಿಕ ಪುರಾಣಕಾವ್ಯಗಳಲ್ಲಿ ಭಾಷೆಯ ಮೂಲಕ ಅಭಿವ್ಯಕ್ತಗೊಂಡ ಛಂದಸ್ಸಿನ ಛಂದೋಲಯದಲ್ಲಿ ತನ್ನ ಅಂತಃಸತ್ವವನ್ನು ಬಿಚ್ಚಿಕೊಂಡ ಪರಿಯನ್ನು ಈ ಮುಂದಿನಂತೆ ನೋಡಲಾಗಿದೆ.

ವರ್ಣನೆಗಳು ಕಾವ್ಯಕ್ಕೆ ಒಂದು ಜೀವಸತ್ವವನ್ನು ನೀಡುತ್ತವೆ. ಅವುಗಳು ಕಾವ್ಯಕ್ಕೆ ಪೂರಕವಾಗಿ ಕಥಾಹಂದರ ಬೆಳೆಯಲು ಸಹಾಯಕವಾಗಿವೆ. ಇಲ್ಲಿ ಅನೇಕ ಕೃತಿಗಳಲ್ಲಿ ಇಂತಹ ವರ್ಣನೆಗಳು ಕಂಡುಬರುತ್ತವೆ. ಉದಾಹರಣೆಗೆ ಈ ಕೆಳಗಿನ ಒಂದು ಪದ್ಯವನ್ನು ನೋಡಬಹುದು.

ಮಾತೆ ನಿಮ್ಮಯ ಕಂಠಸೊಬಗಿಗೆ
ಸ್ವಾತಿ ಮುತ್ತಿನ ಸರವ ತೊಡಿಸುತ
ಸಾತಿ ಶಯದಾ ರನ್ನ ಮುಕುಟವ ತೊಡಿಸ ಲಾಶಿಸುವೆ ॥

(ಸದ್ಗುರು ಸಚ್ಚಿದಾನಂದ ಪುರಾಣ, ಪುಟ : ೪)

ಎಂಬಲ್ಲಿ ಕವಿಯು ಕನ್ನಡ ತಾಯಿಗೆ ತನ್ನ ಭಕ್ತಿಯನ್ನು ಈ ಪದ್ಯದ ಮೂಲಕ ಹೇಳಿದ್ದಾನೆ ಅದರಂತೆ

ಪರಮ ಪತಿವ್ರತೆ ಹಣೆಯ ತಿಲಕವೂ
ಧರಣಿ ದೇವಿಯ ಕೆಂಪು ತಿಲಕವೊ
ಹರನ ಮೂರನೆ ನಯನ ಕಿಡಿಯದು ಸಿಡಿದುದೊನಭದಿ ।
ಮೆರಗು ವಸಸ್ತ್ರವನುಟ್ಟು ವನಿತೆಯು
ಸೆರಗ ಹೊದೆಯುತ ತಿಲಕ ತೀಡುತ
ಗುರುವಿಗೆರಗಲು ಬಂದ ತೆರದಲಿ ಸೂರ್ಯನುದಯಿಸಿದ ॥

(ಶ್ರೀ ಗುರು ರುದ್ರೇಶ ಲೀಲಾವಿಲಾಸ, ಪುಟ : ೨೧೨)

ಹೀಗೆ ಸೂರ್ಯೋದಯದ ವರ್ಣನೆಯನ್ನು ಕವಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಮುಂದುವರೆದು ಅನೇಕ ಕವಿಗಳು ಭರತಖಂಡವನ್ನು ವರ್ಣಿಸಿದ್ದಾರೆ. ಆ ಒಂದು ಪದ್ಯ ಈ ರೀತಿಯಲ್ಲಿ ಅಭಿವ್ಯಕ್ತಗೊಂಡಿದೆ.

ಗಿರಿವನಗಳಾ ಸೊಬಗಿನಿಂದಲಿ
ಸಿರಿಗೆ ಚಿನ್ನದ ಖಣಿಗಳಿಂದಲಿ
ಹರಿಹರನ ಮಂದಿರಗಳಿಂದಲಿ ಬಹು ನದಿಗಳಿಂದ
ಅರೆಯೊಳೆಸೆಯುವ ಕಲೆಗಳಿಂದಲಿ
ಶರಣ ಸಂತರು ವಿರತರಿಂದಲಿ
ಮರೆವುದೀ ಭಾರತದೊಳೆಮ್ಮಯ ಪುಣ್ಯ ಬಲವೆನಿತೊ ॥

(ಬೆಳವಣಕಿ-ಭೋಪಲಾಪುರ ಶ್ರೀ ಗುರು ಲಿಂಗಮ್ಮನವರ ಪುರಾಣ, ಪುಟ : ೯)

ಎನ್ನುವಲ್ಲಿ ಕವಿಯು ಭಾರತದೇಶದ ಮಹಿಮೆಯನ್ನು ಕೊಂಡಾಡಿದ್ದಾನೆ. ಇದೇ ಪ್ರಕಾರ ಪುರಾಣದ ನಾಯಕರು ಜನಿಸುವಾಗ ಆಯಾ ಪ್ರದೇಶದ ಸೊಬಗನ್ನು ಕವಿಗಳು ವರ್ಣಿಸಿದ್ದಾರೆ. ನದಿ, ಬೆಟ್ಟ, ಗುಡ್ಡ, ಸಿದ್ಧಪುರುಷ ವ್ಯಕ್ತಿತ್ವ, ಮುಂತಾದವುಗಳು ಕಾವ್ಯದಲ್ಲಿ ವರ್ಣಿತವಾಗಿವೆ.

ಆದಿಪ್ರಾಸ, ಅಂತ್ಯಪ್ರಾಸ, ಪುನರುಕ್ತಿ ಹೇಳಿಕೆಗಳು, ಭವಿಷ್ಯದ ವಾಣಿಗಳು, ಶಾಪಗಳು, ವಿವಿಧ ದೈವಗಳ ಸ್ತುತಿ ಪದ್ಯಗಳು, ಅಲಂಕಾರ ಪದ್ಯಗಳು ಕಾವ್ಯಕಲೆಯಲ್ಲಿ ತಮ್ಮದೇ ಆದ ಮಾಧುರ್ಯ್ಯದಿಂದ ಈ ಆಧುನಿಕ ಪುರಾಣಗಳ ಕಾವ್ಯಕಲೆಯಲ್ಲಿ ಮಿಂಚುತ್ತವೆ. ಭಾಮಿನಿ ಲಯವು ಕಾವ್ಯದ ಪ್ರಧಾನ ಭೂಮಿಕೆಯಾಗಿದ್ದು, ತನ್ನ ವೈಯ್ಯಾರವನ್ನು ಬಿಂಬಿಸುತ್ತ ಓದುಗರ ಮನಸ್ಸನ್ನು ಅರಳಿಸುತ್ತದೆ.

ಪುರಾಣಗಳ ಪ್ರಾರಂಭದಲ್ಲಿ ಪ್ರಾರ್ಥನಾ ಪದ್ಯಗಳು ಕಾವ್ಯಾಂಶದಿಂದ ಕೂಡಿರುತ್ತವೆ ಎಂಬುದಕ್ಕೆ ಶ್ರೀ ವಾಸುದೇವ ಹೂಲಿಯವರು ಬರೆದಿರುವ 'ಶ್ರೀ ಮೈಲಾರಲಿಂಗ ಮಹಿಮೆ'ಯ ಪ್ರಾರ್ಥನಾ ಪದ್ಯವು ಉತ್ತಮ ಉದಾಹರಣೆಯಾಗಿದೆ.

ಪದದ ಮಂಜುಳ ನುಡಿಯೆ ನಡಿಗೆಯು
ಉದಿತಲಂಕಾರದುವೆ ಹೃದಯವು
ಮಧುರ ಭಾವವೆ ತೊಡಿಗೆ ಲಕ್ಷಒಡಲು ಪಡೆದಿರುವ
ಸಮಲದುರುಭಕ್ತಿ ಯೌವ್ವನ
ವದುವೆ ಎನ್ನಯ ಕಾವ್ಯಕನ್ಯೆಯು
ಪದುಮನಾಭಗೆ ವಾಸುದೇವನು ಕೊಟ್ಟ ಘನವಂತ ॥

(ಶ್ರೀ ಮೈಲಾರ ಲಿಂಗ ಮಹಿಮೆ, ಪುಟ : ೬)

ಪುರಾಣ ರಚನೆಯ ಕಾವ್ಯಾಂಶವು ಛಂದೋಬದ್ಧವಾಗಿ ಯಾವ ರೀತಿ ಹೆಣೆಯಲಾಗಿದೆ ಎಂಬುದನ್ನು ಈ ಪದ್ಯದ ಮೂಲಕ ಕಂಡುಕೊಳ್ಳಬಹುದಾಗಿದೆ. ಪುರಾಣಗಳ ಮೌಲ್ಯವನ್ನು ಬಹುಮಟ್ಟಿಗೆ ಹೆಚ್ಚಿಸಲು ಕಾರಣವಾದವುಗಳೆಂದರೆ, ಅವುಗಳಲ್ಲಿ ವರ್ಣಿತವಾಗಿರುವ ವಿಷ್ಣು, ಶಿವ, ಶಕ್ತಿಯರು ತಾಳಿದ ಅವತಾರಗಳು ವರ್ಣಾನಾತ್ಮಕವಾಗಿ ರೂಪುಗೊಂಡಿರುವುದು. ಜನಸಾಮಾನ್ಯರ ಮನಸ್ಸಿನಲ್ಲಿ ದೇವರ ಪ್ರೀತಿ ದಯೆ, ಸಾಮರ್ಥ್ಯ ಮೊದಲಾದವುಗಳು ಪ್ರತ್ಯಕ್ಷ ನಿದರ್ಶನಗಳಿಂದ ಮೂಡಿಸುವ ಅದ್ಭುತ ಶಕ್ತಿ ಪುರಾಣಗಳಿಗೆ ಬಂದುದು ಕಥನ ಕಲೆಗಳಿಂದ ಎಂದು ಹೇಳಬಹುದು.

ಪುರಾಣ ರಚನಾಕಾರರು, ಸನ್ನಿವೇಶ, ಉದ್ದೇಶ, ರೀತಿ, ತತ್ವ ಶೈಲಿ, ಅಲಂಕಾರ, ಛಂದಸ್ಸು ಮೊದಲಾದ ಅಂಶಗಳಲ್ಲಿ ತಮ್ಮದೇ ಆದ ಪದ್ಧತಿಯನ್ನು ಅಳವಡಿಸಿಕೊಂಡು ಪ್ರಸ್ತುತ ಪುರಾಣಗಳನ್ನು ಬರೆದಿದ್ದಾರೆ. ಈ ಎಲ್ಲ ಅಂಶಗಳು ಆಧುನಿಕ ಪುರಾಣಗಳನ್ನು ಅವಲೋಕಿಸಿದಾಗ ಅರ್ಥವಾಗುತ್ತವೆ.

ಆಧುನಿಕ ಪುರಾಣಗಳು ಮಾನವರಾಗಿ ಅವತರಿಸಿದ ಶಿವಶರಣರು ಮಾನವರ ಕಷ್ಟ-ನಷ್ಟಗಳನ್ನು ಅರ್ಥೈಸಿಕೊಂಡು ಪವಾಡಗಳ ಮೂಲಕ ಅವರಿಗೆ ಪರಿಹಾರವನ್ನು ಸೂಚಿಸುತ್ತಾರೆ ಎಂಬ ಅಂಶವನ್ನು ಹೇಳುತ್ತವೆ. ಪ್ರಸ್ತುತ ಪುರಾಣಗಳಲ್ಲಿ ಸನ್ನಿವೇಶ, ಕಲ್ಪನೆಗಳು ವೈವಿಧ್ಯ

ಪೂರ್ಣವಾಗಿ ಮೂಡಿ ಬಂದಿವೆ. ಅಂತಹ ಕೆಲ ಪುರಾಣಗಳ ಉದಾಹರಣೆಗಳನ್ನು ನೋಡಬಹುದಾಗಿದೆ.

ಶ್ರೀ ವಾಸುದೇವ ಹೂಲಿಯವರು "ಮೈಲಾರಲಿಂಗನ ಮಹಿಮೆ ಪುರಾಣಕಾವ್ಯದಲ್ಲಿ ಬರುವ ಅನೇಕ ವರ್ಣನೆಗಳನ್ನು ಕಣ್ಣಿಗೆ ಕಟ್ಟುವಂತೆ ಹೆಣೆದಿದ್ದಾರೆ. ಯುದ್ಧರಂಗ ಭೂಮಿಯ ವರ್ಣನೆ, ದೇವಾನುದೇವತೆಗಳ ಜಯಕಾರ, ಬ್ರಹ್ಮ-ವಿಷ್ಣು-ಶಿವನ ಆಶೀರ್ವಾದದ ಜಯ ಜಯಕಾರ ಹಾಗೂ ಸಪ್ತರ್ಷಿಗಳ ಗೋಳಿನಕಥೆ, ದೈತ್ಯ ರಾಕ್ಷಸರು ಯುದ್ಧ ಭೂಮಿಯಲ್ಲಿ ಹೋರಾಡಿ ಸೋತ ಸನ್ನಿವೇಶ, 'ಮಣಿಕ-ಮಲ್ಲಾಸುರರ ಯುದ್ಧದ ಪ್ರಸಂಗ'ವು ಮಹಾಭಾರತವನ್ನು ನೆನೆಪಿಸಿಕೊಡುತ್ತದೆ. ಹೀಗೆ ಹಲವು ಸನ್ನಿವೇಶಗಳು ಈ ಪುರಾಣದಲ್ಲಿನ ಕಾವ್ಯ ಕಲೆಗೆ ಸಾಕ್ಷಿಯಾಗಿವೆ.

ಪ್ರಭು ಬೊಮ್ಮನಹಳ್ಳಿ ಅವರ 'ಶ್ರೀ ಗುರು ಶರೀಫರ ಪುರಾಣ'ದಲ್ಲಿ ಬಳಸಿದ ಛಂದಸ್ಸಿನ ಮಟ್ಟುಗಳು, ಪ್ರಾಸಗಳು, ಕಾವ್ಯದಗೇಯತೆ ಎಲ್ಲವೂ ಅತ್ಯದ್ಭುತವಾಗಿ ಮೂಡಿ ಬಂದಿವೆ. ಭಾಮಿನಿ ಷಟ್ಪದಿಯು ಪುರಾಣಗಳಿಗೆ ಹೊಸ ಆಯಾಮವನ್ನೇ ತಂದು ಕೊಟ್ಟಿದೆ ಎಂಬುದನ್ನು ಈ ಪುರಾಣಗಳಲ್ಲಿ ಗುರುತಿಸಬಹುದಾಗಿದೆ. ಜನ ಸಾಮಾನ್ಯರಿಗೆ ಅರ್ಥವಾಗುವಂತೆ, ಪುರಾಣದಲ್ಲಿ ನಿರೂಪಿತವಾದ ಪವಾಡಗಳು, ಕಥೆಗಳು, ಸಂಗೀತ, ಆಧ್ಯಾತ್ಮ ಮುಂತಾದ ವಿಷಯಗಳನ್ನು ರಸವತ್ತಾವಾಗಿ ವಿಶ್ಲೇಷಿಸಿದ್ದಾರೆ.

'ಮಹಾಮಾಯಾ ಮಂಗಳಾ ದೇವಿ ಚರಿತಂ' ಪುರಾಣದ ಪ್ರಾರಂಭದ ಪದ್ಯದಲ್ಲಿ ವಾಸುದೇವ ಹೂಲಿಯವರು ಕನ್ನಡ ಭಾಷೆಯ ಚಂದವನ್ನು ಈ ರೀತಿಯಾಗಿ ವರ್ಣಿಸುತ್ತಾರೆ.

ಕನ್ನಡ ನುಡಿ ಕೇಳಲಂದವು
ಕನ್ನಡ ನುಡಿ ನುಡಿಯಲಂದವು
ಚಿನ್ನದಾಚೆಲೆಗಿಂತ ಕನ್ನಡಕಧಿಕ ಸಂಪದವು ।
ಕನ್ನಡವು ಮಹ ಪಂಚ ಭೂತದಿ
ಚನ್ನತನದಲಿ ಬೆರೆತು ಕೊಂಡಿದೆ
ಕನ್ನಡದ ನುಡಿ ನುಡಿಯದವನೇದನುಜನಂತಿಹನು ॥

(ಮಹಾಮಾಯಾ ಮಂಗಳಾದೇವಿ ಚರಿತಂ, ಪುಟ : ೪)

ಎಂಬಲ್ಲಿ ಭಾಷೆಯ ಮೇಲಿನ ಪ್ರೀತಿ ಹಾಗೂ ಛಂದಸ್ಸಿನ ಲಯ ಬದ್ಧತೆ ಹಾಗೂ ಆದಿಪ್ರಾಸ ಅಂತ್ಯ ಪ್ರಾಸಗಳನ್ನು ಅಚ್ಚುಕಟ್ಟಾಗಿ ನಿರೂಪಿಸುವಲ್ಲಿ ಕವಿ ಯಶಸ್ವಿಯಾಗಿದ್ದಾರೆ. ಇಂಥಹ ಅದ್ಭುತ ಕಲ್ಪನೆಗಳನ್ನು ಸನ್ನಿವೇಶಗಳನ್ನು ಪುರಾಣ ಕಾವ್ಯಗಳಲ್ಲಿ ಮಾತ್ರ ಕಾಣಬಹುದಾಗಿದೆ. ಈ ಪುರಾಣದಲ್ಲಿ ದೈತ್ಯರ ಸಂಹಾರ ಮಾಡುವ ದೃಶ್ಯಗಳು, ರಾಕ್ಷಸರು ಶಿವನಿಂದೆಯನ್ನು

ಮಾಡುವ ದೃಶ್ಯ, ದೇವಿಯನ್ನು ಹಿಯಾಳಿಸುವ ಮಾತುಗಳು, ಮೂದಲಿಕೆ ಮಾಡುವ ರೀತಿ ಮುಂತಾದ ಸನ್ನಿವೇಶಗಳನ್ನು ಕವಿ ಅತ್ಯಂತ ಮನೋಜ್ಞವಾಗಿ ಹೆಣೆದಿದ್ದಾರೆ.

ಸಂಭಾಪುರದ ಶರಣ ಶ್ರೀಗುರು ಮಲ್ಲಜ್ಜನ ಪುರಾಣದಲ್ಲಿ 'ಬಸವಂತಾಚಾರ್ಯ ಕಾಳಾಚಾರ್ಯ ಮನ್ವಾಚಾರ್ಯ'ರವರು ಮಲ್ಲಜ್ಜನು ಮಾಡಿರುವ ಪವಾಡಗಳನ್ನು, ಸಾಮಾಜಿಕ ಕಾರ್ಯಗಳನ್ನು, ಸಾಧನೆಗಳನ್ನು ಹೇಳುವಲ್ಲಿ ಭಾಮಿನಿ ಷಟ್ಪದಿಯಲ್ಲಿ ಸ್ವಾರಸ್ಯಕರವಾಗಿ ವಿವರಿಸಿದ್ದಾರೆ. ಪಟದೀಪ, ರಾಗ, ದೀಪಚೆಂದ ತಾಳದ ಲಯದಲ್ಲಿ ಪುರಾಣವನ್ನು ಹಾಡಲಿಕ್ಕೆ ಅನುಕೂಲವಾಗುವಂತೆ ಕಾವ್ಯವನ್ನು ರಚಿಸಿದ್ದಾರೆ.

ಶ್ರೀ ಘತ್ತರಗಿಯ ಭಾಗ್ಯವಂತಿ ಪುರಾಣ ಕಾವ್ಯದಲ್ಲಿ ಪಂ. ಸೋಮಶೇಖರ ಶಾಸ್ತ್ರಿಗಳು ಚಾಮರಸನ ಪ್ರಭುಲಿಂಗ ಲೀಲೆಯ ಪ್ರಭಾವಕ್ಕೆ ಒಳಗಾಗಿ ಅಲ್ಲಿರುವಂತೆ ೧೧೧೧ ಪದ್ಯಗಳಲ್ಲಿ ಹಾಗೂ ೨೫ ಗತಿಗಳಲ್ಲಿ, ಭಾಷೆ ಮತ್ತು ಛಂದಸ್ಸನ್ನು ಅಚ್ಚುಕಟ್ಟಾಗಿ ಬಳಸಿಕೊಂಡು ರಚಿಸಿದ್ದಾರೆ. ಇಲ್ಲಿ ವಿಜಯನಗರದ ಐತಿಹಾಸಿಕ ಪರಂಪರೆಯ ವರ್ಣನೆಯನ್ನು ಈ ಕೆಳಗಿನಂತೆ ನೋಡಬಹುದಾಗಿದೆ –

ನೋಡ ಬನ್ನಿರಿ ಶಿಲ್ಪಕಲೆಗಳ
ನಾಡ ಗುಡಿ-ಗೋಪುರಗಳ್ವೈಭವ
ಕಾಡು ನಾಡಾಗಿಹುದು ಸಂಸ್ಕೃತಿ ಚಿಮ್ಮುತಿಹದಿಲ್ಲಿ ।
ತೀಡಿ ತಿದ್ದಿದ ರಾಮಚರಿತೆಯ
ಮೂಡಿಸಿದ ಭಾರತದ ಶಿಲ್ಪದಿ
ಮೋಡಿ ಮಾಡುವ ಕೆತ್ತನೆಯ ಕಲೆ ನೋಡಿ ಕನ್ನಡದಿ ॥

(ಸುಕ್ಷೇತ್ರ ಘತ್ತರಗಿಯ ಶ್ರೀ ಭಾಗ್ಯವಂತಿ ಪುರಾಣ ಪುಟ: ೨೦)

ಹೀಗೆ ಪುರಾಣಗಳಲ್ಲಿ ವರ್ಣನಾತ್ಮಕವಾಗಿ ಛಂದೋಬದ್ಧ ರೀತಿಯಲ್ಲಿ ಕಾವ್ಯವನ್ನು ಆದಿಪ್ರಾಸದೊಂದಿಗೆ ಉತ್ತಮ ಗೇಯತೆಯೊಂದಿಗೆ ಪುರಾಣವನ್ನು ರಚಿಸಿದ್ದಾರೆ. ಇಂತಹ ಕಾವ್ಯಗಳು ಜನರ ಮನಸ್ಸಿನಲ್ಲಿ ಅಚ್ಚಳಿಯದಂತೆ ಉಳಿಯುತ್ತವೆ.

ಭಾಷೆಯು ಸಮುದಾಯ ಮತ್ತು ಸಂಸ್ಕೃತಿಯ ಜೊತೆಗೆ ಬರಹಗಾರನ ಆಶಯ ವಿನ್ಯಾಸವನ್ನು ಅರಿಯುವಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಆದ್ದರಿಂದ ಒಂದು ಕೃತಿಯ ಅಂತರಂಗವನ್ನು ತಿಳಿದುಕೊಳ್ಳಬೇಕಾದರೆ ಅದರ ಭಾಷೆಯ ರಚನೆ, ಆಕೃತಿಯ ಶೈಲಿ, ವರ್ಣನಾ ವಿಧಾನ, ಅಲಂಕಾರ ಮುಂತಾದ ವಿಧದಲ್ಲಿ ಗುರುತಿಸುವುದು ಅವಶ್ಯಕವಾಗಿದೆ. ನಮ್ಮ ಕನ್ನಡ ಭಾಷೆಯ ಇತಿಹಾಸವನ್ನು ಅವಲೋಕಿಸಿದಾಗ ಆಯಾಕಾಲ ಘಟ್ಟದಲ್ಲಿ ಚಂಪೂಶೈಲಿ, ವಚನ, ಷಟ್ಪದಿ, ರಗಳೆ, ತ್ರಿಪದಿ ಮುಂತಾದ ಪ್ರಕಾರದಲ್ಲಿ ತನ್ನ ಛಂದಸ್ಸಿನ ಹಿರಿಮೆಯನ್ನು ತೋರಿಸುತ್ತಾ ಮುನ್ನಡೆದ ಈ ಆಧುನಿಕ ಕಾಲದಲ್ಲಿಯೂ ಅದರ ಛಾಯೆ ಇನ್ನು ಮಾಸಿಲ್ಲ.

ಹೀಗಾಗಿ ಪುರಾಣ ಕಾವ್ಯಕ್ಕೆ ಒಂದು ಸಿದ್ಧಮಾದರಿಯ ರೂಪವಾಗಿ ಷಟ್ಪದಿ ಇವತ್ತಿಗೂ ಸಹ ತನ್ನ ಮಹತ್ವವನ್ನು ಉಳಿಸಿಕೊಂಡು ಬಂದಿದೆ. ಅದರಲ್ಲೂ ಹೆಚ್ಚಾಗಿ ಪುರಾಣ ಕಾವ್ಯಕ್ಕೆ ಹೇಳಿಮಾಡಿಸಿದ ಲಯವಾಗಿರುವ ಭಾಮಿನಿಯ ಜೊತೆಗೆ ವಾರ್ಧಕದ ಲಯವೂ ಹಿಂದೆ ಬಿದ್ದಿಲ್ಲ.

ಇವುಗಳ ಜೊತೆಗೆ ಕಾವ್ಯವು ಛಂದೋರೂಪದ ಬಂಧದಲ್ಲಿ ಲಲಿತಕಲೆಯಾಗಲು ಆ ಕಾವ್ಯಗಳಲ್ಲಿ ಅಡಗಿರುವ ಧ್ವನಿ, ರಸ, ಅಲಂಕಾರ, ವರ್ಣನೆಗಳು ಮುಖ್ಯವಾದವುಗಳಾಗಿವೆ. ಹೀಗಾಗಿ ಈ ಅಧ್ಯಯನದಲ್ಲಿ ಇಂತಹ ಅಂಶಗಳ ಕುರಿತು ಚರ್ಚೆಯನ್ನು ಮುಂದುವರಿಸಲಾಗಿದೆ. ಆ ಮೂಲಕ ಪುರಾಣ ಕಾವ್ಯದ ಕಾವ್ಯಕಲೆಯನ್ನು ಗುರುತಿಸುವ ಉದ್ದೇಶ ನಮ್ಮದಾಗಿದೆ.

◆◆◆

೪.೪. ಪುರಾಣ ಕಾವ್ಯ : ಪಾತ್ರ ವಿವೇಚನೆ

ಭಾರತದ ಕಾವ್ಯ ಪದ್ಧತಿಯಲ್ಲಿ ಬಹಳ ಹಿಂದಿನಿಂದಲೆ ಶಿಷ್ಟ–ದುಷ್ಟ ಪಾತ್ರಗಳ ಪೂರ್ವ ನಿರ್ಧಾರಿತ ವಿಧಾನವೇ ಪರಂಪರೆಯಾದದ್ದು ರಾಮಾಯಣದ ಕಾಲದಿಂದಲೆ. ಕವಿಯ ಅಥವಾ ಪರಂಪರೆಯ ನಿರೂಪಕರ ಪಕ್ಷಪಾತವು 'ವೈಭವೀಕರಣ' ಮತ್ತು ಉದ್ದೇಶಿತ 'ತುಚ್ಛೀಕರಣ'ಗಳು ಶಿಷ್ಟ ಮತ್ತು ದುಷ್ಟ ಪಾತ್ರಗಳನ್ನೇ ನಿರ್ಮಿಸುವತ್ತ ನಡೆದವು. ಧರ್ಮದ ಒಳಹೋಗುವಿಕೆ ಈ ವಿಧಾನವನ್ನು ಮತ್ತಷ್ಟು ಗಟ್ಟಿಗೊಳಿಸಿತು. ನೈತಿಕತೆಯ ಹಿನ್ನೆಲೆಯೂ ಇರುವದರಿಂದ ಈ ವಿಧಾನಕ್ಕೆ ಬಲ ಬಂದಿತು. ಈ ಮಧ್ಯೆ ಕೆಟ್ಟವೆಂದು ತುಚ್ಛೀಕರಿಸಿದ ಪಾತ್ರಗಳಲ್ಲಿಯ ಒಳ್ಳೆಯತನವಾಗಲಿ, ಒಳ್ಳೆಯ ಪಾತ್ರದಲ್ಲಿರುವ ಕೆಟ್ಟ ಗುಣಗಳನ್ನಾಗಲಿ ಗ್ರಹಿಸದೆ ಸಾವಿರ ಸಾವಿರ ವರ್ಷಗಳು ಸವೆದವು. ಈ ಹಿನ್ನೆಲೆಯಲ್ಲಿ ಹಿಂದೂ ಸ್ವರ್ಗ–ನರಕ ಕಲ್ಪನೆಗಳಿಗೂ ಪುರಾಣಗಳು ಹಾದಿ ಹಾಕಿದವು. ಇದರಿಂದ ಸ್ವಲ್ಪ ಬಿಡುಗಡೆ ಆದದ್ದೆ ಜೈನರಿಂದ. ಅವರ ೬೩ ಶಲಾಖಾ ಪುರುಷರಲ್ಲಿ ರಾಮನಿರುವಂತೆ ರಾವಣನೂ ಪೂಜ್ಯ. ವಡ್ಡಾರಾಧನೆಯಂತಹ ಕೃತಿಗಳಲ್ಲಿ ಪರಮ ಪಾಪಿಗಳು ಜೈನತತ್ವ ಅನುಸರಣೆಯಿಂದ ಪುಣ್ಯವಂತರಾಗುವದನ್ನು ಚಿತ್ರಿಸಲಾಗಿದೆ. ಇದರಿಂದ ಹಿಂದೂ ಚಿತ್ರಣಕ್ಕಿಂತ ಭಿನ್ನವಾದ ವಾಸ್ತವ ನೆಲೆಗಟ್ಟನ್ನು ಜೈನರು ಬೋಧಿಸಿದಿರು. ಇಲ್ಲಿಯೂ ಧಾರ್ಮಿಕ ನೈತಿಕತೆಯ ಎಳೆಗಳೇ ಪ್ರಧಾನವಾದವು.

ಸಾಹಿತ್ಯ ಸೃಷ್ಟಿಯಲ್ಲಿ ಸಮಾಜದ ಒಳಹೋಗುವಿಕೆಯನ್ನು ಮುಖ್ಯವಾದ ಅಂಶವೆಂದು ಪರಿಗಣಿಸಲಾಗುವದು. ಸಮಾಜದಲ್ಲಿ ಬದುಕಿದ ಜನರ ಗುಣಾದರ್ಶಗಳು, ತ್ಯಾಗ ಬಲಿದಾನಗಳು ಸಾಹಿತ್ಯಕ್ಕೆ ಪ್ರೇರಣೆ ನೀಡಿದವು. ಕನ್ನಡನಾಡ ಸಂದರ್ಭದಲ್ಲಿ ಯುಗಧರ್ಮವಾದ 'ವೀರ' ಮತ್ತು 'ಧರ್ಮ'ಗಳು ಸಾಹಿತ್ಯಕ್ಕೆ ಬೆನ್ನೆಲುಬಾಗಿದ್ದವು. ಈ ಯುಗದಲ್ಲಿ 'ತ್ಯಾಗ'ವೇ ಪ್ರಧಾನ ಅಂಶವಾದುದನ್ನು ಶಾಸನ ಸಾಹಿತ್ಯವು ತಿಳಿಸಿ ಹೇಳುತ್ತದೆ. ಪೂರ್ವದ ಹಳಗನ್ನಡ, ಹಳಗನ್ನಡದ ಹಿನ್ನೆಲೆಯಲ್ಲಿ 'ವೀರ' ಮೌಲ್ಯವನ್ನು ಕಾವ್ಯದಲ್ಲಿ ಹೇಳುವಾಗ ಹೇಳುವ ವ್ಯಕ್ತಿ ಕವಿಯೂ, ವೀರನೂ ಆಗಿದ್ದನು. ಯುಗವು ವೀರಯುಗವಾಗಿತ್ತು. ಇದರಿಂದ ವೀರಪಾತ್ರಗಳು, ವೀರಪ್ರಸಂಗಗಳು ನಿರ್ಮಾಣಗೊಂಡವು. ಪಂಪ–ರನ್ನರ ಕಾವ್ಯಗಳು ಒಂದು ಕಡೆ ವೀರಯುಗದ ವೀರರ ಚಿತ್ರಣ ಮಾಡಿದವು. ನಡುಗನ್ನಡ ಕಾಲಘಟ್ಟದಲ್ಲಿ ಯುಗಧರ್ಮ ಭಕ್ತಿಯತ್ತ ತಿರುಗಿತು. ವಚನಗಳು ಭಕ್ತಿತತ್ವವನ್ನೇ ಮುಖ್ಯ ಭೂಮಿಕೆಯಾಗಿಸಿದವು. ಮುಂಬರುವ ಎಲ್ಲ ಸಾಹಿತ್ಯ ರೂಪಗಳಲ್ಲಿ ಎಲ್ಲ ಮತೀಯರಲ್ಲಿ ಭಕ್ತಿ ಮುಖ್ಯವಾಯಿತು. ಪಾತ್ರಗಳು ಭಕ್ತಿ ಭೂಮಿಕೆಯಿಂದಲೆ ಒಡಮೂಡಿದವು.

ಆಧುನಿಕ ಕಾಲದಲ್ಲಿ ಶುದ್ಧಮಾನವೀಯತೆ, ಪ್ರಕೃತಿರಮ್ಯತೆ, ಬದುಕಿನ ಘನತೆಗಳು ಮುಖ್ಯವಾದುದರಿಂದ ಆ ತೆರನಾದ ಸಾಹಿತ್ಯಸೃಷ್ಟಿಗೆ ತಕ್ಕ ಪಾತ್ರಸೃಷ್ಟಿಗಳು ನಡೆದವು. 'ಉದಾತ್ತತೆ'ಯನ್ನು ಕಾವ್ಯಗಳಲ್ಲಿ ಪಾಲಿಸಿಕೊಂಡು ಪಾತ್ರವನ್ನು ಅದೇ ರೀತಿ ಚಿತ್ರಿಸುವತ್ತ ಹೊರಟುದನ್ನು ಕಾಣಬಹುದು. ಇದು ಮೊದಲಿನಿಂದಲೂ ಏಕಪ್ರಕಾರವಾಗಿ ಹರಿದು ಬಂದಿದೆ. ಭಾರತ/ಕರ್ನಾಟಕದ ಸಾಹಿತ್ಯ ಸಂದರ್ಭದಲ್ಲಿ ಹೆಲನ್, ಪ್ಯಾರಿಸ್, ಕ್ಲಿಯೋಪಾತ್ರ, ಸೈತಾನನಂತವರು ನಾಯಕ ನಾಯಕಿಯರಾಗಲೂ ಸಾಧ್ಯವಿಲ್ಲ ! ರಾವಣನಂತವರು ನಾಯಕರಾಗಲು ಸಾಧ್ಯವಿಲ್ಲದ್ದಕ್ಕೆ ಕಾರಣ 'ನೈತಿಕತೆ' ಮತ್ತು 'ಧರ್ಮ ವಿವೇಚನೆ'. ಲಿಂಗಾಯತ ಧರ್ಮಪ್ರಜ್ಞೆ, ಸಾತ್ವಿಕತೆ, ನೈತಿಕತೆಗಳನ್ನೇ ಬಲವಾಗಿ ನಂಬಿದ ಶರಣರ ಜೀವನವನ್ನೇ ಮುಂದಿನವರು ಕಾವ್ಯವಸ್ತುವನ್ನಾಗಿ ಶರಣರನ್ನೇ ಕಾವ್ಯದ ಪಾತ್ರಗಳನ್ನಾಗಿ ಮಾಡಿಕೊಂಡರು.

ಕಾವ್ಯ ಸಾಹಿತ್ಯ ಸೃಷ್ಟಿಯಲ್ಲಿ ಲಿಂಗಾಯತ ಕಾವ್ಯಪದ್ಧತಿಯೆಬುಂದು ಶರಣ ಜೀವನ-ತತ್ವಗಳ ವಿವೇಚನೆಗಳನ್ನೇ ಪಥವನ್ನಾಗಿ ಮಾಡಿಕೊಂಡಿತು. ಇದು ಹದಿನೈದನೆಯ ಶತಮಾನವರೆಗೆ ನಡೆಯಿತು. ಶರಣರು ಗುಡಿ ಸಂಸ್ಕೃತಿಯನ್ನು ಒಪ್ಪಲಿಲ್ಲ. ಅದನ್ನು ಹಿಂದಿಕ್ಕಿ ವ್ಯಕ್ತಿವಿಕಾಸ, ಆತ್ಮದರಿವುಗಳನ್ನು ಮುಖ್ಯವಾಗಿಟ್ಟು ಗುರುತತ್ವವನ್ನು ಪ್ರಧಾನವಾಗಿಟ್ಟರು. ಕರ್ನಾಟಕದಲ್ಲಿ ಮೊದಲಿದ್ದ ಶೈವ ಮತಗಳು ಲಿಂಗಾಯತ ತತ್ವಗಳಿಂದ ಪ್ರೇರಿತವಾಗಿ ವೀರಶೈವರಾದರು. ೧೫ನೆಯ ಶತಮಾನದ ದೊಡ್ಡ ಆಧ್ಯಾತ್ಮಿಕಶಕ್ತಿ ಎಡೆಯೂರು ಸಿದ್ಧಲಿಂಗಯತಿಗಳು. ಅವರ ಶಿಷ್ಯರು ಅನತಿ ಕಾಲದ ಮಲೆಯ ಮಾದೇಶ್ವರರು ಹೊಸದಾರಿಗಳನ್ನು ಸೃಷ್ಟಿಸಿದರು. ಸಿದ್ಧಲಿಂಗ ಯತಿಗಳ ಬದುಕೆ ಮುಂದಿನ ಸಾಹಿತ್ಯಕ್ಕೆ ಪ್ರೇರಕ ಶಕ್ತಿಯನ್ನು ನೀಡಿತು. ಕಾವ್ಯದ ಅಂತಃಸತ್ವದಿಂದ ಹಿರಿದಾದ ಸಿದ್ಧಲಿಂಗ ಶ್ರೀಗಳು ಭವ್ಯ ಪಾತ್ರವೇ ಆದರು. ಮುಂದೆ ಮಠದ ಸ್ವಾಮಿಗಳ ಪಾತ್ರಗಳನ್ನು ಕಾವ್ಯದಲ್ಲಿ ತರುವ ಪರಂಪರೆಯೆ ಬೆಳೆದು ಬಂದಿತು. ಆಧುನಿಕ ಕಾಲಘಟ್ಟದಲ್ಲಿ ಬಹುಪಾಲು ಪುರಾಣಕಾವ್ಯಗಳಲ್ಲಿ ಚಿತ್ರಣಗೊಂಡ ಪಾತ್ರಗಳು ಸ್ವಾಮಿಗಳೇ. ಈ ಸ್ವಾಮಿಗಳು ಆದರ್ಶದಲ್ಲಿ ಹುಟ್ಟಿ, ಆದರ್ಶದಲ್ಲಿ ಬೆಳೆದು, ಆದರ್ಶವಾಗಿ ಉಳಿಯುವಂತೆ ವ್ಯಕ್ತಿತ್ವ ಹೊಂದಿದವರೆಂದೇ ಚಿತ್ರಣಗೊಂಡಿರುವರು.

ಆಧುನಿಕ ಗದಗ ಜಿಲ್ಲೆಯಲ್ಲಿ ರಚನೆಗೊಂಡ ಬಹುಪಾಲು ಪುರಾಣ ಕಾವ್ಯಗಳು ಸ್ವಾಮಿಗಳ ಚರಿತ್ರೆಗಳಾಗಿವೆ. ಅವರಲ್ಲಿ ಕೆಲವು ಮಠ ಪರಂಪೆಯವರು, ಹಿಂದಿನ ಸ್ವಾಮಿಗಳ ಬಗೆಗೆ ಹೇಳಿ ಬರೆಯಿಸಿದವುಗಳಾಗಿವೆ. ಅವುಗಳನ್ನುಳಿದರೆ ಶರಣರ-ಸಂತರ, ಮಹಾತ್ಮರ ಬದುಕನ್ನು ಚಿತ್ರಿಸುವ ಕಾವ್ಯಗಳು ರಚನೆಗೊಂಡಿವೆ. ಒಟ್ಟಾರೆ ಎಲ್ಲವು ಉದಾತ್ತ ಪಾತ್ರಗಳನ್ನೇ ಚಿತ್ರಿಸಿವೆ.

ಈ ಜಿಲ್ಲೆಯ ಕವಿಗಳಲ್ಲಿ ಹೆಚ್ಚು ಸಂಖ್ಯೆಯ ಕಾವ್ಯಗಳನ್ನು (೨೨) ಬರೆದಿರುವ ಪಂಡಿತ ಪುಟ್ಟರಾಜ ಕವಿಗಳು ಶರಣರು, ಸ್ವಾಮಿಗಳು ಹೀಗೆ ಎರಡೇ ರೀತಿಯ ಪಾತ್ರಗಳನ್ನು ಕಾವ್ಯಕ್ಕೆ ಆಯ್ದುಕೊಂಡರು. ಅವರೆಲ್ಲರೂ ಜೀವನವನ್ನು ಉದಾತ್ತಾವಾಗಿ ಬದುಕಿದ ಆದರ್ಶವ್ಯಕ್ತಿಗಳೆ.

ವೀರಭದ್ರ ಪುರಾಣದಲ್ಲಿ ಮಾತ್ರ ಪೌರಾಣಿಕ ಪಾತ್ರವನ್ನು ಚಿತ್ರಿಸಿದ್ದಾರೆ. ಅದನ್ನುಳಿದರೆ ಶಿವಭಕ್ತ-ಶರಣ-ಸ್ವಾಮಿ ಹೀಗೆ ಮೂರು ರೀತಿಯ ಆದರ್ಶಮಯ ವಾಸ್ತವ ವ್ಯಕ್ತಿಗಳ ಚಿತ್ರಣವನ್ನೇ ಮಾಡಿದ್ದಾರೆ. ವೀರಶೈವ ಪರಂಪರೆಯ ಸ್ವಾಮಿಗಳೆಲ್ಲರೂ ಬದುಕಿದ್ದೆ ಒಂದು ಮಾದರಿ ಎಂಬ ರೀತಿಯ ಚಿತ್ರಣವಿಲ್ಲಿದೆ. ಇದನ್ನೇ ಮುಂಬರುವ ಪಂ. ಶ್ರೀ ರಾಜಗುರು ಗುರುಸ್ವಾಮಿ ಕಲಕೇರಿ, ಶ್ರೀ ಬ್ಯಾಟಿ ರಾಮಣ್ಣ, ಅಂಗಡಿ ಕರವೀರಪ್ಪ, ಶ್ರೀ ಪುರಾಣಿಕಮಠ ಶಾಸ್ತ್ರಿಗಳು, ಶ್ರೀ ಸದಾಶಿವ ಶಾಸ್ತ್ರಿಗಳು, ಪಂ. ಶ್ರೀ ಬಾಲಚಂದ್ರ ಶಾಸ್ತ್ರಿಗಳು, ಶ್ರೀ ಬೊಮ್ಮನಹಳ್ಳಿ, ಶ್ರೀ ಮಲ್ಲಿಕಾರ್ಜುನಸ್ವಾಮಿಗಳು, ಪಂ. ಶ್ರೀ ಶಿವದೇವಶಾಸ್ತ್ರಿಗಳು, ಶ್ರೀ ನೀಲಕಂಠ ಜಾಡಗೌಡರ ಶಾಸ್ತ್ರಿಗಳು, ಶ್ರೀ ವಾಸುದೇವ ಹೂಲಿ ಹಾಗೂ ಶ್ರೀ ಮನ್ವಾಚಾರ್ಯ ಮೊದಲಾದವರು ಪಾಲಿಸಿದ್ದಾರೆ.

ಈ ಎಲ್ಲ ಪಾತ್ರಗಳು ಒಂದು ತಾತ್ವಿಕ ಪರಂಪರೆಯನ್ನು ಒಪ್ಪಿ ನಡೆದಿವೆ. ಇಲ್ಲಿ ಒಂದು ತಾತ್ವಿಕ ಪರಂಪರೆಯನ್ನು ಹುಟ್ಟು ಹಾಕಿವೆ. ಶರಣ ಸಂಪ್ರದಾಯದ ಸ್ವಾಮಿಗಳೆಲ್ಲರ ಚಿತ್ರಣವು ಒಪ್ಪಿ ನಡೆದವು. ಅದರಲ್ಲಿ ಗುರುಪರಂಪರೆಯ ಕೆಲವು, ವಿರಕ್ತ ಪರಂಪರೆಯ ಬಹುಪಾಲು ಸ್ವಾಮಿಗಳ ಚಿತ್ರಣವಿರುವದು. ಹೊಸ ಪರಂಪರೆಯನ್ನು ಹುಟ್ಟು ಹಾಕಿದವುಗಳೆಂದರೆ; ಅವಧೂತ, ಸಿದ್ಧಾರೂಢ, ಶಿವಾನಂದ ಪರಂಪರೆಗಳು ಆಯಾ ಸ್ವಾಮಿಗಳ ಚಿತ್ರಣದೊಂದಿಗೆ ಮೂಡಿ ಬಂದಿವೆ.

ಪುರಾಣ ಕಾವ್ಯಗಳಲ್ಲಿ ಮೂಡಿದ ಪಾತ್ರಗಳು 'ಏಕೋದೇವಃ' ಎಂಬಂತೆ ಒಂದೇ ಪಾತ್ರ. ಅವರೆಲ್ಲರೂ ಸುಜನ, ಸತ್ಯ, ಸಾಕಾರ ಮೂರ್ತಿಗಳು ಅವರನ್ನು ಹೀಗೆ ಗುರುತಿಸಲಾಗಿದೆ.

ಆರ್ಯರಂ ಸತ್‌ಪ್ರಮಥವರ್ಯರಂ ಗುರುಶಿವಾ
ಚಾರ್ಯರಂ ಸದ್‌ವೃತ್ತಿಪಥದುರ್ಯರಂ ಶಿವಧರ್ಮ
ಕಾರ್ಯರಂ ಸದ್‌ವೃತ್ತಿ ಚರ್ಯರಂ ಸುಗುಣ ಮಣಿದಾರ್ಯರಂ ನಿತ್ಯಮೊಲಿದು
ವೀರ್ಯರ ಭವಜಲಧಿತಾರ್ಯರಂಹೃತ್ಕಮಲ
ಸೂರ್ಯರಂ ಸಮತೀತತೂರ್ಯರಂ ರಿಪುಗಣವಿ
ದಾರ್ಯರಂ ಬಲವದನಾರ್ಯರಂ ನುತಿಪೆ ॥

(ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಪುರಾಣ, ಪುಟ : ೩)

ಈ ಸ್ವಾಮಿಗಳ ಮಹಾತ್ಮರ ಚರಿತ್ರೆಗಳನ್ನು ಪ್ರವಚನದಲ್ಲಿ ತಿಂಗಳ ಪರಿಯಂತ ಹೇಳುವ ಮೂಲಕ ಅವರ ವ್ಯಕ್ತಿತ್ವನ್ನು ಏಕಕಾಲಕ್ಕೆ ನೂರಾರು ಜನರ ಮನಕ್ಕೆ ಮುಟ್ಟಿಸುವ ಕೆಲಸವು ನಡೆಯುವದು.

ಪುರಾಣ ಕಾವ್ಯಗಳಲ್ಲಿ ಚಿತ್ರಣಗೊಂಡ ಸ್ವಾಮಿಗಳು ಕಾಲ್ಪನಿಕ ಪಾತ್ರಗಳಲ್ಲ. ಅವರು ಸನಿಹದಲ್ಲಿಯೆ ಬದುಕಿದವರು. ಜನಮಾನಸದಲ್ಲಿ ಅವರ ಜೀವನದ ಭವ್ಯತೆಯನ್ನು ಬಿಂಬಿಸಲು

ಅವರ ಪಾತ್ರವನ್ನು 'ಉದ್ದೇಶಿತ ಲೀಲಾ' ಪ್ರಭಾವಳಿಗೆ ಒಯ್ಯಲಾಗಿದೆ. ಆಧುನಿಕ ಭಾರತದ ನಿರ್ಮಾತೃವಾದ ಡಾ. ಬಾಬಾಸಾಹೇಬ ಅಂಬೇಡ್ಕರರ ಜೀವನ ಈ ಮಾದರಿಯದಲ್ಲ. ಅಂತಹ ಬೆರಳೆಣಿಕೆಯ ಪಾತ್ರಗಳನ್ನು ಬಿಟ್ಟರೆ ಉಳಿದಂತೆ ಒಂದು ಸಿದ್ಧ ಪುರಾಣ ಮಾದರಿ ಹೀಗಿದೆ.

- ಮಹಾತ್ಮರು–ಸ್ವಾಮಿಗಳು–ಶರಣರ ಹುಟ್ಟು, ದೈವಿಸಂಕಲ್ಪದಂತೆ/ದೈವಿಕಾರ್ಯವಾಗಿ ನಡೆಯುವದು.
- ಅವರು ಬದುಕಿನ ವಿಷಮ ಪ್ರಸಂಗಗಳನ್ನು ದೈವೀ ಅನುಗ್ರಹ/ಕೃಪೆಯಿಂದ ಗೆದೆಯುವರು.
- ಅವರ ಬದುಕಿನಲ್ಲಿ ಅಲೌಕಿಕ ಲೀಲೆಗಳು/ಪವಾಡಗಳು ಘಟಿಸುತ್ತವೆ. ಅವರು ದಿವ್ಯವ್ಯಕ್ತಿತ್ವ ಪಡೆಯುತ್ತಾರೆ.
- ಜನರಲ್ಲಿ ಅವರೊಬ್ಬ ದೈವಿಶಕ್ತಿ ಎಂದು ಬಿಂಬಿತರಾಗಿ ಅವರ ಆರಾಧನೆ ಉತ್ಸವ ನಡೆಯುವವು.

ಸ್ವಾಮಿಗಳ ಸಮಾಧಿ ಕ್ಷೇತ್ರವು ಪುಣ್ಯಕ್ಷೇತ್ರವಾಗಿ ಅವರು ಐಕ್ಯರಾದ ದಿನವು ಜಾತ್ರಾ ವಿಶೇಷವಾಗಿ ಉತ್ಸವವಾಗಿ ಮಾರ್ಪಡುವದು. ಶರಣ–ಶರಣೆ ಮತ್ತು ಮಹಾತ್ಮರ ಜೀವನವು ಭವ್ಯವಾಗಿರುವದರಿಂದ ಅವರ ಜಯಂತಿದಿನ ಉತ್ಸವದಂತೆ ಆಚರಿಸಲಾಗುವದು. ಈ ಎಲ್ಲ ಹಿನ್ನೆಲೆಯ ವಿವರಣೆಗೆ ಕಾರಣವೆಂದರೆ ಅವರ ವ್ಯಕ್ತಿತ್ವ ದೈವೀ ಆವರಣದಲ್ಲಿಯೆ ಮೂಡಿ ಬಂದಿರುವದು.

ಬದುಕಿನ ವಿಷಮ ಪ್ರಸಂಗಗಳನ್ನು ತಮ್ಮ ಸಾತ್ವಿಕ ಕ್ರಿಯಾಕಲಾಪಗಳ ಮೂಲಕ ಬದುಕಿರುವದು ಸಾಮಾನ್ಯರಿಗೆ ವಿಶೇಷವೆನಿಸಲು ಸಾಧ್ಯ. ಪುರಾಣ ಕವಿಗಳು ಅಷ್ಟಕ್ಕೆ ಬಿಡದೆ ಅದನ್ನು ದೈವತ್ವಕ್ಕೇರಿಸಲು, ಅಲೌಕಿಕಗೊಳಿಸಲು, ಅಸಾಮಾನ್ಯಗೊಳಿಸಲು ಪವಾಡಗಳನ್ನು ಹೇಳುತ್ತಾರೆ. ಬಸವಣ್ಣ, ಅಕ್ಕಮಹಾದೇವಿ, ಕನಕದಾಸ, ಪುರಂದರದಾಸ, ಗಾಂಧೀಜಿ, ಅಂಬೇಡ್ಕರ ಜೀವನದ ಮುಖಾಮುಖಿಯೇ ಅದ್ಭುತ ಆಖ್ಯಾಯಿಕೆ ಎನಿಸುವದು. ಅಂತೆಯೆ ಕ್ರಿಸ್ತ, ಪೈಗಂಬರ, ಬುದ್ಧ, ತೀರ್ಥಂಕರರು ಬದುಕಿದ ರೀತಿಯೇ ಅನನ್ಯ ಆಸಾಧಾರಣ. ಈ ಅಂಶಗಳೇ ಅವರ ಬದುಕಿಗೆ ಪವಾಡ/ಲೀಲೆಗಳನ್ನು ಹೊಂದಿಸಲು ಕಾರಣವೆನಿಸುವದು. ಈ ಅಂಶ ಸಾಧಾರಣವಾಗಿ ಎಲ್ಲ ಪುರಾಣಕಾವ್ಯಗಳ ಚರಿತ್ರ ನಾಯಕರಿಗೆ ಅನ್ವಯಿಸಿ ಅವರನ್ನು ಭವ್ಯತೆಗೇರಿಸುವ ಉದ್ದೇಶಿತ ಕ್ರಮ ಇಲ್ಲಿದೆ.

ಪಂ. ಪುಟ್ಟರಾಜ ಕವಿಗಳು ಶರಣರ ಚರಿತ್ರೆಗಳನ್ನು ಹೇಳಿ ಮಧ್ಯಕಾಲೀನ ಆಧುನಿಕ ಪೂರ್ವ ಶರಣ ಶರಣೆಯರ ಚರಿತ್ರೆಗೆ ಪುರಾಣದ ಸ್ಪರ್ಶ ನೀಡಿದ್ದಾರೆ. ಇದರಲ್ಲಿ ಉಡುತಡಿಯ

ಅಕ್ಕಮಹಾದೇವಿ ಪುರಾಣವು ಅಕ್ಕನ ಭವ್ಯವ್ಯಕ್ತಿತ್ವವನ್ನು ಕಟ್ಟಿಕೊಡುವ ಉತ್ತಮ ಕಾವ್ಯವು ಆಗಿದೆ. ಆಕೆಯಲ್ಲಿ ಭಕ್ತಿಯೆ ಪ್ರೇಮವಾದುದನ್ನು ವಿವರಿಸಿ ಬಾಹ್ಯ ಶಕ್ತಿಯಾದ 'ಕಾಮನ ಗೆಲೆದ' ವಿವರಗಳನ್ನು ಹೇಳುತ್ತ ಆಕೆಯ ಸರ್ವಾರ್ಪಣ, ಸಮತ್ವದ ಗುಣಹಿರಿಮೆಗಳನ್ನು ಹೇಳುತ್ತಾರೆ. ಅಕ್ಕಮಹಾದೇವಿಯ ಪಾತ್ರವು ಎಲ್ಲ ಕಾಲಕ್ಕೂ ಭವ್ಯತೆಯನ್ನು ಹೊಂದುತ್ತ ಸಾಗುವಂತಹದು. ಶರಣ ಪ್ರಜ್ಞೆಯಲ್ಲಿ ಆಕೆಗೊಂದು ವಿಶೇಷ ಸ್ಥಾನವಿದೆ. ಆಕೆಯನ್ನು ಕುರಿತು ಪೀಠಿಕಾ ಸಂಧಿಯಲ್ಲಿ 'ಅವಳು ವಿದಿತ ನಾಯಕಿ' ಎಂದು –

ಭಕ್ತಿಸಜ್ಞಾನ ವೈರಾಗ್ಯಗಳು ಧರೆಯೊಳಗೆ
ವ್ಯಕ್ತಿಯೊಳೊಂದಾಗಿ ಬಂದವೋ

(ಉಡುತಡಿಯ ಅಕ್ಕಮಹಾದೇವಿ ಪುರಾಣ ಪುಟ : ೬)

ಆಕೆಯ ವ್ಯಕ್ತಿತ್ವವನ್ನು ಅದರಲ್ಲಿಯ ತತ್ವಮುಪ್ಪುರಿಯನ್ನು ಎತ್ತಿ ಹೇಳಿದ್ದಾರೆ.

ತಮಿಳುನಾಡಿನ ೬೩ ಪುರಾತನ ಶರಣರು–ಶಿವಭಕ್ತರು ಶಿವನಿಗೆ ತಮ್ಮನ್ನು ಅರ್ಪಿಸಿಕೊಂಡುದನ್ನು ಆ ಹಿನ್ನೆಲೆಯ ಉಗ್ರ ಮತ್ತು ತ್ಯಾಗ, ಭಕ್ತಿಯನ್ನು 'ತ್ರಿಷಷ್ಠಿ ಪುರಾತನರ ಪುರಾಣ'ದಲ್ಲಿ ಎತ್ತಿ ತೋರಿದ್ದಾರೆ. ಅಲ್ಲಿ ಭಕ್ತಿ–ವೈರಾಗ್ಯ–ತ್ಯಾಗಗಳ ಅನುಪಮ ಸಂಗಮ ಇದೆ. ಕನ್ನಡದಲ್ಲಿ ಮೊದಲು ಹರಿಹರನು, ನಂತರ ಸಾರಂಗ ಕವಿಗಳು ಇವರ ಚರಿತ್ರೆಗಳನ್ನು ಕಾವ್ಯರೂಪಗಳಲ್ಲಿ ಬರೆದರು. ಅಲ್ಲಿಯ ಪ್ರತಿಯೊಬ್ಬ ಭಕ್ತನ ಜೀವನದಲ್ಲಿ ಶಿವನು ಪರೀಕ್ಷೆ ಮಾಡುವ ಒಂದು ನಿಯತಿಯನ್ನು, ಅದರಲ್ಲಿ ಅಲೌಕಿವಾದುದೊಂದು ಲೀಲೆಯನ್ನು, ಭಕ್ತನ ಆಸಾಧಾರಣ ತ್ಯಾಗವನ್ನು, ಕೊನೆಗೆ ಶಿವನು ತನ್ನೊಂದಿಗೆ ಕೈಲಾಸಕ್ಕೆ ಭಕ್ತರನ್ನು ಕರೆದೊಯ್ಯುವ ಅಂಶಗಳನ್ನು ಕಾಣಬಹುದು. ಈ ಭಕ್ತರನ್ನು 'ನಾಯನಾರ್' ಎಂದು ತಮಿಳಿನಲ್ಲಿ ಗೌರವಿಸುತ್ತಾರೆ. ಅವರಲ್ಲಿ ಶಿವಾರ್ಪಣ, ಶಿವಜ್ಞಾನ, ಶಿವಾನಂದ ಸ್ಥಿತಿಯಲ್ಲಿರುವ ಅರ್ಪಿತ ವ್ಯಕ್ತಿತ್ವವನ್ನು ಕಾಣಬಹುದು. ಭಕ್ತಿ ಪರಂಪರೆಯಲ್ಲಿ ಇವರದೆ ಆದ ಒಂದು ಕ್ಷೇತ್ರವನ್ನು ಗುರುತಿಸಲು ಸಾಧ್ಯ. ಶಿವನ ಆಣೆ ಹಾಕಿರುವುದರಿಂದ ಜೀವನದುದ್ದಕ್ಕೂ ಹೆಂಡತಿಯನ್ನೇ ಮುಟ್ಟದ 'ನೀಲಕಂಠ'; ಪ್ರೇಯಸಿಯರಿಗಾಗಿ ಶಿವನನ್ನು ಕುಂಟಣಿಯನ್ನಾಗಿ ಮಾಡಿದ 'ಸುಂದರ', ದೀಪದೆಣ್ಣೆ ತೀರಲು ತನ್ನ ಜಡೆಗೆ ದೀಪ ಹತ್ತಿಸಿಕೊಂಡ 'ದೀಪದ ಕಲಿಯಾರ', ತಲೆ ಕೆಳಗಾಗಿ ಕೈಲಾಸಕ್ಕೆ ಹೊರಟ 'ಕಾರಿಕಾಲಮ್ಮೆ', ಅತಿಥಿಗಾಗಿ ಮಗುವನ್ನೇ ಬಲಿಕೊಟ್ಟ 'ಸಿರಿಯಾಳ' ಹೀಗೆ ಅದ್ಭುತ ಮಹೋನ್ನತ ತ್ಯಾಗಗುಣಗಳೇ ಆ ಭಕ್ತರನ್ನು ಉನ್ನತಕ್ಕೇರಿಸಿದವು. ಭಕ್ತರು ಶಿವನಿಗಾಗಿ ಪ್ರಾಣ–ತನು–ಮನ–ಧನ ಮತ್ತು ಜಗತ್ತನ್ನು ತ್ಯಾಗ ಮಾಡುವ ವಿಶೇಷ ಗುಣಗಳು ಅಲ್ಲಿವೆ. ಪಂ. ಪುಟ್ಟರಾಜರು ನಿರ್ಮಿಸಿದ ಪುರಾಣಗಳಲ್ಲಿ ಗುಡ್ಡಾಪುರ ದಾನಮ್ಮದೇವಿ, ಮತ್ತು ನಾಲತ್ತವಾಡ ವೀರೇಶ ಶರಣರು ಶರಣ ಪರಂಪರೆಯ ಬದುಕನ್ನು ನಿರ್ಮಿಸಿದವರು. ಅಲ್ಪಮಟ್ಟಿಗೆ ಶರಣತ್ವ, ಬಹುಪಾಲು ಲೀಲಾತತ್ವಗಳನ್ನು ದಾನಮ್ಮನ ವ್ಯಕ್ತಿತ್ವದಲ್ಲಿ ಕಾಣಬಹುದು. ವೀರೇಶ ಶರಣರಲ್ಲಿ ಬಹುಪಾಲು

ಶರಣತತ್ತ್ವ ಅಲ್ಲ ಲೀಲಾ ವಿವರಣೆ ಇದೆ. ಶರಣರ 'ಸಕಲ ಜೀವಾತ್ಮರಿಗೆ ಲೇಸನೆ ಬಯಸುವ', 'ಭೂತಂಗಳೊಳ್ ಅನುಕಂಪಿತ ವ್ಯಕ್ತಿತ್ವ ಚಿತ್ರಣ'ವು ಇಲ್ಲಿದೆ. ಇದೇ ರೀತಿ ಕಲಬುರ್ಗಿ ಶರಣಬಸವೇಶ್ವರರ ವ್ಯಕ್ತಿತ್ವದ ನಿರೂಪಣೆ ಇದೆ. ಈ ಶರಣ ವ್ಯಕ್ತಿತ್ವವಾಗಿ ಬದುಕಿದವರು ಚಿಕೇನಕೊಪ್ಪದ ಶ್ರೀ ಚನ್ನವೀರ ಶರಣರು, ೨೦ನೆಯ ಶತಮಾನದ ವೈಜ್ಞಾನಿಕ ಯುಗದಲ್ಲಿ ಸರಳವಾಗಿ ಶರಣತತ್ತ್ವವೇ ರೂಪಾದವರು. ಪವಾಡಗಳನ್ನು ಹೇಳಿ ಅವರ ಶರಣತತ್ತ್ವಕ್ಕೆ ಕಳಾಹೀನತೆ ಒದಗಿರುವದನ್ನು ಕಾಣಬಹುದು. ಶರಣ ಪರಂಪರೆಯಲ್ಲಿ ಎಡೆಯೂರು ಸಿದ್ಧಲಿಂಗೇಶ್ವರರು ಸದಾ ಚರ ಜಂಗಮರಾಗಿ ಜನಮಾನಸವನ್ನು ಅವರಿರುವಲ್ಲಿಗೆ ಹೋಗಿ ತಿದ್ದುವ, ತತ್ವಗಳನ್ನು ವಚನ ರೂಪದಲ್ಲಿ ಹೇಳುವ, ಆ ಮೂಲಕ ಶರಣ ಸಾಹಿತ್ಯದ ಮುಂದುವರಿಕೆ, ಹೊಸ ಆಲೋಚನೆ-ವಿಕಾಸಗಳನ್ನು ಹೇಳುತ್ತ ಹೊಸಮಾರ್ಗ-ಚೇತನ-ಚಾಲನೆಗಳನ್ನು ನಿರ್ಮಿಸಿದರು. ಅವರ ವ್ಯಕ್ತಿತ್ವದ ಎತ್ತರವನ್ನು ಆಧ್ಯಾತ್ಮಿಕ ನಿಲುವಿನಲ್ಲಿ 'ದ್ವಿತೀಯ ಅಲ್ಲಮ' ಎಂದು ಗುರುತಿಸಲಾಗಿದೆ. ಅವರು 'ಷಟ್‌ಸ್ಥಲ ಜ್ಞಾನ ಸಾರಾಮೃತ'ವೆಂದು ವಚನಗಳನ್ನು ಬರೆದಿರುವರು. ಆ ತಲೆಬರಹ ಅವರ ತಾತ್ವಿಕ ವ್ಯಕ್ತಿತ್ವವನ್ನು ಸೂಚಿಸುವದು. ಇವರು ಷಟ್‌ಸ್ಥಲದ ಮರು ಹುಟ್ಟಿಗೆ ಕಾರಣೀಭೂತರಾದರು.

ಸ್ವಾಮಿಗಳ ಚರಿತ್ರೆಗಳು ಅಲೌಕಿಕ ಜನನದ ಹಿನ್ನೆಲೆಯಲ್ಲಿ ಆರಂಭಗೊಂಡು, ಶರಣ ತತ್ವಗಳನ್ನು ಅಳವಡಿಸಿಕೊಳ್ಳುತ್ತ ಸಾಗುವದನ್ನು ಗುರುತಿಸಬಹುದು. ಮುಂದೆ ಈ ಪುರಾಣಕಾವ್ಯ ಪದ್ಧತಿಯೋ ಎಂಬಂತೆ ಹೊರಟು ಪವಾಡಗಳ ನಿರೂಪಣೆಯಿಂದ ಅವರ ಶರಣತತ್ವಕ್ಕಾಗಲಿ, ಘನ ವ್ಯಕ್ತಿತ್ವಕ್ಕಾಗಲಿ ಯಾವದೇ ರೀತಿ ಸಹಾಯವಾಗದೆ ಮಂಕು ಕವಿಯುವದನ್ನು ಕಾಣಬಹುದು. ಇದರಿಂದ ಅವರ ಸಾಮಾಜಿಕ ಕಳಕಳಿಯ ಮುಖ್ಯ ಧೋರಣೆಯನ್ನು, ದಿಕ್ಕು ತಪ್ಪಿಸುವ ರೀತಿಯನ್ನು ಕಾಣಬಹುದು. ಸ್ವಾಮಿಗಳ ವ್ಯಕ್ತಿತ್ವ ದೊಡ್ಡದಾಗುವದು ಅವರ ತಾತ್ವಿಕ ಹಿರಿಮೆ, ಸಾಮಾಜಿಕ ಪ್ರಜ್ಞೆ, ಸೇವೆ-ಗರಿಮೆಗಳಲ್ಲಿ. ಕೆಲವು ಲೀಲೆಗಳನ್ನು ಪುರಾಣಗಳಲ್ಲಿ ಬರೆಯಿಸಿದ ಪೀಠಸ್ಥ ಸ್ವಾಮಿಗಳೊ, ಮುಗ್ಧ-ಮೂಢ ಭಕ್ತರೊ ಸೇರಿಸಿ ಸ್ವಾಮಿಗಳ ವ್ಯಕ್ತಿತ್ವದ ಘನತೆಯನ್ನು ಕುಗ್ಗಿಸಿರುವರು. ಪಂ. ಪುಟ್ಟರಾಜರು ಸ್ವಆಸಕ್ತಿಯಿಂದ ಬರೆದವುಗಳಲ್ಲಿ ಈ ಲೀಲಾಭವ ಭಾರವಿಲ್ಲ. ಹೇಳಿ ಬರೆಯಿಸಿದ ಚರಿತ್ರೆಗಳನ್ನು ಸಿದ್ಧಪಡಿಸಿ ತಂದು ಹೇಳಿ ಬರೆಯಿಸಿದ ಕಾವ್ಯಗಳು ಈ ಲೀಲೆಗಳಿಂದಲೆ ಸೊರಗಿವೆ ಸ್ವಾಮಿಗಳ ಚರಿತ್ರೆಗಳು ಹಿನ್ನಡೆಯಾಗಿವೆ.

ಶ್ರೀ ಬ್ಯಾಟಿ ರಾಮಣ್ಣನವರ ಕಾವ್ಯಗಳು ಸ್ವಇಚ್ಛೆಯಿಂದ ಲೀಲಾಭವವನ್ನು ಹೇರಿಕೊಂಡು ಕಾವ್ಯ ಬರೆದಿರುವದನ್ನು ಕಾಣಬಹುದು. ಶ್ರೀ ಬ್ಯಾಟಿಯವರ ಕಾವ್ಯೋಕ್ತ ಪಾತ್ರಗಳು ೧) ಪುರಾಣ ಆಗಮಗಳಲ್ಲಿ ಕಂಡ ಶಕ್ತಿ ರೂಪವಾದ ಸ್ಥಳೀಯ ದೇವತೆ-ಬಾದಾಮಿ ಬನಶಂಕರಿ, ೨) ಶರಣ ಮಾರ್ಗದಲ್ಲಿ ಬದುಕಿದ್ದು ಲೀಲೆಗಳ ಮುಖವರ್ಣನೆ ಧರಿಸಿದ ದಾನಮ್ಮದೇವಿ, ಭೀಮಾಂಬಿಕೆಯರು ೩) ಸ್ವಾಮಿಗಳ ಚರಿತ್ರೆಯಾಗಿ ಹೊರಟು ಶಿವನ ಲೀಲಾ ವಿಲಾಸದ ವರ್ಣನೆಯಾದ

ನೀಲಕಂಠೇಶ್ವರರ ಚರಿತ್ರೆ ೪) ಶುದ್ಧ ಎತ್ತರದ ಆಧ್ಯಾತ್ಮಿಕ ಬದುಕನ್ನು ಸ್ವಯಂ ನಿರ್ಮಿಸಿಕೊಂಡ ಶ್ರೀ ಶಿವಾನಂದ ಮತ್ತು ಗೌರಿಶಂಕರ ಸ್ವಾಮಿಗಳು ೫) ಹೀಗೆ ಆಕಾಶದಿಂದ ಭೂಮಿಯವರೆಗೆ ವಿಸ್ತರಿಸಿದ ಚಾರಿತ್ರಿಕ ಪೌರಾಣಿಕ ಆಧ್ಯಾತ್ಮಿಕ ವ್ಯಕ್ತಿಗಳಿಗಿಂತ ಭಿನ್ನವಾಗಿ ನಿಲ್ಲುವ ಘನವ್ಯಕ್ತಿತ್ವ ಡಾ. ಬಾಬಾಸಾಹೇಬ ಅಂಬೇಡ್ಕರ ಅವರು.

ಅವರು ದೇವ-ದೇವಿ (ಶಿವ-ಪಾರ್ವತಿ, ವಿಷ್ಣು-ಲಕ್ಷ್ಮೀ) ಇರಲಿ, ಸ್ವಾಮಿ ಸಂತರಿರಲಿ, ಅವರನ್ನು ಲೀಲೆ ಪವಾಡಗಳ ಅತಿಶಯ ನಿರೂಪಣೆಯಿಂದ ಅವರ ವ್ಯಕ್ತಿತ್ವದ ಭವ್ಯತೆಯು ಕುಗ್ಗಿದೆ. ವ್ಯಕ್ತಿತ್ವವನ್ನು ಅವರ ಕಾರ್ಯ ಸಾಧನೆ, ಸಿದ್ಧಿ-ಸೇವೆ, ಅರ್ಪಣೆ-ತ್ಯಾಗಗಳ ಮೂಲಕ ಕಾವ್ಯದಲ್ಲಿ ಕಟ್ಟಬೇಕು. ಅದಕ್ಕೆ ಇಲ್ಲಿ ವ್ಯತ್ಯಯ ಉಂಟಾಗಿದೆ.

ಡಾ. ಬಾಬಾಸಾಹೇಬ ಅಂಬೇಡ್ಕರ ಅವರ ವ್ಯಕ್ತಿತ್ವವು ಅವರ ತ್ಯಾಗ, ಹೋರಾಟ, ಛಲ, ಸ್ಥೈರ್ಯ, ಧೈರ್ಯ, ಜ್ಞಾನ-ಸಾಧನೆಗಳ ಅನುಪಮ ನಿರೂಪಣೆಯಿಂದ ಉಜ್ವಲವಾಗಿದೆ. ಡಾ. ಅಂಬೇಡ್ಕರರು ಜನಿಸುವ ಪೂರ್ವದಲ್ಲಿ ಅವರ ತಂದೆಯ ಕನಸಿನಲ್ಲಿ ಶ್ರೀ ರಘುರಾಮನು ಬಂದು 'ಪೊಡವಿ ಪಾಲಿಪ ಮನು ಬರುವನು ಬಿಡಿರಿ ಚಿಂತೆಯನು' ಎಂದು ಹೇಳಿದ ಘಟನೆಯೊಂದನ್ನುಳಿದರೆ ಉಳಿದೆಲ್ಲ ಘಟನೆಗಳ ನಿರೂಪಣೆಯಿಂದ ಬಾಬಾಸಾಹೇಬರ ಘನವ್ಯಕ್ತಿತ್ವವು ಅದ್ಭುತವಾಗಿ ಮಾಡಿರುವದನ್ನು ಕಾಣಬಹುದು.

ಕವಿ ಅಂಗಡಿಯವರ 'ಶ್ರೀ ಕರಿಬಸವ ಶಿವಯೋಗಿಲೀಲೆ ಪುರಾಣ ಕಾವ್ಯ'ದಲ್ಲಿ ಇಬ್ಬರು ವ್ಯಕ್ತಿಗಳು ಪ್ರಧಾನ ಪಾತ್ರದಲ್ಲಿ ಕಂಡುಬರುತ್ತಾರೆ ೨) ಕರಿಬಸವ ಶಿವಯೋಗಿ ೨) ಶರಣೆ ಶಾಂತಮ್ಮ. ಇಲ್ಲಿ ಕವಿ ಅಂಗಡಿಯವರು ಮೊದಲು ಕರಿಬಸವ ಶಿವಯೋಗಿಯ ವೃತ್ತಾಂತ ಹೇಳಿ, ಆತನ ಕೃಪೆಗೆ ಪಾತ್ರರಾಗಿರುವ ಶರಣೆ ಶಾಂತಮ್ಮನ ಜೀವನ ಕುರಿತು ಚಿತ್ರಿಸಿದ್ದಾರೆ. ಕರಿಬಸವ ಶಿವಯೋಗಿ ಲೀಲೆ ಅಂತ ಈ ಕಾವ್ಯಕ್ಕೆ ಹೆಸರನ್ನು ಕೊಟ್ಟರೂ ಸಹ ಕರಿಬಸವ ಶಿವಯೋಗಿಯ ಜೊತೆಗೆ ಆ ಪಾತ್ರದ ಮಹತ್ವವನ್ನು ಇನ್ನಷ್ಟು ಹೆಚ್ಚಿಸುವ ದೃಷ್ಟಿಯಿಂದ ಅವರ ಶಿಷ್ಯಳಾದ ಶಾಂತಮ್ಮಳ ಬದುಕನ್ನು ಇಲ್ಲಿ ಚಿತ್ರಿಸಿದ್ದಾರೆ. ಜೊತೆಗೆ ಅವರ ಪವಾಡಗಳು ಇಲ್ಲಿ ಹಾಸುಹೊಕ್ಕಾಗಿವೆ. ಈ ನಿಟ್ಟಿನಲ್ಲಿ ಶರಣೆ ಶಾಂತಮ್ಮನ ವ್ಯಕ್ತಿತ್ವವನ್ನು ಅಕ್ಕಮಹಾದೇವಿ, ನಾಗಲಾಂಬೆ, ನೀಲಲೋಚನೆ ಮುಂತಾದವರೊಂದಿಗೆ ಸಮೀಕರಿಸಿದ್ದಾರೆ. ವೀರಶೈವ ಮಹಿಳೆಯ ಪರಂಪರೆಯನ್ನು ಆ ಮೂಲಕ ಇಲ್ಲಿ ತಂದಿದ್ದಾರೆ.

'ಕಾಯಕಯೋಗಿ ಶ್ರೀ ರುದ್ರಮುನಿ ಶಿವಯೋಗೀಶ ಚರಿತಾಮೃತಂ' ಕಾವ್ಯದಲ್ಲಿಯೂ ಸಹ ಇಬ್ಬರು ಪುರಾಣ ಪುರುಷ ಪಾತ್ರವನ್ನು ಗುರುತಿಸಲಾಗಿದೆ. ೧) ಹಾನಗಲ್ಲದ ಕುಮಾರ ಶಿವಯೋಗಿಗಳು ೨) ರುದ್ರಮುನಿ ಶ್ರೀಗಳು. ಅಂದರೆ ಹಾನಗಲ್ಲದ ಗುರುಪರಂಪರೆಯನ್ನು ತೋರಿಸುವ ನಿಟ್ಟಿನಲ್ಲಿ ಕವಿ ಕುಮಾರ ಶಿವಯೋಗಿಗಳನ್ನು ಆರಂಭದಲ್ಲಿ ತೋರಿಸಿ, ನಂತರ ಅವರ ಕರುಣೆಗೆ ಪಾತ್ರರಾದ ಶ್ರೀ ರುದ್ರಮುನಿಗಳನ್ನು ಇಲ್ಲಿಯ ಕಾವ್ಯದ ನಾಯಕನನ್ನಾಗಿ ಚಿತ್ರಿಸಿದ್ದಾರೆ.

'ಮುರಗೋಡ ಮಹಾಂತ ಶಿವಯೋಗಿ ಚರಿತಾಮೃತಂ' ಕಾವ್ಯದ ಪ್ರಧಾನ ನಾಯಕ 'ಮಹಾಂತ ಶಿವಯೋಗಿ'ಗಳು. ಶರಣ ವ್ಯಕ್ತಿತ್ವದ ಆಧ್ಯಾತ್ಮಜೀವಿ; ಸಮಾಜ ಸುಧಾರಕ, ಭಕ್ತರ ಕಷ್ಟವನ್ನು ಪರಿಹರಿಸಿದ ಸಿದ್ಧಿಪುರುಷ. ಹಲವು ಪವಾಡಗಳ ಮೂಲಕ ಭಕ್ತರ ಮನಸ್ಸನ್ನು ಸೆಳದ ಐತಿಹಾಸಿಕ ವ್ಯಕ್ತಿ. ಈ ವ್ಯಕ್ತಿಯನ್ನು ಪುರಾಣಕವಿಗಳು ಲೀಲೆಗಳ ಸರಮಾಲೆಗಳ ಮುಖಾಂತರ ಪುರಾಣ ಪುರುಷರನ್ನಾಗಿ ಬಿಂಬಿಸಿದ್ದಾರೆ.

'ಮೃಡಗಿರಿ ಶ್ರೀ ಜಗದ್ಗುರು ಅನ್ನದಾನೀಶ್ವರ ಲೀಲಾಮೃತ' ಪುರಾಣ ಕಾವ್ಯದಲ್ಲಿ ಮುಂಡರಗಿಯ ಮಠದ ಸ್ವಾಮಿಯವರನ್ನು ಪ್ರಧಾನ ನಾಯಕರನ್ನಾಗಿ ಕವಿಗಳು ಬಿಂಬಿಸಿದ್ದಾರೆ. ಅನ್ನದಾನೀಶ್ವರರು ಈ ಭೂಮಿಗೆ ಅವತರಿಸಿದ್ದೆ ಧರ್ಮವನ್ನು ಉಳಿಸಲು, ಬೆಳಸಲು ಎಂಬ ಮಾತನ್ನು ನಾವು ನೋಡಬಹುದು. ಹೀಗಾಗಿ ಜನರ ಭಕ್ತಿಯನ್ನು ಹೆಚ್ಚಿಸಲು ಕೆಲವು ಪವಾಡಗಳನ್ನು ವೈಭವೀಕರಿಸುವ ಮುಖೇನ ಪಾತ್ರಚಿತ್ರಣ ನೀಡಿರುವರು.

'ಶ್ರೀ ಸದಾಶಿವ ಲೀಲೆ ಪುರಾಣ ಕಾವ್ಯ'ದಲ್ಲಿ ಬರುವ ಪ್ರಮುಖ ಪಾತ್ರ ಸದಾಶಿವ ಶ್ರೀಗಳದ್ದು. ಇಲ್ಲಿ ಕವಿ ಸೋಮಶೇಖರ ಶಾಸ್ತ್ರಿಗಳು ಸದಾಶಿವ ಯೋಗಿಗಳನ್ನು ಪೂರ್ವ ನಿಯೋಜಿತವಾಗಿ ಪವಾಡಗಳ ಮೂಲಕ ಚಿತ್ರಿಸಿಲ್ಲ. ಅದರ ಬದಲಾಗಿ ಅವರ ದಿನನಿತ್ಯದ ಕಾರ್ಯ ಚಟುವಟಿಕೆ ಹಾಗೂ ಮಠಕ್ಕಾಗಿ ಅವರು ಮಾಡಿದ ತ್ಯಾಗ ಮುಂತಾದವುಗಳನ್ನು ಹೇಳುವ ಮೂಲಕ ಅವರು ಹೊಸಮಠ ಕಟ್ಟಲು ಶ್ರಮಿಸಿದ ಪರಿಯನ್ನು ವಾಸ್ತವಿಕ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆ.

'ಶ್ರೀ ಗುರು ಸಿದ್ಧಾರೂಢ ಪುರಾಣ'ದ ಕೇಂದ್ರ ವ್ಯಕ್ತಿ ಶ್ರೀ ಸಿದ್ಧಾರೂಢರು. ಶಾಂತ ವ್ಯಕ್ತಿತ್ವಕ್ಕೆ ಮತ್ತೊಂದು ಹೆಸರು ಇವರು. ಕವಿ ಬೊಮ್ಮನಹಳ್ಳಿ ಅವರು ಇಲ್ಲಿ ಸಿದ್ಧಾರೂಢರ ಜೀವನದ ಯಶೋಗಾಥೆಯ ಚರಿತ್ರೆಯ ಮೂಲಕ ಅವರ ಲೋಕಕಲ್ಯಾಣದ ಪರಿಯನ್ನು ತುಂಬ ಸರಳವಾಗಿ ಈ ಪಾತ್ರದ ಮೂಲಕ ಕಟ್ಟಿಕೊಟ್ಟಿದ್ದಾರೆ.

'ಶ್ರೀ ರುದ್ರಮುನಿ ಶಿವಾಚಾರ್ಯ ಪುರಾಣ' ಕಾವ್ಯದಲ್ಲಿ ಬರುವ ಪ್ರಧಾನ ಪಾತ್ರ ರುದ್ರಮುನಿ ಶಿವಾಚಾರ್ಯರದು. ಇಲ್ಲಿ ಕವಿ ಬಾಲಚಂದ್ರ ಶಾಸ್ತ್ರಿಗಳು ವೀರಶೈವ ತತ್ವದ ಬೋಧನೆಗೆ ಪೂರಕವಾಗಿ ಈ ಪಾತ್ರವನ್ನು ನೈಜವಾಗಿ ಚಿತ್ರಿಸಿದ್ದಾರೆ.

'ಜಕ್ಕಲಿಯ ಶ್ರೀ ಅಣ್ಣಯ್ಯ-ತಮ್ಮಯ್ಯನವರ ಪುರಾಣ'ದಲ್ಲಿ ಪ್ರಮುಖವಾಗಿ ಈ ಅವಳಿ ಪಾತ್ರಗಳು ಕಂಡುಬರುತ್ತವೆ. ಕವಿ ಶಿವದೇವ ಶಾಸ್ತ್ರಿಯವರು ಈ ಇಬ್ಬರು ಶಿವಭಕ್ತರ ಚರಿತ್ರೆಯನ್ನು ವಿಶಿಷ್ಟತೆಯಿಂದ ಇಲ್ಲಿ ತಂದಿದ್ದಾರೆ.

'ಶ್ರೀ ನೀಲಕಂಠೇಶ್ವರ ಪುರಾಣ'ದ ಪ್ರಮುಖ ಪಾತ್ರ ಶ್ರೀ ನೀಲಕಂಠರು. ಇಲ್ಲಿ ಕವಿ ನೀಲಕಂಠನು ಕುರುಹಿನ ಶೆಟ್ಟಿ ಸಮುದಾಯದ ಉಗಮಕ್ಕೆ ಕಾರಣರಾದ ವ್ಯಕ್ತಿಯನ್ನು

ಪರಿಚಯಿಸುವುದರ ಜೊತೆಗೆ ಆ ಸಮುದಾಯದ ಆರಾಧ್ಯದೈವವಾಗಿ ನೀಲಕಂಠರ ಪಾತ್ರವನ್ನು ಚಿತ್ರಿಸುತ್ತಾ ಗುರು ಪರಂಪರೆಯನ್ನು ಪರಿಚಯಿಸಿದ್ದಾರೆ.

ವಾಸುದೇವ ಹೂಲಿ ಅವರು ರಚಿಸಿರುವ 'ಶ್ರೀ ಸಚ್ಚಿದಾನಂದ ಪುರಾಣ' ಕಾವ್ಯದ ಪ್ರಧಾನ ಪಾತ್ರ ಸಚ್ಚಿದಾನಂದ ಯೋಗಿವರರು. ಸಚ್ಚಿದಾನಂದ ಯೋಗಿಯವರ ಜೀವನ ಪಥ, ಸಿದ್ಧಿ-ಪ್ರಸಿದ್ಧಿ ಹಾಗೂ ತತ್ವಬೋಧೆಯನ್ನು ಆ ಪಾತ್ರದ ಮೂಲಕ ಕವಿ ಇಲ್ಲಿ ತೋರಿಸಿಕೊಟ್ಟಿದ್ದಾರೆ.

ಹೀಗೆ ವೀರಶೈವ ಧಾರ್ಮಿಕ ಕವಿಗಳು ತಮ್ಮ ಸಮುದಾಯಕ್ಕೆ ಸೇರಿದ ಅಥವಾ ತಮ್ಮ ಮಠಾಚಾರ್ಯರ ಚರಿತೆಗಳನ್ನು ಪುರಾಣವಾಗಿಸಿ, ಆ ಪುರಾಣದ ಕಥೆಯಲ್ಲಿ ಅವರನ್ನೇ ಕಥಾ ನಾಯಕರನ್ನಾಗಿಸಿ, ಅವರಿಗೆ ಶಿವನ ಅವತಾರ ತೊಡಿಸಿ, ಅವರನ್ನು ಸಿದ್ಧಪುರುಷರನ್ನಾಗಿ ಮಾಡಿದ್ದಾರೆ. ಮುಂದುವರೆದು ಇದೇ ರೀತಿಯಲ್ಲಿ ಶ್ರೀ ಗುರುರುದ್ರೇಶ, ಶ್ರೀ ಶಿವಾನಂದ ಶಿವಯೋಗಿ, ಗುಡಿಸಾಗರದ ಶ್ರೀ ಸಿದ್ಧಸಾಧುಗಳು, ಸದಾಶಿವಾನಂದ ಸ್ವಾಮಿಗಳು, ಸಿದ್ಧೇಶ್ವರರು, ಶಿವಶರಣೆ ಗುರುಲಿಂಗಮ್ಮನವರು. ಹೀಗೆ ಅನೇಕ ಪ್ರಧಾನ ಪಾತ್ರಗಳು ಈ ಅಧ್ಯಯನದಲ್ಲಿ ಕಂಡು ಬರುತ್ತವೆ.

ಈ ಮೇಲಿನ ಎಲ್ಲ ಪಾತ್ರಗಳನ್ನು ನೋಡಿದಾಗ ಎರಡು ರೀತಿಯಾದ ಪಾತ್ರಗಳು ಸ್ಪಷ್ಟವಾಗಿ ಗೋಚರಿಸುತ್ತವೆ.

೧. ಸಾಧನೆಯ ಮೂಲಕ ಸಿದ್ಧಪುರುಷರಾದವರು.

೨. ಹುಟ್ಟಿನಿಂದಲೇ ಸಿದ್ಧಪುರುಷರಾದವರೆಂದು ಚಿತ್ರಿತಗೊಂಡವರು.

ಅಂದರೆ ಸಾಧನೆಯ ಮೂಲಕ ಅವರು ಮಾಡಿದ ಕಾರ್ಯ ಸಾಧನೆಯನ್ನು ಕವಿ ಪುರಾಣವಾಗಿರಿಸಿ ಅವರನ್ನು ದೈವೀಕರಣಕ್ಕೆ ಎತ್ತರಿಸಿದ್ದು. ಇದಕ್ಕೂ ಮೊದಲು ಅವರು ದೈವೀಕರಣದ ಮೂಲಕ ಜನ್ಮವೆತ್ತವರೆಂದು ಬಿಂಬಿಸುವುದು. ಹೀಗೆ ಇಲ್ಲಿಯ ಪಾತ್ರಗಳು ಈ ಮೊದಲೆ ತಿಳಿಸಿದಂತೆ ಅವು ಒಂದು ಪೂರ್ವ ನಿಗದಿತವಾದ ಚೌಕಟ್ಟಿನ ತಳಹದಿಯ ಮೇಲೆ ರಚಿಸಿರುವುದರಿಂದ ಕವಿ ತನ್ನ ಸ್ವಂತ ಪ್ರತಿಭೆಯನ್ನು ಮೆರೆಸಲು ಇಲ್ಲಿ ಹೆಚ್ಚಿನ ಅವಕಾಶಗಳಿರುವುದಿಲ್ಲ ಎಂಬುದನ್ನು ಅರಿಯಬಹುದಾಗಿದೆ.

ಪುರಾಣಗಳು ಜನ ಸಾಮಾನ್ಯರನ್ನು ಸನ್ಮಾರ್ಗದ ಕಡೆ ಒಯ್ಯಲು ಸುಲಭ ಮಾಧ್ಯಮವಾಗಿವೆ. ಆದ್ದರಿಂದ ಪುರಾಣಗಳು ವೇದಕ್ಕೆ ಸಮಾನವಾದವುಗಳೆಂದು ಹಲವಾರು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ಪುರಾಣಗಳಿಗೆ ಕಥೆಯೇ ಮೂಲ ಬಂಡವಾಳವಾಗಿದೆ. ಆದ್ದರಿಂದ ಕಥೆಗಳನ್ನು ಸೂಕ್ಷ್ಮವಾಗಿ ಕಟ್ಟುವ ಕೆಲಸ ಕವಿಯದ್ದಾದರೆ ಕಥೆಗಳನ್ನು ಸರಳವಾಗಿ ಜನರಿಗೆ ಮುಟ್ಟಿಸುವ ಕೆಲಸ ಪುರಾಣಗಳಲ್ಲಿ ಚಿತ್ರಿತವಾದ ಪಾತ್ರಗಳದ್ದಾಗಿದೆ. ಪುರಾಣ ಕಾವ್ಯಗಳನ್ನು ಸಾಮಾಜಿಕರಿಗೆ

ತಲುಪಿಸುವಲ್ಲಿ ಪಾತ್ರಗಳನ್ನು ಸಮರ್ಪಕವಾಗಿ ಬಳಸಿಕೊಂಡಿದ್ದಾರೆ. ಈ ಅಂಶವು ಸಾಹಿತ್ಯ ಕ್ಷೇತ್ರದಲ್ಲಿ ಅಮೂಲ್ಯ ಹಾಗೂ ನೂತನ ಪರಂಪರೆಗೆ ನಾಂದಿಯಾಗಿದೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪುರಾಣ ಸಾಹಿತ್ಯವು ಅತ್ಯಂತ ಜನಪ್ರಿಯವಾದ ಸಾಹಿತ್ಯವಾಗಿದೆ. ಚರಿತ್ರೆಯ ದೃಷ್ಟಿಯಿಂದ ಹಾಗೂ ಇತಿಹಾಸದ ದೃಷ್ಟಿಯಿಂದ ಅನೇಕ ಪುರಾವೆಗಳನ್ನು ಕಥಾನಕಗಳ ಮೂಲಕ ಒದಗಿಸುತ್ತವೆ. ಜನ ಸಾಮಾನ್ಯರನ್ನು ಸನ್ಮಾರ್ಗದೆಡೆಗೆ ನಡೆಯುವಂತೆ ಮಾಡುತ್ತದೆ. ಪುರಾಣ ಕಾವ್ಯಗಳು ಮಾಡುವ ಸಾಮಾಜಿಕ ಸಂವಹನದ ಕೆಲಸವನ್ನು ಪುರಾಣದ ಪಾತ್ರಗಳು ಮಾಡುತ್ತವೆ. ಸಾಮಾನ್ಯ ಮಾಹಿತಿ ಹಾಗೂ ಗಂಭೀರ ವಿಷಯಗಳನ್ನು ಕಥನ ಹಾಗೂ ಕಾವ್ಯ ರೂಪದಲ್ಲಿ ತಿಳಿಸುವುದು ಕಥೆಗಳಲ್ಲಿರುವ ಪಾತ್ರಗಳ ಮುಖ್ಯ ಉದ್ದೇಶವಾಗಿದೆ.

'ಶ್ರೀ ಮೈಲಾರಲಿಂಗ ಮಹಿಮೆ ಪುರಾಣ'ದಲ್ಲಿ ಬರುವ ಅನೇಕ ಪಾತ್ರಗಳ ಮೂಲಕ ಪುರಾಣದ ಕಥೆಯನ್ನು ನಿರೂಪಿಸುವಲ್ಲಿ ಯಶಸ್ವಿಯಾಗಿವೆ. ಇಲ್ಲಿ ಕಥಾನಾಯಕ ಮೈಲಾರಲಿಂಗ ಶಿವನ ರೂಪದ ಪ್ರತಿರೂಪ ಹೊಂದಿದ್ದರೂ; ಅಲ್ಲಿ ಮಣಿಕ-ಮಲ್ಲಾಸುರರು ಸಹೋದರರು, ಸಾವಿಲ್ಲದ ವರವನ್ನು ಕೇಳುವುದಕ್ಕಾಗಿ ಬ್ರಹ್ಮನನ್ನು ಕುರಿತು ತಪವನ್ನು ಆಚರಿಸುತ್ತಾರೆ. ತಮ್ಮ ಸಂಕಲ್ಪ ಸಿದ್ಧಿಗಾಗಿ ಅವರು ಆಚರಿಸಿದ ತಪಸ್ಸಿನ ರೀತಿಯನ್ನು ಕವಿ ಪಂ. ವಾಸುದೇವ ಹೂಲಿಯವರು ಅರ್ಥಪೂರ್ಣವಾಗಿ ವಿವರಿಸಿದ್ದಾರೆ. ಈ ಪುರಾಣದಲ್ಲಿ ಬರುವ ಖಡ್ಗದಂಷ್ಟ್ರ ಹಾಗೂ ಕುಮಾರ ಸ್ವಾಮಿಯ ಯುದ್ಧದ ಪ್ರಸಂಗವನ್ನು ಕುರಿತು ಅತ್ಯಂತ ಹೃದಯಂಗಮವಾಗಿ ವಿವರಿಸಿದ್ದಾರೆ. ಈ ಕಾವ್ಯದ ಕಥೆಯನ್ನು ಸನತ್ಕುಮಾರ ಋಷಿಗಳಿಂದ ಹೇಳಿಸುತ್ತಾರೆ.

'ಉಜ್ಜಯನಿ ಜಗದ್ಗುರು ಶ್ರೀ ಸಿದ್ಧಲಿಂಗ ಭಗವತ್ಪಾದ ಪುರಾಣ'ದಲ್ಲಿ ಕಥಾನಾಯಕರೇ ಇಲ್ಲಿ ಪಾತ್ರವಾಗಿದ್ದಾರೆ. ಮತ್ತು ನಿರೂಪಿಸುವವರು ಕೂಡಾ ಒಂದು ಪಾತ್ರವಾಗಿ ಕಂಡುಬರುತ್ತಾರೆ. ಆದರೆ ಇಲ್ಲಿ ಕಾಲ್ಪನಿಕ ಪಾತ್ರಗಳು ತಾತ್ಕಾಲಿಕವಾಗಿದ್ದರೂ ಕೂಡಾ ಕಥೆಯನ್ನು ಸಾಂಧರ್ಬಿಕವಾಗಿ ವಿವರಿಸುತ್ತವೆ.

ಮಹಾಮಾಯಾ ಶ್ರೀ ಮಂಗಳಾದೇವಿ ಚರಿತಂ ಪುರಾಣದಲ್ಲಿ ಅನೇಕ ಪಾತ್ರಗಳನ್ನು ವಾಸುದೇವ ಹೂಲಿ ಅವರು ಸೃಷ್ಟಿಸಿದ್ದಾರೆ. ಅನೇಕ ಪಾತ್ರಗಳು ಹಾಗೂ ಸನ್ನಿವೇಶಗಳ ಮೂಲಕ ಪ್ರಾತ್ಯಕ್ಷಿಕೆಯನ್ನು ಸೃಷ್ಟಿಸಿದ್ದಾರೆ. ಇಲ್ಲಿ ಬರುವ ಪ್ರಮುಖ ಪಾತ್ರಗಳೆಂದರೆ, ನಮುಚಿ, ಋಸ್ಯಮ ಮತ್ತು ಕಾಲನಭರೆಂಬ ರಾಕ್ಷಸರು. ಇವರು ಶ್ರೀಮಂಗಳಾದೇವಿಯೊಂದಿಗೆ ಮಾಡಿದ ಯುದ್ಧದ ಪ್ರಸಂಗವನ್ನು ಕವಿ ಅರ್ಥ ಪೂರ್ಣವಾಗಿ ನಿರೂಪಿಸಿದ್ದಾರೆ. ಈ ಪಾತ್ರಗಳು ದೇವತೆಗಳನ್ನು ಮುಗಿಸಲು ಬಂದಾಗ ಅಲ್ಲಿ ನಡೆದ ಸನ್ನಿವೇಶಗಳ ಸಂಭಾಷಣೆಗಳನ್ನು ಕಣ್ಣಿಗೆ ಕಟ್ಟುವಂತೆ ಬರೆದಿದ್ದಾರೆ. ರಾಕ್ಷಸರು ದೇವಿಯನ್ನು ಮೂದಲಿಸಿದ ಬಗೆ, ಹೀಯ್ಯಾಳಿಸುವ ರೀತಿ, ಪಾರ್ವತಿ ದೇವಿ ಪುರಾಣದಲ್ಲಿ ಬರುವ ಶುಂಭ-ನಿಶುಂಭ, ಮಹಿಷಾಸುರರ ನೆನಪನ್ನು ಪಾತ್ರಗಳು

ತಂದುಕೊಡುತ್ತವೆ. ದೇವತೆಗಳ ವಿರುದ್ಧವಾಗಿ ರಾಕ್ಷಸರು ಮಾತನಾಡುವ ಪ್ರಸಂಗದಲ್ಲಿ ರಾಕ್ಷಸರು ಆಡುವ ಮಾತುಗಳು ಪುರಾಣ ಓದುವವರಿಗೆ ಮತ್ತು ಕೇಳುವವರಿಗೆ ಕೋಪ ತರಿಸಿದರೂ, ಖಳ ರಾಕ್ಷಸರ ಪಾತ್ರಗಳನ್ನು ಕವಿ ಹೂಲಿಯವರು ಅತ್ಯಂತ ಸೂಕ್ಷ್ಮವಾಗಿ ನಿರೂಪಿಸಿದ್ದಾರೆ. ಇಲ್ಲಿನ ಪಾತ್ರಗಳ ಸಂಭಾಷಣೆಗಳು ಮಹಾಭಾರತದ ಯುದ್ಧದ ಪ್ರಸಂಗಗಳನ್ನು ನೆನಪಿಗೆ ತರುತ್ತವೆ. ಇಲ್ಲಿ ಬರವ ಅಗಸ್ತ್ಯಮುನಿ, ಇತರೆ ಋಷಿ ಮುನಿಗಳು, ಮಂಗಳಾದೇವಿ ಬ್ರಹ್ಮ, ದೇವಾನುದೇವತೆಗಳು ಇಲ್ಲಿನ ಇತರೆ ಪಾತ್ರಗಳಾಗಿವೆ.

ಶಾಖಾಪುರದ ಬಸವಾಂಬಾದೇವಿ, ಶ್ರೀ ಬ್ರಹ್ಮಾನಂದರು ಅಬ್ಬೆ ತುಮಕೂರಿನ ವಿಶ್ವಾರಾಧ್ಯರು, ಲೀಲಾ ವಿಳಾಸ ಪುರಾಣ, ವ್ಹಿ. ಕೆ. ಸಲಗರ ಶ್ರೀ ಸಾಂಬ ಶಿವಯೋಗಿಗಳು, ಉಜ್ಜಯಿನಿ ಸದ್ಗುರು ಸಿದ್ಧಲಿಂಗ ಭಗವತ್ಪಾದರು, ಶಿಶುನಾಳ ಸಂತ ಶರೀಫರು, ಕಲಬುರ್ಗಿ ಪರುಷ ಮಠದ ಚನ್ನಮಲ್ಲೇಶರು, ಸಂಭಾಪುರದ ಮಲ್ಲಜ್ಜ ಶ್ರೀ ಘತ್ತರಗಿ ಭಾಗ್ಯವಂತಿ ಮುಖ್ಯ ಪಾತ್ರಗಳಾಗಿವೆ. ಹಾಗೂ ಅಲ್ಲಿನ ಪವಾಡಗಳನ್ನು ಹೇಳುವಾಗ ಆ ಊರಿನ ಗ್ರಾಮಸ್ಥರು, ಮುಖಂಡರು ಮುಂತಾದ ಸಣ್ಣ ಪುಟ್ಟ ಪಾತ್ರಗಳು ಬಂದರೂ ಕೂಡಾ ಅಷ್ಟೊಂದು ಪ್ರಮುಖವಾದ ಪಾತ್ರಗಳಲ್ಲವಾದ್ದರಿಂದ ಅವುಗಳನ್ನು ಇಲ್ಲಿ ವಿವರಿಸಿಲ್ಲ .

ಪುರಾಣ ಕಾವ್ಯಗಳಲ್ಲಿ ಪಾತ್ರಗಳ ವಿವೇಚನೆಯು ಸಾಮಾನ್ಯವಾಗಿ ಒಂದು ಸಿದ್ಧಮಾದರಿಯನ್ನು ಒಳಗೊಂಡ ಕಥಾಹಂದರದಲ್ಲಿ ಇರುತ್ತದೆ. ಅಥವಾ ಪೂರ್ವನಿಯೋಜಿತವಾಗಿ ಲೌಕಿಕ ವ್ಯಕ್ತಿಯನ್ನು ವೈವಿಭವೀಕರಿಸಿ ಪುರಾಣ ಪುರುಷರನ್ನಾಗಿ (ಸಿದ್ಧಪುರುಷ) ಮಾಡುತ್ತಾರೆ. ಉದಾ : ಐತಿಹಾಸಿಕ ವ್ಯಕ್ತಿಯಾದ ಬಸವಣ್ಣನನ್ನು ಪುರಾಣ ಕವಿಗಳು ಅವತಾರಿ ಪುರುಷರನ್ನಾಗಿ ಮಾಡಿದ್ದನ್ನು ಇಲ್ಲಿ ನೆನೆಯಬಹುದು. ಸಾಮಾನ್ಯವಾಗಿ ಇಲ್ಲಿಯ ಪುರಾಣ ಕಾವ್ಯಗಳಲ್ಲಿ ಮಠದ ಸ್ವಾಮಿಗಳೇ ಆಯಾ ಪುರಾಣ ಕಾವ್ಯದ ಪ್ರಮುಖ ಪಾತ್ರದಲ್ಲಿರುವುದನ್ನು ಕಾಣುತ್ತೇವೆ. ಆದಕಾರಣ ಕವಿ ಇಲ್ಲಿ ತನ್ನ ಸ್ವಂತ ಪ್ರತಿಭೆಯನ್ನು ಮೆರೆಯುವಂತಿಲ್ಲ . ಏಕೆಂದರೆ ಇಡೀ ಚರಿತ್ರೆಯೇ ಆ ಸ್ವಾಮಿಯ ಜೀವನ ಸಾಧನೆಯಾಗಿರುವುದರಿಂದ ಕವಿಗಳು ಕೇವಲ ಯಂತ್ರದ ಹಾಗೇ ತಮ್ಮ ಕೆಲಸವನ್ನು ನಿರ್ವಹಿಸಬೇಕಾಗುತ್ತದೆ.

ಪುರಾಣ ಕಾವ್ಯದಲ್ಲಿ ಪ್ರಧಾನ ಪಾತ್ರದಲ್ಲಿ ಆಯಾ ಸಮುದಾಯಕ್ಕೆ ಅಥವಾ ಮಠಕ್ಕೆ ಸೇರಿದ ಗುರುಗಳು (ಸ್ವಾಮಿಗಳು) ಬರುವುದರಿಂದ ಅವರ ಧಾರ್ಮಿಕ ನೋಟ, ಸಾಮಾಜಿಕ ಸೇವಾಚಿಂತನ, ಲೋಕಕಲ್ಯಾಣಾರ್ಥ ಅವರು ಕೈಗೊಳ್ಳುವ ಕಾರ್ಯಚಟುವಟಕೆಗಳನ್ನು ಮಾಡುವಲ್ಲಿ ಬರೀ ಪವಾಡಗಳಿಂದ ವೈಭವೀಕರಿಸುವ ವೃತ್ತಿ ಕೆಲವು ಪುರಾಣ ಕಾವ್ಯಗಳಲ್ಲಿ ಕಂಡು ಬರುತ್ತದೆ. ಇದು ಆ ನಾಯಕನ ಚರಿತ್ರೆಯನ್ನು ಅರಿಯಲು ತೊಡಕಾಗುತ್ತದೆ.

◆◆◆

೪.೫. ಪುರಾಣ ಕಾವ್ಯ : ಸಾಮಾಜಿಕ ಸಂವಹನ

ಕವಿಯು ಸಮಾಜ ಜೀವಿಯಾಗಿರುವ ಕಾರಣ, ಅವನ ಸೃಷ್ಟಿ ಸಾಮಾಜಿಕ ಚಟುವಟಿಕೆಯಾಗಿ ಪ್ರಮುಖವಾದುದು. ಸಾಹಿತ್ಯದ ಬಗೆಗಿನ ವಿವೇಚನೆಗಳೆಲ್ಲವು – 'ಕಾವ್ಯ ಯುಗಜನ್ಯವಾದುದು', 'ಜೀವನದ ಪ್ರತಿಬಿಂಬವೇ ಸಾಹಿತ್ಯ', 'ಜೀವನದ ಪರಿವರ್ತನೆಯೆ ಸಾಹಿತ್ಯ' ಈ ಮೊದಲಾದವುಗಳೆಲ್ಲವು ಸಾಮಾಜಿಕತೆ ಮತ್ತು ಸಾಹಿತ್ಯದ ಅನುಸಂಧಾನದತ್ತಲೆ ಬೆರಳು ತೋರುವವು. ಅವನು ಯಾವ ಕಾಲದವನೆ ಆಗಿರಲಿ, ಯಾವುದೇ ದೇಶದಲ್ಲಿರಲಿ, ಯಾವುದೇ ಸ್ಥಿತಿಯಲ್ಲಿರಲಿ, ಅವನ ಕಣ್ಣಿನ ಅರಿವು ಸಮಾಜದ ಸ್ವಾಸ್ಥ್ಯ ನಿರೂಪಣೆಯತ್ತ ಕಳಕಳಿಯುತ್ತ ಇರುವದು. ಸತ್ಯ ಮತ್ತು ಸಮತ್ವಗಳತ್ತ ಸಮಾಜದ ನಡಿಗೆ ಇರಲೆಂಬ ಕಳಕಳಿ. ಈ ಹಿನ್ನೆಲೆಯಲ್ಲಿ ಸಾಮಾಜಿಕ ಸಂವಹನವನ್ನು ಅರಿಯಬಹುದು.

'ಸಾಮಾಜಿಕ ಸಂವಹನ'ವೆಂಬುದು ಸಮಾಜದ ಕಿಲುಬುಗೊಂಡ ವ್ಯವಸ್ಥೆಯನ್ನು ನೇರ್ಪುಗೊಳಿಸುವುದು; ಸಮಾಜಕ್ಕೆ ಸತ್ಯದ ಮಾರ್ಗವನ್ನು ಸೂಚಿಸಿ ನಿರ್ದೇಶಿಸುವುದು. ಈ ಕಾರ್ಯಕ್ಕೆ ಬಲ, ಅಧಿಕಾರ, ಅಂತಸ್ತು, ಹಣಗಳುಳ್ಳ ಅಜ್ಞಾನಿಗಳು ವಿಪತ್ತನ್ನು ತಂದೊಡ್ಡುತ್ತಲೆ ಇರುತ್ತಾರೆ. ಅದನ್ನು ಶಬ್ದಾರ್ಥಗಳ ಮೂಲಕ ಎದುರಿಸುತ್ತಲೆ ಕವಿ ಕಾವ್ಯವನ್ನು ಬರೆಯುತ್ತಾನೆ. ಕಾವ್ಯದ ಅಂತಿಮ ಪರಿಣಾಮ ಆನಂದವೆಂದಿದ್ದರೂ, ಸಾಮಾಜಿಕತೆಯ ಅರಿವು ಕೂಡ ಮಹತ್ವದ್ದು. ಕನ್ನಡದ ಕಾವ್ಯ ಸಂದರ್ಭದಲ್ಲಿ ಉದ್ದಕ್ಕೂ ಈ ಸಾಮಾಜಿಕತೆಯ ಎಚ್ಚರವನ್ನು ಕವಿಗಳು ಮಾಡುತ್ತಲೆ ಬಂದಿದ್ದಾರೆ. ತಮ್ಮ ವಿಚಾರಗಳನ್ನು ಕಳಕಳಿಯನ್ನು ವಸ್ತು–ಪಾತ್ರ–ವಿವೇಚನೆ ಈ ಮೂರರ ಮೂಲಕ ವ್ಯಕ್ತಪಡಿಸಿದ್ದಾರೆ. ನಾಡು–ನುಡಿಗಳ ಅಭಿಮಾನ, ಸಮಾಜದ ಬಗೆಗೆ ಅರಿವು, ಕಾವ್ಯಾನುಸಂಧಾನದ ಆಶಯಗಳನ್ನು ಕವಿಗಳು ಮಾಡುತ್ತ ಬಂದಿದ್ದಾರೆ. ಪಂಪ–ರನ್ನರ ಕಾಲಘಟ್ಟದಲ್ಲಿ ಯುಗದ ಅರಿವಾದ 'ವೀರ'ವು ಕಾವ್ಯಗಳಲ್ಲಿ ಘನೀಕರಿಸಿತು. ಮುಂದೆ ೧೨ನೆಯ ಶತಮಾನದಲ್ಲಿ ಯುಗದ ಪೂರ್ಣ ಅರಿವು ಆಂದೋಲನದ ಮುಖ್ಯ ಸಂಗತಿಯೆ ಆಯಿತು. ಮಧ್ಯಕಾಲದಿಂದೀಚೆ ಕಾವ್ಯವನ್ನು ಜನತೆಗೆ ಮುಟ್ಟಿಸುವ ಇನ್ನೊಂದು ಮಹತ್ವದ ಆಯಾಮವು ಷಟ್ಪದಿಯಿಂದ ಒದಗಿ ಬಂದಿತು. ಗಮಕ ಅನಂತರ ಪ್ರವಚನಗಳಿಂದ ಷಟ್ಪದಿಯು ಕುಮಾರವ್ಯಾಸನ ಕಾವ್ಯದ ನಂತರ ವಿಶೇಷತೆ ಪಡೆಯಿತು. ಪುರಾಣಕಾವ್ಯಗಳು ಪ್ರವಚನಗೊಳ್ಳುವ ಮೂಲಕ ಸಾಮಾಜಿಕ ಸಂವಹನದ ಇನ್ನೊಂದು ಮುಖವನ್ನು ಅನಾವರಣಗೊಳಿಸಿದವು.

ಪುರಾಣ ಕಾವ್ಯಗಳಲ್ಲಿ 'ಸಾಮಾಜಿಕತೆಯ ಅರಿವು' ಮತ್ತು 'ಸಾಮಾಜಿಕ ಸಂವಹನ' ಈ ಎರಡರ ಅವಲೋಕನವನ್ನು ಮಾಡಬಹುದು. ಸಾಮಾಜಿಕತೆಯ ಅರಿವಿನ ಹರವಿನಲ್ಲಿ, ಸಮಾಜ ಕಟ್ಟಿಕೊಂಡ ಕಟ್ಟುಪಾಡುಗಳು, ಜಾತಿ, ಹಣ, ಲಿಂಗ, ಅಧಿಕಾರಗಳು ಉಂಟು ಮಾಡಿದ ಸಾಮಾಜಿಕ ವಿಕಾರಗಳು, ಅವಿಕಾರಗಳನ್ನು ತೊಡೆದು ಹಾಕಲು ವ್ಯಕ್ತಿ ಮಾಡುವ ಕ್ರಿಯಾಸಾಧನೆಗಳನ್ನು ನೋಡಬಹುದು. ಸಾಮಾಜಿಕ ಸಂವಹನದ ಹರವು ಪ್ರವಚನ ಅದರಿಂದುಂಟಾಗುವ ಸಾಮಾಜಿಕ ಕ್ರಿಯಾಕಲಾಪ ಪರಿವರ್ತನೆ, ಸಂಚಲನಗಳನ್ನು ಅಧ್ಯಯನ ಮಾಡಬಹುದು.

ಪುರಾಣಕಾವ್ಯಗಳು 'ಗ್ರಾಂಥಿಕ' ಮತ್ತು 'ಮೌಖಿಕ' ಎಂಬ ಎರಡು ನೆಲೆಗಳಲ್ಲಿ ಪ್ರಯೋಗ ಶೀಲತೆಯನ್ನು ಉಳಿಸಿಕೊಂಡಿವೆ. ಗ್ರಾಂಥಿಕವಾಗಿ ಇಲ್ಲಿ ಬರುವ ವಸ್ತು ಪಾತ್ರಗಳಲ್ಲಿ ಮೂಡಿದ ಅರಿವಿನ ವಿಚಾರಗಳು ಸಾಮಾಜಿಕವಾಗಿ ಸ್ಪಂದಿಸುತ್ತಾ ಸ್ವಾಮಿಗಳ, ಮಹಾತ್ಮರ ಅನೇಕ ಘಟನಾವಳಿಗಳನ್ನು ಎತ್ತಿ ಹೇಳುವವು. ಸಮಾಜದ ಹಿತವೇ ಸ್ವಾಮಿಗಳ ಗುರಿಯಾಗಿತ್ತು. ಹಾಗೆ ನೋಡಿದರೆ 'ಮಠವು ಸಮಾಜದ ಹೃದಯ, ಸ್ವಾಮಿಗಳೆಂದರೆ ಸಮಾಜದ ಮಿದುಳು' ಎನ್ನುವಂತಹ ಕಾಲದಲ್ಲಿ ಬದುಕಿಬಾಳಿದ ನಾಲತ್ತವಾಡ ವೀರೇಶ ಶರಣರು, ತೋಂಟದ ಸಿದ್ಧಲಿಂಗಯತಿಗಳು, ಕಲಬುರ್ಗಿ ಶರಣ ಬಸವೇಶ್ವರರು ಸಾಮಾಜಿಕ ಸೇವೆಗಾಗಿಯೆ ಜೀವನವನ್ನು ಮುಡಿಪಾಗಿಟ್ಟ ಜಂಗಮರಾಗಿದ್ದರು. ಈ ಕಾಲಘಟ್ಟದ ಎಲ್ಲ ಶರಣರು ಸ್ವಾಮಿಗಳು ಸಮಾಜವನ್ನೇ ಮಹಾಮನೆಯನ್ನಾಗಿ ತಿಳಿದ ಮಹಾಂತರೆ ಅವರು. ಅವರು ಶರಣ ಪ್ರಣೀತ ದರ್ಶನವನ್ನು ಅದಕ್ಕೆ ತಕ್ಕ ಸತ್ಯ ಶುದ್ಧ ಸಮಾಜವನ್ನು ನಿರ್ಮಿಸುವತ್ತ ಹೆಜ್ಜೆ ಇಟ್ಟರು. ಇನ್ನು 'ಅಂಬೇಡ್ಕರ' ಅವರಂತಹ ದಾರ್ಶನಿಕರು 'ಭಾರತ ಸಂವಿಧಾನದ ಶಿಲ್ಪಿ' ಎನಿಸಿಕೊಂಡರು. ಅವರು ಜಾತಿಯ ಮೂಢಾಚರಣೆಗಳಿಂದ ಸನಾತನವಾದಿಗಳಿಂದ ಹೇಗೆ ನೊಂದರು, ಸಮಾಜವನ್ನು ಹೇಗೆ ಎದುರಿಸಿದರೆಂಬುದು ಬಹು ಚಿಂತನಾಪೂರ್ಣ ವಿಷಯ ಎನಿಸಿದೆ. ಇದನ್ನು ಕಾವ್ಯದ ವಸ್ತುವಾಗಿಸಿದವರು ಪುರಾಣ ಕವಿಗಳೆ ಎಂಬುದು ಮಹತ್ವದ್ದು. ಪುರಾಣಗಳಲ್ಲಿ ಮೂಡಿದ ಸಾಮಾಜಿಕ ಸ್ಪಂದನವು ಸ್ವಾಮಿಗಳ ಸಾಮಾಜಿಕ ಕಳಕಳಿಯನ್ನು ಎತ್ತಿ ಹೇಳುವದು. ಅವರೆಲ್ಲರು ವ್ಯಕ್ತಿಹಿತಕ್ಕಿಂತ ಸಮುದಾಯದ ಹಿತಕ್ಕಾಗಿ ಬದುಕಿ ಬವಣೆ ಪಟ್ಟವರು. ಆ ಕಾಲದ ಎಲ್ಲ ಮತೀಯ ಪಂಥದ ಸ್ವಾಮಿಗಳು ಸಾಮಾಜಿಕ ಪ್ರಜ್ಞೆಯುಳ್ಳವರಾಗಿದ್ದರು.

ಪಂ. ಪುಟ್ಟರಾಜ ಕವಿಗಳು ರಚಿಸಿದ ಬಹುತೇಕ ಪುರಾಣಗಳು ಕಾವ್ಯದಲ್ಲಿ ಚಿತ್ರಿತ ಸ್ವಾಮಿಗಳ ಸಾಮಾಜಿಕ ತುಡಿತ-ಮಿಡಿತದ ಚಿತ್ರಣವನ್ನು ಎತ್ತಿ ಹೇಳುವವು. ಕಲಬುರ್ಗಿ ಶರಣ ಬಸವೇಶ್ವರರು ಕೃಷಿ ಕಾಯಕ ಮಾಡಿ ಜೀವದಯೆ ಹೊಂದಿ ಮಹತ್ತನ್ನೇ ಬದುಕಿದವರು. ಶರಣ ಬಸವೇಶ್ವರರ ಜೀವಪರವಾದ ನಿಲುವು ಅನೇಕ ಘಟನೆಗಳಿಂದ ವ್ಯಕ್ತಗೊಳ್ಳುವದು. ಅವರು ಹೊಲದಲ್ಲಿ ಪಶು-ಪಕ್ಷಿಗಳಿಗೆ ನೀರಿನ ಅರವಟ್ಟಿಗೆಗಳನ್ನು ನಿರ್ಮಿಸುತ್ತಿದ್ದರು. ಅನೇಕ

ಪಕ್ಷಿ ಹಿಂಡುಗಳು ತೆನೆಯ ಕಾಳುಗಳನ್ನು ತಿಂದರೂ, ವ್ಯಥೆ ಪಡದೆ, ಒಕ್ಕಲು ಮಾಡುತ್ತಿದ್ದ ವಿವರಗಳು, ಅವರ ಸಕಲ ಜೀವಾತ್ಮಕ್ಕೆ ಲೇಸ ಬಯಸುವ ಗುಣವನ್ನು ಎತ್ತಿ ತೋರುತ್ತದೆ. ಅದನ್ನು ಕವಿಗಳು ಹೀಗೆ ನಿರೂಪಿಸಿದ್ದಾರೆ.

ಕ್ರಿಮಿಮಶಕ ಪಶುಪಕ್ಷಿ ಸಮೃಗಾ
ದ್ಯಮಿತ ಜೀವ ಸಮೂಹಮೆನಿವಂ
ಭ್ರಮೆ ಇರದೆ ಚರಗಣಮೆನುತೆ ತಿಳಿದಿರುವತಕತದಿಂದೆ ।
ವಿಮಲ ನಾ ತನ್ನಯ ಗೃಹದಜಂ
ಗಮರವೋಲ್ ಪೊಲದೊಳೆ ವ್ಯವಸ್ಥೆಯ
ಸಮತೆಯಿಂ ಗೈಯ್ದಿರ್ದನಾ ಸಮತಾಪ್ರೀಯಂ ತಿಳಿದು ॥

(ಕ. ಶ್ರೀ. ಶ. ಬ. ಪುರಾಣ ಪುಟ : ೨೬)

ಹಾಗೆಯ ಅವರ ನಿಡುಗಾಲದ ಬದುಕೆಲ್ಲಾ ಇಂತಹ ಜೀವಪರ ದಯಾ ನಿಲುವಿನಲ್ಲಿ ಕಳೆದುದೆ ಒಂದು ಅದ್ಭುತ. ನಾಲತ್ತವಾಡ ವೀರೇಶ ಶರಣರು ಜನರು ನೀರು ತರುವ ದಾರಿಯನ್ನು ಸ್ವಚ್ಛಗೊಳಿಸಿ ಹರಳು ಕಲ್ಲುಗಳನ್ನು ಆಚೆ ಚೆಲ್ಲುತ್ತಿದ್ದರು. ಇಂತಹ ಅನೇಕಾನೇಕ ಘಟನೆಗಳು ಇಲ್ಲಿವೆ. ಅಥಣಿ ಶಿವಯೋಗಿಗಳು, ಇಂದು ವಿಸ್ಮಯವಾದ ಅದ್ಭುತ ಬದುಕನ್ನು ಬದುಕಿದ ಶ್ರೀ ಸಿದ್ದೇಶ್ವರ ಸ್ವಾಮಿಗಳು ಹಣವನ್ನು ಕೈಯಿಂದ ಒಟ್ಟು ಮುಟ್ಟದೆ ಬದುಕಿದರು. ಅದನ್ನು 'ಬೆಂಕಿ' ಎಂದು ಕರೆಯುತ್ತಿದ್ದರು. ಈ ಹಿನ್ನೆಲೆಯಲ್ಲಿ ಹಣದ ಬೆನ್ನು ಹತ್ತಿ ಮನದ ಮುಂದಣ ಆಸೆಯಿಂದ ಬೇಯುವ ಜಗದ ಜಂಗುಳಿ ಹಣಕ್ಕಾಗಿ ಪಿಪಾಸುಗಳಾದುದನ್ನೇ ಈ ಹೇಳಿಕೆಗಳು ತಿಳಿಸುತ್ತವೆ. ಅವರಲ್ಲಿಯ 'ಭಕ್ತಿ-ಪ್ರೇಮ, ತ್ಯಾಗ, ದಯೆ, ನಿಷ್ಠೆ , ಆತ್ಮಬಲ, ಭೂತಾನುಕಂಪೆ, ನಡೆ-ನುಡಿ ಸಾಮಾರಸ್ಯ, ಗುಣಗಳು ಅವರನ್ನು ಮಹಾತ್ಮರನ್ನಾಗಿ ಮಾಡಿರುವವು. ಶರಣರು ಪ್ರತಿಪಾದಿಸಿದ ಸಮತೆ-ಸ್ವೈರಣೆಗಳು ಮೂಲ ಮಂತ್ರಗಳಾಗಿರುವುದನ್ನು ನಾವು ಕಾಣುವುದು ಈ ಸಾಮಾಜಿಕ ಹಿನ್ನೆಲೆಯಲ್ಲಿಯೆ.'

ದೇವರನ್ನು ತನ್ನ ಒಳಗೆ ಕಂಡುಕೊಂಡ ಅರಿವಿನ ಮಹಾಂತ ಎಲ್ಲರಲ್ಲಿರುವ ಅದೇ ತತ್ವವನ್ನು ಕಂಡರು. ಇದರಿಂದ ಎಲ್ಲರಲ್ಲಿ ದೈವತ್ವವನ್ನು ಕಂಡ ದಿವ್ಯಮನ ಅವರದಾಗಿತ್ತು . ಅವರು ಕಾಯಕ ದಾಸೋಹಗಳ ಮೂಲಕ ಎಲ್ಲ ಬದುಕಿಗೆ ಶ್ರಮ ಸಂಸ್ಕೃತಿಯನ್ನು ಸಮತೆ ಮತ್ತು ಹಂಚುವಿಕೆಯ ಸಮಾನತೆಗಳನ್ನು ಎತ್ತಿ ಹೇಳಿದರು. ಇದರಿಂದ ಸಾಮಾಜಿಕವಾದ ಸಮತ್ವವು ಪ್ರಾಪ್ತವಾಗಿರುವದು. ಸ್ವಾಮಿಗಳು ಪ್ರವಚನ ಮೂಲಕವಾಗಿ ಸಾಮಾಜಿಕ ಅರಿವನ್ನು ವ್ಯಕ್ತಗೊಳಿಸಿದರು. ದೇಶಿ ನೆಲೆಗಳಲ್ಲಿ ಮಾನಸಿಕ ನೆಮ್ಮದಿ ಮಾನಸಿಕ ಸಮತೋಲನಗಳನ್ನು ಹೊಂದಲು ಇದರಿಂದ ಸಾಧ್ಯವಾಯಿತು. ಎಷ್ಟೋ ಬಾರಿ ಜನರನ್ನು ಕಳ್ಳತನದ ಮಾರ್ಗ ಬಿಡಿಸಿ, ಸನ್ಮಾರ್ಗಕ್ಕೆ ದುಡಿಮೆಗೆ ಹಚ್ಚಿದ ಉದಾಹರಣೆ ಇವೆ.

ಈ ಕಾವ್ಯಗಳ ಇನ್ನೊಂದು ಮತಹ್ವದ ಸಾಮಾಜಿಕ ಆಯಾಮವೆಂದರೆ 'ಪ್ರವಚನ ರೀತಿ'. ಸಾಮಾಜಿಕ ಜಾಗೃತಿ, ಅರಿವು ಮತ್ತು ಸನ್ಮಾರ್ಗ ನಿರೂಪಣೆಗೆ ಪ್ರವಚನವಿರುವವು. ಈ ಎಲ್ಲ ಪುರಾಣ ಕಾವ್ಯಗಳು ಬಹುಪಾಲು ಹಳ್ಳಿಯ ಜನರನ್ನೇ ಉದ್ದೇಶಿಸಿ ಇರುವವು. ಆ ರೀತಿಯಲ್ಲಿ ಹಳ್ಳಿಯ ಸಾಮಾಜಿಕ ಪರಿಸರವನ್ನು ಆಧ್ಯಾತ್ಮಿಕ ನೆಲೆಯಿಂದ ಉತ್ತಮಗೊಳಿಸುವ ಕ್ರಿಯೆ ಇಲ್ಲಿ ನಡೆದಿರುವದು. ಅದು ಆದರ್ಶಮಯವಾದ ಹಿನ್ನೆಲೆಯಲ್ಲಿ ಮಾನವೀಯ ಮೌಲ್ಯಗಳಾದ, ಸತ್ಯ, ಭಕ್ತಿ, ನ್ಯಾಯ, ಸೇವೆ, ದಯೆ, ನಿಸ್ವಾರ್ಥ, ತ್ಯಾಗ ಮೊದಲಾದವುಗಳ ಮಹತ್ವವನ್ನು ವಿವರಿಸಿ ಅವುಗಳನ್ನು ಜನಮಾನಸದ ಭಿತ್ತಿಯಲ್ಲಿ ಬಿತ್ತುವುದೆ ಇಲ್ಲಿಯ ಮೂಲ ಉದ್ದೇಶವಾಗಿದೆ. ಇದರಿಂದ ಸಾಮಾಜಿಕವಾಗಿ ಸಾಂಸ್ಕೃತಿಕ ಮೌಲ್ಯಬಿತ್ತನೆ ಈ ಪ್ರವಚನಕ್ಕಿದೆ.

ಪ್ರವಚನವೆಂದರೆ ಅದು ಅಲ್ಲಿಯ ಕಥಾನಾಯಕನ ಜೀವನ ಸಾಧನೆ-ಸಿದ್ಧಿಗಳ ನಿರೂಪಣೆಯಾಗಿದ್ದು, ಅಲ್ಲಿಗೆ ನಿಲ್ಲದೆ ಮುಂದೆ ಸಾಂದರ್ಭಿಕವಾಗಿ ಪದಗೀತೆಗಳನ್ನು ಹಾಡುವದು, ಸಮತೀಯ ಕಥೆ-ಘಟನೆಗಳನ್ನು ನಿರೂಪಿಸುವದು. ಹೀಗೆ ಸಮುದಾಯದ ಮನಕ್ಕೆ ಬೇಕಾದ ಒಟ್ಟು ತಿಳುವಳಿಕೆಯನ್ನು ವಿವಿಧ ಕಲೆಗಳ ಮೂಲಕ ನಿರೂಪಿಸುತ್ತ ಸಾಗುವದು ಇಲ್ಲಿಯ ಮುಖ್ಯ ಅಂಶವಾಗಿದೆ. ಕಲಬುರ್ಗಿ ಶರಣಬಸವೇಶ್ವರ ಪುರಾಣವಂತೂ ಉತ್ತರ ಕರ್ನಾಟಕದಲ್ಲಿ ಒಂದು ತಿಂಗಳು ಶ್ರಾವಣ ಮಾಸದಲ್ಲಿ ಅಥವಾ ಸ್ಥಳೀಯ ಜಾತ್ರಾಕಾಲದಲ್ಲಿ ಪ್ರವಚನಗೊಳ್ಳುವ ಒಟ್ಟು ಕಲಾಪಗಳು, ಅದ್ಭುತವಾದ ಅರಿವಿನ ಆಚರಣೆಯನ್ನು ಒಳಗೊಳ್ಳುವಿಕೆಯಾಗಿದ್ದು , ಅಲ್ಲಿಯೆ ಶರಣಬಸವೇಶ್ವರರ ದೇವಾಲಯಗಳ ನಿರ್ಮಾಣ ಆದುದು ಸಾಮಾಜಿಕ ಸಂವಹನದ ಹಿನ್ನೆಲೆಯಲ್ಲಿಯೆ.

ಸಾಮಾಜಿಕ ಪರಿಸರದ ಐತಿಹಾಸಿಕ ಘಟನೆಗಳು ಜನರ ಮನಸ್ಸನ್ನು ಸೆಳೆದರೆ ಅವು ಪುರಾಣವಾಗಿ ಸಾಮಾಜಿಕ ಸಂವಹನಕ್ಕೆ ದಾರಿಮಾಡಿಕೊಡುತ್ತವೆ. ಉದಾ : ಬಸವಣ್ಣ, ಅಲ್ಲಮಪ್ರಭು ಮುಂತಾದ ಶ್ರೇಷ್ಠ ಶಿವಶರಣರ ಮೇಲೆ ಹರಿಹರ ಕವಿಯು ಮೊದಲು ಕಾವ್ಯ ಬರೆದರೆ, ಮುಂದಿನ ಪೀಳಿಗೆಯವರು ಅವರನ್ನು ಕುರಿತು ಪುರಾಣವನ್ನು ರಚಿಸುವ ಮೂಲಕ ಅವರ ಸಾಮಾಜಿಕ ಕಳಕಳಿಯನ್ನು ತೀವ್ರವಾಗಿ ಜನರೊಂದಿಗೆ ಮುಟ್ಟಿಸಲು ಸುಲಭವಾಗುತ್ತದೆಂಬ ನಂಬಿಕೆಯಿಂದ ಇಂತಹ ಪುರಾಣಕಾವ್ಯಗಳು ಸೃಷ್ಟಿಗೊಂಡಿವೆ. ಜೊತೆಗೆ ಅವರ ವ್ಯಕ್ತಿತ್ವವನ್ನು ಇನ್ನಷ್ಟು ಎತ್ತರಿಸುವ ದೃಷ್ಟಿಯಿಂದ ಕವಿ ತನ್ನ ನಿರೂಪಣೆಯಲ್ಲಿ ಜನರಿಗೆ ರುಚಿಸುವ ಸಂಗತಿಯನ್ನು ಮನಗಾಣಿಸಿ, ಒಂದು ಪೌರಾಣಿಕ ಛಾಯೆಯನ್ನು ಎತ್ತಿ ತೋರಿಸುತ್ತಾರೆ. ಪುರಾಣ ವ್ಯಕ್ತಿ ತೋರಲು ಲೌಕಿಕ ಸಮಾಜದಲ್ಲಿದ್ದು ಆತ ಗತಿಸಿಹೋದ ನಂತರ ಕೆಲವು ವರ್ಷಗಳು ಕಳೆದ ಮೇಲೆ ಈ ಪುರಾಣಗಳ ಮೂಲಕ ದೈವಿ ಸ್ವರೂಪವನ್ನು ಪಡೆದುಕೊಳ್ಳುತ್ತಾನೆ. ಈ ಸ್ವರೂಪ ಪಡೆದುಕೊಳ್ಳಲು ಪುರಾಣ ಮುಖ್ಯವಾಗಿ ರಚನೆಯಾಗುತ್ತವೆ.

ಹೀಗೆ ರಚಿತವಾದ ಪುರಾಣಗಳ ಮೂಲಕ ಸಾಮಾಜಿಕ ಸಂಬಂಧ, ಸ್ಥಿರತೆ ಇವುಗಳ ಜೊತೆಗೆ ಅವರ ತತ್ವಗಳು ಹೇಗೆ ಸಂವಹನಗೊಳ್ಳುತ್ತವೆ ಎಂಬುದು ಸಾಮಾಜಿಕ ಸಂವಹನ ನಡೆಯುವ ಕ್ರಿಯೆಯನ್ನು ಗುರುತಿಸುವುದಾಗಿದೆ. ಪುರಾಣ ಕಾವ್ಯಗಳು ಒಂದು ಸಮುದಾಯದ ಸಾವಾಜಿಕ ಸಂಸ್ಥೆಗಳ, ವೃತ್ತಿಗಳ ಉಗಮವನ್ನು ಹೇಳುವ ಉದ್ದೇಶದಿಂದಲೂ ಕಲ್ಪಿತವಾಗಿರುವಂತವು. ಹೀಗಾಗಿ ಅವು ಸಾಮಾಜಿಕವಾಗಿ ಬಹು ಬೇಗನೆ ಸಂವಹನವನ್ನು ಪಡೆದುಕೊಳ್ಳುತ್ತವೆ.

ಗದಗ ಜಿಲ್ಲಾ ಆಧುನಿಕ ಪುರಾಣ ಕಾವ್ಯಗಳಲ್ಲಿ ಪುರಾಣ ಪುರುಷ ಮಾಡಿದ ಸಾಧನೆಯನ್ನು, ಅವರು ಕೈಗೊಂಡ ಸಾಮಾಜಿಕ ಕಳಕಳಿಯನ್ನು, ಮಾಡಿದ ಪವಾಡವನ್ನು ಹೇಳುವ ಮೂಲಕ ಅವರು ಕಟ್ಟಿ ಬೆಳೆಸಿದ ಶಿಕ್ಷಣ ಸಂಸ್ಥೆ, ಮಠ-ಮಂದಿರ ನಾಡಿನ ವಿವಿಧ ಸಮುದಾಯದವರಿಗೆ ಮಾಡಿದ ಪರೋಪಕಾರಿ ಕಾಯಕವನ್ನು ಹೇಳುವದರ ಮೂಲಕ ಅವುಗಳು ಸಾಮಾಜಿಕ ಸಂವಹನವನ್ನು ಉಂಟು ಮಾಡುವಲ್ಲಿ ಮಹತ್ವದ ಪಾತ್ರವನ್ನು ವಹಿಸಿವೆ.

ಉದಾ : ಭಕ್ತರಿಗೆ ಬಂದ ರೋಗವನ್ನು ನಿವಾರಿಸುವುದು, ವೈದ್ಯ ಜನ ಸಮುದಾಯಕ್ಕೆ ಹಣದ ಮೌಲ್ಯ-ಅಮೌಲ್ಯಗಳನ್ನು ವಿವರಿಸುವದು ಮತ್ತು ಜಾತಿಮತಗಳಿಂದ ಮುಕ್ತ ಸಮಾಜ ನಿರ್ಮಾಣ. ಹೀಗೆ ಆಧುನಿಕ ಪುರಾಣ ಕಾವ್ಯಗಳು ಈ ಅಂಶಗಳನ್ನು ಒಳಗೊಂಡಿರುವದರಿಂದ, ಜನರು ಬಹುಬೇಗನೆ ತಮ್ಮ ಮನಸ್ಸನ್ನು ಆ ಪುರಾಣ-ಪುರುಷರ ದಿವ್ಯದೃಷ್ಟಿಗೆ ಕೊಡುವುದರಿಂದ, ಸಾಮಾಜಿಕವಾದ ಒಂದು ಪ್ರಸಾರ ತಾನೇ ಅನಾವರಣಗೊಳ್ಳುತ್ತಾ ಸಾಗುತ್ತದೆ. ಈ ನಿಟ್ಟಿನಲ್ಲಿ ಹಲವು ಕಾಯಕಗಳು ಪುರಾಣದಲ್ಲಿ ಮೂಡಿರುವುದರಿಂದ ಸಹಜವಾಗಿಯೆ ಸಹೃದಯರ ಮನಸ್ಸನ್ನು ಈ ಪುರಾಣಗಳು ತಟ್ಟುವುದರ ಮೂಲಕ ತನ್ನದೇ ಆದ ಒಂದು ಆಶಯವಿನ್ಯಾಸವನ್ನು ವ್ಯಕ್ತಪಡಿಸುತ್ತವೆ. ಅವುಗಳನ್ನು ಈ ರೀತಿಯಲ್ಲಿ ಕಲೆಹಾಕಲಾಗಿದೆ.

ಶ್ರೀ ವಾಸುದೇವ ಹೂಲಿಯವರು ರಚಿಸಿದ 'ಶ್ರೀ ಸಚ್ಚಿದಾನಂದ ಪುರಾಣ'ದಲ್ಲಿ ಸಚ್ಚಿದಾನಂದ ಶಿವಯೋಗಿಗಳ ತತ್ವವನ್ನು ಉಲ್ಲೇಖಿಸುವುದರ ಮೂಲಕ ಜನರ ನಂಬಿಕೆಯನ್ನು ಗಟ್ಟಿಗೊಳಿಸುವುದು ಪ್ರಮುಖವಾಗಿ ಕಂಡುಬರುತ್ತದೆ. ಜೊತೆಗೆ ಅವರ ಪವಾಡಗಳು ಜನರ ಮೇಲಿನ ನಂಬಿಕೆಯಿಂದ ಮತ್ತಷ್ಟು ಗಟ್ಟಿಗೊಂಡಿವೆ. ಅಲ್ಲದೆ ಶಾಲಾ ವ್ಯವಸ್ಥೆಯ ವಿರುದ್ಧ ಅವರು ಹೋರಾಡಿದ ಪರಿಯನ್ನು ವರ್ಣಿಸುವುದು, ಅವರ ಲೋಕಕಲ್ಯಾಣಾರ್ಥ ತಪಸ್ಸನ್ನು ಆಚರಿಸಿದ ಬಗೆಯನ್ನು ಹೇಳುವ ಮೂಲಕ ಸಾಮಾಜಿಕ ಜನಜೀವನದಲ್ಲಿ ಅವರ ಸ್ಥಾನವನ್ನು ಭದ್ರಗೊಳಿಸುತ್ತವೆ.

'ಶ್ರೀ ರುದ್ರೇಶ ಲೀಲಾ ವಿಲಾಸಂ' ಎಂಬ ಪುರಾಣ ಕಾವ್ಯದಲ್ಲಿ ಜನರಿಗೆ ಬಂದ ಆಪತ್ತನ್ನು ದೂರಮಾಡಿ ಅವರ ಕಷ್ಟವನ್ನು ಪರಿಹರಿಸಿದ ಶ್ರೀ ರುದ್ರೇಶನು ಜನರ ಕಲ್ಯಾಣಕ್ಕಾಗಿ ತಮ್ಮಲ್ಲಿರುವ ಭಸ್ಮದಿಂದ ರೋಗವನ್ನು ಕಳೆದು, ಭಕ್ತರ ಹೃದಯದಲ್ಲಿ ನೆಲೆನಿಂತ ಬಗೆಯನ್ನು

ನಾವು ಗುರುತಿಸಬಹುದಾಗಿದೆ. ಅದೇ ರೀತಿಯಲ್ಲಿ 'ಶಿವಾನಂದ ಸ್ವಾಮಿ ಪುರಾಣ'ದಲ್ಲಿ ಶಿವಾನಂದರು ಗೃಹಸ್ಥರಾಗಿ ನಂತರ ಲೋಕಕ್ಕೆ ಪರೋಪಕಾರಿಯಾದ ಪ್ರಸಂಗ, ತಮ್ಮ ಅಗಾಧವಾದ ಶಕ್ತಿಯ ಮೂಲಕ ಶಬರಿಯನ್ನು ಒಲಿಸಿಕೊಂಡದ್ದು , ಬೆಳವಟಗಿ, ಸುರಕೋಡ, ಚಾಕಲಬ್ಬಿಯ ಜನರಿಗಾಗಿ ನಡೆಸಿದ ಪವಾಡಗಳನ್ನು ಅಲ್ಲಿಯ ಜನರು ಇವತ್ತಿಗೂ ಸಹ ನೆನಪಿಟ್ಟುಕೊಂಡಿದ್ದಾರೆ.

'ಗುಡಿಸಾಗರ ಶ್ರೀ ಸಿದ್ಧ-ಸಾಧುಗಳ ಪುರಾಣ' ಕಾವ್ಯದಲ್ಲಿ ಶ್ರೀ ಸಿದ್ಧ ಶಿವಯೋಗಿಗಳು ಭಕ್ತರ ಜಗಳಗಳನ್ನು ಬಗೆಹರಿಸಿ ಅವರಿಗೆ ಮುಕ್ತಿಯ ಮಾರ್ಗವನ್ನು ತೋರಿಸುವುದು, ಅವರಿಗಾಗಿ ಲೋಕ ಸಂಚಾರವನ್ನು ಮಾಡಿ ಅವರಲ್ಲಿ ಸಾಮರಸ್ಯವನ್ನುಂಟು ಮಾಡುವುದು, ದುಷ್ಟರನ್ನು ದೂರವಿಟ್ಟು ಶಿಷ್ಟರನ್ನು ರಕ್ಷಿಸುವುದು. ಇವೆಲ್ಲವುಗಳ ಮೂಲಕ ಸಾಮಾಜಿಕ ಅನುಸಂಧಾನಕ್ಕೆ ಪೂರಕವಾದ ಒಂದು ವಾತಾವರಣವನ್ನು ಕವಿಗಳು ತಮ್ಮ ಪುರಾಣ ಕಾವ್ಯದಲ್ಲಿ ತಂದಿದ್ದಾರೆ. ಅದೇ ರೀತಿ 'ಶ್ರೀ ಸದಾಶಿವಾನಂದಸ್ವಾಮಿ ಪುರಾಣ', 'ಶ್ರೀ ಸದ್ಗುರು ಶಿದ್ದೇಶ್ವರ ಪುರಾಣ', ಪುರಾಣಗಳು ಸಹ ಸಾಮಾಜಿಕ ಸಂವಹನದ ಅರಿವನ್ನು ಉಂಟುಮಾಡುವಲ್ಲಿ ಮಹತ್ವದ ಪಾತ್ರವಹಿಸುತ್ತವೆ.

"ಲೋಕದ ಕರ್ಮಜೀವನದಲ್ಲಿಯೇ ನಿರತರಾಗಿದ್ದು, ವ್ಯಕ್ತಿಗತ ಇತಿಮಿತಿಗಳನ್ನು ದಾಟಿ, ಸಮಷ್ಠಿ ಹಿತ ಸಾಧಿಸುವುದರ ಮೂಲಕ" (ಕನ್ನಡ ಸಾಹಿತ್ಯದಲ್ಲಿ ಪುರಾಣಪ್ರಜ್ಞೆ ಡಾ. ಕೆ. ಎಲ್. ಗೋಪಾಲಕೃಷ್ಣಯ್ಯ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಪುಟ. ೩೭೧. ೧೯೮೮.) ಮಹತ್ತಿಗೇರಿದ ವ್ಯಕ್ತಿಗಳು ಸಮಾಜದ ಸಂವಹನಕ್ಕೆ ಪಾತ್ರರಾಗುತ್ತಾರೆ. ಹೀಗಾಗಿ ಇಂತಹ ಮಹಾತ್ಮರು ತಮ್ಮ ಜೀವನದಲ್ಲಿ ಲೋಕಕಲ್ಯಾಣಾರ್ಥ ಶಾಲೆಯನ್ನು ಕಟ್ಟಿಸಿ, ಶಿಕ್ಷಣ ನೀಡಿದ್ದು , ಮಠವನ್ನು ಕಟ್ಟಿ ಪ್ರಸಾದವನ್ನು ನೀಡಿದ್ದು. ತಮ್ಮ ಅಗಾಧ ಶಕ್ತಿ ತೋರಿಸಿ ಜನರಿಗೆ ಬಂದ ಕಷ್ಟಗಳನ್ನು ಪವಾಡಗಳ ಮೂಲಕ ಪರಿಹರಿಸಿ ಸಮಾಜವು ಸರಿಯಾದ ದಾರಿಗೆ ಬರುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಅವರ ಪುರಾಣಗಳು ಈ ಎಲ್ಲ ಕಾರಣದಿಂದಾಗಿ ಸಾಮಾಜಿಕ ಸಂವಹನಗೊಂಡಿವೆ.

ಪುರಾಣಗಳು ಕೇವಲ ಕಥೆಯನ್ನು ಹೇಳುವುದರ ಮೂಲಕ ವೈಚಾರಿಕತೆಯನ್ನು ಹೇಳುವದಷ್ಟೇ ಅಲ್ಲ, ಜೊತೆಗೆ ಸಾಮಾಜಿಕ ವಲಯದಲ್ಲಿ ಸಂವಹನ ಮೂಡಿಸುವುದಾಗಿದೆ. ಪುರಾಣಗಳು ಶಿವಶರಣರ ಅನುಭವಗಳನ್ನು, ಅನಿಸಿಕೆಗಳನ್ನು ಮಾತಿನ ರೂಪದಲ್ಲಿ ಜನ ಸಾಮಾನ್ಯರಿಗೆ ತಿಳಿಸುವ ಉದ್ದೇಶದಿಂದ ರಚಿತವಾಗಿವೆ. ಜನ ಬಳಕೆಯ ಮಾತುಗಳು ಪುರಾಣಗಳಲ್ಲಿ ಅಭಿವ್ಯಕ್ತವಾಗಿವೆ. ಪುರಾಣಗಳಲ್ಲಿ ಸೂಕ್ಷ್ಮಾತೀ ಸೂಕ್ಷ್ಮ ವಿಚಾರಗಳು, ತಾರ್ಕಿಕ ಹಾಗೂ ತಾತ್ವಿಕ ವಿಷಯಗಳು ಅತ್ಯಂತ ಸರಳ ಮಾತುಗಳಲ್ಲಿ ಸ್ಪುಟಗೊಂಡಾಗ ಶ್ರೇಷ್ಠ ಪುರಾಣಕಾವ್ಯವು ಹೊರಹೊಮ್ಮಿ ಸಾಮಾಜಿಕರಿಗೆ ಆನಂದವನ್ನು ಉಂಟುಮಾಡುವುದು ಅವುಗಳ ಉದ್ದೇಶವಾಗಿದೆ.

ಪುರಾಣ ಕಾವ್ಯಗಳು ಕಾಯಕ ತತ್ವವನ್ನು ಮತ್ತು ಅನುಭವ ಅನಿಸಿಕೆಗಳನ್ನು ಪ್ರಾಮಾಣಿಕವಾಗಿ ಆಡುಮಾತಿನಲ್ಲಿ ಹೇಳ ಹೊರಟದ್ದು ಗಮನೀಯವಾದ ಅಂಶವಾಗಿದೆ. ಪುರಾಣಗಳು ಈ ನಿಟ್ಟಿನಲ್ಲಿ ಹೊಸ ಸಂಪ್ರದಾಯವೊಂದಕ್ಕೆ ನಾಂದಿಯಾಗಿವೆ. ಸಾಮಾನ್ಯನ ಬದುಕು, ವ್ಯವಹಾರಗಳು, ನೋವು-ನಲಿವು, ಆಲೋಚನೆಗಳು ಪುರಾಣ ಕಾವ್ಯಗಳಿಗೆ ವಸ್ತುವಾದವು. ಇವು ಜನರಿಗೆ ಸಾಮಾಜಿಕ ಸಂವಹನವಕ್ಕೆ ಪ್ರೇರಕವಾದವು. ಪುರಾಣ ಕಾವ್ಯದ ನಾಯಕನನ್ನು ಹಾಡಿ ಹೊಗಳುವ, ವರ್ಣನೆಗಾಗಿ ವರ್ಣನೆಗಳನ್ನು ತರುವ ವ್ಯಾಕರಣದ ಕಟ್ಟುನಿಟ್ಟಿಗೆ ಒಳಪಡಿಸಿ ಶಬ್ದಾಲಂಕಾರ, ಅರ್ಥಾಲಂಕಾರಗಳನ್ನು, ನವರಸಗಳನ್ನು ಕಡ್ಡಾಯವಾಗಿ ತರುವ ಸಂಪ್ರದಾಯ ಮಾಯವಾಗಿ ಜನ ಬದುಕಬೇಕೆಂದು ಕಾವ್ಯ ರಚನೆಯಾಗ ತೊಡಗಿತು.

ಪುರಾಣ ಕಾವ್ಯ ರಚನೆಕಾರರು ಜನಸಾಮಾನ್ಯರ 'ಭಾಷೆ', 'ಬದುಕ'ನ್ನು ಕಾವ್ಯದ ಭಾಷೆ ಹಾಗೂ ವಸ್ತುವಾಗುವಂತೆ ಮಾಡಿದರು. ಆದರ್ಶಪುರುಷರ ಅನುಭವದ ಅಕ್ಷಯ ಪಾತ್ರೆಯಿಂದ ಮೂಡಿ ಬಂದ ಪುರಾಣಗಳು ಜನಸಾಮಾನ್ಯರ ತನು-ಮನಗಳನ್ನು ಪಾವನ ಮಾಡಿದವು. ಜನಜೀವನದ ವ್ಯಾಪಕ ಸತ್ವವನ್ನು ಒಳಗೊಂಡ ಶರಣರ ನುಡಿಗಳು ಅನುಭಾವಿಯ ಅಂತರಂಗದ ಮೊರೆಯಾಗಿ, ಸಾಧಕನ ಸಿದ್ಧಿಯ ಸೋಪಾನವಾಗಿ, ಜನಜೀವನವನ್ನು ಏರ್ಪಡಿಸುವ ಜ್ಞಾನದ ಕಿರಣಗಳಾಗಿವೆ. ಇದರ ಮೂಲಕ ಪುರಾಣ ಕಾವ್ಯಗಳು ಸಾಮಾಜಿಕವಾಗಿ ಜನಮನದಲ್ಲಿ ನಲಿದಾಡಿದವು.

ಜನಮನದಲ್ಲಿರುವ ಅಂಕುಡೊಂಕುಗಳ ಶುದ್ಧೀಕರಣ ಮಾಡುವುದು ಪುರಾಣಕಾವ್ಯಗಳ ಉದ್ದೇಶವಾಗಿದೆ. ಹಾಗೂ ಭಕ್ತಿಯ ಬೀಜವನ್ನು ಬಿತ್ತಲಿಕ್ಕೆ, ಧರ್ಮ ಬೋಧ ಮಾಡುವುದಕ್ಕೆ ಪುರಾಣಗಳನ್ನು ಬಿಟ್ಟರೆ ಅತ್ಯುತ್ತಮ ಸಾಧನ ಮತ್ತೊಂದಿಲ್ಲ. ಮಠಗಳಲ್ಲಿ ದೇವಾಲಯಗಳಲ್ಲಿ ಪುರಾಣ ಪ್ರವಚನ ನಡೆಸುವುದರ ಮೂಲಕ ಸಮಾಜವನ್ನು ತಿದ್ದುವುದು, ಜನತೆಯನ್ನು ಸನ್ಮಾರ್ಗಕ್ಕೆ ಹಚ್ಚುವುದು, ಧರ್ಮ-ದೈವಗಳ ಬಗ್ಗೆ ಗುರು-ಲಿಂಗ-ಜಂಗಮಗಳ ಬಗ್ಗೆ ಸದ್ಭಾವನೆ ಸದ್ಭಕ್ತಿ ಮೂಡುವಂತೆ ಮಾಡುವುದು ಸಾಧ್ಯವಿದೆ. ಈ ನಿಟ್ಟಿನಲ್ಲಿ ಗದುಗಿನ ಅನೇಕ ಪುರಾಣಗಳು ಕೆಲಸ ಮಾಡುತ್ತಿವೆ. ಹಾಗೂ ಅನೇಕ ಮಠಗಳು ಈ ಪುರಾಣಗಳನ್ನು ಪ್ರವಚನ, ಕೀರ್ತನ, ಉಪನ್ಯಾಸಗಳ ಮೂಲಕ ಜನರಿಗೆ ಮುಟ್ಟಿಸಿದಾಗ ಆಗುವಷ್ಟು ಜನಜಾಗೃತಿ ಪರಿಣಾಮಕಾರಿಯಾಗಿ ಬೇರೆ ಯಾವುದರಿಂದಲೂ ಆಗದೆಂದು ಈ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದಾರೆ.

ಕರ್ನಾಟಕದಲ್ಲಿ ಲಿಂಗಾಯತ ಮಠಗಳು ಒಂದು ರೀತಿಯಲ್ಲಿ ಆ ಸಮಾಜದ ಜೀವನಾಡಿಗಳು. ಸಾಂಸ್ಕೃತಿಕ ಕೇಂದ್ರಗಳೆನ್ನಿಸಿಕೊಂಡಿರುವ ಮಠಗಳಲ್ಲಿ ಭಕ್ತಾದಿಗಳು ಬಂದು ನೆರೆಯುವುದರಿಂದ ಪುರಾಣ ಪ್ರವಚನಾದಿಗಳಿಂದ ಅವರನ್ನು ಸನ್ಮಾರ್ಗಕ್ಕೆ ಹಚ್ಚಲು ಸಾಧ್ಯ ಹಾಗೂ ಅವರಿಗೆ ಧರ್ಮದ ತಿಳುವಳಿಕೆ ಕೊಡಬಹುದು.

ಪುರಾಣ ಕಾವ್ಯಗಳಲ್ಲಿ ಕಥಾನಾಯಕನ ಚಿತ್ರಣವಿದ್ದರೂ ಇದರಲ್ಲಿ ಷಟ್‌ಸ್ಥಲ, ಅಷ್ಟಾವರಣ ಮೊದಲಾದ ತಾತ್ವಿಕ ವಿಷಯಗಳು ಜನಮನದ ಸಂಸ್ಕಾರಕ್ಕಾಗಿ, ಧರ್ಮ-ಅಧರ್ಮ, ನೀತಿ-ಅನೀತಿ ಇವುಗಳ ಬೋಧನೆ ಬರುತ್ತದೆ. ಪುರಾಣಗಳು ಸರಳ ವಿವರಣೆಯಿಂದ ಕ್ಲಿಷ್ಟವಾದೆಡೆಯಲ್ಲಿ ಉಪಕಥೆಗಳಿಂದ ಶ್ರೋತೃಗಳಿಗೆ ಪುರಾಣ ಪರಿಚಯವನ್ನು ಮಾಡಿಕೊಡುವವು. ಪುರಾಣಗಳು ಒಂದು ರೀತಿಯಲ್ಲಿ ಸದ್ಧರ್ಮವನ್ನು ಬೋಧಿಸುತ್ತವೆ. ಜನತೆಯನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುತ್ತವೆ. ಹಾಗೂ ಪುರಾಣಗಳು ಋಜುಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸುವ ಶಕ್ತಿ ಈ ಪುರಾಣ ಕಾವ್ಯಗಳಿಗೆ ಇದೆ. ಹೀಗೆ ಸಾಮಾಜಿಕರನ್ನು ತಿದ್ದುವ ಮೂಲಕ ಸಂವಹನವನ್ನು ಇವು ಏರ್ಪಡಿಸುತ್ತವೆ. ಪುರಾಣಗಳಲ್ಲಿ ಸಾಮಾಜಿಕ ಅಂಶಗಳು ಎದ್ದು ಕಾಣುವುದನ್ನು ಕಾಣಬಹುದಾಗಿದೆ. ಅಂತಹ ಕೆಲ ಪುರಾಣಗಳಲ್ಲಿ ಸಾಮಾಜಿಕ ಸಂವಹನವು ಮೂಡಿ ಬಂದಿದೆ.

ಶ್ರೀಮದ್ ಉಜ್ಜಯಿನಿ ಸದ್ಗುರು ಶ್ರೀ ಸಿದ್ಧಲಿಂಗ ಭಗವತ್ಪಾದರ ಪುರಾಣದಲ್ಲಿ ಪಂ. ರಾಜಗುರು ಗುರುಸ್ವಾಮಿ ಕಲಕೇರಿಯವರು ಭಗವತ್ಪಾದರ ಸಾಮಾಜಿಕ ಕಾರ್ಯಗಳನ್ನು ತೋರಿಸಿಕೊಟ್ಟಿದ್ದಾರೆ. ಶ್ರೀ ಸಿದ್ಧಲಿಂಗರ ಲೀಲೆಗಳ ಜೊತೆಗೆ ಅವರು ಮಾಡಿದ ಅನೇಕ ಸಾಮಾಜಿಕ, ಧಾರ್ಮಿಕ ಕೆಲಸಗಳನ್ನು ಸರಳವಾಗಿ ವಿವರಿಸಿದ್ದಾರೆ. ಶ್ರೀಗಳು ಸಂಚರಿಸಿದ ಕೊಟ್ಟೂರು, ಕಂಪ್ಲಿ, ಹರಪನಹಳ್ಳಿ ಮುಂತಾದ ಸ್ಥಳಗಳಲ್ಲಿ ಪಾಠಶಾಲೆಗಳನ್ನು ನಿರ್ಮಿಸಿ ಅಲ್ಲಿರುವ ಸಂಸ್ಥೆಗಳನ್ನು ಪುನರ್ ಸ್ಥಾಪಿಸಿ, ಪೋಷಕರಾಗಿದ್ದಾರೆ ಮತ್ತು ಪ್ರಸಾದ ನಿಲಯಗಳನ್ನು, ನೀರಿನ ಅರವಟಿಗೆಗಳನ್ನು ಸ್ಥಾಪಿಸಿ, ಜನ ಕಲ್ಯಾಣಕ್ಕಾಗಿ ದುಡಿದಿದ್ದಾರೆ. ಇದನ್ನು ಕವಿಗಳು ತಮ್ಮ ಕಾವ್ಯದಲ್ಲಿ ಹೀಗೆ ಹೇಳುತ್ತಾರೆ.

ಚಾರು ಭೋಜನಶಾಲೆ ಮೇಣ್ ಪಾಕಶಾಲೆಗಳ
ಸಾರ ಹೊತ್ತಗೆ ಕೋಣೆ ಶಿವಪೂಜೆ ಮಂದಿರ ರಿ
ಕಾರ್‍ಡ ಮಂದಿರ ದರ್ಶನದಶಾಲೆ ಮೊಗಶಾಲೆ ಮಾನ್ಯಾಯಕಟ್ಟೆ ಮತ್ತೆ ।
ಗರ್ಭ ಕೋಶಾಗಾರ ಗೋಶಾಲೆ ಕೋಟಮನೆ
ವಿಶ್ರಾಂತಿ ಧಾಮ ಪಂಚಾಚಾರ್ಯ ಮಂಟಪಾ
ಗಾರ ಶಿವಯೋಗಮಂಟಪ ವಿವಿಧ ಕಟ್ಟಡಂಗಳ ರಚನೆ ಗೈಸುತಿಹರು ॥

(ಶ್ರೀ ಸಿದ್ಧಲಿಂಗ ಭಗವತ್ಪಾದ ಪುರಾಣ ಪುಟ : ೧೩೩)

ಹೀಗೆ ಸಾಮಾಜಿಕ ಕೈಂಕರ್ಯಕ್ಕೆ ಕೈಕಟ್ಟಿ ನಿಂತವರು ಶ್ರೀ ಸಿದ್ಧಲಿಂಗ ಯತಿಗಳು. ಶ್ರೀಗಳು ಬಳ್ಳಾರಿಯಲ್ಲಿ ಮುಸ್ಲಿಂ ಹಾಗೂ ಹಿಂದೂ ಸಮುದಾಯಗಳ ಮಧ್ಯೆ ಮೊಹರಂ ಸಂದರ್ಭದಲ್ಲಿ ನಡೆದ ಕಲಹವನ್ನು ಬಗೆಹರಿಸಿ ಅಲ್ಲಿನ ಮೊಹರಂ ಹಬ್ಬಕ್ಕೆ ಭಾವೈಕ್ಯ ಮೂಡಿಸಿದರು. ಇದು ಮತೀಯ ಸಾಮರಸ್ಯದ ಪ್ರತೀಕವಾಗಿ ಈ ಕಾವ್ಯದಲ್ಲಿ ವ್ಯಕ್ತವಾಗಿರುವುದನ್ನು ಕಾಣಬಹುದು.

ಸಂಭಾಪುರದ ಶರಣ ಶ್ರೀಗುರು ಮಲ್ಲಜ್ಜನ ಪುರಾಣದಲ್ಲಿ ಸಾಮಾಜಿಕ ಸಂವಹನದ ಅಂಶಗಳನ್ನು ಕಾಣಬಹುದಾಗಿದೆ. ಈ ಕಾವ್ಯವನ್ನು ಶ್ರೀ ಬ.ಕಾ. ಮನ್ವಾಚಾರ್ಯರು ಅತ್ಯಂತ ಸರಳವಾಗಿ ವಿಶ್ಲೇಷಿಸಿದ್ದಾರೆ. ಅವುಗಳಲ್ಲಿ ಕೆಲ ಅಂಶಗಳನ್ನು ಇಲ್ಲಿ ನೋಡಬಹುದು. ಸಾಮಾಜಿಕ ಸಹಕಾರಕ್ಕೆ ಪುರಾಣಗಳಲ್ಲಿನ ಮೌಲಿಕ ವಿಚಾರಗಳು ವ್ಯಕ್ತವಾಗುವವು. ಅಪರೂಪದ ಸಂಗತಿಗಳಾಗಿ ಅಂತಹವುಗಳಲ್ಲಿ ಮಲ್ಲಜ್ಜನ ಪುರಾಣವು ಒಂದಾಗಿದೆ. ಜನರಿಗೆ ಸಮಾನತೆಯ ಸಂದೇಶವನ್ನು ಸಾರುವುದರಲ್ಲಿ ಮಲ್ಲಜ್ಜರೆ ಒಂದು ಮಾದರಿಯಾಗಿದ್ದಾರೆ. ಗದಗ ತಾಲೂಕಿನ ಸಾಸ್ವಿಹಳ್ಳಿಯಲ್ಲಿ ಹರಿಜನಕೇರಿ ಚಿನ್ನಮ್ಮ ಎಂಬ ದೇವದಾಸಿ ಮಹಿಳೆಯ ಗರ್ಭದಲ್ಲಿ ಜನಿಸಿದವರು ಶ್ರೀ ಮಲ್ಲಜ್ಜರಾಗಿದ್ದಾರೆ. ಆದ್ದರಿಂದ ಮಲ್ಲಜ್ಜರು ಮೇಲು-ಕೀಳೆಂಬ ಭಾವನೆ ಬಿಟ್ಟು ಸಮಾನತೆಯನ್ನು ಸಾಧಿಸಿ ತೋರಿಸಿದ್ದಾರೆ ಮತ್ತು ಸಮುದಾಯದವರೊಂದಿಗೆ ಬಾಳಿ ವೈಜ್ಞಾನಿಕ ಮನೋಭಾವನೆಯ ಅಭಿಪ್ರಾಯವನ್ನು ತಿಳಿಸಿದ್ದಾರೆ. ಕೆಳವರ್ಗದವರನ್ನು ಎತ್ತಿ ಹಿಡಿದವರು ಶ್ರೀಮಲ್ಲಜ್ಜರು. ಅವರ ಬಗ್ಗೆ ಪುರಾಣಕಾವ್ಯದಲ್ಲಿ ಹೀಗೆ ವ್ಯಕ್ತವಾಗಿದೆ –

ಕೀಳು ಕುಲ ಮೇಲುಕುಲವೆಂದು ತಾವು
ತಾಳುತ ಬೇಧವನ್ನು ಮನದಲ್ಲಿ ನಿತ್ಯ
ಬಾಳುತ ಹೊಟ್ಟೆ ಬಟ್ಟೆಗೆ ಸತಿ ಸುತರಿಗೆ ಎಂದು ತಾ ।
ಗೋಳು ನೆನೆದು ಬದುಕಿದವಳು ತಾ
ಹಾಳು ಮಾಡುತ ತಮ್ಮ ಜೀವನವನ್ನು
ತಿಳಿದು ಸತ್ಸಂಗದಲ್ಲಿ ತಾವು ಶ್ರೋತ್ರಿಯ ಬ್ರಹ್ಮನಿಷ್ಠನಾದ ಗುರು ॥

(ಸಂಭಾಪುರದ ಶರಣ ಮಲ್ಲಜ್ಜನ ಪುರಾಣ ಪುಟ : ೨೫)

ಹೀಗೆ ಸಾಮಾಜಿಕ ಸಮಾನತೆಯನ್ನು ತರುವಲ್ಲಿ ಈ ಪುರಾಣವು ಅತ್ಯಂತ ಸಮರ್ಪಕವಾಗಿದೆ.

ವಾಸುದೇವ ಹೂಲಿಯವರು 'ಶ್ರೀ ಬ್ರಹ್ಮಾನಂದ ಚರಿತಂ ಪುರಾಣ'ದಲ್ಲಿ ಸಾಮಾಜಿಕ ಸಮಾನತೆಯನ್ನು ಬಿಂಬಿಸುವ ಅಂಶಗಳನ್ನು ಸುಂದರವಾಗಿ ನಿರೂಪಿಸಿದ್ದಾರೆ. ಶ್ರೀ ಬ್ರಹ್ಮಾನಂದರು ಮುಖ್ಯವಾಗಿ ದಲಿತರನ್ನು ತನ್ನವರೆಂದು ಅಪ್ಪಿಕೊಂಡು ದಲಿತರಲ್ಲಿಯೇ ದೇವರನ್ನು ಕಂಡವರಾಗಿದ್ದಾರೆ. ಹಸಿದವರಿಗೆ ಅನ್ನ ಹಾಗೂ ವಸ್ತ್ರವನ್ನು ನೀಡಿ ಸಾಮಾಜಿಕ ಕಳಕಳಿಯನ್ನು ಮೆರೆದಿದ್ದಾರೆ. ಇದನ್ನು ವಾಸುದೇವ ಹೂಲಿಯವರು ಹೀಗೆ ವರ್ಣಿಸುತ್ತಾರೆ.

ತೊಟ್ಟು ಕೊಳ್ಳಲು ಅಂಗಿ ಹೊದೆಯಲು ।
ಕೊಟ್ಟರೈ ಕಂಬಳಿಯ ಮೈಮನ ।
ಮುಟ್ಟಿ ಮೈದಡವುತ್ತ ಸಾಂತ್ವನ ಪೇಳಿ ಹರಿಸಿದರು ।

ಬೆಟ್ಟದಂತಹ ದುಃಖಬಂದರು ।

ನೆಟ್ಟನೆ ಶ್ರೀರಾಮನಾಮವ ।

ದಿಟ್ಟತನದಲಿ ನುಡಿಯಿರೆನ್ನುತ ಪೇಳ್ದ ಗುರುನಾಥ ॥

(ಬ್ರಹ್ಮಾನಂದ ಚರಿತಂ ಪುಟ : ೧೪೫)

ಎಂದು ಮೂಲಭೂತವಾದ ಅವಶ್ಯಕತೆಗಳನ್ನು ನೀಡಿದವರು ಎಂಬಲ್ಲಿ ಅಸಮಾನತೆಯನ್ನು ಅಳಿಸಿ ಸಮಾನತೆ ಸ್ಥಾಪಿಸಿದ್ದನ್ನು ಕಾಣುತ್ತೇವೆ. ಇದೇ ರೀತಿ ವಿಶ್ವಾರಾಧ್ಯರ ಪುರಾಣದಲ್ಲಿ ಕೂಡಾ ಸಾಮಾಜಿಕ ಸಮಾನತೆಯನ್ನು ಬಿಂಬಿಸುವ ಅಂಶವನ್ನು ಈ ಕೆಳಗಿನ ಪದ್ಯವು ತಿಳಿಸುತ್ತದೆ.

ಅಲ್ಲಮಲ್ಲಾ ರಾಮ್ ರಹೀಮರು

ಶೂಲಿ ಶಿವರೂಹಿಗಳು ಭೇದವ

ದಿಲ್ಲ ಮುಸ್ಲಿಂ ಹಿಂದೂ ಭಾಯೀ ಭಾಯಿಯೆಂದೊರೆವಂ ॥

(ಶ್ರೀ ವಿಶ್ವಾರಾಧ್ಯ ಲೀಲಾ ವಿಳಾಸ ಪುರಾಣ, ಪುಟ : ೧೬೨)

ಎಂದು ಭಾವೈಕ್ಯತೆಯನ್ನು ತೋರಿದವರು ಶ್ರೀ ಅಬ್ಬೆ ತುಮಕೂರಿನ ವಿಶ್ವಾರಾಧ್ಯರು.

◆◆◆

ಅಧ್ಯಾಯ–೫

ಸಮೀಕ್ಷೆ – ಸಮಾರೋಪ

೫

ಸಮೀಕ್ಷೆ – ಸಮಾರೋಪ

'ಗದಗ ಜಿಲ್ಲಾ ವ್ಯಾಪ್ತಿಯ ಪುರಾಣ ಕಾವ್ಯ'ಗಳು ೨೦ನೆಯ ಶತಮಾನದಲ್ಲಿ ಬೆಳೆದು ಬಂದ ಪುರಾಣ ಕಾವ್ಯ ಪರಂಪರೆಗೆ ಅಪೂರ್ವ ಕೊಡುಗೆ ಎನಿಸಿವೆ. ಬಹುಪಾಲು ಮಠದ ಸ್ವಾಮಿಗಳ ಚರಿತ್ರೆಯಾಗಿರುವ ಆ ಕಾವ್ಯಗಳ ವಸ್ತು ಸಮಾಜದ ಸ್ವಾಸ್ಥ್ಯವಾಗಿದ್ದು, ಸಾಮಾಜಿಕ ಜಾಗೃತಿ ಸ್ವಾಮಿಗಳ ಪರಮ ಗುರಿಯಾಗಿತ್ತೆಂದು ತಿಳಿದು ಬರುವದು. ಹಿಂದಿನ ಶರಣರ ಜೀವನ, ತಣತ್ವ ಸಾಧನೆಯ ನಿರೂಪಣೆಯು ಒಂದು ಘಟ್ಟ ಮುಗಿದಂತೆ; ಸಮಕಾಲೀನ ಶರಣರ ಜೀವನ ಲೀಲೆ–ಸಾಧನೆಗಳನ್ನು ನಿರೂಪಿಸುವದು ತೋಂಟದ ಸಿದ್ಧಲಿಂಗ ಯತಿಗಳ ಶಿಷ್ಯ ಪರಂಪರೆಯಿಂದ ಸಾಧ್ಯವಾಯಿತು. ಆಧುನಿಕ ಪುರಾಣ ಕಾವ್ಯಗಳಿಗೆ ಒಂದು ಮಾರ್ಗ ಅಲ್ಲಿಂದಲೆ ಒದಗಿ ಬಂದಿತು. ೨೦ನೆಯ ಶತಮಾನದ ಆರಂಭದಲ್ಲಿ ದ್ಯಾಂಪೂರ ಚನ್ನಕವಿಗಳಿಂದ ಈ ಪುರಾಣ ಕಾವ್ಯಗಳಿಗೆ ಮತ್ತೊಂದು ಚಾಲನೆ ದೊರೆಯಿತು. ಅವರು ಈ ಪುರಾಣ ಕಾವ್ಯಗಳ ರಚನೆಯ ಹಿನ್ನೆಲೆಯನ್ನು ವಿವರಿಸುತ್ತ – 'ಧರ್ಮ ಪ್ರದೀಪನಗೊಳಿಸಿ ಭಾರತೀಯರಲ್ಲಿ ನವ ಚೈತನ್ಯವನ್ನುಂಟುಮಾಡಬೇಕಾದರೆ ಆ ಮಹಾತ್ಮರಲ್ಲಿದ್ದ ಅಸಾಧಾರಣವಾದ ನೈತಿಕ, ಧಾರ್ಮಿಕ, ಪಾರಮಾರ್ಥಿಕ ಶಕ್ತಿಗಳೇ ಕಾರಣ, ಈ ದಿವ್ಯ ಶಕ್ತಿಗಳು ತಮ್ಮ ಕಡೆಗೆ ಜನರ ಮನವನ್ನು ಸುಲಭವಾಗಿ ಎಳೆದುಕೊಳ್ಳಬಲ್ಲವು ತಾವು ನಿತ್ಯ ಸುಖಿಗಳಲ್ಲದಿದ್ದರೂ ನೀತಿ ಧರ್ಮ ಜ್ಞಾನಗಳನ್ನು ಜನತೆಯಲ್ಲಿ ಬೆಳೆಸುವದೇ ಸ್ವಕರ್ತವ್ಯವೆಂದು ನಂಬಿ ಅವಿಶ್ರಾಂತ ಶ್ರಮಗೊಳ್ಳುವದು ಮಹಾತ್ಮರ ಸ್ವಭಾವವು' (ಶ್ರೀ ಶಿವಶರಣ ವೀರೇಶ್ವರ ಪುರಾಣ – ದ್ಯಾಂಪೂರ ಚನ್ನಕವಿ ಶ್ರೀ ಮಹಾಂತ ಶಿವಯೋಗಿಗಳಿಂದ ಪ್ರಕಟಿತ ಮುದ್ರಣ ವರ್ಷ ಕ್ರಿ.ಶ. ೧೯೩೩) ಎಂದು ಹೇಳಿರುವದು ಪುರಾಣ ಕಾವ್ಯಗಳಲ್ಲಿಯ ಸ್ವಾಮಿಗಳ ಜೀವನ ಸಾಧನೆಗಳ ಬಗೆಗೆ ವ್ಯಾಖ್ಯಾನ ಬರೆದಂತಿದೆ. ಅವರು ಚರಿತ್ರೆಗಳಲ್ಲಿ ವಾಸ್ತವ ಅಂಶಗಳಿಗೆ ಮಹತ್ವಕೊಟ್ಟರು. ಅದಕ್ಕೆ ಮಾದರಿಯಾಗಿ ನಾಲತ್ತವಾಡ ವೀರೇಶ ಶರಣರ ಪುರಾಣವೇ ಮಾದರಿಯಾಗಿದೆ. ಇವರು ಶರಣ ತತ್ವಗಳನ್ನೆ ಬಳಿವಿಡಿದವರು.

ಶರಣ, ಸಂತ, ಮಹಾತ್ಮರು ಮನುಕುಲಕ್ಕೆ ಮಹಾದೀಪವಾಗಿ ತಮ್ಮನ್ನು ಸುಟ್ಟುಕೊಂಡು ಅನ್ಯರಿಗೆ ಉದ್ಧಾರದ ಬೆಳಕನ್ನು ನೀಡುವವರು. ಸಂತರೊಬ್ಬರ ಜೀವನ ಚರಿತ್ರೆಯ ಪಠಣ

ಮತ್ತು ಪ್ರವಚನಗಳು ನಮ್ಮ ಕಲುಷಿತ ಮನಸ್ಸಿಗೆ ಶಾಂತಿ ಸಮಾಧಾನಗಳ ನಿತ್ಯಾಮೃತವನ್ನು ತುಂಬಬಲ್ಲವು' (ಸಾವಳಗಿ ಶ್ರೀ ಶಿವಲಿಂಗೇಶ್ವರ ಪುರಾಣ – ಶಿವಪುರದ ಸಿದ್ಧಲಿಂಗ ಕವಿ ಸಂ : ಲಿಂ. ಶ್ರೀ ಮನ್ನಿರಂಜನ ಸಿದ್ಧರಾಮ ಶಿವಯೋಗಿಗಳು ಪ್ರಕಟಣೆ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪ್ರವರ್ಷ : ೨೦೦೩ ಮುನ್ನುಡಿ ಪುಟ – III) ಇಲ್ಲಿ ಚಿತ್ರಿತಗೊಂಡ ಎಲ್ಲ ಮಹಾತ್ಮರ ಚರಿತ್ರೆಯು ಮನುಕುಲವನ್ನು ಸನ್ಮಾರ್ಗಕ್ಕೆ ಒಯ್ಯುವವರು. ಒಳಗುರಿಯ ಆವಿಗೆಯಂತೆ ನೋವನ್ನು ನುಂಗಿ ನಗೆಯನ್ನೆ ಚೆಲ್ಲಿದ್ದಾರೆ. ಎಲ್ಲ ಪುರಾಣ ಕಾವ್ಯಗಳ ಆಶಯವು ಸಮಾಜದ ಹಿತ, ಸರ್ವ ಜನಾಂಗವು ಅರಿವಿನಿಂದ ಕೂಡಿದ ಪರದ ದಾರಿಗೆ ಸೇರುವದೇ ಆಗಿದೆ.

ಗದಗ ಜಿಲ್ಲೆಯಲ್ಲಿ ಪುರಾಣ ಕಾವ್ಯಗಳ ಸೃಷ್ಟಿಯು ೨೦ನೆಯ ಶತಮಾನದ ಉತ್ತರಾರ್ಧದಲ್ಲಿ ಪ್ರಾರಂಭಗೊಂಡು ಇನ್ನುವರೆಗೆ ಮುಂದುವರೆದಿದೆ. ಪಂ. ಪುಟ್ಟರಾಜ ಕವಿಗವಾಯಿಗಳೇ ಪುರಾಣ ಕಾವ್ಯ ಕರ್ತೃಗಳಲ್ಲಿ ಆದ್ಯರು ಮತ್ತು ಆದರ್ಶ ಪ್ರಾಯರು. ಅವರು ರಚಿಸಿದ ಸಂಖ್ಯೆಯು ದೊಡ್ಡದೆ ಸತ್ವವು ಹಿರಿದು. ಅವರ ಮಾರ್ಗದಲ್ಲಿ ಪಂ. ರಾಜಗುರು ಗುರು ಸ್ವಾಮಿಯವರು ಮತ್ತಿತರರು ನಡೆದರು. ಒಟ್ಟು ೧೨ ಜನ ಪುರಾಣ ಕವಿಗಳು ೬೮ ಕೃತಿಗಳನ್ನು (೨೦೧೦ರವರೆಗೆ) ರಚಿಸಿದರೆಂದು ತಿಳಿದು ಬರುವದು. ಎಲ್ಲರೂ ಮುಖ್ಯವಾಗಿ ಮತ ಬೋಧೆಯನ್ನೇ ಮುಖ್ಯವಾಗಿಸಿಕೊಂಡ ಸಾತ್ವಿಕ ಬದುಕನ್ನು ಬದುಕಿದ ಮಹಾತ್ಮರ ಚರಿತ್ರೆಗಳನ್ನೇ ನಿರೂಪಿಸಿದ್ದಾರೆ. ಇವರ ಕಾವ್ಯದಲ್ಲಿ ಚಿತ್ರಿತಗೊಂಡ 'ಪುರಾಣದ ಕೇಂದ್ರ ವಸ್ತು ದಂತಕತೆಯಾಗಿ ಹೋದ ನಿನ್ನೆಯಾದರೂ ಪುರಾಣದ ಒಳತಿರುಳಿನ ವಾಂಛೆ ದ್ರವಿಸುವ ಮಾನವ ಅಂತಃಕರಣದ್ದು ಪುರಾಣದ ಆಶಯ ಸಕಲ ಜೀವ ಜಾಲಗಳ ಸಾರೋದ್ಧಾರ' (ಅದೇ ಪುಟ – ಪ್ರಸ್ತಾವನೆ ೪ ಪುಟ) ಎಂಬ ಡಾ. ವಿದ್ಯಾಶಂಕರ ಮಾತನ್ನು ಈ ಸಂದರ್ಭದಲ್ಲಿ ನೆನೆಯಬಹುದು. ಮತ ಧರ್ಮದ ವಿಚಾರ ವಿವರಣೆಗಳಿದ್ದರು ಸ್ವಾಮಿಗಳು ಮುಖ್ಯವಾಗಿ ಸಮಾಜದ ಕಡೆಗೆ ಗಮನ ನೀಡಿದ್ದು ಇಲ್ಲಿ ಪ್ರಮುಖ ವಿಷಯವಾಗಿದೆ.

ಪುರಾಣ ಕಾವ್ಯಗಳು ದೇಶಿ ಛಂದೋ ರೂಪವಾಗಿರುವ ಷಟ್ಪದಿಯಲ್ಲಿ ಮೂಡಿಬಂದಿರುವವು ಆಧ್ಯಾತ್ಮಿಕ ಪರಿಸರವು ಕವಿ ಮನದಲ್ಲಿ ಕಾವ್ಯರಚನಾ ಕಾರಣವನ್ನುಂಟುಮಾಡಿದೆ. ಕನ್ನಡದಲ್ಲಿ ಮಾತ್ರ ಬೆಳೆದ ದ್ರಾವಿಡ ಛಂದೋ ರೂಪವೇ ಷಟ್ಪದಿ. ಅದನ್ನು ಕರ್ನಾಟಕ ವಿಷಯ ಜಾತಿಯಲ್ಲಿ ಪ್ರಸಿದ್ಧ ಛಾಂದಸಿಗ ನಾಗವರ್ಮನು ಎತ್ತಿ ಹೇಳಿದ್ದಾನೆ. (ಛಂದೋಂಬುಧಿ – ನಾಗವರ್ಮ – ೧ ಸಂಪಾದಕರು : ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಛಂದಸ್ಸಿನ ಚರಿತ್ರೆ ಪ್ರಸಾರಾಂಗ, ಮೈಸೂರು. ಪ್ರಕಾಶನ : ವಿಶ್ವವಿದ್ಯಾಲಯ, ಮೈಸೂರು. ಪ್ರ.ವರ್ಷ : ೧೯೮೦) ಮೊದಲು ದೇಶಿಯಾದ ಅದು ನಡುಗನ್ನಡದಲ್ಲಿ ಶಿಷ್ಟ ಕಾವ್ಯ ಮಾರ್ಗವಾಯಿತು. ಸಾವಿರ ವರ್ಷಗಳಿಂದ ನಿರಂತರವಾಗಿ ಉಳಿದು ಬಂದ ಛಂದೋರೂಪಗಳಲ್ಲಿ ಪ್ರಮುಖವಾದುದು ಷಟ್ಪದಿಯಾಗಿದೆ. ಅದರಲ್ಲಿ ಲಯಬದ್ಧವಾದ (೩೪೪ ಮಾತ್ರಾಗಣ) ಭಾಮಿನಿ ಷಟ್ಪದಿಯಲ್ಲಿ ಹೆಚ್ಚು ಸಂಖ್ಯೆಯ ಕೃತಿಗಳು

ರಚನೆಗೊಂಡಿವೆ. ಶಿಷ್ಟ ಮಾರ್ಗ – ಹಳಗನ್ನಡ ಭೂಯಿಷ್ಠವಾದ ರೂಪದಲ್ಲಿ ವಾರ್ದಕವು ಅಲ್ಲಲ್ಲಿ ಕಾವ್ಯಕ್ಕೆ ಇಂಬು ನೀಡಿದೆ. ಪುರಾಣ ಕಾವ್ಯಗಳನ್ನು ಉಳಿದು ಬೇರೆ ವಸ್ತುವನ್ನುಳ್ಳ ಭಾಮಿನಿಯನ್ನು ಬರೆದವರಲ್ಲಿ ಶ್ರೀ ಹುಯಿಲಗೊಳ ನಾರಾಯಣರಾಯರು, ಶ್ರೀ ರಾಮಣ್ಣ ಬ್ಯಾಟಿಯವರು ಪ್ರಮುಖರಾಗಿದ್ದಾರೆ. ಚಾಮರಸ – ಕುಮಾರವ್ಯಾಸರ – ಭಾಮಿನಿ ಷಟ್ಪದಿಯ ಮಾರ್ಗವು ಛಂದೋರೂಪದಲ್ಲಿ ಇನ್ನು ಜಾಗೃತವಾಗಿದೆ. ಕನ್ನಡದ ಪ್ರಾಚೀನ ಕಾವ್ಯ ಪರಂಪರೆಯನ್ನು ಜೀವಂತವಾಗಿಟ್ಟವರು ಈ ಪುರಾಣ ಕವಿಗಳು. ಈ ಷಟ್ಪದಿ ಕಾವ್ಯ ರೂಪವು ಉಳಿದಿರುವದು ಕನ್ನಡ ಭಾಷೆಯು ಶಾಸ್ತ್ರೀಯ ಅಭಿಜಾತ ಭಾಷೆ (Classic Language) ಆಗುವದಕ್ಕೆ ಒಂದು ಪ್ರಮುಖ ಆಧಾರವಾಗಿರುವದನ್ನು ನಾವು ಪ್ರಮುಖವಾಗಿ ಗಮನಿಸಬೇಕು.

ಪುರಾಣ ಕಾವ್ಯಗಳು 'ಕಾವ್ಯಕ್ಕಾಗಿ ಕಾವ್ಯ'ವೆಂದು ನಿರ್ಮಾಣಗೊಂಡವುಗಳಲ್ಲಿ ಅವುಗಳ ಮುಖ್ಯ ಉದ್ದೇಶವು ಧರ್ಮ ಮತ್ತು ಸೇವೆಯ ನಿರೂಪಣೆಯಾಗಿದೆ. ಧರ್ಮ ವಿವೇಚನೆಗೆ ಒಂದು ಲಯ ಮಾಧ್ಯಮವಾಗಿ ಕಾವ್ಯ. ಬರುವದಿಲ್ಲ. 'ಗಮಕ' ಗಾಯನಕ್ಕೆ ಭಾಮಿನಿಯೇ ವಾಹಿನಿಯಾಗಿದೆ. ಇದರಿಂದ ಸಮೂಹ ಸಂವಹನವುಂಟಾಗಿ ತತ್ವಗಳು ಪಸರಣಗೊಳ್ಳುವವು. ಅದನ್ನೇ ಒಂದು ಪ್ರದರ್ಶನ ಕಲೆಯ ರೂಪವಾದ ಪ್ರವಚನಗಳಲ್ಲಿ ಕಾವ್ಯ ಪಠಣ ವಾಚನ ವಿಶ್ಲೇಷಣಗೊಳ್ಳುವದು ಸಮುದಾಯದ ಮಧ್ಯದಲ್ಲಿ ಇದಕ್ಕೆ ಪೂರಕವಾಗಿ ಪುರಾಣ ಕವಿಗಳಲ್ಲಿ ಬಹಳಷ್ಟು ಜನಕ್ಕೆ ಸಂಗೀತ ಜ್ಞಾನ ವಿರುವದು ಕಾವ್ಯಾನುಸಂಧಾನ – ಸಂಹವನದಲ್ಲಿ ವಿಶೇಷ ಕಾರ್ಯ ಮಾಡಿದೆ. ಪಂ. ಪುಟ್ಟರಾಜ ಕವಿಗಳು, ಪಂ. ರಾಜಗುರು ಗುರುಸ್ವಾಮಿ, ಮುಂತಾದವರಲ್ಲಿ ಎಲ್ಲ ಕಾಲಕ್ಕೂ ನಿಲ್ಲ ಬಲ್ಲ ಸಂಗೀತವಿದೆ. ಈ ಪರಂಪರೆಯ ಕವಿಗಳಲ್ಲಿ ಲಯಾತ್ಮಕತೆ ನಾದ ಮಮತೆಯಿಂದ ಜೀವಂತವಾಗಿರುವದು.

ಪುರಾಣ ಕವಿಗಳಲ್ಲಿ ಹಣ ಗುರಿಯಾಗಿಟ್ಟುಕೊಂಡು ಕಾವ್ಯರಚನೆ ವಿರಳ. ಭಕ್ತಿಯಿಂದ ತಾವೇ ಸ್ವಯಂ ಬರೆಯುವದು ಮತ್ತು ಭಕ್ತರು ಹೇಳಿದ್ದರಿಂದ, ಭಕ್ತಿಭಾವತಾಳಿ ಬರೆಯುವದು ಈ ಎರಡು ರೀತಿಯ ವಿಧಾನಗಳಿವೆ. ಎರಡರ ಗುರಿ ಜನತೆಯನ್ನು ಮುಟ್ಟುವದಾಗಿದೆ. ಜನತೆಯ 'ಅರಿವಿನ ಹೃದಯ ಕಣ್ದೆರೆಯಬೇಕೆಂಬ ಭಾವ' ಮುಖ್ಯವಾಗಿರುವದು. ಇದು ಶರಣ ಕಾವ್ಯ ಸಂಪ್ರದಾಯವು ಹೌದು. ಹರಿಹರನಿಂದ ಇದು 'ಉದಿತ ಮಾರ್ಗ'ವೆಂದು ಪ್ರಚಲಿತಗೊಂಡಿತು. ಶರಣ ತತ್ವಗಳು ಬದುಕಿನೊಂದಿಗೆ ಕಾವ್ಯದಲ್ಲಿ ಮೂಡಿದವು ಇದು ಇಂದಿನ ಪುರಾಣ ಕಾವ್ಯಗಳಲ್ಲಿ ಬಹುಪಾಲು ತಾತ್ವಿಕ ಮತ್ತು ಜೀವನ ಲೀಲೆಗಳ ವಿವೇಚನೆ ಎನಿಸಿವೆ.

ಪುರಾಣ ಕಾವ್ಯಗಳಲ್ಲಿ ಬಹುಪಾಲು ವೀರಶೈವ ಲಿಂಗಾಯತ ಸ್ವಾಮಿಗಳ ಚರಿತ್ರೆಗಳಾಗಿವೆ. ಆ ಮೂಲಕವಾಗಿ ೧೨ನೆಯ ಶತಮಾನದಿಂದ ಹರಿದು ಬಂದ 'ಶರಣ ಸಂಸ್ಕೃತಿಯನ್ನು ಎತ್ತಿ ಹೇಳುವ ಪಥವೇ ಪುರಾಣ ಕಾವ್ಯಗಳಲ್ಲಿ ಬಂದಿವೆ. ಅದರಲ್ಲಿ ಕಲಬುರ್ಗಿ ಶರಣ ಬಸವೇಶ್ವರ

ಮೊದಲಾದ ಆಧುನಿಕ ಕಾಲ ಘಟ್ಟದ ಶರಣರವರೆಗೆ ಆ ಪರಂಪರೆಯು ತಾತ್ವಿಕವಾಗಿ ಮೌಲ್ಯ ವಿವೇಚನಾತ್ಮಕವಾಗಿ ಹರಿದಿದೆ. ಶರಣೆ, ಅಕ್ಕಮಹಾದೇವಿಯ ಚರಿತ್ರೆಯು ಉತ್ತಮ ಕಾವ್ಯವಾಗಿ ಮೂಡಿದೆ. ಈ ಎಲ್ಲ ಶರಣ ಪರಂಪರೆಯ ಹಿಂದೆ ಭಕ್ತಿ ಭಾವವೇ ಮೂಲ ಭಾವ ದ್ರವ್ಯವಾಗಿದೆ. ಅದರೊಂದಿಗೆ ಶರಣರು ತಂದ ಕಾಯಕ ದಾಸೋಹಗಳ ವಿವೇಚನೆಯು ಶ್ರಮ ಸಂಸ್ಕೃತಿ ಮತ್ತು ಸಮ ಸಂಸ್ಕೃತಿಯನ್ನು ಎತ್ತಿ ಹೇಳುವದು. ಪುರಾಣ ಕಾವ್ಯಗಳ ಮುಖ್ಯಗುರಿಯಾಗಿದೆ. ಶರಣರ ಜೀವನ ಮೌಲ್ಯ – ತತ್ವ ಸಿದ್ಧಾಂತಗಳೆನಿಸಿದ, ಸತ್ಯ, ನ್ಯಾಯ, ದಯೆ, ನಿಸ್ವಾರ್ಥ, ಶಾಂತಿ ಮೊದಲಾದವುಗಳನ್ನು ಶರಣ ಸಂಸ್ಕೃತಿಯ ಸ್ವಾಮಿಗಳು ಅಳವಡಿಸಿಕೊಂಡರು. ಅದನ್ನು ಎತ್ತಿ ಹೇಳುವದು ಕಾವ್ಯಗಳ ಗುರಿಯಾಯಿತು. ಇದರೊಂದಿಗೆ ವೀರಶೈವ ದರ್ಶನ ತತ್ವಜ್ಞಾನಗಳನ್ನು ಹೇಳುವ ಅಂದರೆ ಮುಖ್ಯವಾಗಿ ಅಷ್ಟಾವರಣ ಷಟ್‌ಸ್ಥಲ ಪಂಚಾಚಾರಗಳನ್ನು ಕಾವ್ಯದಲ್ಲಿ ನಿಯವೆಂಬಂತೆ ಈ ಪದ್ಧತಿಯಲ್ಲಿ ಕಾಣಬಹುದು. ಇವುಗಳ ವಿವೇಚನೆಯೊಂದಿಗೆ ಶರಣರ ಅನೇಕ ಘಟನೆ, ಕತೆಗಳನ್ನು ಹೇಳುವದು ಇಲ್ಲಿಯ ವಿಧಾನವಾಗಿದೆ.

ಅದ್ವೈತ ಸಂಪ್ರದಾಯವನ್ನು ಪ್ರಧಾನವಾಗಿರಿಸಿಕೊಂಡು ಶರಣ ಸಂಸ್ಕೃತಿಯನ್ನು ಹೇಳುವ ಸಿದ್ಧಾರೂಢ, ಶಿವಾನಂದ ಸಂಪ್ರದಾಯಗಳು ಇಲ್ಲಿ ಕಂಡಿವೆ. ಅವಧೂತ ಸಂಪ್ರದಾಯದ ವಿವೇಚನೆಯು ಇವುಗಳೊಂದಿಗೆ ಕಂಡಿದೆ. ಇದಲ್ಲದೆ ಸ್ವಾಮಿಗಳ ಚರಿತ್ರೆ ಹೇಳುವಲ್ಲಿ ಬೇರೆ ಬೇರೆ ಮತ ಸಂಪ್ರದಾಯಗಳ ನಿರೂಪಣೆ ಇಲ್ಲಿದೆ. ಶೈವ ಭಕ್ತಿಯನ್ನು ಒಳಗೊಳ್ಳುವ ತಮಿಳು ನಾಡಿನ ಪುರಾತನ ನಾಯನಾರ್‌ರ ಭಕ್ತಿಯನ್ನು ಆಂಧ್ರ ಮೂಲದ ಹೇಮರಡ್ಡಿ ಮಲ್ಲಮ್ಮನ ಚರಿತ್ರೆಯ ನಿರೂಪಣೆಯಿಂದ ಅದ್ಭುತವಾಗಿ ಭಕ್ತಿ – ಅನುಭಾವಗಳ ನಿರೂಪಣೆಯು ಇಲ್ಲಿ ಕಂಡಿದೆ.

ಸ್ವಾಮಿಗಳ ಸೇವಾ ಸಂಸ್ಕೃತಿಯು ಇಲ್ಲಿ ಪ್ರಧಾನ ತತ್ವ ವಿವೇಚನೆಯಾಗಿದೆ. ವೀರಶೈವ ಲಿಂಗಾಯತ ಸ್ವಾಮಿಗಳು ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಚಿತ್ರಣಗೊಂಡಿದ್ದಾರೆ. ಇವರೆಲ್ಲರು ಆಶೀರ್ವಾದದ, ಕಾಣಿಕೆ ಬಯಸುವ, ಫಲಭಾಗ್ಯ ನೀಡುವವರಲ್ಲ . ನಾಲತ್ತವಾಡ ವೀರೇಶ ಶರಣರು, ಕಲಬುರ್ಗಿ ಶರಣ ಬಸವೇಶ್ವರರೇ ಮೊದಲಾದವರು ಕೃಷಿ ಸಂಸ್ಕೃತಿಯಲ್ಲಿ ಅರಳಿದವರು. ಸತ್ಯ ಶುದ್ಧ ಕಾಯಕದಿಂದ ಬದುಕಿದವರು. ಯಾವುದೇ ಸ್ವಾಮಿಗಳಿರಲಿ ಅವರು ಕಾಯಕಕ್ಕೆ ಮಹತ್ವ ಕೊಟ್ಟವರು. ಸಮಾಜದಲ್ಲಿ ಶಿಕ್ಷಕರಾಗಿ ಮತ್ತು ಬೇರೆ ಬೇರೆ ವೃತ್ತಿ ಸೇವೆಯಲ್ಲಿದ್ದು , ವೃತ್ತಿ ಧರ್ಮವನ್ನು ಅದರ ಮೇಲೆ ಪ್ರೀತಿ ಅಭಿಮಾನಗಳನ್ನು ತೋರಿ ಅದನ್ನೇ ಬೇರೆಯವರಿಗೆ ಅನುಸರಿಸಲು ಸೂಚಿಸಿದರು. ಶೈವ ಮಠಗಳಿಗೆ ಶರಣ ದೀಕ್ಷೆ ನೀಡಿರುವದನ್ನು ಇಲ್ಲಿ ಕಾಣಬಹುದು. ಸ್ವಾಮಿಗಳ ವ್ಯಕ್ತಿತ್ವದ ಘನತೆ ಇರುವದು ಅವರ 'ಜನಮುಖಿ' ಪ್ರಜ್ಞೆಯ ಅನುಷ್ಠಾನದಲ್ಲಿ ಅವರು ಒಮ್ಮೆಲೆ 'ದೇವಮಾನವ'ರಾಗಲಿಲ್ಲ ಆಗಲು ಬಯಸಲೂ ಇಲ್ಲ. ಅವರ ಜೀವನ ಅಡೆತಡೆ ಕಷ್ಟ ಕೋಟಲೆಗಳಿಂದಲೆ ಆರಂಭಗೊಳ್ಳುವದನ್ನು ಕಾಣಬಹುದು

ಸಮಾಜದ ಜನರೆ 'ಖಳ'ರಂತೆ ವರ್ತಿಸಿದರೂ, ಉಪನಿಷತ್ತಿನ – 'ಓಂ ಶಾಂತಿಃ ಶಾಂತಿಃ ಶಾಂತಿಃ' ಎಂಬ ಮಂತ್ರದ ಸಾಕಾರವಾಗಿ ಶಾಂತಿ ಸಹನೆ ಸಮಾಧಾನಗಳನ್ನು ಹೊಂದಿದವರಾಗಿ ಉದಾತ್ತತೆಯನ್ನು ತೋರಿದ್ದಾರೆ. ಪ್ರಾಣಾಪಾಯಗಳನ್ನು ಎದುರಿಸಿ ಸಮುದಾಯಕ್ಕೆ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ. ವಿಶ್ವಮಾನವೀಯ ತತ್ವಗಳಾದ ಕರುಣೆ, ಭ್ರಾತೃತ್ವ, ಸಮತೆ, ಸೈರಣ, ಸಹನೆ, ಸತ್ಯ, ನ್ಯಾಯಗಳನ್ನು ಹೊಂದಿ ನಡೆದು ಸಮಾಜವನ್ನು ನಡೆಯಿಸಿದ್ದಾರೆ.

ಪುರಾಣ ಕಾವ್ಯಗಳು ಸೃಷ್ಟಿಗೊಂಡುದು ಓದು ಕಾವ್ಯವಾಗಿ ಅಲ್ಲಿ ಅವು ಪ್ರವಚನ ಕಾವ್ಯ ಎನಿಸಿವೆ. ಇವು ಪಂಡಿತರನ್ನು ಗಮನದಲ್ಲಿರಿಸಿ ಕಾವ್ಯ ಕೇವಲ ಕೆಲವರ ಸೊತ್ತಾಗಿರದೆ, ಬಹುಜನರನ್ನು ಗುರಿಯಾಗಿಟ್ಟು ಸಾಮಾನ್ಯರ ಸಾಹಿತ್ಯವೆನಿಸಿವೆ. ಇವುಗಳು ಪ್ರವಚನ ರೂಪದಲ್ಲಿ ಶ್ರವ್ಯ ಕಾವ್ಯವಾಗಿ ಬಂದ ಅರ್ಥವನ್ನು ದೃಶ್ಯ ಮಾಧ್ಯಮದಂತೆ ನೀಡುವವು. ಈ ಕಾವ್ಯಗಳು ಜನತೆಯ ಮನವನ್ನು ನೇರ್ಪುಗೊಳಿಸಲು ಮೂಡಿಬಂದಿವೆ. ಜನತೆಯ ಹಿತವೇ ಇಲ್ಲಿ ಪ್ರಧಾನ ಅಂಶವಾಗಿದೆ. ಜನತೆಯೊಂದಿಗೆ ಒಡವೆರೆದು ಒಂದಾಗಿ ಬಾಳಿದ ಸ್ವಾಮಿಗಳು ಸ್ವಾರ್ಥ ಸಾಧನೆಯ ಏಕಾಂತ–ಏಕಾಂಗಿಯಾಗಿರುವ ಬಯಕೆ ಇಲ್ಲದವರು. ಅವರಿಗೆ ಸಮುದಾಯವೆ ಮಹಾಮನೆ. ಅವರಿಗೆ ಮಠವು ಸಮುದಾಯದ ಮುಖ್ಯ ಕೇಂದ್ರವಾಗಿರುವದು ಈ ಮಠವೇ ಪ್ರವಚನದ ನೆಲೆ ಎನಿಸುವದು. ಪ್ರವಚನವು ಹಳ್ಳಿಯ ಅಥವಾ ನಗರದ ಜನರನ್ನು ಆಧ್ಯಾತ್ಮ ಪಥದತ್ತ ಒಯ್ಯಲು ನಿರ್ಮಾಣಗೊಂಡದ್ದು ಅದೊಂದು ಕಲಾ ಸಂಗಮವು ಹೌದು. ಸಂಗೀತ ಕಥೆ, ಭಜನೆ, ಉಪಕತೆಗಳು ಸಾಭಿನಯದೊಂದಿಗೆ ಮೂಡಿ ಬಂದು ಆಧ್ಯಾತ್ಮಿಕ ಪರಿಣಾಮವನ್ನು ಮಾಡುವವು ಆ ಮೂಲಕವಾಗಿ ಅವುಗಳಿಂದ ಸಾಮಾಜಿಕ ಸಂವಹನವು ಉಂಟಾಗುವದು.

ಪುರಾಣ ಕಾವ್ಯಗಳಲ್ಲಿ ಚಿತ್ರಿತಗೊಂಡ ಸ್ವಾಮಿಗಳ ಚರಿತ್ರೆ ಅನೂಚಾನವಾಗಿ ಬಂದ ಒಂದು ಸಿದ್ಧ ಸಂಪ್ರದಾಯವನ್ನು ಹೊಂದಿದೆ. ಕೇವಲ ಕೆಲವೇ ಪುರಾಣ ಕಾವ್ಯಗಳು – ಅಕ್ಕ ಮಹಾದೇವಿ ಮತ್ತು ಅಂಬೇಡ್ಕರ ಪುರಾಣಗಳು ಚಾರಿತ್ರಿಕ ಸತ್ಯ ಮತ್ತು ವಾಸ್ತವತೆಯತ್ತ ಮುಖ ಮಾಡಿವೆ. ಅದರಲ್ಲಿ ಅಕ್ಕಮಹಾದೇವಿಯ ಚರಿತ್ರೆಯಲ್ಲಿ ಆಕೆ ಮೂಲತಃ ಪಾರ್ವತಿಯ 'ಶಕ್ತಿ' (ಸಾತ್ವಿಕ) ರೂಪವೆಂದು ಬಿಂಬಿತವಾಗಿದೆ. ಉಳಿದಂತೆ ಎಲ್ಲರಲ್ಲಿ ನಿರೂಪಣೆಯಲ್ಲಿ ದೈವಿ ಅವತಾರವೇ ಮುಖ್ಯವಾಗಿದೆ. ಅವರು ದೈವಿ ಪುರುಷರು, ಅವರ ಹುಟ್ಟು ದೈವಲೀಲೆ, ಅವರು ಪವಾಡಲೀಲೆಗಳನ್ನು ಮಾಡಿದರು ಎಂಬ ರೀತಿಯ ಚಿತ್ರಣವಿರುವದು ಸಾಮಾನ್ಯ ಪವಾಡ/ಲೀಲೆಗಳ ಅತಿರೇಕವು, ಗತಾನುಗತಿಕ ನಿರೂಪಣೆಗಳಿಗೆ ಹಿನ್ನೆಲೆ ಅವುಗಳನ್ನು ಹೇಳಿ ಬರೆಯಿಸಿದ್ದು ವಾಸ್ತವ ಒರೆಗಲ್ಲಿಗೆ ಹಚ್ಚಿದರೆ, ವೈಜ್ಞಾನಿಕ ದೃಷ್ಟಿಕೋನದಿಂದ ನೋಡಿದರೆ ಪವಾಡಗಳಿಗೆ ಅರ್ಥವೇ ಉಳಿಯದಂತಾಗುವದು. ಅದಕ್ಕಿಂತ ಮಿಗಿಲಾದ ಮಹಾ ಜೀವನವನ್ನು ಚರಿತ್ರೆಯ ನಾಯಕರು / ಸ್ವಾಮಿಗಳು ಬದುಕಿದರು ಅದನ್ನು ವೀರೇಶ ಶರಣರ, ಅಂಬೇಡ್ಕರ, ಶರಣಬಸವೇಶ್ವರ, ಅಕ್ಕಮಹಾದೇವಿ, ಮೊದಲಾದವರ ಜೀವನದಿಂದ ಅರಿಯಬಹುದು. ಕೆಲವು ಕಾವ್ಯಗಳಲ್ಲಿ

ಇದು ವ್ಯಕ್ತಗೊಂಡುದುದನ್ನು ಕಾಣಬಹುದು. ಮಠಗಳ ಚರಿತ್ರೆ ಸಾಮಾಜಿಕ ಚಿತ್ರಣಗಳು ಕಾಣಿಸಿಕೊಳ್ಳುವದು ಇಲ್ಲಿ ವಿಶೇಷ ಸಂಗತಿ ಎನಿಸಿವೆ.

ಪುರಾಣ ಕವಿಗಳು ಕೆಲವರ ಸಂದರ್ಶನವು ಸಾಧ್ಯವಾಯಿತು. ಅವರು ಈ ಕ್ಷೇತ್ರಕ್ಕೆ ಕಾಲಿಟ್ಟ ಹಿನ್ನೆಲೆ, ಪ್ರಭಾವ ಪರಂಪರೆ, ಪ್ರೇರಣೆ, ರಚನೆಗೆ ಕಾರಣ – ಕಾರ್ಯ ಸಂಬಂಧಗಳು ಇತ್ಯಾದಿಗಳನ್ನು ಮುಕ್ತ ಮನಸ್ಸಿನಿಂದ ಚರ್ಚಿಸಿದ್ದಾರೆ. ಇಂದು ಕಾವ್ಯ ರಚನೆಗಿರುವ ಸಾಧ್ಯತೆ ಅಡೆತಡೆಗಳು ವ್ಯಯಕ್ತಿಕ ಲಾಭ ಹಾನಿಗಳನ್ನು ಇಲ್ಲಿ ಚರ್ಚಿಸಿರುವದು ಮಹತ್ವದ ವಿಷಗಳತ್ತ ಬೆರಳು ತೋರುವದು. ಕಾವ್ಯ ಕಲೆ, ಸಾಮಾಜಿಕತೆ ಮುಂತಾದವುಗಳನ್ನು ಪುರಾಣ ಕಾವ್ಯಗಳು ಒಳಗೊಳ್ಳುವ ಸಂಗತಿಗಳನ್ನು ಇಲ್ಲಿ ವಿವರಿಸಲಾಗಿದೆ.

◆◆◆

ಅನುಬಂಧ

೧. ಗ್ರಂಥ ಋಣ

ಅ. ಪುರಾಣ ಕಾವ್ಯಗಳು

ಬ. ಪರಾಮರ್ಶನ ಗ್ರಂಥಗಳು

೨. ಕವಿಗಳ ಸಂದರ್ಶನ

೧. ಗ್ರಂಥ ಋಣ

ಅ. ಪುರಾಣ ಕಾವ್ಯಗಳು

ಕವಿ : ಪಂಡಿತ ಪುಟ್ಟರಾಜ ಕವಿ ಗವಾಯಿಗಳು

೧. ಉಡುತಡಿಯ ಅಕ್ಕ ಮಹಾದೇವಿ ಪುರಾಣ
ಪ್ರಕಾಶನ : ಅನ್ನದಾನಯ್ಯನವರು ಹಿರೇಮಠ ಸಂಗೀತ ಮಹಾವಿದ್ಯಾಲಯ
ವೀರೇಶ್ವರ ಪುಣ್ಯಾಶ್ರಮ, ಗದಗ
ಪ್ರ.ವರ್ಷ : ೧೯೫೬

೨. ಶ್ರೀ ಗಂಜೀಗಟ್ಟಿ ಚರಮೂರ್ತೀಶ್ವರ ಪುರಾಣ
ಪ್ರಕಾಶನ : ಗಂಜೀಗಟ್ಟಿ ಚರಮೂರ್ತಿ ಸ್ವಾಮಿಗಳು, ಗಂಜೀಗಟ್ಟಿ.
ಪ್ರ.ವರ್ಷ : ೧೯೭೧

೩. ಶ್ರೀ ಅಂಕಲಗಿ ಅಡವೀಶ್ವರ ಪುರಾಣವು
ಪ್ರಕಾಶನ : ಶ್ರೀ ಮೌನೇಶಕುಮಾರ ವಡಗೇರಿ ಪಂಚಾಕ್ಷರಿ ಗ್ರಂಥಮಾಲಾ, ಗದಗ
ಪ್ರ.ವರ್ಷ : ೧೯೭೪

೪. ಗಂಗಾವತಿಯ ಚನ್ನಬಸವ ಸ್ವಾಮಿ ಪುರಾಣ
ಪ್ರಕಾಶನ : ಶ್ರೀ ಚನ್ನಬಸವೇಶ್ವರ ಸ್ವಾಮಿ ಮಠ, ಗಂಗಾವತಿ
ಪ್ರ.ವರ್ಷ : ೧೯೭೮

೫. ಯೋಗಿರಾಜ ಪುರಾಣ
ಪ್ರಕಾಶನ : ಶ್ರೀ ಘ.ಚ. ಘನಲಿಂಗ ಶಿವಾಚಾರ್ಯ ಸ್ವಾಮಿಗಳು
ಪ್ರ.ವರ್ಷ : ೧೯೮೧

೬. ಕಲಬುರ್ಗಿ ಶರಣಬಸವೇಶ್ವರ ಪುರಾಣವು
ಪ್ರಕಾಶನ : ಶ್ರೀ ವೀರೇಶ್ವರ ಪುಣ್ಯಾಶ್ರಮ, ಗದಗ
ಪ್ರ.ವರ್ಷ : ೧೯೮೨

೭. ತ್ರಿಷಷ್ಠಿ ಪುರಾತನರ ಪುರಾಣವು
ಪ್ರಕಾಶನ : ಶ್ರೀ ವೀರೇಶ್ವರ ಪುಣ್ಯಾಶ್ರಮ, ಗದಗ
ಪ್ರ.ವರ್ಷ : ೧೯೮೫.

೮. ಹುಕ್ಕೇರಿಮಠ ಶ್ರೀ ಶಿವಬಸವೇಶ್ವರ ಪುರಾಣ
ಪ್ರಕಾಶನ : ಶ್ರೀ ಮ.ನಿ.ಪ್ರ. ಶಿವಲಿಂಗ ಸ್ವಾಮಿಗಳು ಗುರು ಬಸವ ಸ್ವಾಮಿಗಳು
ಪ್ರ.ವರ್ಷ : ೧೯೮೭

೯. ಹುಬ್ಬಳ್ಳಿ ಮೂರುಸಾವಿರ ಮಠದ ಕರ್ತೃ ಶ್ರೀ ಜಗದ್ಗುರು ಗುರುಸಿದ್ದೇಶ್ವರ ಪುರಾಣ
ಪ್ರಕಾಶನ : ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳ
ಮೂರು ಸಾವಿರಮಠ, ಹುಬ್ಬಳ್ಳಿ
ಪ್ರ.ವರ್ಷ : ೧೯೮೯

೧೦. ಗೂಳ್ಯದ ಶ್ರೀ ಗಾದಿಲಿಂಗೇಶ್ವರ ಪುರಾಣ
ಪ್ರಕಾಶನ : ಶ್ರೀ ಗಾದಿಲಿಂಗೇಶ್ವರ ಟ್ರಸ್ಟ ಕಮೀಟಿಯವರು, ಗೂಳ್ಯ
ಪ್ರ.ವರ್ಷ : ೧೯೮೯

೧೧. ಶ್ರೀ ವೀರಭದ್ರೇಶ್ವರ ಪುರಾಣ, (ಭಾಮಿನಿ ಷಟ್ಪದಿ)
ಪ್ರಕಾಶನ : ಡಾ. ಪುಟ್ಟರಾಜ ಕವಿ ಗವಾಯಿಗಳವರ ಅಧ್ಯಯನ ಕೇಂದ್ರ
ವೀರೇಶ್ವರ ಪುಣ್ಯಾಶ್ರಮ, ಗದಗ
ಪ್ರ.ವರ್ಷ : ೧೯೯೦

೧೨. ಶ್ರೀ ಕಲಿಕೇರಿ ಗುರುಮಹಿಮಾ ಪುರಾಣ
ಪ್ರಕಾಶನ : ಕಲಕೇರಿ ಗುರು ಸಂಸ್ಥಾನ ರಾಜಗುರುಮಠ, ಮಾಳನೂರು
ಪ್ರ.ವರ್ಷ : ೧೯೯೧

೧೩. ಮೃಡಗಿರಿಯ ಕತ್ತುರ್ ಜಗದ್ಗುರು ಶ್ರೀ ಅನ್ನದಾನೀಶ್ವರ ಪುರಾಣ
ಪ್ರಕಾಶನ : ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠ, ಮುಂಡರಗಿ
ಪ್ರ.ವರ್ಷ : ೧೯೯೫

೧೪. ಶ್ರೀ ಶಿವಶರಣೆ ಹೇಮರಡ್ಡಿ ಮಲ್ಲಮಾಂಬೆಯ ಪುರಾಣ
ಪ್ರಕಾಶನ : ಶ್ರೀ ವೇ. ಬಸವರಾಜ ಚ. ಹಿಡ್ಕಿಮಠ ಕಾರ್ಯದರ್ಶಿಗಳು
ವೀರೇಶ್ವರ ಪುಣ್ಯಾಶ್ರಮ, ಗದಗ
ಪ್ರ.ವರ್ಷ : ೧೯೯೬

೧೫. ಶಿವಶರಣೆ ಶ್ರೀ ಗುಡ್ಡಾಪುರದ ದಾನಮ್ಮದೇವಿಯ ಪುರಾಣ
ಪ್ರಕಾಶನ : ಶ್ರೀ ಮುರಘೇಂದ್ರ ಶಿವಯೋಗೀಶ್ವರ ಸಾಂಸ್ಕೃತಿಕ ಸಂಘ, ದಾವಣಗೆರೆ
ಪ್ರ.ವರ್ಷ : ೧೯೯೭.

೧೬. ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಪುರಾಣ
ಪ್ರಕಾಶನ : ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಸೇವಾ ಸಂಘ, ದಾವಣಗೆರೆ
ಪ್ರ.ವರ್ಷ : ೧೯೯೯

೧೭. ಚಿಕೇನಕೊಪ್ಪ ಶ್ರೀ ಚನ್ನವೀರ ಶರಣರ ಪುರಾಣ
ಪ್ರಕಾಶನ : ಸಾಹಿತ್ಯ ಪ್ರಕಾಶನ ವಿಭಾಗ ಶ್ರೀ ಚನ್ನವೀರ ಶರಣರ ಮಠ
ಸುಕ್ಷೇತ್ರ - ಬಳಗಾನೂರ ತಾ.ಜಿ. ಗದಗ
ಪ್ರ.ವರ್ಷ : ೨೦೦೦

೧೮. ಶ್ರೀ ಗುರು ವೀರಸಿದ್ದೇಶ್ವರ ಪುರಾಣ
ಪ್ರಕಾಶನ : ಶ್ರೀ ವೀರಸಿದ್ದೇಶ್ವರ ನಂದಿಮಠ, ವಡವಡಗಿ
ಪ್ರ.ವರ್ಷ : ೨೦೦೧

೧೯. ಶ್ರೀ ಸಿರಿಯೂರು ಸಿದ್ಧಲಿಂಗೇಶ್ವರ ಪುರಾಣ
ಪ್ರಕಾಶನ : ಮೌನಯೋಗಿ ಶ್ರೀ ಬಸವರಾಜ ಸ್ವಾಮಿಗಳು
ಅಲ್ಲಮಪ್ರಭು ದೇವರ ಮಠ, ಲಕ್ಕುಂಡಿ
ಪ್ರ.ವರ್ಷ : ೨೦೦೩

೨೦. ಶ್ರೀ ಎಡೆಯೂರ ಸಿದ್ಧಲಿಂಗ ವಿಜಯ ಮಹಾಪುರಾಣ
ಪ್ರಕಾಶನ : ವೇ.ಮೂ. ಬಸವರಾಜ ಚ. ಹಿಡ್ಕಿಮಠ ಮ್ಯಾನೇಜರ
ವೀರೇಶ್ವರ ಪುಣ್ಯಾಶ್ರಮ, ಗದಗ
ಪ್ರ.ವರ್ಷ : ೨೦೦೫

ಕವಿ : ಶ್ರೀ ರಾಮಣ್ಣ ಬ್ಯಾಟಿ

೨೧. ಶ್ರೀ ಗೌರಿಶಂಕರ ಚರಿತಾಮೃತ
ಪ್ರಕಾಶನ : ಶ್ರೀ ಗೌರಿಶಂಕರ ಪ್ರಕಾಶನ ಬಿಲ್ವಾಶ್ರಮ ಕಿರೇಸೂರ, ಬಾಗಲಕೋಟ
ಪ್ರ.ವರ್ಷ : ೧೯೯೧

೨೨. ಶ್ರೀ ಗುಡ್ಡಾಪುರದ ದಾನಮ್ಮದೇವಿ ಪುರಾಣಂ
ಪ್ರಕಾಶನ : ಶ್ರೀ ವೇದಮಾತೆ ಗಾಯತ್ರಿ ಪ್ರಕಾಶನ, ಗದಗ-ಬೇಟಗೇರಿ
ಪ್ರ.ವರ್ಷ : ೧೯೯೬

೨೩. ಶ್ರೀ ಇಟಗಿ ಭೀಮಾಂಬಿಕೆ ಪುರಾಣಂ
ಪ್ರಕಾಶನ : ಶ್ರೀ ವೇದಮಾತೆ ಗಾಯತ್ರಿ ಪ್ರಕಾಶನ, ಗದಗ-ಬೇಟಗೇರಿ
ಪ್ರ.ವರ್ಷ : ೨೦೦೧

೨೪. ಶ್ರೀ ನೀಲಕಂಠೇಶ್ವರ ಪುರಾಣ
ಪ್ರಕಾಶನ : ಶ್ರೀ ವೇದಮಾತೆ ಗಾಯತ್ರಿ ಪ್ರಕಾಶನ ಬೆಟಗೇರಿ-ಗದಗ.
ಪ್ರ.ವರ್ಷ : ೨೦೦೬

೨೫. ಸದ್ಗುರು ಶ್ರೀ ಶಿವಾನಂದ ಪುರಾಣ
ಪ್ರಕಾಶನ : ಶ್ರೀ ವೇದಮಾತೆ ಗಾಯತ್ರಿ ಪ್ರಕಾಶನ, ಗದಗ
ಪ್ರ.ವರ್ಷ : ೨೦೦೯

೨೬. ಬಾದಾಮಿ ಶ್ರೀ ಬನಶಂಕರಿದೇವಿ ಮಹಾತ್ಮೆ ಪುರಾಣ
ಪ್ರಕಾಶನ : ಶ್ರೀ ವೇದಮಾತೆ ಗಾಯತ್ರಿ ಪ್ರಕಾಶನ
ಪ್ರ.ವರ್ಷ : ೨೦೧೦

೨೭. ಡಾ. ಬಾಬಾಸಾಹೇಬ ಅಂಬೇಡ್ಕರ ಪುರಾಣ
ಪ್ರಕಾಶನ : ಗ್ರಾಮೀಣ ಸಾಹಿತ್ಯ ರತ್ನಮಾಲೆ ಶ್ರೀ ಜಗದ್ಗುರು ತೋಂಟದಾರ್ಯ
ಸಂಸ್ಥಾನ ಮಠ ಡಂಬಳ ಗದಗ ಜಿಲ್ಲೆ
ಪ್ರ.ವರ್ಷ : ೨೦೧೦

೨೮. ಸುಕ್ಷೇತ್ರ ಕಲಬುರ್ಗಿ ಪರುಷ ಮಠದ ಶ್ರೀ ಗುರು ಚನ್ನಮಲ್ಲೇಶ್ವರ ಪುರಾಣ
ಪ್ರಕಾಶನ : ಶ್ರೀ ಷ.ಬ್ರ. ಅಭಿನವ ಚನ್ನಮಲ್ಲೇಶ್ವರ
ಶಿವಾಚಾರ್ಯರು ಪರುಷಮಠ, ಗುಲಬುರ್ಗಾ.
ಪ್ರ.ವರ್ಷ : ೨೦೦೦

೨೯. ನೆಗಳೂರು ಶ್ರೀ ಗುರುಶಾಂತ ಶಿವಯೋಗಿಗಳು
ಪ್ರಕಾಶನ : ಶ್ರೀಗುರು ಶಾಂತೇಶ್ವರ ಹಿರೇಮಠ ಸಂಸ್ಥಾನ, ನೆಗಳೂರು
ಪ್ರ.ವರ್ಷ : ೨೦೦೧

೩೦. ಶ್ರೀ ಗುರುಶಾಂತ ಶಿವಯೋಗಿ ಪುರಾಣ
ಪ್ರಕಾಶನ : ಶ್ರೀ ಗುರುಶಾಂತೇಶ್ವರ ಹಿರೇಮಠ, ನೆಗಳೂರ
ಪ್ರ.ವರ್ಷ : ೨೦೦೧

೩೧. ಸುಕ್ಷೇತ್ರ ಅಬ್ಬೇತ ತುಮಕೂರು ಶ್ರೀ ವಿಶ್ವಾರಾಧ್ಯಲೀಲಾ ವಿಳಾಸ ಪುರಾಣ
ಪ್ರಕಾಶನ : ಶ್ರೀ ವಿಶ್ವಾರಾಧ್ಯ ಸಿದ್ಧ ಸಂಸ್ಥಾನಮಠ ಅಬ್ಬೇ ತುಮಕೂರು ಜಿ. ಯಾದಗಿರಿ
ಪ್ರ.ವರ್ಷ : ೨೦೦೬

೩೨. ಶ್ರೀ ವ್ಹಿ.ಕೆ. ಸಲಗರ ಸಾಂಬ ಶಿವಯೋಗಿ ಪುರಾಣ
ಪ್ರಕಾಶನ : ಶ್ರೀ ವ್ಹಿ.ಕೆ. ಸಲಗರ ಸಾಂಬ ಶಿವಯೋಗಿ ಸಂಸ್ಥಾನ ಹಿರೇಮಠ,
ಆಳಂದ ಜಿ. ಗುಲಬುರ್ಗಾ
ಪ್ರ.ವರ್ಷ : ೨೦೦೬

೩೩. ಸುಕ್ಷೇತ್ರ ಶಾಖಾಪುರದ ಶ್ರೀ ಬಸವಾಂಬದೇವಿ ಪುರಾಣ
ಪ್ರಕಾಶನ : ಶ್ರೀ ವಿಶ್ವಾರಾಧ್ಯ ತಪೋವನಮಠ ಶಾಖಾಪುರ
ತಾ. ಜೇವರ್ಗಿ ಜಿ. ಗುಲಬುರ್ಗಾ
ಪ್ರ.ವರ್ಷ : ೨೦೦೭

೩೪. ಶ್ರೀಮದ್ ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗ ಭವತ್ಪಾದ ಪುರಾಣ
ಪ್ರಕಾಶನ : ಶ್ರೀ ಜಗದ್ಗುರು ಸದ್ಧರ್ಮ ಸಿಂಹಾಸನ ಜ್ಞಾನಗುರು ವಿದ್ಯಾಪೀಠ,
ಉಜ್ಜಯಿನಿ.
ಪ್ರ.ವರ್ಷ : ೨೦೦೭

೩೫. ಶ್ರೀ ಚೆನ್ನಮಲ್ಲೇಶ್ವರ ಲೀಲಾಮೃತ
ಪ್ರಕಾಶನ : ಶ್ರೀ ಚನ್ನಮಲ್ಲೇಶ್ವರ ಪ್ರಕಾಶನ ತೇರಿನಮಠ ಬಡವಾಳ ಜಿ. ಗುಲಬರ್ಗಾ
ಪ್ರ.ವರ್ಷ : ೨೦೧೦

ಕವಿ : ಶ್ರೀ ಕರವೀರಪ್ಪ ಅಂಗಡಿ

೩೬. ಉರಗಾದ್ರಿ ಗವಿಮಠ ಶ್ರೀಗುರು ಕರೀಬಸವ ಯೋಗೀಲೀಲೆ
ಪ್ರಕಾಶನ : ಅಣ್ಣಿಗೇರಿ ಚಿಂದೋಡಿ ಬಂಧುಗಳು
ಸಿ.ವಿ. ಬಂಗಾರೇಶ ಮತ್ತು ಸಿ.ಎಲ್. ಚಂದ್ರಧರ ಹಳೆಪೇಟ, ದಾವಣಗೇರಿ.
ಪ್ರ.ವರ್ಷ : ೧೯೭೨

೩೭. ಕಾಯಕಯೋಗಿ ಶ್ರೀ ರುದ್ರಮುನಿ ಶಿವಯೋಗೀಶ (ಗೀತಮಾಲೆ) ಚರಿತಾಮೃತಂ
ಪ್ರಕಾಶನ : ಶ್ರೀ ಮ.ನಿ.ಪ್ರ. ರುದ್ರಮುನಿಸ್ವಾಮಿಗಳ ಸಲಹಾ ಮಂಡಲ ಕಪನಳ್ಳಿ,
ಕಾಳೇನಹಳ್ಳಿ ಶಿವಯೋಗ ಮಂದಿರ, ಶಿಕಾರಿಪುರ
ಪ್ರ.ವರ್ಷ : ೧೯೭೬

೩೮. ಮೃಡಗಿರಿ ಜಗದ್ಗುರು ಅನ್ನದಾನೀಶ್ವರ ಲೀಲಾಮೃತ
ಪ್ರಕಾಶನ : ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠ, ಮುಂಡರಗಿ
ಪ್ರ.ವರ್ಷ : ೧೯೭೮

೩೯. ಮುರಗೋಡ ಮಹಾಂತ ಶಿವಯೋಗಿಗಳ ಚರಿತಾಮೃತಂ
ಪ್ರಕಾಶನ : ಶ್ರೀ ಮ.ನಿ.ಪ್ರ. ಸ್ವ ಮಹಾಂತಸ್ವಾಮಿಗಳು ಮುರುಘಾಮಠ, ಧಾರವಾಡ
ಪ್ರ.ವರ್ಷ : ೧೮೯೫

ಕವಿ : ಶ್ರೀ ವಾಸುದೇವ ಹೂಲಿ

೪೦. ಶ್ರೀಗುರು ರುದ್ರೇಶ ಲೀಲಾ ಪುರಾಣ
ಪ್ರಕಾಶನ : ಶ್ರೀಗುರು ಗಣಮಠೇಶ ಧರ್ಮ ಪ್ರಚಾರಕ ಮಂಡಳ
ಶ್ರೀ ರುದ್ರಸ್ವಾಮಿ ಸ್ವತಂತ್ರ ಬೃಹತ್ಶೀಲಾ ಮಠ, ಮರಕುಂಬಿ
ತಾ. ಗಂಗಾವತಿ
ಪ್ರ.ವರ್ಷ : ೧೯೯೪

೪೧. ಶ್ರೀ ಮೈಲಾರಲಿಂಗ ಮಹಿಮೆ
ಪ್ರಕಾಶನ : ವಿದ್ಯಾನಿಧಿ ಪ್ರಕಾಶನ, ಗದಗ
ಪ್ರ.ವರ್ಷ : ೨೦೦೨

೪೨. ಮಹಾಮಾಯಾ ಮಂಗಳಾದೇವಿ ಚರಿತಂ
ಪ್ರಕಾಶನ : ವಿದ್ಯಾನಿಧಿ ಪ್ರಕಾಶನ, ಗದಗ
ಪ್ರ.ವರ್ಷ : ೨೦೦೩

೪೩. ಬೆಳಧಡಿಯ ಬೆಳಕಿನ ಕಿರಣ ಶ್ರೀ ಬ್ರಹ್ಮಾನಂದ ಚರಿತಂ
ಪ್ರಕಾಶನ : ವಿದ್ಯಾನಿಧಿ ಪ್ರಕಾಶನ, ಗದಗ
ಪ್ರ.ವರ್ಷ : ೨೦೦೪

೪೪. ಶ್ರೀ ಸಚ್ಚಿದಾನಂದ ಪುರಾಣ
ಪ್ರಕಾಶನ : ಶ್ರೀ ಸದ್ಗುರು ೧೦೮ ಸಚ್ಚಿದಾನಂದ ಮಠ, ಗದಗ
ಪ್ರ.ವರ್ಷ : ೨೦೦೬

ಕವಿ : ಪಂ. ಸೋಮಶೇಖರ ಶಾಸ್ತ್ರಿಗಳು ಪುರಾಣಿಕಮಠ

೪೫. ಸುಕ್ಷೇತ್ರ ಘತ್ತರಗಿಯ ಶ್ರೀ ಭಾಗ್ಯವಂತಿ ಪುರಾಣ ಕಾವ್ಯಂ
ಪ್ರಕಾಶನ : ಮುಕ್ತಿ ಪ್ರಕಾಶನ, ಗದಗ
ಪ್ರ.ವರ್ಷ : ೨೦೦೪

೪೬. ಸುಕ್ಷೇತ್ರ ಹಾನಗಲ್ ಮಠಾಧೀಶ ಶ್ರೀ ಸದಾಶಿವ ಲೀಲೆ ಪುರಾಣ ಕಾವ್ಯಂ
ಪ್ರಕಾಶನ : ಶ್ರೀ ಕುಮಾರ ಪ್ರಕಾಶನ ಹಾನಗಲ್ಲ ಹಾವೇರಿ ಜಿಲ್ಲೆ
ಪ್ರ.ವರ್ಷ : ೨೦೦೮

ಕವಿ : ಪಂ. ಸದಾಶಿವ ಶಾಸ್ತ್ರಿಗಳು

೪೭. ಗುಡಿ ಸಾಗರ ಸಿದ್ಧ-ಸಾಧುಗಳ ಪುರಾಣ
ಪ್ರಕಾಶನ : ಶ್ರೀ ಬಿ.ಎಂ. ಗುಡಗೇರಿ ನಿವೃತ್ತ ತಹಶೀಲದಾರರು ಬೆಳವಟಗಿ.
ಪ್ರ.ವರ್ಷ : ೧೯೭೦

೪೮. ಉಣಕಲ್ಲ ಶ್ರೀ ಸದ್ಗುರು ಸಿದ್ದೇಶ್ವರ ಪುರಾಣ
ಪ್ರಕಾಶನ : ಶ್ರೀ ಸದ್ಗುರು ಸಿದ್ದೇಶ್ವರ ಸದ್ಧರ್ಮ ಜ್ಞಾನ ಪ್ರಚಾರಕ ಭಕ್ತ ಮಂಡಳಿ, ಇಬ್ರಾಹಿಂಪುರ
ಪ್ರ.ವರ್ಷ : ೧೯೭೨

೪೯. ಗದಗ ಶ್ರೀ ಮಜ್ಜಗದ್ಗುರು ಸದಾಶಿವನಂದ ಮಹಾಸ್ವಾಮಿಗಳವರ ಪುರಾಣ
ಪ್ರಕಾಶನ : ಪುರಾಣ ರತ್ನ, ಪೂಜ್ಯ ಶ್ರೀ ಚನ್ನಬಸವದೇವರು
ಪ್ರ.ವರ್ಷ : ೧೯೭೪

ಕವಿ : ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು

೫೦. ಶ್ರೀ ಸದ್ಗುರು ಶ್ರೀ ಶಿವಾನಂದ ಪುರಾಣ
ಪ್ರಕಾಶನ : ಶ್ರೀ ಶಿವಯ್ಯಸ್ವಾಮಿ ಮಲ್ಲಯ್ಯಸ್ವಾಮಿ, ಬೆನಕನಹಳ್ಳಿ
ಸಾ. ಸಾಸ್ವಿಹಳ್ಳಿ, ತಾ. ನವಲಗುಂದ
ಪ್ರ.ವರ್ಷ : ೧೯೮೭

ಕವಿ : ಶ್ರೀ ಪ್ರಭಣ್ಣ ಬೊಮ್ಮನಹಳ್ಳಿ

೫೧. ಶ್ರೀ ಗುರು ಸಿದ್ಧಾರೂಢ ಪುರಾಣ
ಪ್ರಕಾಶನ : ಲಲಿತಾ ಪ್ರಭಪ್ಪ ಬೊಮ್ಮನಹಳ್ಳಿ ಬಸ್ತಿಬಣ ಲಕ್ಷ್ಮೇಶ್ವರ ಗದಗ ಜಿಲ್ಲೆ
ಪ್ರ.ವರ್ಷ : ೨೦೦೭

೫೨. ಶಿಶುನಾಳ ಸಂತ ಶ್ರೀ ಗುರು ಶರೀಫರ ಪುರಾಣ
ಪ್ರಕಾಶನ : ಶಾರದಾ ಬೊಮ್ಮನಹಳ್ಳಿ ಬಸ್ತಿ ಬಣ ಲಕ್ಷ್ಮೇಶ್ವರ ಗದಗ ಜಿಲ್ಲೆ
ಪ್ರ.ವರ್ಷ : ೨೦೦೯

ಕವಿ : ಪಂ. ಬಾಲಚಂದ್ರಶಾಸ್ತ್ರಿ ಹಿರೇಮಠ

೫೩. ಶ್ರೀ ಮದ್ರಂಭಾಪುರಿ ಜಗದ್ಗುರು ವೀರ ಗಂಗಾಧರ ಪುರಾಣಂ
ಪ್ರಕಾಶನ : ಶ್ರೀ ಷ.ಬ್ರ. ಚಂದ್ರಮೌಳೀಶ್ವರ ಶಿವಾಚಾರ್ಯ ಸ್ವಾಮಿಗಳು
ಪ್ರ.ವರ್ಷ : ೧೯೮೭

೫೪. ಲಿಂ. ಶ್ರೀ ರುದ್ರಮುನಿ ಶಿವಾಚಾರ್ಯರ ಪುರಾಣ
ಪ್ರಕಾಶನ : ಶ್ರೀ ಸಿದ್ಧಲಿಂಗ ಶಿವಯೋಗಿ ಶಿವಾಚಾರ್ಯರು ಬಿಲ್ವಾಶ್ರಮ ಹಿರೇಮಠ
ಬಿಲ್ ಕೆರೂರ ತಾ.ಜಿ. ಬಾಗಲಕೋಟ
ಪ್ರ.ವರ್ಷ : ೨೦೦೪

೫೫. ಶ್ರೀ ಬೆಳವಣಿಕಿ ಗುರುಲಿಂಗಮ್ಮನವರ ಪುರಾಣ
ಪ್ರಕಾಶನ : ದೀಪ ಪ್ರಕಾಶನ, ಚಿಕ್ಕಮಣ್ಣೂರು, ತಾ. ರೋಣ ಜಿ. ಗದಗ
ಪ್ರ.ವರ್ಷ : ೨೦೦೯

ಕವಿ : ಪಂ. ಶಿವದೇವ ಶಾಸ್ತ್ರಿಗಳು

೫೬. ಶರಣ ಅಣ್ಣಯ್ಯ ತಮ್ಮಯ್ಯನವರ ಚರಿತ್ರೆ
ಪ್ರಕಾಶನ : ಜ್ಞಾನೇಶ್ವರಿ ಸಮೂಹ ಸಂಸ್ಥೆ , ಗದಗ
ಪ್ರ.ವರ್ಷ : ೧೯೬೨

ಕವಿ : ಶ್ರೀ ಬಸವಂತಾಚಾರ್ಯ ಕಾಳಾಚಾರ್ಯ ಮನ್ವಾಚಾರ್ಯ

೫೭. ಸಂಭಾಪುರದ ಶರಣ ಶ್ರೀ ಗುರು ಮಲ್ಲಜ್ಜನ ಪುರಾಣ,
ಪ್ರಕಾಶನ : ಶ್ರೀಮತಿ ಗಂಗಮ್ಮ ಜಂಗಳಿಮಠ ಹಾಗೂ ಸದ್ಭಕ್ತರು
ಸಾ॥ ಸೊರಟೂರು ಸಂಭಾಪೂರ ತಾ. ಜಿ. ಗದಗ
ಪ್ರ.ವರ್ಷ : ೨೦೦೯

ಕವಿ : ಶ್ರೀ ನೀಲಕಂಠ ಜಾಡಗೌಡರ

೫೮. ಮುಕ್ತಿಧರ್ಮ ಪ್ರಧಾಯಕ ಶ್ರೀ ನೀಲಕಂಠೇಶ್ವರ ಪುರಾಣ
ಪ್ರಕಾಶನ : ಅಖಿಲ ಭಾರತ ಕುರುಹಿನಶೆಟ್ಟಿ ಸಮಾಜದ
ಪಟ್ಟಾಭಿಷೇಕ ಮಹೋತ್ಸವ ಸಮಿತಿ.
ಪ್ರ.ವರ್ಷ : ೧೯೮೮

◆◆◆

ಬ. ಪರಾಮರ್ಶನ ಗ್ರಂಥಗಳು

೧. ಕನ್ನಡ ಸಾಹಿತ್ಯದಲ್ಲಿ ಪುರಾಣ ಪ್ರಜ್ಞೆ – ಡಾ. ಕೆ. ಎಲ್. ಗೋಪಾಲಕೃಷ್ಣಯ್ಯ
ಪ್ರಕಾಶನ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–೧೮.
ಪ್ರ.ವರ್ಷ : ೧೯೮೮

೨. ಕರ್ನಾಟಕ ಕವಿರಾಜ ಮಾರ್ಗಂ
ಸಂಪಾದಕರು : ಡಾ. ಶಂಕರ ಕಿದಿಲಾಯಿ
ಪ್ರಕಟಣೆ : ಮದ್ರಾಸ ವಿಶ್ವವಿದ್ಯಾಲಯ, ಮದ್ರಾಸ
ಪ್ರ.ವರ್ಷ : ೧೯೭೩.

೩. ಕರ್ನಾಟಕ ಕವಿ ಚರಿತೆ ಸಂಪುಟ–III
ಪ್ರಕಾಶಕರು : ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
ಪ್ರ.ವರ್ಷ : ೧೯೯೧.

೪. ಕುವೆಂಪು ಸಮಗ್ರ ಕಾವ್ಯ ಸಂಪುಟ–೨
ಪ್ರಕಾಶಕರು : ಕನ್ನಡ ವಿಶ್ವವಿದ್ಯಾಲಯ, ಹಂಪಿ
ಪ್ರಕಟಣೆ : ೨೦೦೦

೫. ಚಾವುಂಡರಾಯ ಪುರಾಣ ಅ–೧, ಪುಟ–೮
ಸಂ. ಡಾ. ಹಂ. ಪ. ನಾಗರಾಜಯ್ಯ
ಪ್ರಕಾಶನ : ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
ಪ್ರ.ವರ್ಷ : ೧೯೮೦

೬. ಜ್ಞಾನ ದೇಗುಲ (ಪುಟ್ಟರಾಜ ಗವಾಯಿಗಳ ಅಭಿನಂದನ ಗ್ರಂಥ)
ಸಂಪಾದಕರು : ಶ್ರೀ ವ್ಹಿ. ಬಿ. ಹಿರೇಮಠ
ಪ್ರಕಾಶನ : ಡಾ. ಪುಟ್ಟರಾಜ ಕವಿ ಗವಾಯಿಗಳ
ಅಭಿನಂದನ ಗ್ರಂಥ ಸಮಿತಿ, ಗದಗ
ಪ್ರ.ವರ್ಷ : ೧೯೮೯

೭. ಜೈನ ಪುರಾಣ ಸಂಪುಟ–೭ ನಾಗಚಂದ್ರ ಸಂಪುಟ
ಸಂಪಾದಕರು : ಡಾ. ಶಾಂತಿನಾಥ ದಿಬ್ಬದ
ಪ್ರಕಾಶನ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಪ್ರ.ವರ್ಷ : ೨೦೦೬

೮. ನಾಗವರ್ಮನ ಛಂದೋಂಬುಧಿ
ಸಂಪಾದಕರು : ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಛಂದಸ್ಸಿನ ಚರಿತ್ರೆ ಪ್ರಸಾರಾಂಗ,
ಪ್ರಕಾಶಕನ : ಮೈಸೂರು ವಿಶ್ವವಿದ್ಯಾಲಯ, ಮೈಸೂರು
ಪ್ರ.ವರ್ಷ : ೧೯೮೦.

೯. ನೂತನ ಪುರಾತನರ ರಗಳೆಗಳು – ಹರಿಹರ
ಸಂಪಾದಕರು : ಡಾ. ಎಂ.ಎಸ್. ಸುಂಕಾಪೂರ
ಪ್ರಕಾಶನ : ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಪ್ರ.ವರ್ಷ : ೧೯೭೬

೧೦. ಪಂಪ ಸಂಪುಟ
ಪ್ರಕಾಶಕರು : ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಪ್ರಕಟಣೆ : ೨೦೦೬

೧೧. ಪಾಲ್ಕುರಿಕೆ ಸೋಮನಾಥನ ಬಸವ ಪುರಾಣ – ಅನು. ಡಾ. ಪಿ.ವ್ಹಿ. ನಾರಾಯಣ
ಪ್ರಕಾಶನ : ತರಳಬಾಳು ಪ್ರಕಾಶನ, ಸಿರಿಗೆರೆ.
ಪ್ರ.ವಷ : ೧೯೮೨

೧೨. ಬಸವಣ್ಣನವರ ವಚನ ಸಂಪುಟ
ಸಂಪಾದಕರು : ಡಾ. ಎಂ.ಎಂ. ಕಲಬುರ್ಗಿ
ಪ್ರಕಾಶನ : ಕರ್ನಾಟಕ ಸರಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
ಪ್ರ.ವರ್ಷ : ೧೯೯೩

೧೩. ಮಹಾಪುರಾಣ – ಜಿನಸೇನಾಚಾರ್ಯ ಗುಣಭದ್ರಾಚಾರ್ಯ
ಅನುವಾದಕರು : ಎ. ಶಾಂತಿರಾಜಶಾಸ್ತ್ರಿ
ಮೊದಲನೆ ಸಂಪುಟ : ಕನ್ನಡ ಸಾಹಿತ್ಯ ಪರಿಷತ್ತು , ಬೆಂಗಳೂರು
ಪ್ರ.ವರ್ಷ : ೧೯೮೭

೧೪. ಯುಗಯಾತ್ರಿ ಭಾರತೀಯ ಸಂಸ್ಕೃತಿ ಸಂಪುಟ–೨
ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
ಪ್ರ.ವರ್ಷ : ಪ್ರಕಟಣೆ : ೧೯೭೧.

೧೫. ವಚನ ಸಾಹಿತ್ಯ ಸಂಗ್ರಹ
ಸಂಪಾದಕರು : ಸಂ.ಶಿ. ಭೂಸನೂರಮಠ
ಪ್ರಕಾಶನ : ಮೈಸೂರು ಸರಕಾರ ವಿದ್ಯಾಭ್ಯಾಸ ಇಲಾಖೆ, ಬೆಂಗಳೂರು
ಪ್ರ.ವರ್ಷ : ೧೯೬೫

೧೬. ವೀರಶೈವ ಪುರಾಣಗಳು : ಒಂದು ಅಧ್ಯಯನ – ಲೇ. ಡಾ. ಎಸ್. ವಿದ್ಯಾಶಂಕರ
ಪ್ರಕಾಶನ : ಕನ್ನಡ ಸಾಹಿತ್ಯ ಪರಿಷತ್ತು , ಬೆಂಗಳೂರು.
ಪ್ರ.ವರ್ಷ : ೧೯೮೩.

೧೭. ಶಿವತತ್ತ್ವ ಚಿಂತಾಮಣಿ – ಲಕ್ಕಣ್ಣದಂಡೇಶ
ಸಂಪಾದಕರು : ಪಂಡಿತ ಎನ್. ಬಸಪ್ಪ
ಪ್ರಕಾಶನ : ಪ್ರಾಚ್ಯ ವಿದ್ಯಾ ಸಂಶೋಧನಾಲಯ,
ಮೈಸೂರು ವಿಶ್ವವಿದ್ಯಾಲಯ, ಮೈಸೂರು.
ಪ್ರ.ವರ್ಷ : ೧೯೬೦.

೧೮. ಶ್ರೀ ಪಂಡಿತ ಪುಟ್ಟರಾಜ ಕವಿ ಗವಾಯಿಗಳ ಪುರಾಣ ಕೃತಿಗಳ ವಿಮರ್ಶಾ ಸಂಪುಟ
ಸಂಪಾದಕರು : ವ್ಹಿ . ಬಿ. ಹಿರೇಮಠ
ಪ್ರಕಾಶನ : ಡಾ. ಪುಟ್ಟರಾಜ ಕವಿ ಗವಾಯಿಗಳ ಅಭಿನಂದನ ಗ್ರಂಥ ಸಮಿತಿ
ಪ್ರ.ವರ್ಷ : ೧೯೮೯.

◆◆◆

೨. ಕವಿಗಳ ಸಂದರ್ಶನ

ಪಂ. ಪುಟ್ಟರಾಜ ಕವಿ ಗವಾಯಿಗಳವರ ಸಂದರ್ಶನ ಲೇಖನ

● ಡಾ. ಆರ್.ಟಿ. ಕುಲಕರ್ಣಿ ಹಾಗೂ ಶ್ರೀ ಎಸ್.ವ್ಹಿ. ಸಂಕನೂರ



ಗದುಗಿನ ವೀರನಾರಾಯಣನ ಹಾಗೂ ಜಗದ್ಗುರು ತೋಂಟದಾರ್ಯರ ನೆಲೆ ವೀಡು. ಐತಿಹಾಸಿಕ ಪ್ರಸಿದ್ಧಿಯನ್ನು ಹೊಂದಿದ ಈ ಊರು, ಇಂದಿನ ದಿನದಲ್ಲಿ ವೀರೇಶ್ವರ ಪುಣ್ಯಾಶ್ರಮಕ್ಕಾಗಿ ಪ್ರಸಿದ್ಧಿ ಪಡೆದಿದೆ. ಈ ಪುಣ್ಯಾಶ್ರಮದ ಉಸ್ತುವಾರಿಯನ್ನು ಹೊತ್ತಂತ ಉಭಯ ಗಾನವಿಶಾರದ, ತ್ರಿಭಾಷಾ ಪಂಡಿತ, ಹೆಸರಾಂತ ಲೇಖಕ ಮತ್ತು ತ್ರಿಕಾಲ ಪೂಜಾನಿಷ್ಠರಾದ ಹಾಗೂ ಕುರುಡರ ಪಿತಾಮಹರಾದ ಡಾ॥ ಪುಟ್ಟರಾಜ ಗವಾಯಿಗಳು ಅಂಧರಿಗೆ ಹಾಗೂ ಅಂಗವಿಕಲರಿಗೆ ಸಲ್ಲಿಸುತ್ತಿರುವ ಸೇವೆ ಅವಿಸ್ಮರಣೀಯ. ಕುರುಡರ ಕಣ್ಮಣಿಯಾಗಿ, ಅವರ ಜೀವನದ ಆಶಾಕಿರಣವಾಗಿ ಡಾ॥ ಪುಟ್ಟರಾಜ ಗವಾಯಿಗಳು ಕರ್ನಾಟಕದ ಪ್ರತಿಯೊಬ್ಬ ಕನ್ನಡಿಗನ ಹೃದಯ ಮಂದಿರದಲ್ಲಿ ಸದಾ ರಾರಾಜಿಸುತ್ತಿರುವರು.

ಕಡುಬಡವರಾದ ಸಾವಿರಾರು ಕುರುಡ ವಿದ್ಯಾರ್ಥಿಗಳಿಗೆ ಹಾಗೂ ಅಂಗವಿಕಲರಿಗೆ, ಈ ಆಶ್ರಮವು ಕರ್ತಾರನ ಕಮ್ಮಟವಾಗಿದೆ. ಶ್ರೀ ಪಂಚಾಕ್ಷರಿ ಗವಾಯಿಗಳಿಂದ ೧೯೧೪ರಲ್ಲಿ ಸಂಗೀತ ಪಾಠಶಾಲೆಯಾಗಿ ಸ್ಥಾಪಿಸಲ್ಪಟ್ಟು, ನಂತರ ವೀರೇಶ್ವರ ಪುಣ್ಯಾಶ್ರಮವಾದ ಈ ಸಂಸ್ಥೆಯನ್ನು ಹೆಸರಾಂತ ಸ್ಥಿತಿಗೆ ತಂದ ಶ್ರೇಯಸ್ಸು ಪಂಡಿತ ಪುಟ್ಟರಾಜ ಗವಾಯಿಗಳಿಗೆ ಸಲ್ಲಬೇಕು. ಪುಟ್ಟರಾಜ ಗವಾಯಿಗಳು ಒಬ್ಬ ಮಹಾನ್ ಸಾಧಕರೂ ಹೌದು, ಬೋಧಕರೂ ಹೌದು. ಜೊತೆಗೆ ನಿರಂತರ ಕಾಯಕನಿಷ್ಠರೂ ಹೌದು. ಇವರೊಬ್ಬ ನಿಜವಾದ ಸ್ವಾಮಿಗಳು ಹಾಗೂ ಸಾಧುಗಳು. ಅಷ್ಟೇ ಅಲ್ಲದೇ ಸ್ವಾಮಿಗಳ ಸ್ವಾಮಿಗಳೂ ಆಗಿದ್ದಾರೆ.

ಈ ಮಹಾನ್ ವ್ಯಕ್ತಿಯ ಕುರಿತು ಅಭಿನಂದನ ಗ್ರಂಥವನ್ನು ಹೊರತರುವ ಗುರುತರವಾದ ಜವಾಬ್ದಾರಿಯನ್ನು ಹೊತ್ತ ಸನ್ಮಾನ್ಯ ಪ್ರೊ. ವ್ಹಿ .ಬಿ. ಹಿರೇಮಠರವರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು. ಇಂತಹ ಮಹಾನ್ ಕೆಲಸದಲ್ಲಿ ಭಾಗಿಗಳಾಗುವ ಸೌಭಾಗ್ಯವನ್ನು ನಮಗೊದಗಿಸಿದ್ದಕ್ಕಾಗಿ ನಾವು ಮಾನ್ಯ ಸಂಪಾದಕರಿಗೆ ಕೃತಜ್ಞರಾಗಿದ್ದೇವೆ.



ನಾವು ಪೂಜ್ಯ ಶ್ರೀಗಳ ಜೊತೆಗೆ ಸಂದರ್ಶಿಸಿದ ನಂತರ ಅವರು ನೀಡಿದ ನುಡಿ–ವಾಣಿಗಳಿಂದ ನಮಗೆ ವ್ಯಕ್ತವಾದ ಕೆಲವೊಂದು ಅನಿಸಿಕೆಗಳನ್ನು ನಾವು ಇಲ್ಲಿ ಕೊಡಲು ಬಯಸುತ್ತೇವೆ.

೧. ಪೂಜ್ಯ ಪುಟ್ಟರಾಜ ಗವಾಯಿಗಳು ಯಾವುದನ್ನೂ ಮುಚ್ಚಿಡುವಂತ ಸ್ವಭಾವದವರಲ್ಲ. ಇದ್ದದ್ದನ್ನು ಇದ್ದ ಹಾಗೇ ಬಿಚ್ಚು ಮನಸ್ಸಿನಿಂದ ನೇರವಾಗಿ ಉತ್ತರಿಸುವ ವ್ಯಕ್ತಿಗಳು.

೨. ಮುಂದಿನ ಬಗ್ಗೆ ಎಂದೆಂದಿಗೂ ಚಿಂತಿಸುವವರಲ್ಲ. ಇಂದಿನದನ್ನು ಮಾತ್ರ ತಮ್ಮ ಗುರುಶಕ್ತಿಯ ಬಲದಿಂದ ಎದುರಿಸುತ್ತಾ ಹೊರಟ ಕಾಯಕನಿಷ್ಠರು. ಇವರು ತಮ್ಮ ಜೀವನದಲ್ಲಿ ಭವಿಷ್ಯತ್ತಿನ ಬಗೆಗೆ ಮುಂದಾಲೋಚಿಸಿ, ರೂಪರೇಷೆಗಳನ್ನು ಹಾಕಿಕೊಂಡು ಅವುಗಳನ್ನು ಕಾರ್ಯರೂಪದಲ್ಲಿ ತರಬೇಕೆಂಬ ಇಚ್ಛೆಯನ್ನು ಹೊಂದಿದವರಲ್ಲ. ಇಂದಿನದು ಇಂದೇ, ನಾಳೆಯದು ನಾಳೆ ಎಂಬ ತತ್ವವನ್ನು ಪಾಲಿಸಿದವರು. ಆದರೆ, ಇವರು ಜೀವನವನ್ನು, ಅದು ಬಂದಂತೆ ಎದುರಿಸುತ್ತ ನಡೆದ ದಾರ್ಶನಿಕರು.

೩. ಶ್ರೀ ಪುಟ್ಟರಾಜ ಗವಾಯಿಗಳು ತಮ್ಮ ಗುರುಗಳಾದ ಪಂಚಾಕ್ಷರ ಗವಾಯಿಗಳ ಮೇಲೆ ಅಪಾರ ಶ್ರದ್ಧೆ , ಭಕ್ತಿ ಹೊಂದಿದವರು. ತಮ್ಮ ಜೀವನದಲ್ಲಿ ಯಾವುದೇ, ಎಂಥದೇ ಕಷ್ಟದ ಪ್ರಸಂಗವಿದ್ದರೂ ಗುರುವನ್ನು ನೆನೆದರೆ, ಅವೆಲ್ಲ ಬಯಲಾಗುತ್ತವೆ ಎಂಬ ದೃಢ ನಂಬಿಕೆ ಉಳ್ಳವರು. ತಮ್ಮ ಗುರುಗಳು ಹೇಳಿದಂತೆ ಅವರ ವಿಚಾರಧಾರೆಯಂತೆ ನಡೆದುಕೊಂಡು ಬಂದ ವ್ಯಕ್ತಿಗಳು. ವೀರೇಶ್ವರ ಪುಣ್ಯಾಶ್ರಮವನ್ನು ಟ್ರಸ್ಟ ಮಾಡಿ, ಸರಕಾರದಿಂದ ಧನ ಸಹಾಯವನ್ನು ಪಡೆಯದೇ ಇದ್ದುದು ಹಾಗೂ ಆಶ್ರಮದ ಹೆಸರನ್ನು ಬದಲಾಯಿಸಿ, ಅದನ್ನು ಕೈಗಾರಿಕಾ ಕೇಂದ್ರವನ್ನಾಗಿ ಪರಿವರ್ತಿಸಲು ಈ ಹಿಂದೆ ಬಂದ ಸೂಚನೆಗಳನ್ನು ನಿರಾಕರಿಸಿದ್ದು , ಇವೆಲ್ಲವೂ ಗುರುಗಳ ಇಚ್ಛೆಯಂತೆ ನಡೆದಿದ್ದಕ್ಕೆ ಸಾಕ್ಷಿಯಾಗಿದೆ.

೪. ಶ್ರೀಗಳು ಜೀವನದಲ್ಲಿ ಬಂದಂತಹ ಅತೀ ಸಂತೋಷದ ಹಾಗೂ ಅತೀ ದುಃಖದ ಪ್ರಸಂಗಗಳಿಗೆ ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸದೇ, ಎರಡನ್ನೂ ಒಂದೇ ದೃಷ್ಟಿಯಿಂದ ಸ್ವೀಕರಿಸಿದ ನಿಜವಾದ ಯೋಗಿಗಳಾಗಿದ್ದಾರೆ.

೫. ಶ್ರೀಗಳು ಕುರುಡರಿಗಾಗಿ ನಡೆಸುತ್ತಿರುವ ಆಶ್ರಮವು ಒಂದು ಜಾತ್ಯಾತೀತವಾದ ಆಶ್ರಮವಾಗಿದೆ. ಇಲ್ಲಿ ಎಲ್ಲ ಜಾತಿ–ಮತ–ಪಂಥದವರೂ ವಿದ್ಯೆಯನ್ನು ಕಲಿತಿದ್ದಾರೆ; ಕಲಿಯುತ್ತಿದ್ದಾರೆ. ಪೂಜ್ಯರು ಸರ್ವಜ್ಞನು ಹೇಳಿದ ಈ ಕೆಳಗಿನ ಮಾತಿಗೆ ನಿದರ್ಶನವಾಗಿದ್ದಾರೆ.

ಜಾತಿ ಹೀನನ ಮನೆಯು ಜ್ಯೋತಿ ತಾ ಹೀನವೇ ।
ಜಾತಿ ವಿಜಾತಿ ಎನಬೇಡ । ದೇವ
ನೊಲಿದಾತನೇ ಜಾತ ಸರ್ವಜ್ಞ ॥

೬. ಶ್ರೀ ಪುಟ್ಟರಾಜರಿಗೆ ದೇಶದ ಹಲವಾರು ರಾಜ್ಯಗಳ ಜನತೆಯಿಂದ ಹಾಗೂ ಸಂಘ ಸಂಸ್ಥೆಗಳಿಂದ ಅನೇಕ ಪ್ರತಿಷ್ಠಿತ ಬಿರುದಾವಳಿಗಳು, ಮಾನ ಪತ್ರಗಳು, ಪ್ರಶಸ್ತಿಗಳು ಹಾಗೂ ಡಾಕ್ಟರೇಟ ಪದವಿ ಲಭಿಸಿದ್ದರೂ ಸಹಿತ, ಈ ಯಾವ ಪ್ರಶಸ್ತಿಗಳನ್ನೂ ಬಯಸಿ ಅವುಗಳಿಗಾಗಿ ಪ್ರಯತ್ನಿಸಿದವರಲ್ಲ. ಹಾಗೂ ಹೊಗಳಿಕೆಗೆ ತಲೆಬಾಗಿದವರಲ್ಲ.

೭. ತಮ್ಮ ಗುರುಗಳ ಇಚ್ಛೆಯಂತೆ ಕುರುಡರು ಮತ್ತು ಅಂಗವಿಕಲರು ಸುಶಿಕ್ಷಿತರಾಗಿ ತಮ್ಮ ಕಾಲ ಮೇಲೆ ತಾವು ನಿಂತು ಸ್ವತಂತ್ರರಾಗಿ ಬಾಳಬೇಕೆಂಬುದೇ ಅವರ ಹೆಬ್ಬಯಕೆಯಾಗಿದೆ.

೮. ಅದೇ ರೀತಿ ಇಂದಿನ ಯುವಕರು ಒಳ್ಳೆಯವರಾಗಿ, ಒಳ್ಳೆಯದನ್ನೇ ಮಾಡಬೇಕು ಎಂಬ ಇಚ್ಛೆಯನ್ನು ಸಹ ಹೊಂದಿದವರಾಗಿದ್ದಾರೆ.

ಇದೊಂದು ಸಂದರ್ಶನ ಲೇಖನವಾದುದರಿಂದ, ಪೂಜ್ಯರು ನಮ್ಮ ಪ್ರಶ್ನೆಗಳಿಗೆ ಕೊಟ್ಟ ಉತ್ತರಗಳನ್ನು ಅಕ್ಷರಶಃ ಅವರ ವಾಣಿಯಲ್ಲಿಯೇ ಇಲ್ಲಿ ಮೂಡಿಸಲು ಪ್ರಯತ್ನಿಸಿದ್ದೇವೆ.

ಬಾಲ್ಯ ಜೀವನ

ಪ್ರ : ನಿಮ್ಮ ಬಾಲ್ಯ ಜೀವನದ ಬಗ್ಗೆ ನಿಮಗೆ ಏನಾದ್ರೂ ನೆನಪಿದೆಯೆ ?

ಉ : ಅಯ್ತೀರಿ, ನಾನು ಹುಟ್ಟಿದ್ದು ದೇವಗಿರಿಯಲ್ಲಿ. ದೇವಗಿರಿ ಅಂದ್ರ, ಅದು ನಮ್ಮ ತಾಯಿ ತವರೂರು. ಹೊಸಪೇಟೆ ನಮ್ಮ ಮೂಲ ಊರು. ಅದು ಹಾನಗಲ್ ತಾಲೂಕಿನ್ಯಾಗ ಅಯ್ತಿ. ಒಮ್ಮೆ ಅಲ್ಲಿಗೆ ಹೋಗಿದ್ದು ನನಗ ನೆನಪಿಲ್ಲ. ಅಲ್ಲೇ ವೆಂಕಟಾಪೂರ ಮಠದವರು ಅಂತಾರ ನಮಗ. ನಮ್ಮ ತಂದಿ ಹೆಸರು ರೇವಯ್ಯನವರು, ತಾಯಿ ಹೆಸರು ಸಿದ್ಧಮ್ಮನವರು. ನಮ್ಮ ತಂದಿ ತೀರಿಕೊಂಡ ನಂತರ ಮಾವಂದಿರಾದ ಚಂದ್ರಶೇಖರ ಶಾಸ್ತ್ರಿಗಳು ದೇವಗಿರಿಗೆ ಕರೆದುಕೊಂಡು ಬಂದನಂತರ ಮಾವಂದಿರಾದ ಚಂದ್ರಶೇಖರ ಶಾಸ್ತ್ರಿಗಳು ದೇವಗಿರಿಗೆ ಕರೆದುಕೊಂಡು ಬಂದು, ಸಂಗೀತ ಸುರು ಮಾಡಿಸಿದರು. ಚಂದ್ರಶೇಖರಯ್ಯನವರು ನಮ್ಮ ಗುರುಗಳ ಶಿಷ್ಯರೂ ಹೌದು.

ಪ್ರ : ನಿಮ್ಮ ಬಾಲ್ಯ ಜೀವನದಲ್ಲಿ ಯಾವುದಾದರೂ ನೆನಪಿಡುವಂತಹ ಘಟನೆಗಳು ಆಗಿವೆಯೆ ?

ಉ : ಅಂಥದೇನು ಘಟನೆ ಆಗಿಲ್ಲರೀ.

ಪ್ರ : ನಿಮ್ಮ ದೃಷ್ಟಿಯನ್ನು ನೀವು ಯಾವಾಗ ಕಳೆದುಕೊಂಡಿರಿ ?

ಉ : ಹುಟ್ಟಿದ ಆರು ತಿಂಗಳಿಗೆ ಹೋಗ್ಯಾವರೀ. ಕಣ್ಣು ಬೇನೆ ಬಂದು ಕಣ್ಣಿಗೆ "ಪರಿ" ಅಂತ ಬರತೈತಲ್ಲ, ಅದ್ಕ "ಅರೀ" ಅಂತಾರ. ಆವಾಗ ಬರೀ ನಾಟೀ ವೈದ್ಯ ಇತ್ತು. ಅರು ತೊನಸಿ ಮುಟ್ಟಸಬೇಕು ಕಣ್ಣುಗುಡ್ಡಿಗೆ ಅಂತ ಹೇಳಿದ್ದರು. ಆದರೆ ಹಾಗೆ ಮುಟ್ಟಿಸುವಾಗ ತೊನಸಿ ಕೈಜಾರಿ ಒಳಗ ಬಿದ್ದು ಬಿಟ್ಟವು. ಆವಾಗ ಅದು ಅರಿ ಹರಿಯುವದರ ಬದಲು, ಗುಡ್ಡಿನ ಹರಿದು ಕಣ್ಣು ಹೋಗಿ ಬಿಟ್ಟವು.

ಪ್ರ : ಮುಂದೆ ಯಾರಾದರೂ ತಜ್ಞರಿಗೆ ತೋರಿಸಿದಿರಾ

ಉ : ಆವಾಗ ಯಾರ್ರೀ ? ಗುಡ್ಡಿನ ಹೋಗಿ ಬಿಟ್ಟಿತ್ತು. ಹೀಗಾಗಿ ಯಾರಿಗೂ ತೋರಿಸಲಿಲ್ಲ.

ಶಿಕ್ಷಣ

ಪ್ರ : ನೀವು ತ್ರಿಭಾಷಾ ಪಂಡಿತರಿದ್ದೂ, ನಿಮಗೆ ಕನ್ನಡ, ಸಂಸ್ಕೃತ ಮತ್ತು ಹಿಂದೀಯಲ್ಲಿ ಅಮೋಘ ಪಾಂಡಿತ್ಯ ಇದೆ. ಇವುಗಳನ್ನು ಕಲಿಸಿದ ಗುರುಗಳು ಯಾರು ?

ಉ : ನಮ್ಮ ಗುರುಗಳು ಒಬ್ಬಬ್ಬರನ್ನ ಇಟ್ಟು ಇಲ್ಲೇ ಕರೆದುಕೊಂಡು ಬಂದು ಹೇಳಿಸಿದರು. ಮೊದಲು ಕಲಿತಿದ್ದು ಸಂಸ್ಕೃತವನ್ನು. ಬಂಕಾಪೂರದಲ್ಲಿದ್ದಾಗ ರೋಣದ ಪಟ್ಟದೇವರು ಸ್ವಲ್ಪ ಶುರು ಮಾಡಿ, ಅಷ್ಟಕ್ಕ ಬಿಟ್ಟಿದ್ದರು. ನಂತರ ಗದುಗಿನ ಮಠಕ್ಕೆ ಬಂದ ಮೇಲೆ, ಸಂದಗಿವಾಡ ಮಠದ ರಾಜಶೇಖರ ಶಾಸ್ತ್ರಿಗಳ ಮಕ್ಕಳಾದ ಅಪ್ಪಯ್ಯನವರು ಶುರು ಮಾಡಿ, ಪ್ರಥಮ ಪುಸ್ತಕದ ೧೦ ಪಾಠ ಹೇಳಿ ಮುಗಿಸಿದರು. ಇದಾದ ಮೇಲೆ ಜೇರಟಗಿ ಸದಾಶಿವ ಶಾಸ್ತ್ರಿಗಳು ಕಲಿಸಿದರು. ಅವರು ಇಲ್ಲಿ ಕೀರ್ತನೆ, ಪುರಾಣ ಕಲಿಯಲಿಕ್ಕೆ ನಮ್ಮ ಗುರುಗಳ ಹತ್ತಿರ ಬಂದಿದ್ದರು. ಅವರು ಎಲ್ಲ ಪಂಚ ಕಾವ್ಯಗಳವರೆಗೂ ಕಲಿಸಿದರು.

ಪ್ರ : ಇವುಗಳನ್ನು ನೀವು ಮೌಖಿಕವಾಗಿಯೇ ಕಲಿತಿರೋ ?

ಉ : ಹೌದು, ಎಲ್ಲ ಮೌಖಿಕವಾಗಿ.

ಪ್ರ : ಬರಿಯಲಿಕ್ಕೆ ಯಾರೂ ಕಲಿಸಲಿಲ್ಲವೇ ?

ಉ : ಆನಂತರ ಅದು. ಎಲ್ಲ ಕಲಿತ ಮೇಲೆ ನಾವು ಬಳ್ಳಾರಿಗೆ ಗುರುಗಳ ಜೊತೆಗೆ ಭಿಕ್ಷೆಗೆ ಹೋದಾಗ, ಅಲ್ಲಿ ಮೈಸೂರವರು ವೆಂಕಟಪ್ಪನವರಂತ ಬಂದಿದ್ದರು, ಅವರು ಕಲಿಸಿದರು.

ಪ್ರ : ಕನ್ನಡವನ್ನು ಕಲಿಸಿದವರು ಯಾರು ?

ಉ : ಚಂದ್ರಶೇಖರ ಶಾಸ್ತ್ರಿಗಳು ಪಗಡದಿನ್ನಿ ಅಂತ. ಇವರದು ಕಂಪಲಿಯಲ್ಲಿ ಪಾಠಶಾಲಾ ಇತ್ತು. ಅಲ್ಲಿ ಇವರು ಮೊದಲು ನನಗೆ ಸಂಸ್ಕೃತದಲ್ಲಿ ಉದ್ಗ್ರಂಥಗಳನ್ನು

ಹೇಳಿದರು. ಆಮೇಲೆ ಕನ್ನಡದ ಶಬ್ದಮಣಿದರ್ಪಣ, ಶಬ್ದಾನುಶಾಸನ ಮತ್ತು ಅಪ್ರತಿಮ ವೀರಚರಿತ್ರೆ (ಅಲಂಕಾರ ಗ್ರಂಥ)ಯ ಬಗ್ಗೆ ಎಲ್ಲಾ ಮಾಹಿತಿಯನ್ನು ಮಾಡಿಕೊಟ್ಟರು.

ಪ್ರ : "ಹಿಂದೀ"ಯನ್ನು ನೀವು ಯಾವಾಗ ಕಲಿತಿರಿ ?

ಉ : ಹಿಂದೀಯನ್ನು ಇಲ್ಲಿಯೇ ಕಲಿತಿದ್ದೆ , ಕಲಿಸಿದವರು ಹೆಸರು ನೆನಪಿಲ್ಲ. ಹಂಗ ಮೇಷ್ಟ್ರು ಅಂತ ಅಂತಿದ್ದರು. ಅರು ರಾಷ್ಟ್ರ ಭಾಷಾದವರೆಗೂ ಮಾಹಿತಿ ಮಾಡಿಕೊಟ್ಟರು.

ಪ್ರ : ನಿಮಗೆ ಬ್ರೇಲ ಲಿಪಿ ಬರುತ್ತದೆಯೇ ?

ಉ : ಬರತೈತ್ರಿ – ಅದರೊಳಗ ಎರಡು ಭಾಗ ಅದಾವು. ಮೈಸೂರು ಲಿಪಿ ಅಂತ ಒಂದು ಅಯ್ತಿ. ಆಮೇಲೆ ಇಂಡಿಯಾ ಲಿಪಿ ಅಂತ ಒಂದು ಅಯ್ತಿ. ನನಗ ಇಂಡಿಯಾ ಲಿಪಿ ಬರುದಿಲ್ಲ . ಮೈಸೂರು ಲಿಪಿ ಅಷ್ಟ ಬರತೈತಿ. ಅದರೊಳಗ ಭಗವದ್ಗೀತೆ, ಉಪನಿಷತ್ತು , ಶ್ರೀರುದ್ರ ಹಾಗೂ ಸಂಗೀತದ ಬಗ್ಗೆ ಪುಸ್ತಕಗಳನ್ನು ಬರೆದಿದ್ದೇನೆ.

ಸಂಗೀತ

ಪ್ರ : ಸಂಗೀತದ ಅಭ್ಯಾಸವನ್ನು ಯಾವಾಗ ಪ್ರಾರಂಭ ಮಾಡಿದ್ದಿರಿ ?

ಉ : ೫ನೇ ವರ್ಷಕ್ಕೆ ನಮ್ಮ ಮಾವನವರಾದ ಚಂದ್ರಶೇಖರಯ್ಯನವರು ಪ್ರಾರಂಭ ಮಾಡಿದರು.

ಪ್ರ : ನಿಮಗೆ ಸಂಗೀತದ ಕಡೆಗೆ ಒಲವು ಹೇಗೆ ಆಯಿತು ?

ಉ : ನಮ್ಮಮಾವಂದಿರು ಸಂಗೀತ ಕಲಿತವರು. ಹೀಗಾಗಿ ನಾಟಕ–ಪಾಟಕ ಕಲಿಸುತ್ತಿದ್ದರು. ನಾನು ಕಣ್ಣು ಇಲ್ಲದವ ಆದ ಕಾರಣ ಬೇರೆ ಮಾರ್ಗ ಇಲ್ಲದೇ ನನಗೆ ಸಂಗೀತದ ಅಭ್ಯಾಸ ಮಾಡಿಸಿದರು. ಅವರೇ ನಮ್ಮ ಮೊದಲನೇ ಗುರು.

ಪ್ರ : ಹಿಂದೂಸ್ಥಾನ ಮತ್ತು ಕರ್ನಾಟಕ ಸಂಗೀತ ಈ ಎರಡರಲ್ಲಿ ಬಹಳ ವ್ಯತ್ಯಾಸವಿದ್ದರೂ ತಾವು ಇವುಗಳಲ್ಲಿ ಪಾಂಡಿತ್ಯ ಹೊಂದಿದ್ದೀರಿ. ಇದನ್ನು ಹೇಗೆ ಸಾಧಿಸಿದಿರಿ ?

ಉ : ನಮ್ಮ ಗುರುಗಳಾದ ಪಂಚಾಕ್ಷರ ಗವಾಯಿಗಳು ಅವುಗಳನ್ನು ಕಲಿತವರೇ ಇದ್ದರು. ಕರ್ನಾಟಕ ಹಾಗೂ ಉತ್ತರಾದಿ ಸಂಗೀತ ಕಲಿತವರೇ ಅವರು. ಹೀಗಾಗಿ ನನಗೆ ಎರಡೂ ಕಲಿಯಲಿಕ್ಕೆ ಏನೂ ತೊಂದರೆ ಆಗಲಿಲ್ಲ.

ಪ್ರ : ಹಿಂದೂಸ್ಥಾನಿ ಮತ್ತು ಕರ್ನಾಟಕ ಸಂಗೀತದ ಇನ್ನುಳಿದ ಮುಖ್ಯ ಗುರುಗಳಾರು ?

ಉ : ಮತ್ಯಾರೂ ಇಲ್ಲ. ಪಂಚಾಕ್ಷರಿ ಗವಾಯಿಗಳೆ ನಮ್ಮ ಗುರುಗಳು. ನಾನು ಎಲ್ಲಿ ಹೋಗೇ ಇಲ್ಲ.

ಪ್ರ : ಸಂಗೀತಕ್ಕೆ ನಿಮ್ಮದೇ ಆದ ಕೊಡುಗೆ ಏನು ?

ಉ : "ಸಂಗೀತ ಶಾಸಸ್ತ್ರಿಜ್ಞಾನ" ಅಂತ ಒಂದು ಪುಸ್ತಕ ಬರೆದಿದ್ದೇನೆ. ಅದು ಪ್ರಿಂಟ್ ಆಗಿದೆ. ಇದು ಅಲ್ಲದೇ ಇನ್ನೂ ಎರಡು ಪುಸ್ತಕ ನಾನೇ ಸ್ವಂತ ಚೀಜ ಮಾಡಿ ಗಾನಸುಧಾ ಅಂತ ಹೆಸರನ್ನು ಇಟ್ಟು ಬರೆದಿದ್ದೇನೆ.

ಪ್ರ : ಹಿಂದೂಸ್ಥಾನೀ ಮತ್ತು ಕರ್ನಾಟಕ ಸಂಗೀತ ಇವುಗಳಲ್ಲಿ ನಿಮಗೆ ಯಾವ ಕಡೆಗೆ ಹೆಚ್ಚಿಗೆ ಒಲವು ಇದೆ ?

ಉ : ಮೊದಲು ನಾನು ಕಲಿತಿದ್ದು ಕರ್ನಾಟಕಿ, ಹಿಂದುಗಡೆ ಉತ್ತರಾದೀ. ಆದರೆ, ಈಗ ಎಲ್ಲರೂ ಉತ್ತರಾದಿ ಕೇಳುತ್ತಾರೆ. ಕರ್ನಾಟಕಿ ಸಂಗೀತ ಕೇಳುವರೇ ಇಲ್ಲ. ಆದರೂ ನಾವು ಎಲ್ಲೇ ಕಾರ್ಯಕ್ರಮಕ್ಕಾಗಲಿ ಹೋದಾಗ ನಾವು ಅದನ್ನು ಹಾಡುತ್ತೇವೆ.

ಪ್ರ : ನೀವು ಯಾವ ಯಾವ ವಾದ್ಯಗಳನ್ನು ಬಾರಿಸಬಲ್ಲಿರಿ ?

ಉ : ಹಾರ್ಮೋನಿಯಂ, ತಬಲಾ, ವಾಯಿಲಿನ್ ಮತ್ತು ಸಾರಂಗಿ ಬಾರಿಸಲಿಕ್ಕೆ ಬರುವುದು. ಇವುಗಳಲ್ಲಿ ಹಾರ್ಮೋನಿಯಂ, ತಬಲಾ ಹಾಗೂ ವಾಯಿಲಿನ್ ಈ ಮೂರು ವಾದ್ಯಗಳನ್ನು ಪ್ರಥಮವಾಗಿ ನಮ್ಮ ಮಾವಂದಿರೇ ಕಲಿಸಿದವರು. ನಮ್ಮ ಗುರುಗಳಿಗೆ ಗಾಯನ ಮತ್ತು ತಬಲಾ ಇವೆರಡೂ ಬರುತ್ತಿದ್ದವು.

ಪ್ರ : ನಿಮಗೆ ಯಾವ ವಾದ್ಯದ ಕಡೆಗೆ ಹೆಚ್ಚಿನ ಒಲವು ಇದೆ ?

ಉ : ನನಗೆ ಪ್ರಿಯವಾದದ್ದ ವಾಯಲಿನ್.

ಪ್ರ : ಹಿಂದೂಸ್ಥಾನೀ ಸಂಗೀತದಲ್ಲಿ ಬೇರೆ-ಬೇರೆ ಘರಾನಾ ಇವೆ. ಅದರಲ್ಲಿ ನಿಮ್ಮ ಘರಾನಾ ಯಾವುದು ?

ಉ : ನಮ್ಮದು ಗ್ವಾಲಿಯರ್ ಘರಾನಾ.

ಪ್ರ : ನಿಮ್ಮ ವಿಶೇಷ ಸಂಗೀತ ಕಛೇರಿಗಳು ಎಲ್ಲಿ ಎಲ್ಲಿ ನಡೆದಿರುವುವು ? ಅವುಗಳಲ್ಲಿ ಅತೀ ಸಂತೋಷ ತಂದುಕೊಟ್ಟ ಸಭೆ ಯಾವುದು ?

ಉ : ನಮ್ಮ ಸಂಗೀತ ಕಛೇರಿಗಳು ಮದ್ರಾಸಿನಲ್ಲಿ, ಸೊಂಡೂರ ಮಹಾರಾಜರಲ್ಲಿ ಹಾಗೂ ಮೈಸೂರ ಮಹಾರಾಜರಲ್ಲಿ ನಡೆದಿರುವವು. ಮದ್ರಾಸಿನಲ್ಲಿ ಒಂದು ತಿಂಗಳವರೆಗೆ ಬೇರೆ ಬೇರೆ ಮನೆಗಳಲ್ಲಿ, ಸಾರ್ವಜನಿಕ ಸಭೆಗಳಲ್ಲಿ ಸಂಗೀತ ಸಭೆಗಳು ನಡೆದಿರುವವು. ಮದ್ರಾಸಿನಲ್ಲಿ ನಡೆದ ಸಂಗೀತ ಸಮ್ಮೇಳನ ಅತೀ ಸಂತೋಷ ತಂದುಕೊಟ್ಟದೆ.

ಪ್ರ : ಚಲನಚಿತ್ರ ಸಂಗೀತದಿಂದ ಶಾಸ್ತ್ರಿಯ ಸಂಗೀತಕ್ಕೆ ಯಾವ ಪರಿಣಾಮವಾಗಿದೆ ?

ಉ : ಅದಕ್ಕೇನು ಪರಿಣಾಮರೀ ? ಕೇಳುವ ಜನರು ಕಡಿಮೆ ಆಗಿರುವರು ಅಷ್ಟೇ. ಅದರದು ಅದಕ; ಇದರದು ಇದಕ.

ಪ್ರ : ನಿಮ್ಮ ದೃಷ್ಟಿಯಲ್ಲಿ ಸಂಗೀತದ ಮೂಲ ಉದ್ದೇಶವೇನು ?

ಉ : ಸಂಗೀತದಿಂದ ಬಹಳ ಉಪಯೋಗ ಅಯ್ತೀರಿ. ನಮ್ಮ ಮನಸ್ಸಿಗೆ ಏನಾದ್ರು ದುಃಖ ಆಗಿದ್ರ ಅದು ನಿವಾರಣೆ ಆಗತೈತಿ ಮತ್ತು ಮನಸ್ಸಿಗೆ ಶಾಂತಿನೂ ಆಗತೈತಿ. ನಮಗೆ ಹಾಡುವುದು ಆಗದಿದ್ದರೆ ವಾದ್ಯ ಬಾರಿಸುತ್ತ ಕುಳಿತರೆ ನಾವು ಎಲ್ಲಾ ಮರೆತು ಬಿಡುತ್ತೇವೆ ಮತ್ತು ಕೇಳುವವರದು ಅಷ್ಟೇ. ಆದ್ದರಿಂದ ಮುಖ್ಯವಾಗಿ ಸಂಗೀತ ನಮ್ಮ ಜೀವನದ ಸಾಧನವೇ ಆಗಿದೆ.

ಸಾಹಿತ್ಯ

ಪ್ರ : ನೀವು ಇಲ್ಲಿಯವರೆಗೆ ಎಷ್ಟು ಸಾಹಿತ್ಯ ಕೃತಿಗಳನ್ನು ರಚಿಸಿದ್ದೀರಿ ?

ಉ : ಕನ್ನಡ, ಹಿಂದೀ ಹಾಗೂ ಸಂಸ್ಕೃತ ಈ ಮೂರು ಭಾಷೆಗಳಲ್ಲಿ ೫೦-೬೦ ಕೃತಿಗಳನ್ನು ರಚಿಸಿರುವೆನು. ಇದರಲ್ಲಿ ನಾಟಕಗಳನ್ನೇ ಹೆಚ್ಚು ರಚಿಸಿರುವೆನು.

ಪ್ರ : ನೀವು ಪ್ರಥಮವಾಗಿ ರಚಿಸಿದ ಕೃತಿ ಯಾವುದು ?

ಉ : ಅಕ್ಕಮಹಾದೇವಿ ಪುರಾಣ.

ಪ್ರ : ನೀವು ರಚಿಸಿದ ಕೃತಿಗಳಲ್ಲಿ ಸಂತೃಪ್ತಿ ಕೊಟ್ಟ ಕೃತಿ ಯಾವುದು ? ಮತ್ತು ಜನಮನ್ನಣೆ ಗಳಿಸಿದ ಕೃತಿ ಯಾವುದು ?

ಉ : ಅಕ್ಕಮಹಾದೇವಿ ಪುರಾಣವೇ ನನಗೆ ತೃಪ್ತಿಕೊಟ್ಟ ಹಾಗೂ ಜನಮನ್ನಣೆ ಪಡೆದ ಕೃತಿಯಾಗಿದೆ.

ಪ್ರ : ಸಂಗೀತ, ಕಾವ್ಯ ಹಾಗೂ ಇನ್ನಿತರ ಸಾಹಿತ್ಯಿಕ ಕೃತಿಗಳನ್ನು ರಚಿಸಲು ಪ್ರೇರಣೆ ಏನು ?

ಉ : ನಮ್ಮ ಆಶ್ರಮದಲ್ಲಿ ಕಲಿತು ಹೊರಗೆ ಹೋಗುವ ಶಿಷ್ಯಂದಿರೆಲ್ಲ ಬೇರೆಯವರ ಹೆಸರು ಹೇಳಲಿಕ್ಕೆ ಹತ್ತಿ ಬಿಟ್ಟರು. ಪಂಚಾಕ್ಷರ ಗವಾಯಿಗಳು ಇದ್ದಾಗನೂ ಹಂಗ ಮಾಡಿದರು. ಈಗನೂ ಹಂಗ ಮಾಡಲಿಕ್ಕೆ ಹತ್ತಿದ್ರು. ಹಿಂಗಾದ್ರ ಆಶ್ರಮದ ಹೆಸರನ ಹೋಗಿಬಿಡತೈತಿ. ಇನ್ನು ಉಳಿಯುವುದಿಲ್ಲ ಅಂತ ವಿಚಾರ ಮಾಡಿ, ಅದಕ್ಕೆ ಪುಸ್ತಕದ ರೂಪದಲ್ಲಿ ಕೃತಿಗಳನ್ನು ಹೊರತರಲು ಸುರು ಮಾಡಿದೆವು.

ಪ್ರ : ನಿಮ್ಮ ಯಾವ ಯಾವ ಕೃತಿಗೆ ಪ್ರಶಸ್ತಿ ಲಭಿಸಿರುವವು ?

ಉ : ಪ್ರಶಸ್ತಿ ಯಾವುದೂ ಲಭಿಸಿಲ್ಲ. ಆದರೆ ಬಸವ ಪುರಾಣಕ್ಕೆ ರಾಷ್ಟ್ರಪತಿಗಳಿಂದ ಪ್ರಶಸ್ತಿ ಪತ್ರ ಸಿಕ್ಕೈತಿ. ಹಿಂದೀಯಲ್ಲಿ ಬರೆದ ಬಸವಪುರಾಣ ಪ್ರಿಂಟ ಆದ ನಂತರ ಚಿತ್ತವಾಡಗಿ

ಚೆನ್ನಪ್ಪನವರು, ಬೆಲ್ಲದ ಅವರು ಎರಡು ಪುಸ್ತಕಾನ ಕೊಪ್ಪಳದ ಎಂ.ಎಲ್.ಎ. ಇದ್ದರಲ್ಲ ಅಗಡಿ ಸಂಗಣ್ಣನವರು ಅಂತ, ಅವರ ಕೈಯಲ್ಲಿ ಕೊಟ್ಟು ಕಳಸಿದರು. ಆವಾಗ ಚೆನ್ನಪ್ಪನವರು ಹೇಳಿದರು, "ನೀವು ಹಿಂಗ ಇಟಗೊಂಡು ಕುಂತು ಏನು ಮಾಡತೀರಿ, ಎಲ್ಲರಿಗೂ ಕೊಡಬೇಕು" ಎಂದಾಗ, "ಎಲ್ಲರಿಗೂ ಕೊಟ್ಟೇವಿ. ನಿಜಲಿಂಗಪ್ಪನವರಿಗೆ ಕೊಟ್ಟೇವಿ, ಕಂಠಿಯವರಿಗೆ ಕೊಟ್ಟೇವಿ ಎಲ್ಲರಿಗೂ ಕೊಟ್ಟೇವಿ. ನಾವು ಕೊಟ್ಟವೀ, ಅವರು ಹಂಗ ಇಟಗೊಂಡ ಕುಂತಾರ ಮತ್ತು ನಾವು ಏನು ಮಾಡಬೇಕು ? ನಮ್ಮದು ಅಷ್ಟ ಕೆಲಸ; ಅದಕ್ಕು ದೈವ ಬೇಕಲ್ಲ" ಅಂತ ಅಂದೆ.

ಅಗಡಿ ಸಂಗಣ್ಣನವರು ಈ ಪುಸ್ತಕಗಳನ್ನು ಆವಾಗಿನ ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರಿಗೆ ತೋರಿಸಿದ ಕೂಡಲೇ, "ಕಣ್ಣು ಇಲ್ಲದವರು ಇದನ್ನು ಹ್ಯಾಂಗ ಬರೆದರು ? ಅವರನ್ನು ನಾನು ನೋಡಬೇಕು" ಅಂತ ಹೇಳಿದರಂತೆ. ಆವಾಗ ನಾವು ದಿಲ್ಲಿಗೆ ಹೋದೆವು. ಅಲ್ಲಿಗೆ ನಾವು ಹೋದಾಗ ಅರ್ಧ ತಾಸು ವೇಳೆ ಕೊಟ್ಟಿದ್ದರು. ರಾಜೇಂದ್ರ ಪ್ರಸಾದ ಅವರು ನಮಗೆ ಎಲ್ಲಾ ಪ್ರಶ್ನೆ ಮಾಡಿದರು. ಅವುಗಳಿಗೆಲ್ಲಾ ಉತ್ತರ ಕೊಟ್ಟೆ. ಆವಾಗ ನಮ್ಮ ಜೊತೆಗೆ ೮ ಮಂದಿ ಪಾರ್ಲಿಮೆಂಟರಿ ಮೆಂಬರೂ ಬಂದಿದ್ದರು. ಅವರೆಲ್ಲ "ಈ ಬಸಪ್ಪನ ಬಗ್ಗೆ ಇಷ್ಟು ದೊಡ್ಡ ಪುಸ್ತಕ ಯಾಕೆ ಬರೆದಿರಿ ?" ಅಂತ ಕೇಳಿದರು. ನಾನು ಆವಾಗ ಹೇಳಿದೆ. "ಬಸಪ್ಪ ಅಲ್ಲ, ಅವರು ಬಸವೇಶ್ವರರು, ನಮ್ಮ ಗಾಂಧೀಯವರ ವಿಚಾರ ಏನೇನು ಇತ್ತು ಅದನ್ನ ಮೊದಲ ಕಾರ್ಯರೂಪದಲ್ಲಿ ತಂದವರು ಅವರು. ಪುಸ್ತಕ ನೋಡ್ರಿ, ಪಾವಟೆಯವರ ಉಲ್ಲೇಖ ಅಯ್ತಿ. ಅದಕ ಅಂದು ತಗೆದುಕೊಟ್ಟೆ. ಇಂಗ್ಲೀಷನಲ್ಲಿ ಇದ್ದ ಆ ಉಲ್ಲೇಖ ನೋಡಿಕೊಂಡು, ಆವಾಗ "ನೀವು ಹಿಂಗ ಬರಬಾರದಾಗಿತ್ತು. ಒಂದು ಸಂಘದ ವತಿಯಿಂದ, ಹಿಂದೀ ಪ್ರಚಾರ ಸಭಾವತಿಯಿಂದ ಅಥವಾ ಕರ್ನಾಟಕದವತಿಯಿಂದ ಬಂದಿದ್ದರ ನಿಮಗ ನಾನು ಏನರ ಕೊಡಲಿಕ್ಕೆ ಬರತ್ತಿತ್ತು" ಅಂತ ಅಂದರು. ನಾನು ಅವರಿಗೆ ಹೇಳಿದೆ. "ನಿಮ್ಮದೇನು ನನಗ ಬೇಕಾಗಿಲ್ಲ, ಅಂಥ ಹ್ಯಾಗೆ ಇದೆ ಅಂತ ನಿಮಗೇನಾದರೂ ಬರೆದು ಕೊಡಲಿಕ್ಕೆ ಸಾಧ್ಯವಿದ್ದರೆ ಬರೆದು ಕೊಡೀರೀ ಇಷ್ಟು ಸಾಕು" ಅಂದೆ. ಆವಾಗ ಅವರು ತಲೆಮೇಲೆ ಇಟಗೊಂಡು ಬರೆದು ಕೊಟ್ಟರು.

ಪ್ರ : ನಿಮ್ಮ ನೆಚ್ಚಿನ ಸಂಸ್ಕೃತ ಕವಿ ಯಾರು ? ಹಾಗೂ ಕೃತಿ ಯಾವುದು ?

ಉ : ಕಾಳಿದಾಸ, ನನಗೆ ಕಾಳಿದಾಸ ಬರೆದ "ಶಾಕುಂತಲ ನಾಟಕ" ಬಹಳ ಮೆಚ್ಚಿಗೆ ಆಗಿದೆ.

ಪ್ರ : ನಿಮ್ಮ ನೆಚ್ಚಿನ ಕನ್ನಡ ಕವಿ ಯಾರು ? ಹಾಗೂ ಕೃತಿ ಯಾವುದು ?

ಉ : ಷಡಕ್ಷರ ಕವಿ. ಕನ್ನಡದಲ್ಲಿ ಷಡಕ್ಷರ ಕವಿ ಬರೆದ "ರಾಜಶೇಖರ ವಿಳಾಸ" ನನಗೆ ಮೆಚ್ಚಿಗೆಯಾಗಿದೆ.

ನಾಟಕ

ಪ್ರ : ನೀವು ನಾಟಕ ಕಂಪನಿ ಪ್ರಾರಂಭಿಸಲು ಕಾರಣವೇನು ?

ಉ : ಈ ಆಶ್ರಮಕ್ಕೆ ಸಾಲ ಬಹಳ ಆಯಿತು. ಆವಾಗ ಇನ್ನೂ ಇದು ಆಶ್ರಮ ಇದ್ದಿದ್ದಿಲ್ಲ. ಬರೀ ಪಾಠ ಶಾಲಾ ಇತ್ತು. ಇದಕ ಶಿವಯೋಗ ಮಂದಿರ ಪಾಠಶಾಲಾ ಅಂತಾ ಹೆಸರು ಇತ್ತು. ಇದನ್ನು ನಮ್ಮ ಗುರುಗಳು ನಡೆಸುತ್ತಿದ್ದರು. ಸಾಲ ಬಹಳ ಆದ ಕೂಡಲೇ ನಮ್ಮ ಗುರುಗಳು ಮಹಾರಾಜರನ್ನು ಸಂಪರ್ಕಿಸಿ, ಅಲ್ಲೊಂದು ಗಾಯನ ಸಭೆ ಮಾಡಬೇಕಂತ ಪ್ರಯತ್ನ ನಡೆಸಿದ್ದರು. ಶಿವಯೋಗ ಮಂದಿರ ಪಾಠ ಶಾಲಾ ಅಂತ ಹೆಸರು ಇದ್ದಿದ್ದಕ್ಕೆ, ಅವರು ಸಹಾಯ ಮಾಡುವುದಕ್ಕೆ ಸ್ವಲ್ಪ ಹಿಂದೆ ಮುಂದೆ ನೋಡಿದರು. 'ಹಿಂಗ ಹೆಸರು ಇಟಗೊಂಡು ಬರತಾರ ಸುಳ್ಳೋ, ಖರೆಯೋ' ಅಂತ ಅವರು ವಿಮರ್ಶೆಗೆ ತೊಡಗಿದರು. ಆವಾಗ ಶಿವಯೋಗ ಮಂದಿರದವರು ಪಾಠ ಶಾಲೆ ನಮ್ಮದು ಅಂತ ತೀವ್ರವಾಗಿ ಬರೆದು ಕಳಿಸಿಕೊಡಲಿಲ್ಲ. ತಡ ಮಾಡಿದ್ರು. ಅಷ್ಟರೊಳಗೆ ಮಹಾರಾಜರು ತೀರಿಕೊಂಡರು. ಒಟ್ಟಿನಲ್ಲಿ ಸಾಲ ಹರಿಯುವುದಕ್ಕೆ ನಾಟಕ ಕಂಪನಿಯನ್ನು ನಾವು ಪ್ರಾರಂಭ ಮಾಡಬೇಕಾಯಿತು.

ಪ್ರ : ನಿಮ್ಮ ನಾಟಕ ಕಂಪನಿಗೂ, ಉಳಿದ ನಾಟಕ ಕಂಪನಿಗಳಿಗೂ ಏನು ವ್ಯತ್ಯಾಸವಿದೆ. ನಿಮ್ಮ ಕಂಪನಿಯ ವಿಶಿಷ್ಟತೆಯೇನು ?

ಉ : ನಮ್ಮಲ್ಲಿ ಸ್ತ್ರೀಯರು ಇಲ್ಲ. ಆದರೆ ಉಳಿದ ನಾಟಕ ಕಂಪನಿಗಳಲ್ಲಿ ಸ್ತ್ರೀಯರನ್ನು ಕರೆದುಕೊಳ್ಳುತ್ತಾರೆ.

ಪ್ರ : ನೀವು ಸ್ತ್ರೀಯರನ್ನು ಯಾಕ ತೆಗೆದುಕೊಳ್ಳಲಿಲ್ಲ ?

ಉ : ಆವಾಗಿನ ಕಾಲ ಸ್ತ್ರೀಯರ ಕಾಲ ಅಲ್ಲ. ಆವಾಗ ನಾವು ಕಂಪನಿ ಸುರು ಮಾಡಿದಾಗ ಗಂಡು ಹುಡುಗುರು ಸ್ತ್ರೀ ಪಾತ್ರ ಮಾಡುತ್ತಿದ್ದರು. ಹೀಗಾಗಿ ಅವರ್ನು ತಗೊಂಡ ಬಿಟ್ಟಿವಿ. ಆವಾಗ ನಡೆದದ್ದು ಈಗನೂ ಹಂಗ ನಡೆದು ಬಿಟೈತಿ.

ಪ್ರ : ನಾಟಕ ಕಂಪನಿಯ ಆರ್ಥಿಕ ಸ್ಥಿತಿ ಹಿಂದೆ ಮತ್ತು ಈಗ ಹೇಗಿದೆ ?

ಉ : ಆರ್ಥಿಕ ಸ್ಥಿತಿ ಹಿಂಗಂತ ಹೇಳಾಕ ಬರುದಿಲ್ಲರಿ. ಒಂದೂರೊಳಗೆ ಬೀಳತೈತಿ, ಒಂದೂರೊಳಗೆ ಏಳತೈತಿ, ಆವಾಗ್ಯ ಮತ್ತು ಇವಾಗ್ಯ ನಮಗೇನ ವ್ಯತ್ಯಾಸ ಅನಿಸಿಲ್ಲ. ಒಟ್ಟಾರೆ ಅದು ಜನರ ಭಕ್ತಿ ಮೇಲೆ ನಡೀತೈತಿ. ಇಲ್ಲೇ ನಡೀತಲ್ಲ ಹೇಮರಡ್ಡಿ ಮಲ್ಲಮ್ಮನದು. ಆವಾಗ ಒಂದು ವರ್ಷದವರೆಗೆ ಅದು ಒಂದ ನಡೀತು. ಆವಾಗನ ಇಷ್ಟೆಲ್ಲ ಆಸ್ತಿ ಆಯಿತು.

ವೀರೇಶ್ವರ ಪುಣ್ಯಾಶ್ರಮದ ಬಗೆಗೆ ಮಾಹಿತಿ

ಪ್ರ : ವೀರೇಶ್ವರ ಪುಣ್ಯಾಶ್ರಮದ ಸ್ಥಾಪನೆಗೆ ಹಾಗೂ ಅದರ ಪ್ರಗತಿಗೆ ಶ್ರೀ ಪಂಚಾಕ್ಷರ ಗವಾಯಿಗಳ ಜೊತೆಗೆ ದುಡಿದವರಾರು ಮತ್ತು ಸಹಾಯ ಸಲ್ಲಿಸಿದವರಾರು ?

ಉ : ಮುಖ್ಯವಾಗಿ ಬಸರೀಗಿಡದ ವೀರಪ್ಪನವರು, ಅವರು ಇದಕ್ಕೆ ಭೂಮಿದಾನ ಕೊಟ್ಟರು ಮತ್ತು ಅವರು ಇದುವರೆಗೂ ಈ ಸಂಸ್ಥೆಗೆ ಜೋಳ, ಕಾಳು ಎಲ್ಲಾ ಕೊಟ್ಟದ್ದಾರೆ. ಅವರ ನಂತರ ಅಬ್ಬಿಗೇರಿ ಬಸಪ್ಪನವರು ಮತ್ತು ಸಿಗ್ಲಿಮಠದವರು. ಇವರೆಲ್ಲ ಇವತ್ತಿಗೂ ಸಹಾಯ ಮಾಡತಾರ. ಒಟ್ಟಿನಲ್ಲಿ ಇದಕ ಗದಗಿನ್ಯಾಗ ಎಲ್ಲರೂ ಸಹಾಯ ಮಾಡ್ಯಾರ ಮತ್ತು ಬೇರೆ-ಬೇರೆ ಜಿಲ್ಲೆಯೊಳಗಿನ ಹಳ್ಳಿಯ ಜನರೂ ಸಹಾಯ ಮಾಡ್ಯಾರ. ಇವತ್ತಿಗೂ ನಾವು ಕೇಳಿದರ, ಯಾರೂ ಇಲ್ಲ ಅನ್ನುವುದಿಲ್ಲ.

ಪ್ರ : ಯಾವ ಉದ್ದೇಶಕ್ಕಾಗಿ ಈ ಪುಣ್ಯಾಶ್ರಮ ಪ್ರಾರಂಭವಾಯಿತು ?

ಉ : ಇದು ಕುರುಡರ ಸಲುವಾಗಿಯೇ ಪ್ರಾರಂಭ ಆಯಿತು. ಆವಾಗ ನಮ್ಮ ಗುರುಗಳು ಕುರುಡರನ್ನು ಕರಕೊಂಡು ತಿರುಗಾಡತಿದ್ರು. ಗುರುಗಳಿಗೆ ವಯಸ್ಸಾದುದರಿಂದ ಇದು ಬಹಳ ತೊಂದರೆ ಆಗಲಿಕ್ಕೆ ಹತ್ತಿತ್ತು. ಅಷ್ಟರೊಳಗೆ ನಾಟಕ ಕಂಪನಿನೂ ಪ್ರಾರಂಭ ಆಗಿತ್ತು. ಹಿಂಗಾಗಿ ಇದು ಒಂದು ದುಡಿದುಕೊಂಡು ತಿನ್ನಲು ಮಾರ್ಗನ ಆಯಿತು. ಅಂತ ತಿಳಕೊಂಡು ಪ್ರಾರಂಭ ಮಾಡಿದೆವು.

ಪ್ರ : ಈ ಪುಣ್ಯಾಶ್ರಮಕ್ಕೆ ಎಂತಹ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡುತ್ತೀರಿ ? ಯಾವ ಅರ್ಹತೆಗಳನ್ನು ಹೊಂದಿರಬೇಕು ?

ಉ : ನಾವೆಲ್ಲ ಅರ್ಹತೆ ಎಸ್.ಎಸ್.ಎಲ್.ಸಿ. ಆಗಿರಬೇಕು ಅಂತ ಇಟಗೊಂಡಿವಿ. ಆದರೆ ೪ನೇ ಇಯತ್ತೆಯವರೂ ಮತ್ತು ೨ನೇ ಇಯತ್ತೆಯವರೂ ಬರತಾರ.

ಪ್ರ : ವಿದ್ಯಾರ್ಥಿಗಳು ಪ್ರವೇಶ ಪಡೆಯುವಾಗ ಪ್ರವೇಶ ಫೀಯನ್ನು ತೆಗೆದು ಕೊಳ್ಳುತ್ತೀರಾ ?

ಉ : ಪ್ರವೇಶ ಫೀ ಅಂತ ೧೦೧ ರೂಪಾಯಿ ತಗೋತಿವಿ. ಅಗದೀ ಬಡವರು ಅಂತ ತಿಳಿದು ಬಂದರೆ ಅವರಿಗೆ ೫೧ ರೂಪಾಯಿ ತಗೋತಿವಿ.

ಪ್ರ : ಪ್ರವೇಶ ಪಡೆದ ನಂತರ ವಿದ್ಯಾರ್ಥಿಗಳಿಗೆ ಯಾವದಾದರೂ ನಿರ್ಬಂಧನೆಗಳನ್ನು ಹಾಕುವಿರಾ ?

ಉ : ಹೌದು, ಇಲ್ಲಿ ಅವರು ಸರಿಯಾಗಿ ಇರಬೇಕು. ಯಾವ ಚಟಗಳನ್ನು ಕಲಿಯಬಾರದು. ಮತ್ತು ಪ್ರಾರ್ಥನೆ ವಗೈರಿ ಎಲ್ಲ ಮಾಡಿ, ಬೋರ್ಡಿಂಗಿನೊಳಗೆ ಇದ್ದುದನ್ನು ಊಟ ಮಾಡಿ ಹೇಳಿದ ಸೇವೆ ಸರಿಯಾಗಿ ಮಾಡಿಕೊಂಡು ಹೋದರೆ ೬ ವರ್ಷಗಳವರೆಗೆ ಇಲ್ಲೇ ಇಟಗೊಂತಿವಿ. ೬ ವರ್ಷದ ಮೇಲೆ ಅರು ವಿದ್ಯಾವಂತರಾಗಿ ಹೋಗಬಹುದು. ಇನ್ನೂ ಅಭ್ಯಾಸ ಆಗಿರದಿದ್ದರೆ ಇನ್ನೂ ಇರತೇವಿ ಅಂದರೆ ಇಟಗೊಂತಿವಿ.

ಪ್ರ : ಪ್ರವೇಶ ನೀಡುವಾಗ ಜಾತಿಯನ್ನು ಗಣನೆಗೆ ತೆಗೆದುಕೊಳ್ಳುತ್ತಿರಾ ?

ಉ : ಇಲ್ಲ. ಜಾತಿಯನ್ನು ನೋಡುವುದಿಲ್ಲ. ಆದರೆ ಗುಣಕ್ಕೆ ಮಹತ್ವ ಕೊಡತಿವಿ. ಇಲ್ಲಿ ಹರಿಜನರೂ ಅದಾರ ಮತ್ತ ಬ್ರಾಹ್ಮಣರೂ ಬೇರೆ ಜಾತಿಯವರೂ ಕಲಿತು ಹೋಗ್ಯಾರ.

ಪ್ರ : ನಿಮ್ಮ ಸಂಸ್ಥೆಯಲ್ಲಿ ಬರೀ ಕುರುಡರಿಗೆ ಅಷ್ಟೇ ಪ್ರವೇಶವಿದೆಯೋ ಅಥವಾ ಅನಾಥ ಮಕ್ಕಳಿಗೂ ಪ್ರವೇಶವಿದೆಯೋ ?

ಉ : ಅನಾಥರು, ಅಂಧರು ಇಬ್ಬರಿಗೂ ಕೊಡತಿವಿ. ಬರೀ ಅಂಧರಿಗೆ ಕೊಟ್ಟರೆ ಅವರನ್ನ ಕರಕೊಂಡು ಅಡ್ಯಾಡಲಿಕ್ಕೆ ಬೇಕಲ್ಲ. ಅದಕ ಅವರನ್ನ, ಇವರನ್ನ ಕೂಡೇ ತಗೊಂತಿವಿ.

ಪ್ರ : ಈ ವರ್ಷ ಪುಣ್ಯಾಶ್ರಮದಲ್ಲಿ ಇದ್ದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ? ವಿದ್ಯಾರ್ಥಿಗಳ ಪ್ರವೇಶದ ಸಂಖ್ಯೆಗೆ ಮಿತಿ ಇದೆಯೇ ?

ಉ : ಈಗ ನೂರಾ ಐವತ್ತು ಹುಡುಗರು ಅದಾರ. ಮಿತಿ ನೂರು ಹುಡುಗರು ಅಂತ ಮಾಡಿವಿ. ಆದರ ಎರಡನೂರು ತನಕ ಇರತ್ತಾರ.

ಪ್ರ : ಈ ವಿದ್ಯಾರ್ಥಿಗಳ ಖರ್ಚನ್ನು ಹೇಗೆ ನಿಭಾಯಿಸುತ್ತೀರಿ ?

ಉ : ಸುಗ್ಗಿ ಕಾಲಕ್ಕೆ ಒಂದಿಷ್ಟು ಹಳ್ಳಿಯೊಳಗೆ ಹೋಗಿ ಕಾಳು, ಜೋಳ ಮತ್ತು ಭತ್ತ ಭಿಕ್ಷೆ ತಗೊಂಡು ಬರತೀವಿ. ಎಲ್ಲರೂ ಕೊಡತಾರ. ಹೆಚ್ಚು ಕಡಿಮೆ ವರ್ಷಾಷನ ಇದ್ದಂಗ ಆಗೇತಿ. ಕೆಲವು ಕಡೆಗೆ ನಾನು ಹೋಗಿ ತರಬೇಕಾಗತೈತಿ. ಕೆಲವು ಕಡೆ ಯಾರನಾದರೂ ಕಳಿಸಿದರೂ ಕೊಡತಾರ. ಹೀಗೆ ಎಲ್ಲಾ ಕಡೆಗೆ ಹೋಗಿ ಕಾಳು ಸಂಗ್ರಹ ಮಾಡತೀವಿ.

ಪ್ರ : ಈ ಪುಣ್ಯಾಶ್ರಮದಲ್ಲಿ ಮಕ್ಕಳಿಗೆ ಯಾವ ಯಾವ ಅಭ್ಯಾಸವನ್ನು ಹೇಳುತ್ತೀರಿ ? ಮತ್ತು ಯಾವ ಯಾವ ಪದವಿವರೆಗೂ ಕಲಿಸಿ ಕೊಡತೀರಿ ?

ಉ : ಇಲ್ಲಿ ಕುರುಡರಿಗೆ ಶಾಲಿ ಕಲಿಸತೀವಿ. ಬ್ರೇಲ್ ಲಿಪಿ, ಸಂಗೀತ ಮತ್ತು ವಾದ್ಯಾನೂ ಕಲಿಸತೀವಿ. ವಾದ್ಯದೊಳಗೆ ವಾಯ್‌ಲಿನ್, ಕೊಳಲು, ಹಾರ್ಮೋನಿಯಂ ಮತ್ತು ತಬಲಾ ಕಲಿಸತೀವಿ. ಇವುಗಳನ್ನು ಮೈಸೂರಿನವರು ನಡೆಸುವಂತಹ 'ವಿದ್ವತ್' ಪರೀಕ್ಷೆಯವರೆಗೆ ಕಲಿಸತೀವಿ. ಇದೂ ಅಲ್ಲದೇ ಆಲ್ ಇಂಡಿಯಾದ ಪರವಾಗಿ–ಗಂಧರ್ವ ಮಹಾವಿದ್ಯಾಲಯದವರು ಕೆಲವು ಪರೀಕ್ಷೆ ನಡೆಸತಾರ 'ವಿಶಾರದ' ಅಂತ. ಅದನ್ನೂ ನಾವು ಅಭ್ಯಾಸ ಮಾಡಸತೇವಿ.

ಪ್ರ : ನಿಮ್ಮ ಪುಣ್ಯಾಶ್ರಮಕ್ಕೆ ಬೇರೆ–ಬೇರೆ ಸಂಘ ಸಂಸ್ಥೆಗಳಿಂದ ಸಹಾಯ ದೊರೆತಿದೆಯೆ ?

ಉ : ಗದಗ ರೋಟರಿ ಕ್ಲಬ್‌ನವರು ಸಹಾಯ ಮಾಡ್ಯಾರ. ಡಾ॥ ರಾಜಕುಮಾರ ಅವರನ್ನ ಇಲ್ಲೇ ಕರಿಸಿ ಒಂದು "ಫಂಕ್ಷನ್" ಮಾಡಿದರು. ಆಗ ಒಂದು ಲಕ್ಷ ಎಪ್ಪತ್ತು ಸಾವಿರ ರೂಪಾಯಿ ಕೂಡಿತು. ಅದನ್ನು ಬ್ಯಾಂಕಿನಲ್ಲಿ ಡೆಪಾಜಿಟ್ ಮಾಡ್ಯಾರ.

ಪ್ರ : ನಿಮ್ಮಲ್ಲಿ ಇರುವ ಟೆಂಪೋ ವಾಹನ ಯಾರು ಕೊಡಿಸಿರುವರು ?

ಉ : ದಾವಣಗೇರಿಯವರು ಕೊಡಿಸ್ಯಾರ. ನಾವು ಅಲ್ಲಿಗೆ ಪುರಾಣ ಹೇಳಲಿಕ್ಕೆ ಹೋಗಿದ್ವಿ. ಆಗ ಬಹಳ ಹಣ ಕೂಡಿತು. ಅದೇ ಹಣದಿಂದ ಟೆಂಪೋ ಕೊಡಿಸ್ಯಾರ. ರಿಪೇರಿ ವಗೈರೀನೂ ಅವರ ಮಾಡಸತಾರ.

ಪ್ರ : ನಿಮ್ಮ ಪುಣ್ಯಾಶ್ರಮದಿಂದ ಕಲಿತು ಹೊರಬಂದ ಹೆಸರಾಂತ ವಿದ್ಯಾರ್ಥಿಗಳು ಯಾರು ?

ಉ : ನಮ್ಮ ಗುರುಗಳು ಇದ್ದಾಗ ರಾಜಗುರು ಬಸವರಾಜರು ಹೊರ ಬಂದರು. ನಮ್ಮ ಕಾಲಕ್ಕೆ ವೆಂಕಟೇಶಕುಮಾರ, ಕುಮಾರದಾಸ, ಗೋನಾಳ ಬಸವರಾಜ ಮತ್ತು ಬಿ. ಎಸ್. ಮಠ ಮೊದಲಾದವರು ಬಂದಾರ. ಇವರೆಲ್ಲ ಬೇರೆ-ಬೇರೆ ಆಕಾಶವಾಣಿ ಕೇಂದ್ರ ಸೇರ್‍ಯಾರ.

ಪ್ರ : ನಿಮಗೆ ದೃಷ್ಟಿ ಇಲ್ಲದಿದ್ದರೂ ಸಹಿತ ವೀರೇಶ್ವರ ಪುಣ್ಯಾಶ್ರಮದ ಆಡಳಿತವನ್ನು ಸಮರ್ಥ ರೀತಿಯಲ್ಲಿ ನಡೆಸಿಕೊಂಡು ಬಂದಿದ್ದೀರಿ. ಇಲ್ಲಿ ಆಡಳಿತ ಯಾವ ರೀತಿಯಲ್ಲಿ ನಡೆಯುತ್ತದೆ ?

ಉ : ಇಲ್ಲಿ ಹಿಡ್ಕಿಮಠ ಚನ್ನವೀರ ಶಾಸ್ತ್ರಿಗಳು ಅಂತ ಒಬ್ಬ ಮ್ಯಾನೇಜರ ಅದಾರ. ಇವರು ನಮ್ಮ ಗುರುಗಳು ಇದ್ದಾಗನ ಇದ್ದರು. ನಮ್ಮ ಗುರುಗಳು ಶಿವೈಕ್ಯರಾದ ಮೇಲೆ ನಾವು ಮತ್ತು ಹಿಡ್ಕಿಮಠರು ಕೂಡಿಕೊಂಡು ಆಶ್ರಮದ ಆಡಳಿತ ನೋಡಿಕೊಂಡು ಹೊಂಟೇವಿ.

ಸಾಮಾನ್ಯ ಪ್ರಶ್ನೆಗಳು

ಪ್ರ : ನಿಮ್ಮ ಜೀವನದಲ್ಲಿ ನಿಮ್ಮ ಮನಸ್ಸನ್ನು ನೋಯಿಸುವಂತ ಘಟನೆಗಳು ಯಾವುದಾದರೂ ನಡಿದಿವೆಯೇ ?

ಉ : ಯಾವೂ ಇಲ್ಲರೀ. ಯಾವನ್ನೂ ನಾವು ಮನಸ್ಸಿಗೆ ಹಚ್ಚಿಕೊಳ್ಳುವುದಿಲ್ಲ.

ಪ್ರ : ನೀವು ಬ್ರಹ್ಮಚರ್ಯ ಜೀವನವನ್ನು ಸ್ವ-ಇಚ್ಛೆಯಿಂದ ಸ್ವೀಕರಿಸಿದಿರೋ ಅಥವಾ ಗುರುವಿನ ಆಶೆಯನ್ನು ಈಡೇರಿಸಲು ಸ್ವೀಕರಿಸಿದಿರೋ ?

ಉ : ನನ್ನ ಮನಸ್ಸಿನ ಇಚ್ಛೆ ಪ್ರಕಾರವಾಗಿ ಸ್ವೀಕರಿಸಿದೆ. ನಮ್ಮ ಗುರುಗಳು ಬೇಕಾದರೆ ಲಗ್ನ ಆಗು ಅಂದರು- "ಲಗ್ನ ಆಗಿ ಏನು ಮಾಡೋದು ? ನಿಮ್ಮ ಸೇವಾ ಮಾಡತೀನಿ" ಅಂತಾ ಹೇಳಿದೆ.

ಪ್ರ : ನಿಮ್ಮ ಜೀವನದ ಅತೀ ಕಷ್ಟದ ಪ್ರಸಂಗಗಳಾವುವು ?

ಉ : ಯಾವೂ ಇಲ್ಲ. ಇಲ್ಲರೀ. ನೆನಪಿಡುವಂತ ಕಷ್ಟ ಘಟನಗಳು ಯಾವೂ ಆಗಿಲ್ಲರಿ.

ಏನರ ಸ್ವಲ್ಪ ಆತಂಕ ಬಂದ್ರು ನಮ್ಮ ಗುರುಗಳನ್ನು ನೆನಪಿಸಿಕೊಂಡ ಕೂಡಲೇ ಬಯಲಾಗಿ ಬಿಡತಾವು.

ಪ್ರ : ಮಠ ಮಾನ್ಯಗಳು ಹೇಗಿರಬೇಕು ? ಅದರ ಬಗ್ಗೆ ನಿಮ್ಮ ಅಭಿಪ್ರಾಯವೇನು ?

ಉ : ಹಳೇ ಪದ್ಧತಿ ಪ್ರಕಾರ, ಮಠದ ಜವಾಬ್ದಾರಿ ಹೊತ್ತವರು ಸನ್ಯಾಸಿಗಳಾಗಿರುವುದೇ ಬಹಳ ಒಳ್ಳೆಯದು. ಆದರೆ, ಹೊಸ ಪದ್ಧತಿ ಪ್ರಕಾರ ಸಂಸಾರಿಗಳಾದರೂ, ನೀತಿವಂತರಾಗಿ ಯೋಗ್ಯ ರೀತಿಯಿಂದ ನಡೆಸಿಕೊಂಡು ಹೋಗಬೇಕು. ಮಠ ಮಾನ್ಯಗಳು ಪುರಾಣ, ಶಿವಾನುಭವ ಮತ್ತು ಶಿಕ್ಷಣ ಪ್ರಚಾರ ಇವನ್ನೆಲ್ಲ ಮಾಡಬೇಕು. ಆದರೆ ದುಡ್ಡಿಗಾಗಿ ಶಿಕ್ಷಣ ಸಂಸ್ಥೆ ತೆರೆಯಬಾರದು. ಒಟ್ಟಿನಲ್ಲಿ ಧರ್ಮದ ಜೊತೆಗೆ ಶಿಕ್ಷಣ ಪ್ರಸಾರ ಮಾಡಬೇಕು ಮತ್ತು ಸಮಾಜದಲ್ಲಿ ಒಗ್ಗಟ್ಟನ್ನು ಮೂಡಿಸಬೇಕು.

ಪ್ರ : ಜಗತ್ತಿನಲ್ಲಿ ಒಂದು ನಾಲ್ಕಂಶದಷ್ಟು ಕುರುಡರು ನಮ್ಮ ದೇಶದಲ್ಲಿದ್ದಾರೆ. ಈ ಸಮಸ್ಯೆ ಹೇಗೆ ಎದುರಿಸಬೇಕು ಅಂಥ ನೀವು ಹೇಳುತ್ತೀರಿ ?

ಉ : ಈಗ ಗವರ್ನ್ಮೆಂಟಿನವರು ಕುರುಡರಿಗೆ ಅಲ್ಲಲ್ಲಿ ಸ್ಕೀಮ ಮಾಡಿ, ಏನೇನೋ ಉದ್ಯೋಗ ಹಚ್ಚಿಕೊಡಲಿಕ್ಕೆ ಹತ್ಯಾರ. ಆದರ ನನ್ನ ಅಭಿಪ್ರಾಯದಲ್ಲಿ ಅಂಧರಿಗೆ ಸಂಗೀತನ ಬಹಳ ಒಳ್ಳೆಯದು. ಸಂಗೀತದಲ್ಲಿ ಅವರು ತರಬೇತಿ ಹೊಂದಿದರ ಸ್ವತಂತ್ರ ಆಗತಾರ. ಕಣ್ಣು ಇದ್ದವರ ಸಹಾಯ ಇಲ್ಲದೇ ಅವರು ಬದುಕಬೇಕು ಅಂದ್ರ ಸಂಗೀತನ ಮುಖ್ಯವಾಗಿ ಕಲಿಯಲೇಬೇಕು.

ಪ್ರ : ನೀವು ಸರ್ಕಾರದಿಂದ ಧನ ಸಹಾಯ ಏಕೆ ಪಡೆದಿಲ್ಲ ?

ಉ : ಅದಕ ನಾವು ಟ್ರಸ್ಟ ಮಾಡಬೇಕಾಗತೈತಿ. ಆದರೆ, ನಮ್ಮ ಗುರುಗಳದು ಟ್ರಸ್ಟ ಮಾಡಲೇಬಾರದಂತ ಉದ್ದೇಶ ಇತ್ತು. ಗುರುಗಳ ಉದ್ದೇಶದ ಪ್ರಕಾರ ಈಗನೂ ಹಂಗ ನಡದೈತಿ.

ಪ್ರ : ನಿಮಗೂ ಮತ್ತು ಡಾ॥ ರಾಜಕುಮಾರವರಿಗೂ ಹೇಗೆ ಸಂಬಂಧ ಬಂತು ?

ಉ : ಒಮ್ಮೆ ನಾವು ದಾವಣಗೇರಿಯಲ್ಲಿ ಕಂಪನಿ ಹಾಕಿದಾಗ, ಅವರು ನಮ್ಮ ನಾಟಕ ಕಂಪನಿಗೆ ನೀರೀಕ್ಷಕರಾಗಿ ಬಂದಿದ್ದರು. ಅಂದ್ರ ನಾವು ಅವರನ ದಾವಣಗೇರಿ ಜನರ ಸಹಾಯದಿಂದ ಕರಕೊಂಡು ಬಂದಿದ್ವಿ, ಅವರು ನಾಟಕ ನೋಡಿ "ಗಂಡು ಮಕ್ಕಳ ಸ್ತ್ರೀ ಪಾರ್ಟ ಮಾಡತಾರ ಅಂತೀರಿ. ಆದರ ಹಂಗ ಕಾಣವಲ್ಲರಲ್ಲ ! ಇವರು ಎಲ್ಲರೂ ಹೆಣ್ಣುಮಕ್ಕಳ ಅದಾರ ಅಂದ್ರು". "ಅಲ್ರೀ ಅವರೆಲ್ಲ ಗಂಡುಮಕ್ಕಳ" ಅಂದೆ. ಆವಾಗ ಅರು "ನೀವು ಸುಳ್ಳು ಹೇಳತೀರಿ" ಅಂದು ರಂಗಭೂಮಿಯೊಳಗ ಹೋಗಿ "ತಂಗೀ ನೀನು ಯಾವ ಊರಾಕಿ ?" ಅಂದರು. "ತಂಗೀ ಅಲ್ಲರೀ, ನಾವೆಲ್ಲ ತಮ್ಮಗಳು" ಅಂತ ಅಂದರವರು. ಆವಾಗ ಆಶ್ಚರ್ಯ

ಆಗಿ ಈ ರೀತಿ ಪಾರ್ಟು ಮಾಡೋರನ ನಾನು ನೋಡಿಲ್ಲ ಅಂತ ಹೇಳಿ ಉದ್ಗಾರ ತೆರೆದರು. ಅದನ್ನು ಹಂಗ ಅವರು ನೆನಪಿಟ್ಟಿದ್ದರು. ಒಮ್ಮೆ ಮದ್ರಾಸಿನೊಳಗೆ ಪಂಚಾಕ್ಷರ ಗವಾಯಿಯವರ ಪುಣ್ಯತಿಥಿ ಅವರ ಅಧ್ಯಕ್ಷತೆಯೊಳಗ ಮಾಡೀದೀವಿ. ಆವಾಗ ಅವರದು ಮತ್ತೊಮ್ಮೆ ಭೆಟ್ಟಿ ಆಯಿತು. ಹಿಂಗ ಪರಿಚಯವಾಗಿ ಅದು ಮುಂದ ಬೆಳಿತು. ನಾವು ಯಾವಾಗರ ಮದ್ರಾಸಕ ಹೋಗಲಿ, ಬೆಂಗಳೂರಿಗೆ ಹೋಗಲಿ ಅವರ ಮನೆಗೆ ಹೋಗೇ ಬರತೇವಿ.

ಪ್ರ : ಇಂದಿನ ಆಧುನಿಕ ದಿನಮಾನದಲ್ಲಿ ಧರ್ಮ ಮತ್ತು ಆಧ್ಯಾತ್ಮ ಇವುಗಳ ಅವಶ್ಯಕತೆ ಇದೆಯೇ ?

ಉ : ಅವು ಬಹಳ ಮಹತ್ವದ್ದು. ಅವೆಲ್ಲ ಬೇಕೇಬೇಕು. ಮನಶ್ಯಾಂತಿ ಆಗಬೇಕಾದರ ಆಧ್ಯಾತ್ಮ ಬೇಕೇಬೇಕು.

ಪ್ರ : ನೀವು ಯೋಗಾಸಾನ ಹಾಕುತ್ತೀರಿ ಅಂತ ಕೇಳಿದ್ದೀವಿ. ಅದು ನಿಜವೇ ? ಹಾಗಿದ್ದರೆ ಅವುಗಳನ್ನು ಯಾರು ಕಲಿಸಿದರು ?

ಉ : ಸಣ್ಣ ಹುಡುಗ ಇದ್ದಾಗಿನಿಂದ ನಾನು ಹಾಕಿಲ್ಲ. ಆಮೇಲೆ ಎಲ್ಲವನ್ನೂ ಕಲಿತುಕೊಂಡೆ. ಶಿವಯೋಗ ಮಂದಿರದಲ್ಲಿ ನಾನು ಇದ್ದಾಗ, ಇದರ ಬಗ್ಗೆ ತರಬೇತಿ ಕೊಡುತ್ತಿದ್ದರು. ಆವಾಗ ಕಲಕೊಂಡೆ. ಆಮೇಲೆ ಅದನ ಬೆಳಸಿಕೊಂಡ ಬಂದೆ. ಶಿಲಾ ಆಸನ, ಸರ್ವಾಂಗ ಆಸನ ಮತ್ತು ತುಲಾ ಆಸನ ಹಾಕಲಿಕ್ಕೆ ಬರತಾವು. ಆದರೆ, ಈಗ ಎಕ್ಸಿಡೆಂಟ ಆದ ನಂತರ ಸ್ವಲ್ಪ ಎಲುವಿಗೆ ಪೆಟ್ಟು ಆತು. ಹೀಗಾಗಿ ಕೆಲವು ಆಸನ ಹಾಕೋದು ಬಿಟ್ಟೇನಿ.

ಪ್ರ : ನಿಮಗೆ ಕರ್ನಾಟಕ ವಿಶ್ವವಿದ್ಯಾಲಯದವರು ಗೌರವ ಡಾಕ್ಟರೇಟ ಪದವಿ ದಯಪಾಲಿಸಿದ್ದು ನಿಜ. ಆದರೆ, ನಿಮಗೆ ಅತ್ಯಂತ ಸಂತೋಷ ತಂದಂತ ಪ್ರಶಸ್ತಿ ಯಾವುದು ?

ಉ : ಪ್ರಶಸ್ತಿಯಿಂದ ನಮಗ ಸಂತೋಷ ಇಲ್ಲರೀ, ಅವರು ಕೊಟ್ಟಾರ ನಾವು ತಗೊಂಡಿವಿ ಅಷ್ಟ.

ಪ್ರ : ಈ ಪುಣ್ಯಾಶ್ರಮದ ಬಗ್ಗೆ ನೀವು ಇಟ್ಟುಕೊಂಡ ಕನಸುಗಳು ಯಾವವು ?

ಉ : ಇದು ಉಜ್ವಲವಾಗಿ ನಡೆಯಬೇಕು ಅಂತ ಆಶೆ ಇದೆ. ಬೇರೆ ಏನೂ ವಿಚಾರ ಇಟ್ಟುಕೊಂಡಿಲ್ಲ. ಗುರುವಿನ ಇಚ್ಛೆಯಂತೆ ಅದು ಹೆಂಗ-ಹೆಂಗ ಸಾಗತೈತಿ, ಹಂಗ ನೋಡಿಕೊಂಡು ಹೋಗುವುದು ಅಷ್ಟ ನಮ್ಮ ಕೆಲಸ.

ಪ್ರ : ಇಂದಿನ ದೇಶದ ಪರಿಸ್ಥಿತಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು ?

ಉ : ನಮ್ಮ ದೇಶದ ಪಂಜಾಬ ಮತ್ತು ಬೇರೆ ರಾಜ್ಯಗಳಲ್ಲಿ ಹಿಂಸೆ ಮತ್ತು ಇತರ ಗಲಾಟೆಗಳು ನಡೀತಾವು. ಅವು ಆಗಬಾರದು. ಇದರೊಳಗ ಜಾತೀಯತೆ ಕೂಡೈತಿ. ಪ್ರಾಂತೀಯತೆ ಕೂಡೈತಿ. ವರ್ಣಬೇಧಗಳೂ ಕೂಡ್ಯಾವು ಮತ್ತು ಅಧಿಕಾರ ಲಾಲಸೆನೂ ಕೂಡೈತಿ. ನಮ್ಮ

ದೇಶದಲ್ಲಿ ಒಂದಲ್ಲ ಒಂದು ತೊಡಕು ಅದ ಅದಾವು. ಇದಕ್ಕೆ ಉಪಾಯ ಎಂದರೆ ಜನರು ಸುಶಿಕ್ಷಿತರಾಗಬೇಕು. ಸುಶಿಕ್ಷಿತರಾಗಿ ಆಧ್ಯಾತ್ಮವಾದಿಗಳಾಗಬೇಕು. ಆಧ್ಯಾತ್ಮನ ಇವಕ ಉಪಾಯ. ಆಧ್ಯಾತ್ಮ ಬರೀ ಮಾತನಾಡಲಿಕ್ಕೆ ಆಗಬಾರದು. ಅದು ಕಾರ್ಯರೂಪದಲ್ಲಿ ಬರಬೇಕು. ಹಿಂದಿನ ರಾಜ-ಮಹಾರಾಜರು ಆಧ್ಯಾತ್ಮದಿಂದಲೇ ಶಾಂತಿ ಹೊಂದಿದ್ದಾರೆ.

ಪ್ರ : ಅಂಧರಿಗೆ ನೀವು ಕೊಡುವ ಉಪದೇಶವೇನು ?

ಉ : ಅಂಧರು ಸುಶಿಕ್ಷಿತರಾಗಿ, ಸ್ವತಂತ್ರರಾಗಿ ದುಡಕೊಂಡು ತಿನ್ನಬೇಕು. ಮತ್ತು ಅವರು ಕಣ್ಣು ಇದ್ದವರಂಗ ಒಳ್ಳೆಯವರಾಗಿ, ಒಳ್ಳೆಯದು ಮಾಡಿಕೊಂತ ಹೋಗಬೇಕು.

ಪ್ರ : ದೇಶದಲ್ಲಿಯ ಇಂದಿನ ಯುವಕರಿಗೆ ನಿಮ್ಮ ಸಂದೇಶವೇನು ?

ಉ : ಒಳ್ಳೆಯವರಾಗಬೇಕು, ಒಳ್ಳೆಯದು ಮಾಡಬೇಕು. ಎರಡ ಮಾತು; ಇದರಾಗ ಎಲ್ಲ ಐತಿ.

ಶ್ರೀಗಳ ಸಂದರ್ಶನ ತೆಗೆದುಕೊಳ್ಳುವ ಸುದೈವವಕಾಶ ದೊರೆತಿದ್ದು ನಮ್ಮ ಪೂರ್ವಜನ್ಮದ ಪುಣ್ಯ. ಕೃತಕವಾದ ಬದುಕಿನಲ್ಲಿ ಪುಣ್ಯಜೀವಿಯೊಬ್ಬರೊಡನೆ ಅಲ್ಪ ಕಾಲ ಕಳೆಯುವ ಸದಾವಕಾಶ ನಮಗೆ ಈ ಸಮಯದಲ್ಲಿ ದೊರೆಯಿತು. ನಮಗೆ ಸಂದರ್ಶನ ತೆಗೆದುಕೊಳ್ಳಲು ತಿಳಿಸಿದಾಗಲೇ, ಪೂಜ್ಯರನ್ನು ಹೃದಯ ಮಂದಿರದಲ್ಲಿ ಪ್ರತಿಷ್ಠಾಪಿಸಿಕೊಂಡಿದ್ದೆವು. ಅವರ ನಿಜ ದರ್ಶನಕ್ಕೆ ಹೋದಾಗ ಗವಾಯಿಗಳು ನಾವು ಬಂದ ಉದ್ದೇಶ ತಿಳಿದು, ನಮ್ಮನ್ನು ಆದರದಿಂದ ಬರಮಾಡಿಕೊಂಡು ನಾವು ಕೇಳಿದ ಪ್ರತಿಯೊಂದು ಪ್ರಶ್ನೆಗಳಿಗೂ, ಸಮಂಜಸವಾದ ಉತ್ತರವನ್ನು ನೀಡಿ, ನಮ್ಮ ಉದ್ದೇಶವನ್ನು ಸಾರ್ಥಕ ಗೊಳಿಸಿದರು. ಈ ಸಂದರ್ಶನದಿಂದ ಹಾಗೂ ಲೇಖನದಿಂದ ಬದುಕಿನ ಸಾರ್ಥಕತೆಯನ್ನು ಪಡೆದೆವು ಎಂದು ಹೇಳುವುದರೊಂದಿಗೆ, ಇಂಥ ಅವಕಾಶ ಪ್ರಾಪ್ತಿಯಾದದ್ದಕ್ಕಾಗಿ, ಗುರು ಪಂಚಾಕ್ಷರರಿಗೆ ಹೃತ್ಪೂರ್ವಕವಾಗಿ ವಂದಿಸುತ್ತೇವೆ. ಪಂಡಿತ ಪುಟ್ಟರಾಜ ಗವಾಯಿಗಳ ಆಶೀರ್ವಾದ ಸದಾಕಾಲ ಈ ಕನ್ನಡ ನಾಡಿಗರ ಮೇಲೆ ಇರಲೆಂದು ಪ್ರಾರ್ಥಿಸುತ್ತೇವೆ.

(ಪಂ. ಪುಟ್ಟರಾಜ ಕವಿ ಗವಾಯಿಗಳ ಸಂದರ್ಶನವು 'ಜ್ಞಾನದೇಗುಲ' – ಕೃತಿಯಲ್ಲಿ (೧೯೮೯) ಪ್ರಕಟಗೊಂಡದ್ದನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಸಂದರ್ಶನ ಮಾಡಿದ ಮಹನೀಯರಿಗೆ ಮತ್ತು ಕೃತಿಯ ಸಂಪಾದಕರಿಗೆ ಕೃತಜ್ಞತೆಗಳು ಸಲ್ಲುತ್ತವೆ.)

◆◆◆

ಪಂ. ಶ್ರೀ ಬಾಲಚಂದ್ರಶಾಸ್ತ್ರಿಗಳು
ಸಂದರ್ಶನ ದಿ : ೧೩-೧೧-೨೦೧೦

ಸಂದರ್ಶಕರು : ನಿಮ್ಮ ವ್ಯಯಕ್ತಿಕ ಮಾಹಿತಿಯನ್ನು ಕುರಿತು ಹೇಳಿರಿ.

ಕವಿ : ನಮ್ಮದು ಗದಗ ಜಿಲ್ಲೆ, ರೋಣ ತಾಲೂಕಿನ ಚಿಕ್ಕಮಣ್ಣೂರು. ನನ್ನ ಹೆಸರು ಬಾಲಚಂದ್ರ ಸಿದ್ಧಯ್ಯ ಹಿರೇಮಠ. ೧೯೩೫ ಮೇ ೧೫ ರಂದು ತಂದೆ-ಸಿದ್ಧಯ್ಯ ತಾಯಿ-ಬಸಲಿಂಗಮ್ಮ ದಂಪತಿಗಳ ಮಗನಾಗಿ ಜನಿಸಿದೆ. ನಮ್ಮ ತಂದೆಯವರಿಗೆ ೪ ಜನ ಗಂಡು ಮಕ್ಕಳು. ಗಂಡು ಮಕ್ಕಳಲ್ಲಿ ಇಬ್ಬರು ಕಾಲವಾಗಿರುವರು. ದೊಡ್ಡವರಾದ ವಿಶ್ವನಾಥಯ್ಯ ಎನ್ನುವರು ಚಿಕ್ಕ ನರಗುಂದದಲ್ಲಿ ವೈದ್ಯರಾಗಿ ಕೆಲಸ ಮಾಡುತ್ತಿರುವರು.

ನಮ್ಮ ತಂದೆ ಸಿದ್ಧಯ್ಯನವರು ಜ್ಯೋತಿಷ್ಯ ಮತ್ತು ಪುರಾಣ ಪ್ರವಚನ ಪಂಡಿತರು, ಗಾಂವಟಿ ಔಷಧ ಮಾಹಿತಿ ಉಳ್ಳವರು, ಊರಿನಲ್ಲಿ ಮುಂದಾಳುತನದಿಂದ ಕೆಲಸಮಾಡುವರು. ವಾಸ್ತು , ಜ್ಯೋತಿಷ್ಯ, ಪೂಜೆ, ಲಗ್ನ, ಮುಂತಾದ ಪೌರೋಹಿತ್ಯ ಕಾರ್ಯವನ್ನು ಮಾಡುತಿದ್ರು. ನಮ್ಮ ತಾಯಿ ಬಸಲಿಂಗಮ್ಮನವರು ಹೆಚ್ಚಾಗಿ ಶರಣರ, ಸಂತರ ಒಡನಾಟ ಸಹವಾಸದಲ್ಲಿದ್ದವರು. ಪದಗಳನ್ನು ಹಾಡಿ ಹಾಡಿ ಬಂದ ಅನುಭವದಿಂದ ಸ್ವತಃ ಪದಗಳನ್ನು ಬರದು ಹಾಡುತಿದ್ರು. ಹೀಗೆ ತಂದೆ-ತಾಯಿಗಳ ಸಾಹಿತ್ಯಿಕ, ಪೌರಾಣಿಕ ಅಂಶ ನನ್ನಲ್ಲಿ ಆನುವಂಶಿಕವಾಗಿಯೇ ಬೆಳೆದು ಬಂದಿತು. ೧೯೫೦ರಲ್ಲಿ ಕನ್ನಡ ೭ನೇ ಇಯತ್ತೆ ಮುಲ್ಕಿ ಪರೀಕ್ಷೆಯನ್ನು ಪಾಸಾದೆ. ಆ ಕಾಲಕ್ಕೆ ತಾಲೂಕಿಗೊಂದು ಹೈಸ್ಕೂಲ್‌ಗಳಿದ್ದವು. ಮುಂದ ಓದಾಕ ಸಾಧ್ಯ ಆಗಲಿಲ್ಲ . ಕಾರಣ ಊರಿನಲ್ಲಿ ನಡೆಯುತ್ತಿದ್ದಂತಹ ನಾಟಕಗಳಲ್ಲಿ ಪಾತ್ರ ಮಾಡಕ ಹತ್ತಿದೆ.

ನಮ್ಮ ತಂದೆ ನನ್ನಲ್ಲಿರುವ ಸಂಗೀತ ಕುತೂಹಲ ನೋಡಿ ಹಾಗೂ ಬಡತನದ ಪರಿಸ್ಥಿತಿಯಿಂದಾಗಿ ನನ್ನನ್ನು ಗದುಗಿನ ವೀರೇಶ್ವರ ಪುಣ್ಯಾಶ್ರಮದಲ್ಲಿ ಪಂಡಿತ ಪುಟ್ಟರಾಜ ಕವಿಗವಾಯಿಗಳ ಬಳಿ ಸಂಗೀತ ವಿದ್ಯಾಭ್ಯಾಸಕ್ಕೆ ಸೇರಿಸಿದ್ರು. ಇಲ್ಲಿ ನಾನು ಸಂಗೀತದ ಜೊತೆಗೆ ಶಾಸ್ತ್ರಜ್ಞಾನ, ಪುರಾಣ ರಚನೆ, ಪದ-ಪದ್ಯ ಬರೆಯುವುದು ಎಲ್ಲದರ ಜ್ಞಾನವನ್ನು ತಿಳಕೊಂಡೆ. ನಿಜಗುಣರ ಶಾಸ್ತ್ರವನ್ನು ಕರಗತ ಮಾಡಿಕೊಂಡೆನು. ಜೊತೆಗೆ ಶಾಸ್ತ್ರಿಗಳ ಅಭ್ಯಾಸವನ್ನು ಮಾಡಿದೆನು. ೧೯೬೦ರಲ್ಲಿ ಸಾಹಿತ್ಯ ಬರೆಯಲು ಪ್ರಾರಂಭಿಸಿದೆ. ೧೯೭೫ರಿಂದ ಪುರಾಣಗಳನ್ನು ಬರೆಯಲು ಆರಂಭಿಸಿದ ನಾನು ಒಟ್ಟು ೫ ಪುರಾಣ ಕಾವ್ಯಗಳನ್ನು ರಚನಾ ಮಾಡಿದೆ. 'ಹಾವೇರಿಯ ತೃಣ ಮಲ್ಲಿಕಾರ್ಜುನ ಶಿವಾಚಾರ್ಯರ', ಪುರಾಣ ನನ್ನ ಮೊದಲ ಪುರಾಣ

[illegible]

[illegible]

[illegible]

[illegible]

[illegible]

ಕಾವ್ಯವಾಗಿದೆ. 'ಜಿಲ್‌ಕೆರೂರ ಹಿರೇಮಠದ ರುದ್ರಮುನಿ ಶಿವಾಚಾರ್ಯರ ಪುರಾಣ', 'ರಂಭಾಪುರಿ ಪೀಠದ ಜಗದ್ಗುರು ವೀರಗಂಗಾಧರ ಶಿವಾಚಾರ್ಯರ ಪುರಾಣ', 'ಬೆಳವಣಕಿ-ಭೋಪಲಾಪುರದ ಶ್ರೀ ಗುರುಲಿಂಗಮ್ಮನವರ ಪುರಾಣ' ಹಾಗೂ 'ನಾಗನೂರು ರುದ್ರಾಕ್ಷಿಮಠದ ಶಿವಬಸವ ಸ್ವಾಮಿಗಳ ಪುರಾಣ'ವನ್ನು ಬರೆದೆ.

ಪುರಾಣ ಕೃತಿಗಳನ್ನಲ್ಲದೆ 'ಚಿಕ್ಕ ಮಣ್ಣೂರೇಶ' ಎಂಬ ಕಾವ್ಯನಾಮದಿಂದ 'ಚಿಕ್ಕ ಮಣ್ಣೂರೇಶನ ಭಕ್ತಿಗೀತೆಗಳು', 'ಚಿಕ್ಕಮಣ್ಣೂರೇಶನ ಜನಪದ ಗೀತೆಗಳು', 'ಯೋಗದುಯ್ಯಾಲೆ' ಎಂಬ ಮಹಾತ್ಮರನ್ನು ಶರಣರನ್ನು ಕುರಿತ ಹಾಡುಗಳು 'ಜೀವಾನುಭವ' ಎಂಬ ಕವನ ಸಂಕಲನವನ್ನು ಬರೆದು ಪ್ರಕಟ ಮಾಡಿನ್ರೀ.

ಕನ್ನಡ ನಾಡಿನ ಪಂಚಪೀಠದ ಎಲ್ಲ ಮಠಗಳಲ್ಲಿ ಹಳ್ಳಿ ಹಳ್ಳಿಗಳಲ್ಲಿ ನಾನು ಪುರಾಣ ಪ್ರವಚನ ಮಾಡುವ ಮೂಲಕ ಜನರ ಪ್ರೀತಿಯನ್ನ ಗಳಿಸಿರುವೆ. ೧೯೯೫ರಲ್ಲಿ ರಾಜ್ಯಪ್ರಶಸ್ತಿ ಪಡೆದ ನನಗ ಮಠ ಮಾನ್ಯಗಳಿಂದ, ಭಕ್ತರಿಂದ ಹಲವಾರು ಬಿರುದುಗಳು ಬಂದವು.

ಸಂದರ್ಶಕರು : ಕಾವ್ಯ ರಚನೆಯ ಪ್ರೇರಣೆ (ಸ್ವಯಂ-ಅನ್ಯ)ಗಳಾವುವು ?

ಕವಿ : ನಮ್ಮ ತಂದೆಯವರು ಪುರಾಣಿಕರಿದ್ದರು. ಈ ಮನೆತನದೊಳಗ ಸಂಗೀತಗಾರರಿದ್ದರು. ಆವರ ಒಂದು ಪುಣ್ಯ ಕೊಡುಗೆ ದೇಣಿಗೆಯೋ ನನ್ನಲ್ಲಿ ಬಂದು ಗವಾಯಿಗಳ ಆಶ್ರಮ ಸೇರಿದೆ. ಪುಟ್ಟರಾಜ ಗವಾಯಿಗಳ ಶಿಷ್ಯನಾದೆ ಸಂಗೀತ ಸಾಹಿತ್ಯ ಎರಡನ್ನು ಅಲ್ಲೆ ಅಭ್ಯಾಸ ಮಾಡಿದೆ ರಂಗಭೂಮಿಯಲ್ಲಿ ಪಾರ್ಟು ಮಾಡ್ತಿದ್ದೆ, ಅವರು ನನಗ ಕೀರ್ತನ ಹೇಳಿಕೊಡೋರು, ನಿಜಗುಣರ ಶಾಸ್ತ್ರ ಮತ್ತು ಕಾವ್ಯಗಳನ್ನು, ದೇವಿ ಪುರಾಣವನ್ನು ಹೇಳೋರು. ಅಮೇಲೆ ಕೀರ್ತನದಲ್ಲಿ ಪದಗಳನ್ನು ಹೇಳಿ ಕೊಡ್ರಿ ಅಂದಾಗ, ನೀನ ಮಾಡಿಕೋ ಹೋಗು ತಾನ ಬಂದ ಬಿಡತೈತಿ ಅನ್ನುವರು. ನಾವು ಪ್ರಾಸ ಇಲ್ಲದ ಹೆಂಗರ ಮಾಡಕೊಂಡು ಹೋದಾಗ ತಿದ್ದಿ ಹಿಂಗಪಾ ಎಂದು ಹೇಳುವರು. ಮೊದಲಿಗೆ ನಾನು ಕೀರ್ತನದಲ್ಲಿ ಹಾಡುಗಳನ್ನು ರಚನೆ ಮಾಡಲಿಕ್ಕೆ ಹತ್ತಿದೆನು. ದೇವಿ ಪುರಾಣ ಓದಿ-ಓದಿ ಭಾಮಿನಿ ಷಟ್ಪದಿ ೧೪ ಮಾತ್ರಾ ೧೪ ಮಾತ್ರಾ ೨೧ ಮಾತ್ರಾ ಮೇಲೊಂದು ಗುರು ಇದರಲ್ಲಿ ನಾನು ಯಾಕ ಕಾವ್ಯ ರಚನಾ ಮಾಡಬಾರದು ಅಂತ ಮೊದಲಿಗೆ ಒಂದು ನಾಲ್ಕಾರು ಪದ್ಯಗಳನ್ನು ಬರೆದು ಪುಟ್ಟರಾಜ ಗವಾಯಿಗಳಿಗೆ ತೋರಿಸಿದೆ. ಅದು ದ್ವಿರುಕ್ತಿ ಆಗಬಾರದು. ಅದರಲ್ಲಿ ಜಗಣ (U-U) ಇರಬಾರದು. ಪಿಷ್ಟಪೇಷಣ ಆಗಬಾರದು. ಪಿಷ್ಟಪೇಷಣ ಅಂದ್ರ ಬೀಸಿದ ಹಿಟ್ಟ ಬೀಸುದು. ಒಮ್ಮೆ ಬಳಸಿದ ಪದ ಮತ್ತೊಮ್ಮೆ ಬರಬಾರದು. ಉದಾ : ನೆರೆ ಎನ್ನುದೊಂದು ಶಬ್ದ ಚೀಪಗಲ್ಲನ್ನ ಇಟ್ಟಂಗ ನೆರೆ, ಹೊರೆ, ಓಜ ಅಂತಿರತಾವು. ಚೆನ್ನಾಗಿ, ಚೆನ್ನಾಗಿ, ಚೆನ್ನಾಗಿ, ಅಂಥ ಪದ್ಯದಲ್ಲಿ ಮೇಲಿಂದ ಮೇಲೆ ಬಳಸಬಾರದಪಾ ಅಂತಾ ಹೇಳತ್ತಿದ್ದರು. ಅಶ್ಲೀಲ ಶಬ್ದಗಳಿರಬಾರದು. ಶಿಥಿಲವಾಗಿರಬಾರದು. ಗಂಭೀರವಾಗಿರಬೇಕು. ಕಾವ್ಯಕನ್ನಿಕೆ ಅಲಂಕಾರವುಳ್ಳವಳಾಗಿರಬೇಕು. ಅಂದರೆ ಭಾವಾಲಂಕಾರ,

ಅರ್ಥಾಲಂಕಾರ ಹಾಗೂ ಶಬ್ದಾಲಂಕಾರವಿರಬೇಕು. ಶೃಂಗಾರ ರಸ ಹೇಳಬೇಕಾದರೆ ಭ್ರಮಾಲಂಕಾರವಿರಬೇಕು. ಕಾವ್ಯಕನ್ನಿಕೆಯನ್ನು ಈ ರೀತಿ ಶೃಂಗರ ಮಾಡಬೇಕು ಅಂತ ಪಾಠ ಹೇಳಿ ಮತ್ತು ಪದ್ಯ ಬರಿ ಅಂತ ಹೇಳುವರು. ಅದರಿಂದ ನನಗ ಹುಮ್ಮಸ್ಸು ಬಂದು ಪ್ರಥಮದಲ್ಲಿ ನಾನು ಹಾವೇರಿಯ 'ತೃಣಮಲ್ಲಿಕಾರ್ಜುನ ಶಿವಾಚಾರ್ಯರ ಪುರಾಣ'ವನ್ನು ಬರೆದೆ. ಕಾವ್ಯ ಬರೆದಾಗ ನಮ್ಮ ತಪ್ಪು ನಮಗ ಗೊತ್ತಾಗೂದಿಲ್ಲ. ಬನ್ನಿಕೊಪ್ಪದ ಅಮರನಾಥ ಶಾಸ್ತ್ರಿಗಳು ಪಂಡಿತರು, ಆಸ್ಥಾನ ವಿದ್ವಾನ್ ಅವರ ಬಳಿ ತೋರಿಸಾಕ ಅಲ್ಲಿ ಹೋದೆ. ಅದನ್ನು ಆವರು ತಿದ್ದಿದರು. ಹೀಗೆ ಹೀಗಾಗಬೇಕಪ್ಪಾ ಅಂತ ಹೇಳುವರು.

ಉದಾ : ಲಘಮತಿಯು ನಾನಿಹೆನು ಹಂಗಲ್ಲ, 'ಕೀಳುಮತಿಯು ನಾನಿಹೆನು ಅಂತ ಬರೆದಿದ್ದೆ.' 'ಕೀಳುಮತಿ ಬ್ಯಾಡ ತಗಿ, ಅದನ್ನು ಲಘಮತಿಯು ನಾನಿಹೆನು' ಮಾಡು ಎಂದಾಗಿ ತಿದ್ದಿ ಪದ್ಯಗಳನ್ನು ಹೇಳಿಸಿದರು. ಇಡಿ ಪುರಾಣ ಸಂಪೂರ್ಣ ಅವರ ಕೈಯಾಗ ದಾರಿ ಹಿಡಕೊಂಡೇರಿ. ಅಮರನಾಥ ಶಾಸ್ತ್ರಿಗಳು, ನಮ್ಮ ಪುಟ್ಟರಾಜ ಗವಾಯಿಗಳು, ಗಂಗಾಧರ ಶಿವಾಚಾರ್ಯರು ಪುರಾಣಗಳನ್ನು ತಿದ್ದುವಲ್ಲಿ ನನಗೆ ಮಾರ್ಗದರ್ಶಕರಾದರು.

ಮುಂದೆ ಅಕಸ್ಮಾತ ರಂಭಾಪುರಿ ಜಗದ್ಗುರುಗಳ ಪುರಾಣ ಬರೆಯುವ ಹೊತ್ತು ನನಗ ಬಂತು, ಡಾವಣಗೆರೆ ಕ್ಯಾಂಪಿಗೆ ಪುರಾಣ ಹೇಳಾಕ ಅವರಲ್ಲಿಗೆ ಹೋದಾಗ, 'ಗುರುಬಂದಾನ ಜಗದ್ಗುರು ಬಂದಾನ' ಅಂತಾ ಪದ್ಯ ಮಾಡಿ ಹಾಡಿಸಿದೆ. ಬಹಳ ಆನಂದ ಪಟ್ಟರು ನಾಳೆ ಲಿಂಗದೊಳಗಾದ ಬಳಿಕ ನನ್ನ ಪುರಾಣನ ನೀನೆ ಬರೆಯೋದು ಅಂದರು. ಈಗ್ಯಾಕರೀ ಬುದ್ಧಿ ಅ ಮಾತು ಅಂದೆ. ಮುಂದ ನೀನು ರಾಜ್ಯಪ್ರಶಸ್ತಿ ಪಡಿತಿದಿ ಬರಿ ನಂದs ನೀನ ಪುರಾಣ ಬರೆಯೋದು ಅಂದರು–ಲಿಂಗದೊಳಗಾದ ಬಳಿಕ ನನ್ನ ಪಾಲಿಗೆ ಬರಿಲಿಕ್ಕೆ ಬಂತದು. ಹರಪನಳ್ಳಿ ಸ್ವಾಮಿಗಳು ಅದನ್ನು ವಚನಕೊಟ್ಟ ಪ್ರಕಾರ ಪ್ರಿಂಟ ಮಾಡಿಸಿದರು. ಬಳಿಕ ಒಂದೆರಡು ಪುರಾಣ ಹೊರಬಂದ ಮೇಲೆ 'ಬೆಳವಣಿಕಿ ಗುರುಲಿಂಗಮ್ಮನವರದು', 'ಬಿಲ್‌ಕೆರೂರು ಪಟ್ಟದೇವರು ಶ್ರೀ ರುದ್ರಮುನಿ ಶಿವಾಚಾರ್ಯರು', 'ಬೆಳಗಾಂವ ನಾಗನೂರು ರುದ್ರಾಕ್ಷಿ ಮಠದ ಶಿವಬಸವಸ್ವಾಮಿಗಳು' ಅವರ ಪುರಾಣವನ್ನು ಬರೆದೆ. ಒಟ್ಟು ಐದು ಪುರಾಣಗಳನ್ನು ನಾನು ಬರೆದೆ ಕವಿಗಳು ಷಟ್ಪದಿಯಲ್ಲಿಯೇ ನಮಗ ಪತ್ರವನ್ನು ಬರೆಯುತ್ತಿದ್ದರು. ನೀವು ಷಟ್ಪದಿಯಲ್ಲಿಯೇ ನಮಗೆ ಉತ್ತರವನ್ನು ಬರೆಯಬೇಕೆಂದು ಹೇಳುತ್ತಿದ್ದರು. ಕವಿತ್ವ ಅಂದರೆ ಪಂಡಿತರು ಅನ್ನೋರು.

ಸಂದರ್ಶಕರು : ಕಾವ್ಯ ರಚನೆಯ ಉದ್ದೇಶಗಳು ಯಾವುವು ?

ಕವಿ : ಕಾವ್ಯ ಕಥಾ ನಾಯಕ/ಕಿಯರು ಮಹಾತ್ಮರಿರುವರು. ಅವರ ಸೇವಾ ಮಾಡಿದ್ಹಂಗಾಗ್ತವ. ಪ್ರಚಾರ ಮಾಡಿದಂತಾಗ್ತದ. ಕವಿತ್ವದ ಪ್ರಚಾರದಿಂದ ಶಾಶ್ವತವಾಗಿ ಉಳಿತದ. ಶರೀರ ನಶ್ವರವಾದುದು. ಹಿಂದೆ ಸರ್ವಜ್ಞ ನನ್ನ ಸಾಹಿತ್ಯ ತಗೋರಿ ಅಂತ ಮನಿ ಮನಿಗೆ ಅಡ್ಡಾಡಿದ. ಅದನ್ನು ಕೇಳುವರು ಆಗ ಯಾರು ಇರಲಿಲ್ಲ ಅವರು ಈಗ ಬೆಳಕಿಗೆ ಬಂದರು.

ನಾವು ಸಣ್ಣವರಿದ್ದಾಗ ಮಾಡಿ ಮಾಡಿ ಕೆಟ್ಟರು ಅಂತ ಬಸವಣ್ಣನವರ ವಚನ ಹೇಳುತ್ತಿದ್ದದಷ್ಟು ಈಗಿನ್ಹಾಂಗ ಇಷ್ಟೊಂದು ಪ್ರಚಾರ ಆಗ ಇರಲಿಲ್ಲ. ಒಂದ ಕಾಲಕ್ಕ ನಮ್ಮ ಸಾಹಿತ್ಯವು ಬೆಳಕಿಗೆ ಬರಬೋದು ಅನ್ನುವ ವಿಚಾರ, ರಾಘವಾಂಕ, ಹರಿಹರ ಕವಿಗಳು 'ಜನ ಬದುಕಲೆಂದು ಸಾಹಿತ್ಯಮಂ ಬರೆಯುವೆಂ' ಅಂಥ ಹೇಳ್ತಾರ. ಅಡ್ಡಾಡಿದರೂ ಅ ಕಾಲಕ್ಕೆ ಅವರದು ಯಾರು ಕೇಳಿಲ್ಲ, ಹೀಗೆ ನಿಷ್ಕಾಮ ಬದ್ಧಿಯಿಂದ ಮಾಡಿದ್ದು ಕನ್ನಡ ತಾಯಿಯ ನಾಡಿಗೆ ಇದೊಂದು ಕೊಡುಗೆ. ನಿಷ್ಕಾಮದಿಂದ ಬರೆದಂತ ಕಾವ್ಯ ನಾಟಕ ಶಾಶ್ವತ ಅದಾವು. ರೊಕ್ಕಕ್ಕ ಬರೆದದ್ದು ಅಷ್ಟು ಬೆಳಕಿಗೆ ಬಂದಿಲ್ಲ. ಉದಾ : ಕಲಬುರ್ಗಿ ಶರಣ ಬಸವೇಶ್ವರ ಪುರಾಣ. ದ್ಯಾಂಪುರದ ಕಲ್ಲಿನಾಥ ಶಾಸ್ತ್ರಿಗಳ ಮಗ ಸಿದ್ಧಯ್ಯ ಪುರಾಣಿಕಮಠ ಸಾಯುತ್ತಿದ್ದಾಗ, ಶರಣಪ್ಪಗ ಬೇಡಿಕೊಂಡು ನಿನ್ನ ಪುರಾಣ ಬರೆತೀನಿ ಮಗನ ಬದುಕಿಸಿ ಅಂತ ಅಂಗಾರ ಹಚ್ಚಿದರು, ಮಗ ಬದುಕಿದ. ಅವರು ಭಕ್ತಿಯಿಂದ ಬರೆದರು. ಯಾವುದೇ ಡಾಕ್ಟರೇಟಾಗಲಿ, ದೊಡ್ಡ ಪದವಿಯಾಗಲಿ ಪಡೆಯುವ ಉದ್ದೇಶವಿಲ್ಲ. ಮಹಾತ್ಮರ ಸೇವೆ ಮಾಡಿ ನಮ್ಮ ಕೃತಿ ಉಳಿಸಬೇಕೆಂಬುದಷ್ಟೆ. ಶರೀರನಶ್ವರ, ಕೆಟ್ಟು ಹೋಗ್ತದ ಕೆಡುವ ಶರೀರರ ಸಫಲತೆಗಾಗಿ, ಜನ್ಮ ಸಾರ್ಥಕತೆಗಾಗಿ ಕಾವ್ಯ ಬರದೇನ್ರಿ.

ಸಂದರ್ಶಕರು : ಛಂದಸ್ಸನ್ನು ಯಾವ ರೀತಿ ವಿವೇಚಿಸಿದಿರಿ ? ಅದು ರಚನಾ ತೊಡಕೇನು ?

ಕವಿ : ೧೯೫೦ನೇ ಇಸ್ವಿಗಿಂತ ಮುಂಚೆ ನಾವು ಕನ್ನಡ ಕಲಿಯುವಾಗ ೪ನೇ ಇಯತ್ತೆಯಿಂದ ಹರಿಶ್ಚಂದ್ರ ಕಾವ್ಯವನ್ನು ಅಭ್ಯಾಸ ಮಾಡಿ, ೭ನೇ ಇಯತ್ತೆಗೆ ಬರುವಷ್ಟರಲ್ಲಿ ಚವಡಿಯ ಸಂಗನಬಸಯ್ಯ ಮಾಸ್ತರರು ಗುರು ಲಘು ಹಾಕಿ ಛಂದಸ್ಸಿನ ಜ್ಞಾನ ಮಾಡಿಕೊಟ್ಟರು. ಆ ಜ್ಞಾನ ಸಂಸ್ಕೃತ ಓದುವಾಗ ಗುರುಗಳ ಹೇಳಿಕೆಯಿಂದ ಜ್ಞಾನ ಆಗತಾ ಬಂತು. ಒಂದು ನೇಮೈತಿರಿ 'ಮಾರಾರಿಯ ಕೃಪೆಯೊಂದಿಲ್ಲದಿರೆ ಕಾವ್ಯಮಂ ರಚಿಸುವುದು ಸಾಧ್ಯಮೆ'. ಎನ್ನುವನು ಹರಿಹರ ಕವಿ. ಋಷಿ ಅಂಶವು ಇರಬೇಕು ಅಂತಾನ 'ನಾಲಿಗೆಯಂ ಅಭವಂಗೆ ಮಾರಿದೆಂ ಮತ್ತ್ಯಾರಂ ನುತಿಪೆಂ ನರರೇಂ ಸುರರೇಂ' ಎಂದು ಷಡಕ್ಷರ ಕವಿ ಹೇಳತಾನ. ಕವಿತ್ವ ಎಲ್ಲರಿಗೂ ಸಾದ್ಯವಿಲ್ಲ. ಒಮ್ಮಿಂದೊಮ್ಮೆಗೆ ತಲೆಯಲ್ಲಿ ವಿಚಾರ ಬಂತಂದ್ರ ಬರದಿಂದ ಮುಂದಿನ ಕೆಲಸ ಮಾಡತೀವ್ರಿ. ಅದನ್ನು ದೇಣಿಗೆ ಗುರುಕೃಪಾ ಅಂತಾರ. ಅದುಬೇಕು. ಮುಂಜಾನೆ ೬ ರಿಂದ ೧೦ರ ವರೆಗೆ ಕಾವ್ಯ ಬರೆಯುವ ಮೂಡು ಬರತ್ತದರಿ. ಸಾಯಂಕಾಲ ೪ ಗಂಟೆ ಹೊತ್ತಿಗೆ. ಆಮೇಲೆ ಗ್ವಾಡಿ ಗ್ವಾಡಿ ಹಾದರೂ ಏನು ಬರೂದಿಲ್ಲ ಮೂಡ ಬಂದರ ಸುಮ್ಮನೆ ಕುಂದರಗೊಡುದಿಲ್ಲ, ಏನರ ಬರೀತೀವರಿ.

ಸಂದರ್ಶಕರು : ಕಾವ್ಯರಚನೆಯ ಹಿನ್ನಲೆಯಲ್ಲಿರುವ ಪ್ರಭಾವಗಳಾವವು ?

ಕವಿ : ಮಠ ಮಾನ್ಯಗಳಿಗೆ ಪುರಾಣ ಪ್ರವಚನ ಮಾಡಾಕ ಹೋದಾಗ, ಆ ಮಠದಲ್ಲಿ ಒಬ್ಬ ಮಹಾತ್ಮ ತಪಸ್ವಿ ಪವಾಡ ಪುರುಷ ಆಗಿದ್ದರ ಗದ್ಯಭಾಗದಲ್ಲಿ ಅದನ್ನು ಸಂಗ್ರಹ ಮಾಡಿ

ಇಟ್ಟಿರ್ತಾರ. ಈ ಪುರಾಣ ಬರಿಬೇಕಂತ ಕೊಡ್ತಾರಿ. ಮೊದಲು ಗದ್ಯಭಾಗದಲ್ಲಿ ಸಂಗ್ರಹ ಮಾಡಬೇಕು. ಇಲ್ಲಂದ್ರ ಅವರು ಪವಾಡ ಮಾಡಿದ ಜಾಗಕ್ಕೆ ಹೋಗಿ ಸಂಗ್ರಹ ಮಾಡಿಕೊಂಡು ಬರ್ತೀವರಿ. ರಂಭಾಪುರಿ ಜಗದ್ಗುರುಗಳು ಪುರಾಣವನ್ನು ಬರಿಬೇಕಾದರ ಅವರು ಅನುಷ್ಠಾನ ಮಾಡಿದಲ್ಲೆಲ್ಲ ಹೋಗಿ ದೃಶ್ಯಕಾವ್ಯವನ್ನು ಸಂಗ್ರಹಿಸಿತೀವಿ. ಕಾವ್ಯಕ್ಕ ಹದಿನೆಂಟು ಲಕ್ಷಣಗಳಾದ ಉದಯ, ಮಧ್ಯಾಹ್ನ, ಸಾಯಂಕಾಲ, ನದಿ, ಪರ್ವತ, ಸಮುದ್ರ ವರ್ಣನೆ, ಕೈಲಾಸ ವರ್ಣನೆ, ಗ್ರಾಮ, ಕಥಾನಾಯಕನ ಜನ್ಮ, ತಂದೆ-ತಾಯಿ ವರ್ಣನೆ, ಕಥಾನಾಯಕನ ವಿಧ್ಯಾಭ್ಯಾಸ. ಸೂರ್ಯೋದಯ, ಸೂರ್ಯಾಸ್ತ, (ಋತುಮಾನಗಳು) ಬ್ಯಾಸಗಿ, ಚಳಿಗಾಲ, ಮಳಿಗಾಲ ವರ್ಣನೆ, ಇಂಥವೆಲ್ಲ ಇದ್ರನs ಕಾವ್ಯ ಪೂರ್ಣ ಆಗತದ. ಇಲ್ಲಂದ್ರರ ವಿಶ್ವ ವಿದ್ಯಾಲಯಕ್ಕ ಹೋದಾಗ ಇದರಲ್ಲಿ ಇಂಥದೊಂದು ಇಲ್ಲವೆಂದು ಖಂಡನೆ ಮಾಡ್ತಾರ.

ಸಂದರ್ಶಕರು : ದೈವೀ ಅನುಭೂತಿ ಮತ್ತು ಕಾವ್ಯ ರಚನೆಯ ಸಂಬಂಧ ಕುರಿತು ಏನು ಹೇಳುವಿರಿ ? ನಿಮಗೆ ದೈವಾನುಭೂತಿ ಉಂಟಾಗುವುದೇ ?

ಕವಿ : ದೈವಿ ಆನುಭೂತಿ ಮತ್ತು ಕಾವ್ಯ ರಚನೆಯ ಸಂಬಂಧವು ತಾಯಿಯ ಗರ್ಭದಲ್ಲಿನ ಶಿಶುವಿನ ಸಂಬಂಧದಂತಿದೆ. ತಾಯಿ ಹೊಟ್ಟೆಯಲ್ಲಿರುವ ಮಗು ಹೇಗಿದೆಂದು ತಾಯಿಗೆ ಗೊತ್ತಿಲ್ಲ. ಹೊಟ್ಟೆಯಲ್ಲಿರುವ ಮಗುವಿಗೆ ತಾಯಿ ಹೇಗಿದ್ದಾಳೆಂದು ಗೊತ್ತಿಲ್ಲ. ಗರ್ಭ ಬಿಟ್ಟು ಹೊರಗ ಬಂದಾಗ ತಾಯಿ ನೋಡಿ ಆನಂದ ಪಡತಾಳ, ಅದು ತಾಯಿನ್ನ ಅಪ್ಪಗೊಳತದ. ಹಂಗ ಕವಿಗೆ ಮಕ್ಕಳ್ಯಾರು ? ಅಂದ್ರ ಕಾವ್ಯಗಳು. ಏನರ ಕಳಕೊಂಡಾಗ ದುಃಖವಾಗುವ್ಹಂಗ ಕವಿ ತಾನು ರಚನೆ ಮಾಡಿದ ಕಾವ್ಯ ಕಳಕೊಂಡರ ಬಾಳ ದುಃಖ ಪಡತಾನ. 'ಇಂತಪ್ಪ ನಾನು ಹರಿಶ್ಚಂದ್ರ ಕಾವ್ಯಂ ರಚನೆ ಮಾಡಿ ಹಂಪೆಯ ವಿರೂಪಾಕ್ಷಂಗೆ ಕೊಟ್ಟು ಮದುವೆಯ ಮಾಡಿಕೊಡತಿನಿ' ಇಂತಪ್ಪ ನನ್ನ ಸರಿಸಮಾನರು ಯಾರಿದ್ದಾರ ಅನ್ನುವನು ರಾಘವಾಂಕ ಕವಿ ತನ್ನ ಕಾವ್ಯ ಓದಿ ಆನಂದ ಪಡತಾನ ತಾಯಿ ಮಕ್ಕಳ ಸಂಬಂಧ. ಇದ್ಹಾಂಗ ದೈವಾನುಭೂತಿರಿ.

ಸಂದರ್ಶಕರು : ಕಾವ್ಯ ಕಲೆಯ ಸಾಧನೆಯನ್ನು ಹೇಗೆ ಮಾಡಿರುವಿರಿ ?

ಕವಿ : ಅದೊಂದು ಕಲೆ ಅದಕ್ಕ ದೇಣಿಗೆಬೇಕು ಪ್ರತಿಯೊಂದಕ್ಕೂ ದೇವರ ದೇಣಿಗೆಬೇಕು. ಸಂಗೀತಗಾರನಿಗೆ ದೇಣಿಗೆಯಿದ್ದರ ದೌಡ ಬಂದ ಬಿಡತೈತಿ. ದೇಣಿಗೆ ಅನ್ನೋದು ಪೂರ್ವಜನ್ಮದ ಪುಣ್ಯ. ಅದು ಇತ್ತಂದರ ಒಮ್ಮೆ ಹೇಳಿದ್ರ ಸಾಕು, ತನ್ನಿಂದ ತಾನು ಶುರು ಆಗಿಬಿಡ್ತದ. ಮಾರಾರಿಯ ಕೃಪೆಯೊಂದಿಲ್ಲದೆ ಕಾವ್ಯಂ ರಚಿಸುವುದು ಸಾಧ್ಯವೇ ? ಅದಕ ನೀನು ಇಂತದನ್ನ ಬರಿ ಅಂತ ಭಗವಂತನ ಪ್ರೇರಣೆ ಆಗಬೇಕು.

ಬೆಟಗೇರಿಯ ದೇವಾಂಗ ಸಮಾಜದವರು ಬನಶಂಕರಿಯ ಸುಪ್ರಭಾತ ಬರಿ ಅಂತ ನನ್ನ ಹತ್ತಿರ ಬಂದರಿ. ಹಂಗೆಲ್ಲಾ ನಾನು ಬರೆಯುದಿಲ್ಲ. ಆಕಿ ಪ್ರೇರಣೆ ಆದರ ಬರೀತಿನಿ ಅಂದೆ. ಪ್ರೇರಣೆ ಪಡೆಯುದಕ ದಿನಾ ಬನಶಂಕರಿ ಗುಡಿಗೆ ಹೋಗಾಕಹತ್ತಿದೆ. ಒಂದು ದಿನ

ಒಂದು ಹೂ ಉದರಿತು. ಆವಾಗ ರಾತ್ರಿಯೇ ಬರೆಯುದಕ್ಕ ಶುರು ಆತರಿ. ಕಾವ್ಯ ಬರೆಯಲು ಕುಂತ್ರ ಮೈಯಲ್ಲ ಜಡ ಆಗತದ. ಮೈಯಾಗ ದಾಳಿ ಬಂದ್ಹಂಗ ಆಗುತ್ತ, ಬರ್‍ಯಾಕತ್ರ ನಮ್ಮನ್ನು ಮಾತಾಡುಸುವಂತಿಲ್ಲ. ಒಮ್ಮೆ ಸ್ನಾನಕ್ಕ ಹೊಂಟಾಗ ಕಾವ್ಯ ಬರೆಯುವ ಮೂಡ ಬಂತು, ಬರ್‍ಯಾಕ ಕುಂತ್ರ ಪೆನ್ನಾಗಿನ ಮಸಿ ತೀರಿತು. ಎರಡು ಗಂಟೆ ಆಗಿತ್ತು. ಮೂಡ ಬಂತಂದ್ರ ಪ್ರಜ್ಞಾ ತಪ್ಪಿದಂಗಾಗುತ್ತರಿ. ತಪ್ಪಿದ್ದರ ಕಾವ್ಯ ಮುಂದ ಹೋಗುದಿಲ್ಲ. ಚೆಕ್ ಮಾಡಿ ತಪ್ಪಿದ್ದನ್ನ ಸರಿಪಡಿಸಿಕೊಂಡಾಗ ಕಾವ್ಯ ಮುಂದ ಹೋಗುತ್ತರಿ, ಬರಿಯು ಮೂಡ ಹೋತಂದ್ರ ಅಡ್ಡಾಡುದು. ಕಂದಗಲ್ಲ ಹನಮಂತರಾಯರು ಬರೆಯುವಾಗ ಒಂದು ಕಿತ್ತಲಿ ಚಹಾ, ಎಲಿ, ಅಡಕಿ, ಚುಟ್ಟಾ, ತಂಬಾಕ ಇಟಗೊಂಡು ಬರಿತಿದ್ದರು. ಪುರಾಣ ಬರೆಯುವಂತ ಕವಿಗಳು ಒಮ್ಮೊಮ್ಮೆ ಇಂಥಹ ಚಟಾಧೀನರಾಗುವ ಹೊತ್ತು ಬರತಾವ. ನಾನು ಬ್ಯಾಸರಾದರ ಸ್ವಲ್ಪ ಚಹಾ ಕುಡೀತಿದ್ದೆ. ಶಬ್ದ ತಿಳಿಲಿಲ್ಲಂದ್ರ ವಟಾವಟಾ ಆನಕೊಂಡ ಅಡ್ಡಾಡತಿದ್ದೆ. ಎಲಿ ಆಡಿಕೆ ಹಾಕ್ಕೊಂಡು ಅ ಕಡೆ ಈ ಕಡೆ ಅಡ್ಡಾಡಕೊಂತ ಬಜಾರದಾಗ ಹೊಂಟಾಗ ಒಂದು ಶಬ್ದ ಚಹಾದ ಅಂಗಡಿ ಬೋರ್ಡ ಮೇಲೆ ಸಿಕ್ತು. ಪಂಡಿತರು ಸಿಕ್ಕರ ಅವರ ಜೊತೆ ಚರ್ಚೆ ಮಾಡಿ ಕೊರತೆ ತುಂಬರಿ ಅಂತ ಕೇಳತೇನಿ.

ಸಂದರ್ಶಕರು : ಕಾವ್ಯದಲ್ಲಿ ಸಾಮಾಜಿಕ ಚಿತ್ರಣ ಮಾಡಿದ್ದೀರಾ ಹೇಗೆ !

ಕವಿ : ಸಮಯ ಸಂದರ್ಭಕ್ಕನುಸಾರವಾಗಿ ಸಮಾಜ ಚಿತ್ರಣ ಮಾಡಿರುವೆನು. 'ಸಮಂ ವದಂತಿ ಸಮಾಜಂ' ಒಂದಾಗಿ ಕೂಡಿಕೊಂಡು ಹೋಗುವುದೇ ಸಮಾಜ. ಒಬ್ಬ ಸ್ವಾಮಿಯನ್ನು ಇಬ್ಬರು ಊಟಕ್ಕೆ ಕರದಾಗ ಅವರವರಲ್ಲಿ ನಮ್ಮ ಮನೆಗೆ ಮೊದಲು ಬರಬೇಕು ಎಂದು ಜಗಳ ಪ್ರಾರಂಭ ಆದಾಗ ಸಮಾಜಬೋಧನೆಯನ್ನ ಅವರು ಮಾಡಬೇಕಾಗುತ್ತ. ಸಮಾಜ ಬಿಟ್ಟು ಬದಕಾಕ ಆಗುವುದಿಲ್ಲ. ನಾಕು ಮಂದಿ ಜೋಡಿ ಹೊಂದಿಕೊಂಡು ಹೋಗಬೇಕಾಗುತ್ತ. ನಾಳೆ ಸತ್ತರ ಹೆಣ ಹೊರಗ ಹೋಗುದ ಕಷ್ಟ ಆಗತೈತಿ. ಅಂಥ ಉಪದೇಶ ಮಾಡಬೇಕಾಗುತ್ತ. ಒಂದು ಮಠದ ಬಗ್ಗೆ ಪುರಾಣ ಬರೆಯುವಾಗಲೂ ಹಿಂಗ ಪುರಾಣ ಬರೆಯುದಕ್ಕ ಹತ್ತೀವಿ, ಇದರ ಬಗ್ಗೆ ನಿಮ್ಮ ಆತಂಕ ಇದ್ದರ ತಿಳಿಸಬೇಕು. ಅಂತ ಒಮ್ಮೆ ಅಲ್ಲರಿ ಮೂರು ಸಲ ಪತ್ರಿಕೆಯಲ್ಲಿ ಜಾಹೀರಾತು ಪ್ರಕಟಣೆ ಕೊಡ್ತೀವಿ. ಆಮೇಲೆ ವಿಷಯ ಸಂಗ್ರಹ ಮಾಡಿ ಬರೀತೀವಿರಿ. ಬರಿಯುವಾಗ ಸುಮ್ಮನಿದ್ದು ತಯಾರಾದ ಮೇಲೆ ನನ್ನ ಹೆಸರು ನಮ್ಮಪ್ಪನ ಹೆಸರು ಬಂದಿಲ್ಲ ಅಂತ ಕಂಪ್ಲೇಟ ತೆಗೀತಾರ. ಹಂಗ ಬಂದು ಕಾರುಗಾಡಿ ಮುಟ್ಟಿ ನಮಸ್ಕಾರ ಮಾಡಿದರ ಪವಾಡ ಆಗುತ್ತನಃ ಇಲ್ಲ. ಪುರಾಣ ಬರೆಯುವಾಗ ಇಂಥದ್ದರ ಬಗೆಗೆ ನಾವು ಪುರಾಣ ಬರೀತೀವಿ ಏನಾದರೂ ಮಾಹಿತಿ ಇದ್ದರ ಈ ವಿಳಾಸಕ್ಕ ತಿಳಿಸಬೇಕಂತ ಅಂತ ಪೇಪರಿಗೆ ಹಾಕಸ್ತೀವಿ.

ಸಂದರ್ಶಕರು : ಕಾವ್ಯ ರಚನೆಯಿಂದ ಹಣ ಕೀರ್ತಿ, ಗೌರವಾರಾಧನೆಗಳು ಎಷ್ಟರ ಮಟ್ಟಿಗೆ ಸಾಧ್ಯವಾಗಿವೆ ?

ಕವಿ : ಈಗ ಪ್ರತಿಯೊಂದಕ್ಕೂ ಒಂದು ಬೆಲೆ ಬಂತು. ಒಂದು ಹಾಡು ಮಾಡಿ ಕೊಡ್ರಿ ಅಂದ್ರ ಪುಕ್ಕಟ ಮಾಡಿಕೊಟ್ಟ ಬಿಡತ್ತಿದ್ದೀವಿರಿ, ಧರ್ಮ ಪ್ರಚಾರ ಅಂತಿದ್ದೀವಿ. ಇತ್ತಿತ್ತಲಾಗಿ ಏನಾತಂದ್ರ ಕ್ಯಾಸೆಟ ಯುಗ ಬಂತು. ಒಂದು ಹಾಡು ಬರ್‍ಯಾಕ ೨೦೦-೩೦೦ ರೂಪಾಯಿ ತಗೊಂತಾರ. ಕವಿಗಳಿಗೆ ದರಿದ್ರತನ ಹೆಚ್ಚು. ಕೊಡ್ರಿಪಾ ಅಂತ ಭಿಕ್ಷಾ ಬೇಡಿದ್ದs ಬೇಡಿದ್ದು. ಆಗಿನ ಕಾಲಕ್ಕ ನಾನು ನಿಮಗ ಈ ಪುರಾಣ ಬರದು ಕೊಡ್ತೀನಿ ಒಂದು ಜೊತೆ ಧೋತರ ಕೊಡಿಸಿ ಬಿಡ್ರಿ ಸಾಕು ಅಂತಿದ್ದೀವಿ. ದ್ಯಾಂಪುರ ಚೆನ್ನಕವಿ ಪುರಾಣ ಬರಕೊಂಡು ಅವರಾದಿ ಮಠಕ್ಕ ಹೋದ ಬುದ್ಧಿ ಇದೊಂದು ಕಾವ್ಯ ಬರಕೊಂಡು ಬಂದಿನ್ರೀ. ಒಂದು ಜೊತೆ ಧೋತರ ಕೊಡಸ್ರಿ ಸಾಕು ಅಂದ. ಸ್ವಾಮಿಗಳು 'ಶಿವರಾತ್ರಿ ಮಠಕ್ಕ ಏಕಾದಶಿ ಬಂದಂಗಾತು' ಒಳ್ಳೆ ಕವಿಯಾಗಿ ಮೆರಿ ಅಂತ ಅಂಗಾರ ಕೊಟ್ಟು ಕಳಿಸಿದ್ರಂತ. ಅಂಗಾರ ತಗೊಂಡು ಏನ ಮಾಡಬೇಕು ? ಕುಮಾರ ಸ್ವಾಮಿಗಳು ಕಣ್ಣಿಗೆ ಬಿದ್ದರು. ಕರಕೊಂಡು ಬಂದು ಇಟಗೊಂದು ಹನ್ನೊಂದು ಪುರಾಣಗಳನ್ನು ಬರೆಸಿದರು. ಮಲ್ಲಮ್ಮನ ನಾಟಕ ಬರೆದ ನಾಲ್ವಡಿ ಶ್ರೀಕಂಠಶಾಸ್ತ್ರಿಗಳಿಗೆ ಗದುಗಿನೊಳಗ ಎಷ್ಟೋ ಸಲ ನಾವ ಪಟ್ಟಿ ಮಾಡಿ ಕೊಟ್ಟೀವಿ. ಅವರ ಜೀವನ ಏನಂದ್ರ ಇಂಥದೊಂದು ಕಾವ್ಯ ನಾಟಕ ಬರದೇನಿ ಅಂಥ ಅದನ್ನೋದಿಸುದು ನಮ್ಮ ಜೀವನಕ್ಕೇನಾದರೂ ಕೊಡ್ರಿಪಾ ಅಂಥ ಪಟ್ಟಿ ಮಾಡಿಕೊಂಡು ಜೀವನ ಸಾಗಿಸೋದು.

ಈಗ ಸರಕಾರ ಎಲ್ಲದಕ್ಕೂ ಪ್ರೊತ್ಸಾಹ ಕೊಡಾಕತ್ತೈತಿ. ಅಕಾಡೆಮಿ ಕೊಡತೇತಿ. ಗೌರವಧನ ಮಾಶಾಸನ ಅಂತ ಕೊಡತಾರಿ. ತಾತ್ಪೂರ್ತಿಕವಾಗಿದೆ. ಪುರಾಣ ಹಚ್ಚತಾರ ನಡದರ ಕಡೆದಿನ ಸನ್ಮಾನ ಮಾಡಿಬಿಡತಾರ. ಹೂ ಅರಳುವರು ಅದರ ಧರ್ಮ. ಅದರ ಗಂಧ-ವಾಸನೆಯನ್ನು ಪ್ರಚಾರ ಮಾಡುವುದು ಗಾಳಿ, ಕವಿಯು ಬರೆಯುವುದು ಅವನ ಕೆಲಸ. ಅದನ್ನ ಪ್ರಚಾರ ಮಾಡುವುದು ಭಕ್ತರದು. ನಮ್ಮದು ನಾವು ವರ್ಣನೆ ಮಾಡಲಿಕ್ಕೆ ಬರೂದಿಲ್ಲ. ಕಾವ್ಯ ಶ್ರೇಷ್ಠವಾಗಿತ್ತಂದರ. ಅವರs ಮಾತಾಡತಾರಿ. ಬಹಳ ಚಲೋ ಬರಿದೀರಿ, ನಮ್ಮ ಹೆಸರು ಬಂತು, ಮಠದ ಹೆಸರು ತಂದಿರಿ, ಸಮಾಜಕ್ಕ ಊರಿಗೆ ಗೌರವ ತಂದ್ರಿ ಅಂತ ವರ್ಣನೆ ಮಾಡಿ ಹೋಗಿ ಬಿಡೂದು. ಮೈಲುಗಲ್ಲು ಎಣಿಸಿಕೊಂತ ಬರುದರಿ ಏನೂ ಇಲ್ಲ. ತಿಳಿದವರು ಕೊಟ್ಟಿರ್ತಾರ. ಅಡ್ಡಿಯಿಲ್ಲ ಚಲೋ ಆಗೇದ ಅಂತಾರಿ. ಅಂತಹ ಪುಣ್ಯಾತ್ಮರು ಎಲ್ಲೋ ಅದಾರಿ ಇಲ್ಲ ಅಂತ ಹೇಳೂದಿಲ್ಲ. ಶಿವಯೋಗ ಮಂದಿರದಲ್ಲಿ ಮರಿದೇವರಿಗೆ ಪಾಠಹೇಳಾಕ ಇದ್ದೆ. ಶಾಸ್ತ್ರಿಗಳು ಅರಾಮ ಇಲ್ಲದ ಮಲಕೊಂಡ ಸುದ್ದಿ ಕೇಳಿ ಮರಿದೇವರು ಎಲ್ಲಾರು ಕೂಡಿಕೊಂಡು ಪಟ್ಟಿಕೂಡಿಸಿ ೨೦೦೦ ರೂಪಾಯಿ ಹಣ್ಣು-ಹಂಪಲು ಕೊಟ್ಟು ಕಳಿಸ್ಯಾರಿ. ಆತ್ಮೀಯರು ಮಾತಾಡಸಾಕ ಬರ್ತಾರ, ಹಂಗ ಹೋಗುವುದಿಲ್ಲ. ಶಿವಯೋಗ ಮಂದಿರದವರು, ಮುಚಗಂಡಿ ಅಯ್ಯನೋರು, ನಂದಿಕೇಶ್ವರದವರು ಅಂತವರು ಶ್ರೀಮಂತರು ಮಾತಾಡಸಾಕ ಬಂದು ಹೋಗುವಾಗ ತಮ್ಮ ಕಾಣಿಕೆ ಇಟ್ಟು ಹೋಗ್ತಾರ. ಆತ್ಮೀಯರಿಗೆ ನಮ್ಮ ಪರಿಸ್ಥಿತಿ ಕೆಟ್ಟೈತಿ ಕೊಡ್ರಿಪಾ ಅಂತೀವಿ, ಇಲ್ಲಂದ್ರ ಏನ ಮಾಡುದು, ಹಂಗ ಶಿವ ಅಂತೀವಿ.

ಸಂದರ್ಶಕರು : ಆಧುನಿಕ ಜೀವನದಲ್ಲಿ ಪುರಾಣ ಕಾವ್ಯಗಳ ರಚನೆಯ ಅಗತ್ಯ ಮತ್ತು ಪರಿಣಾಮ ಕುರಿತು ನಿಮ್ಮ ಅನಿಸಿಕೆಯೇನು ?

ಕವಿ : ಕೂಡಿದ ಸಭಾದೊಳಗ ಜನರು ಒಂದ ರೀತಿ ಇರೂದಿಲ್ಲ, 'ಪಿಂಡೆ ಪಿಂಡೆ ಭಿನ್ನರುಚಿಃ' ಅನ್ನೋಹಾಂಗ ಕೆಲವರು ಹಿರೇತನ ಮಾಡಾಕ, ದುಡ್ಡಿನ ಮೇಲೆ ಆಸೆ ಉಳ್ಳವರು, ದುಡ್ಡಿನ ಪುರಾಣ ಬರಸತಾರ. ಈಗಿನ ಕಾಲಕ್ಕ ಭಕ್ತಿ ಪುರಾಣಗಳು ಬಹಳ ಕಡಿಮೆ. ದುಡ್ಡು ಕೂಡಸುದು, ಹರಿದು ಹಂಚಗೊಂಡ ತಿನ್ನೋದು. ಆದರೂ ಕೂಡಾ ಕೆಲವರು ಭಕ್ತಿ ಜೀವನವುಳ್ಳವರು ಇರತಾರ. ಪರಿಣಾಮ ಅನ್ನೋದು ಕ್ರಮೇಣವಾಗಿ ಆಗ್ತದ. ಒಮ್ಮೆಲೆ ದಡಗ್ಗನ ಆಗುದಲ್ಲರಿ. ಸಮಯೋಚಿತವಾದ ಒಂದು ಕಾಲ ಬೇಕಾಗುತ್ತ. ಸತ್ಯ ಬಚ್ಚಿಡಲಾರದಂತ ವಸ್ತು ಅದು. ಸತ್ಯ ಒಂದಿಲ್ಲೊಂದೊಮ್ಮೆ ಹೊರಬೀಳೋದು. ಊರಿಗೆ ಎದ್ದು ಕಾಣುದು. ನಾ ಬರೆದ ಬೆಳವಣಿಕಿ ಗುರುಲಿಂಗಮ್ಮನ ಪುರಾಣದಲ್ಲಿ ಆ ಶಿವಶರಣೆ ೯೦ ವರ್ಷಗಳ ಹಿಂದೆ ಆಗಿ ಹೋಗ್ಯಾಳ. ಬೆಳವಣಿಕಿ ಗುರುಲಿಂಗಮ್ಮಗ ಬಾಲ್ಯದಲ್ಲಿ ಲಗ್ನ ಮಾಡಿದರು. ಗಂಡ ಸತ್ತ ಹೋದ, ಬಾಳ್ವೆ ಆಗಲಿಲ್ಲ. ಬ್ರಹ್ಮಚಾರಿ ಆಗಿ ಮುಂದ ಅಕಿ ಸಾಧು–ಸಂತರ ಕೂಡ ಕೂಡಿಕೊಂಡು ಅನುಷ್ಠಾನ–ತಪಸ್ಸು ಮಾಡಿ, ಸಿದ್ಧಿ ಮಾಡಿಕೊಂಡಳು. ಬ್ರಿಟಿಷರನ್ನು ಹೊಡಿದೋಡಿಸಾಕ ದೇಶಭಕ್ತರನ್ನು ರಕ್ಷಣೆ ಮಾಡಿದಳು. ಶ್ರೀಮಂತಿಕೆ ಬಡತನದಾಗ ತನ್ನ ದಾಗಿನ ಎಲ್ಲ ಮಾರಿ ಬಡ ಬಗ್ಗರ ಸಾಮೂಹಿಕ ಮದ್ವಿ ಮಾಡಿಕೊಟ್ಟು, ಮಕ್ಕಳ ವರ ಕೊಡೋದು, ರೋಗ ಕಳೆಯೋದು, ವನಸ್ಪತಿ ಔಷಧ ಕೊಡುದು ಹೀಗೆಲ್ಲ ಮಾಡಕೊಂಡ ಹೋದ ತಾಯಿ ಗುರುಲಿಂಗಮ್ಮ. ಬೆಳವಣಿಕೆಯಲ್ಲಿ ಆಕಿ ಆರಾಧನ ಮಾಡ್ತಾರ. ಗುಪ್ತವಾಗಿರುವಂಥದ್ದನ್ನು ಹಳ್ಳಿ ಹಳ್ಳಿ ಅಡ್ಡಾಡಿ, ಕೀರ್ತನ ಮಾಡಿ, ಪವಾಡ ವಿಷಯ ಸಂಗ್ರಹ ಮಾಡಿ ಬರದುಕೊಟ್ಟೆ.. ಇವತ್ತ ನಮಗೊಂದು ದೊಡ್ಡ ಉಪಕಾರ ಆತು ಅಂತ ನೆನಸ್ತಾರಿ. ಕವಿ ಮಾಡುವುದು ಮಾಡುದ, ಫಲಾಪೇಕ್ಷೆ ಕೊಡುದು ಭಗವಂತನದ್ದು, ಕಾವ್ಯ ಬರೆಯುವದು ಕವಿ ಧರ್ಮ. ಫಲ ಪಡಕೊಳೋದು ಭಕ್ತರು, ಅಧಿಕಾರಿಗಳು ಆವರೇ.

ಸಂದರ್ಶಕರು : ಕಾವ್ಯದ ವಸ್ತು ವಿವೇಚನೆಯಲ್ಲಿ ಪ್ರಧಾನ ಅಂಶ ಯಾವುದು ?

ಕವಿ : ಮಾನವ ಧರ್ಮ ಮುಖ್ಯ, ಯಾವ ಜಾತಿಯವರೇ ಆಗಲಿ ಧರ್ಮ ಮುಖ್ಯ. ಇಟಗಿ ಭೀಮಮ್ಮ ಆಕಿಯೊಳಗ ನೀತಿ ಮುಖ್ಯವಾಗಿದೆ. ಹೆಚ್ಚಾಗಂಗಿಲ್ಲ ಕಡಿಮೆ ಆಗುದಿಲ್ಲ. ಇದೊಂದು ನೀತಿ. ಈಗಲೂ ಪಡಿ ಜೋಳ ಕೊಟ್ಟರ ಗಡ್ಡಿ ಕೊಡ್ತಾರ, ಮೈಯೊಳಗಿನ ಕುರುಗಳೆಲ್ಲ ಹೊಕ್ಕಾವು. ನೀತಿ ಧರ್ಮ ಇತ್ತಂದರ ಬರೆಯುದಕ್ಕ ಅಡ್ಡಿಯಿಲ್ಲ. ಸಿಕ್ಕವರನ್ನು ಕುರಿತು ಬರಿಬಾರದು. ರೊಕ್ಕದಾಸೆಕ ಬರಿಬಾರದು. ಅಂಥವರು ಕವಿ ಅನಿಸಗೊಳ್ಳುವುದಿಲ್ಲ. ಸಾರಾಸಾರಾ ವಿಚಾರ ಮಾಡಿ ಸಮಾಜಕ್ಕ ಅವ ಉಪಕಾರಿ, ಧರ್ಮಪುರುಷ ಹೌದೋ ಅಲ್ಲೋ. ಬ್ರಹ್ಮಚಾರಿ, ಸದ್ಗುಣ ಸಂಪನ್ನರೂ ಇದ್ದಾರ ಅನ್ನೋದು ತಿಳಕೊಂಡು ಅವರ ಬಗ್ಗೆ ಪುರಾಣ ಬರಿಬೇಕು.

ಸಂದರ್ಶಕರು : ಕಾವ್ಯವನ್ನು ಅನುಭಾವದ ಹಿನ್ನೆಲೆಯಲ್ಲಿ ಬರೆದಿರುವಿರಾ ?

ಕವಿ : ಜ್ಞಾನ ವಾಚಕ, ಅನುಭವ ಮೂಕ. ಅನುಭವವಿಲ್ಲದೆ ಬರ‍್ಯಾಕ ಆಗುದಿಲ್ಲ. ಅನುಭವ ಎಲ್ಲದರಲ್ಲೂ ಬೇಕು. 'ಅನುಭವಿಗಳೆಲ್ಲ ಕೂಡಿ ಅನುಭವದ ಅಡುಗೆ ಮಾಡಿ' ಹಂಗ ಕೆಲವೊಂದು ಅನುಭವ ಇದ್ದಲ್ಲಿ ಅಡ್ಡಾಡಬೇಕು. ಹಾನಗಲ್ಲ ಕುಮಾರಸ್ವಾಮಿಗಳು ಅನುಭವಿಗಳಿದ್ದಲ್ಲಿ ಹೋಗಿ ಸಂಚಾರ ಮಾಡಿ ತಿಳಿಕೊಂಡ ಬರ‍್ತಿದ್ದರು. ಅನುಭವ ಲೌಕಿಕದಲ್ಲಿ ಸಾಹಿತ್ಯದಲ್ಲಿ ರಾಜಕೀಯದಲ್ಲಿ ಎಲ್ಲದರಲ್ಲೂ ಬೇಕು. ಅನುಭವ ಇಲ್ಲದ ಏನರ ಮಾಡಿದರ ಏನರ ಆಗತೈತರಿ. ವೇದವ್ಯಾಸರು ಗಣಪತಿಯನ್ನು ಕರೆದರು; ನಾನು ಮಹಾಭಾರತ ಹೇಳ್ತೀನಿ ನೀನು ಬರಿ, ತಪ್ಪ ಬರದರ ನಿನಗ ಶಾಪ ಕೊಡತೀನಿ ಅಂದರು. ಅದಕ್ಕ ಪ್ರತಿಯಾಗಿ ಗಣಪತಿ ತಪ್ಪಾಗದ್ಹಂಗ ನಾನೂ ಬರಿತೀನಿ, ಆದರ ನೀನು ತಪ್ಪ ಹೇಳಿದರ ನಾನು ನಿನಗ ಶಾಪಕೊಡತೀನಿ ಅಂದರು. ಅದಕ ವ್ಯಕ್ತಿ ತಪ್ಪಾಗದಂತೆ ನಡೆದುಕೊಂಡು ಹೋಗಬೇಕು ಅನ್ನೋದು ನೀತಿ, ಬಸವಣ್ಣ ಮಂತ್ರಿ ಪದವಿ ಸ್ವೀಕಾರ ಮಾಡಿದಂತೆ. ಪ್ರತಿಜ್ಞಾ ಬದ್ಧರಾಗಿ ಜೀವನ ನಡೆಸುವವನೆ ಶರಣ ಮಹಾತ್ಮ ದಯವಿಲ್ಲದೆ ಧರ್ಮ ಆವುದಯ್ಯ ಅನ್ನುವಂತೆ ಆಚರಣೆ ಬೇಕು.

ಸಂದರ್ಶಕರು : ಕಾವ್ಯರಚನೆಯಿಂದ ದೈವಾನುಭೂತಿ ಉಂಟಾಗಿದೆಯೇ ?

ಕವಿ : ದೈವಾನುಭೂತಿಯೆಂಬುದು ತಾಯಿ ಕೂಸಿನ ಸಂಬಂಧ! ನನ್ನ ಮಗುವೇ ಕಾವ್ಯಗಳು.

ಸಂದರ್ಶಕರು : ನಿಮ್ಮ ವೈಯಕ್ತಿಕ ಬದುಕಿನ ಮೇಲೆ ಪರಿಣಾಮ ಆಗಿರುವುದೇ ?

ಕವಿ : ಸಂಗೀತ ಸಾಹಿತ್ಯ ಬದುಕಾಕ ಗಂಡು ಜೀವನ ಅಲ್ಲರಿ, ಕೊರತೆ ಜೀವನ. ಕವಿ ಯಾಕ ದರಿದ್ರ ಆಕ್ಕಾನ; ಇಲ್ಲಿ ಬರಕೊಂತ ಕುಂದ್ರತಾನ. ಉದ್ಯೋಗ ನಿಲ್ಲತ್ತ. ಹೆಂಡತಿ ಬರಕೊಂತ ಕುಂತ್ಯಲ್ಲಾ, ಅಕ್ಕಿ ಇಲ್ಲ ಬಾ, ಎಣ್ಣಿ ಇಲ್ಲ ತಗೊಂಡು ಬರಬಾ ಅಂತಾಳ. ನಲ್ವಡಿ ಶ್ರೀಕಂಠ ಶಾಸ್ತ್ರಿಗಳ ಹತ್ರ ಹೋಗಿ ಭೆಟ್ಟಿಯಾದೆ, ಮಲ್ಲಮ್ಮನ ನಾಟಕ ಎಷ್ಟನೆ ಇಸ್ವಿಯೊಳಗ ಬರದೀರಿ ಅಂತ ಕೇಳಾಕ ಬಂದೀನ್ರಿ ಅಂದ್ರ ಆಳಾಕತ್ತರಿ, ಯಾಕಂದ್ರ ೧೯೩೦ನೇ ಇಸ್ವಿಯಲ್ಲಿ ಹದಿನೈದು ದಿನದಾಗ ಬರದೆ. ಕಂಪನಿಯೊಳಗ ಇಷ್ಟು ಪ್ರಯೋಗ ನಡೆದದ್ದು ನೋಡಿ ಸಂತೋಷ ಅಂದು ಅಳಾಕತ್ತರು. ಯಾಕರ‍್ರಿ ಅಂದ್ರ ಬಡತನದ ಸಲುವಾಗಿ ನಾಕಗಿದ್ನ ಜ್ವಾಳಕ್ಕಾಗಿ ಮತ್ತೊಂದು ನಾಟಕ ಬರ‍್ಯಾಕತ್ತಿನಂದ್ರು. ಸಾಯುವರೆಗೂ ಭಿಕ್ಷಾ ಬೇಡಕೊಂತನ ಸತ್ರು.

ಈಗಿನದು ಚಲೋ, ಮಾಸಾಶಾನ ಅದು ಬರುತ್ತ ಈಗ ತಿಂಗಳ ಒಂದು ಸಾವಿರ ರೂಪಾಯಿ ಮಾಶಾಸನ ಬರುತ್ತರಿ. ಜಂಗಮರದೀವಿ ಭಿಕ್ಷಾ ಬೇಡತೀವಿ ಅಂತ ಇದನ್ನೆಲ್ಲ ಹೇಳುದರೊಳಗ ಏನರ್ಥಐತರಿ.

ಸಂದರ್ಶಕರು : ಈ ಕಾವ್ಯರಚನೆಗೆ ನಿಮಗೆ ಸಹಾಯಕವಾದಂತ ಅಂಶಗಳಾವುವು ?

ಕವಿ : ಸಹಾಯಕ್ಕ ಆಗುವ ಅಂಶ ಕೇಳಿದ್ರೀ ಅಂದ್ರ, ನನ್ನ ಹೆಂಡ್ತಿಗೆ ಕೇಳಿದ್ರ, ನಾ ಬ್ಯಾಡ ಅನ್ನುಕೈಲೀ ಮಾಡಿಕೊಂಡ್ರಿ, ಕವಿಯಿಂದ ಏನು ಸುಖ ಕಾಣುವಲ್ಲಿ, ನಾ ಎದ್ದು ಹೋದೆ ಅಂದ್ರ ಕಸ ಹುಡಗಬೇಕು, ಹಾಸಗಿ ಹಾಸಬೇಕು, ಹೊರಗ ಹೋಗಿ ಬಂದ್ರ ಚಾ ಇಡಬೇಕು, ನಾಸ್ಟಾ ಮಾಡಿಸಬೇಕು, ಹಾಳಿ, ಮಸಿ, ಪೆನ್ನು ಎಲ್ಲಾ ತಂದು ಇಡಬೇಕು. ಆಮ್ಯಾಲೆ ನಾನು ಯಾವಾಗ ಕರೀತೀನಿ ಅವಾಗ ಬರಬೇಕು, ಅನುಕೂಲದ ಅನುರೂಪವಾಗಿರುವಂತೆ ಹೆಂಡತಿ ಅಥವಾ ಅದು ಯಾವುದು ಇಲ್ಲ ಅಂದ್ರ ಕವಿ ಎದ್ದು ಬಿಡತಾನಿರ್ರಿ. ಯಾವುದೇ ಒಂದು ವನ, ದೇವಾಲಯದಲ್ಲಿ ಕುಂತು ಏಕಾಂತ ಚಿತ್ತದಿಂದ ಮನಸ್ಸಿನ್ಯಾಗ ಕಾವ್ಯ ರಚನೆ ಮಾಡಾತಾನ. ಈಗ ನಾನು ಬರೆಯುವ ಹೊತ್ತಿನಾಗ ಮೂಡ ಹೋತಂದ್ರ ಬರ್‍ಯಾಕ ಮನಸ್ಸ ಬರಲ್ಲಾ, ಒಮ್ಮೊಮ್ಮೆ ನಾನ ಕೈಯಾಗಿನ ಪೆನ್ನ ದೂರ ಒಗದ ಬಿಡತಿನ್ರಿ.

ಸಂದರ್ಶಕರು : ಓದಿನ ಹಿನ್ನೆಲೆ ಮತ್ತು ಕಾವ್ಯಾನುಭೂತಿ ಕುರಿತು ನಿಮ್ಮ ಅಭಿಪ್ರಾಯವೇನು ?

ಕವಿ : ಮೊದಲು ಬುನಾದಿ ಭದ್ರವಾಗಿರಬೇಕು. ವ್ಯಾಕರಣ ತಾಯಿ ಇದ್ಹಂಗ. ಅದನ್ನ ಚೆನ್ನಾಗಿ ತಿಳಿದಿರಬೇಕು. ವ್ಯಾಕರಣ ಜ್ಞಾನ ಇಲ್ಲದ ಕಾವ್ಯ ಬರಿಬಾರದು. ಛಂದಸ್ಸು ಪ್ರಾಸ ಅಲಂಕಾರ ಇಲ್ಲದ ಪುರಾಣ ಕಾವ್ಯ ಬರಿಬಾರದು. ಮೂರು/ನಾಲ್ಕು ಮೂರು/ನಾಲ್ಕು ಮಾತ್ರ ಇಟಗೊಂಡ ಹೋದ್ರ ಭಾಮಿನಿ ಷಟ್ಪದಿ ತಾಳ ತಾನ ಬೀಳ್ತದ ಬೀಳಲಿಲ್ಲಂದ್ರ ಹೆಜ್ಜಿ ತಕ್ಕಡಿ ಹೋದ್ಹಾಂಗಾಗುತ್ತ. ಕಾವ್ಯ ಕನ್ನಿಕೆಗೆ ಅಪಚಾರವಾಗದ್ಹಂಗ ಬರಿಬೇಕು. ಕಾವ್ಯದಲ್ಲಿ ಪ್ರಯೋಗಗೊಂಡ ಶಬ್ದಗಳು ಶಿಥಿಲವಾಗಿರಬಾರದು.

ಸಂದರ್ಶಕರು : ಇನ್ನು ಕಾವ್ಯನುಭೂತಿ ಕುರಿತು ಏನು ಹೇಳ್ತೀರಿ.

ಕವಿ : ನಮ್ಮ ತಲಿಯೊಳಗ ಏನು ಮೂಡಿಬಂದಿರತ್ತ, ಮೊದಲೇ ಮನಸ್ಸಿನಾಗ ಸ್ಕೆಚ್ ಹಾಕ್ಕೊಂಡು ಬಿಡ್ತೀವಿ, ಭಾವದ ಬಯಲ ಬ್ರಹ್ಮವಿದ್ದಂತೆ ಅದು. ಯಾವುದಾದರೊಂದು ನಿರ್ಮಾಣ ಮಾಡಬೇಕಾದ್ರ, ಮೊದಲು ಭಾವದಾಗ ಹುಟ್ಟುತ್ತ ಅದು. ಒಂದು ಫ್ಲಾಟ್ ಮನಿ ಮಾಡಬೇಕಾದ್ರ ಮನಿ ಮನಸ್ಸಿನ್ಯಾಗ ಹುಟ್ಟುತ್ತ ಅದು, ಆಮೇಲೆ ಕಾಗದದಾಗ ಬರುತ್ತ. ಆಮೇಲೆ ಸ್ಥೂಲವಾಗಿ ಕಾಣುತ್ತ, ಹಾಗೆ ಒಬ್ಬ ಕವಿ ಕಾವ್ಯ ರಚನೆ ಮಾಡುವಾಗ, ಅದರ ಬಗ್ಗೆ ಚಿಂತನ ಮಾಡಬೇಕಾಗುತ್ತ, ಅದರ ಬಗ್ಗೆ ಸ್ಕೆಚ್ ಮಾಡಬೇಕಾಗುತ್ತ, ಇಲ್ಲಿ ಹೋದ್ರ ಹ್ಯಾಂಗ, ಅಲ್ಲಿ ಹೋದ್ರ ಹ್ಯಾಂಗ, ಇದು ಹೀಗಾದ್ರ ಹ್ಯಾಗ, ಬರದಾದ ನಂತರ ಮುಂದ ಹೋಗತೀವಿ ಮತ್ತ, ಒಳ್ಳೇದನ್ನ ಬರಿಬೇಕಾಗುತ್ತ, ಈಗ ಮಹಾಭಾರತವನ್ನು ಬರಿದಂತಹ ಕವಿಗಳು ಭಾರವನ್ನು ತಾಳಲಾರದೆ ಫಣಿರಾಯ ತಿಣಿಕಿದ ಅಂತ ಬರಕ್ಕೋತಾರ, ಅಂದ್ರ ಅಷ್ಟು ಜನ ಕವಿಗಳು ಹುಟ್ಟಿಕೊಳ್ಳತ್ತಾರಂತ. ಅದಕ್ಕ ನಾ ಮಹಾಭಾರತ ಬರೆಯುವಾಗ ಬರೆದಿದ್ದು, ಅದು

ಎಲ್ಲಿ ಬಿದ್ದೈತಿ, ಅದನ್ನ ಮತ್ತ ಎತ್ತಿ ಹಿಡಿದು ಬರ್ತೀದ್ರು. ರನ್ನನ ಗಧಾಯುದ್ಧವಾಯ್ತು. ಜೈಮಿನಿ ಮಹಾಭಾರತವಾಯ್ತು. ರನ್ನ, ಪಂಪರು ಮಹಾಭಾರತ ಎಲ್ಲಿ ಶಿಥಿಲವಾಗೈತಿ ಅಲ್ಲಿ ಮತ್ತ ಎಚ್ಚಿಸಿಬಿಟ್ಟಾರ. ಮತ್ತು ಶರಣಪ್ಪನ ಪುರಾಣವನ್ನ ಬರೆದ್ರು ಎಲ್ಲಿ ಬಿದ್ದೈತೀ ಅವನ ಕತಿ ಅಲ್ಲೆ ಮತ್ತ ಶೋಧ ಆಗುದ, ಶೋಧ ಆಯಿತಂದ್ರ ಮತ್ತ ಬರಿಯುವಂತಹ ಕವಿಗಳು ಹುಟ್ಟಕೊಳ್ಳತ್ತಾರ. ಹುಟ್ಟಿ ಅದನ್ನು ಹೇಳುವಲ್ಲಿ ಹೇಳ್ತಾರ. ಈ ಸಂದರ್ಭದಲ್ಲಿ ಅದು ಬಿದ್ದೈತಿ ಕಾವ್ಯ ಅದ್ನ ನೀವು ಬರದು ಮತ್ತ ರಚನೆ ಮಾಡ್ರಿ ಅಂತ ಹೇಳತಾರ.

ಸಂದರ್ಶಕರು : ಈ ಪುರಾಣಕಾವ್ಯವನ್ನು ಹೊರತು ಪಡಿಸಿ ಬೇರೆ ಯಾವುದಾದರೂ ಕಾವ್ಯಗಳನ್ನು ಬರೆದಿರುವಿರಾ ?

ಕವಿ : ಬರೀದಿವ್ರಿ. ಅದು ನಾವೊಂದು ಆರಾಧ್ಯ ದೇವ್ರು ಅಂತಾ ಮಾಡ್ಕೊಂಡಿವಿ. ಗುರುಸ್ವಾಮಿ ಕಲಕೇರಿ 'ಕಲಿಪುರುಷ' ಅಂತ ಇಟ್ಟುಕೊಂಡಾರಿ. ನಾವು ನಮ್ಮ ಮಠದೊಳಗ ಈಶ್ವರ ಅದಾನ. 'ಚಿಕ್ಕಮಣ್ಣೂರೇಶ' ಅಂತಾ ಕಾವ್ಯನಾಮ ಇಟ್ಟುಕೊಂಡು 'ಚಿಕ್ಕಮಣ್ಣೂರೇಶನ ಭಕ್ತಿಗೀತೆಗಳು', 'ಚಿಕ್ಕಮಣ್ಣೂರೇಶನ ಜಾನಪದ ಹಾಡುಗಳು', ಇಷ್ಟು ಹಾಡುಗಳನ್ನ ಪ್ರಿಂಟ್ ಮಾಡಿಸ್ಯಾರ. ಇಲ್ಲಂದ್ರ ಕೃತಿ ಚೌರ್ಯ ಮಾಡಿಬಿಡತಾರ್ರಿ, ಹಾಂಗ ಮಾಡಬಾರದು. ಈಗ ಕೂಡಲಸಂಗಮದೇವಾ ಹೋಗಿ, ಲಿಂಗದೇವಾ ಅಂತ ಮಾಡಿದ್ರ ಏನುಮಾಡುನು. ಹಾಂಗ್ ನಮ್ಮವು ಏಷ್ಟೋ ಕೃತಿ ಚೌರ್ಯ ಮಾಡಿದ್ರು. ಈಗೂ ಮಾಡಿ ತಮ್ಮ ಹೆಸರು ಹಾಂಕೊಂಡಿರತಾರಿ ಏನು ಮಾಡಬೇಕು. ಪ್ರಿಂಟ್ ನೋಡಿ ಇವು ಇಂತ ಶಾಸ್ತ್ರೀವು ಅಂತಾ ಹೇಳಿಬಿಡತಾರ. ನಮ್ಮದು ದೃಶ್ಯಕಾವ್ಯ.

ಸಂದರ್ಶಕರು : ನೀವು ಅನ್ಯರ ಕಾವ್ಯಗಳಲ್ಲಿ ಮೆಚ್ಚಿಕೊಂಡಿರುವಂತ ಸಂಗತಿಗಳಾವುವು ? ಮತ್ತು ನೀವು ಓದಿದ ಅನ್ಯರ ಕೃತಿಗಳಾವುವು ?

ಕವಿ : ನಾವು ಮತ್ತೊಬ್ಬರದನ್ನ ನಿಂದನಾ ಮಾಡಕ ಹೋಗಬಾರದು, ನಂದ ಹೆಚ್ಚು ಅಂತಾ ಹೊಗಳಕೊಳ್ಳಾಕ ಹೋಗಬಾರದು. ಅವ ಏನು ಬರದಾನ, ಇವ ಏನು ಬರದಾನ ಅಂತಾ ಟೀಕಾ ಮಾಡುದು ಬಿಟ್ಟು, ತಪ್ಪ ಇದ್ರ ತಿದ್ದಿ ಹೇಳಬೇಕು, ಸಲಹಾ ಕೊಡಬೇಕು.

ಅನ್ಯರ ಕೃತಿಗಳನ್ನು ನಿಂದಿಸಬಾರದು ನಮ್ಮನ್ನು ನಾವೇ ಹೊಗಳಿಕೊಳ್ಳಬಾರದು. ಟೀಕೆ ಮಾಡಬಾರದು ತಪ್ಪುಗಳಿದ್ದರೆ ಅವುಗಳನ್ನು ಸೌಜನ್ಯದಿಂದ ತಿದ್ದಿ ಹೇಳಬೇಕು. ಸಲಹೆ ನೀಡಬೇಕು ಹಾಗೂ ತಪ್ಪನ್ನು ಒಪ್ಪಿಕೊಳ್ಳುವ ಸೌಜನ್ಯಶೀಲತೆ ಕವಿಗೆ ಇರಬೇಕು. ವಿಚಾರಗಳು ಸೂತ್ರ ಬದ್ಧವಾಗಿರಬೇಕು. ಶಬ್ಧ ಸ್ವಲ್ಪ ಅರ್ಥ ಬಹಳ ಹೇಳುವಂತಿರಬೇಕು. ಇನ್ನೊಬ್ಬರ ವಿದ್ವತ್ತನ್ನು ಗೌರವಿಸುವ ಗುಣವಿರಬೇಕು. ಪದಗಳ ಬಳಕೆ ಕಲ್ಲು-ಸಕ್ಕರೆ ಹಾಗಿರಬೇಕು.

ಉದಾ : 'ಅರಿದೊಡೆ ಶರಣ ಮರೆದೊಡೆ ಮಾನವ' ಇದೊಂದು ಸೂತ್ರದಂತೆ ಕಾಣುವ ಮಾತು ಅರ್ಥಗಮ್ಯ. ನಾನು ನನ್ನ ಸಂಪಾದನೆಯಲ್ಲಿ ೧/೪ನೇ ಭಾಗದಷ್ಟು

ಪುಸ್ತಕಗಳನ್ನು ಖರೀದಿ ಮಾಡ್ತೀನಿ. ಗ್ರಂಥಾವಲೋಕನ ನಿತ್ಯ ಸಾಧನೆಯಾಗಿರಬೇಕು. ಬೇರೆಯವರ ಒಳ್ಳೆಯ ಕೃತಿಗಳ ಅಧ್ಯಯನ ಮಾಡಬೇಕು. ನನಗ ಆಧ್ಯಾತ್ಮ ದೇವರು, ಧರ್ಮ, ಗುರು ಕುರಿತ ವಿಚಾರಗಳಲ್ಲಿ ಹೆಚ್ಚಿನ ಒಲವು. ನಿಜಗುಣರ ಶಾಸ್ತ್ರ ಮತ್ತು ಸಿದ್ಧಾಂತ ಶಿಖಾಮಣಿ ಬಗ್ಗೆ ಪ್ರೀತಿ ಐತಿ ಮತ್ತು ಓದೀನಿ. ದೇವಿ ಪುರಾಣ ಪಾರಾಯಣ ಪಠಣ ಪ್ರವಚನ ಮಾಡಿದ್ದರಿಂದಲೇ ನನಗ ನಂಬಿಕೆ ಬಂದದ. ನವರಸಭರಿತವಾದ ಕಾವ್ಯವು ಜನರ ಮನಸ್ಸಿಗೆ ಹೆಚ್ಚಿನ ಸಂತೋಷವನ್ನುಂಟುಮಾಡುವುದರಿಂದ ಕಾವ್ಯರಸ ಪೂರ್ಣವಾಗಿರಬೇಕು ಅಂಬೋದು ನನ್ನ ವಿಚಾರ.

◆◆◆

ಪಂ. ಸೋಮಶೇಖರ ಶಾಸ್ತ್ರಿಗಳು ಪುರಾಣಿಕಮಠ

ಸಂದರ್ಶನ ದಿ : ೧೯-೧೦-೨೦೧೦

ಸಂದರ್ಶಕರು : ನಿಮ್ಮ ವೈಯಕ್ತಿಕ ವಿಚಾರವನ್ನು ಹೇಳಬೇಕಾಗಿ ವಿನಂತಿ ನೀವು ಮೂಲ ಎಲ್ಲಿಂದ ಬಂದಿರಿ ?

ಕವಿ : ನಮ್ಮದು ಬಿಜಾಪುರ ಜಿಲ್ಲೆ : ಇಂಡಿ ತಾಲೂಕ, ಹಿರೇರೂಗಿ. ಅಲ್ಲಿ ಪುರಾಣಿಕಮಠ ನಮ್ಮ ಮನೆತನದ ಅಡ್ರೆಸ್. ಪುರಾಣಿಕಮಠ ಅಂದರ ನಮ್ಮ ಹಿರಿಯರಿಂದಲೂ ಭಜನಾ ಪದ ಪದ್ಯಗಳನ್ನು ಪುರಾಣ ಪುಣ್ಯಕಥೆಗಳನ್ನು ಹೇಳುವಂತ ಹಾಡುವಂತ ಪ್ರವೃತ್ತಿ ಸುಮಾರು ತಲೆಮಾರುಗಳಿಂದ ನಮ್ಮ ಮನೆತನದಲ್ಲಿ ಬಂದಂತಹ ಪದ್ಧತಿ. ಅದರೊಳಗ ನಮ್ಮ ಅಜ್ಜ ಪುರಾಣಿಕನಾಗಿರುವದರಿಂದ ಆ ಮನೆತನಕ್ಕೆ ಸ್ಥಾವರಮಠ ಅಂತ ಮೂಲ ಇದ್ದು, ಅದು ರದ್ದಾಗಿ ರೂಢಿಯೊಳಗ ಪುರಾಣ ಹೇಳುವದರಿಂದ ಪುರಾಣಿಕ, ಪುರಾಣಿಕ ರುದ್ರಯ್ಯ, ರುದ್ರಯ್ಯ ಪುರಾಣಿಕಮಠ ಎಂದು ಬಂತು. ಅವರಿಗೆ ನಾನು ಮೊಮ್ಮಗ, ಮಗನ ಮಗ ಆಗಿದ್ದರಿಂದ ಆ ಕಲೆ ನನಗ ಒಲಿದು ಬಂತು. ಅದು ದೈವೀ ಶಕ್ತಿಯಿಂದ ಬಂತು. ಓದು-ಬರಹ, ಸಂಸ್ಕಾರ, ಬಾದಾಮಿ ತಾಲೂಕು ಶಿವಯೋಗಮಂದಿರ, ಮಹಾಕೂಟ-ಬನಶಂಕರಿ ಮಧ್ಯದ ಊರು ಮಲಪ್ರಭಾ ನದಿ ತೀರದಲ್ಲಿರುವ ಶಿವಯೋಗಮಂದಿರದಲ್ಲಿ ನಾನು ವಟುವಾಗಿ ೧೨ ವರ್ಷ ಕನ್ನಡ, ಹಿಂದೀ, ಮರಾಠೀ ಸಂಸ್ಕೃತ ನಾಲ್ಕು ಭಾಷೆಗಳನ್ನು ಕರಗತ ಮಾಡಿಕೊಂಡೆ. ೧೨ ವರ್ಷ ಅಭ್ಯಾಸ ಮಾಡಿದೆ. ನನ್ನ ಗುರುಗಳೇ ಹಾನಗಲ್ಲ ಶ್ರೀ ಸದಾಶಿವ ಸ್ವಾಮಿಗಳು. ಅಲ್ಲಿ ಅಭ್ಯಾಸ ಮಾಡಿದ ಮೇಲೆ ನಾಲ್ಕು ವರ್ಷ ಹೆಚ್ಚಿನ ಅಭ್ಯಾಸಕ್ಕೆ ಕಾಶಿಗೆ ಹೋದೆ. ಬನಾರಸ ಹಿಂದೂ ವಿಶ್ವವಿದ್ಯಾಲಯದಲ್ಲಿ ಹಿಂದಿಯಲ್ಲಿ ಸಂಸ್ಕೃತದಲ್ಲಿ ಉನ್ನತ ಪದವಿ ಪಡೆಯಬೇಕಾಯಿತು. ಹೀಗಿರುವುದರಿಂದ ಸಂಸ್ಕೃತವೇ ನನಗೆ ಮಾಧ್ಯಮವಾಗಿರುವದರಿಂದ, ಭಾಷಾ ಪ್ರೌಢಿಮೆ ನನಗೆ ಒಲಿದು ಬಂದಿರುವದರಿಂದ, ಪುರಾಣ ಪ್ರವಚನ ಮಾಡುವಂತಹ, ಅಥವಾ ಕಾವ್ಯಗಳನ್ನು ಓದಿ ಅರ್ಥೈಸುವಂತಹ ಶಕ್ತಿ, ಆ ಓದು, ಆ ಕಲಿಕೆ, ನನಗೆ ಕರಗತವಾಗಿ ಒಲಿದು ಬಂದಿತು. ಅದರ ಜೊತೆಯಲ್ಲಿ ಗುರುಕೃಪಾ ಕಾರಣವಾಗಿದೆ.

ಸಂದರ್ಶಕರು : ನಿಮ್ಮ ತಂದೆ-ತಾಯಿಗಳು ಯಾರು ?

ಕವಿ : ತಂದೆ ವೀರಭದ್ರಯ್ಯಸ್ವಾಮಿ, ತಾಯಿ ಕಲಾವತಿ.

ಸಂದರ್ಶಕರು : ವ್ಯಾಸಂಗ ಮಾಡುವ ಸಂದರ್ಭದಲ್ಲಿ ಎದುರಿಸಿದ ತೊಂದರೆಗಳಾವುವು ?

ಕವಿ : ಆರ್ಥಿಕ ಸಮಸ್ಯೆ ಬಂತು. ಮನೆತನದಿಂದ ಬಡವರು ಇರುವದರಿಂದ ಇದು ಉಚಿತವಾದ ಸಂಸ್ಕೃತ ಪಾಠಶಾಲೆ, ಉಚಿತ ಆಶ್ರಮ ಎಂದು ನಮ್ಮ ತಂದೆ ಶಿವಯೋಗ ಮಂದಿರಕ್ಕೆ ಸೇರಿಸಿದರು ಅಲ್ಲಿ ಊಟ, ಬಟ್ಟೆ, ವಸತಿ ಎಲ್ಲವು ಉಚಿತ ಆತು. ಆದರೆ ಕಾಶಿಯಲ್ಲಿ ಉಚಿತ ಆಗಲಿಲ್ಲ. ಸ್ವಂತ ದುಡಿಮೆ, ಪರಿಶ್ರಮ, ಓದುವ ಬಲವಾದ ಹಂಬಲ, ಉತ್ಕಟ ಇಚ್ಛೆ ಇರುವುದರಿಂದ ಓದಿಯೇ ತೀರಬೇಕೆಂಬ ಕಾರಣದಿಂದ ಓದುವಾಗಲೇ, ಅಧ್ಯಯನಶೀಲನಾಗಿರುವಾಗಲೇ, ಬಾಲ್ಯದಲ್ಲಿಯೇ ನಾನು ವೃತ್ತಿಯನ್ನು ಕೈಕೊಳ್ಳಬೇಕಾಯಿತು. ಕೀರ್ತನ ವೃತ್ತಿ ಕೈಕೊಳ್ಳಬೇಕಾಯಿತು. ದಕ್ಷಿಣ ಕರ್ನಾಟಕದಲ್ಲಿ 'ಹರಿಕಥೆ' ಎಂದು ಕರೆಯುತ್ತಾರೆ. ಉತ್ತರ ಕರ್ನಾಟಕದಲ್ಲಿ 'ಶಿವಕೀರ್ತನೆ' ಅಂತಾರ. ಅದನ್ನೇ ಅವರು ಹರಿಕಥಾ ವಿದ್ವಾನ್ ಅನ್ನುವರು. ಆ ಕಾಯಕವನ್ನು ಕೈಕೊಂಡು ರಜೆಯ ದಿನಗಳಲ್ಲಿ ೨-೩ ತಿಂಗಳು ರಜೆ ಇರುವದರಿಂದ ಊರಿಗೆ ಬಂದು ಹಳ್ಳಿ ಹಳ್ಳಿಗಳಲ್ಲಿ ಕೀರ್ತನೆ ಮಾಡುವದರಿಂದ ನನಗೆ ಒಂದು ಕೀರ್ತನೆಗೆ ೫ ರೂ. ಸಂಭಾವನೆ ಸಿಗುತ್ತಿತ್ತು . ಇಡೀ ಊರಿನವರೆಲ್ಲ ಶೇಖರಿಸಿ ಕೊಟ್ಟರೆ ೫ ರೂ ಸಿಗುತ್ತಿತ್ತು . ಇಂಥವೆಷ್ಟೋ ಹಳ್ಳಿಗಳನ್ನು ೩ ತಿಂಗಳು ತಿರುಗಿ ಎಷ್ಟು ಹಣ ಕೂಡುತ್ತೊ ಅಷ್ಟನ್ನು ತೆಗೆದುಕೊಂಡು ಹೆಚ್ಚಿನ ಹಣವನ್ನು ಹುಬ್ಬಳ್ಳಿಯ ಮೂರು ಸಾವಿರ ಮಠದ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಅರ್ಥಾತ್ (ಕಾವ್ಯನಾಮ ಮೂಜಗಂ) ಅವರು ನನಗ ಬಹಳಷ್ಟು ಸಹಾಯ ಮಾಡಿದ್ದಾರೆ. ಒಂದು ವರ್ಷಕ್ಕ ಅವರು ೩೦೦ರೂ.ಗಳನ್ನು ನನಗ ಕೊಡುತಿದ್ದರು. ಹೀಗೆ ಭಕ್ತರ ಪ್ರೇಮ ಅಂತಃಕರಣದಿಂದ ರೂ. ೧೦೦೦ ರಿಂದ ೧೫೦೦ ಹಣ ಪಡೆದು ಒಂದು ವರ್ಷದ ಗಂಜಿ ಮಾಡಿಕೊಂಡು ಊಟ, ಪಠ್ಯಪುಸ್ತಕ ಇರುವ ಮನೆಭಾಡಿಗೆ ವಂತಿಗೆ ಹೀಗೆ ಅದರಲ್ಲಿಯೇ ಎಲ್ಲ ಮಾಡಿಕೊಳ್ಳುತ್ತಿದ್ದೆ ಹೀಗೆ ನಾಲ್ಕು ವರ್ಷ ಮಾಡಿದೆ.

ಸಂದರ್ಶಕರು : ಯಾವ ಯಾವ ಜಿಲ್ಲೆಯಲ್ಲಿ ಪ್ರವಚನ ಮಾಡಿರುವಿರಿ.

ಕವಿ : ಪ್ರವಚನದ ಮೂಲಕ ಕರ್ನಾಟಕದ ಸಮಸ್ತ ಜಿಲ್ಲೆಗಳಲ್ಲಿ ಸಂಚಾರ ಮಾಡಿರುವೆ ಮಹಾರಾಷ್ಟ್ರದ ಕನ್ನಡ ಬರುವ ಸೊಲ್ಲಾಪುರ, ಸಾಂಗ್ಲಿ, ಕೊಲ್ಹಾಪುರ, ಉಸ್ಮಾನಾಬಾದ ಹೀಗೆ ಕೆಲ ಜಿಲ್ಲೆಗಳಲ್ಲಿ ಸಂಚಾರ ಮಾಡೀದೀನಿ. ಆಂಧ್ರ ಪ್ರದೇಶದ ಕನ್ನಡ ಭಾಷೆ ಬರುವ ಕೆಲಭಾಗಗಳಲ್ಲಿ ಬೌಂಡ್ರಿ ಗಡಿಭಾಗದಲ್ಲಿ ಸಂಚಾರ ಮಾಡಿನಿ.

ಸಂದರ್ಶಕರು : ಪುರಾಣ ಪ್ರವಚನ ಕಲೆಯನ್ನು ಆರಿಸಿಕೊಳ್ಳಲು ಕಾರಣವೇನು ?

ಕವಿ : ೧೯೬೩ರಿಂದ ಕಾಶಿಯಲ್ಲಿ ಕಲಿಯುವಾಗಲೇ ಈ ಪ್ರವಚನದ ಸಾಧನೆ ನಡೆಯಿತು. ವಾಪಸ್ಸು ಬಂದ ನಂತರವೂ ಪ್ರವಚನವೇ ನನ್ನ ಮೂಲ ಉದ್ಯೋಗವಾಯ್ತು. ನಾನು ನೌಕರಿ ಮಾಡಬೇಕೆಂದು ಇಷ್ಟ ಪಡಲಿಲ್ಲ. ಉಪನ್ಯಾಸಕ ಹುದ್ದೆಗೆ ಇಷ್ಟ ಪಟ್ಟವನಲ್ಲ. ಈ ನನ್ನ

ವೃತ್ತಿಯಲ್ಲಿ ಜನಸಂಪರ್ಕ ಬರುತದೆ. ಬಡವನಿಂದ ಹಿಡಿದು ಧನಿಕನವರೆಗೂ, ಏನೂ ಅಧಿಕಾರ ಇಲ್ಲದ ರೈತನಿಂದ ಹಿಡಿದು ಮೇಲಾಧಿಕಾರಿವರೆಗೂ ನನಗೆ ಸಂಪರ್ಕ ಬರ್ತದ. ಅವರ ಸ್ನೇಹ ಪ್ರೇಮ ಸಂಬಂಧ ನನಗ ಬಹಳಷ್ಟು ಫಲ ಕೊಡ್ತದ. ಹಿಂಗಾಗಿ ನೌಕರಿನೇ ಮಾಡಬಾರದು. ಕರ್ನಾಟಕದ ತುಂಬೆಲ್ಲ ಇದನ್ನೇ ಮಾಡಿದರ ಫಲಕಾರಿಯಾಗ್ತದ ಅಂತ ತಿಳಿದು ಕರ್ನಾಟಕ ಮತ್ತು ಗಡಿಭಾಗ ಎಲ್ಲ ತಿರುಗಾಡಿದೆ.

ಸಂದರ್ಶಕರು : ಕಾವ್ಯ ರಚನೆಯ ಪ್ರೇರಣೆ (ಅಂತಃ ಪ್ರೇರಣೆ–ಸ್ವಯಂ–ಅನ್ಯ)ಗಳಾವುವು ?

ಕವಿ : ಸತತ ಅಧ್ಯಯನ ಒಂದು ಪ್ರೇರಣೆ ಪುರಾತನ ಕಾವ್ಯಗಳ ಸತತ ಅಧ್ಯಯನ, ಹೇಳುವುದರಿಂದ ಅರ್ಥೈಸಿ ಸಮಾಜಕ್ಕೆ ಜನತೆಗೆ ಇಡುವುದರಿಂದ ಸ್ವತಃ ನನಗೆ ಕಾವ್ಯ ಬರೆಯುವ ಶಕ್ತಿ ಪ್ರೇರಣೆ ಬಂತು. ನಮ್ಮ ಮನೆತನದಲ್ಲಿ ಪರಂಪರಾಗತವಾಗಿ ಬಂದ ಆ ಸಂಸ್ಕೃತಿ ಇರುವದರಿಂದ ಮತ್ತು ಶಿವಯೋಗಮಂದಿರ ಆಶ್ರಮದ ಅಭ್ಯಾಸದ ಬಲ, ಪರಿಸರ ಮತ್ತು ಗುರು ಕೃಪೆಯಿಂದ ಕಾವ್ಯ ಬರವಣಿಗೆಗೆ ಪ್ರೇರಣೆಗಳಾದವು. ಸುಕ್ಷೇತ್ರ ಘತ್ತರಗಿ ಭಾಗ್ಯವಂತಿ ಪುರಾಣ ಮೊದಲ ಕಾವ್ಯ. ೨೫ ಗತಿ, ೧೧೧೧ ಪದ್ಯಗಳಲ್ಲಿ ಚಾಮರಸ ಕವಿ ಬರೆದಂತಹ ಪ್ರಭುಲಿಂಗಲೀಲೆ, ಹಂಪೆಯಲ್ಲಿ ಬರೆದಂತಹ ಕುಮಾರವ್ಯಾಸನ ಮಹಾಭಾರತ ಇವೆರಡು ಭಾಮಿನಿ ಷಟ್ಪದಿಯಲ್ಲಿ ಇರುವದರಿಂದ, ಚಾಮರಸ ಕವಿ ವೀರಶೈವ ಕವಿಯಾಗಿ ವಿರಕ್ತನಾದ್ದರಿಂದ ಆತ ಬರೆದ ಕಾವ್ಯ ನನ್ನ ಮೇಲೆ ಅತೀ ಪ್ರಭಾವ ಬೀರಿತು. ಚಾಮರಸ ಕವಿಯ ಕಾವ್ಯ ಪ್ರಭುಲಿಂಗ ಲೀಲೆ ಕಾವ್ಯದ ಮಾದರಿಯಲ್ಲಿಯೇ ನಾನು ೨೫ ಗತಿಗಳಲ್ಲಿ ೧೧೧೧ ಪದ್ಯಗಳಲ್ಲಿ ಸುಕ್ಷೇತ್ರ ಘತ್ತರಗಿ ಭಾಗಮ್ಮನ ಪುರಾಣ ಅಂದರೆ ಉತ್ತರ ಕರ್ನಾಟಕದ ಅಫಝುಲ್‌ಪುರ ತಾಲೂಕಿನ ಭೀಮಾನದಿ ತೀರದಲ್ಲಿ ಆಗಿ ಹೋದಂತಹ ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದಂತೆ ಒಬ್ಬ ಅರಮನೆಯ ಲಕ್ಷ್ಮೀದೇವಿಯ ಕಥೆಯನ್ನು ಪ್ರೌಢದೇವರಾಯನ ಕಾಲದಲ್ಲಿ ಆತ ಆರಾಧಿಸಿಕೊಂಡ ಮಹಾಲಕ್ಷ್ಮಿಯ ಕಥೆಯನ್ನು ಬರೆಯಲು ನನಗ ಅಲ್ಲಿಯ ಭಕ್ತರ ಪ್ರೇರಣೆ ಅವರಿಂದ ಬೇಡಿಕೆ ನನಗ ಬಂದ ಮೇಲೆ ಇದನ್ನೇ ನಾನು ಪ್ರಥಮ ಕಾವ್ಯವಾಗಿರಿಸಿಕೊಂಡೇನಿ.

ಸಂದರ್ಶಕರು : ಕಾವ್ಯ ರಚನೆಯ ಉದ್ದೇಶಗಳಾವುವು ?

ಕವಿ : ಪುರಾಣ ಪ್ರವಚನ ಮಾಡ್ತಾನ ಇದ್ದೀನಿ. ಇದರಿಂದ ನನ್ನ ಉಪಜೀವನ ನಡೀತಾನ ಐತಿ. ಇದರ ಮ್ಯಾಲನs ನನ್ನ ಮಕ್ಕಳ ಶಿಕ್ಷಣ ಮಾಡೀದೀನಿ. ಇದರಿಂದ ಉಪಜೀವನ ಆಗತೈತಿ ಅನ್ನವದಕ್ಕಿಂತಲೂ ನಾನು ಒಬ್ಬವ ಕವಿ ಯಾಕ ಆಗಬಾರದು, ಇಷ್ಟೆಲ್ಲಾ ಪುರಾತನ, ಮಧ್ಯ, ವರ್ತಮಾನ ಈ ರೀತಿ ಇರುವ ಕವಿಗಳ ಕಾವ್ಯಗಳನ್ನ ಓದಿ ನನಗ ಅದು ಸರಳವಾಗಿ ಬರುವದರಿಂದ ಅತಿ ಸರಳವಾಗಿ ಬರಹ ಸಾಗುವದರಿಂದ ಆಗಬೇಕೆಂತ ಆಗಿಲ್ಲ. ಬರಿತಾ ಹೋದೆ ಅದು ನನಗ ಕರಗತವಾಯಿತು. ಅದು ಉಪಜೀವನ

ಅಂತಲ್ಲ, ಒಬ್ಬ ಕವಿ ತನ್ನ ಕವಿತ್ವವನ್ನು ಬೆಳೆಸುವುದರ ಸಲುವಾಗಿ ಬರಿತಾನ ಇರತಾನ ಆ ನಿಟ್ಟಿನಲ್ಲಿ ನಾನು ಕಾವ್ಯವನ್ನು ಬರೆಯಬೇಕಾಯಿತು.

ಸಂದರ್ಶಕರು : ಛಂದಸ್ಸನ್ನು ಯಾವ ರೀತಿ ವಿವೇಚಿಸಿದಿರಿ/ರಚಿಸಿದಿರಿ ? ಅದು ರಚನಾ ತೊಡಕೇನು ?

ಕವಿ : ನೋಡ್ರಿ, ನಾನು ಹತ್ತೊಂಬತ್ತನೇ ವಯಸ್ಸಿನಿಂದ ಈವರೆಗೂ ಷಟ್ಪದಿಗಳನ್ನು, ಚತುಷ್ಪದಿಗಳನ್ನ ಉತ್ಪಲಮಾಲಾ, ಚಂಪಕಮಾಲಾ, ಸ್ರಗ್ಧಾರಾ ವೃತ್ತ, ಕನ್ನಡದಲ್ಲಿ ಬರುವಂತ ಛಂದಸ್ಸುಗಳು, ಕಾವ್ಯಗಳನ್ನು ಓದಿ ಓದಿ ಅತಿ ಸರಳ ಆಗಿರುವುದರಿಂದ ಅದರೊಳಗ ಭಾಮಿನಿಷಟ್ಪದಿಯ ಪುರಾಣ ಕಾವ್ಯಗಳನ್ನು ಓದಿ ಜನತೆಗೆ ಹೆಚ್ಚು ಹೇಳುವದರಿಂದ ಈ ಷಟ್ಪದಿ ಕಾವ್ಯಗಳು ನನಗ ಬಹಳ ಹಿಡಿಸಿದವು. ಮತ್ತ ನನಗ ಬರೀಲಿಕ್ಕ ಅತಿ ಸರಳ ಅನಿಸಿತು. ಈ ಷಟ್ಪದಿಗಳಲ್ಲಿ ಆರು ಪ್ರಕಾರ – ಶರ, ಭೋಗ ಕುಸುಮ ಪರಿವರ್ಧಿನಿ, ವಾರ್ಧಕ ಭಾಮಿನಿ ಆರು ಪ್ರಕಾರ ಅದರೊಳಗ ಅತಿ ಸರಳ ಭಾಮಿನಿ. ಉದಾ : ಚಿದಾನಂದಾವಧೂತರು ಬರೆದ ದೇವಿ ಮಹಾತ್ಮೆ ಅದು ನಮ್ಮ ಜನತೆಗೆ ಪ್ರಿಯವಾದ ಕಾವ್ಯ, ಒಬ್ಬ ಸಾಮಾನ್ಯ ರೈತ ಕೂಡ ಅದನ್ನು ಓದಬೋದು ಅಷ್ಟು ಸರಳ ತಾಳಬದ್ಧ, ಲಯ ಬದ್ಧ ಆಗಬೇಕಾದರ ಅದು ಭಾಮಿನಿ ಷಟ್ಪದಿಯಲ್ಲಿದೆ ಹೀಗೆಲ್ಲ ಕೆಲ ಕಾವ್ಯಗಳನ್ನು ಮುಂದಿರಿಸಿಕೊಂಡು ಒಬ್ಬ ಪ್ರವಚನಕಾರ ಪ್ರವಚನ ಮಾಡಬೇಕಾದರ ಅದಕ್ಕ ಸಂಗೀತ ಬೇಕೆ ಬೇಕು. ಹಂಗ ಬಾಯಿ ಮಾತಿಲೆ ಹೇಳೂದು ಬೇರೆ, ಅದನ್ನು ತಾಳದಲ್ಲಿ ರಾಗದಲ್ಲಿ ಬೆರೆಸಿ ಹೇಳಿದರ, ಬಿಡಿಸಿದರ ಅದರ ಛಂದಸ್ಸ ಬೇರೆ. ಹೀಗಾಗಿ ರಾಗದಲ್ಲಿ ತಾಳದಲ್ಲಿ ಇರುವ ಷಟ್ಪದಿ ಅಂದ್ರ ಭಾಮಿನಿ ಷಟ್ಪದಿ. ನನಗ ಭಾಮಿನಿ ಷಟ್ಪದಿಯಲ್ಲಿ ಬರಿಬೇಕಂತ ಮನಸ್ಸಾತು. ಕಾವ್ಯ ಜನರ ಮನಕ್ಕ ಮುಟ್ಟಬೇಕಂದರ ಅದಕ್ಕ ಸಂಗೀತ ಬೇಕೆ ಬೇಕು. ಸಂಗೀತವನ್ನು ಬೆರೆಸಿ ಹೇಳುವುದೇ ಬೇರೆ ಹಂಗ ಹೇಳೂದ ಬೇರೆ ರಾಗಬದ್ಧವಾಗಿ ಹಾಡ ಹೇಳಿದರ ಚಂದ ಹೀಗಾಗಿ ಸಂಗೀತದಲ್ಲಿ ರಾಗಗಳಲ್ಲಿ ಬೆರೆಯುವ ಷಟ್ಪದಿ ಅಂದರ ಇದೊಂದೇ ಭಾಮಿನಿ ಷಟ್ಪದಿ.

ಸಂದರ್ಶಕರು : ಕಾವ್ಯ ರಚನೆಯ ಹಿನ್ನೆಲೆಯಲ್ಲಿರುವ ಪ್ರಭಾವಗಳು ಯಾವುವು ? ಮತ್ತು ನೀವು ಓದಿದ ಕೃತಿಗಳಾವುವು ?

ಕವಿ : ಪುರಾತನ ಕವಿಗಳ ಕಾವ್ಯಗಳ ಸತತಾಧ್ಯಯನವೇ ಬಹುದೊಡ್ಡ ಪ್ರಭಾವವಾಗಿದೆ. ಪುರಾತನ ಕವಿಗಳು ಬರೆದಂತಹ ಗದ್ಯ ಸಾಹಿತ್ಯ, ಪದ್ಯ ಸಾಹಿತ್ಯ, ಛಂದಸ್ಸು, ಅಲಂಕಾರ, ಉಪಮಾ, ಉಪಮೇಯಗಳು ಕಾದಂಬರಿ, ಇವು ನನ್ನ ಮೇಲೆ ಪ್ರಭಾವ ಬೀರ್ಯಾವು, ನಾನು ಮೊಟ್ಟ ಮೊದಲು ಓದಿದಂತಹ ಕಾವ್ಯಗಳೆಂದರೆ ಸಂಸ್ಕೃತ ಕಾವ್ಯಗಳು. ಅದರಲ್ಲಿ ಕಾಳಿದಾಸನ ಕಾವ್ಯಗಳನ್ನು ವಿಶೇಷ ಅಧ್ಯಯನ ಮಾಡಿದ್ದೀನಿ. ಕುಮಾರಸಂಭವ, ರಘುವಂಶ, ಪ್ರತಿಮಾನಾಟಕ, ಛಂದೋಬುಧಿ, ದಶಕುಮಾರಚರಿತೆ, ಮೃಚ್ಛಕಟಕ, ವೇಣೆಸಂಹಾರ, ಕೀರಾತಾರ್ಜುನೀಯ,

ಶಿಶುಪಾಲವಧೆ, ಬಾಣನ ಕಾದಂಬರಿ, ಸಿದ್ಧಾಂತಕೌಮುದಿ, ಲಘುಸಿದ್ದಾಂತ ಕೌಮುದಿ, ವ್ಯಾಕರಣ, ಅಲಂಕಾರಶಾಸ್ತ್ರ, ಗದ್ಯ ಸಾಹಿತ್ಯವನ್ನು ಅಭ್ಯಾಸ ಮಾಡಿದೆ. 'ಸಾಹಿತ್ಯ ದರ್ಪಣ' ಕೃತಿಯ ಗದ್ಯಭಾಗವನ್ನು ಓದಿರುವೆ. ಅಧ್ಯಯನ ಸಮಯದಲ್ಲಿ ಪರೀಕ್ಷೆಗಾಗಿ ಓದಿದ, ಮನನ ಮಾಡಿದ ಸಂಸ್ಕೃತ ಕಾವ್ಯಗಳ ಅಭ್ಯಾಸ, ಹಾಗೂ ಬಾಲ್ಯದಲ್ಲಿ ಪುರಾಣ ಪ್ರವಚನ ಸಮಯದಲ್ಲಿ ಪೂರಕವಾಗಿ ಬಳಸಿಕೊಳ್ಳುವಂಥ ಭಾಮಿನಿ ಷಟ್ಪದಿಯಲ್ಲಿರುವ ಪುರಾಣ ಕಾವ್ಯಗಳ ಓದು-ಪಠಣ ನನ್ನ ಕಾವ್ಯರಚನೆಯ ಮೇಲೆ ಪ್ರಭಾವ ಬೀರಿದ ಸಂಗತಿಗಳು. ವಿಶೇಷವಾಗಿ ಚಾಮರಸಕವಿ ಬರೆದ ಪ್ರಭುಲಿಂಗಲೀಲೆ, ವಿರೂಪಾಕ್ಷಪಂಡಿತನ ಚೆನ್ನಬಸವಪುರಾಣ, ಕಠಿಣವಾಗಿರುವ ಷಡಕ್ಷರ ಕವಿಯ ರಾಜಶೇಖರ ವಿಳಾಸ ಕಾವ್ಯಗಳ ಗಾಢ ಪ್ರಭಾವ ಆಗೇದ.

ಇತ್ತೀಚೆಗೆ ಬಂದಂತಹ ಉಪನಿಷತ್ತುಗಳ ಪ್ರಮಾಣವನ್ನು ಹೇಳುವ 'ವಚನಶಾಸ್ತ್ರ ಗ್ರಂಥ' ನಿಜಗುಣಶಿವಯೋಗಿಗಳ ಪರಮಾನುಭವಬೋಧೆ, 'ಕೈವಲ್ಯಪದ್ಧತಿ', 'ವಿವೇಕಚಿಂತಾಮಣಿ', 'ಯೋಗಪ್ರತಿಪಾದಂ' ಕೃತಿಗಳು ಪ್ರಭಾವ ಬೀರ್‍ಯಾವು.

ಕ್ರಿ.ಶ. ೧೪೫೮ರಲ್ಲಿ ಇಂಡಿ ತಾಲೂಕಿನ ಸಾಲೊಟಗಿಯ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ವಿಭಾಗದ ಪ್ರಾಚಾರ್ಯರಾಗಿದ್ದ ಶಿವಯೋಗಿ ಶಿವಾಚಾರ್ಯರು 'ವೀರಶೈವ ಸಿದ್ಧಾಂತ ಶಿಖಾಮಣಿ'ಯನ್ನು ಸಂಸ್ಕೃತದ ಅನುಷ್ಟುಬ್ ಛಂದಸ್ಸಿನಲ್ಲಿ ಬರೆದುದನ್ನು ಓದಿ ಅರ್ಥೈಸಿಕೊಂಡು ಮನನ ಮಾಡಿಕೊಂಡೆ. ಇದನ್ನ ಅಷ್ಟಕ್ಕೆ ಬಿಡದೇ ಕನ್ನಡದ ಭಾಮಿನಿ ಷಟ್ಪದಿಯಲ್ಲಿ ೭೭೦ ಪದಗಳಲ್ಲಿ ಬರೆದು ಅನುವಾದ ಮಾಡಿ ಭಾಷ್ಯ, ಅರ್ಥಗಳನ್ನು ಬರದೀನಿ.

ಆಧುನಿಕರಲ್ಲಿ ದ್ಯಾಂಪುರದ ಚನ್ನಕವಿಗಳು, ಕಲ್ಲಿನಾಥ ಶಾಸ್ತ್ರಿಗಳು, ಹುಕ್ಕೇರಿಯ ಸದಾಶಿವ ಕವಿಗಳು, ಮಾವನೂರು ಸಿದ್ಧಲಿಂಗಕವಿ, ಮೊರಬದ ಗಂಗಾಧರಶಿವಾಚಾರ್ಯಕವಿಗಳು, ಯಾದಗಿರಿ, ಶಹಾಪುರ, ಸುರಪುರ ಭಾಗಗಳನ್ನು ಸೇರಿ ಕರೆಯಲ್ಪಡುವ ಮೊಗಲಾಯಿಯ ಸಗರನಾಡಿನಲ್ಲಿ ಹುಟ್ಟಿದ ಕಡಕೊಳ ಮಡಿವಾಳಪ್ಪ ಹಾಗೂ ಶಿಶುನಾಳ ಶರೀಫ ಕವಿಗಳ ತತ್ವಪದಗಳು ಮುಪ್ಪಿನ ಷಡಕ್ಷರಿ ಹೀಗೆ ಹಲವಾರು ಕವಿಗಳ ಸಂಶೋಧಕರ ಸಾಹಿತ್ಯ ಓದೀನಿ ಅವರಲ್ಲೆರ ಪ್ರಭಾವ ನನ್ನ ಮೇಲೆ ಆಗೇದ.

ಸಂದರ್ಶಕರು : ದೈವೀ ಅನುಭೂತಿ ಮತ್ತು ಕಾವ್ಯ ರಚನೆಯ ಸಂಬಂಧ ಕುರಿತು ನಿಮ್ಮ ವಿಚಾರವೇನು ?

ಕವಿ : ಕಾವ್ಯ ರಚನೆಯಲ್ಲಿ ದೈವಾನುಭೂತಿಬೇಕು. ಓದೂ ಬೇಕು. ಅನ್ನವನು ನಾನು ಬರೇ ದೈವಾನುಭೂತಿ ಇದ್ದರೂ ಸಾಲದು. ಓದು ಜ್ಞಾನಾನೂ ಇರಬೇಕು. ಕವಿಗೆ ಕಾವ್ಯ ರಚನಾ ಶಕ್ತಿಗೆ ಅಲ್ಪ ಸ್ವಲ್ಪಾದರೂ ಓದಿಕೊಂಡಿರಬೇಕು. ಎಷ್ಟೇ ಓದಿಕೊಂಡಿರತಾರ ಕೆಲವರು. ಅದರ ಬರೆಯುವ, ಬಾಯಿ ಬಿಚ್ಚಿ ಹೇಳುವ, ಶಕ್ತಿಯಿರಲ್ಲ. ಹೇಳಲಿಕ್ಕೆ ನಿಂತರ ನಡುಗ ಹುಟ್ಟತದ. ಅದಕ್ಕ ಸಭಾಕಂಪನ ಅಂತಾರ. ವೇದಿಕೆಯ ಭಯ ಇರತ್ತದ. ಬೇಕಾದಷ್ಟು

ಓದಿರತಾರ, ಆದರ ಸ್ಟೇಜ್ ಮ್ಯಾಲ ಹೋದರ ಮಂದಿ ಮುಂದ ನಿಂತರ ನಡುಗ ಹುಟ್ಟತದ. ಬಾಯಿ ತೊದಲು ತೊದಲು ಆಗ್ತದ, ಅದು ಹೋಗಬೇಕು. ಎಲ್ಲ ಓದಿಕೊಂಡಿರ್ತಾನ ಆದರ ಅವನಿಗೆ ದೈವಿ ಅನುಭೂತಿ ಇರಂಗಿಲ್ಲ. ಇಲ್ಲಂತಂದ್ರ ಅದು ಜನ್ಮತಃ ಗುರುವಿನ ಕೃಪೆಯಿಂದ ಭಗವಂತನ ಕೃಪೆಯಿಂದ ಬರಬೇಕು ಅನ್ನವವ ನಾನು ಅದು ನನ್ನ ಅಭಿಪ್ರಾಯ.

ಸಂದರ್ಶಕರು : ಕಾವ್ಯ ಕಲೆಯ ಸಾಧನೆಯನ್ನು ಕುರಿತು ಏನು ಹೇಳುತ್ತೀರಿ.

ಕವಿ : ಸಿದ್ದಿ ಎನ್ನುವ ಹಾಗಿಲ್ಲ. ಕವಿ ಇಡೀ ಜೀವನದಲ್ಲಿ ಬರೀತಾನೆ ಇರಬೇಕು. ಓದುತಾನೆ ಇರಬೇಕು. ಸತತ ಅವನ ಹೋರಾಟ. ಸಿದ್ದಿ ಇಲ್ಲಿಗೆ ಆಯಿತು ಅನ್ನವಂಗಿಲ್ಲ. ಜೀವನವಿರುವವರೆಗೆ ಬರೆಯುವದರಿಂದಾಗುವ ಪ್ರಯೋಜನ ಏನಂಥಂದ್ರೆ ಆತ್ಮ ತೃಪ್ತಿ ಮೊದಲನೆಯದು, ಬರೆದವನಿಗೆ ಅದು ಅನಿಸಬೇಕು. ಕಾವ್ಯ ಎಷ್ಟು ಚೆಂದ ಆಗೇದ ಅಂತ ಅನ್ನಿಸಬೇಕು. ಅಂದಾಗ ಇನ್ನೊಬ್ಬರಿಗನಿಸುವದು. ಆತ್ಮ ತೃಪ್ತಿ ಕೊಟ್ಟಿತು ಅಂದರ ಅದು ನಿಜವಾದ ಕಾವ್ಯ. ಅದು ಜನಮನಕ್ಕ ಮುಟ್ಟತದ. ಜನಮನಕ್ಕೆ ಮುಟ್ಟಿದಾಗ ಸರಸ್ವತಿ ಬೆನ್ನಹಿಂದ ಲಕ್ಷ್ಮಿ ತಾನೆ ಒಲಿದು ಬರತಾಳ. ಹಂಗ ನಾನು ಬರೆದಂತಹ ಕಾವ್ಯಗಳಿಗೆ ಬೆಲೆ ಬಂತು ಜನರು ತಗೊಂಡು ಓದಿದರು. ಅದಕ್ಕೆ ತಕ್ಕ ಕಾಣಿಕೆಯನ್ನು ನನಗ ಕೊಟ್ಟರು. ಅಂದರ ಸರಸ್ವತಿ ಒಲುಮೆಯಾದ ಬಳಿಕ ಲಕ್ಷ್ಮಿ ಒಲುಮೆಯು ಕೂಡಾ ನನಗ ಈ ಕಾವ್ಯ ಬರಹದಿಂದ ಆಗೇದ.

ಸಂದರ್ಶಕರು : ಕಾವ್ಯದಲ್ಲಿ ಸಾಮಾಜಿಕ ಚಿತ್ರಣ ಮಾಡಿದ್ದೀರಾ ?

ಕವಿ : ಯಾವುದೇ ಕಾವ್ಯ ಬರೆದರೂ ಅದು ವ್ಯಕ್ತಿಗತವಾಗಿರಬಾರದು. ವ್ಯಷ್ಟಿ ಕೇವಲ ಸಂಕುಚಿತ – ವೈಯಕ್ತಿಕ, ಸಮಷ್ಟಿ – ಸಮಾಜ, ಸಾಮೂಹಿಕವಾಗಿರತದ. ಹಾಗೆ ಕಾವ್ಯ ಬರೆಯುವ ಕವಿಯಲ್ಲಿ ಮೊದಲು ಸಮಷ್ಟಿಭಾವ ಇರಬೇಕು. ಇದ್ದಾಗs ಎಲ್ಲವನ್ನು ಕಾವ್ಯದಲ್ಲಿ ಪೂರಕವಾಗಿ ತುಂಬಲು ಸಾಧ್ಯ, ಕೇವಲ ಘತ್ತರಗಿ ಭಾಗ್ಯವಂತಿ ಪುರಾಣ, ಹಾನಗಲ್ಲ ಸದಾಶಿವಲೀಲೆ ಎಂದಿಟ್ಟುಕೊಂಡಾಗ, ಅದು ಲೀಲೆ ಯಾಗಲು ಹೇಗೆ ಸಾಧ್ಯ ? ಆ ಒಬ್ಬ ಶಿವಯೋಗಿ ಜೊತೆಯಲ್ಲಿ ಸಾವಿರ ಜನ ಭಕ್ತರು, ಬಡವರು, ಧನಿಕರು, ರೋಗಿಗಳು ಬರತಾರ. ಅವರಿಗೆಲ್ಲ ಸ್ಪಂದಿಸಿರುವ ಸ್ವಾಮಿ ಅವರು ಸಮಷ್ಟಿ. ಅವರ ಕಷ್ಟದಲ್ಲಿ ಭಾಗವಹಿಸಿ ದುಃಖ ಪರಿಹರಿಸಿ ಆಶೀರ್ವಾದ ಮಾಡುವ ಸ್ವಾಮಿ ಸಮಷ್ಟಿ ಒಬ್ಬ ವ್ಯಕ್ತಿಯ ಚರಿತ್ರೆಯನ್ನು ಬರೆಯುತ್ತಿದ್ದರೂ ಸಹ ಸಮಾಜವನ್ನು ಎಚ್ಚರಿಸುವಂತಹ, ನೈತಿಕ ಮಟ್ಟವನ್ನು ಹೆಚ್ಚಿಸುವ, ಒಳ್ಳೆ ದಾರಿದೀಪವಾಗಿರು–ವಂತಹ ತಿಳುವಳಿಕೆಯನ್ನು ಮುಖ್ಯವಾಗಿಟ್ಟುಕೊಂಡು ಕವಿ ಕಾವ್ಯವನ್ನು ರಚಿಸಬೇಕು. ಆ ಮಾದರಿಯಲ್ಲಿ ನಾನು ಮಾಡೇನಿ.

ಸಂದರ್ಶಕರು : ಕಾವ್ಯ ರಚನೆಯಿಂದ ಹಣ ಕೀರ್ತಿ ಆರಾಧನೆಗಳು ಎಷ್ಟರ ಮಟ್ಟಿಗೆ ಸಾಧ್ಯ ?

ಕವಿ : ವ್ಯಾಪಾರಿ ಮನೋಭಾವನೆಯಿಂದ ಬರೆಯುವವನು ಕವಿಯಲ್ಲ. ಅದರಿಂದಲೇ ನಾನು ಶ್ರೀಮಂತನಾಗತೇನಿ, ಹಣ ಆಗತದ ಅಂತ ಕಾವ್ಯ ಬರೆದವನು ಕವಿಯೂ ಅಲ್ಲ. ಅವ ಬರೆದದ್ದು ಕಾವ್ಯವೂ ಅಲ್ಲ. ಬರ್‍ತದೆ, ಸಮಾಜ ಅದಕ್ಕ ಎಷ್ಟು ಕಿಮ್ಮತ್ತ ಕೊಡಬೇಕು, ಕೊಡ್ತದೆ. ಸಮಾಜ ಕಿಮ್ಮತ್ತು ಕೊಟ್ಟು ತಗೋಳುದು ನಮಗ ಎಷ್ಟು ತೃಪ್ತಿ ಕೊಡತದಂದರ ಹಸಿದವನಿಗೆ ನಾಲ್ಕೈದು ರೊಟ್ಟಿ ತಿನಬೇಕು ಅನ್ನುವವನಿಗೆ ಒಂದು ರೊಟ್ಟಿ ಸಿಕ್ಕಂತಾಗತ್ತದ, ಪೂರ್ಣ ಅಲ್ಲ . ಇತ್ತೊಂದ ಕಾಲದಲ್ಲಿ–ಕವಿಗಳಿಗೆ, ಗಾಯಕರಿಗೆ, ನೃತ್ಯಗಾರರಿಗೆ, ವ್ಯಾಖ್ಯಾನಕಾರರಿಗೆ, ಪಂಡಿತೋತ್ತಮರಿಗೆ ರಾಜ ಮಹಾರಾಜರ ಆಸ್ಥಾನದಲ್ಲಿ ಸಂಪೂರ್ಣ ಹೊರೆಯನ್ನು ಹೊತ್ತು ಅವರ ರಕ್ಷಣೆ ಮಾಡತಿತ್ತು. ಪೋಷಣೆ ಮಾಡತ್ತಿತ್ತು. ರಾಜ್ಯಾಧಿಕಾರ ಬರೆ ತಾವೊಬ್ಬರೇ ಉಣಲಿಕ್ಕಲ್ಲ. ರಾಜ ಮಹಾರಾಜರು ಇವರನ್ನು ಗುರ್ತಿಸಿ, ಇರಲಿಕ್ಕೆ ಮನೆ, ಉಣಲಿಕ್ಕೆ ಹೊಲ, ಉಂಬಳಿಯಾಗಿ ಹಾಕಿಕೊಟ್ಟಂತ ವಿಚಾರ, ಸಮಾಚಾರ ನಮ್ಮ ದೇಶದ ಇತಿಹಾಸದಲ್ಲಿದೆ, ಶಾಸನಗಳು ಅದಾವು. ಆ ನಿಟ್ಟಿನಲ್ಲಿ ನಾವು ರಾಜಮಹಾರಾಜರ ಕಾಲದ ನಿರೀಕ್ಷಣೆ ಮಾಡಿದಾಗ ನಿರೀಕ್ಷಣೆಗೆ ತಕ್ಕ ಆ ಫಲ ಇವತ್ತಿಲ್ಲ. ನಮಗ ಜನ ಕೇಳಿ ತೃಪ್ತಿಯಾಗಿ ಕೊಡತಾರ, ಅದರಲ್ಲೆ ತೃಪ್ತಿಯಾಗಬೇಕು, ಅಷ್ಟೇ. ಪ್ರಧಾನವಾಗಿರಿಸಿಕೊಂಡರ ಸಾಧ್ಯವಿಲ್ಲ. ನಮಗ ತೃಪ್ತಿಯಾಗೇದ. ನನಗ ವೈಯಕ್ತಿಕ ಜೀವನದಲ್ಲಿ ಕಾವ್ಯವನ್ನು ಬರೆದು ಓದುವರಿಗೆ ಕೊಡುವದರಿಂದ ನನಗ ತೃಪ್ತಿಯಾಗೇದ ಆದರ ಸರಕಾರದಿಂದಲ್ಲ.

ಸಂದರ್ಶಕರು : ಆಧುನಿಕ ಕಾಲದಲ್ಲಿ ಈ ಪುರಾಣ ಕಾವ್ಯಗಳ ರಚನೆಯ ಅಗತ್ಯ ಮತ್ತು ಪರಿಣಾಮವೇನು ?

ಕವಿ : ಒಂದು ಚುಟುಕು ಬರೆದು ಪತ್ರಿಕೆಯೊಳಗ ಕೊಟ್ಟಪಾ ಅಂದ್ರ. ಒಂದು ದಿನಪತ್ರಿಕೆಯಲ್ಲಿ ನಾವು ಒಂದು ಚುಟುಕು ಬರದು ಕೊಟ್ಟೇವಿ ಅಂದ್ರ ಆ ಚುಟುಕು ಬೆಳಿಗ್ಗೆ ೬ ರಿಂದ ೮ ಗಂಟೆವರೆಗೆ ಪೇಪರ ಓದಿ ಮುಗಸ್ತಾನ, ಸ್ನಾನ ಊಟ ಮಾಡಿ ಆಫೀಸಿಗೆ ಹೋಗ್ತಾನ, ಮರದಿನ ಕೇಳಿದರ ಆ ಚುಟುಕು ಅವನಿಗೆ ನೆನಪು ಇರೂದಿಲ್ಲ. ಸಂಗ್ರಹಿಸಿ ಒಂದು ಪುಸ್ತಕ ರೂಪದಲ್ಲಿ ತರಬೇಕಂದರೂ ಸಾಧ್ಯ ಆಗೂದಿಲ್ಲ. ಚುಟುಕು – ಗುಟುಕು – ಕಥೆ ಇವು ಕ್ಷಣಿಕ ಆನಂದವನ್ನು ಕೊಡುವಂಥವು. ಚಿರಂತನ, ವಿನೂತನ ಅಮರ – ಅಜರಾಮರವಾಗಿ ಉಳಿಯಬೇಕಾದರೆ ಅದು ಕಾವ್ಯ ರೂಪದಲ್ಲಿಯೇ ಹೊರಬರಬೇಕು ಅನ್ನೋದು ನನ್ನ ಅನಿಸಿಕೆ. ಚುಟುಕು ನಗೆಹನಿ ಸಾಹಿತ್ಯದಲ್ಲಿ ಸಿಗುವ ಆನಂದ ಕೇವಲ ಮನರಂಜನೆಗೆ ಮಾತ್ರ ಅನುಕೂಲ.

ಸಂದರ್ಶಕರು : ಕಾವ್ಯ ವಸ್ತು ವಿವೇಚನೆಯ ಪ್ರಧಾನ ಅಂಶ ಯಾವುದು ?

ಕವಿ : ವ್ಯಕ್ತಿ–ವ್ಯಕ್ತಿ ಚಿತ್ರಣ ಮಾಡಲೇಬೇಕು. ಜನತೆಯ ಮುಂದೆ ಇಡಲೇಬೇಕು. ದುಡ್ಡಿಗಾಗಿ ಅಯೋಗ್ಯರನ್ನು ಕುರಿತು ಕಾವ್ಯ ಬರೆದ ಕವಿ ಕುಕವಿ ಆಗ್ತಾನ. ಹರಿಹರ ನರರನ್ನು

ನಾ ಎಂದೆಂದೂ ಕೊಂಡಾಡುವದಿಲ್ಲಂತಾನ ಹಿಂಗಿರುವಾಗ ವ್ಯಕ್ತಿ ಯೋಗ್ಯನಾಗಿರಬೇಕು. ಸಮಾಜಕ್ಕೆ ಅದೊಂದು ಕೊಡುಗೆಯಾಗಿರಬೇಕು ಅಂತಹ ವ್ಯಕ್ತಿಯ ಚಿತ್ರಣವನ್ನು ಮೊದಲು ಚಿತ್ರಿಸ್ತಾನ, ಆಮೇಲೆ ಅವನ ವ್ಯಕ್ತಿತ್ವವನ್ನು ಪ್ರಕಟಗೊಳಿಸ್ತಾನ, ವಿಸ್ತಾರ ಮಾಡುತ್ತ ಅವನ ಸಾಮಾನ್ಯ ಹುಟ್ಟು ಜನನ – ಬಾಲ್ಯ – ಯೌವ್ವನ ಹೇಳಿ, ಯೌವ್ವನದಲ್ಲಿ ಏನು ಮಾಡಿದ ಅದೇ ವ್ಯಕ್ತಿ ಚಿತ್ರಣ. ಸಮಾಜದ ಮೇಲೆ ನಂಬಿದ ಭಕ್ತರ ಮೇಲೆ ಪ್ರಭಾವ ಬೀರುವಂತೆ ಇರಬೇಕು. ಹಂಗ ವ್ಯಕ್ತಿ ಚಿತ್ರಣವಿರಬೇಕು ಸಾಧನೆಯಲ್ಲಿರಬೇಕು ಸಾಧಕನಾಗಿ ಸಿದ್ಧನಾಗಬೇಕು. ಅಂತಹ ವ್ಯಕ್ತಿಯ ಚಿತ್ರಣವನ್ನು ಕವಿ ಚಿತ್ರಿಸುತಾನ. ನಾನು ಅದೇ ರೀತಿಯಲ್ಲಿ ಚಿತ್ರಿಸೀನಿ. ಒಬ್ಬ ಸ್ವಾಮಿ ಹಿಂಗ ಅದಾರ, ನಾವು ಹಿಂಗಿರಬೇಕು ಅಂತಹ ಅನಿಸಿಕೆಯನ್ನು ಕವಿ ಕಾವ್ಯದಲ್ಲಿ ಇಡತಾನ ಇದು ಕಾವ್ಯದ ಮೂಲ ಚಿತ್ರಣ.

ಸಂದರ್ಶಕರು : ಅನುಭಾವದ ಹಿನ್ನೆಲೆಯಲ್ಲಿ ಕಾವ್ಯವನ್ನು ಚಿತ್ರಣ ಮಾಡಿರುವಿರಾ ?

ಕವಿ : ಯಾವುದೇ ಕಾವ್ಯವನ್ನು ಭರೀಬೇಕಾದರ ಆ ವ್ಯಕ್ತಿಯ ಬಗ್ಗೆ ಸಂಪೂರ್ಣ ತಿಳುವಳಿಕೆಯಿರಬೇಕು. ಓದಿನಿಂದಾಗಲಿ, ಒಡನಾಟದಿಂದಾಗಲಿ ಅಥವಾ ಸಭ್ಯ ಗ್ರಹಸ್ಥರಿಂದ ಕೇಳಿ ಬರುವಾದಗಲಿ, ಇದಾವುದೊಂದು ಇಲ್ಲದೆ ಬರೆಯಲು ಆಗೂದಿಲ್ಲ. ಪೂರ್ವಾಪರ ಅವನ ವಿಚಾರ ಅರಿತುಕೊಂಡೇ ಬರೆಯಬೇಕು.

ಸಂದರ್ಶಕರು : ದೈವಾನುಭೂತಿ ನಿಮಗೆ ಉಂಟಾಗುವುದೇ ?

ಕವಿ : ದೈವಾನುಭೂತಿ ಆಗಿದೆ. ಘತ್ತರಗಿ ಭಾಗ್ಯವತಿ ಪುರಾಣ ಬರೆಯುವಾಗ ಪ್ರತ್ಯಕ್ಷವಾಗಿ ದೈವೀ ಅನುಭೂತಿ ಆಗೇದ. ಭಾಗ್ಯವಂತಿ ಪುರಾಣದ ಆಶೀರ್ವಚನದಲ್ಲಿ ಕಾಶಿ ಜಗದ್ಗುರುಗಳು ನನ್ನ ಬಗ್ಗೆ ಬರದಾರ. ಅಂದರ ಶಾಸ್ತ್ರಿಗಳು ಈ ಕಾವ್ಯವನ್ನು ಬರಿಬೇಕಾದರ ಭಾಗ್ಯವಂತಿಯ ಪ್ರತ್ಯಕ್ಷ ಅನುಗ್ರಹ ಆಗಿದ್ದರಿಂದಲೇ ಇಂತಹ ಬೃಹದ್ ಗ್ರಂಥ ಒಳ್ಳೆ ವೇಟ್ (ಮೌಲ್ಯ) ಇರುವ ಕಾವ್ಯ ಇವರಿಂದ ಹೊರಹೊಮ್ಮಿದೆ. ಹಿಂದೆ ಕವಿ ಕಾಳಿದಾಸನಿಗೆ ಕಾಳಿಕಾದೇವಿಯ ವರ ಪ್ರಸಾದವಾದಂತೆ ಇವತ್ತ ಪಂ. ಸೋಮಶೇಖರ ಶಾಸ್ತ್ರಿಗಳಿಗೆ ದೇವಿ ವರ ಆಗಿರುವದರಿಂದ ಕಾಳಿದಾಸನ ಜೀವನಕ್ಕ – ಶಾಸ್ತ್ರಿಗಳ ಜೀವನಕ್ಕ ಸ್ವಲ್ಪ ಮಟ್ಟಿಗಾದರೂ ಹೋಲಿಕೆ ನಮಗ ಕಂಡು ಬರತದಂತ ಪೂಜ್ಯ ಜಗದ್ಗುರು ಸನ್ನಿಧಿಯವರು ಆಶೀರ್ವಚನದಲ್ಲಿ ಬರದಾರ. ಅದು ಅವರಿಗೆ ಗೊತ್ತು, ಏನ ಕಂಡ ಹಿಡಿದು ಬರದರು ಅನ್ನುದು. ಅನುಗ್ರಹ ಆದ ಮೇಲೆ ನಾನು ಬಂದೇನಿ. ಆಮೇಲೆ ಅವರು ಬರದಾರ, ಕಾವ್ಯದಲ್ಲಿ ಅದನ್ನ ನೋಡಬಹುದು.

ಸಂದರ್ಶಕರು : ವೈಯಕ್ತಿಕವಾಗಿ ನಿಮ್ಮ ಬದುಕಿನ ಮೇಲೆ ಪರಿಣಾಮ ಆಗಿದೆಯೇ ?

ಕವಿ : ಪುರಾಣ ಪ್ರವಚನ ಮಾಡುವದು, ಕಾವ್ಯ ಬರೆಯುವುದು, ಓದುವದು, ಹೇಳುವದು ವಿದ್ಯಾರ್ಜನೆ ಸರಸ್ವತಿಯ ಒಂದೇ ಲೈನು. ಈ ಸಾಧನೆಯಿಂದ ನನಗೊಬ್ಬನಿಗೆ ಲಾಭ ಆಗೇದಂತ ಹೇಳೂದಿಲ್ಲ. ಅದು ಮನೆತನಕಾಗೇದ ನನ್ನ ಮಕ್ಕಳಿಗಾಗೇದ, ನಮ್ಮ

ಬಂಧುಗಳಿಗಾಗೇದ. ಅದು ಸಾತ್ವಿಕ ಶಕ್ತಿಯನ್ನು ಕೊಡುತದ. ಬರೆಯುವುದರಿಂದ ಓದುವರಿಗೆ ಒಳ್ಳೆ ಸಂಸ್ಕಾರ ಬದಲಾವಣೆ ಏನಾದರೂ ಇತ್ತಂದರ ಜೀವನದಲ್ಲಿ ಒಳ್ಳೆ ಮಾರ್ಗ ದರ್ಶನ ಅದರಿಂದ ಆಗತದ–

ಸಂದರ್ಶಕರು : ಸಹಾಯಕ ಸಂಗತಿಗಳು ಯಾವುವು ?

ಕವಿ : ಓದು, ಸತತಾಧ್ಯಯನ ಮುಖ್ಯ. ಅದರಿಂದ ನನಗ ಸಹಾಯ ಆಗೇದ.

ಸಂದರ್ಶಕರು : ಕಾವ್ಯವನ್ನುಳಿದು ನಿಮ್ಮ ಬರಹಗಳಾವುವು ?

ಕವಿ : ತಾತ್ವಿಕ ಚಿಂತನೆಯ ಲೇಖನಗಳು ೪–೫ ಪುಟಗಳಷ್ಟು ಚರಿತ್ರೆಯ ಲೇಖನ ದೈನಂದಿನ ಮಾಸಿಕ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಕವಿತೆಗಳು ಪ್ರಕಟವಾಗಿವೆ. ಜನಪದ ಸಾಹಿತ್ಯ ನನ್ನ ಮೇಲೆ ಅತೀವ ಪ್ರಭಾವ ಬೀರ್ಯಾವು, ಕಾರಣ ಹಳ್ಳಿಗಳಲ್ಲಿ ಪ್ರವಚನ ಮಾಡುವಾಗ ಪಾರಂಪರಿಕವಾಗಿ ಅನಾದಿಕಾಲದಿಂದಲೂ ಬಂದಂತಹ ಪದ – ಪದ್ಯಗಳು, ಅದರಲ್ಲೂ ತ್ರಿಪದಿಗಳು, ನನಗ ಅತ್ಯಂತ ಪ್ರಭಾವ ಬೀರಿದೆ. ಹಳ್ಳಿ ಹಳ್ಳಿಗೆ ಹೋಗಿ ಹೆಣ್ಣು ಮಕ್ಕಳು ಹಾಡತಕ್ಕಂತಹ ೭೦೦ ತ್ರಿಪದಿ ಪದ್ಯಗಳನ್ನು ಸಂಗ್ರಹ ಮಾಡೇನಿ. ಜನರಿಂದ ಬಂದಂತವು. ಶಿವನ ಮುಖದಿಂದ ೨೮ ಶಿವಾಗಮಗಳು ಬಂದ್ಹಂಗ ಜನಪದ ಸಾಹಿತ್ಯ ಉದಾ : ಬ್ಯಾಸಗಿ ದಿವಸಕ್ಕ ಬೇವಿನ ಮರತಂಪು. ಯಾವ ಹೆಣ್ಣು ಮಗಳು ಮಾಡಿದಳಂತ ಕೇಳಿದರ ಇವತ್ತಿಗೂ ಯಾವ ಸಂಶೋಧಕ, ವಿಮರ್ಶಕರಿಗೂ ತಿಳಿದು ಬಂದಿಲ್ಲ. ಬರೂಹಂಗ ಇಲ್ಲ. ಪರಂಪರೆಯಿಂದ, ಬಾಯಿಂದ ಬಾಯಿಗೆ ಬರುವ, ಕಿವಿಯಿಂದ ಕಿವಿಗೆ ಹೋಗುವಂತಹ ಜನಪದ ಇದರ ಮೇಲೆ ನನ್ನದು ಹೆಚ್ಚು ಪ್ರೀತಿ. ಅದನ್ನ ಹೆಚ್ಚು ಬಳಸಿಕೊಂಡೇನಿ, ಸಂಗ್ರಹ ಮಾಡೇನಿ, ಅದು ನನ್ನ ಪ್ರವಚನಕ ಮಾಧ್ಯಮ ಆಗೈತಿ. "ಜಾನಪದ ತ್ರಿಪದಿ"ಗಳೆಂಬ 'ತ್ರಿಪದಿ ಸಂಗ್ರಹ' ಪ್ರಕಟ ಆಗಿದೆ ೭೦೦ ತ್ರಿಪದಿಗಳ ಸಂಗ್ರಹ ಮಾಡೇನಿ. ೨ ಭಾಗ ಮಾಡಿ ೧ನೇ ಭಾಗ ಪ್ರಿಂಟ್ ಆಗೇದ, ಎರಡನೆ ಭಾಗ ಆರ್ಥಿಕ ತೊಂದರೆಯಿಂದ ಪ್ರಕಟ ಮಾಡಿಲ್ಲ. Benifit ಐತಂದರೂ ಕೂಡಾ, ಹಣ ಹೂಡುವಂತ ಶಕ್ತಿಯಿಲ್ಲದ್ದರಿಂದ ಹಾಗೆ ಉಳೀತು. 'ವೀರಶೈವ ಸಿದ್ಧಾಂತ ಶಿಖಾಮಣಿ' ಕೇವಲ ಡಿ.ಟಿ.ಪಿ. ಆಗಿ ಹಾಗೆ ಉಳಿತು. ಆರ್ಥಿಕ ತೊಂದರೆಯೇ ಕಾರಣ. 'ಸಂಖ್ಯಾ ವಿಶಿಷ್ಠ ಪದಗಳ ಸಂಗ್ರಹ' ಸಂಖ್ಯೆಯಿಂದ ಕೂಡಿದ ಶಬ್ದಗಳು. ಒಂದು–ಏಕಾಕ್ಷ–ಪರಮಾತ್ಮ ಒಬ್ಬನೇ 'ಓಂ' ಏಕಾಕ್ಷರ ಒಂದು.

ಸಂದರ್ಶಕರು : ನೀವು ಮೆಚ್ಚಿದ ಅನ್ಯರ ಕೃತಿಗಳಾವುವು ?

ಕವಿ : ಅನ್ಯರ ಕೃತಿಗಳನ್ನು ಓದಿದ್ದರಿಂದ ನನಗ ಕಾವ್ಯ ಬರಿಲಿಕ್ಕೆ ಬಂತು. ಅನ್ಯರು ನಾನು ಬರೆದ ಕಾವ್ಯ ಓದಿ ಮೆಚ್ಚಿ ಅದೇ ಊರೊಳಗ ಪುರಾಣ ಹಚ್ಚಿ ಬೇರೆ ಪಂಡಿತರಿಂದ ಅದನ್ನ ಹೇಳಾಕ ಹಚ್ಚಿ, ಕೊನೆದಿವಸ ನನ್ನನ್ನು ಕರೆಸಿ ನನಗೆ ಪುರಸ್ಕಾರ – ಮಾನ – ಸಮ್ಮಾನ ಸಂಭಾವನೆ ಕೊಟ್ಟಿದ್ದಾರ. ನನಗ ತೃಪ್ತಿ ಆಗೇದ. ನನ್ನ ಕಾವ್ಯಗಳಿಂದ ಜನರಿಗೆ ಪುರಸ್ಕಾರ ಸಿಕ್ಕದ. ಅನೇಕರ ಕಾವ್ಯಗಳಿಂದ ನನಗ ಸಹಾಯ ಆಗೇದ.

೧೯೬೩ರಿಂದ ಸಮಗ್ರವಾಗಿ ಪುರಾಣ ಪ್ರವಚನ, ಕೀರ್ತನೆ, ಉಪನ್ಯಾಸ, ಬರಹ, ಲೇಖನ, ಕಾವ್ಯ ಇವುಗಳನ್ನು ಸತತವಾಗಿ ಮಾಡುತ್ತ ಇಲ್ಲಿಗೆ ನನಗ ೪೭ ವರ್ಷ ಆಯಿತು. ನಾಡಿನ ಜನ ನನ್ನ ವಿದ್ಯೆಯನ್ನು, ಕಲೆಯನ್ನು, ಕವಿತ್ವವನ್ನು ಗುರ್ತಿಸಿ ಪ್ರಾರಂಭದಲ್ಲಿ ನನಗೆ ಕೊಟ್ಟದ್ದು 'ಕೀರ್ತನ ಕೇಸರಿ' ಅದನ್ನು ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯರು ಕೊಟ್ಟರು. 'ರಸಿಕ ಚಕ್ರವರ್ತಿ' ಅಂತಹ ಹುಬ್ಬಳ್ಳಿ ಮೂರು ಸಾವಿರ ಮಠದಿಂದ (ಮೂಜಗಂ) ಅವರು ಕೊಟ್ಟರು. ೧೯೬೩ರಲ್ಲಿ 'ಪುರಾಣ ರತ್ನ' ಧಾರವಾಡದ 'ಮೃತ್ಯುಂಜಯಪ್ಪಗಳು' ಕೊಟ್ಟರು. 'ಪೌರಾಣಿಕ ಭಾಸ್ಕರ' ಚಿತ್ರದುರ್ಗ ಮುರುಘಾಮಠದ 'ಮಲ್ಲಿಕಾರ್ಜುನ ಮುರುಘರಾಜೇಂದ್ರಸ್ವಾಮಿ'ಗಳು ಕೊಟ್ರು. 'ಚತುರ್ಭಾಷಾ ಜಾನಪದ ಸಾಗರ', 'ಕವಿ ಕುಲೋತ್ತಮ', 'ಕರ್ನಾಟಕ ಭೂಷಣ', 'ಕರ್ನಾಟಕ ಕಲಾ ಕೇಸರಿ'. ಎಂಬ ಬಿರುದುಗಳು ನನಗ ಬಂದಾವು. ಅಂದ್ರ ಸುಮಾರು ನನ್ನ ಪ್ರವಚನ ಹಳ್ಳಿಯಿಂದ ಪ್ರಾರಂಭವಾಗಿ ತಾಲೂಕು ಮಟ್ಟದಲ್ಲಿ ಬಂದು, ನಮ್ಮ ಕರ್ನಾಟಕದ ಎಲ್ಲಾ ತಾಲೂಕಾ ಮಟ್ಟದಲ್ಲಿ ಮುಗಿಸಿ ಜಿಲ್ಲಾ ಮಟ್ಟದಲ್ಲಿ ಬಂದು, ಅಂದಿನಿಂದ ಇಂದಿನವರೆಗೂ ಬಂದು ಸುಮಾರು ಐವತ್ತು ಪ್ರಶಸ್ತಿಗಳು ನನಗೆ ನಿಲುಕಿ ಜನರಿಂದ ಶಾಲು-ಸನ್ಮಾನ, ಬಿರುದು, ಮಾನ-ಮಾರ್ಯಾದೆಗಳು ನನಗೆ ಸಿಕ್ಕಾವು. ಆದ್ರ ಸರಕಾರ ಈವರೆಗೊ ನನ್ನನ್ನು ಗುರ್ತಿಸಿಲ್ಲ. ಕೇಳಿದ್ರ ಎಲ್ಲಾ ಸಂಗ್ರಹ ಮಾಡಿ ತಂದ ಕೊಡ್ರಿ ನೋಡೋಣ ಅನ್ನುವ ಮಾತು, ಎಲ್ಲಾ ಮುಗದ ಹೊಗ್ಯಾವು. ಕೊಟ್ಟು ನೋಡೀವಿ. ಇವೆಲ್ಲ ಬಹಳಷ್ಟು ವಸೂಲಿ ಇಟಗೊಂಡವರಿಗೆ ಮಾತ್ರ ಸಾಧ್ಯ ಅಂತ ತಿಳಿದು ನಾನು ಇವನ್ನೆಲ್ಲಾ ಇಟಗೊಂಡ ಮೌನ ತಾಳೀನಿ. ನೀವಾದ್ರು ಮಾಡಿ ಕೊಡ್ರಿ ಅಂತ ಬೆನ್ನ ಬಿದ್ದು ಕೇಳುವಂತ ಆಸಕ್ತಿ ಉತ್ಸುಕತೆ ನನ್ನಲ್ಲಿ ಉಳಿದಿಲ್ಲಾ. ನನಗ ಇದರಲ್ಲೇ ತೃಪ್ತಿ ಅದ. ನನಗ ಸಾವಿರ ಜನ್ರಿಂದ ಬಂದ್ರ ಸಾಕು. ಸರಕಾರದಿಂದ ಬರದೇ ಇದ್ರು ಚಿಂತಿಲ್ಲಾ. ನನ್ನ ಮನಸಿನ ನೆಮ್ಮದಿಯನ್ನು ಪಡಕೊಂಡೀನಿ.

ಒಳ್ಳೇ ರೀತಿಯಿಂದ ವಿಚಾರಗಳನ್ನು ಹಂಚಿಕೊಂಡ ತಮಗೆ ಧನ್ಯವಾದಗಳು.

◆◆◆

ಪಂಡಿತ ಶ್ರೀ ರಾಜಗುರು ಗುರುಸ್ವಾಮಿ ಕಲಕೇರಿ
ಸಂದರ್ಶನ ದಿ : ೧೯-೧೧-೨೦೧೦

ಸಂದರ್ಶಕರು : ಮೊದಲಿಗೆ ತಮ್ಮ ವೈಯಕ್ತಿಕ ವಿವರಗಳನ್ನು ನೀಡಬೇಕು.

ಕವಿ : ನಮ್ಮದು ಬಿಜಾಪೂರ ಜಿಲ್ಲೆ, 'ಕಲಕೇರಿ' ಗ್ರಾಮ. ನಮ್ಮ ತಂದೆ ತಾಯಿ ಹೆಸರು 'ಕಾಸಯ್ಯ' 'ಪರಮ್ಮ'. ಅವರ ಉದರದಲ್ಲಿ ೧೯೪೦ ಸೆಪ್ಟಂಬರ್ ೧೩ರಂದು ಹುಟ್ಟಿದ್ದು. ಅಲ್ಲಿಯೇ ಕಲಕೇರಿಯೊಳಗ, ತಾಳಿಕೋಟೆಯೊಳಗ ಪ್ರಾಥಮಿಕ ಮಾಧ್ಯಮಿಕ ಶಿಕ್ಷಣ ಮುಗಿಸಿಕೊಂಡು, ೧೯೫೮ರಲ್ಲಿ ಗದಿಗ್ಯೆಬಂದೆ, ಡಾ॥ ಪಂ. ಪುಟ್ಟರಾಜ ಗವಾಯಿಗಳವರ ಶಿಷ್ಯತ್ವ ವಹಿಸಿ, ಸಂಗೀತ ಸಾಹಿತ್ಯ ಅಭ್ಯಾಸ ಮಾಡಿದೆ. ಅವರ ಮಾರ್ಗದರ್ಶನದಲ್ಲಿ ಸಂಗೀತದೊಂದಿಗೆ ಸಾಹಿತ್ಯವನ್ನು ಆಭ್ಯಾಸ ಮಾಡಿದೆ. ಕಾವ್ಯಗಳನ್ನು ಬರೆಯತಕ್ಕಂತ ಒಂದು ಅಭಿರುಚಿ ಗುರುಗಳ ಸಂಪರ್ಕದಲ್ಲಿ ಇತ್ತು. ಗುರುಗಳು ತ್ರಿಭಾಷಾ ಕವಿಗಳು, ಅವರು ಅನೇಕ ಪುರಾಣಗಳನ್ನು ಬರದ್ರು. ಕೆಲವು ಪುರಾಣಗಳನ್ನು ನನ್ನಕೂಡ ಬರೆಸಿದರು. ಬರಿಯುವ ಕಾಲಕ್ಕ ಆ ಕಾವ್ಯದ ಬಗ್ಗೆ ಹೆಚ್ಚು ಅಭಿರುಚಿ ನನ್ನಲ್ಲಿ ಬಂತು. ಜೊತೆಗೆ ಗುರುಗಳು ಪುರಾಣ ಹೇಳತ್ತಿದ್ದರು. ಪುರಾಣ ಹೇಳು ಕಾಲಕ್ಕ ನಾನು ಪುರಾಣ ಪಠಣ ಮಾಡುತ್ತಿದ್ದೆ, ಹೀಗಾಗಿ ಗಾಢ ಸಂಪರ್ಕ ಬೆಳಿತು. ಕಾವ್ಯದ ಪ್ರತಿಬೆ ಬೆಳದಾಗ, ನಮ್ಮ ಕಲಕೇರಿ ಮಠದ್ದು ಒಂದು ಪುರಾಣ ಬರೆಸಬೇಕಂತ ಮಾಡಿನಿ, ಅದನ್ನು ನೀವ ಬರಿರಿ ಎಂದು ಹೇಳಿದೆ. ನೀನ ಬರಿತಿ ಅಲ್ಲ ಬರಿಬೇಕು ಅಂದ್ರು. ನಾ ಇನ್ನು ಬರದೆ ಇಲ್ಲ ಪುರಾಣ, ನೀವು ಬರೀರಿ, ದೊಡ್ಡೋರು ಬರಿಬೇಕು, ದೊಡ್ಡ ಮಠದ ಪುರಾಣದು, ಆಗಲಿ ನಾ ಬರೀತಿನಿ, ಆದರೂ ನೀ ಪುರಾಣ ಬರಿಬೇಕು. ಆಗ ಪುರಾಣ ಬರದ್ರು, ಆ ನಂತರ ಮಾರನೇ ವರ್ಷನ ಆ ಪುರಾಣ ಬರೆಯುವಂತ ಪ್ರಸಂಗ ಬಂತು. ಕಲಬುರ್ಗಿ ಸ್ವಾಮಿಗಳ ಪುರಾಣ, ಪ್ರಥಮ ಪುರಾಣ ಸ್ಟಾರ್ಟ್ ಮಾಡಿದೆ.

ಸಂದರ್ಶಕರು : ಕಾವ್ಯ ರಚನೆಯಲ್ಲಿ ಪ್ರೇರ್ಣೆ (ಸ್ವಯಂ-ಅನ್ಯ)ಗಳಾವುವು ?

ಕವಿ : ಸ್ವ-ಪ್ರೇರಣೆಗಿಂತಲೂ ಗುರು ಪ್ರೇರಣೆನೇ ಹೆಚ್ಚು ನನಗ ಮತ್ತು ಇನ್ನೊಂದು ಓದು ಚಟ ಬಾಳ ನನಗ, ಇಂತಹ ಪುಣ್ಯಾತ್ಮರ ಸಾಹಿತ್ಯವನ್ನು ಓದುವಂತಹ ಚಟ ಬಾಳ ಇದ್ದ ಕಾಲಕ್ಕ ಮರಿ ತೋಂಟದಾರ್ಯರ ಪುರಾಣ, ಮೂರು ವರ್ಷ ನಮ್ಮ ಗುರುಗಳು ಪ್ರವಚನ ಮಾಡಿದ್ರು, ಸಿದ್ಧೇಶ್ವರ ಪುರಾಣ, ಅವಾಗ ನಾನು ಪುರಾಣ ಓದುತ್ತಿದ್ದೆ, ಹೀಗೆ ಅದು ಸಂಪರ್ಕನೇ ಹೆಚ್ಚು ಅಯಿತು. ಅದ್ರ ಅದು ಆಟೋಮೇಟಿಕ್ ಆಗಿರಬಹುದು.

ದೈವದತ್ತವಾಗಿರಬಹುದು. ಬರೆಯುವಂತಹ ಕಲೆ ಅದಕ್ಕ ಪ್ರೋತ್ಸಾಹನ, ಸಂಜೀವಿನಿ ನೀರನ್ನೆರೆದಂತೆ, ಗುರುಗಳ ಸಂಸ್ಕಾರ ನನಗ ಹೆಚ್ಚಾಯ್ತು. ಅನಂತ ಕಾವ್ಯಗಳ ಅಭ್ಯಾಸ ಮಾಡುವುದರಿಂದ ಅದು ಬರಿಬೇಕಂತ ಬಂತು.

ಸಂದರ್ಶಕರು : ಪುರಾಣ ಕಾವ್ಯಗಳ ರಚನೆಯ ಉದ್ದೇಶವೇನು ?

ಕವಿ : ಕಾವ್ಯಗಳನ್ನು ರಚನೆ ಮಾಡುವಂತಹ ಉದ್ದೇಶ ಏನಂದ್ರ, ಕಾವ್ಯಗಳು, ಕಾವ್ಯ ಕರ್ತೃಗಳು ಮಹಾನುಭವರಿರಬಹುದು, ಮಹಾತ್ಮರಿರಬಹುದು, ಶರಣರಿರಬಹುದು ಅವರ ಬದುಕಿನ ಬಗೆ ಏನೈತಿ ಅದು ನನಗ ದಾರೀದೀಪ. ಅವರು ನಡೆದಿರುವಂತ ನಡೆ, ಅವರು ಉಪದೇಶ ಮಾಡಿರುವಂತ ನುಡಿ, ಪ್ರತಿಯೊಂದು ಈ ಆಧುನಿಕ ಜನರಿಗೆ ಬಾಳ ಅವಶ್ಯ ಅಂತ ನನಗೆ ಅನ್ನಸತದ. ಆ ದೃಷ್ಟಿಯೊಳಗ ಎಷ್ಟೋ ಮಂದಿ ಸ್ವಾಮಿಗಳು ಅಪ್ಪಣೆ ಮಾಡಿದ್ರು, ಬರೀರಿ ಅಂತ ಹೇಳಿದ್ರು, ಅದರ ಜೊತೆಗೆ ಇದು ಒಂದು ಅಂತ ಅದೇ ದೃಷ್ಟಿಯಲ್ಲಿ ಬರದೆ.

ಸಂದರ್ಶಕರು : ಛಂದಸ್ಸನ್ನು ಯಾವ ರೀತಿ ವಿವೇಚಿಸಿದಿರಿ? ಅದು ರಚನಾ ತೊಡಕೇನು ?

ಕವಿ : ಈ ಪುರಾಣ ಕಾವ್ಯ ರಚನೆ ಮಾಡುದ್ರೊಳಗ, ಈ ಪುರಾಣದೊಳಗ ಒಂದು ಪದ್ಧತಿಯನ್ನ ಹಾಕ್ಯಾರ, ರಾಘವಾಂಕ ಷಟ್ಪದಿಯೊಳಗ ಬರಿವಂತ ಪದ್ಧತಿಯನ್ನ ಹಾಕಿದ ಷಟ್ಪದಿಯೊಳಗ ಅನೇಕ ಷಟ್ಪದಿಗಳು ಅದಾವು, ಅವೆಲ್ಲ ಮಾಹಿತಿ ಮಾಡಿಕೊಟ್ರು ಗುರುಗಳು. ರಾಜಶೇಖರ ವಿಳಾಸ, ಶಬರಶಂಕರ ವಿಳಾಸ, ಆ ನಂತರ ಮರಿತೋಂಟದಾರ್ಯರು ಬರೆದಂತ ಸಿದ್ಧೇಶ್ವರ ಪುರಾಣ; ದೊಡ್ಡ ಕಾವ್ಯ ಅದು, ಓದಲಿಕ್ಕೆ ಬರದುಲ್ಲಾ, ಅಷ್ಟೊಂದು ಗಡುಚಾಗಿರುವಂತ ಕಾವ್ಯದು. ಅದನ್ನು ನನಗ ಗುರುಗಳು. ಹೇಳಿದಾಗ ಷಟ್ಪದಿಗಳ ಮಾಹಿತಿಯಾತು. ಆ ಷಟ್ಪದಿಗಳ ಮಾಹಿತಿಯಾದ್ದರಿಂದ ಬರೆಯುವಂತ ಸಮಯದಲ್ಲಿ ಛಂದಸ್ಸಿನ ತೊಂದರೆ ಏನು ಅನ್ನಿಸಲಿಲ್ಲ ನನಗ.

ಸಂದರ್ಶಕರು : ಆರು ಷಟ್ಪದಿಯಲ್ಲಿ ಭಾಮಿನಿ ಷಟ್ಪದಿಯನ್ನು ನೀವು ಕಾವ್ಯಕ್ಕ ಯಾಕ ಬಳಸಿಕೊಂಡ್ರೀ ?

ಕವಿ : ಯಾಕ ಬಳಸಿಕೊಳ್ತಾರಂದ್ರ ಬಾಳ ಸುಲಲಿತವಾಗಿ ಇರುವಂತಹದ್ದು ಮತ್ತು ಸಂಗೀತಕ್ಕ ಹೊಂದುವಂತದು. ಸಂಗೀತದೊಳಗ ದೀಪಚಂದ ಅಂತ ಒಂದು ತಾಳ ಬರತ್ತದ. ಅದು ಭಾಮಿನಿ ಷಟ್ಪದಿಯೊಳಗ ಹೊಂದತೈತಿ. ಹೀಗಾಗಿ ಅದು ಹೆಚ್ಚು ಪ್ರಚಾರಾದಾಗ್ಯೆತಿ ಅಂತ ನಾನ್ ಅನ್ನಕೋತಿನಿ.

ಸಂದರ್ಶಕರು : ಕಾವ್ಯ ರಚನೆಯ ಹಿನ್ನೆಲೆಯಲ್ಲಿ ಇರುವ ಪ್ರಭಾವಗಳು ಯಾವುವು ?

ಕವಿ : ಹಿಂದಿನ ಕವಿಗಳು ಮಹಾ-ಮಹಾರಾಜರ ಕಾವ್ಯಗಳನ್ನ ಬರದಾರ. ಮಹಾತ್ಮರ ಕಾವ್ಯಗಳು ಬಂದಾವು. ಶರಣರ ಕಾವ್ಯಗಳು ಬಂದಾವು, ಆ ಪ್ರಭಾವ ಇಂದಿನ ಪೀಳಿಗೆಗಳಿಗೆ ಬಾಳ ಸಂಜೀವಿನಿ, ಚೇತನ ಅಂತಾ ಅನ್ನಕೋತಿನಿ. ಅದು ಕೂಡ ನನಗ ಪ್ರಭಾವ ಆಯ್ತು ಆ ಪ್ರಭಾವದಿಂದ ಕಾವ್ಯಗಳನ್ನ ರಚನೆ ಮಾಡಾಕ್ ಮತ್ತಷ್ಟು ಸ್ಫೂರ್ತಿ ಬಂತು ನನಗ.

ಸಂದರ್ಶಕರು : ಕಾವ್ಯ ರಚನೆ ಮತ್ತು ದೈವೀ ಅನುಭೂತಿಗೆ ಇರುವ ಸಂಬಂಧವನ್ನು ಕುರಿತು ಹೇಳಿರಿ.

ಕವಿ : ಯಾವುದೇ ಕಾರ್ಯ ಮಾಡಬೇಕಾದ್ರು ಕೂಡಾ ದೈವೀ ಅನುಭೂತಿ ಇದ್ದೇ ಇರತದ. ಯಾವ ಕಾರ್ಯ ಮಾಡಬೇಕಾದ್ರು ಇವತ್ತು ಗುರುವಾಗಿ, ಶಿಕ್ಷಣ ದಾಸೋಹ ಮಾಡತಾನ. ಅದರಲ್ಲಿ ಒಂದು ದೈವೀ ಅನುಭೂತಿ ಐತಿ. ಎಲ್ಲ ದೇವರ ಅನುಗ್ರಹಂತ ಭಾವನಾ ಬಂದುಬಿಡತದ ಆಸ್ತಿಕನಿಗೆ. ನಾಸ್ತಿಕನಿಗೆ ಏನ್ ಬರಲಿಕ್ಕಿಲ್ಲ. ನಾವು ಆಸ್ತಿಕ್ರು ಮತ್ತು ಧಾರ್ಮಿಕ ಗುರುಗಳ ಪರಂಪರೆಯಲ್ಲಿ ಬೆಳದಂತವರು. ನಾವ್ ಏನ್ ಮಾಡಿದ್ರು ಕೂಡಾ ಇದು ದೇವರ ಅನುಗ್ರಹ, ಆತನ ಕೃಪೆಯಿಂದ ನಾನು ಬೆಳೆಯುತ್ತಾ ಇದ್ದೇನಿ. ಅನ್ನತಕ್ಕಂತ ಭಾವನಾ ನನಗ ಬರತದ, ಹೆಜ್ಜೆ ಹೆಜ್ಜೆಗೆ ಬಂದದ. ನನ್ನ ಪ್ರತಿ ಕಾವ್ಯದಲ್ಲಿ ಬಂದದ.

ಸಂದರ್ಶಕರು : ಕಾವ್ಯ ಕಲೆಯ ಸಾಧನೆಯನ್ನ ಕುರಿತು ಏನು ಹೇಳುವಿರಿ ?

ಕವಿ : ಇದು ಒಂದು ದೈವೀ ಗಾಡ್ ಗಿಫ್ಟ್ ಅಂತಾರಲ್ಲ, ಹಾಗೇ ದೈವದತ್ತವಾಗಿ ಬಂದಿರುವಂಥದ್ದು. 'ಸಾಹಿತ್ಯ ಎಲ್ಲರಿಗಲ್ಲ ಸರ್ವಜ್ಞ' ಅಂತಾ ಹೇಳತಾರ, ಹಾಗೇ ಏನೋ ಇರಬೇಕು ನನ್ನಲ್ಲಿ, ಅದು ಬರೆಯುವಂತದ್ದು. ಚಿಕ್ಕಂದಿನಿಂದಲೂ ನನಗೆ ರೂಢಿ ಇತ್ತು. ಎಷ್ಟೋ ರೂಢಿ ಇತ್ತು ಅಂದ್ರ, ಬಾಳಷ್ಟು ಹಾಡುಗಳನ್ನು ನಾನು ಬರದೀನಿ. ಇವತ್ತ ನಮ್ಮ ಮಠದೊಳಗ 'ಗದುಗಿನ ವಾಸ ಪಂಚಾಕ್ಷರೇಶ್ವರಾ' ಅಂತ ಒಂದು ಹಾಡು, ನನ್ನ ಪ್ರಾಥಮಿಕ ಶಿಕ್ಷಣದಲ್ಲಿ ನಾನು ಬರೆದದ್ದು, ಪ್ರಾರ್ಥನಾಕ್ಕ ಪದ್ಯವಾಗಿ ಹಾಡತಾರ ಅದನ್ನ ನೋಡಿ ಗುರುಗಳು ಬಹಳ ಆಸಕ್ತರಾದರು. ನೀನು ದೊಡ್ಡ ಕವಿಯಾಗತಿ ಅಂತ ಹೇಳಿ ಮುದ್ದಾಮು ಸಂಗೀತ ಹೇಳಿಸೋರು. ಇದರ ಜೊತೆ ನೀನು ಅಭ್ಯಾಸ ಮಾಡು ಅಂತ ಹೇಳಿದ್ರು. ಹೀಗೆ ಎಷ್ಟೋ ಹಾಡುಗಳನ್ನು ಬರದೆ. ಅದು ಬರಬರುತ್ತಾ ಈ ಷಟ್ಪದಿ ಕಾವ್ಯಕ್ಕೆ ಬಂತು. ಸಾಧನೆ ಐತಿ, ಅದಕ್ಕ ಹಿಂದ ದೈವೀ ಪ್ರೇರಣೆಯೂ ಇರತದಂತ ಹೇಳತೀನಿ. ಸಾಧನೆ ಸ್ವಲ್ಪ ಆದರೂ ದೈವೀ ಅನುಗ್ರಹಾನೂ ಬೇಕು. ದೈವೀ ಅನುಗ್ರಹ ಇದ್ರನೂ ಸಾಲುದು. ಅದರ ಜೊತೆ ಪ್ರಯತ್ನವೂ ಬೇಕು. ಎರಡೂ ಇಕ್ಕವಲ್ ಆಗಿ ಹೋದ್ರ ಅದು ಕಾರ್ಯರೂಪಕ್ಕ ಬರತೈತಿ.

ಸಂದರ್ಶಕರು : ಕಾವ್ಯದಲ್ಲಿ ಸಾಮಾಜಿಕ ಚಿತ್ರಣವನ್ನ ಮಾಡಿದ್ದೀರಾ ?

ಕವಿ : ನಾನು ಹೆಚ್ಚಾಗಿ ಸಾಮಾಜಿಕವಾಗಿ ಉಪಯೋಗವಾಗುವಂತಹ ಕಾವ್ಯಗಳನ್ನು ಬರದೀನಿ. ಸ್ವಾಮಿಗಳು, ಹಾನಗಲ್ ಕುಮಾರಸ್ವಾಮಿಗಳು, ಗಾನಯೋಗಿ ಪಂಚಾಕ್ಷರಿಗಳು, ಹಿರಿಯರು ಇಂಥವರ ಜೀವನ ಚಿತ್ರಣ ಮಾಡೀನಿ. ಜಾದೂತನ ಅಂತವನ್ನ ನಾನು ಬಳಸುದಿಲ್ಲ. ನಾನು ಗಾನಯೋಗಿ ಪಂಚಾಕ್ಷರಿ ಅಜ್ಜನವರ ನಾಟಕ ಬರದಮೇಲೆ, ಪುಷ್ಪಾ ಥೇಟರದಾಗ ಆಡಿದೀವಿ ಸ್ವಲ್ಪ ದಿವ್ಸ, ನೀವೆಲ್ಲಾ ನೋಡಿರಬೇಕು. ಅಲ್ಲಿ ಯಾವ ಗಿಮಿಕ್ ಇದ್ದಿದಿಲ್ಲ. ಸರಳವಾಗಿ ಸಾಮಾಜಿಕವಾಗಿ ಗುರುಗಳು ಏನು ಮಾಡಿದ್ದಾರ, ಸಮಾಜಕ್ಕೆ ಎಷ್ಟು ಉಪಯೋಗ ಅಯ್ತಿ ಅನ್ನುದನ್ನ ಹೇಳ್ಯಾರ. ಅದು 'ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು' ಎಂದು ಸರ್ವಜ್ಞ, ಹೇಳಿದ್ಹಂಗ ಪರರ ಕಷ್ಟ-ಸುಖಗಳಲ್ಲಿ ಬಾಗಿಯಾದ್ರು ಗುರುಗಳು. ಆ ನಾಟಕದ್ದು ಬಾಳ ಪ್ರಭಾವವಾಯಿತು. ನೀವು ಹೆಸರು ಕೇಳಿರಬಹುದು. ಹಾಗೆ ಸಾಮಾಜಿಕ ಮೌಲ್ಯಗಳಿದ್ದದ್ದನ್ನೇ ನಾನು ಕಾವ್ಯದಲ್ಲಿ ಹೆಚ್ಚು ರೂಢಿಮಾಡಿಕೊಂಡೆ. ಸಮಾಜಕ್ಕ ಉಪಯೋಗ ಆಗಿರಬೇಕು. ಅಂತಹ ಕಾವ್ಯಗಳನ್ನ ನಾನು ಬರದೀನಿ. ನನ್ನ ಕಾವ್ಯಗಳಲ್ಲಿ ಕೈಲಾಸಯಿಲ್ಲ. ಅವತಾರವಿಲ್ಲ, ಅವತಾರ ಇದ್ರೂ, ಅವತಾರಿಯಾಗಿಬಿಟ್ಟಿರತಾನ, ಸಾಮಾನ್ಯವಾಗಿ ಹುಟ್ಟಿದ, ಅವ ವಿಶೇಷವಾಗಿ ಆದ, ಮಹಾಮಾನವನಾಗಿ ಬೆಳೆದ ಅಂತವುಗಳೇ ನನ್ನ ಕಾವ್ಯದಲ್ಲಿ ಇರತಾವು.

ಸಂದರ್ಶಕರು : ಕಾವ್ಯರಚನೆಯಿಂದ ಹಣ, ಕೀರ್ತಿ, ಆರಾಧನೆಗಳು ನಿಮಗೆ ಎಷ್ಟರ ಮಟ್ಟಿಗೆ ಸಾಧ್ಯವಾಗಿವೆ ?

ಕವಿ : ಕವಿಗೆ, ಕಲಾವಿದರಿಗೆ ಕಾಣಿಕಾಂತ ಇರುವುದಿಲ್ಲ, ಹೆಚ್ಚು ಆತ್ಮ ತೃಪ್ತಿ ಇರತ್ತದ, ಇದನ್ನ ಮಾಡಿದೆ, ಇದನ್ನ ಬರೆದೆ, ಇದನ್ನ ನಾನು ಹಾಡಿದೆ, ನಾ ಆ್ಯಕ್ಟ ಮಾಡಿದೆ, ಒಂದು ಚಿತ್ರ ಬರದೆ, ಇದೆ ಒಂದು ದೊಡ್ಡ ತೃಪ್ತಿ, ಇದೆ ಒಂದು ಕಾಣಿಕೆ.

ಸಂದರ್ಶಕರು : ಕಾವ್ಯವಸ್ತುವಿನ ವಿವೇಚನೆ ಮಾಡುವಂತಹ ಸಂದರ್ಭದಲ್ಲಿ ಪ್ರಧಾನ ಅಂಶವನ್ನಾಗಿ ನೀವು ಏನನ್ನು ಗಮನಿಸಿದ್ದೀರಿ ?

ಕವಿ : ವ್ಯಕ್ತಿಗಳಲ್ಲಿ ಒಂದೊಂದು ವಿಶಿಷ್ಠಗುಣಗಳು ಇರತಾವ, ಒಬ್ಬಬ್ಬ ಮಹಾತ್ಮರಲ್ಲಿ ಒಂದೊಂದು ವಿಶಿಷ್ಠತೆ ಇರತದ, ಆ ವಿಶಿಷ್ಠತೆ ಏನು ಇರತ್ತದ, ಅದನ್ನೇ ಹೆಚ್ಚು ಸಾಮಾಜಿಕವಾಗಿ ಹುಟ್ಟಸುವುದು. ಅಘಟಿತ ಘಟನಾ ಘಟಿತರ್ ಅಂತಾರಲ್ಲ, ಅದಕ್ಕ ನಾನು ಬೆಲೆ ಕೊಡುವುದಿಲ್ಲ. ಅಘಟಿತ ಘಟನಾ ಅಂದ್ರ ಮನುಷ್ಯನಿಗೆ ಆಗಲಾರದ ಕಾರ್ಯಗಳನ್ನು ಇವರು ಮಾಡಿದ್ರಂತ. ಅವುಗಳನ್ನ ನಾನು ಹೆಚ್ಚು ಮಾನ್ಯ ಮಾಡುವುದಿಲ್ಲ, ಮನುಷ್ಯ ಸಾಧನಾ ಮಾಡಿದ್ರ, ಪ್ರಯತ್ನಗಳೇ ಈ ಕಾರ್ಯಗಳಾಕ್ತಾವ ಅಂತವುಗಳು ನನ್ನ ಕಾವ್ಯದಲ್ಲಿ ಅದಾವು. ಕೆಲವ್ರ ಮಾಡತಾರ. ನೀರು ಹೋಗಿ ತುಪ್ಪಾ ಮಾಡಿದೆ, ತುಪ್ಪಾ ಹೋಗಿ ನೀರು ಮಾಡಿದೆ, ಇವೆಲ್ಲ ಪುರಾಣದ ವಸ್ತು

ಇವು. ಇದಕ್ಕೆ ನಾನು ಹೆಚ್ಚು ಒತ್ತುಕೊಡೊಲ್ಲ. ಅದಕ್ಕೆ ನಾನು ಏನು ಹೇಳತೀನಂದ್ರ, 'ಬಸವಣ್ಣನವರು ಮುತ್ತು ಮಾಡಿದ್ರು, ಜೋಳ ಮುತ್ತ ಮಾಡಿದ್ರು', ಜೋಳ ಮುತ್ತ ಮಾಡಲಿಲ್ಲ, ಆ ಜೋಳ ಮುತ್ತಿನಕ್ಕಿಂತ ಶ್ರೇಷ್ಠವಾದದು ಎಂದು ತೋರಿಸಿದ್ರು, ಈ ತರ ಅವುಗಳನ್ನ ಬಿಡಾಕ ಬರಲ್ಲ, ಭಕ್ತರಿತ್ತಾರ, ನಮ್ಮ ಸ್ವಾಮಿಗಳು ಇಂಥಿಂತ ಪವಾಡ ಮಾಡ್ಯಾರ್, ಅವನ್ನೆಲ್ಲ ಬರಿಬೇಕಂತಾರ್, ಅದಕ್ಕೆ ಹೀಗ್ ಜೋಡಿಸುವುದು. ಇವು ಹೆಚ್ಚು ನನ್ನ ಕಾವ್ಯದಲ್ಲಿ ಇರತಾವ. ಹೀಗಾಗಿ ಗೊ.ರು. ಚನ್ನಬಸಪ್ಪನವರಾಗಲಿ, ಪಂಚಾಕ್ಷರಿ ಹಿರೇಮಠರಾಗಲಿ, ನಮ್ಮ ಸವದತ್ತಿಮಠರಾಗಲಿ, ಇವರೆಲ್ಲ ಮೆಚ್ಚಿ ಬರದಾರಿ.

ಸಂದರ್ಶಕರು : ಕಾವ್ಯವನ್ನು ಅನುಭಾವದ ಹಿನ್ನೆಲೆಯಲ್ಲಿ ನೀವು ಚಿತ್ರಣ ಮಾಡಿರುವಿರಾ ?

ಕವಿ : ನನ್ನ ಕಾವ್ಯಗಳಲ್ಲಿ ಆಹಾ ! ಓಹೋ ! ಎನ್ನುವಂತಿಲ್ಲ. ಅತಿಶೋಯೋಕ್ತಿ ಈ ಗಿಮಿಕ್ ಅಂತಾರಲ್ಲ, ಅವುಗಳನ್ನ ನಾನು ಒಪ್ಪುದಿಲ್ಲ, ನನ್ನ ಅನುಭವ ನಮಗೂ ಅವಶ್ಯವಿರಬೇಕು. ಮತ್ತೊಬ್ಬರಿಗೂ ಅವಶ್ಯವಿರಬೇಕು. ನಾ ಪ್ರಯತ್ನ ಮಾಡಿಲ್ಲ, ಅದಕ್ಕ ಆಗಿಲ್ಲ, ಪ್ರಯತ್ನ ಮಾಡಿದ್ರ ಸಾಧ್ಯ ಅದ. ಅನಾಥ ಮಕ್ಕಳನ್ನ ಸಲಹುವ ಮನಸ್ಸ ಮಾಡಿದ್ರ ನನಗೂ ಶಕ್ಯದ ನಾನು ಇಂತವುಗಳನ್ನು ಕಾವ್ಯದಲ್ಲಿ ಹೇಳಿದ್ದೀನಿ.

ಸಂದರ್ಶಕರು : ಈ ಕಾವ್ಯಗಳನ್ನ ರಚನೆ ಮಾಡುವುದರಿಂದ ನಿಮಗೆ ದೈವಾನುಭೂತಿ ಉಂಟಾಗಿದಿಯೇ ?

ಕವಿ : ನಾನು ಗುರು ಪುಟ್ಟರಾಜರನ್ನ ನೆನೆಸಿಕೊಳ್ಳತೀನಿ. ಅವರs ನನ್ನ ದೇವರು, ಅವರ ಸ್ಮರಣೆ ಮಾಡಿದರ ಕಾವ್ಯ ವಸ್ತು ತಾನೇ ತಾನಾಗಿ ಬರೆಯಿಸಿಕೊಂಡು ಹೋಗತೈತಿ. ಯಾವ ಕಠಿಣತೆ ಆಗುವುದಿಲ್ಲ. ಎಲ್ಲವೂ ಆಸ್ತಿಕನೆಂದರೆ ಅತಿಯಾದ ಆಸ್ತಿಕನಲ್ಲ. ಸಹಜತೆಯಿಂದಲೂ ಕೂಡಿರಬೇಕು.

ಸಂದರ್ಶಕರು : ಈ ಕಾವ್ಯ ರಚನೆಯಿಂದ ನಿಮ್ಮ ವೈಯಕ್ತಿಕ ಬದುಕಿನ ಮೇಲೆ ಪರಿಣಾಮ ಉಂಟಾಗಿರುವುದೇ ?

ಕವಿ : ಬಹಳಷ್ಟು ಪರಿಣಾಮ ಆಗೇದ ಮಹಾತ್ಮರ ಚರಿತ್ರೆಯ ಪ್ರಭಾವ ನನ್ನ ಮೇಲೆ ಆಗೈತಿ. ನನ್ನ ಜೀವನದಲ್ಲಿ ಎಷ್ಟೋ ತಪ್ಪುಗಳನ್ನು ತಿದ್ದಿಕೊಳ್ಳಾಕ ಆಗೈತಿ, ಮಹಾತ್ಮರ ನಡೆ-ನುಡಿಗಳು ಮಾರ್ಗದರ್ಶನ ಮಾಡ್ಯಾವ, ಬದುಕಿಗೆ ಸಂತೃಪ್ತಿಯನ್ನು ತಂದುಕೊಟ್ಟಾವು ಮತ್ತು ಬೆಳವಣಿಗೆಗೆ ಪೂರಕ ಆಗ್ಯಾವು.

ಸಂದರ್ಶಕರು : ಈ ಕಾವ್ಯ ರಚನೆ ಮಾಡುವಂತಹ ಹಂತದಲ್ಲಿ ನಿಮ್ಮ ಸಹಾಯಕ್ಕೆ ಬಂದ ಸಂಗತಿಗಳಾವುವು ?

ಕವಿ : ಹಲವಾರು ಸಾಹಿತಿಗಳು ಅವರ ಕಾವ್ಯಗಳು ನನ್ನ ಸಹಾಯಕ್ಕೆ ಇವತ್ತು ಎಷ್ಟೋ ಕಾವ್ಯ ಪುರಾಣಗಳು ಅದಾವು, ಅವುನ್ನೆಲ್ಲ ಓದುದು, ಅಭ್ಯಾಸ ಮಾಡುವುದು ಅವೆಲ್ಲ ನೆರವಿಗೆ ಬರತ್ತಾವ. ರಾಘವಾಂಕನ ಹರಿಚಂದ್ರನ ಕಾವ್ಯ, ಕುಮಾರವ್ಯಾಸನ ಗದುಗಿನ ಭಾರತ, ಚಾಮರಸನ ಪ್ರಭುಲಿಂಗ ಲೀಲೆ ಇವೆಲ್ಲ ನನಗ ಸಹಾಯ ಆಗ್ಯಾವು.

ಸಂದರ್ಶಕರು : ಕಾವ್ಯರಚನೆಗೆ ಪೂರಕವಾಗಿ ನಿಮ್ಮ ಓದಿನ ಹಿನ್ನೆಲೆ ಬಗ್ಗೆ ಏನು ಹೇಳ್ತೀರಿ ?

ಕವಿ : ಅಧ್ಯಯನ ನಿರಂತರವಾದುದು ಓದಿದ್ದನ್ನು ಮನನ ಮಾಡಿಕೋಳ್ಳಬೇಕು. ಸಂಗೀತ ಮತ್ತು ಸಾಹಿತ್ಯ ಈ ಎರಡು ಕ್ಷೇತ್ರಗಳಲ್ಲಿ ಹೊಕ್ಕಳ ಹುರಿಯ ಸಂಬಂಧದಂತೆ ಇವೆರಡರ ನಡುವೆ ಅವಿನಾಭಾವ ಸಂಬಂಧವನ್ನ ಉಂಟುಮಾಡಿದ್ದು ನನ್ನ ಕಾವ್ಯದ ವಿಶೇಷ ಗುಣ. ಇದು ನಿರಂತರ, ಹಿರಿಯರ ಆಶೀರ್ವಾದ ಹಾಗೂ ಪುಣ್ಯದಿಂದ ಸಾಧ್ಯ ಆಗೇದ ಸಂಗೀತ ಸಾಧನೆಮಾಡಿದ್ದರಿಂದ ತಾಳ-ಲಯಗಳ ಜ್ಞಾನ ಛಂದಸ್ಸಿನ ರಚನೆಗೆ ಸಹಾಯ ಆಯಿತು. ಕಾವ್ಯಕ್ಕೆ ಛಂದಸ್ಸು ಪ್ರಾಸಗಳು ಬೇಕು. ಆದ್ರ ಪ್ರಾಸ ತ್ರಾಸದಾಯಕವಾಗಿರಬಾರದು ಸಹಜವಾಗಿ ಮೂಡಿಬರಬೇಕು.

ಉದಾ : ತರರ/ತರತರ ೩/೪

ಪರಮ/ಪರತರ ೩/೪

ದೀಪಚಂದ ತಾಳವು ಭಾಮಿನಿ ಷಟ್ಪದಿಯ ಲಯಕ್ಕೆ ಹೊಂದಿಕೊಳ್ಳುವುದೇ ಅದರ ರಚನೆಗೆ ಅನುಕೂಲ ಮತ್ತು ಸುಲಭ. ಹೀಗಿದ್ದರ ಶಬ್ದಗಳು ಲಯಕ್ಕೆ ಹೊಂದಿಕೊಂಡು ತಾವಾಗಿಯೇ ಮೂಡಿ ಬರತಾವು. ಅನಗತ್ಯ ಪ್ರಾಸವಿರಬಾರದು ಒಟ್ಟಾರೆ ಛಂದಸ್ಸು ಕಾವ್ಯಕ್ಕೆ ಹೊರೆಯಾಗಬಾರದು.

ಸಂದರ್ಶಕರು : ಪುರಾಣ ಕಾವ್ಯವನ್ನುಳಿದು ನಿಮ್ಮ ಇತರೆ ಬರಹಗಳು ಯಾವುವು ?

ಕವಿ : ನಾಟಕ, ವಚನಗಳು, ಚರಿತ್ರೆಗಳು, ಕಾದಂಬರಿ, ಚುಟುಕು ಹೀಗೆ ಸುಮಾರು ಮೂವತ್ತು ಗ್ರಂಥಗಳನ್ನ ಬರದೇನಿ. 'ಚಿನ್ಮಯ' ಕಾದಂಲರಿ ಪ್ರಕಟವಾಗಿದೆ. 'ಗಾನಯೋಗಿ ಪಂಚಾಕ್ಷರ ಗವಾಯಿಗಳು' ನಾಟಕ, ಚುಟುಕುಗಳು, ಭಾವಗೀತೆ, ಲೇಖನಗಳನ್ನು ಬರೆದೀನಿ. ನಾನು ಬರೆದ ಲೇಖನಗಳು 'ಬಸವಪಥ' ಮುಂ. ಮಾಸಿಕ ದೈನಿಕ ಪತ್ರಿಕೆಗಳಲ್ಲಿ ಪ್ರಕಟಗೊಂಡಾವು. ಒಟ್ಟು ೩೦ ಗ್ರಂಥಗಳು ರಚನೆಯಾಗಿ ಪ್ರಕಾಶನಗೊಂಡಿವೆ. ಕಾವ್ಯ ರಚನೆ ನಿರಂತರವಾಗಿದೆ. 'ಮಂಕುತಿಮ್ಮನ ಕಗ್ಗ'ದೋಪಾದಿಯಲ್ಲಿ 'ಕರ್ಮಜ್ಞನ ಕಗ್ಗ' ಅನ್ನುವ ಕೃತಿಯನ್ನ ಬರದೀನಿ ಮತ್ತು ಪ್ರಕಟ ಆಗೈತಿ.

ಸಂದರ್ಶಕರು : ನೀವು ಕಾವ್ಯ ಬರೆಯುವಾಗ ಹೀಗೆ ಬರೆಯಬೇಕು ಇಂತಹದ್ದೇ ಬರೆಯಬೇಕು ಎಂದು ಒತ್ತಡ ಹೇರಿದಾಗ ನಿಮ್ಮ ಪ್ರತಿಭೆಗೆ ಏನಾದರೂ ಅಡೆತಡೆ ಉಂಟಾಗಿದೆಯೇ ?

ಕವಿ : ಕೆಲವೊಂದನ್ನ ಅವರು ಹೇಳಿದ್ಹಂಗ ಬರೆದೀನಿ ಕೆಲವೊಂದನ್ನ ನನ್ನದೆ ಆದ ಶೈಲಿ ಅಥವಾ ಅಥೆಂಟಿಕ್ ಬರಿಬೇಕಂತಾರಲ್ಲ ಹಂಗೂ ಬರೆದೇನಿ. ನನ್ನ ಮಾತು ನೀವು ಕೇಳುತಿರಬೇಕು. ಅವರು ಹೇಳಿದ್ದು ಕೇಳಬೇಕು ಎನ್ನುವಂತಹ ಸಂದರ್ಭ ಬಂದಾವು ಅಂತಹ ಎರಡು ಮೂರು ಕೃತಿ ಆ ರೀತಿ ಹೋಗ್ಯಾವರ್ರೀ.

ಸಂದರ್ಶಕರು : ತಮ್ಮ ಮೇಲೆ ವೀರಶೈವ ಪರಂಪರೆ ಮತ್ತು ಲಿಂಗಾಯತ ಪರಂಪರೆ ಹೊರತು ಪಡಿಸಿ ಬೇರೆ ಯಾವ ಧರ್ಮದ ತತ್ವಗಳು ಏನಾದರೂ ಪ್ರಭಾವ ಬೀರಿವೆಯೇ ?

ಕವಿ : ಎಲ್ಲಾ ಧರ್ಮದಲ್ಲೂ ಒಂದು ಸತ್ಯ ಇದ್ದ ಇರತದ, ವೀರಶೈವ ಧರ್ಮದಾಗ ಹುಟ್ಟೀನಿ. ವೀರಶೈವ ಧರ್ಮದ ಸಂಸ್ಕಾರದ ಆ ಧರ್ಮದ ಕೃತಿಗಳನ್ನು ಬರೆದೀನಿ ಕರೆ. ಆದರೆ ಪರಧರ್ಮಗಳು ನನಗೆ ಹಿಡಸ್ತಾವು. ಯಾಕಂದ್ರ ಅದರಲ್ಲೂ ಒಳ್ಳೆಯದನ್ನೇ ಹೇಳಿರತಾರ. ಧರ್ಮ ಅಂದ್ರ ಎಲ್ಲಾನು ಒಳ್ಳೇದ ಹೇಳ್ಯಾರ, ಎಲ್ಲಾ ಧರ್ಮದಲ್ಲೂ 'ಮಾನವನ ಕಲ್ಯಾಣವೇ ಮುಖ್ಯ' ಅದ. ಎಲ್ಲವನ್ನ ಮಾನ್ಯಮಾಡತೀನಿ. ಆದ್ರ ಪರಧರ್ಮದವರು ಯಾರೂ ನನಗ ಬರ್ಯಾಕ ಕೊಟ್ಟಿಲ್ಲ, ಈಗ ನಮ್ಮ ರಾಠೋಡರವರು, 'ಸಂತ ಸೇವಾಲಾಲ'ರ ಬಗ್ಗೆ ಪುರಾಣ ಬರೆಯಲಿಕ್ಕೆ ಹೇಳ್ಯಾರ್, ಕೊಟ್ರ ಬರೀತೀನಿ.

ಸಂದರ್ಶಕರು : ಪ್ರವಚನವನ್ನು ಮಾಡಿದ್ರೇ ಹೆಚ್ಚು ಜನರನ್ನು ಮುಟ್ಟುತಾವು, ಓದುವ ಕಾವ್ಯವಲ್ಲ ಅವು. ಇವುಗಳನ್ನು ಪ್ರವಚನ ಮಾಡುವುದೇ ಮುಖ್ಯ, ಅದಕ್ಕೆ ತಾವು ಬರೆದಿದ್ದ ಕೃತಿಗಳನ್ನು ನೀವು ಪ್ರವಚನ ಮಾಡಿರೋ ಹ್ಯಾಗೆ ?

ಕವಿ : ಕೆಲವೊಂದು ನೀವೆ ಬರೆದಿದ್ದೀರಿ ನೀವ ಹೇಳ್ರೀ ಅಂದ್ರು ಆವುನ್ನ ಮಾಡೀನಿ. ಇದು ಶ್ರವಣ ಮಾಧ್ಯಮ. ಬಹಳ ಪರಿಣಾಮಕಾರಿರಿ. ಅದಕ್ಕ ಪ್ರವಚನ ಆದ್ರ ಬಾಳ ಜನಕ್ಕ ಮುಟ್ಟತೈತಿ, ಲೇಟ್ ಆಗುವುದಿಲ್ಲ, ಆಗಿಂದಾಗ್ಗೆ ಮುಟ್ಟತೈತಿ, ನನಗೊಂದು ವಿಷಯ ಹೇಳೀದ್ರೀ, ನನಗೆ ಮುಟ್ಟತು. ಬುಕ್‌ನಾಗ ಬರದ್ರ ಮತ್ತ ಅದನ್ನ ತೊಗೊಂಡು ಓದುದು ಲೇಟಾಗುತ್ತ, ಅದಕ್ಕೆ ಪ್ರವಚನ ಹೆಚ್ಚು ಪರಿಣಾಮಕಾರಿ ಅಂತ ನನ್ನ ಅನುಭವ ಹೇಳ್ತೀನಿ.

ಸಂದರ್ಶಕರು : ಪ್ರವಚನ ಸಂಗೀತ, ಕಥೆ, ಇವು ಹೆಚ್ಚು ಜನರಿಗೆ ಮುಟ್ಟತ್ತಾವೇನೋ. ಇವುಗಳನ್ನು ಬಳಸಿಕೊಳ್ಳೊದ್ರಿಂದ ಹೆಚ್ಚು ಪರಿಣಾಮಕಾರಿಯಾಗಿದೆಯೇ ?

ಕವಿ : ಹೌದು ಮನರಂಜನೆಗಾಗಿ ಇವೆಲ್ಲವೂ ಬೇಕು, 'ವಿವೇಕಾನಂದ'ರು ಒಂದು ಕಡೆ ಹೀಗೆ ಹೇಳಿದ್ದಾರೆ. ಪುರಾಣಂತದ್ರ ಮೂಲ ಕಥೆಗೆ ಉಪಕಥೆಗಳು ಬೇಕು ಅಂತ ಹೇಳ್ತಾರ್,

ಸಂದರ್ಶಕರು : ಒಂದು ಕಾವ್ಯ ಒಬ್ಬ ವ್ಯಕ್ತಿಗೆ ಮುಟ್ಟತೈತಿ, ಆದರೆ ಈ ಪುರಾಣ ಸಾವಿರ ಮಂದಿಗೆ ಮುಟ್ಟತ್ತದ, ಅದು ಒಂದು ಬಹಳ ಮಹತ್ವದ ವಿಷಯ, ಈ ನಮ್ಮ ಷಟ್ಪದಿ ಕಾವ್ಯಗಳು ಪ್ರವಚನಗೊಳ್ಳುವುದರಲ್ಲಿಯೇ ಅಂತಿಮ ಪರಿಣಾಮವನ್ನು ಮಾಡುತ್ತವೆಯೋ ? ಹ್ಯಾಗೆ.

ಕವಿ : ಹೌದು, ಹೌದು, ಹೌದು, ಜನರಿಗೆ ಜಲ್ದಿ ಮುಟ್ಟತಾವು, ಮತ್ತೀಗ ಪ್ರವಚನ ಕಲೆ ಬೆಳದಿರುವದ್ಕ ಮುಖ್ಯ ಆಧಾರನs ಪುರಾಣರ್‍ರೀ, ಮೊದಲು ಅದು ಹರಿಶ್ಚಂದ್ರ ಕಾವ್ಯ ಇರಬಹುದು, ಮತ್ತೊಂದು ಇರಬಹುದು ಮಗದೊಂದು ಇರಬಹುದು. ಪ್ರವಚನಕ್ಕೆ ಮಾಧ್ಯಮ ಇದು.

ಆತ್ಮೀಯವಾಗಿ ವಿಚಾರಗಳನ್ನು ತಿಳಿಸಿದ ತಮಗೆ ಧನ್ಯವಾದಗಳು.

◆◆◆

ಮಾನ್ಯ ಪ್ರಭಣ್ಣ ಬೊಮ್ಮನಹಳ್ಳಿ
ಸಂದರ್ಶನ ದಿ: ೨೦-೧೧-೨೦೧೦

ಸಂದರ್ಶಕರು : ನಿಮ್ಮ ವಯಕ್ತಿಕ ವಿಚಾರಗಳನ್ನ ಕುರಿತು ಹೇಳಿರಿ ?

ಕವಿ : ನಾನು ಶಿರಹಟ್ಟಿ ತಾಲೂಕಿನ ಲಕ್ಷ್ಮೇಶ್ವರದ ಅಡರಕಟ್ಟಿ ಗ್ರಾಮದವನು. ದಿನಾಂಕ: ೦೫-೦೨-೧೯೩೮ರಲ್ಲಿ 'ಬಸಪ್ಪ' ಮತ್ತು 'ಬಸವಣ್ಣೆವ್ವ' ದಂಪತಿಗಳಿಗೆ ಮಗನಾಗಿ ಜನಿಸಿದೆನು. ಧಾರವಾಡದ ಮೃತ್ಯುಂಜಯಪ್ಪಗಳ ಮಠದಲ್ಲಿ ಆಶ್ರಯ ಪಡೆದು ೧೯೬೦ರಲ್ಲಿ ಕರ್ನಾಟಕ ಕಾಲೇಜನಿಂದ ಸಂಸ್ಕೃತದಲ್ಲಿ ಬಿ.ಎ. ಪದವಿ ಪಡೆದನು. ೧೯೬೦ರಲ್ಲಿಯೇ ಬೆಳ್ಳಟ್ಟಿಯ ಎಸ್.ಎಫ್. ಹೈಸ್ಕೂಲಿನಲ್ಲಿ ಶಿಕ್ಷಕ ಸೇವೆಗೆ ಸೇರಿದೆ ಗದುಗಿನ ಮಾಡೆಲ್ ಹೈಸ್ಕೂಲಿನಲ್ಲಿಯೂ ಸೇವೆಯನ್ನು ಮಾಡಿರುವೆ. ಎಳಿಕ ೧೯೬೪ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಸಂಸ್ಕೃತ ವಿಷಯದಲ್ಲಿ ಎಂ.ಎ. ಪದವಿ ಹೊಂದಿದೆ. ಬಳಿಕ ೧೯೬೬-೬೭ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿ.ಎಡ್. ಪದವಿಯನ್ನು ಮುಗಿಸಿ ನಾನು ಅದೇ ವರ್ಷ ಜಮಖಂಡಿಯ ಸರಕಾರಿ ಬಿ.ಎಡ್ ಕಾಲೇಜನಲ್ಲಿ ಸೇವೆ ಸೇರಿಕೊಂಡೆ, ನಂತಂರ ಲಕ್ಷ್ಮೇಶ್ವರದ ಮುನಸಿಫಲ್ ಹೈಸ್ಕೂಲಿನಲ್ಲಿ ಮುಖ್ಯಾಧ್ಯಾಪಕನಾಗಿ ವೃತ್ತಿಯಲ್ಲಿ ಮುಂದುವರಿದು ೧೯೯೬ರಲ್ಲಿ ನಿವೃತ್ತಿಹೊಂದಿದೆ.

ನಾನು ಮಾವ ಕರಿಯಪ್ಪನವರಿಂದ ಸಿದ್ಧಾರೂಢ ಸಂಸ್ಕೃತಿ, ಮುರುಘಾಮಠದ ಶರಣಸಂಸ್ಕೃತಿ ಹಾಗೂ ಲಕ್ಷ್ಮೇಶ್ವರದ ಪಂಚಾಚಾರ್ಯ ಸಂಸ್ಕೃತಿಗಳಿಂದ ಮುಪ್ಪುರಿಗೊಂಡ ಜ್ಞಾನಾನುಭವ, ಸಿದ್ಧಾರೂಢರ ಕುರಿತು ತಿಳಿದ ವಿಚಾರಗಳಿಂದ ಪ್ರಭಾವಿತನಾಗಿ ಅವರ ಜೀವನಚರಿತ್ರೆಯನ್ನು ಕುರಿತು ೧೯೯೪ರಲ್ಲಿ ಭಾಮಿನಿ ಷಟ್ಪದಿಯಲ್ಲಿ ಪುರಾಣಕಾವ್ಯ ಬರೆಯಲು ಪ್ರಾರಂಭಿಸಿ ೧೫೦ ಪದ್ಯಗಳನ್ನು ರಚನೆ ಮಾಡಿದೆ. ಆದ್ರ ರಚನಾ ಸಂದರ್ಭದಲ್ಲಿ ಎದುರಾದ ಅಡೆತಡೆಗಳಿಂದ ಅರ್ಧಕ್ಕೆ ನಿಂತ ಕಾವ್ಯವನ್ನು ಮುಂದೆ ೨೦೦೧ರಲ್ಲಿ ೧೨೮೯ ಭಾಮಿನಿ ಷಟ್ಪದಿ ಪದ್ಯಗಳಲ್ಲಿ ಬರೆದು ಪೂರ್ಣಮಾಡಿದೆ. ಶಿಶುನಾಳ ಸಂತ ಶ್ರೀಗುರು ಶರೀಫರ ಪುರಾಣ ಕಾವ್ಯವನ್ನು ಬರೆದೆನು. ಶರೀಫರ ಮತ್ತು ಶ್ರೀ ಸದ್ಗುರು ಸಿದ್ಧಾರೂಢರ ಪುರಾಣಕೃತಿಯಲ್ಲದೆ ಮಕ್ಕಳಿಗೆ ಉಪಯುಕ್ತವಾಗುವ 'Essays and Letters'. ಹಾಗೂ ಶಿಕ್ಷಕರಿಗೆ ಮಾರ್ಗದರ್ಶನ ಮಾಡುವ 'ಕನ್ನಡ ಮಾತೃ ಭಾಷಾ ಬೋಧನೆ' ಗ್ರಂಥಗಳನ್ನು ಬರದೇನಿ. 'ಸಿದ್ಧಾರೂಢರ ಪವಾಡಗಳು' ಭಾಗ-೧, ಭಾಗ-೨, ಆರೂಢರ ತತ್ವಚಿಂತನ, ಭಕ್ತಿ ಗೀತೆಗಳು, ಮುಂತಾದ ಸಾಹಿತ್ಯ ಸೇವೆ ಮಾಡಿದ ಸಂತೋಷ ನನಗೈತಿ. ೭-೮ ವರ್ಷಗಳಿಂದ ಲಕ್ಷ್ಮೇಶ್ವರದ ವಾಚೇಶ್ವರ ದೇವಸ್ಥಾನದಲ್ಲಿ

ಪ್ರತಿನಿತ್ಯ ಸತ್ಸಂಗ ನಡಸ್ತೀನಿ. ಎರಡು ವರ್ಷಗಳಿಂದ ಪ್ರಭು ಪೂರ್ವ ಪ್ರಾಥಮಿಕ ಶಾಲೆಯನ್ನ ನಡಸ್ತಾ ಇದ್ದೀನಿ.

ಸಂದರ್ಶಕರು : ಕಾವ್ಯ ರಚನೆಯ ಪ್ರೇರಣೆ (ಸ್ವಯಂ – ಅನ್ಯ)ಗಳಾವುವು ?

ಕವಿ : ಕಾವ್ಯರಚನೆಯ ಪ್ರೇರಣೆ ಸ್ವಯಂ ಪ್ರೇರಣೆ, ಬೇರೆ ಯಾವುದು ಅಲ್ಲ. ಸ್ವಯಂ ಪ್ರೇರಣೆ ಕಾವ್ಯ ಬರೆಯುವುದಕ್ಕೆ ಅನುಕೂಲ ಮಾಡಿಕೊಟ್ಟಿದೆ.

ಸಂದರ್ಶಕರು : ಕಾವ್ಯರಚನೆಯ ಉದ್ದೇಶಗಳು ಯಾವುವು ?

ಕವಿ : ಕಾವ್ಯ ಇದ್ದರೆ ಓದಲಿಕ್ಕೆ ಬರುತ್ತದೆ ಮತ್ತು ಕಂಠಪಾಠ ಮಾಡಿದರೆ ತಲೆಯಲ್ಲಿ ಉಳಿಯುತ್ತದೆ. ಗದ್ಯವನ್ನು ಓದಿದರೆ ನೆನಪಿನಲ್ಲಿಡುವುದು ಕಷ್ಟಕರ ಸಂಗತಿ. ಗದ್ಯವನ್ನು ಪುನಃ ಪುನಃ ಓದಬೇಕಾಗುತ್ತದೆ. ಕಾವ್ಯವಾದರೆ ಆದನ್ನು ಕಂಠಪಾಠ ಮಾಡಬಹುದು. ಅದರೊಳಗಿನ ತತ್ವ ನುಡಿಗಳನ್ನು ಗಟ್ಟಿ ಮಾಡಬಹುದು. ಎಂಬ ಉದ್ದೇಶ.

ಸಂದರ್ಶಕರು : ಭಾಮಿನಿ ಷಟ್ಪದಿಯ ಛಂದಸ್ಸನ್ನು ಆರಿಸಿಕೊಂಡ ಉದ್ದೇಶವೇನು ? ಆದರ ರಚನಾತೊಡಕೇನು ?

ಕವಿ : ಭಾಮಿನಿ ಷಟ್ಪದಿ ನನಗೆ ಕಲಿಯುವಾಗಿಂದಲೇ ಬಹಳ ಇಷ್ಟ. ಕುಮಾರವ್ಯಾಸ ಮತ್ತು ಚಾಮರಸರ ಕಾವ್ಯಗಳನ್ನು ನಾನು ಬಹಳ ಓದುತ್ತಿದ್ದೆ. ಆವರ ಪ್ರೇರಣೆಯಿಂದ ನಾನು ಭಾಮಿನಿ ಷಟ್ಪದಿಯನ್ನು ಅರಸಿಕೊಂಡಿರುವೆನು.

ಸಂದರ್ಶಕರು : ಕಾವ್ಯರಚನೆಯಲ್ಲಿ ದೈವೀಅನುಭೂತಿ ಅಗಿರುವುದೇ ?

ಕವಿ : ನಾವು ಸಿದ್ಧಾರೂಢರ ಭಕ್ತರು ಮತ್ತು ನಮ್ಮ ತಾಯಿಯು ಕೂಡಾ ಸಿದ್ಧಾರೂಢರ ಭಕ್ತಿಯಾಗಿರುವರು. ತಾಯಿಯು ನನಗೆ ಸಿದ್ಧಾರೂಢರನ್ನು ನೀನು ನಂಬು, ನಿನ್ನ ಕಾರ್ಯಗಳೆಲ್ಲವು ಸುಗಮವಾಗಿ ಸಾಗುವುದು ಎಂದು ಹೇಳುತ್ತಿದ್ದಳು. ಆದೇ ರೀತಿ ನನಗೆ ಎಲ್ಲವು ಒಳ್ಳೆಯದಾಯಿತು. ನನಗೆ ಅರು ಜನ ಮಕ್ಕಳು, ಎರಡು ಗಂಡು, ನಾಲ್ಕು ಹೆಣ್ಣು. ಎಲ್ಲರೂ ನೌಕರಿ ಮಾಡುತ್ತಿರುವರು.

ಸಂದರ್ಶಕರು : ಕಾವ್ಯರಚನೆಯ ಹಿನ್ನಲೆಯಲ್ಲಿ ಪ್ರಭಾವಗಳಾವವು ?

ಕವಿ : ನಾನು ಕುಮಾರವ್ಯಾಸನ ಕಾವ್ಯವನ್ನು ಬಹಳ ಓದಿದ್ದೇನೆ. ಚಾಮರಸರ ಕಾವ್ಯವನ್ನು ಓದಿದ್ದೇನೆ. ಅದ್ರಿಂದ ನನ್ನ ಕಾವ್ಯರಚನೆಗೆ ಸಾಧ್ಯವಾಯಿತು. ಚಾಮರಸನು ಷಟ್ಪದಿಯಲ್ಲಿ ಬರೆದ ಪುರಾಣವನ್ನು ಬಹಳ ಸಾರಿ ಕೇಳಿದೆ, ಪ್ರಭುಲಿಂಗ ಲೀಲೆಯನ್ನು ಓದಿದೆ. ಅದು ನನಗೆ ಬಹಳ ಸಹಾಯವಾಗಿದೆ. ನಿಜಗುಣರು ಬರೆದ ಷಟ್‌ಶಾಸ್ತ್ರಗಳನ್ನು ಸಿದ್ಧಾರೂಢರು ಹೇಳುತ್ತಿದ್ದರು. ಸಿದ್ಧಾರೂಢರು ಆತ್ಮಸಾಕ್ಷಾತ್ಕಾರ, ಬ್ರಹ್ಮ ಸಾಕ್ಷಾತ್ಕಾರ ಮಾಡಿಕೊಂಡವರು. ದೇಹ ನಾನಲ್ಲ, ಉಸಿರು ನಾನಲ್ಲ, ಈ ಜಗತ್ತಿನಲ್ಲಿ ಕಾಣೋದು ನಾನಲ್ಲ, ಕಾರಣಗಳು ನಾನಲ್ಲ. ಈ ತತ್ವಗಳನ್ನು ಅವರು ಸಂಪೂರ್ಣವಾಗಿ ಅಳವಡಿಸಿಕೊಂಡವರು ಹಾಗೂ ಆದರ

ಹಾಗೆ ನಡೆದವರು. ಹೀಗಿರುವಾಗ ಒಂದು ದಿನ ಭಕ್ತರು ಆವರಿಗೆ ಕೇಳಿದರು... ತಲೆಯ ಮೇಲಿನ ಬಂಗಾರದ ಕೀರೀಟವನ್ನು ಹೊಡೆದುಕೊಳ್ಳಬೇಕೆಂದು ಸಿದ್ಧಾರೂಢರನ್ನು ಕೇಳಿದರು; ತಾವು ತಲೆಯಲ್ಲಿ ಈ ಬಂಗಾರದ ಹೊಲಸನ್ನು ಯಾಕೆ ಹಾಕಿಕೊಂಡಿದ್ದೀರಿ ? ಎಂದು ಕೇಳಿದಾಗ 'ಸಿದ್ಧಾರೂಢರು ಹೌದು, ಈ ತಲೆಯು ಹೊಲಸು ಮತ್ತ ಈ ದೇಹವು ಹೊಲಸು, ಈ ಕೀರೀಟವು ಹೊಲಸು, ಹೊಲಸು ಹೊಲಸಿಗೆ ಹತ್ತಿದೆ. ನನ್ನ ಆತ್ಮಕ್ಕೆ ಏನು ಅಲ್ಲ' ಎಂದು ಉತ್ತರಿಸಿದ್ದನ್ನು ನಾನು ಸ್ಮರಿಸುತ್ತೇನೆ. ಈ ರೀತಿ ಅವರು ಆತ್ಮಸಾಕ್ಷಾತ್ಕಾರ ಮತ್ತು ಬ್ರಹ್ಮ ಸಾಕ್ಷಾತ್ಕಾರಗಳನ್ನು ತಮ್ಮ ದೇಹಕ್ಕೆ ಅಳವಡಿಸಿಕೊಂಡವರು. ವ್ಯವಹಾರಿಕ ಸತ್ಯವನ್ನು ಜನರಿಗೆ ತಿಳಿಸುತ್ತಿದ್ದರು. ಹಾಗೂ ಅವರಿಂದ ನಿಜಗುಣರ ಶಾಸ್ತ್ರ ಬೆಳಕಿಗೆ ಬಂತು.

ಇನ್ನು ಶರೀಫರು ತಮ್ಮ ನಡಾವಳಿಯಿಂದ ಜನರಿಗೆ ತಿಳಿಸುತ್ತಿದ್ದರು. ಗೋವಿಂದ ಶಾಸ್ತ್ರಿಗಳ ಶಿಷ್ಯರಾಗಿದ್ದರು. ಬೇರೆ ಜಾತಿಯವರಾದರೂ ಗುರುಗಳು ಹೇಳಿದ ರೀತಿ ನಡೆದು ತೋರಿಸಿದಂತ ಮಹಾನ್ ವ್ಯಕ್ತಿತ್ವದವರಾಗಿದ್ದರು ಹಾಗೂ ದೇವರನ್ನು ಪ್ರತ್ಯಕ್ಷ ಮಾಡಿಕೊಂಡವರು. ಅಧ್ಯಾತ್ಮ ಮತ್ತು ಸಿದ್ಧಾರೂಢರ ತತ್ವ ಪರಂಪರೆ ಹೇಳುವಾಗ ಕಾವ್ಯದ ಸಾಂಪ್ರದಾಯಿಕ ತತ್ವಗಳು ವರ್ಣನೆ ಕಡಿಮೆಯಾಗುತ್ತವೆ. ಸಮುದ್ರವರ್ಣನೆ ಶೃಂಗಾರವರ್ಣನೆ ಬರುವುದಿಲ್ಲ. ಒಮ್ಮೆಲೆ ಗಣೇಶಸ್ಮರಣೆ, ಸರಸ್ವತಿ ಸ್ತುತಿ ಹಾಗೂ ಗುರುಸ್ತುತಿ ಮಾಡಿ ಆ ಕಾವ್ಯ ಬರೆಯಲಿಕ್ಕೆ ಪ್ರಾರಂಭಿಸುತ್ತೇನೆ ನಂತರ ಮಹಾತ್ಮರ ಗುಣ ವಿಶೇಷತೆಯನ್ನು ವರ್ಣನೆ ಮಾಡಲಿಕ್ಕೆ ಪ್ರಾರಂಭಿಸುತ್ತೇನೆ.

ಸಂದರ್ಶಕರು : ಕಾವ್ಯ ರಚಿಸಲು ಅಂತಃ ಪ್ರೇರಣೆ ಏನಾದರೂ ಇರುವುದೇ ?

ಕವಿ : ನನಗೆ ಸಿದ್ಧಾರೂಢರ ಪ್ರೇರಣೆಯಾಗಿದೆ. ೧೨೬ ಪದ್ಯ ಬರೆದು ನಾನು ನಿಲ್ಲಿಸಿದಾಗ, ನನಗೆ ಸ್ವಪ್ನದಲ್ಲಿ ಬಂದು ಪೂರ್ಣಗೊಳಿಸು ಎಂದು ಹೇಳಿದರು. ಅದರ ನಂತರ ಶಬ್ದಗಳು ತನ್ನಿಂದ ತಾನೇ ಬಂದು ಪುರಾಣ ಸಂಪೂರ್ಣವಾಯಿತು. ಸಿದ್ಧಾರೂಢರ ಅನುಗ್ರಹವಿದ್ದಾಗ ಅಂದರೆ, ಅವರ ಧ್ಯಾನ ಮಾಡಿದ ನಂತರ ನಾನು ಕಾವ್ಯರಚನೆಯಲ್ಲಿ ತೊಡಗುತ್ತಿದ್ದೆನು. ಆತನ ಅನುಗ್ರಹವಿಲ್ಲದ ದಿವಸ ನನಗೆ ಒಂದು ಸಾಲು ಬರೆಯುವುದು ಕಷ್ಟಕರವಾಗುತ್ತಿತ್ತು. ನಾನು ಯಾವಾಗಲೂ ಮಲಗುವ ಹಾಸಿಗೆಯ ಮೇಲೆ ಕುಳಿತರೆ ಮಾತ್ರ ನನಗೆ ಕಾವ್ಯರಚನೆಯ ಸ್ಫೂರ್ತಿ ಬರುತ್ತಿತ್ತು. ಬೇರೆ ಜಾಗದಲ್ಲಿ ಕುಳಿತರೆ ಬರುತ್ತಿರಲಿಲ್ಲ. ಆದ್ದರಿಂದ ಮುಂದೆ ನಾನು ಈ ಲೇಖನಿ ಬಗ್ಗೆ 'ಸುಮ್ಮನೆ ಹಿಡಿದ ಜಡವಿದು ಅದರಲ್ಲಿ ನೀನು ಚೈತನ್ಯ ತುಂಬಬೇಕು' ಎಂಬ ಪದ್ಯವನ್ನು ರಚಿಸಿದೆ.

ಸಂದರ್ಶಕರು : ಕಾವ್ಯ ರಚನೆಯಿಂದ ಹಣ ಮತ್ತು ಕೀರ್ತಿ ಆರಾಧನೆಗಳು ಎಷ್ಟರಮಟ್ಟಿಗೆ ಸಾಧ್ಯವಾಗಿವೆ ?

ಕವಿ : ಹಣವೇನು ಬಂದಿಲ್ಲ, ಆದರೆ ಕೀರ್ತಿ ಮಾತ್ರ ಮುಂದೆ ಬರಬಹುದು ಎಂದು ಬರೆದಿದ್ದೇನೆ. ಸಿದ್ಧಾರೂಢರ ಕೃಪೆಯಿಂದ ಬರೆಯುವುದಿತ್ತು, ಬರೆದಿದ್ದೇನೆ. ಅದರ ಫಲಾನುಫಲ ಅವರಿಗೆ ಬಿಟ್ಟದ್ದು. ಮುಂದಿನ ದಿನಗಳಲ್ಲಿ ಇದು ಪ್ರಚಾರಕ್ಕೆ ಬರಬಹುದು ಎಂಬ ಆಸೆ ಮಾತ್ರ ನನಗೆ.

ಸಂದರ್ಶಕರು : ಆಧುನಿಕ ಜಗತ್ತಿನಲ್ಲಿ ಇಂತಹ ಕಾವ್ಯದಿಂದ ಏನು ಪರಿಣಾಣಮವಿದೆ ?

ಕವಿ : ಈಗಿನ ಜನರು ಪವಾಡಗಳನ್ನು ನೋಡಿಲ್ಲ. ಈ ರೀತಿ ಕಾವ್ಯಗಳನ್ನು ಓದುವುದರಿಂದ ಅವರು ಮಾಡಿದಂತಹ ಪವಾಡಗಳು ಎಲ್ಲಾ ತಿಳಿಯುತ್ತವೆ. ಆ ನಂತರ ಅವರ ಮೇಲೆ ಭಕ್ತಿ ಹುಟ್ಟುತ್ತದೆ ಎಂದು ಕಾವ್ಯ ರಚಿಸಿದೆನು. ಮುಖ್ಯ ಉದ್ದೇಶ ಜನರಲ್ಲಿ ಭಕ್ತಿ ಮೂಡಲಿ, ಅದರ ತತ್ವ ಅನುಸರಿಸಿ ಜೀವನದಲ್ಲಿ ಸುಧಾರಣೆಯನ್ನು ಕಾಣಲಿ ಎಂಬ ಆಸೆ. ದೇವರು ಭ್ರುಕುಟಿಯಲ್ಲಿ ಇದ್ದಾನೆ, ಹೃದಯದಲ್ಲಿ ಇರುವನು. ದೇಹದಲ್ಲಿ ಮತ್ತು ಆತ್ಮದಲ್ಲಿದ್ದಾನೆ. ಅಣು-ರೇಣು-ತೃಣ-ಕಾಷ್ಠಗಳಲ್ಲಿ ಇದ್ದಾನೆ. ದೇವರಿಲ್ಲದೆ ಏನಿಲ್ಲ, ದೇಪರಿದ್ದಾನೆಂಬ ಕಲ್ಪನೆ ಎಲ್ಲರಲ್ಲಿಯೂ ಬರಲಿಯೆಂಬ ಆಶೆಯಿಂದ ಬರೆದಿರುವೇನು.

ಸಂದರ್ಶಕರು : ಕಾವ್ಯದ ಪ್ರಧಾನ ವಸ್ತು ಯಾವುದು ?

ಕವಿಗಳು : ಕಾವ್ಯದ ಪ್ರಧಾನ ವಸ್ತು ಸಿದ್ಧಾರೂಢರ ಜೀವನ ಮತ್ತು ದರ್ಶನ ಹಾಗೂ ಶರೀಫರ ದರ್ಶನಗಳಾಗಿವೆ.

ಸಂದರ್ಶಕರು : ಕಾವ್ಯ ರಚಿಸಿದ ನಂತರ ದೈವೀ ಅನುಭೂತಿ ಆಗಿರುವುದೇ ?

ಕವಿ : ನನಗೆ ಸಿದ್ಧಾರೂಢರನ್ನು ನಂಬಿದ ನಂತರ ದೈವೀ ಅನುಭೂತಿ ಬಹಳವಾಗಿದೆ. ನನಗೆ ತಿಳಿಯದಂತೆ ಒಂದು ಸಾರಿ ರೈಲು ದುರಂತದಿಂದ ಬದುಕಿ ಉಳಿದೆನು. ಯಾರಿಗೂ ನಂಬಲು ಆಗದಂತಹ ಪರಿಸ್ಥಿತಿಯಲ್ಲಿ ಪ್ರಾಣಾಪಾಯದಿಂದ ಪಾರಾದ ಘಟನೆ ಸ್ಮರಿಸಿದರೆ ಇದು ಸಿದ್ಧಾರೂಢರ ದೈವಾನುಗ್ರಹ ನನ್ನ ಮೇಲೆ ಇದೆ ಎಂದು ಸ್ಪಷ್ಟವಾಗಿ ತಿಳಿಯುತ್ತದೆ. ನಂತರ ನನಗೆ ಅವರ ಅನುಗ್ರಹ ಸಂಪೂರ್ಣವಾಗಿ ಇದ್ದದ್ದರಿಂದಲೇ ಈ ಪುರಾಣ ರಚಿಸಲು ಸಾಧ್ಯವಾಯಿತು.

ಯೋಗಿ ಮಹಾತ್ಮೆಯನ್ನು ನಾವು ಓದಿದ್ದೇವು. ಅದರಲ್ಲಿ 'ಲಾರಿ ಮಹಾಶಯ'ನೆಂಬುವನು ಇರುವನು. ಒಂದು ದಿನ ಲಾರಿ ಹೋಗುವಾಗ ಅದರಲ್ಲಿ ಸವಾರಿ ಮಾಡಬೇಕೆಂಬ ಮಹಿಳೆಯು 'ಲಾರಿ ಮಹಾಶಯ' ನಿಲ್ಲು ಹತ್ತಬೇಕೆಂದು ಹೇಳಿ, ಬಂದು ಹತ್ತುವವರೆಗೆ ಚಕ್ರಗಳಷ್ಟೇ ತಿರುಗುತ್ತಿದ್ದವು. ಆದರೆ ಲಾರಿ ನಿಂತೆ ಇತ್ತು. ಮುಂದೆ ಅವಳು ಬಂದು ಹತ್ತಿದಾಗ ಲಾರಿ ಹೊರಟು ಹೋಯಿತು. ಈ ಮಹಾತ್ಮನ ಪವಾಡದಂತೆ ಅಂದು ನಾನು ಕೂಡಾ ಸಿದ್ಧಾರೂಢ

ನೀನೆ ಕಾಪಾಡು ಎಂದೆ, ರೈಲು ಪಟರಿಯ ನಡುವೆ ಕೆಳಗೆ ಬಿದ್ದಾಗ ನನ್ನ ಮೇಲೆ ರೈಲು ಭೋಗಿಗಳು ಚಲಿಸಿದರೂ ನನಗೆ ಏನು ಆಗದಿರುವುದನ್ನು ನಾನು ಜೀವನದಲ್ಲಿ ಮರೆಯುವಂತಿಲ್ಲ.

ಸಂದರ್ಶಕರು : ಕಾವ್ಯ ರಚನೆಗೆ ಸಹಾಯವಾಗುವಂತಹ ಅಂಶಗಳಾವವು ?

ಕವಿ : ಹಳೆಯ ಗದ್ಯಗ್ರಂಥಗಳನ್ನು ನೋಡಿ ಓದಿ ಪದ್ಯದಲ್ಲಿ ಬರೆದಿರುವೆನು. ಶರೀಫರ ಪುರಾಣಕ್ಕೆ ಸಿಂದಗಿಯವರು ಬರೆದಂತಹ ಕಾವ್ಯ ನನಗೆ ಸಹಾಯವಾಗಿದೆ.

ಸಂದರ್ಶಕರು : ಓದಿನ ಹಿನ್ನೆಲೆಯು ಬರವಣಿಗೆಗೆ ಯಾವ ರೀತಿ ಸಹಾಯವಾಯಿತು ?

ಕವಿ : ನಾನು ಎಂ.ಎ.,ಬಿ.ಎಡ್. ಸಂಸ್ಕೃತ ಎಂ.ಎ. ನಾನು ವ್ಯಾಕರಣವನ್ನು ಬಹಳ ಓದುತಿದ್ದೆ. ಛಂದಸ್ಸು ಅಕ್ಷರವೃತ್ತಗಳನ್ನು ಓದಿದ್ದರಿಂದ ನನಗೆ ಬರೆಯಲು ಸಹಾಯವಾಯಿತು.

ಸಂದರ್ಶಕರು : ಕಾವ್ಯವನ್ನು ಬಿಟ್ಟು ಬೇರೆ ಏನನ್ನು ಬರೆದಿರುವಿರಿ ?

ಕವಿ : ಸಿದ್ಧಾರೂಢರು ಹಾಗೂ ಶರೀಫರ ಬಗ್ಗೆ ಗದ್ಯದಲ್ಲಿ ಬರೆದಿರುವೆನು. ಸಿದ್ಧಾರೂಢರನ್ನ ನೆನೆದು 'ತತ್ವ ಪದಗಳು', 'ಸಿದ್ಧಾರೂಢರ ಪವಾಡಗಳು' ಭಾಗ-೧, ಭಾಗ-೨, ಚರಿತ್ರೆ ಗೊತ್ತಾದರೆ ಓದುವರೆಂಬ ವಿಚಾರದಿಂದ 'ಸಿದ್ಧಾರೂಢರ ಚರಿತ್ರೆ' ಕುರಿತು ಸಣ್ಣಪುಸ್ತಕ ಬರೆದಿರುವೆನು.

ಸಂದರ್ಶಕರು : ನೀವು ಮೆಚ್ಚಿದ ಬೇರೆಯವರ ಕೃತಿಗಳಾವವು ?

ಕವಿ : ಚಾಮರಸನ ಕಾವ್ಯ ನನಗೆ ಬಹಳ ಮೆಚ್ಚುಗೆ. ಆ ನಂತರ ಜೈಮಿನಿ ಭಾರತ ವಾರ್ಧಕ ಷಟ್ಪದಿಯಲ್ಲಿದೆ. ಮಹಾಭಾರತ ಕುರಿತಾದ ಒಟ್ಟು ಷಟ್ಪದಿ ಕಾವ್ಯಗಳನ್ನು ಮೆಚ್ಚಿಕೊಂಡಿರುವೆನು. ಈಗ ಬೆಂಗಳೂರಿನ 'ಹೊನ್ನಪ್ಪ ನಾಯ್ಕರ' ಯೋಗಿಯ ಪವಾಡಗಳನ್ನು ಕುರಿತ ಚರಿತ್ರೆಯನ್ನು ಗದ್ಯರೂಪದಲ್ಲಿ ಬರೆಯುತ್ತಿರುವೆನು.

ಸಂದರ್ಶಕರು : ನಿಮ್ಮ ಕೃತಿಯಲ್ಲಿ ನೀವು ಮೆಚ್ಚಿದ ಕೃತಿಗಳಾವುವು ?

ಕವಿ : ನಾನು ಸಿದ್ಧಾರೂಢರ ಪುರಾಣವನ್ನು ಬಹಳ ಮೆಚ್ಚಿಕೊಂಡಿರುವೆನು.

ಸಂದರ್ಶಕರು : ನಿಮ್ಮ ಬಾಲ್ಯದ ಊರು ಯಾವುದು ?

ಕವಿ : ಬಾಲ್ಯದ ಊರು ಮುಳಗುಂದ. ಈಗ ವಾಸಿಸುತ್ತಿರುವುದು ಲಕ್ಷ್ಮೇಶ್ವರ.

ಸಂದರ್ಶಕರು : ಈ ಕೃತಿಯಲ್ಲಿ ಸಾಮಾಜಿಕ ಚಿತ್ರಣ ಮಾಡಿರುವಿರಾ ?

ಕವಿ : ಸಿದ್ಧಾರೂಢರ ಪುರಾಣದಲ್ಲಿ ತಾಯಿಯ ಚಿತ್ರಣ ಬರುವುದು. ಅವರು ತಾಯಿಗೆ 'ಅಜ್ಞಾನಿ' ಎನ್ನುವರು. ಹೆಣ್ಣುಮಕ್ಕಳಿಗೆ 'ಅಜ್ಞಾನಿ' ಎಂದು ಹೆಸರು. ಸಿದ್ಧಾರೂಢರು ತಮ್ಮ ಒಂದು ಪವಾಡದಲ್ಲಿ ಮನೆಯಲ್ಲಿದ್ದಂತಹ ಎಮ್ಮೆಗೊಡ್ಡನ್ನು ಹತ್ತಿಕುಂತು 'ನಾನು ರಾಜಾ

ಆದಿನಿ, ಆನಿ ಇದು, ಇದನ್ನು ಹೊಡಿರಿ' ಎನ್ನುವರು. ಆದರೆ ಎಮ್ಮೆ ಒಂದು ಇಂಚೂ ಮುಂದೆ ಸರಿಯುವದಿಲ್ಲ, ಆಗ ಸಿದ್ಧಾರೂಢರು ನಾ ಹತ್ತಿಕುಂತೀನಿ ಅಂತ ಸರಿವಲ್ಲೇನ ಅಂತ ಅದಕ 'ಸತ್ತು ಹೋಗು ನೀ' ಎನ್ನುವರು. ಅಂದಂತೆ ಎಮ್ಮೆ ಸತ್ತ ಬಿಡತೈತಿ. ಅಂದರ 'ಎಮ್ಮೆ ಒಂದು ಅಜ್ಞಾನ.' ತಾಯಿ ಬಂದು 'ಇದನ್ಯಾಕ ಕೊಂದಿಪಾ, ಬದುಕಿಸು ಅದನ್ನ' ಅಂದಾಗ, ಸಿದ್ಧಾರೂಢರು ಬಾಲ ಮುಟ್ಟುವರು. ಮುಟ್ಟಿದ ಕೂಡಲೇ ಎಮ್ಮೆ ಎದ್ದು ನಿಲ್ಲುವುದು. ಹೀಗೆ ಜನರು ತಿಳಿಕೊಳ್ಳುವಂತೆ ಸಾಮಾಜಿಕ ವಿಚಾರಗಳು ಇದರಲ್ಲೂ ಅದಾವರಿ.

ಸಂದರ್ಶಕರು : ೬೦ ವರ್ಷದ ಹಿಂದಿನ – ಇಂದಿನ ವಾತಾವರಣದ ಅಂತರ ಕುರಿತು ವಿಚಾರವೇನು ?

ಕವಿ : ಬಹಳ ಅಂತರೈತಿರಿ. ಜನಸಂಖ್ಯೆ ಬಹಳ. ಇಂದಿನ ಜನರಿಗೆ ಪುರಸೊತಗಿ ಇಲ್ಲರಿ. ಅವಸರ ಮಾಡಿ ಮನಿ ಮುಟ್ಟಬೇಕೆನ್ನುವರು. ಅವಸರ ಮಾಡಿ ಎಲ್ಲವನ್ನು ಮಾಡಬೇಕೆನ್ನುವರು, ಆಗಿನ ಜನ ಹಂಗಲ್ಲ. ಕೆಲಸ ಚೊಕ್ಕಾಗಿ ನೀಟಾಗಿ ಆಗಬೇಕು. ಬೇಕಾದಷ್ಟು ದಿವಸಾದರೂ ಆಗಲಿ ಎನ್ನುವುದು ಆಗಿನ ಜನರ ವಿಚಾರ. ಜನಸಂಖ್ಯೆ ಕಡಿಮೆ. ಅಲ್ಲೊಬ್ಬರು ಇಲ್ಲೊಬ್ಬರು ಇರತಿದ್ದರು. ಅವರನ್ನೆಲ್ಲ ನಾವು ನೋಡಿ ಏನಪಾ ಜಗತ್ತಿನಲ್ಲಿ ಇಂತಹ ಸತ್ಯ ಮಾತಾಡೋ ಜನರು ಅದಾರನೇಪಾ ಅಂತಿದ್ದೀವಿ. ಆದರ ಇವತ್ತಿನ ಜನರು ಮಾತಾಡೋದು ಒಂದೂ ತಿಳಿಯುವುದಿಲ್ಲ. ಸತ್ಯ ಮಾತಾಡ್ತಾರೋ, ಸುಳ್ಳು ಮಾತಾಡತಾರೋ, ಅನ್ನೋದು ತಿಳಿಯುವುದಿಲ್ಲ. ಆಹಾರನೂ ನಾವು ತಿಂದಷ್ಟು ಇವರು ತಿನ್ನೂವುದಿಲ್ಲ. ನಾವು ರೊಟ್ಟಿ, ಕೆನಿಮೊಸರು, ಬೆಣ್ಣೆ ತಿಂತಿದ್ದೀವಿ, ಸೆಗಣಿ ಬಳದೀವಿ, ಹೊಲಕ್ಕೆ ಹೋಗೀವಿ, ಮೇವು ಕೋದೀವಿ, ಎಲ್ಲ ಕೆಲ್ಸ ಮಾಡೀವ್ರಿ.

ಸಂದರ್ಶಕರು : ಎಷ್ಟು ವರ್ಷ ಶಿಕ್ಷಕರಾಗಿ ಸೇವೆ ಮಾಡಿರುವಿರಿ ?

ಕವಿ : ನಾನು ೩೬ ವರ್ಷ ಶಿಕ್ಷಕನಾಗಿ ಲಕ್ಷ್ಮೇಶ್ವರದ ಮುನಿಸಿಫರ್ ಹೈಸ್ಕೂಲಿನಲ್ಲಿ, ಬೆಳ್ಳಟ್ಟಿಯ ಎಸ್.ಎಫ್. ಹೈಸ್ಕೂಲಿನಲ್ಲಿ, ಎರಡು ವರ್ಷ ಮಾಡೀನಿ. ಗದಗ ಮಾಡೆಲ್ ಹೈಸ್ಕೂಲಿನಲ್ಲಿ ಒಂದೂವರೆ ತಿಂಗಳು ಮಾಡೀನಿ. ಅನಂತರ ವಕೀಲ ರಾಚಯ್ಯನವರು ಅಧ್ಯಕ್ಷರಾಗಿದ್ದರು. ಅವರಿಗೆ ಹೇಳಿಕೊಂಡು ಲಕ್ಷ್ಮೇಶ್ವರಕ್ಕೆ ಬಂದಿನೀರಿ. ನನಗ ಮೂರು ಸಂಸ್ಕೃತಿಗಳು ಅದಾವು. ಮುಳಗುಂದ ಬಾಲಲೀಲಾ ಮಹಾಂತ ಶಿವಯೋಗಿಗಳ ಸಂಸ್ಕೃತಿ (ವಿರಕ್ತ ಸಂಸ್ಕೃತಿ) ಹಾಗೂ ಧಾರವಾಡ ಮುರುಘಾಮಠದ ವಿರಕ್ತ ಸಂಸ್ಕೃತಿ, ಮಾವನವರ (ಕರಿಯಪ್ಪ ಕೆರಿಮನಿ) ಸಿದ್ಧಾರೂಢ ಸಂಸ್ಕೃತಿ ಹಾಗೂ ಲಕ್ಷ್ಮೇಶ್ವರದ ಪಂಚಾಚಾರ ಸಂಸ್ಕೃತಿ ಹಿಂಗ ಮೂರು ಸಂಸ್ಕೃತಿಗಳು ಮುಪ್ಪುರಿ ನನಗ ಅಂಟಿಕೊಂಡಾವರಿ. ಅಧ್ಯಾತ್ಮದಲ್ಲಿ ಬಹಳ ಆಸಕ್ತಿ ನನಗ.

ಸಂದರ್ಶಕರು : ಸಮಾಜಕ್ಕೆ ಏನಾದರೂ ಸಂದೇಶ ಕೊಡಬಯಸುವಿರಾ ?

ಕವಿ : ಏನೇ ಬರೆಯುವುದಾದರೆ ದೇವರ ಬಗ್ಗೆ ಬರೆಯಿರಿ. ಮನುಷ್ಯರ ಬಗ್ಗೆ ಮಾನವರ ಬಗ್ಗೆ ಬರೆದ ರಾಘವಾಂಕ ಹರಿಹರನಿಂದ ಹೊಡೆಸಿಕೊಂಡು ಹಲ್ಲು ಮುರಕೊಂಡ. ಅದಕ ದೇವರ ದೊಡ್ಡವ. ದೇವರು ಆಡಿಸಿದಾಂಗ ಜೀವನದಲ್ಲಿ ನಡೀತೀವಿ. 'ಈ ಜಗತ್ತು ದೇವರ ಆಡುಂಬೊಲ, ನಾವೆಲ್ಲ ದೇವರ ಕೈಗೊಂಬಿ' ಅಂತಾರಲ್ಲರಿ, ಅದಕ ದೇವರ ಬಗ್ಗೆ ಬರದರ ಒಳ್ಳೇದು. ಮನುಷ್ಯರ ಬಗ್ಗೆ ಬರದರ ಉಪಯೋಗ ಇಲ್ಲ. ಮಂದಿಕೊಟ್ಟದ್ದು ಮನಿತನಕ, ದೇವರು ಕೊಟ್ಟದ್ದು ಕಡೆತನಕ ಅಂತ ಹಿರಿಯರು ಹೇಳೋದು ನೆನಪಾಕ್ಕತರಿ. ನೀನು ಏನರ ಕೇಳುದಿದ್ದರ ದೇವರ ಕೇಳಕೋಬೇಕು ಅನ್ನೋದು ನನ್ನ ವಿಚಾರ.

ನಿವೃತ್ತ ಜೀವನ. ೧೩,೦೦೦ ರೂಪಾಯಿ ಪೆನಶ್ಯನ್ ಬರತೈತಿ. ಯಾರೂ ಕೇಳುವಂಗಿಲ್ಲ ಇಸಗೋಣಂಗಿಲ್ಲ ಅರಾಮ ಅದೀನಿ. ಸಣ್ಣ ಮಗಳು ಊಟ ಹಾಕ್ತಾಳ.

ತಮಗೆ ಧನ್ಯವಾದಗಳು

◆◆◆

ಶ್ರೀ ರಾಮಣ್ಣ ಬ್ಯಾಟಿ
ಸಂದರ್ಶನ ದಿ : ೨೧-೧೧-೨೦೧೦

ಸಂದರ್ಶಕರು : ನಿಮ್ಮ ವ್ಯಯಕ್ತಿಕ ಬದುಕಿನ ಬಗ್ಗೆ ಮಾಹಿತಿಗಳನ್ನು ತಿಳಿಸಿರಿ.

ಕವಿ : ನಾನು ಬೆಳಗಾವ ಜಿಲ್ಲೆಯ ರಾಮದುರ್ಗ ತಾಲೂಕಿನ ಮನಿಹಾಳದವರಾಗಿದ್ದು, ಪ್ರಸ್ತುತದಲ್ಲಿ ಗದಗ-ಬೆಟಗೇರಿಯಲ್ಲಿ ನೆಲೆಸಿದ್ದೀನಿ. ಶ್ರೀ ದೊಡ್ಡಪ್ಪ ಮತ್ತು ಶ್ರೀಮತಿ ಚೆನ್ನಬಸಮ್ಮ ದಂಪತಿಗಳಿಗೆ ೧-೯-೧೯೫೧ರಂದು ೮ನೇ ಮಗನಾಗಿ ಹುಟ್ಟಿದೆ. ನೇಕಾರಿಕೆ ಅವಲಂಬಿತ ಕುಟುಂಬದ ನಿರ್ವಹಣೆಗಾಗಿ ನನ್ನ ತಂದೆ ದೊಡ್ಡಪ್ಪ ಬ್ಯಾಟಿಯವರು ೧೯೭೫ರಲ್ಲಿ ಗದಗ-ಬೆಟಗೇರಿಗೆ ಬಂದು ನೆಲೆಸಿದರು.

ಬಾಲ್ಯದಲ್ಲಿ ಓದು-ಬರಹದ ಗಂಧವರಿಯದ ನಾನು ತಾಯಿಯ ಪ್ರೇರಣೆ, ಸ್ವಪ್ರಯತ್ನ, ಹಾಗೂ 'ಕಪ್ಪತ್ತದ ಕಲ್ಪವೃಕ್ಷ'ವೆಂದು ಪ್ರಸಿದ್ಧವಾದ 'ಜಲಾಶಂಕರನ ಸನ್ನಿಧಾನ'ದಲ್ಲಿ ಅನನ್ಯ ಭಕ್ತಿಯಿಂದ ಪೂಜಿಸಿದ ಸತ್ಯ ನಾರಾಯಣನ ವ್ರತದ ಫಲದಿಂದಾದ ಜಲಾಶಂಕರನ ಅನುಗ್ರಹ ಮತ್ತು ಗದುಗಿನ ತೋಂಟದ ಸಿದ್ಧಲಿಂಗ ಶ್ರೀಗಳ ಕರುಣೆಯಿಂದ ಕವಿತ್ವವು ನನಗ ಸಾಧ್ಯ ಆಗೇದ.

ಅನೇಕ ಪೌರಾಣಿಕ ಶರಣರನ್ನು, ಸ್ವಾಮಿಗಳನ್ನು, ಆಧುನಿಕ ಪೂರ್ವ ಶರಣರನ್ನು ಹಾಗೂ ಆಧುನಿಕ ಕಾಲದ ಅಂಬೇಡ್ಕರ್‌ರನ್ನು ಕುರಿತು ಅವರ ಜೀವನ ಚರಿತ್ರೆಯನ್ನು ಷಟ್ಪದಿಯ ಲಯವನ್ನು ಬಳಸಿಕೊಂಡು ಏಳು ಪುರಾಣ ಕೃತಿಗಳನ್ನು ಬರದೀನಿ. ಅಲ್ಲದೇ ನಾನು ಅನೇಕ ದೇವ-ದೇವತೆಗಳು ಕುರಿತಂತೆ ವ್ರತ ಮಹಾತ್ಮೆಯ ಕಥೆಗಳನ್ನ, ಅವಧೂತ ಪರಂಪರೆಯ ಸಂತರು, ಶರಣರು, ಪುಣ್ಯಕ್ಷೇತ್ರ ಕುರಿತಂತೆ ಶತಕಗಳನ್ನು ಗದ್ಯದಲ್ಲಿ ಬರದೀನಿ. ಭಕ್ತಿಯೇ ಈ ಎಲ್ಲ ಸಾಹಿತ್ಯ ಕೃಷಿಗೆ ಮೂಲವಾಗಿದೆ.

ನಾನು ನನ್ನ ಕಾವ್ಯ ರಚನೆಯಲ್ಲಿ ನಾನು ಪಡೆದ ಅಂತರಂಗದ ಅನುಭಾವ ಅನುಭೂತಿಗಳನ್ನ ಒಳಗಿನ ಪ್ರೇರಣೆಯಾಗಿ, ಶ್ರೀ ತೋಂಟದ ಸಿದ್ಧಲಿಂಗ ಶ್ರೀಗಳು ಬಾಹ್ಯ ಪ್ರೇರಣೆಯಾಗಿರುವುದನ್ನು ನಾನು ಪ್ರತಿ ಪುರಾಣದ ಕಾವ್ಯಗಳಲ್ಲಿ ಬರದೀನಿ.

ಸಂದರ್ಶಕರು : ಕಾವ್ಯ ರಚನೆಯ ಪ್ರೇರಣೆ – (ಸ್ವಯಂ – ಅನ್ಯ)ಗಳಾವುವು ?

ಕವಿ : ಜನರ ಬೇಡಿಕೆಗನುಸಾರವಾಗಿ ಬರದೇನಿ. ನನ್ನದೇ ಒಂದು ಗುರಿ ಇಟ್ಟುಕೊಂಡಿಲ್ಲ. ನಾನು ನನ್ನದೇ ಗುರಿ ಇಟ್ಟುಕೊಂಡು ಬರದು ಪ್ರಿಂಟ್ ಮಾಡಿಸಿ ಮಾಡಾಕ ಆಗೋಲ್ಲ. ಕೆಲವು ಮಠಾಧೀಶರು, ಕೆಲವೊಂದು ನಮ್ಮ ನಮ್ಮ ಬಳಗದವರು ಇಂತಹದು ಬರಿಯಿರಿ ಪ್ರಿಂಟ್ ಮಾಡಿಸ್ತೇವು, ದುಡ್ಡು ಕೊಡ್ತೇವು ಅಂದಾಗ. ಅದರ ಬಗ್ಗೆ ನಾವು ಸಂಶೋಧನೆ ಮಾಡಿ ನನ್ನದೇ ಒಂದು ಜ್ಞಾನ, ವಿವೇಕ ಆ ಗ್ರಂಥದಲ್ಲಿ ತುಂಬವಂಥಹದು ಒಂದು ವ್ಯವಸ್ಥೆ ಆಗೈತಿ.

ಸಂದರ್ಶಕರು : ಕಾವ್ಯ ರಚನೆಯ ಹಿನ್ನೆಲೆಯಲ್ಲಿರುವ ಪ್ರಭಾವಗಳು ಯಾವುವು ?

ಕವಿ : ನಾನು ಓದಿದ್ದು ಒಂದೇ ಒಂದು ಗ್ರಂಥ, ಅದು ಚಿದಾನಂದಾವಧೂತರು ಬರೆದ ದೇವಿ ಪುರಾಣ. ನಾನು ಇದುವರೆಗೂ ಯಾವ ಪುರಾಣಗಳನ್ನು ಓದಿಲ್ಲ.

ಸಂದರ್ಶಕರು : ನಿಮ್ಮ ಕಾವ್ಯ ರಚನೆಯ ಉದ್ದೇಶಗಳೇನು ?

ಕವಿ : ನನ್ನದೇ ಒಂದು ಗುರಿ ಅಂದ್ರ ಅಲ್ಲಿ ಆಧ್ಯಾತ್ಮ, ಭಕ್ತಿ, ವಿವೇಕ ಇದು ನನ್ನ ಕಾವ್ಯದಲ್ಲಿ ಬರುವಂತದ್ದು ಮುಖ್ಯ ಗುರಿ. ಆಮೇಲೆ ವಿಚಾರಾತ್ಮಕವಾಗಿ ಆ ಕಾವ್ಯ ಸೃಷ್ಟಿ ಆಗುತದ.

ಸಂದರ್ಶಕರು : ಕಾವ್ಯಕ್ಕೆ ಬಳಸಿಕೊಂಡ ಭಾಮಿನಿ ಷಟ್ಪದಿ ಛಂದಸ್ಸನ್ನು ರಚಿಸುವಲ್ಲಿ ನಿಮಗೆ ತೊಡಕುಗಳು ಉಂಟಾಗಿವೆಯೇ ?

ಕವಿ : ನನಗೆ ದೇವೀ ಪುರಾಣ ಓದಿದ ಅಭ್ಯಾಸ ಬಲದಿಂದ, ಆ ಹಾಡಿನ ಗೂಡ ನಾನು ಬರೆದದ್ದರಿಂದ ಅಲ್ಲಿ ನನಗ ಕಠಿಣ ಅನಿಸಿಲ್ಲ. ಯಾಕಂದ್ರ ಹಾಡಕೊಂತ ಬರೆದಾಗ ಎಲ್ಲಿ ಗಣ ಮಾತ್ರ ತಪ್ಪತ್ತದೋ ಅಲ್ಲಿ ನನಗೆ ಹಾಡಾಕ ಬರೋದಿಲ್ಲ. ಅವಾಗ ಇಲ್ಲಿ ಏನೋ ಮಿಷ್ಟಿಕಾಗೈತಿ ಅಂತ ತಿಳಕೊಂಡು ಗನಾ ಮಾತ್ರ ಮೂರು ನಾಲ್ಕು ಮಾತ್ರ ಬರದs ಇದ್ದಾಗ ನಾಲ್ಕು ನಾಲ್ಕು ಬಂತು ಅಥವಾ ಮೂರು ಮೂರು ಬಂದಾಗ ಅದು ನನಗ ಪ್ರಜ್ಞೆ ತಂದಕೊಡತದ, ಅಲ್ಲಿ ಮತ್ತೊಂದು ಮಾರ್ಗದರ್ಶಕರು ಇಲ್ಲದ ಅದು ದಾರಿ ತೋರುವ್ಹಂಗ ನನ್ನ ಹಾಡಿನ ಗುಂಗಿನೊಳಗ ಅದನ್ನ ನಾನು ತಿದ್ದಕೊಳ್ತೀನಿ.

ಸಂದರ್ಶಕರು : ಭಾಮಿನಿ ಛಂದಸ್ಸನ್ನು ನೀವು ಕಾವ್ಯ ರಚನೆಗೆ ಬಳಸಿಕೊಂಡ ಕಾರಣವೇನು ?

ಕವಿ : ಕಾವ್ಯ ರಚನೆಗೆ ಹೆಚ್ಚಾಗಿ ಎಲ್ಲರೂ ಬಳಸಿದ್ದು ಭಾಮಿನಿ ಷಟ್ಪದಿಯನ್ನು. ವಾರ್ಧಕ ಷಟ್ಪದಿಯೊಳಗ ಬರೆದದ್ದನ್ನ ಇವತ್ತು ಯಾರಿಗೂ ಓದಾಕ ಆಗೋದಿಲ್ಲ. ಯಾಕಂದ್ರ ಅಷ್ಟು ಕಠಿಣ ಮತ್ತು ಸಾಹಿತ್ಯ ಬಹಳ ಬೇಕು. ನಾನು ಭಾಮಿನಿ ಅಲ್ಲದ ಜಾಸ್ತಿ ಚೌಪದಿನೂ

ಬರದೇನಿ. ತ್ರಿಪಧಿನೂ ಬರದೀನಿ. ಆಮೇಲೆ ಕುಸುಮ, ಶರಾ, ಭೋಗ ಎಲ್ಲಾನೂ ಬರದೀನಿ. ಆದ್ರ ಪುರಾಣ ಕಾವ್ಯಗಳಿಗೆ ಮೀಸಲಾತಿ ಅಂದ್ರ ವಿಶೇಷವಾಗಿ ಭಾಮಿನಿ ಷಟ್ಪದಿ. ಭೋಗದೊಳಗ ಬರೆದದ್ದು ಹನುಮಾನ ಕವಚ ಅದೂ ಮಾಡೇನಿ.

ಸಂದರ್ಶಕರು : ಈ ಕಾವ್ಯ ರಚನೆಯ ಪ್ರಭಾವಗಳಾವುವು ?

ಕವಿ : ಪ್ರಭಾವಗಳಂದ್ರ ನನ್ನ ಮನಸ್ಸಿನ ಮೇಲೆ ಪರಿಣಾಮ ಆಗುತ್ತ. ಅಮೇಲೆ ನಮ್ಮ ಹಿರಿಯರು ನನಗ ಬಳವಳಿಯಾಗಿ ಹೇಳಕೊಂಡು ಬಂದಂತ ಶಿವಾನಂದ ಪುರಾಣವನ್ನು ಯಾರೂ ದುಡ್ಡು ಕೊಡದಿದ್ರು ಬರಿಬೇಕಂತ ಹುಚ್ಚು. ಯಾಕಂದರ ಅವರು ೧೮ ವರ್ಷ ತಪಸ್ಸು ಮಾಡಿರತಕ್ಕಂತ ಭೂಮಿಯೊಳಗ ನಾನು ಹುಟ್ಟಿದ್ದು, ಆನಂತರ ಮನಸ್ಸಿನ ಮೇಲೆ ಪರಿಣಾಮ ಆಗುವ್ಹಂಗ ನಮ್ಮ ತಂದೆ-ತಾಯಿ ಹೇಳಿರತಕ್ಕಂತ ವಾಕ್ಯಗಳು. ಅಂತವುಗಳಲ್ಲಿ ಕೆಲವೊಂದನ್ನು ನಾನಾಗೆ ಆಯ್ಕೆ ಮಾಡಿಕೊಂಡು ಬರದೇನಿ. ಆದ್ರೂ ಕೂಡ ದಾನಿಗಳು ಮತ್ತು ಪೋಷಕರು ಸಿಗಲಾರದ ನನಗ ಯಾವ ಕಾರ್ಯವನ್ನ ಮಾಡಾಕ ಆಗಿಲ್ಲ. ಕಾಲ ಕಾಲಕ್ಕ ನನಗ ಸಿಕ್ಕಾರ, ಅದ ನನಗ ದಾರೀದೀಪವಾಗಿ ಬರಲಿಕ್ಕೆ ಪ್ರೇರಣೆ ಪ್ರಭಾವ ಆಗ್ಯೆತಿ.

ಸಂದರ್ಶಕರು : ಇನ್ನ ದೈವೀ ಅನುಭೂತಿ ಮತ್ತು ಕಾವ್ಯ ರಚನೆ ಸಂಬಂಧಗಳ ಕುರಿತು ತಮ್ಮ ವಿಚಾರವೇನು ?

ಕವಿ : ನನ್ನ ಬದುಕಿನಲ್ಲಿ ದೈವೀ ಅನುಭೂತಿ ಬಿಟ್ಟರೆ ಬ್ಯಾರೆ ಏನೂ ಇಲ್ಲs ಇಲ್ಲ. ಯಾಕಂದರೆ ಒತ್ತಕ್ಷರ ಪೂಜಿ ಕೂಡ ಬರ್‍ಯಾಕ ಬರಲಾರದವನು. ಶಾಲಿಗೆ ನಾನೂ ಹೋಗಿಲ್ಲ. ನಂದ ಮೂರನೆತ್ತದ್ಯಾಗ ಹೆಸರಿದ್ರೂ ನಾನು ಒನ್ನೆತ್ತದ್ಯಾಗ ಹೋಗಿ ಕುಂದ್ರತಿದ್ದೆ. ನಮ್ಮ ಕಾಕನ ಮಗ ಅಲ್ಲಿ ಕಲಿತಿದ್ದ. ಮಾಸ್ತರಂದ್ರು ನೀನು ಇಲ್ಯಾಕ ಕುಂದ್ರತಿ ನೀನು ಮೂರ್ನೆತ್ತಕ್ಕ ಅದೀದಿ ಹೋಗು ಅಲ್ಲೇ ಕುಂದ್ರು ಅಂದ್ರೂ ನನಗ ಏನೂ ಬರೋದಿಲ್ಲರಿ ಸರ ಮತ್ತ ಇಲ್ಲೆ ಕುಂದ್ರ ಅಂದ್ರ ಕುಂದ್ರತೇನಿ, ಇಲ್ಲಂದ್ರ ಮನೆಗೆ ಹೊಕ್ಕಿನಿ ಅಂದೆ ಆತು ಕುಂದ್ರು ಅಂದ್ರು. ಒಂದು ವರ್ಷ ನಾನು ಮೂರ್ನೆತ್ತಕ್ಕ ಇದ್ರು ಒನ್ನೆತ್ತಾಗ ಕುಂತ ಕಲತರಿ. ಹಾಜರಿ ಯಾರ ಹಾಕಿದರೋ ಗೊತ್ತಿಲ್ಲ ಮತ್ತು ನನಗ ನಾಲ್ಕನೆತ್ತಕ್ಕ ಹಾಕಿದರು. ನಾಲ್ಕನೆತ್ತಕ್ಕ ಹಾಕಿದಾಗ ಕಡೆಕ ನಾನು ಸಾಲಿನ ಬಿಟ್ಟೆ, ಯಾಕಂದರೆ ನನಗ ಏನೂ ತಿಳಿವಳಿಕೆ ಇರಲಿಲ್ಲ. ಶಾಲಿ ಒಳಗ ನನ್ನ ಜೀವನ ಅಂದ್ರ ಸಂಪೂರ್ಣ ಶೂನ್ಯ. ಆದ್ರ ಬಾಲ್ಯದೊಳಗ ವಿಶೇಷತೆ ಏನಂದ್ರ ಜ್ಞಾಪಕ ಶಕ್ತಿ ಬಹಳ ದೊಡ್ಡದಿತ್ತು. ಒಂದೊಂದ ಸಲ ಮಾಸ್ತರುಗಳು ಪುಸ್ತಕ ಹಿಡಕೊಂಡು ಎಲ್ಲ ಹುಡುಗರಿಗೆ. ಇದು ಓದ ಅಂತ ಓದಿಸಕೊಂತ ಬರತಿದ್ರು ನಾನು ಕಡೆ ನಂಬರ ಕುಂತಿರವ ಅವ್ರು ಒಂದು ಸುತ್ತು ಓದುದರೊಳಗ ನನಗ ಅದು ಜ್ಞಾಪಕದಲ್ಲಿ ಉಳಿತಿತ್ತು. ಪುಸ್ತಕದಾಗಿನ ಅಕ್ಷರ ಮೇಲೆ ಕೈ ಹಿಡಿದು ಓದ ಅಂದ್ರ ಓದಾಕ ಬರತಿದ್ದಿಲ್ಲ, ಆದ್ರ ಕಂಠ ಪಾಠ ಆಗಿರತಿತ್ತು. ಅವರು ಓದದರೊಳಗ ಮುಂದಿನದು ಬಾಯಿಪಾಟಲೇ ಹೇಳಬಿಡ್ತಿದ್ದೆ ಅಬಾ ಬ ಬ ಬ ಬಾ ಇವ

ಸರಿ ಅಂತ ಸುಮ್ನಾಗಿ ಬಿಡತಿದ್ರು. ಆದ್ರ ಜ್ಞಾಪಕ ಶಕ್ತಿಯ ಪ್ರಭಾವ ಮಾತ್ರ ನನ್ನ ನಿಜವಾದ ಪ್ರೇರಣೆ. ಹೆಚ್ಚು ಕಡಿಮೆ ನನ್ನ ಟ್ರೇನಿಂಗ್. ನನ್ನ ಜೀವನ ನೆನಸಕೊಂಡ್ರ ಸಿನೇಮಾ ಥೇಟರ್‌ನೊಳಗ ಎಲ್ಲ ವಿದ್ಯೆ ಕಲತಂಗ ಆಗಿ ಬಿಟ್ಟದ. ಆಗಿನ ಕಾಲಕ ಭಕ್ತಿ ಪ್ರಧಾನ, ನೀತಿ ಬೋಧಕ, ಧಾರ್ಮಿಕವಾದಂತ ಆ ಸಿನೇಮಾಗಳು ನನ್ನ ಮನಸಿನ ಮೇಲೆ ಅಚ್ಚ ಒತ್ತಿದ್ಹಂಗ ಪರಿಣಾಮ ಆಗ್ತಿತ್ತು. ಅದು ಮುಂದ ನನ್ನ ಕಾವ್ಯ ಪ್ರೇರಣೆಗೆ ಒಂದು ದಾರಿ ಆತು. ಅದರ ಜೊತೆಗೆ ದೈವೀ ಅನುಭೂತಿ ಮತ್ತು ನನ್ನ ತಾಯಿ ಬಹುದೊಡ್ಡ ಪ್ರೇರಣೆಗಳಾಗ್ಯಾವು.

ನನ್ನ ಬದುಕಿನ ಹಿನ್ನೆಲೆಯೆಂದರ 'ಜಲಾಶಂಕರ ನನ್ನ ಮುಖ್ಯ ಆರಾಧ್ಯ ದೈವ. 'ತಂದೆ ಜಲದ ಶಂಕರ' ಬಂಧುವಾದಳು ಬನದ ಶಂಕರಿ, ಇಂದು ತೋಂಟದ ಸಿದ್ಧಲಿಂಗನ ಶಿಷ್ಯ ನಾನಾದೆ' ಅಂತ ಎಲ್ಲ ಪುರಾಣ ಕಾವ್ಯಗಳಲ್ಲಿ ಜಲದಶಂಕರನ ಸ್ತುತಿ ಇದೆ. ದೈವ ಪ್ರೇರಣೆಯೇ ದೊಡ್ಡದು. ನಾನು ಅಭ್ಯಾಸ ಮಾಡಿ ಅಥವಾ ಎಲ್ಲೋ ಗುರುಕುಲದಲ್ಲಿ ಮಠದಲ್ಲಿ ಬೆಳೆಲಿಲ್ಲ, ಸಂಸ್ಕೃತ ಅಭ್ಯಾಸ ಇಲ್ಲ, ಯಾವ ವಿದ್ಯಾವಂತರ ಸಹವಾಸ ಇಲ್ಲ. ನಮ್ಮದು ನೇಕಾರಿಕೆ ಜೀವನ. ಅಲ್ಲಿ ಯಾರು ವಿದ್ಯಾವಂತರು ಇಲ್ಲ . ಕವಿಗಳು ಬಹಳ ಓದತಾನ ಬರೀತಾನ ಅಂದ್ರ ಅವ ದೊಡ್ಡ ಶಾಣ್ಯೆ ನಮ್ಮ ನೇಕಾರ ಬಳಗದೊಳಗ. ಅಂತಹ ಉಪಜೀವನದಲ್ಲಿ ನಾನು ಇದನ್ನ ಸಾಧಿಸಬಿಟ್ಟೆ ಅಂತಲ್ಲ. ನನ್ನದನ್ನುದು ಏನಿಲ್ಲ. ಎಲ್ಲವೂ ದೈವ ಪ್ರೇರಣೆ ವಿನಃ ಇದು ನನ್ನ ಒಂದ ಶಕ್ತಿ ಅಂತ ನಾನು ಒಪ್ಪುವುದಿಲ್ಲ ಮನಸ್ಸು ಒಪ್ಪುವುದಿಲ್ಲ .

ಸಂದರ್ಶಕರು : ಕಾವ್ಯ ಕಲೆಯನ್ನು ಹೇಗೆ ಸಾಧನೆ ಮಾಡಿರುವಿರಿ ?

ಕವಿ : ನಮಗ ಒಬ್ಬರು ಅಲ್ಲಯ್ಯ ಮಾಸ್ತರು ಹೇಳುತ್ತಿದ್ದರು. ಅಷ್ಟಾದಶ ಲಕ್ಷಣಗಳು ಭಾಮಿನಿ ಷಟ್ಪದಿಯಲ್ಲಿ ಇರಬೇಕು. ನೀವು ಗಿರಿ ಶಿಖರಗಳನ್ನು, ಸೂರ್ಯ ಚಂದ್ರನನ್ನು, ಸಮುದ್ರ ಎಲ್ಲ ವರ್ಣಿಸಬೇಕಾಗತದ. ಶಿವಾನಂದ ಪುರಾಣದಲ್ಲಿ ಕೂಡ ಅಂತಹವು ಬರಾತವ. ಶಿವಾನಂದರು ಪೂಜಾಕ ಕುಂತಿದ್ರ ಗಿಡದ ಹಸಿರಿನ ಎಲೆಗಳ ಮಧ್ಯದಿಂದ ಸೂರ್ಯ ಕಿರಣಗಳು ಅದರ ಮೇಲೆ ರವಿ ರಸ್ಮಗಳು ಹೊಳೆತ್ತಿದ್ದವು. ಆ ಒಂದು ಶ್ರೀಂಗಾರ ಭಾವನೆಗಳನ್ನ ಅಲ್ಲೆ ಬಳಸತ್ತಿದ್ದರು. ಆದ್ರ ಅದನ್ನ ಗುರಿ ಮಾಡಿ ಇಟಕೊಂಡು ಬರದಿಲ್ಲ ಪ್ರಕೃತಿ ವರ್ಣನ ಹೂಗಳು ಅರಳಿದ್ದವು ಇವೆಲ್ಲ ಬೇಕೆ ಬೇಕು.

ಸಂದರ್ಶಕರು : ಕಾವ್ಯದಲ್ಲಿ ಸಾಮಾಜಿಕ ಚಿತ್ರಣವನ್ನು ಮಾಡಿದ ರೀತಿ ಹೇಗೆ ?

ಕವಿ : ಸಾಮಾಜಿಕವಾದ ಚಿತ್ರಣವನ್ನು ತಂದು ಕೊಂಡ್ರೆ ಅದು ನಿಜವಾಗಿ ಮನುಷ್ಯನ ಬದುಕಿನ ಮೇಲೆ ಪರಿಣಾಮ ಬೀರತದ, ಎಲ್ಲವೂ ಪೌರಾಣಿಕ. ಅವರು ದೇವರು, ದೇವರಿಂದ ಆಯಿತು ಅಂತ ಜನ ಆಡಕೊಂಡ್ರ, ನಾವು ಜ್ಞಾನಿಗಳ ಕೂಡ ಕೆಲವೊಂದು ಸಲ ಹೊಡಾದಾಡಬೇಕಾಗ್ತದ. ಪ್ರತಿ ಆತ್ಮಗಳು ಪರಮಾತ್ಮನ ಚೈತನ್ಯ. ಆಶೆ ಉಳ್ಳಂತದ್ದು ಆತ್ಮ, ಜೀವಾತ್ಮ, ಆಶಾರಹಿತವಾಗಿ ಇರುವಂತ ಆತ್ಮ ಪರಮಾತ್ಮ ಆಯಿತು. ಪ್ರತಿ ಜೀವನು ಪರಮಾತ್ಮನ

ಚೈತನ್ಯ ಇದ್ದಾಗ ಕೈಲಾಸದ ವರ್ಣನೆ ಯಾಕ ಮಾಡಬೇಕು? ಕೈಲಾಸ ವರ್ಣನೆಯನ್ನ ಪುರಾಣದಲ್ಲಿ ನಾನು ಹಾಕಿಲ್ಲ ಯಾಕ ಹಾಕೋದಿಲ್ಲ ಅಂದ್ರ ಮಾನವತಾ ಜೀವಕ್ಕೆ ಒಂದು ಶಕ್ತಿ ಐತೋ ಇಲ್ಲೋ? ಯಾಕಂದರ ದೇವತೆಗಳು ಭೂಮಿಯನ್ನು ಆಳತಾರ, ಮಾನವರು ಸ್ವರ್ಗವನ್ನು ಆಳತಾರ. ಇಲ್ಲಿ ಯಜ್ಞಯಾಗಾದಿಗಳನ್ನ ಮಾಡಿ ಹವಿಸ್ಸನ್ನು ಧಾರೆ ಎರೆದು ಅವರಗೂಟ ಹಾಕಿ ಅವರ್ನ ಸಲಹುವಂತ ಶಕ್ತಿ ಮಾನವರಿಗೆ ಐತಿ, ಆ ದೇವತೆಗಳು ಮಳಿ ಬೆಳೆ ಕೊಟ್ಟು ಗಾಳಿ ಬಿಸಿಲು ಸೂರ್ಯನ ಕಿರಣಗಳಿಂದ ಮಾನವರ್ನ ಸಲುವತಾರ. ಅಂದಾಗ ಇಲ್ಲಿ ಮಾನವತಾ ಶಕ್ತಿಯನ್ನು ಕಡೆಗಣಿಸಿ ದೇವರ ಹೆಚ್ಚು ದೇವರ ಹೆಚ್ಚು ಅಂತ ಇದನ್ನು ಕೂಡ ನಾನು ಮಾಡಿಲ್ಲ. ಸಮಯ ಸಂದರ್ಭ ಬಂದಿದ್ದರ ಮಾತ್ರ ಅಲ್ಲಿ ದೇವರ ಹೆಚ್ಚು ಅನ್ನೋದನ್ನು ಮಾಡಬೇಕಾಕೈತಿ. ಹಿಂಗ ಜನ್ಮಸ್ಯ ಶ್ರೇಷ್ಠರು ದೇವತೆಗಳು, ಕರ್ಮದಿಂದ ಶ್ರೇಷ್ಠರು ಮಾನವರು. ಮಾನವ ತನ್ನ ಕರ್ಮದದಿಂದ ದೇವರಾಗಬಲ್ಲ ಉದಾ : ವಿವೇಕಾನಂದರು, ಪರಹಂಸರು. ಜನರಲ್ಲಿ ದೇವರು ಅದಾನ ಅನ್ನೋ ನಂಬಿಕೆ ಹುಟ್ಟಿಸೋ ಸಲುವಾಗಿ, ನಾಸ್ತಿಕರಾಗಿ ಜನ ಬದುಕಬಾರದು ಅಂತ. ಪುರಾಣಗಳ ಗುರಿಯಾದ ಭಕ್ತಿ ಮತ್ತು ಜ್ಞಾನಗಳು ಲೋಕದಲ್ಲಿ ಉಳಿಯಾಕ ನಾವು ಪ್ರಯತ್ನ ಮಾಡತೀವಿ. ಅವರು ದೊಡ್ಡವರು, ನೀವು ಅವರಂಗ್ಹ ದೊಡ್ಡವರು ಆಗ್ರಿ ಅಂತ ಪ್ರೇರಣೆ ಮಾಡುವಂಥಾದ್ದು, ಪುರಾಣ. ಬ್ಯಾರೇ ಏನೂ ಅಲ್ಲ.

ಸಂದರ್ಶಕರು : ಈ ಪುರಾಣ ಕಾವ್ಯಗಳನ್ನು ರಚನೆ ಮಾಡುವುದರಿಂದ ಹಣ, ಕೀರ್ತಿ, ಜನಪ್ರಿಯತೆ ನಿಮಗ ಎಷ್ಟರ ಮಟ್ಟಿಗೆ ಸಾಧ್ಯವಾಗಿವೆ ?

ಕವಿ : ನಾನು ಹಣ, ಕೀರ್ತಿ ಯಾವುದಕ್ಕೂ ಆಸೆ ಇಟ್ಟುಕೊಂಡವಲ್ಲ. ನಾನು ಕೀರ್ತಿಗಾಗಿ ಬೆನ್ನ ಹತ್ತಿದ್ದರ ಎಲ್ಲರಗಿಂತ ಬಹಳ ಯಮಕಾಗಿ ಅಡ್ತಾತಿದ್ದೆ. ಯಾವಾಗಲೂ ನಾನು ಬರಿಯೋದು ನನ್ನ ಆನಂದಕ್ಕ. ಕೋಗಿಲೆ ತನ್ನ ಆನಂದಕ್ಕ ಹೆಂಗ ಹಾಡತದೋ ಹಂಗ ನನ್ನ ಆನಂದಕ್ಕ ನಾನೂ ಮಾಡಕೊಂತ ಬಂದೆ. ನಾನು ಬರಿತಿದ್ರ ವಿಚಾರಕ್ಕಿಂತ ಹೆಚ್ಚಾಗಿ ಆನಂದ ತಡಿಲಾರದ ಅಳತೇನಿ, ಆನಂದ, ಅತಿರೇಕ, ನಾ ಅಳುದು ನಗುದು, ಆ ಆನಂದ, ಆ ಹವ್ಯಾಸದಾಗ ಎಷ್ಟು ಸುಖ ಐತಂದ್ರ; ಜಗತ್ತಿನೊಳಗ ಆ ಶಬ್ದಗಳು ಕೂಡಕೊಂತ ಬರಕೊಂತ ಬಂದುಬಿಟ್ಟರ ಯಾವ ಸ್ವರ್ಗದಲ್ಲಿ ಇದ್ದ ದೇವತೆಗಳು ಆ ಸುಖ ಅನುಭವಿಸಾಕ ಸಾಧ್ಯವಿಲ್ಲ, ಅಷ್ಟು ಆನಂದ ಆ ಕಾವ್ಯ ಬರಿಯುವಾಗ ಸಿಗತೈತಿ, ಆ ಆನಂದಕ್ಕಾಗಿ ನಾನು ಬರತೀನಿ ವಿನಃ ಜನ ಮೆಚ್ಚಿಗೆಗೆ ಆಗಲಿ ಜನರು ನನ್ನ ದೊಡ್ಡವ ಅನ್ನಲಿ ಅನ್ನುವ ಉದ್ದೇಶವಿಲ್ಲ ಕೀರ್ತಿ, ಪ್ರತಿಷ್ಠೆ, ಗೌರವ ಇದಕ್ಕಾಗಿ ನಾನು ಯಾವ ಕಾವ್ಯಗಳನ್ನು ಮಾಡಲಿಲ್ಲ. ಯಾವ ಕಾವ್ಯಗಳನ್ನು ನಾನು ಮಾಡೂದು ಇಲ್ಲ.

ಸಂದರ್ಶಕರು : ಆಧುನಿಕ ಜೀವನದಲ್ಲಿ ಇಂತಹ ಪುರಾಣ ಕಾವ್ಯಗಳ ರಚನೆಯ ಅಗತ್ಯ ಮತ್ತು ಸಮಾಜದ ಮೇಲಾಗುವ ಪರಿಣಾಮ ಕುರಿತು ಏನು ಹೇಳುವಿರಿ ?

ಕವಿ : ಪುರಾಣ ಪುಣ್ಯದ ಗೋಷ್ಠಿ, ಶಾಸ್ತ್ರ ಶಾಂತಿ ಗೋಷ್ಠಿ. ಪುರಾಣಗಳಿಂದ ಮನುಷ್ಯನ ಮನಸ್ಸು ನಿರ್ಮಲ ಆಗತೈತಿ. ಪುರಾಣಗಳು ಮನುಷ್ಯನನ್ನು ಪರಿವರ್ತನೆ ಮಾಡುವಂತಹ ಕೇಂದ್ರ ಬಿಂದುಗಳು. ಸಕಲ ವೇದಗಳ ಸಾರವನ್ನ ಪುರಾಣದಲ್ಲಿ ತುಂಬಿದರು. ನಾಲ್ಕು ವೇದಗಳು ಅದಾವು. ಅವುಗಳನ್ನ ಓದಾಕ ಆಗುವುದಿಲ್ಲ. ಈಗಿನ ಜನರಿಗೆ ಹೆಚ್ಚಿನ ಆಧ್ಯಾತ್ಮವನ್ನು ಜೀರ್ಣಮಾಡಿಕೊಳ್ಳಲಿಕ್ಕೆ ಶಕ್ತಿ ಇರೋದಿಲ್ಲ. ಸುಲಲಿತವಾಗಿ ಸುಂದರವಾಗಿ ಅದನ್ನೊಂದು ಕಥಾ ರೂಪಕದ ಮೂಲಕ ವೇದಗಳನ್ನ ಕೊಡತಕ್ಕಂತ ಒಂದು ಶಕ್ತಿನ ಇಲ್ಲಿ ಪುರಾಣ ಅನಿಸಿಕೊಂಡೇತಿ. ಅಂದಾಗ ಇಲ್ಲಿ ಪುರಾಣ ಧರ್ಮ ಬೋಧಕ, ನೀತಿ ಬೋಧಕ, ಜ್ಞಾನ ಬೋಧಕ ಎಲ್ಲದಕ್ಕಿಂತ ದೈವಿ ಭಕ್ತಿಯನ್ನ ಹುಟ್ಟಿಸುವಂತಹ ಒಂದು ಕೇಂದ್ರ ಬಿಂದು. ಪುರಾಣಗಳು. ಪುರಾಣ ಲೋಕ ಪಾವನ ವಸ್ತು, ವಿನಃ ನಮ್ಮ ಪುರಾಣಗಳಿಂದ ಜಗತ್ತು ಕೆಡೋದಿಲ್ಲ ಒಳ್ಳೆಯದು ಆಗ್ತದ.

ಸಂದರ್ಶಕರು : ಈ ಪುರಾಣ ಕಾವ್ಯಗಳ ವಸ್ತು ವಿವೇಚನೆಯ ಸಂದರ್ಭದಲ್ಲಿ ಯಾವ ಅಂಶಗಳನ್ನು ಪ್ರಧಾನವಾಗಿ ಪರಿಗಣನೆ ಮಾಡುತ್ತೀರಿ ?

ಕವಿ : ನಮ್ಮ ಕಥಾನಾಯಕನ ಗುಣಗಳನ್ನು ನಾವು ಪ್ರಧಾನ ಮಾಡಕೊಂತೀವಿ ವಿನಃ ನಮ್ಮದೇ ಪ್ರಧಾನ ಮಾಡಾಕ ಬರಲ್ಲ. ಕಥಾನಾಯಕನ ಸಮಾಜ ಸೇವೆ ಏನು ಮುಖ್ಯವಾಗಿರತದೋ, ಅದನ್ನೇ ನಾವು ಫಾಲೋ ಮಾಡಬೇಕಾಗತದ. ಈಗ ರಾಮ ಆದರ್ಶ ಪುರುಷನನ್ನ ತಗದು ಕೃಷ್ಣಗ ಹೋಲಸೋದು, ಕೃಷ್ಣನ್ನ ರಾಮಗ ಹೋಲಸೋದು ಹಿಂಗ ನಾವು ಮಾಡಾಕ ಬರೋದಿಲ್ಲ. ಅವರ ದೈವಿ ಗುಣಗಳಲ್ಲಿ ಏನೇನೂ ಇರತಾವ ಅವುಗಳಿಗೆ ಒತ್ತು ಕೊಡೋದು. ಅವುಗಳಿಂದ ಜನರ ಮನಸ್ಸಿನ ಮೇಲೆ ಪರಿಣಾಮ ಆಗಿರಬೇಕು. ಅದರಲ್ಲಿ ಭಿನ್ನ ಭಾವನೆಗಳಿಗೆ ನನ್ನದೇ ಆದ ಶೈಲಿಯನ್ನು ತರೋದಿಲ್ಲ. ಅಲ್ಲಿ ತಂದರೂ ಕೂಡ ಜಗತ್ತಿಗೆ ಒಳ್ಳೆಯದಾಗುವದಿರಬೇಕು. ಅದೇ ಹೋಲಿಕೆಯ ಉಪ ಕಥೆಗಳನ್ನು ತರತೇನಿ ವಿನಃ ಅದನ್ನ ಬ್ಯಾರೆ ರೂಟಿಗೆ ಎಳೆಯುವುದಿಲ್ಲ.

ಸಂದರ್ಶಕರು : ಕಾವ್ಯ ರಚನೆಯಲ್ಲಿ ಸಹಾಯಕವಾದ ಸಂಗತಿಗಳಾವುವು ?

ಕವಿ : ಕಾವ್ಯ ರಚನೆಯಲ್ಲಿ ಸಹಾಯಕ್ಕೆ ಇರತಕ್ಕಂಥ ಸಂಗತಿಗಳು ಅಂದ್ರ ನಮ್ಮ ತಲೆಯಲಿ ಬರುವ ಈ ಪುರಾಣದ ಮಾತುಗಳು, ಸಿನೇಮಾದಲ್ಲಿ ಬರುವಂತಹ ಕೆಲವು ಆಧ್ಯಾತ್ಮದ ಮಾತುಗಳು, ಆಮೇಲೆ ಜನವಾಣಿಯಲ್ಲಿ ಬರತಕ್ಕಂಥದ್ದು. ನನಗ ತಿಳಿವಳಿಕೆ ಮಟ್ಟಿಕ್ಕ ಹೇಳವುದಂದರ ಎಲ್ಲಾ ಶಿಕ್ಷಣಕ್ಕೂ ಗುರುಗಳದಾರ. ಕವಿಯಾದವನಿಗೆ ಗುರೂನಃ ಇಲ್ಲ. ಕನಕದಾಸರು ಯಾವ ಗುರುಗಳಿದ ಕಾವ್ಯ ಶಕ್ತಿ ಪಡಕೊಂಡರು. ಪುರಂದರದಾಸರು ಯಾವ ಗುರುಗಳಿಂದ ಪಡಕೊಂಡರು. ಸರ್ವಜ್ಞ ಯಾವ ಗುರುಗಳಿಂದ ಪಡಕೊಂಡ. ಕವಿಯಾದವನಿಗೆ ಅದು ನನ್ನ ತಿಳುವಳಿಕೆ ಮಟ್ಟಿಕ್ಕ 'ಜಗತ್ತಃ ಒಂದು ಪಾಠಶಾಲೆ ಜಗತ್ತಿನಲ್ಲಿ ಜನವಾಣಿಯಿಂದ

ಬರುವಂತಹ ಪವಿತ್ರ ವಿಚಾರಗಳನ್ನು ನಮ್ಮ ತಲೆಯಲಿ ಜಮಾ ಮಾಡಕೊಂಡು ಅದನ್ನ ಸಮಯ ಸಂದರ್ಭನುಸಾರವಾಗಿ ನಾವು ಬಳಸೋದು, ನಾವು ಉಪಯೋಗ ಮಾಡುವಂತಹ ವಿಷಯ'ಗಳು ಸಹಾಯಕ್ಕೆ ಬರತಾವು.

ಸಂದರ್ಶಕರು : ಕಾವ್ಯಾನುಭೂತಿಯನ್ನು ಹೇಳಿರಿ.

ಕವಿ : ಕಾವ್ಯ ಆಧ್ಯಾತ್ಮಪರ ಮಾನವೀಯದೃಷ್ಟಿ ಕೋನ ಇದ್ದಾಗ ಬಹಳ ಆನಂದ ಕೊಡತದ. ಈಗ ಬನಶಂಕರಿ ಪುರಾಣದಲ್ಲಿ ಒಂದು ಸನ್ನಿವೇಶ ಬರತದ ಅಗಸ್ತ್ಯ ಮಹಾಋಷಿಗಳ ಹೆಂಡತಿ ಲೋಪಾಮುದ್ರೆ ಬನಶಂಕರಿ ವೃತ ಮಾಡಿರತಾರ; ವೃತವನ್ನು ಮಾಡಿದಾಗ ಸ್ವತಃ ಬನಶಂಕರಿ ಬಂದು ಊಟ ಮಾಡತಿರತಾಳ. ಊಟ ಮಾಡಿದಾಗ ಕವಿ ತನ್ನ ಕಲ್ಪನೆಯನ್ನ ಮುಂದುವರಸತಾ ಲೋಪಾಮುದ್ರೆಗೆ ಪ್ರಶ್ನೆ ಮಾಡತಾರ... ಅಮ್ಮ ನಾವುಂತೂ ತಪೋನಿಧಿಗಳು, ತಪಸ್ವಿಗಳು, ಸಾಧಕರು – ನಾವು ವ್ರತ ಮಾಡಿ ನಿನ್ನ ಕರದರ ಬಂದು ಊಟ ಮಾಡಿತಿದಿ. ಇನ್ನ ಜನಸಾಮಾನ್ಯರು ನಿನ್ನ ಕರೆದು ಅಮ್ಮ ಊಟ ಮಾಡಾಕ ಬಾ ಅಂದ್ರ ನೀನು ಬರ್ತಿಯೋ ಇಲ್ಲೋ ಪ್ರಶ್ನೆ ಮಾಡ್ತಾರ. ಪ್ರಶ್ನೆ ಮಾಡಿದಾಗ ಬರತೀನಿ–ಬರೋ ದಾರಿ ಮಾತ್ರ ನಿಮಗ ಗೊತ್ತಿಲ್ಲ. ಅದೆಂಗ ಬರತೀದಿ ಅಂದ್ರ, ಮುತ್ತೈದಿಯ ರೂಪದಿಂದ ಬಂದಿರತೀನಿ. ಆ ಕಾರ್ಯದಲ್ಲಿ ನೀನು ಉಂಡ ಹೋಗಬೇಕು, ಪೂಜಾ ಮುಗಿತೈತಿ, ಈಗ ನೀನು ಉಂಡs ಹೋಗಬೇಕಂತ ನನಗ ಒತ್ತಾಯದಿಂದ ಉಣಸ್ತಿರಲ್ಲಾ ನಾನು ಮುತ್ತೈದಿ ರೂಪದಿಂದ ಬಂದು ಉಣತೀನಿ. ಮುತ್ತೈದಿ ರೂಪದಲ್ಲಿ ಬಂದು ಆ ಭಕ್ತರ ಮನೇಲಿ ಉಂಡು ಹೊಕ್ಕೀನಿ. ಅದಕ್ಕ ನನ್ನನ್ನ ಪ್ರೇಮದಿಂದ ಕಾಣಬೇಕಾದವರೂ ಮುತ್ತೈದಿ ಪೂಜಾ ಮಾಡಿದರ ನಾನು ಸಂತೋಷ ಆಗತೀನಿ. 'ಯಾವ ಮನೇಲಿ ಮುತ್ತೈದಿಯರು ನಗುನಗುತ ಇರತಾರೋ ಆ ಮನೆಯನ್ನ ಕಾಪಾಡೋ ಭಾರ ನನ್ನದು ಅದ, ಯಾವ ಮನೆಯಲಿ ಮುತ್ತೈದಿಯರು ಕಣ್ಣೀರ ಹಾಕ್ಕಾರೋ ಅವರಿಗೆ ನನ್ನ ಶಾಪ ಬಿಟ್ಟದ್ದಲ್ಲ'. ಅಂದ್ರ ಇಲ್ಲಿ ಏನು ಗುರಿ ಇಟ್ಟರತೇವು ಅಂದ್ರ ಸ್ತ್ರೀ ಶೋಷಣೆ ಅಲ್ಲಲ್ಲಿ ನಿಲ್ಲಬೇಕು. ಈ ಕಥಾ ಭಾಗವನ್ನು ಓದಿದಾಗ ಅತ್ತಿಯರು ಕೊಡುವ ಕಾಟವಾಗಲಿ, ಗಂಡಂದಿರು ಕೊಡೋ ಕಾಟವಾಗಲಿ, ಹೆಣ್ಣುಮಕ್ಕಳ ಕಣ್ಣೀರ ತೆಗದರ ನಮ್ಮ ಮನೆತನಕ್ಕ ಸುಖ ಆಗೋದಿಲ್ಲ ಅನ್ನುವ ವಿವೇಕ ಇವರಿಗೆ ಮೂಡ್ಲಿ ಅಂತ ಇಂತಹ ಭಾವನೆಗಳು ಪ್ರೇರಣೆಗಳು ಗೊತ್ತಿಲ್ಲದ ನಮ್ಮ ಮನಸ್ಸಿನಲ್ಲಿ ಬರತಿರತಾವು. ಸಾಮಾನ್ಯವಾಗಿ ಜನರ ಮನಸ್ಸಿನ ಮೇಲೆ ಪರಿಣಾಮಕಾರಿ ಆಗುವಂತಹ ವಿಷಯಗಳು ತನ್ನಿಂದ ತಾನೇ ಬರತಾವ.

ಸಂದರ್ಶಕರು : ಕಾವ್ಯವನ್ನುಳಿದು ನಿಮ್ಮ ಬರಹ ?

ಕವಿ : ಗದ್ಯದಲ್ಲಿ ಬರದೀನಿ. ಯಾತಾಳಿ ಚನ್ನಬಸಪ್ಪಜ್ಜ, ರಂಗಪ್ಪಜ್ಜ, ಕಡಕೋಳ ಅಯ್ಯಪ್ಪಜ್ಜ ಹೀಗೆ ೧೦–೧೨ ಗದ್ಯ ಕೃತಿಗಳು ಆಗ್ಯಾವು. ಅದರಲ್ಲಿ ಅದೇನೊ ದೈವ ಕರುಣೆ

ವಿಚಿತ್ರ ಸತ್ಯ ಅಂದ್ರ ಹನುಮಾನ ಕವಚ ಚಾಲೀಸ ಬರೆದಿದ್ರು; ಹನುಮಾನ ಚಾಲಿಸ ಅಂದ್ರ ನಲವತ್ತು ನುಡಿ ಆಕೃತಿ, ಅದು ಮರಾಠಿ ಶಬ್ದ. ನಾನ್ಯಾಕ ಇಡಬೇಕು. ಹನುಮಾನ ಕವಚ ಬರದೆ. ಅದು ಐವತ್ತೆರಡು ನುಡಿಯಲ್ಲಿ ಭೋಗ ಷಟ್ಪದಿಯಲ್ಲಿ ಬರದೆ. ಆಮೇಲೆ ಪ್ರಸನ್ನ ಆಂಜನೇಯ ವೃತ ಬರದೆ. ಗುಡ್ಡಾಪುರ ದಾನಮ್ಮನ ವ್ರತ ಬರದೆ, ಲಕ್ಷ್ಮಿ ವ್ರತ ಬರದೆ. ಪೌರಾಣಿಕ ಹಿನ್ನೆಲೆ ಉಳ್ಳಂಥ ಕಥೆಗಳನ್ನು ನಾನು ಬಳಸಿಕೊಂಡೆ. ಆಮೇಲೆ ಬನಶಂಕರಿ ವ್ರತ ಬರದೆ ಹಿಂಗ ಹಲವಾರು ವ್ರತ ಕಥೆಗಳನ್ನ ಸೃಷ್ಟಿ ಮಾಡಿದೆ. ಇವತ್ತ ನನ್ನ ಸಾಹಿತ್ಯ ರಚನೆಗೆ ಜನರ ಸ್ಕೋಪ ಇದೆ. ಈಗಾಗಲೇ ೧೪ ಸಾವಿರ ಬನಶಂಕರಿ ವ್ರತ ಮಾಡಿಸಿ ಹಂಚಿದೀನಿ. ಆಮೇಲೆ ನಮ್ಮ ಗುಡ್ಡಾಪುರದ ದಾನಮ್ಮನ ವ್ರತ ಈಗ ಮೂರನೇ ಎಡಿಶನ್. ಈಗಂತೂ ನಾಲ್ಕು ಸಾವಿರ ಕಾಫೀ ಹಾಕಿ ನಾಳೆ ಅವನ ಹಂಚಬೇಕು. ಆಂಜನೇಯ ವ್ರತ ಸುಮಾರು ೬,೫೦೦ ಕಾಫಿ ಫ್ರೀ ಹಂಚಿದೀನಿ. ಆಮೇಲೆ ಇವು ಎಲ್ಲವೂ ಇತ್ತಿತ್ಲಾಗ ಬನಶಂಕರಿ ವ್ರತ ೧೨,೦೦೦ ಕಾಫಿ ಫ್ರೀ ಹಂಚಿದೀನಿ ಒಟ್ಟು ವ್ರತ ಕಥೆಗಳನ್ನ ಪುಕ್ಕಟೆಯಾಗಿ ಹಂಚೀನಿ. ನಮ್ಮ ಜನರಲ್ಲಿ ಭಕ್ತಿ ಭಾವನೆ ತಂದುಕೊಡ್ಲಿ. ಅವರು ಮನೆ ಮನೆಯಲ್ಲಿ ವ್ರತ ಮಾಡ್ಲಿ, ವ್ರತ ಮಾಡುವುದರಿಂದ ದೇವರ ಕಡೆ ಮನಸ್ಸು ಒಲಿಲಿ ಅನ್ನುವಂತಹ ಭಾವನೆಗಳಿಂದ ಅಂತಹ ಕೃತಿಗಳನ್ನ ಕೂಡಾ ಮಾಡಾಕತ್ತೀನಿ ಅದರಲ್ಲಿ ಸ್ವಾರ್ಥ ಇಲ್ಲ, ಯಾರೋ ದುಡ್ಡು ಕೊಡತಾರ ಆಮೇಲೆ ಅದನ್ನ ಫ್ರೀ ಆಗಿ ಹಂಚತೇವು. ಕಾರ್ಯ ಒಳ್ಳೆಯದಕ್ಕ, ಒಳ್ಳೆಯ ಪ್ರೇರಣೆ ತನ್ನಿಂದ ತಾನೆ ಸಿಗತ್ತ.

ನೀವು ನಿಮ್ಮ ಅನುಭವಗಳನ್ನು ನಮ್ಮೊಂದಿಗೆ ಹಂಚಿಕೊಂಡು ಸಹಕರಿಸಿದಕ್ಕೆ ಅನಂತ ಧನ್ಯವಾದಗಳು.

◆◆◆

ಶ್ರೀ ವಾಸುದೇವ ಹೂಲಿ

ಸಂದರ್ಶನ ದಿ : ೧೬-೧೨-೨೦೧೦

ಸಂದರ್ಶಕರು : ನಿಮ್ಮ ವೈಯಕ್ತಿಕ ವಿಚಾರಗಳ ಮಾಹಿತಿ ಹೇಳಿರಿ.

ಕವಿ : ನಾನು ಗದಗ ನಿವಾಸಿಯಾಗಿದ್ದು ಮೂಲತಃ ಕಣವಿಯವರು. ನಾನು ವೈದಿಕ ಪರಂಪರೆಯ ಮನೆತನದಲ್ಲಿ ಕ್ರಿ.ಶ. ೧೮೬೩ನೇ ವಿಕ್ರಮನಾಮ ಸಂವತ್ಸರದಲ್ಲಿ 'ಹುಚ್ಚರಾವ' ಹಾಗೂ 'ಪದ್ಮಾವತಿ' ದಂಪತಿಗಳಿಗೆ ಮಗನಾಗಿ ಜನಿಸಿದೆ. ನನ್ನ ತಂದೆಯವರಿಗೆ ಒಟ್ಟು ೫ ಜನ ಮಕ್ಕಳು ಅವರಲ್ಲಿ ನಾನು ಒಬ್ಬನೇ ಗಂಡು ಮಗ. ಉಳಿದವರು ೪ ಜನ ಸಹೋದರಿಯರು. ನಮ್ಮ ತಂದೆ ಶಾಲಾ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು.

ನನ್ನ ಪೂರ್ವ ಪ್ರಾಥಮಿಕ, ಪ್ರಾಥಮಿಕ ಹಾಗೂ ೭ನೇ ಇಯತ್ತೆಯವರೆಗೆ ಕಣವಿಯಲ್ಲಿಯೇ ಶಿಕ್ಷಣ ಮುಗಿಸಿದೆ. ೧೯೫೬ರಲ್ಲಿ ಆಗಿನ ಮುಲ್ಕಿ ಪರೀಕ್ಷೆಯನ್ನು ಪಾಸು ಮಾಡಿದೆ. ಈ ಸಮಯದಲ್ಲಿ ಪಡೆದ ಮೌಲಿಕವಾದ ಶಿಕ್ಷಣದಿಂದಾಗಿ ನಮ್ಮ ಬಾಳಬಂಡಿ ಸಾಗಲು ಆಧಾರವಾಗಿದೆ. ನಾನು ಕಲಿಯುವ ಸಂದರ್ಭದಲ್ಲಿ ಓದಿದ ಹರಿಶ್ಚಂದ್ರ ಕಾವ್ಯದಲ್ಲಿನ 'ಮಾಯದಬಲೆಯ ಕಾಟ' ಭಾಗದಿಂದ ಅತ್ಯಂತ ಪ್ರಭಾವಿತನಾದೆ. ಕುಳಿತಾಗ, ನಿಂತಾಗ, ಗೆಳೆಯರೊಂದಿಗೆ ಒಡನಾಡುವಾಗ ಸದಾ ಆ ಕಾವ್ಯದ ಷಟ್ಪದಿ ಪದ್ಯಗಳನ್ನು ಹೇಳುವದು, ಮನನ ಮಾಡುವದು. ಇದರಿಂದಾಗಿ ಷಟ್ಪದಿ ಛಂದಸ್ಸಿನ ನಿಯಮಗಳು ನನಗ ಕರಗತವಾದವು. ಕಣವಿಯಲ್ಲಿ ಕಲಿಯುವ ವೇಳೆಯಲ್ಲಿ ಲಕ್ಕುಂಡಿಯ ಕಣವಿಕರ ಮಾಸ್ತರರು ನನಗ ಛಂದಸ್ಸಿನ ನಿಯಮಗಳ ಮಾಹಿತಿಯನ್ನು ಮಾಡಿಕೊಟ್ಟರು. ಹೀಗೆ ಸದಾ ಸಾಹಿತ್ಯ, ಛಂದಸ್ಸಿನ ಮನನವೇ ನನಗ ಸಾಹಿತ್ಯದ ಗೀಳನ್ನ ಹಿಡಿಸಿತು. ನನ್ನ ತಂದೆಯವರ ಸಂಬಳ ಸಂಸಾರ ನಿರ್ವಹಣೆಗೆ ಸಾಲದ್ದರಿಂದ ನನ್ನ ಓದನ್ನು ಮುಂದುವರಿಸಲು ಆಗಲಿಲ್ಲ. ಕಾರಣ ೧೯೫೮ರಲ್ಲಿ ಕಂಡಕ್ಟರ್ ಆಗಿ ಕೆಲಸ ಮಾಡಿದೆ. ಆದರೆ ದೈಹಿಕ ತೊಂದರೆಯಿಂದಾಗಿ ಮೂರು ವರ್ಷ ಸೇವೆ ಸಲ್ಲಿಸಿ ಆ ಕೆಲಸವನ್ನು ಬಿಟ್ಟೆ.

೧೯೬೧ರಲ್ಲಿ ಶ್ರೀಮತಿ ಗೋದಾವರಿ ಅವರೊಂದಿಗೆ ವಿವಾಹವಾಗಿ ಸಂಸಾರದ ಹರಿಗೋಲನ್ನು ನಡೆಸಿದೆ. ನನಗ ಅಶ್ವತ್ಥ, ಅನಂತ ಹಾಗೂ ಶ್ರೀಕಾಂತ ಎಂಬ ಮೂರು ಜನ ಗಂಡು ಮಕ್ಕಳು. ಬಡತನದಲ್ಲಿಯೇ ಅಲ್ಲಿ ಇಲ್ಲಿ ಅಲೆದು ಕಷ್ಟಪಟ್ಟು ಮಕ್ಕಳಿಗೆ ಶಿಕ್ಷಣ ಕೊಡಿಸಿದೆ. ಇಂದು ಒಬ್ಬನು ಬೆಂಗಳೂರಿನ ಇಂಜನೀಯರಿಂಗ್ ಕಾಲೇಜಿನಲ್ಲಿ ವಾಚಮನ್‌ನಾಗಿ, ಇನ್ನೊಬ್ಬಾತ ಮಾರಿಮುತ್ತು ದೇವಸ್ಥಾನದಲ್ಲಿ ಅರ್ಚಕನಾಗಿ, ಮತ್ತೊಬ್ಬ ಮಗ ಸ್ಥಳಿಕವಾಗಿ ಸಂಗೀತ ಶಿಕ್ಷಣ ನೀಡುತ್ತಿರುವನು.

ಸಂದರ್ಶಕರು : ನಿಮ್ಮ ಶ್ರೀಮತಿಯವರನ್ನ ಕುರಿತು ಹೇಳಿರಿ ?

ಕವಿ : ನನ್ನ ಶ್ರೀಮತಿ ಹೆಸರು ಗೋದಾವರಿ. ಅವರು ಅಷ್ಟೇನೂ ವಿದ್ಯಾಭ್ಯಾಸ ಕಲಿತಿರುವರೇನಲ್ಲ. ೧೫ ವರ್ಷ ಅಂಗನವಾಡಿಯಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ್ದಾಳೆ. ಆದ್ರು ಕಾವ್ಯದ ಈ ದೃಷ್ಟಿಯೊಳಗ ಸಾಹಿತ್ಯ ರಚನೆಗೆ ಯಾವುದೇ ತರಹದ ಅಡ್ಡಿ ಆತಂಕ ನನಗೆ ಮಾಡಿಲ್ಲ. ಕೆಲವು ಪ್ರೋತ್ಸಾಹ ಕೊಟ್ಲು. ನನಗ ಬಹಳ ಹೆಮ್ಮೆ ಅನಿಸಿತು.

ಸಂದರ್ಶಕರು : ಈ ಕಾವ್ಯ ರಚನೆಯನ್ನು ನೀವು ಯಾವಾಗಿಂದ ಪ್ರಾರಂಭ ಮಾಡಿದ್ದೀರಿ ?

ಕವಿ : ನಾನು ಕಾವ್ಯ ರಚನೆ ಮಾಡಿದ್ದು ೧೯೫೦ರಿಂದ. ಆದ್ರ ಪುರಾಣ ಸಾಹಿತ್ಯ ಮಾಡಿದ್ದಿಲ್ಲ. ನಾನು ಪುರಾಣ ಸಾಹಿತ್ಯವನ್ನ ೧೯೭೭ರಲ್ಲಿ ರಚನೆ ಮಾಡಕೊಂಡೆ. ಮೊಟ್ಟ ಮೊದಲು 'ರಾಮಲಿಂಗ ಮಹಾಸ್ವಾಮಿಗಳ ಪುರಾಣ' ಬರದೆ. ಅದಕ್ಕಿಂತ ಹಿನ್ನೆಲೆಯಾಗಿ ನಾನು ಕಾವ್ಯಗಳನ್ನು ಬರಿತಾಯಿದ್ದೆ. ಆದರ ಛಂದೋಬದ್ಧವಾಗಿ ಬರಿತಿದ್ದಿಲ್ಲ. ನನಗೆ ಏನ ತಿಳಿತಿತ್ತು ಆ ಕಾವ್ಯವನ್ನು ನಾನು ಗೀಚಿಬಿಡತ್ತಿದ್ದೆ. ಯಾವುದೋ ಒಂದು ತರಹದ ನೋವಾದಾಗ ಕಾವ್ಯ ಬರಿತಿದ್ದೆ. ಆದರ ಛಂದೋಬದ್ಧವಾಗಿ ಬರಿಬೇಕನ್ನುವುದು ತಲೆಗೆ ಇದ್ದಿದ್ದಿಲ್ಲ. ೧೯೭೭ರಲ್ಲಿ ಛಂದೋಬದ್ಧವಾಗಿ ನಿಯಮ ಬದ್ಧವಾಗಿ ಷಟ್ಪದಿಗನುಗುಣವಾಗಿ ನಾನು ಕಾವ್ಯರಚನೆ ಮಾಡಿದೆ ಹಾಗೂ ಸಾಹಿತ್ಯದ ಪ್ರವಚನವನ್ನೂ ನಾನು ೧೯೭೭ನೇ ಇಸ್ವಿಯಿಂದ ಮಾಡಕೊಂತ ಬಂದೀನ್ರಿ.

ಸಂದರ್ಶಕರು : ಕಾವ್ಯ ರಚನೆಯ ಪ್ರೇರಣೆ – (ಸ್ವಯಂ ಅನ್ಯ) ಗಳಾವುವು ?

ಕವಿ : ನನಗ ಪ್ರೇರಣೆ ಮುಖ್ಯವಾಗಿ ಎರಡಾದವು. ೧೯೬೦ರಲ್ಲಿ ನಾನು ಮಂತ್ರಾಲಯಕ್ಕೆ ಹೋಗಿದ್ದೆ, ಮಂತ್ರಾಲಯಕ್ಕೆ ಹೋದಾಗ ಅಲ್ಲಿ ೪೮ ದಿವಸ ಪ್ರಭುಗಳಿಗೆ ಸೇವಾ ಮಾಡಿದೆ. ಆವಾಗ ನನಗ ಅಲ್ಲೆ ಸಪ್ನ ಆತು. ಆದ್ರ ಆ ಸ್ವಪ್ನದ ಅರ್ಥ ಆಗಲಿಲ್ಲ. ಮೊದಲನೆಯ ಪ್ರೇರಣೆ ಮಂತ್ರಾಲಯ ಪ್ರಭುಗಳು, ಎರಡನೆಯ ಪ್ರೇರಣೆ ಮಂಟೂರಿನ ಶ್ರೀ ರಾಮಲಿಂಗ ಸ್ವಾಮಿಗಳದ್ದು. ನಾನು ಮಂಟೂರಿಗೆ ಹೋದಾಗ ರಾಮಲಿಂಗಸ್ವಾಮಿಗಳ ಪುರಾಣ ಬರೆಯುವದಕ್ಕ ಒಂದು ತಿಂಗಳ ಅವಧಿ ಕೊಟ್ಟಿದ್ರು. ಆವಾಗ ನನಗ ಬರದ್ರಾತು ಅದು ಏನ ಮಹಾ ಎಂಬ ಅಹಂ ಇತ್ತು. ಒಂದು ತಿಂಗಳ ಅವಧಿ ಮುಗದ್ರೂ. ನನಗ ಅದರ ಕಡೆ ಲಕ್ಷ ಹೋಗಿದ್ದಿಲ್ಲ. ಸ್ವಾಮಿಗಳ ಕಡೆ ಹೋದಾಗ ಪುರಾಣ ಬರದೆನು ಅಂತ ಕೇಳಿದರು, ನೀವು ಶಕ್ತಿ ಕೊಟ್ರ ನಾನು ಬರೀತೀನಂತ ಹೇಳಿದೆ. ಆವಾಗ ಸ್ವಾಮಿಗಳು ಈಗ ನಿನ್ನಲ್ಲಿಯ ಅಹಂ ಭಾವ ಅಳದು ವಿನಯ ಬಂದೈತಿ ಅಂತ ತೀರ್ಥ ಪ್ರಸಾದ ಕೊಟ್ರು. ಆವಾಗ ನಾನು ಪುರಾಣ ಬರೆದೆ. ಹೀಗೆ ಮಂತ್ರಾಲಯದ ಗುರುಗಳು ಅಪ್ರತ್ಯಕ್ಷ ಪ್ರೇರಣೆ, ಮಂಟೂರಿನ ರಾಮಲಿಂಗ ಸ್ವಾಮಿಗಳು ಪ್ರತ್ಯಕ್ಷ ಪ್ರೇರಣೆ ಹಾಗೂ ಹರಿಶ್ಚಂದ್ರ ಕಾವ್ಯದ 'ಮಾಯದ ಬಲೆಯ ಕಾಟ' ಭಾಗ ಮತ್ತು ಕುಮಾರವ್ಯಾಸ ಭಾರತದಲ್ಲಿನ 'ಶ್ರೀಕೃಷ್ಣ ಸಂಧಾನ' ಭಾಗದ ಪ್ರಭಾವಗಳು ಸ್ವ–ಪ್ರೇರಣೆ ಹೀಗೆ ಮೂರು ಪ್ರೇರಣೆಗಳು ನನ್ನ ಕಾವ್ಯ ರಚನೆಗೆ ಕಾರಣವಾಗಿವೆ.

ಸಂದರ್ಶಕರು : ನಿಮ್ಮ ಗುರುಗಳು ಯಾರು ?

ಕವಿ : ನಮ್ಮ ಪರಂಪರೆಯ ಪೂರ್ವ ಪೀಠಸ್ಥ ಗುರುಗಳು ಸತ್ಯ ಪ್ರಮೋದ ತೀರ್ಥ ಸ್ವಾಮಿಗಳು. ನನ್ನ ಕಾಪಾಡಿದಂತವರು ನಮ್ಮ ರಾಮಲಿಂಗ ಸ್ವಾಮಿಗಳು. ನಾನು ವೈಷ್ಣವ, ಅವ್ರು ವೀರಶೈವರು. ಅವರೊಂದಿಗೆ ಸಂಪರ್ಕ ಅಷ್ಟೇ. ಬೇರೆ ಏನಿಲ್ಲ. ಆದ್ರ ಗುರು ಗುರುನ. ಆ ಗುರು ನನಗ ತೀರ್ಥ, ಪ್ರಸಾದ ಕೊಟ್ರು. ಯಾವಾಗ ತೀರ್ಥ ಪ್ರಸಾದ ತೆಗೆದುಕೊಂಡೆ ಕಾವ್ಯ ರಚನಾ ಶಕ್ತಿ ಬಂದುಬಿಡ್ತು.

ಸಂದರ್ಶಕರು : ಈ ಕಾವ್ಯ ರಚನೆಯ ಉದ್ದೇಶಗಳಾವುವು ?

ಕವಿ : ನನಗೆ ಯಾವುದೇ ಶ್ರೀಮಂತ ಆಗಬೇಕೆನ್ನುವುದು ಉದ್ದೇಶ ಇದ್ದಿದ್ದಿಲ್ಲ. ಇದರಿಂದ ನನಗ ಧನಗಳಿಸುವ ವಿಚಾರ ಇದ್ದಿದ್ದಿಲ್ಲ. ಕಾವ್ಯಂ ಯಶಸ್ಸೇ ಅರ್ಥಕೃತೆ ವ್ಯವಹಾರವಿದೆ ಎಂಬಂತೆ ನನಗ ಕಾವ್ಯದಿಂದ ಯಶಸ್ಸು ಬರಲೇಬೇಕೆಂಬ ಆಸೆ ನನಗಿಲ್ಲ. ನನ್ನ ಮನಸ್ಸಿನ ಸಂತೋಷ, ಜೊತೆಗೆ ಆ ಏಕಾಂತ ಭಾವ ಬರಬೇಕೆಂಬ ದೃಷ್ಟಿಯಿಂದ ಕಾವ್ಯ ಲೋಕಕ್ಕ ಇಳಿದು ಬರಿತಾ ಇದ್ದೆ. ಆ ಕಾವ್ಯದಲ್ಲಿ ಎಷ್ಟರ ಮಟ್ಟಿಗೆ ಶಕ್ತಿ ಐತೋ ಗೊತ್ತಿದ್ದಿಲ್ಲ. ಆದ್ರ ಕಾವ್ಯ ಬರಿಯುವಾಗ ನನ್ನ ಮನಸ್ಸಿನ ನೆಮ್ಮದಿ ಸಿಕ್ತಿತ್ತು. ಶಾಂತಿ ಸಿಕ್ತಿತ್ತು. ನಾನು ಓದುವುದರಿಂದ ಬಡತನವನ್ನ ಮರೆಯುವಂತಹ ಸಾಮರ್ಥ್ಯ ಈ ಕಾವ್ಯ ರಚನೆಯಿಂದ ಸಾಧ್ಯ ಅನ್ನೋದು ನನ್ನ ಉದ್ದೇಶ.

ಸಂದರ್ಶಕರು : ಕಾವ್ಯದಲ್ಲಿ ಛಂದಸ್ಸನ್ನು ಯಾವ ರೀತಿ ವಿವೇಚಿಸಿದಿರಿ ? ರಚನೆಯಲ್ಲಿ ತೊಂದರೆಯೆನಿಸಿದೆಯೇ ?

ಕವಿ : ನನಗೇನೂ ತೊಂದರೆ ಬರಲಿಲ್ಲ. ಯಾಕಂದರ ಕಾವ್ಯದೊಳಗ ಭಾಮಿನಿ ಓದುವದು ಸರಳವಾಗಿರವಂತಹದು. ಯಾವುದೇ ತರಹದ ವ್ಯಕ್ತಿ ಓದಬಹುದು. ಗಮಕ ಕಲೆಯಲ್ಲಾದ್ರು ಓದಬಹುದು ಆದ್ರ ಇನ್ನಿತರ ಷಟ್ಪದಿಗಳು ಈ ರೀತಿ ರಸಭರಿತವಾಗಿ ಓದ್ಲಿಕ್ಕೆ ತೊಂದರೆ ಆಗ್ತದ. ಯಾಕಂದರೆ ಅಲ್ಲಿ ಬರುವ ಸಂಧಿಗಳಾಗಲಿ, ಸಮಾಸಗಳಾಗಲಿ, ಅಲಂಕಾರ ಆಗಲಿ, ಆ ಛಂದಸ್ಸಾಗಲಿ ಅರ್ಥ ಗರ್ಭಿತವಾಗಿ ಓದಲಿಕ್ಕೆ ತೊಂದರೆ ಆಗ್ತದ. ಭಾಮಿನಿ ಷಟ್ಪದಿ ಓದಲಿಕ್ಕೆ ಅತ್ಯಂತ ಸರಳ, ಸುಲಭ. ಎಲ್ಲರಿಗೂ ಮನಮುಟ್ಟುವಂತಹದ್ದು. ಆದ್ದರಿಂದ ಭಾಮಿನಿ ಷಟ್ಪದಿ ಯೋಗ್ಯವಾದದ್ದು ಅಂತ ಭಾಮಿನಿ ಷಟ್ಪದಿಯೊಳಗ ನಾನು ಕಾವ್ಯ ರಚನೆ ಮಾಡೇನಿ.

ಸಂದರ್ಶಕರು : ಕಾವ್ಯ ರಚನೆಯ ಪ್ರಭಾವಗಳು ಯಾವುವು ?

ಕವಿ : ನನಗ ಹೆಚ್ಚಾಗಿ ಕುಮಾರವ್ಯಾಸನ ಮಹಾಭಾರತದ ಪ್ರಭಾವ ಜಾಸ್ತಿ. ಆಗೇದ ಚಾಮರಸ ಬರೆದಂತ 'ಪ್ರಭುಲಿಂಗ ಲೀಲೆ'ಯ 'ಮಾಯೆ ಗೆದ್ದ ಗತಿ' ಭಾಗವು ಗಾಢ ಪ್ರಭಾವ

ಬೀರಿರುವಂತದ್ದು. ಹಾಗಾದ್ರೆ ನಾನು ಒಂದು ಸಲ ಈ ಕಾವ್ಯ ರಚನೆ ಮಾಡಬಹುದು ಅನ್ನುವ ಉದ್ದೇಶದಿಂದ ಅಭ್ಯಸಿಸಿ ಅವರ ಪ್ರಭಾವದಿಂದ ನಾನು ಕಾವ್ಯ ರಚನೆ ಮಾಡುವುದಕ್ಕೆ ಅನುಭವ ಬಂತು.

ಸಂದರ್ಶಕರು : ಕಾವ್ಯ ರಚನೆ ಮತ್ತು ದೈವೀ ಅನುಭೂತಿಯ ನಡುವಿನ ಸಂಬಂಧ ಕುರಿತು ವಿಚಾರವೇನು ?

ಕವಿ : ಹೆಚ್ಚಾಗಿ ಸಾಹಿತ್ಯವಾಗಲಿ, ಕಾವ್ಯವಾಗಲಿ, ಬರಿಯುವುದು ಅಂತಂದ್ರ ದೇವರ ಅನುಗ್ರಹ ಅವಶ್ಯವಾಗಿ ಬೇಕು. ಆನಂತರ ಯಾವುದೇ ಕಾವ್ಯವನ್ನು, ಪುರಾಣವನ್ನು ಅಭ್ಯಾಸ ಮಾಡಬೇಕಾದರ ಆ ಪುರಾಣ ಕರ್ತೃ ಮತ್ತು ಕೃತಿಗಳ ಅನುಗ್ರಹ ನಮ್ಮೇಲೆ ಆಗಿರತದ ಅಂತ ತಿಳಕೋಬೇಕು. ಹಾಗೆ ನಾನು ಕುಮಾರವ್ಯಾಸ ಮತ್ತು ಜೈಮಿನಿ ಭಾರತ ಬರೆದ ಲಕ್ಷ್ಮೀಶರಂತಹ ಮಹಾ ಕವಿಗಳು ಮಾಡಿಕೊಂಡ ಬಂದತಹ ಕಾವ್ಯ ಪರಂಪರೆ ಮತ್ತು ಅವರ ಕೃತಿಗಳು ನನಮ್ಯಾಲ ಪ್ರಭಾವ ಮ್ಯಾಡಾವಂತ ನನಗ ಅನಸ್ತದ. ಅವರ ಕೃತಿಯಿಂದ ಅವರ ಪ್ರಭಾವದಿಂದ ನಾನು ಕಾವ್ಯ ರಚನೆಯನ್ನು ಮಾಡಿಬಿಟ್ಟೆ.

ಸಂದರ್ಶಕರು : ಕಾವ್ಯ ಕಲೆಯ ಸಾಧನೆ ಕುರಿತು ತಿಳಿಸಿರಿ ?

ಕವಿ : ೧೯೫೦ ರಿಂದ ನನ್ನಲ್ಲಿ ಕಾವ್ಯದ ಕಲೆ ಇತ್ತು. ಛಂದೋಬದ್ಧವಾಗಿ ಅದನ್ನ ಮಾಡುವ ವಿಚಾರ ಮಾಡತಿರಲಿಲ್ಲ. ಛಂದೋಬದ್ಧವಾಗಿ ನನಗ ಎಷ್ಟು ಸಾಲು ಇಡಬೇಕು ಅನ್ನೋದು ಗೊತ್ತಾಗತಿರಲಿಲ್ಲ. ನನ್ನ ಅನಿಸಿಕೆಗಳು ಏನು ಅವ ಅವನ್ನು ಬರದ ಬಿಡತಿದ್ದೆ. ಮೊದಲ ಅವು ನಾಲ್ಕು ಆಗಬಹುದು. ಕೆಲವು ಮೂರು ಸಾಲ ಆಗಬಹುದು. ಕೆಲವು ಎರಡು ಸಾಲು ಆಗಬಹುದು. ಹೀಗೆ ರಚನೆ ಮಾಡಿಕೊಳ್ಳುತಿದ್ದೆ. ಈ ಷಟ್ಪದಿ ಓದಿಕೊಂಡ ನಂತರ ನನಗ ಈ ಆರು ಸಾಲಿನ ಪದ್ಯ ಹೇಗೆ ರಚನೆ ಮಾಡಬೇಕಂತಾದ್ದು ನನಗ ತಿಳೀತು. ಕುಮಾರವ್ಯಾಸನ ಮಹಾಭಾರತದ ಜೊತೆಗೆ ನನಗ ವ್ಯಾಕರಣದ ಅಭ್ಯಾಸವಿತ್ತು. ಈ ಛಂದಸ್ಸಿನ ನಿಯಮಗಳು ಛಂದಸ್ಸಿನಲ್ಲಿ ಯಾವ ಪ್ರಾಸ ತೆಗಿಬೇಕು ಯಾವ ಪ್ರಾಸ ಹಾಕಬೇಕು ಅಂತಹದ್ದನ್ನ ನಾನು ಅಭ್ಯಾಸ ಮಾಡಕೊಂಡು ಮತ್ತು ಅದಕ್ಕ ಪ್ರಗತಿ ಬೆಳಸಕೊಂತ ಬಂದೆ.

ಸಂದರ್ಶಕರು : ಈ ಛಂದಸ್ಸಿನ ನಿಯಮಗಳನ್ನು ನಿಮಗ ಕಲಿಸಿಕೊಟ್ಟವರು ಯಾರು ?

ಕವಿ : ನಮಗ ಏಳನೆತ್ತಕ್ಕ ನಮಗ ಕಲಿಸಿಕೊಟ್ಟದ್ರು. ಸ್ವಲ್ಪ ಮಟ್ಟಿಗೆ ಕಲಿಸಿದ್ರು. ಆದ್ರ ನಮ್ಮ ದೊಡ್ಡಪ್ಪನವರಾದ ಅಶ್ವತ್ ಅವರು ಹಳೆಯ ಕಾಲದಲ್ಲಿ ಮಾಟ್ರಿಕ್ ಪಾಸಾಗಿದ್ದರು. ಅವರಿಗೆ ಸಂಸ್ಕೃತ ಕನ್ನಡ ಮತ್ತು ಇಂಗ್ಲೀಷ್ ಕೂಡ ಬರುತ್ತಿತ್ತು. ಅವರು ನನಗ ಛಂದಸ್ಸಿನ ಎಲ್ಲ ನಿಯಮಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನ ಮಾಡಿಕೊಟ್ರು.

ಸಂದರ್ಶಕರು : ಕಾವ್ಯದಲ್ಲಿ ಸಾಮಾಜಿಕ ಚಿತ್ರಣವನ್ನು ನೀವು ಮಾಡಿರುವಿರಾ ?

ಕವಿ : ಸಾಮಾಜಿಕ ಚಿತ್ರಣವನ್ನ ಕಾವ್ಯದಲ್ಲಿ ಮಾಡೇನಿ. ಕೆಲವು ಕಡೆ ಕೋಮುವಾದ ಬೆಳೆದುಬಿಟ್ಟದ. ನಮ್ಮದೇ ಶ್ರೇಷ್ಠ ಅನ್ನೋದು ಭಾವ ಬೆಳೆದುಬಿಟ್ಟದ. ಇವೆಲ್ಲ ನಮ್ಮಿಂದ ದೂರ ಹೋಗಬೇಕು. ಭಗವಂತನ ಧ್ಯಾನಕ್ಕೆ ಎಲ್ಲರಿಗೂ ಅಧಿಕಾರ ಬರಬೇಕು. ಅಂದ್ರ ನಮ್ಮ ಸ್ತ್ರೀ ಮತ್ತು ಪುರುಷರಿಗೆ ಸಮಾನ ಪ್ರಾಧ್ಯಾನ್ಯತೆ ಬರಬೇಕು. ಪುರುಷರ ಪ್ರಾಧಾನ್ಯತೆಯನ್ನ ಸ್ತ್ರೀಯರಿಗೂ ಕೊಡಬೇಕು. ಭಗವಂತನ ಧ್ಯಾನಕ್ಕ ಜಾತಿ ಅವಶ್ಯಕತೆ ಇಲ್ಲಾ. ನಂದೇ ಮೇಲು ಅನ್ನುವಂತಹದಿಲ್ಲ. ನನ್ನ ಕಾವ್ಯದೊಳಗ ಭಕ್ತಿ ಪಂಥವನ್ನೇ ಹೆಚ್ಚಾಗಿ ಇಟಕೊಂಡು ಆ ಭಕ್ತಿ ಎಲ್ಲರಿಗೂ ಅವಶ್ಯವಾಗಿರಬೇಕು ಅನ್ನೋದು ನನ್ನ ಕಾವ್ಯದ ಮುಖ್ಯವಾದ ಉದ್ದೇಶ. ಸಮಾಜದಲ್ಲಿ ಬೇರುಬಿಟ್ಟಂತಹ ಅಂಧಶ್ರದ್ಧೆ, ಜಾತೀಯತೆ, ಮೇಲು–ಕೀಳು, ಶ್ರೇಷ್ಠ–ಕನಿಷ್ಠ, ಜಿಗುಪ್ಸೆ ಅಂತಹ ಅವಗುಣಗಳನ್ನ ಹೋಗಲಾಡಿಸಿ ಮಾನವ ಕುಲದ ಕಲ್ಯಾಣ, ಮಾನವಧರ್ಮ ಹಾಗೂ ಮಾನವೀಯ ಮೌಲ್ಯಗಳನ್ನು ಬೋಧಿಸುವ ಪ್ರಯತ್ನವನ್ನು ಪ್ರಾಮಾಣಿಕವಾಗಿ ನಾನು ಕಾವ್ಯದಲ್ಲಿ ಮಾಡಿದ್ದೇನೆ. ಸಚ್ಚಿದಾನಂದ ಪುರಾಣವೇ ಇದಕ್ಕೊಂದು ದೃಷ್ಟಾಂತವಾಗಿದೆ.

ಸಂದರ್ಶಕರು : ಕಾವ್ಯರಚನೆ ಮಾಡುವುದರಿಂದ ನಿಮಗೆ ವ್ಯಯಕ್ತಿಕವಾಗಿ ಹಣ, ಕೀರ್ತಿ, ಆರಾಧನೆ ಎಷ್ಟರ ಮಟ್ಟಿಗೆ ಸಾಧ್ಯ ಆಗಿದೆ ?

ಕವಿ : ನಮಗೆ ಇನ್ನೂ ಯಾವುದೇ ರೀತಿ ಸಾಧ್ಯ ಆಗಿಲ್ಲರಿ. ಸರಕಾರದಿಂದ ಇಲ್ಲಿಯವರೆಗೆ ಯಾವುದೇ ರೀತಿ ಸಹಾಯ ಸಿಕ್ಕಿಲ್ಲ . ಅದಕ್ಕಾಗಿ ಪ್ರಯತ್ನ ಮಾಡಿದ್ರು ಸಾಧ್ಯ ಆಗಿಲ್ಲ. ನಾನು ಹಣಕ್ಕಾಗಿ, ಕೀರ್ತಿಗಾಗಿ, ಕಾವ್ಯ ಬರದವನಲ್ಲ. ಅದೊಂದು 'ಮನಸ್ಸಿನ ಆರಾಧನೆ, ತಪಸ್ಸು', ಮನಸ್ಸಿನ ಏಕಾಗ್ರತೆಗೆ ಪೂರಕ ಮನಸ್ಸಿಗೆ ಮುದ ನೀಡುತ್ತದೆ ಎಂದು ಸಂಗೀತ ಪ್ರೇಮಿಯಾದ ನಾನು, ಕಾವ್ಯವನ್ನ ರಚನೆ ಮಾಡಿದೆ. ಅದೊಂದು ಸರಸ್ವತಿಯ ಆರಾಧನೆ ತಪಸ್ಸು. ಸಹೃದಯರು ನನ್ನ ಕಾವ್ಯಗಳನ್ನ ಮೆಚ್ಚಿ ಕೊಂಡಿರುವುದೇ ನನಗೆ ದೊರೆತ ಹಣ, ಕೀರ್ತಿ ಎಲ್ಲವೂ ಆಗಿದೆ.

ಸಂದರ್ಶಕರು : ಆಧುನಿಕ ಜೀವನದಲ್ಲಿ ಈ ರೀತಿ ಕಾವ್ಯ ರಚನೆಯ ಅಗತ್ಯ ಮತ್ತು ಪರಿಣಾಮವೇನು ?

ಕವಿ : ಸಾಮಾನ್ಯವಾಗಿ ಮನುಷ್ಯ ಗದ್ಯ ಸಾಹಿತ್ಯ ಓದಿದರ ಬುದ್ದಿ ಬೆಳವಣಿಗೆ ಅಷ್ಟೊಂದು ಆಗೋದಿಲ್ಲ. ಅನ್ನೋದು ನನ್ನ ವೈಯಕ್ತಿಕ ವಿಚಾರ. ಯಾಕಂದ್ರ ಗದ್ಯ ಓದುಕೊಂತ ಹೋಗಿಬಿಟ್ಟರ ಅದರಾಗ ಏನು ರಸಗಳು ಸಿಗೋದಿಲ್ಲ. ಈ ಕಾವ್ಯದಲ್ಲಿ ಬರದ್ರ ಬುದ್ಧಿವಂತರಿಗೆ, ಜನರಿಗೆ ಬುದ್ಧಿ ಪ್ರಚೋದನೆ ಆಗತ್ತ, ಬೆಳಕಿಗೆ ಬರತಾರ. ಷಟ್ಪದಿಯ ಕಾವ್ಯ ಪರಂಪರೆಯೆನ್ನುವದು ಉಳಿಯಬೇಕು. ವ್ಯಕ್ತಿಯ ಸಾಮಾಜಿಕ ಬದುಕಿನ ಮೇಲೆ ಬೆಳಕನ್ನು ಚೆಲ್ಲಬೇಕು ಎಂಬುದು ನನ್ನ ವಿಚಾರ. ಗದ್ಯದಲ್ಲಿ ಬರೆದರೆ ನೆನಪಿಡುವುದು ಕಷ್ಟಸಾಧ್ಯ. ಇದರಿಂದ ಬುದ್ದಿ ವರ್ಧಿಸದು. ಪದ್ಯದಲ್ಲಿ ಬರೆದರೆ ಓದಲು ನೆನಪಿಡಲು ಸಾಧ್ಯ. ಒಂದು ರೀತಿಯಲ್ಲಿ ಇದು ಬೌದ್ಧಿಕ

ಕಸರತ್ತೂ ಹೌದು. ವಿಚಾರ ಪ್ರಚೋದಕ, ಚಿಂತನ-ಮಂಥನಗಳಿಗೆ ಪೂರಕ. ಕಾರಣ ಇಂತಹ ಕಾವ್ಯರಚನೆ ಸಾಹಿತ್ಯ ಉಳಿದು ಪರಂಪರೆ ಮುಂದುವರಿಯಬೇಕಾದರೆ ಕಾವ್ಯರಚನೆ ಅಗತ್ಯವಾಗಿದೆ ಅನ್ನೋದು ನನ್ನ ಅನಿಸಿಕೆ. ಅಲ್ಲದೇ ಈ ಆಧುನಿಕ ಜೀವನದಲ್ಲಿ ಜನರಲ್ಲಿ ಧರ್ಮ, ಭಕ್ತಿ, ಶರಣರ ಚರಿತ್ರೆ, ಇತಿಹಾಸ, ಪುರಾಣಗಳು ಮಾಯವಾಗಿ, ವೈಜ್ಞಾನಿಕದತ್ತ ಹೊರಳಿ ತನ್ನಿರವನ್ನು ಕಳೆದುಕೊಳ್ಳುತ್ತಿರುವ ದುಃಸ್ಥಿತಿಯನ್ನು ಕಂಡು, ಕಾವ್ಯಗಳ ಮುಖಾಂತರ ಅವುಗಳನ್ನು ತಿಳಿಸಲು ಸಾಹಿತ್ಯ ಅವಶ್ಯ, ಎಂದು ಪರಿಗಣಿಸಿದ ನಾನು ಪೌರಾಣಿಕವಾಗಿ, ಷಟ್ಪದಿ ಛಂದಸ್ಸಿಗೆ ಅನುಗುಣವಾಗಿ ಕಾವ್ಯರಚನೆ ಮಾಡಿರುವೆ. ಶರಣರ-ಸಂತರ ಜೀವನದ ನಡೆ-ನುಡಿ, ಭಕ್ತಿಯ ಸಾಧನೆ, ಆಧ್ಯಾತ್ಮಿಕ ಒಲವು ಸಮಾಜಕ್ಕೆ ಮಾದರಿಯಾಗುತ್ತದೆಯೆನ್ನುವದು ನನ್ನ ಹಂಬಲ.

ಸಂದರ್ಶಕರು : ಕಾವ್ಯ ವಸ್ತು ವಿವೇಚನೆಯ ಪ್ರಧಾನ ಅಂಶ ಯಾವುದು ?

ಕವಿ : ನನ್ನ ಕಾವ್ಯಗಳಲ್ಲಿ ವಸ್ತು ವಿವೇಚನೆಯ ಸಂದರ್ಭದಲ್ಲಿ ಮುಖ್ಯವಾಗಿ ನಾನು ಗಮನ ಹರಿಸಿದ್ದು ಭಕ್ತಿಯ ಕಡೆಗೆ. ಅದರ ಜೊತೆಯಲ್ಲಿ ಶೃಂಗಾರ, ಪರಿಸರ ರಕ್ಷಣೆ ಹಾಗೂ ದಲಿತರ ಬಗೆಗೆ ದಯೆಯನ್ನು ತೋರಿಸುವ ಅಂಶಕ್ಕೆ ಪ್ರಾಧಾನ್ಯತೆ ನೀಡಿರುವೆ. ಬಸವಣ್ಣನವರು ಹೇಳುವ 'ದಯೆವಿಲ್ಲದ ಧರ್ಮ ಆವುದಯ್ಯ' ಎನ್ನುವ ಗುಣ ನನ್ನ ಕಾವ್ಯದಲ್ಲಿ ಇದೆ. ಶರಣರ ಸಂತರ ನಡೆ-ನುಡಿಗಳು ಮಾನವರ ಮೇಲೆ ಪ್ರಭಾವ ಬೀರತಾವ. ಅದರಿಂದ ಜನರಲ್ಲಿ ಭಕ್ತಿ, ಭಾವನೆ ಮೂಡತದ. ಇಂತಹ ಸಂಗತಿಗಳು ಪುರಾಣಗಳಲ್ಲಿ ಶಾಸ್ತ್ರಗಳಲ್ಲಿ ಕಥೆಗಳಲ್ಲಿ ಕೀರ್ತನೆಗಳಲ್ಲಿ ಸಿಗತಾವು. ಅದಕ ಅವುಗಳನ್ನ ನಾನು ಪುರಾಣ ಕಾವ್ಯಗಳ ಜೊತೆಯಲ್ಲಿ ಜೋಡಿಸಿಕೊಂಡಿರುವೆ. ಅಲ್ಲದೆ ಮಹಾಭಾರತದ ಕಥೆಗಳಲ್ಲಿ ಬರುವಂತಹ ಅಂಶಗಳನ್ನ ಜನರಿಗೆ ತಿಳಿಸಿಕೊಡಬೇಕಂತ ಪುರಾಣ ಕಾವ್ಯಗಳಲ್ಲಿ ಆ ಸಂಗತಿಗಳನ್ನೂ ರಚನೆ ಮಾಡೇನಿ.

ಸಂದರ್ಶಕರು : ಕಾವ್ಯವನ್ನು ಅನುಭಾವದ ಹಿನ್ನೆಲೆಯಲ್ಲಿ ಹೇಗೆ ಚಿತ್ರಿಸುವಿರಿ ?

ಕವಿ : ಕಾವ್ಯ ರಚನೆಗೆ ಆಧ್ಯಾತ್ಮದ ನೈತಿಕ ತಳಹದಿ ಅವಶ್ಯ. ಶಿವನಿಗೂ-ಜೀವನಿಗೂ-ಜಗತ್ತಿಗೂ ಇವರುವ ನೆಂಟಸ್ತಿಕೆ ಮುಂತಾದ ಸಂಗತಿಗಳನ್ನು ಅಭ್ಯಸಿಸಿ ಅದರ ಅನುಭವದ ಹಿನ್ನೆಲೆಯಲ್ಲಿ ಕಾವ್ಯವನ್ನ ರಚನೆ ಮಾಡಿದ್ದೇನೆ.

ಸಂದರ್ಶಕರು : ಗದ್ಯಕ್ಕಿಂತ ಪದ್ಯವೇ ಹೆಚ್ಚು ಪರಿಣಾಮ ಬೀರುತ್ತದೆಯೇ ?

ಕವಿ : ಪದ್ಯ ಓದುಗರ ಮೇಲೆ ಗದ್ಯಕ್ಕಿಂತಲೂ ಅಧಿಕ ಪ್ರಭಾವ ಜೀರುವಂಥದ್ದು. ಕಾವ್ಯ ನವರಸಭರಿತವಾಗಿರುವುದೇ ಅದಕ್ಕೆ ಕಾರಣವಾಗಿದೆ.

ಸಂದರ್ಶಕರು : ಪದ್ಯಂ ವದ್ಯಂ ಗದ್ಯಂ ಹೃದ್ಯಂ ಹೃದ್ಯಮಪ್ಪ ಗದ್ಯದೊಳೆ ಪೇಳ್ವುದು ಎಂಬ ವಿಚಾರ ಕುರಿತು ಏನು ಹೇಳುವಿರಿ ?

ಕವಿ : ಗದ್ಯದಲ್ಲಿ ಹೇಳಬೇಕಾದ ಒಂದು ಪುಟದಷ್ಟು ವಿಷಯವನ್ನು ಕೇವಲ ಆರು ಸಾಲುಗಳ ಒಂದು ಪದ್ಯದಲ್ಲಿ ಹೇಳಲು ಸಾಧ್ಯ. ಕಾವ್ಯ ರಚನೆ ಬುದ್ಧಿಯ ಕಸರತ್ತು. ಗದ್ಯದ

ಬಗ್ಗೆ ನನಗೆ ದ್ವೇಷವಿಲ್ಲ. ಗದ್ಯದಲ್ಲಿ ಓದಿದರೆ ನೆನಪು ಉಳಿಯುವುದಿಲ್ಲ. ಪದ್ಯದಲ್ಲಿ ಇದ್ರ ನೆನಪಿನಲ್ಲಿ ಇರತದ. ನಮಗ ಬೇಕೆನಿಸಿದಾಗ ಮತ್ತೆ ಓದಲು, ಹೇಳಲು, ಹಾಡಲೂ ಬರ್ತದ. ಆದ್ದರಿಂದ ಪದ್ಯವು ನನಗ ಗದ್ಯಕ್ಕಿಂತಲೂ ಬಹಳ ಇಷ್ಟ ಮತ್ತು ಇದರ ಪರಿಣಾಮ ಗಾಢವಾಗಿ ಆಗಿರತದ.

ಸಂದರ್ಶಕರು : ಕಾವ್ಯ ರಚನೆಯಿಂದ ನಿಮ್ಮ ವೈಯಕ್ತಿಕ ಬದುಕಿನ ಮೇಲೆ ಪರಿಣಾಮ ಆಗಿರುವುದೇ ?

ಕವಿ : ನನ್ನ ವೈಯಕ್ತಿಕ ಬದುಕಿನಲ್ಲಿ ಪರಿಣಾಮ ಆಗಿದೆ. ನನಗ ಅದು ನೆಮ್ಮದಿ, ಶಾಂತಿ ನೀಡಿದೆ. ಯಾಕಂದರ ಒಂದು ಗಾದೆ ಮಾತು ಹೇಳತಾರ 'ದುಡಿದು ದಣಿದ ಬಂದ ದೇಹಕ್ಕ ನಲುಮೆಯಿಂದ ಹೆಂಡತಿ ಎರಡು ಮಾತು ಮಾತಾಡಿದರ ಎಷ್ಟು ಸಂತೋಷ ಆಗ್ತದ ಹಂಗ ನನ್ನ ಮನಸ್ಸಿಗೆ ಆಯಾಸವಾದಾಗ, ಬೇಸರವಾದಾಗ ಉತ್ತಮವಾಗಿರತಕ್ಕಂತಹ ಕಾವ್ಯಗಳನ್ನ ಓದಿದರ ನನಗ ನೆಮ್ಮದಿ ಸಿಗ್ತದ, ಶಾಂತಿ ಸಿಗ್ತದ, ಅದು ಓದುವ ನೆಮ್ಮದಿ ಅಷ್ಟೇ.

ಸಂದರ್ಶಕರು : ಕಾವ್ಯ ರಚನೆಯಲ್ಲಿ ನಿಮ್ಮ ಸಹಾಯಕ್ಕೆ ಬಂದ ಸಂಗತಿಗಳಾವುವು ?

ಕವಿ : ನನಗ ಬಾಲ್ಯದಿಂದಲೂ ಹೆಚ್ಚಾಗಿ ಅವಲೋಕನ ಮಾಡಿದ ಷಟ್ಪದಿ ಹರಿಕಾರರಾದ ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ ಕವಿಗಳ ಛಾಯಾನುವರ್ತಿಗಳು ಬೆಳೆಯಬೇಕು, ಸಾಹಿತ್ಯ ಉಳಿಬೇಕು ಅನ್ನುವ ಹಂಬಲ. ಇವುಗಳ ಜೊತೆಗೆ ಶರಣ ಸಾಹಿತ್ಯ, ದಾಸ ಸಾಹಿತ್ಯಗಳ ಅಧ್ಯಯನ, ಗುರುವಿನ ಮಾರ್ಗದರ್ಶನ ನನ್ನ ಬರವಣಿಗೆಗೆ ಕಾಲುಗಳಂತೆ ಸಹಾಯಕಾರಿ ಆಗಿವೆ. ಕಾವ್ಯ ದೇವಿಯನ್ನ ಮುನ್ನಡೆಸುಕೊಂಡು ಹೋಗುವುದಕ್ಕ ನನಗ ಪ್ರೇರಣೆ ಆಗ್ಯಾವು. ಕಾರಣ ಪರಂಪರೆ ಬಿಟ್ಟು ಬರಿಲಿಕ್ಕೆ ಬರೋದಿಲ್ಲ. ಆದ್ದರಿಂದ ನನ್ನ ಮೇಲೆ ಪ್ರಭಾವ ಬೀರಿದ ಭಾಗವತ, ದಾಸ ಸಾಹಿತ್ಯವನ್ನ ಕಾವ್ಯಕ್ಕ ಬಳಸಕೊಂಡೀನಿ.

ಸಂದರ್ಶಕರು : ನಿಮ್ಮ ಓದಿನ ಹಿನ್ನೆಲೆ ಕುರಿತು ಹೇಳಿರಿ ?

ಕವಿ : ನನ್ನ ಶೈಕ್ಷಣಿಕ ಓದು ಬಹಳ ಕಡಿಮೆ. ಕೇವಲ ೭ನೇ ಇಯತ್ತೇ ಮಾತ್ರ. ಆದರೆ ೧೯೫೫ರಿಂದಲೇ ಹಳೆಯ ಕಾವ್ಯಗಳನ್ನು ಓದುವ ಗೀಳನ್ನು ಬೆಳೆಯಿಸಿಕೊಂಡ ನಾನು ರಾಘವಾಂಕ ವಿರಚಿತ, ಹರಿಶ್ಚಂದ್ರ ಕಾವ್ಯದ 'ಮಾಯದ ಬಲೆಯಕಾಟ' ಭಾಗದಿಂದ ಅತ್ಯಂತ ಪ್ರಭಾವಿತನಾಗಿರುವೆ. ಅಲ್ಲಿ ಪ್ರತಿಪಾದಿಸಲ್ಪಟ್ಟ 'ಸತ್ಯ ಪರಿಪಾಲನಾ ಮಾತಿಗೆ ತಪ್ಪದಿರುವುದು' ಎಂಬ 'ವ್ಯಕ್ತಿಗತ ಮೌಲ್ಯ ಸಾಮಾಜಿಕ ಮೌಲ್ಯವಾಗಿ ಭಗವಂತ ಸತ್ಯ ಸ್ವರೂಪ' ಎಂಬ ತತ್ವವನ್ನು ನಾನು ತುಂಬಾ ಮೆಚ್ಚಿಕೊಂಡಿರುವೆ.

ಸಂದರ್ಶಕರು : ಹರಿಶ್ಚಂದ್ರ ಕಾವ್ಯವೇ ನಿಮ್ಮ ಮೇಲೆ ಅಧಿಕ ಪ್ರಭಾವವನ್ನು ಬೀರಲು ಕಾರಣವೇನು ?

ಕವಿ : ಭಗವಂತನನ್ನ ಕಾಣಲಿಕ್ಕೆ ಸತ್ಯವನ್ನ ಬರಿದುಕೊಟ್ಟಿದ್ದಾನೆ. ಅದು ಮೊದಲಿನದು ಭಗವಂತನು ಸತ್ಯನಾಗಿದ್ದಾನೆ, ಸತ್ಯ ಸ್ವರೂಪನಾಗಿದ್ದಾನೆ, ನಾನು ಸತ್ಯಕ್ಕಾಗಿ ಹೋರಾಡಬೇಕು. ಮೊದಲನೆ ಮಾತು. ನನ್ನ ಪ್ರಕಾರ ನಾವು ಯಾವುದೇ ಮಾತನ್ನ ಕೊಟ್ರ ಅದನ್ನ ನಡೆಸಿಕೊಡಬೇಕು ಅಂತಹದ್ದು ಪ್ರಭಾವ ಅದರಲ್ಲಿ ಇರುತ್ತಿತ್ತು. ಯಾಕಂದ್ರ ಹರಿಶ್ಚಂದ್ರ ಮಹಾರಾಜ ವಿಶ್ವಾಮಿತ್ರಗ ಕೊಟ್ಟೇನಿ ಅಂತ ಹೇಳಿಬಿಟ್ಟ. ಸತ್ಯ ವಚನ ಪರಿಪಾಲನೆಗಾಗಿ ಮಾತು ಕೊಟ್ಟಂಗ ದಾನಾನೂ ಕೊಟ್ಟ ಬಿಟ್ಟ. ಹಂಗ ನಾವು ಯಾರಿಗೆ ಏನs ಕೊಡ್ತೀವಿ ಅಂತ ಹೇಳತೀವಿ, ಅವರಿಗೆ ಕೊಟ್ಟು ಕೃತಾರ್ಥ ಆಗಿಬಿಡಬೇಕು. ಅಂತ ಪ್ರಭಾವ ನನಗ ಅಚ್ಚಾಗಿ ಮೂಡಿದ್ದರಿಂದ ನನಗ ಅದು ಪ್ರಭಾವ ಬೀರಿದೆ.

ಸಂದರ್ಶಕರು : ಈ ಕಾವ್ಯಗಳನ್ನು ಹೊರತುಪಡಿಸಿ ಬರೆದ ನಿಮ್ಮ ಬರಹಗಳಾವುವು ?

ಕವಿ : 'ಸತ್ಯನಾರಾಯಣ ಪೂಜಾ ಮಹಾತ್ಮೆ' ಬರದೇನಿ. ಅನುಭವದ ವಿಚಾರ ಕುರಿತು ಲೇಖನ, ಕೆಲವು ಸ್ವರಚಿತ ಕವನಗಳು, ಮಕ್ಕಳಿಗೆ ಕವಿತೆಗಳ ಮೂಲಕ ಬಳ್ಳಿಗಳನ್ನು ಕಲಿಸುವ ಕವನಗಳು, ಕಥೆಗಳು ಹಾಗೂ ನೀತಿ ವಾಕ್ಯಗಳನ್ನು ರಚಿಸಿರುವೆ.

'ಅಪ್ಪನು ಮಾಡಿದ ಗಣಪತಿಯ, ಆನೆಯ ಸೊಂಡಿಯು ಅದಕ್ಕಿತ್ತು
ಇಲಿಯು ಆತನ ವಾಹನವು, ಈಶನ ಮಗನಾಗಿದ್ದ ಅವನು'

ಹೀಗೆ ಸ್ವರಗಳ ಮುಖಾಂತರ ಮಕ್ಕಳಿಗೆ ಯೋಗ್ಯವಾಗುವಂತೆ ಆ ಸಾಹಿತ್ಯವನ್ನು ರಚನೆ ಮಾಡಿದ್ದೀವಿ.

ಸಂದರ್ಶಕರು : ನೀವು ಮೆಚ್ಚಿದ ಅನ್ಯರ ಕೃತಿಗಳಲ್ಲಿನ ಅಂಶಗಳಾವುವು ?

ಕವಿ : ನಾನು 'ಹರಿಶ್ಚಂದ್ರ ಕಾವ್ಯ'ದಲ್ಲಿನ ಸತ್ಯ ಪ್ರತಿಪಾದನೆಯನ್ನು, ಚಾಮರಸನ ಪ್ರಭುಲಿಂಗಲೀಲೆಯ 'ಮಾಯೆಗೆದ್ದ ಗತಿ'ಭಾಗವನ್ನು, ಕುಮಾರವ್ಯಾಸನ ಮಹಾಭಾರತವನ್ನು 'ಕೃಷ್ಣ ಸಂಧಾನ' ಭಾಗದ ವಿಚಾರಗಳಿಗಾಗಿ, ಚೆನ್ನಬಸವಣ್ಣನ 'ಷಟ್‌ಸ್ಥಲ ಸಾಹಿತ್ಯವನ್ನು' ಜ್ಞಾನ ಸಂಪತ್ತಿಗಾಗಿ ಮೆಚ್ಚಿಕೊಂಡಿರುವೆನು ಅಲ್ಲದೆ ನನಗೆ ದಾಸ ಸಾಹಿತ್ಯವೂ ಬಲು ಪ್ರಿಯವಾದುದು.

ಆತ್ಮೀಯವಾಗಿ ವಿಚಾರಗಳನ್ನು ತಿಳಿಸಿದ ತಮಗೆ ಧನ್ಯವಾದಗಳು.

◆◆◆

ಕವಿಗಳ ಸಂದರ್ಶನ



ದಿ : ೧೩-೧೧-೨೦೧೦ ರಂದು
ಪಂ. ಬಾಲಚಂದ್ರಶಾಸ್ತ್ರಿ ಹಿರೇಮಠ ಇವರೊಂದಿಗೆ ಸಂದರ್ಶನ



ದಿ : ೧೯-೧೧-೨೦೧೦ ರಂದು
ಪಂ. ಸೋಮಶೇಖರ ಶಾಸ್ತ್ರಿಗಳು ಪುರಾಣಿಕಮಠ ಇವರೊಂದಿಗೆ ಸಂದರ್ಶನ



ದಿ : ೧೯-೧೧-೨೦೧೦ ರಂದು
ಪಂ. ರಾಜಗುರು ಗುರುಸ್ವಾಮಿ ಕಲಕೇರಿ ಇವರೊಂದಿಗೆ ಸಂದರ್ಶನ



ದಿ : ೨೦-೧೧-೨೦೧೦ ರಂದು
ಶ್ರೀ ಪ್ರಭಣ್ಣ ಬೊಮ್ಮನಹಳ್ಳಿ ಇವರೊಂದಿಗೆ ಸಂದರ್ಶನ



ದಿ : ೨೧-೧೧-೨೦೧೦ ರಂದು
ಶ್ರೀ ರಾಮಣ್ಣ ಬ್ಯಾಟಿ ಇವರೊಂದಿಗೆ ಸಂದರ್ಶನ



ದಿ : ೧೬-೧೨-೨೦೧೦ ರಂದು
ಶ್ರೀ ವಾಸುದೇವ ಹೂಲಿ ಇವರೊಂದಿಗೆ ಸಂದರ್ಶನ